# ನಿಲುಕದ ನಕ್ಷತ್ರ

ಅಶ್ವಿನಿ



894.814 308 3
ASH N94
ಗ್ರಂಥ ಸ್ವಾಮ್ಯ ವಿಭಾಗ

# ನಿಲುಕದ ನಕ್ಷತ್ರ

ಅಶ್ವಿನಿ

META ENTERED

ಸುಘೋಷ ಸಾಹಿತ್ಯ
126, 28ನೇ ಅಡ್ಡರಸ್ತೆ,
7ನೇ ಬ್ಲಾಕ್, ಜಯನಗರ
ಬೆಂಗಳೂರು – 560 082

NILUKADA NAKSHATRA :—A social novel by Ashwini & Published by Sughosha Sahitya, 126, 28th cross, 7th block, Jayanagar, Bangalore-560 082.

ಮುದ್ರಣ : 1994

ಪುಟಗಳು : 322

ಹಕ್ಕುಗಳು : ಅಶ್ವಿನಿ

ಬೆಲೆ : ರೂ. 48=00

ಮುಖಪುಟ : ಎಂ. ಎಸ್. ಶಶಿಧರ್

ಮುದ್ರಕರು :
ಪ್ರತಿಭಾ ಪ್ರಿಂಟರ್ಸ್
ನಂ. 411, 8ನೇ ಮುಖ್ಯರಸ್ತೆ, ಬ್ಯೆಪ್ಲಾಸ್
ಹನುಮಂತನಗರ, ಬೆಂಗಳೂರು–560 019

# ಸಮರ್ಪಣೆ

ತಂದೆಯ ವಾತ್ಸಲ್ಯದಿಂದ,

ನನ್ನನ್ನು ಸಾಕಿ ಸಲಹಿ,

ಪದವೀಧರೆಯನ್ನಾಗಿ ಮಾಡಿ,

ಇಂದು ಕಣ್ಮರೆಯಾಗಿರುವ,

ತ್ಯಾಗಮೂರ್ತಿ ಪೂಜ್ಯ ಅಣ್ಣ.

ಚೀನಯ್ಯನಿಗೆ

—ಅಶ್ವಿನಿ

## ನಮ್ಮಲ್ಲಿ ದೊರೆಯುವ ಪುಸ್ತಕಗಳು

| | | |
|---|---|---|
| 1. | ಧ್ಯೇಯ | ಯಂಡಮೂರಿ / ಚೆಂಡೂರ್ |
| 2. | ಗ್ರಾಫಾಲಜಿ | ಯಂಡಮೂರಿ / ಚೆಂಡೂರ್ |
| 3. | ಪಾರ್ಟ್‌ಟೈಂ ಗಂಡ | ಯರ್ರಂಶೆಟ್ಟಿ / ಚೆಂಡೂರ್ |
| 4. | ಅಸುರವೇದ | ಕೊಮ್ಮನಾಪಲ್ಲಿ / ಚೆಂಡೂರ್ |
| 5. | ನಾರಿ ಮುನಿದ ಮಾರಿ | ಕೊಮ್ಮನಾಪಲ್ಲಿ / ಚೆಂಡೂರ್ |
| 6. | ಬೆಂಕಿಮಳೆ I | " |
| 7. | ಬೆಂಕಿಮಳೆ II | " |
| 8. | ಪ್ರೀತಿಯ ಹೆಂಡತಿ | |
| | ಆಸೆಯ ಪ್ರೇಯಸಿ | ಯರ್ರಂಶೆಟ್ಟಿ / ಚೆಂಡೂರ್ |

ಹಾಗೂ

| | |
|---|---|
| ಆನಂದವನ | ಅಶ್ವಿನಿ |
| ಸನ್ನಿವೇಶ | ಕೆ. ಟಿ. ಗಟ್ಟಿ |
| ವೀರಾಂಬುಧಿ ಜೋಕ್ಸ್ | ಎಂ. ಯತಿರಾಜ್ ವೀರಾಂಬುಧಿ |

ನಿರೀಕ್ಷಿಸಿ

ಕಪ್ಪಂಚು ಬಿಳಿಸೀರೆ – ಯಂಡಮೂರಿ / ಚೆಂಡೂರ್

ಏರ್ ಹೋಸ್ಟೆಸ್ – ಮಲ್ಲಾದಿ / ಚೆಂಡೂರ್

# ೧

"ವನಸುಮದೊಳೆನ್ನ ಜೀವನವು
ವಿಕಸಿಸುವಂತೆ ಮನವನನುಗೊಳಿಸು
ಗುರುವೇ ಹೇ ದೇವ ॥"

ಎಂದು ನಿರರ್ಗಳವಾದ ತನ್ನ ಪ್ರಿಯವಾದ ಕಾನಡಾ ರಾಗದಲ್ಲಿ ವೀಣೆಯ ಮೇಲಾಡಿಸುತ್ತಿದ್ದ ಅವಳ ಕೈ ಬೆರಳುಗಳು ಹಠಾತ್ತನೆ ನಿಂತವು. ಭಾವಾವೇಶದಲ್ಲಿ ಕಣ್ಣಿಂದ ಹೊರಹೊಮ್ಮಿದ ಅಶ್ರುಬಿಂದು ಕೆನ್ನೆಯ ಮೇಲೆ ಉರುಳಿತು.

ಮೊದಲೇ ನೊಂದು ನುಡಿಯುತ್ತಿದ್ದ ಅವಳ ಹೃದಯ ಜೋರಾಗಿ ಹೊಡೆದುಕೊಳ್ಳತೊಡಗಿತು. ವೀಣೆ ಬಿಟ್ಟು ಎದ್ದು ನಿಂತಳು. ತಕ್ಷಣವೇ ಗೇಟಿನ ಕಡೆಯಿಂದ ಚಿಟಾರನೆ ಚೀರಿದ ಶಬ್ದ. ಗಾಡಿ ಉರುಳಿದ ಸದ್ದು. ಗೇಟಿಗೆ ಓಡಿದಳು. ಅವಳು ಕಂಡ ದೃಶ್ಯದಿಂದ ಅವಳಿಗೆ ದಿಕ್ಕು ತೋಚಲಿಲ್ಲ.

ಬಿದ್ದವರಲ್ಲಿ ಯಾರನ್ನು ಎಬ್ಬಿಸಬೇಕೆಂಬುದೂ ತಿಳಿಯಲಿಲ್ಲ. ಸುಮಾರು ಎರಡು ವರ್ಷದ ಮಗು ಚಕ್ರದ ಅಡಿಯಲ್ಲಿ ಬಿದ್ದಿತ್ತು. ಆದರೂ ಸದ್ದಿಲ್ಲದೆ ಇದ್ದ ಆ ಮಗುವನ್ನು ನೋಡಿ ಬಹುಶಃ ಏನೂ ಗಾಯ ಆಗಿರಲಿಕ್ಕಿಲ್ಲವೆಂದು ಹತ್ತಿರದಲ್ಲೇ ಬೋರಲು ಬಿದ್ದು ಮೂಗು ಜಜ್ಜಿ ರಕ್ತ ಸುರಿಯುತ್ತಿದ್ದ ಬಾಲಕಿಯನ್ನು ಮಾತ್ರ ಬಾಚಿತಬ್ಬಿ ಎತ್ತಿಕೊಂಡಳು. ರಕ್ತವನ್ನು ಸೆರಗಿನಿಂದ ಒರೆಸುತ್ತಿದ್ದಾಗಲೇ ಏದುಸಿರು ಬಿಡುತ್ತಾ ದೂರದಲ್ಲಿ ಉರುಳಿ ಬಿದ್ದಿದ್ದ ಆಕೆ ಏಳಲು ಯತ್ನಿಸುತ್ತಿದ್ದಳು. ಸ್ಥೂಲವಲ್ಲದಿದ್ದರೂ ತೆಳುವಲ್ಲದ ದೇಹವನ್ನು ಸಂಬಾಳಿಸಿಕೊಳ್ಳುವುದೇ ಆಕೆಗೆ ಪ್ರಯಾಸವಾಗುತ್ತಿತ್ತು. ಬಾಲಕಿಯನ್ನು ಕಂಕುಳಲ್ಲಿಟ್ಟುಕೊಂಡೇ ಆಕೆಯ ಕಡೆಗೆ ಧಾವಿಸಿದ್ದಳು. ತನ್ನ ಬಲಗೈಯ ಆಸರೆಯಿಂದ ಆಕೆಗೆ ಏಳಲು ಸಹಾಯ ಮಾಡಿದಳು. ನೋಡಿದಲ್ಲಿ ಆಕೆಗೇನೂ ಗಾಯ ವಾದಂತಿರಲಿಲ್ಲ. ಬಿದ್ದ ಆಘಾತದಿಂದ ಸ್ವಲ್ಪ ಕಕ್ಕುಬಿಕ್ಕಾಗಿದ್ದಳಷ್ಟೆ.

"ಅಪ್ಪಾ....ಅಮ್ಮಾ....ಸರಳಾ....ಸರಳಾ ನನ್ನಮ್ಮ" ಎಂದು ಉದ್ಗಾರ ಎಳೆಯುತ್ತಾ ಎದ್ದು ನಿಂತಳು ಆಕೆ,

ತನ್ನ ಹೆಸರು ಆಕೆಗೆ ಹೇಗೆ ತಿಳಿಯಿತು ಎಂದು ಒಂದು ಘಳಿಗೆ ಅವಳಿಗೆ ಆಚ್ಚರಿಯಾದರೂ ಅದನ್ನು ಯೋಚಿಸುವುದಕ್ಕಿಂತ ಹೆಚ್ಚಿನ ಕೆಲಸ ಅಲ್ಲಿ ಕಾದಿದ್ದುದರಿಂದ ಬೇಗ ಬೇಗ ಆ ತಾಯಿ ಮಕ್ಕಳೊಂದಿಗೆ ಒಳಗೆ ಪ್ರವೇಶಿಸಿದಳು. ತನ್ನ ಕೋಣೆಯಲ್ಲಿ ಮಂಚದ ಮೇಲೆ ಬಾಲಕಿಯನ್ನು ಮಲಗಿಸಿ-"ನೋಡೀಮ್ಮ, ಸ್ವಲ್ಪ ಸುಧಾರಿಸಿಕೊಳ್ಳಿ, ಅಷ್ಟರಲ್ಲಿ ನಾನು ನಿಮ್ಮಗೂನ್ನ ಎತ್ಕೊಂಡ್ಬರ್ತೀನಿ. ಸಂಕೋಚ ಪಟ್ಕೋ ಬೇಡಿ" ಎಂದು ಹೊರಟಳು.

"ಅಯ್ಯೋ ನಾನೆಂಥಾ ಹೆಂಗಸು. ಮಗೂ ಜ್ಞಾನಾನೇ ಬೇಡ್ವೆ ನಂಗೆ" ಎಂದಳು ಆಕೆ.

"ಛೆ, ಛೆ, ಹಾಗಲ್ಲಮ್ಮ. ಬಿದ್ದ ಆಘಾತದಲ್ಲಿ ನಿಮಗೇನೂ ತೋಚಿಲ್ಲ. ಯೋಚನೆ ಮಾಡಬೇಡಿ, ಮಗೂಗೆ ಏನೂ ಆದ ಹಾಗೆ ಕಾಣೋದಿಲ್ಲ. ನಾ ಕರ್ಕೊಂಡು ಬರ್ತೀನಿ. ನೀವು ವಿಶ್ರಾಂತಿ ತೊಗೊಳ್ಳಿ."

ಇಷ್ಟು ಹೊತ್ತೂ ಗಾಡಿ ಓಡಿಸುವವನು ಎಲ್ಲಿ ಹೋಗಿರಬಹುದು ಎಂಬ ಪರಿವೆಯೇ ಇರಲಿಲ್ಲ ಅವಳಿಗೆ. ಪಾಪ! ಆ ಬಡ ಮುದುಕ ಬದಿಯ ಮೋರಿಗೆ ಇಳಿದಿದ್ದ ಗಾಡಿಯನ್ನು ಮೇಲೆತ್ತುವ ಪ್ರಯತ್ನದಲ್ಲೇ ಇದ್ದ. ಅವನ ಗಮನವೆಲ್ಲಾ ಅಡಿಯಲ್ಲಿ ಬಿದ್ದಿದ್ದ ಮಗುವಿನ ಮೇಲಿತ್ತು. ಮುದುಕನಿಂದ ಗಾಡಿ ಮೇಲೆಳೆಯಲಾಗಲಿಲ್ಲ.

ಸಣ್ಣ ದಾರಿಯಾದುದರಿಂದಲೋ ಅಥವಾ ಮಧ್ಯಾಹ್ನ ಎರಡು ಗಂಟೆಯಾದುದರಿಂದಲೋ ಇಷ್ಟೆಲ್ಲಾ ಅನಾಹುತವಾಗಿದ್ದರೂ ಜನಸಂಚಾರವೇ ಕಂಡು ಬರಲಿಲ್ಲ ಆ ಬೀದಿಯಲ್ಲಿ. ಒಬ್ಬನು ಮುಗ್ಗರಿಸಿದರೆ ಹತ್ತು ಜನ ಗುಂಪು ಕೂಡುವ ಊರಿನಲ್ಲಿ ಒಬ್ಬರೂ ಬರಲಿಲ್ಲವೆಂದರೆ ಆಶ್ಚರ್ಯ ! ಪರಮಾಶ್ಚರ್ಯ! ಅಂತೂ ಮುದುಕನ ಸಹಾಯಕ್ಕೂ ಅವಳೇ ನಿಂತಳು.

"ಬಿಡಿ ತಾಯಿ,ನೀವ್ಯಾಕೆ? ನಾನೇ ತೆಗೀತೀನಿ" ನಿವಾರಿಸಿದ ಗಾಡಿಯವ.

"ಪರವಾಗಿಲ್ಲ ಬಿಡಪ್ಪ. ಎಷ್ಟೊತ್ನಿಂದ ಕಷ್ಟಪಡ್ತೀಯ ಗಾಡಿ ಮೇಲೆ ಬರಲಿಲ್ಲ. ಈ ಕಡೆ ನಾ ಎತ್ತುತೀನಿ ಬಾಪ್ಪ" ಬಂದು ಗಾಡಿ ಹಿಡಿದೇ ಬಿಟ್ಟಳು.

ಇಬ್ಬರ ಶಕ್ತಿಯ ಸಹಾಯದಿಂದ ಗಾಡಿ ಮೇಲೆ ಬಂತು. ಓಡಿ ಮಗುವನ್ನು ಎತ್ತಿಕೊಂಡಳು. ಯಾವುದೋ ದೊಡ್ಡ ನಾಟಕಕ್ಕೆ ನಾಯಕ ತಾನು ಎಂಬಂತೆ ನಗುತ್ತಿತ್ತು ಕಂದ. ಅದನ್ನು ಸ್ಪರ್ಶಿಸಿದ ಕೂಡಲೆ ಅವಳಿಗೆ ಅನಿರ್ವ

ಜನೀಯ ಆನಂದವಾಯಿತು. ಮಗುವಿಗೆ ಮೂಗುಪೆಟ್ಟು ಬಿದ್ದಿರಬಹುದೇನೋ ಎಂದು ಮೈಯ್ಯೆಲ್ಲಾ ಒಸುಕಿ ನೋಡಿದಳು. ಮಿಸುಕಲಿಲ್ಲ ಮಗು. ಅವಳಿಗೆ ನಿರಾಳದ ನಿಟ್ಟುಸಿರು ಬಂತು. ಮೂರು ಜೀವಿಗಳೂ ಕಷ್ಟದಿಂದ ಪಾರಾಗಿದ್ದರು. ಸಂತೋಷವಾಯಿತು ಅವಳಿಗೆ. ಆದರೆ ಮುದುಕನ ಕಣ್ಣಲ್ಲಿ ನೀರು.

"ಯಾಕಪ್ಪ ಹೀಗೆ ಸಪ್ಪಗೆ ಕೂತುಬಿಟ್ಟೆ? ಗಾಡಿಕಟ್ಟು" ಎಂದಳುಅವಳು.

"ಇಲ್ಲಾ ತಾಯಿ. ಕುದ್ರೇಗೆ ಕಾಲು ಮುರಿದೈತೆ. ಎಷ್ಟೋ ಸಾರಿ ಅಂದ್ಕೋತಿದ್ದೆ ಈತಗ್ಗಿನಲ್ಲಿ ಗಾಡಿ ಬಿಡಬಾರ್ದೂಂತ. ಆದ್ರೆ ಒಟ್ಟೆ ಕೆಟ್ದು. ಅಮ್ಮಾವ್ರು 'ಬ್ಯಾಗ ಓಗ್ಬಹುದ್ದು ಬುಡು' ಅಂದ್ರು. ನಾನೂ ಕೂಡ ಬ್ಯಾಗ ಓದ್ರೆ ಮತ್ತೊಂದು ಗಿರಾಕಿ ಸಿಕ್ತದಲ್ಲಾ ಅನ್ನೋ ಆಸೇಗೆ ಮಣ್ಣು ತಿನ್ನೋ ಕೆಲ್ಸ ಮಾಡ್ದೆ ಕಣ್ರವ್ವಾ" ಎಂದು ಕಣ್ಣೊರಸಿಕೊಂಡ ಗಾಡಿಯವ.

"ಹಾಗಾದ್ರೆ ಏನ್ಮಾಡ್ತಿ ? ಕುದ್ರೆ ನಿಲ್ಸಿ ನೋಡು ಎಲ್ಲಿ ಗಾಯ ಆಗಿದ್ಯೋ. ಡಾಕ್ಟ್ರ ಹತ್ರ ಕರ್ಕೊಂಡು ಹೋಗೋಕ್ಕೆ ಆಗುತ್ತಾಂತ ನೋಡಪ್ಪ."

ಬಲವಂತದಿಂದ ಕುದುರೆ ಎಬ್ಬಿಸಿ ನಿಲ್ಲಿಸಿದ-ಗಾಡಿಕಾರ. ಕುದುರೆಗೆ ಮುಂದಿನ ಬಲಗಾಲು ಮುರಿದಿತ್ತು. ಕುದುರೆ ತಕ್ಷಣವೇ ಕುಸಿಯಿತು. ಆ ಮೂಕಪ್ರಾಣಿಯ ಅವಸ್ಥೆ ನೋಡಿದ ಅಳಿಗೆ ಕಣ್ಣು ತುಂಬಿ ಬಂತು. ಅವನಿಗೆ ಅನ್ನ ತರುತ್ತಿದ್ದ ಆ ಕುದುರೆ, ಅವನ ಪ್ರಾಣಪ್ರಿಯವಾಗಿದ್ದ ಆ ಕುದುರೆಯು ನೋವಿನಿಂದ ಅವನು ಅತ್ತರೆ ಸೋಜಿಗವೇನು ?

"ನೋಡಪ್ಪ, ಹೇಗಾದ್ರೂ ಮಾಡಿ ಕುದ್ರೇನ್ನ ಕಾಂಪೌಂಡಿನೊಳಗೆ ತಂದು ಈ ಹೊಂಗೇಮರದ ನೆರಳಲ್ಲಿ ಕಟ್ಟು. ನೀ ಹೋಗಿ ಪ್ರಾಣಿ ಡಾಕ್ಟರನ್ನ ಕರ್ಕೊಂಬಾ."

"ಎಂತಾ ಮಾತ್ರವ್ವಾ. ಅವರೆಲ್ಲಾ ಗರೀಬ್ರು ಕರೆದ್ರೆ ಬರ್ತಾರಾ ? ರೊಕ್ಕದ ಮ್ಯಾಗೆ ನಿಂತೈತ್ರವ್ವ ಪರಪಂಚಾ."

"ಆ ಯೋಚನೆ ಮಾಡ್ಬೇಡ, ಮುಂಚೆ ಕುದ್ರೇನ್ನ ಒಳಗೆ ತಾ."

ಮುದುಕನ ಸಾಹಸ ಫಲಿಸಿತು. ನೋವಿನಿಂದ ಕಣ್ಣೀರು ಸುರಿಸುತ್ತಿದ್ದ ಕುದುರೆ ಹೊಂಗೆಯ ಮರದ ತಂಪು ನೆರಳಿನಲ್ಲಿ ಆಶ್ರಯ ಪಡೆಯಿತು. ಗಾಡಿ

ಯಲ್ಲಿದ್ದ ಹಸಿರು ಹುಲ್ಲನ್ನೆಲ್ಲಾ ಕುದುರೆಯ ಮುಂದೆ ಹಾಕಿ ಗಾಡಿಯನ್ನು ಪಕ್ಕಕ್ಕೆಳೆದು ಅವನು ಹೊರಡಲನುವಾದ.

"ಬಾರಪ್ಪ ಇಲ್ಲಿ. ಡಾಕ್ಟರ ಹತ್ರ ಈ ಚೀಟಿ ಕೊಟ್ಟು, ಮನೇಗೆ ಬರೋಕ್ಕೆ ಹೇಳು, ಖಂಡಿತಾ ಬರ್‍ತಾರೆ" ಎಂದು ತನ್ನ ಹೆಸರಿನ ಚೀಟಿ ಕೊಟ್ಟಳು.

"ಹಾಗೇ ಹಾದೀಲಿ ಎಲ್ಲಾದ್ರೂ ಊಟಮಾಡು" ಎಂದು ಅವನ ಕೈಲಿ ಎರಡು ರೂಪಾಯಿಗಳನ್ನಿಟ್ಟಳು.

ಮಗುವಿನೊಂದಿಗೆ ಒಳಗೆ ಬಂದವಳು ನೇರವಾಗಿ ಕೋಣೆಯಲ್ಲಿ ಮಲಗಿದ್ದ ತಾಯಿ-ಮಕ್ಕಳ ಬಳಿಗೋಡಿದಳು. ಬಿದ್ದ ಏಟಿನ ಘಾಸಿಯಿಂದಾಗಿ ತಾಯಿಗೆ ಮಂಪರು ಬಂದಿತ್ತು. ಅಂಗತ್ತ ಮಲಗಿದ್ದ ಬಾಲಕಿಯ ಮುಖದ ಮೇಲೆ, ಜಜ್ಜಿದ ಮೂಗು ಶುಭ್ರವಾಗಿ ತೊಳೆದ ತಾಮ್ರದ ಪಾತ್ರೆಯ ಮೇಲೆ ಒಂದೆಡೆ ಮಾತ್ರ ಕಿಲುಬು ಉಳಿದುಬಿಟ್ಟಂತೆ ಕಾಣುತ್ತಿತ್ತು. ರಕ್ತ ಹೆಪ್ಪುಗಟ್ಟಿತ್ತು. ಹುಡುಗಿ ನೋವಿನಿಂದ ಮಲಗುತ್ತಿದ್ದರೂ ನಿದ್ರಿಸುತ್ತಿದ್ದಂತೆ ತೋರಿತು.

ಕಂಕುಳಲ್ಲಿನ ಹುಡುಗ ನಿಶ್ಯಬ್ದವಾಗಿಬಿಟ್ಟಿದ್ದ. ಪರಿಸ್ಥಿತಿಯ ಅರಿವಿಲ್ಲದಿದ್ದರೂ ತನ್ನ ತಾಯಿ ಮತ್ತು ಅಕ್ಕನಿಗೆ ಏನೋ ಆಗಿದೆ. ತಾವು ಎಲ್ಲೋ ಬಂದಿದ್ದೇವೆ ಎನ್ನುವ ದಿಙ್ಮೂಢತೆ ಮಗುವನ್ನಾವರಿಸಿತ್ತು.

ಅವರು ಚೇತರಿಸಿಕೊಳ್ಳುವಷ್ಟರಲ್ಲಿ ನವಚೈತನ್ಯ ಕೊಡುವಂತೆ ಸ್ವಲ್ಪ ಕಾಫಿಯನ್ನಾದರೂ ಮಾಡಿಕೊಡೋಣ ಎಂದು ಅಡಿಗೆ ಮನೆಗೆ ಹೋಗಲಿಚ್ಛಿಸಿದ ಅವಳಿಗೆ ಚಟ್ಟನೆ ಅನಿಸಿತು-'ಒಮ್ಮೆ ಡಾಕ್ಟರನ್ನೇಕೆ ಕರೆಯಬಾರದು ? ಒಂದು ವೇಳೆ ಪೆಟ್ಟು ಜೋರಾಗಿ ಬಿದ್ದಿರಬಹುದೇನೋ'—ಎಂಬ ಸಂಶಯ ಬಂತು.

ಅಷ್ಟರಲ್ಲಿ ಶಾಲೆ ಮುಗಿಸಿ ಬಂದ ನೆರೆಮನೆಯ ಗೋಪಿ, ಚಿಕ್ಕಮ್ಮನ ಪಾಲಿನ ತಿಂಡಿಯಲ್ಲಿ ಭಾಗಕ್ಕಾಗಿ ಬಂದ.

"ಕುದುರೆ ಬಂದಿದೆಯಲ್ಲಾ ಚಿಕ್ಕಮ್ಮ. ಸವಾರಿ ಮಾಡೋಕ್ಕಾ ?"

"ಪಾಪ, ಸವಾರೀಗಲ್ಲ ಗೋಪಿ. ದಾರೀಲಿ ಬಿದ್ದುಬಿಡ್ತು. ಕಾಲು

ಮುರ್ದಿದೆ. ನೆರಳಲ್ಲಿರಲಿ ಅಂತ ಕಟ್ಟಿದೆ. ಇಲ್ಲಿ ನೋಡು ಮರಿ ಈ ಪಾಪನ್ನ ಆಡಿಸ್ಕೊಂತಾ ಇರು, ನಾನು ಡಾಕ್ಟರಿಗೆ ಫೋನು ಮಾಡಿ ಬರ್‍ತೀನಿ–ಆಯ್ತಾ ?"

"ಯಾರ್ದು ಚಿಕ್ಕಮ್ಮ ಈ ಪಾಪ ? ಎಷ್ಟು ಚೆನ್ನಾಗಿದೆ. ನಾ ನೋಡ್ಕೊಂತೀನಿ, ನೀ ಹೋಗ್ಬಾ ಚಿಕ್ಕಮ್ಮ. ಮತ್ತೆ....ಮತ್ತೆ...." ತಲೆ ಕೆರೆಯುತ್ತಾ ನಿಂತ ಪುಟ್ಟ ಗೋಪಿ.

"ಓ, ನಿನ್ನ ಮತ್ತೆ ಮತ್ತೆ ಅರ್ಥವಾಯ್ತು" ಎಂದು ಒಳಗೆ ಹೋಗಿ ಚಕ್ಕುಲಿ ಹುರಿಟ್ಟುಗಳನ್ನು ಗೋಪಿಗೆ ಕೊಟ್ಟು–"ನೋಡು ಗೋಪಿ, ಪಾಪನ್ನ ಅಳಿಸ್ದೇ ಇಟ್ಕೋಬೇಕು. ಅವರಮ್ಮ ಒಳಗಡೆ ಮಲಗಿದ್ದಾರೆ. ಅವರಿಗೆ ಎಚ್ಚರ ಮಾಡಬಾರದು. ಏನು ? ಪಾಪಂಗೆ ಹುರಿಟ್ಟು ಕೊಡ್ಬೇಡ. ಬೇಕಾದ್ರೆ ಒಂದು ಬಳ್ಳಿ ಚಕ್ಕುಲಿ ಕೊಡು" ಎಂದು ಆತುರ ಆತುರವಾಗಿ ಹೊರಟಳು.

ಹುರಿಟ್ಟು ತುಂಬಿದ ಬಾಯಿಂದ "ಹೂಂ ಚಿಕ್ಕಮ್ಮ" ಎಂದ ಗೋಪಿ.

*   *   *   *

"ಹಲೋ....ಇಂದೂನಾ ?....ನಾನು ಸರಳಾ"

......................

"ನಂಗೇನು ಧಾಡಿ ಹುಷಾರಾಗಿದ್ದೀನಿ"

......................

"ಧಾಡಿ ಅಂದ್ರೆ ಮಿಾಸೆ ಅಂತೀಯಾ? ನೋಡೀಗ ಇಂದೂ, ತಮಾಷೇಗೆ ಟೈಂ ಅಲ್ಲ. ನಮ್ಮನೆ ಮುಂದೆ ಒಂದು ಆಕ್ಸಿಡೆಂಟ್ ಆಗಿದೆ."

"ಆದ್ರೆ ಆಯ್ತು ಅಂದ್ಯಾ. ಅದೇ ನಿನ್ನ ದುರ್ಬುದ್ಧಿ. ಅದನ್ನೇ ನಾ ಬೇಡಾನ್ನೋದು. ಡಾಕ್ಟ್ರು ಅಂದ್ರೆ ಹಾಗಿರ್‍ಬಾರ್ದು. ಈಗೇನಾಗಿದೆ ಅಂದೆ ಯಲ್ಲ. ಆಕ್ಸಿಡೇಂಟ್ ನನ್ಮನೆ ಮುಂದೆ ಆಗಿ ವಿಕ್ಟಿಂಸ್‌ನ ಮನೇಲಿ ಮಲಗ್ಸಿದೀನಿ. ಈಗ್ಲೇ ಬಾ ಅಷ್ಟೆ."

......................

"ಏನು ! ಏನಂದೆ ! ಬರೋಕ್ಕಾಗೋಲ್ವ ? ಬೇಡ ಇಂದೂ, ನೀ ಹೀಗಾದ್ರೆ ಒಳ್ಳೆ ಡಾಕ್ಟರ್ ಅನ್ನಿಸ್ಕೊಳ್ಳೋಲ್ಲ ನೋಡ್ಕೋ. ನೀನೀಗ ತಕ್ಷಣ ನಮ್ಮನೇಗೆ ಬರ್‍ದೆ ಹೋದ್ರೆ ಇನ್ಮೇಲೆ ನಾನು ನಿನ್ನ ಮಾತಾಡ್ಸೋದೇ ಇಲ್ಲ, ತಿಳೀತಾ ?"

........................

"ಹಾಗ್ಬಾ ದಾರೀಗೆ. ವೆರಿಗುಡ್, ಬರ್ಲ್ಲಾ" ಎನ್ನುತ್ತಾ ಸರಳ ಫೋನು ಕೆಳಗಿಟ್ಟಳು.

ಮನೆಗೆ ಹಿಂತಿರುಗಿ ಬರುವ ವೇಳೆಗೆ ಆಗಲೆ ಗೋಪಿ ಮಗುವಿಗೆ ಗೆಳೆಯ ನಾಗಿದ್ದ. ಬೆನ್ನಮೇಲೆ ಕೂರಿಸಿಕೊಂಡು ಮಗುವಿನ ಕೈಲಿ "ಹೇಯ್ ಹೇಯ್" ಅನ್ನಿಸಿಕೊಳ್ಳುತ್ತಿದ್ದ. ಮಗುವಿನ ಕಿರುನಗೆ ಅಲೆ ಅಲೆಯಾಗಿ ಮನೆಯಲ್ಲಿ ತೇಲುತ್ತಿದ್ದರೆ ಅವಳ ಮೈ ಪುಳಕಿತವಾಯ್ತು.

"ಚಿಕ್ಕಮ್ಮ, ಮಹಾ ನೀ ಕುದ್ರೆ ಇಲ್ಲಾಂದೆ. ನೋಡೀಗ ನಾನೇ ಕುದ್ರೆ ಆಗ್ಬಿಟ್ಟೆ ಮಾಧೂಗೆ."

ಮಾಧೂ ! ಎಷ್ಟೊಳ್ಳೆಯ ಹೆಸರು. ಮಾಧವನೆ ಅಥವಾ ಮಧು ಸೂಧನನೆ ?

"ಪುಟಾಣಿ ನಿನ್ನ ಹೆಸರೇನೋ"

"ಮತುಚೂತನ" ತೊದಲಿತು ಮಗು.

ಮಧುಸೂಧನ ! ಯಾವುದೋ ಕಣ್ಣಿಗೆ ಕಾಣದ ಒಂದು ಬಾಣ ಬಂದು ಅವಳ ಹೃದಯವನ್ನು ಇರಿದಂತಾಯಿತು. ತನ್ನ ಸ್ಮೃತಿ ಪಟಲದಲ್ಲಿ ಅದುಮಿ ಅದುಮಿ ಇಟ್ಟು ಹೊರಗೆ ಬರಲೇಕೂಡದೆಂದು ಕಟ್ಟಪ್ಪಣೆ ಮಾಡಿದ್ದ ಒಂದು ತೆರನಾದ ಬಾಧೆ ಅವಳನ್ನು ಬಹಳ ಕಂಗೆಡಿಸಿತು. ಎಲ್ಲಾ ಸರಿಹೋಗಿದ್ದಿದ್ದರೆ ತಾನು ತನ್ನ ಮಗುವಿಗೆ ಇಡಬಯಸಿದ್ದ ಹೆಸರದು. ಮನಸ್ಸನ್ನು ಹಿಡಿತದಲ್ಲಿಟ್ಟು ಕೊಳ್ಳಲು ಇಂದಿರಳ ಕುರಿತು ಯೋಚಿಸತೊಡಗಿದಳು.

ಎಂತಹ ವಿಚಿತ್ರ ಹುಡುಗಿ ಇಂದಿರಾ ! ಅವಳನ್ನು ಡಾಕ್ಟರ ಪರೀಕ್ಷೆ ಓದಿಸಲೇಬೇಕೆಂದು ಹಟತೊಟ್ಟ ತಂದೆಯ ಮಾತನ್ನು ಇಲ್ಲವೆನ್ನಲಾರದೆ ಓದಿ ದಳು. ಬುದ್ಧಿವಂತಳು ಇಂದು. ಎಲ್ಲಾ ವರ್ಷಗಳಲ್ಲೂ ಸರಿಯಾಗೇ ಪಾಸು ಮಾಡಿ, ಒಂದೆರಡು ವಿಷಯಗಳಲ್ಲಿ ಪ್ರೈಜ್ ಕೂಡ ಗಿಟ್ಟಿಸಿದ್ದಳು. ವೈದ್ಯ ವೃತ್ತಿಯಲ್ಲಿ ನಿಷ್ಠೆಯಿದ್ದರೂ ಜೀವನವನ್ನು ಅತಿಯಾಗಿ ಪ್ರೀತಿಸುತ್ತಿದ್ದ ಇಂದಿರಾ, ತನ್ನ ಸುಖ, ಆಸೆ, ವಿನೋದಮಯ ಜೀವನವನ್ನು ತ್ಯಾಗಮಾಡಿ ಯಾದರೂ ವೈದ್ಯವನ್ನು ನಡೆಸಬೇಕೆಂಬ ಧ್ಯೇಯದವಳಲ್ಲ. ನಿಯಮಿತ ವೇಳೆ ಯಲ್ಲಿ ರೋಗಿಗಳ ಸೇವೆಮಾಡಲು ಸಿದ್ಧಳಿದ್ದಳು, ಆ ಸಮಯದಲ್ಲಿ ಕಾರ್ಯ

ತತ್ಪರತೆಯೂ ಇತ್ತು. ಆದರೆ ಹೊತ್ತಲ್ಲದ ಹೊತ್ತಿನಲ್ಲಿ, ತಾನು ತನ್ನ ಆನಂದದಲ್ಲಿರುವಾಗ ರೋಗಿಗಳನ್ನು ನೋಡುವುದಿರಲಿ, ಅವರ ವಿಷಯವಾಗಿ ಮಾತನಾಡುವುದೂ ಸಹ ಅವಳಿಗೆ ಬೇಡ. ಈ ವಿಷಯವಾಗಿ ಸರಳೆಗೂ ಇಂದಿರೆಗೂ ಅನೇಕ ಬಾರಿ ವಾಗ್ವಾದ ನಡೆದಿತ್ತು ಕೂಡ.

"ನಿನ್ನಂಥವಳು ಡಾಕ್ಟರಾಗಬಾರದಿತ್ತು ಇಂದಿರಾ. ವೈದ್ಯನಾಗುವವನು ಮಿಕ್ಕೆಲ್ಲಾ ಆಸೆಗಳನ್ನು ಬದಿಗಿಟ್ಟು ತನ್ನ ಸುಖ ತ್ಯಾಗಮಾಡಿ ರೋಗಿಗಳ ಸೇವೆ ಮಾಡಬೇಕು."

"ಅದು ಆದರ್ಶವಾಯ್ತು ಸರಳಾ. ಈಗೆಷ್ಟು ಡಾಕ್ಟರುಗಳು ಆ ರೀತಿ ಮಾಡ್ತಿದಾರೆ ?"

"ಅವರು ಮಾಡ್ತಿಲ್ಲಾಂತ ನೀನೂ ಮಾಡಬಾರದೆಂದೆ ?"

"ನಾ ಹೇಳೋದನ್ನ ಪೂರ್ತಿ ಕೇಳು ಸರಳಾ, ವೈದ್ಯವೃತ್ತೀನ್ನ ಸಮಾಜ ಸೇವೆ ಅಂತ, ಬಡಬಗ್ಗರ ಸೇವೇನೇ ಭಗವಂತನ ಸೇವೇಂತ ವೃತ್ತಿ ಮಾಡ್ತಾ ಇರೋವ್ರು ಸಾವಿರಕ್ಕೊಬ್ರು ಇಲ್ಲ ಸರೂ, ಆದ್ರೆ ನೀ ಹೇಳೋ ಹಾಗೆ, ಅಹೋ ರಾತ್ರಿ ದುಡಿಯೋ ಡಾಕ್ಟರುಗಳಿದ್ದಾರೆ. ಆದರೆ ಅವರ ಮನೋಭಾವ ಸೇವೆಯಲ್ಲ ಸರೂ, ಸೇವೆಯಲ್ಲ. ಹಣದಾಸೆ. ಸಮಾಜವನ್ನು ಹೀರಿ ಮಹಡಿ ಕಟ್ಟೋ ಮಹನೀಯರುಗಳು ಇವರು. ನನಗೆ ಹಣದಾಸೆಯಿಲ್ಲ. ಅದೃಷ್ಟದಿಂದ ನಂಗೆ ಆಸ್ತಿ ಇರೋ ತಂದೆ ಇದ್ದಾರೆ. ಧನಿಕನಾಗಿರೋ ಗಂಡ ಆಗುವವ ಇದ್ದಾನೆ."

"ಇಲ್ಲೇ ನೀನು ಒಳ್ಳೇ ಸ್ಥಾನದಲ್ಲಿದ್ದಿ ಇಂದಿರಾ. ನಿನ್ನ ಹಣ ಸ್ವಲ್ಪ ಮಟ್ಟಿಗೆ ಉಪಯೋಗಿಸಿ, ಸಮಾಜ ಸೇವೆ ಯಾಕ್ಮಾಡ್ಬಾರ್ದು ? ನಿನ್ನ ಅಲ್ಪ ತ್ಯಾಗದಿಂದ ದೊಡ್ಡ ಲಾಭ ಸಮಾಜಕ್ಕಾಗೋದಾದ್ರೆ...."

"ಸರಳಾ, ನನ್ನ ತಪ್ಪು ತಿಳೀಬೇಡ. ನಾನು ನಿನ್ನಂತೆ ಇರಲಾರೆ. ನೀನು ನಿನ್ನ ಮಟ್ಟಿಗೆ ಸನ್ಯಾಸಿನಿ. ಲೋಕಕ್ಕೆ ಸಂಸಾರಿ. ಇತರರ ಕಷ್ಟ ಕೇಳೋಕ್ಮುಂಚೇನೇ ಕಣ್ಣೀರು ತಂದ್ಕೊಳ್ಳೋ ಭಾವುಕಳು ನೀನು. ಆದ್ರೂ ಸರೂ, ನಿನ್ನಂತಿರೋವ್ರು, ಇಂದಿನ ಯುಗದಲ್ಲಿ ಬದುಕೋದು ಕಷ್ಟ. ಸ್ವಾರ್ಥರಹಿತ ಸೇವೆ ಮಾಡಿದ್ರೂ ಅದರ ಹಿಂದೆ ಸ್ವಾರ್ಥದ ನೆರಳನ್ನೇ ಕಾಣೋ ಅಲ್ಪ ಮನಸ್ಸಿಂದು ನಮ್ಮ ಸಮಾಜ."

"ಮಾತಿಗೊಮ್ಮೆ ಸಮಾಜ ಅಂತ........"

"ಅದೆಲ್ಲಾ ಬೇಡ. ಹೋಗ್ಲಿ ಈಗ ನನ್ನ ನಿನ್ನನ್ನೇ ತೊಗೊಳ್ಳೋಣ. ನಮ್ಮಿಬ್ಬರಲ್ಲಿ ಯಾರು ಹೆಚ್ಚು ಸಂತೋಷಿಗಳು ಹೇಳು ?"

"ನೀನೇ ಸಂತೋಷವಾಗಿದ್ದಿ ಅಂತ ಒಪ್ಕೋತೀನಿ ಇಂದೂ."

"ಅದಕ್ಕೆ ಕಾರಣ ಏನು ಗೊತ್ತಾ ?"

"ನೀನು ಆಶಾವಾದಿ. ನಾನು ನಿರಾಶಾವಾದಿ ಅಷ್ಟೆ."

"ಅಲ್ಲ. ನೀನು ತುಂಬು ಜೀವಿ. ಆಶೆ ನಿರಾಶೆಗಳ್ನ ಬದಿಗಿಟ್ಟಿದ್ರೂ ಮತ್ತೊಬ್ಬರ ಕಷ್ಟ ಸುಖಗಳ್ನ ಹಂಚ್ಕೊಂಡು, ಅವರ ಭಾಧೆ ನಿನ್ನದೂಂತ ಹಿಂಸೆಪಡ್ತಿ. ಆದ್ರೆ ನಾನು ಇನ್ನೂ ಅಪಕ್ವ ಹೃದಯದವಳು, ಜೀವನ ಚಾಪಲ್ಯ ಬಹಳ ಇದೆ ನನಗೆ. ಮತ್ತೊಬ್ಬರ ಯಾವುದೋ ಸ್ವಲ್ಪ ಸುಖಕ್ಕಾಗಿ ನನ್ನದನ್ನ ತ್ಯಾಗ ಮಾಡಲಾರೆ. ನಾನು ತ್ಯಾಗ ಮಾಡಲಿಲ್ಲ ಅನ್ನೋದು ನಾನು ಬಲ್ಲೆ. ಆದರೂ ನನಗೆ ದುಃಖವಿಲ್ಲ. ಕಾಲಕ್ಕೆ ತಕ್ಕಂತೆ ಹೋಗ್ತಾ ಜೀವನಾನ್ನ ಆಶಿಸುವವಳು ನಾನು. ನಿನ್ನಂತೆ ನಾನಿಲ್ವಲ್ಲಾಂತ ಕೆಲವು ಸಲ ಹಲುಬಿದ್ರೂ ಸಂತೋಷವಾಗಿರ್ತೀನಿ."

"ಅಂದ್ರೆ ನಾನು ಸಂತೋಷವಾಗಿಲ್ಲಾಂತಾನಾ ?"

"ನಾ ಹಾಗೆಲ್ಲೀದೆ ? ನೀ ಖಂಡಿತವಾಗಿಯೂ ಸಂತೋಷವಾಗಿರ್ತಿ. ಆದರೆ ನಿನಗಾಗಿ ಅಲ್ಲ, ಪರರಿಗಾಗಿ. ಪರರು ಸಂತೋಷಪಟ್ರೆ ಮಾತ್ರ ನಿನ್ನ ಹೃದಯ, ಮುಖ ನಗುತ್ತೆ, ನಾ ಹೇಳೋದು ಸತ್ಯ ತಾನೇ ?"

"ಅಕ್ಷರಶಃ ಸತ್ಯ. ಹೌದು ಇಂದಿರಾ. ನನಗೇನೋ ನನ್ನ ಸುಖಕ್ಕಿಂತ ನಾನು ಪ್ರೀತಿಸೋವ್ರು, ನನ್ನ ಅಕ್ಕರೆಯುವ್ರು ಸಂತೋಷಪಟ್ರೆ ನನಗೆ ಆನಂದವಾಗುತ್ತೆ. ಅದರಲ್ಲೂ ನೊಂದ ಹೃದಯಗಳಲ್ಲಿ ನನ್ನಿಂದಾಗಿ ಚೇತನ ತುಂಬಿ ಅವರು ಉಲ್ಲಸಿತರಾದ್ರೆ ನನ್ನ ಹೃದಯ ಅರಳುತ್ತೆ."

ಈ ರೀತಿ ಎಷ್ಟೋ ವಾದ ವಾಗ್ವಾದಗಳು ನಡೆಯುತ್ತಲೇ ಇದ್ದುವು ಈ ಗೆಳತಿಯರಲ್ಲಿ. ಎಂದೂ ಇಬ್ಬರ ದೃಷ್ಟಿ ಒಂದುಗೂಡುತ್ತಿರಲಿಲ್ಲ. ಆದರೂ ಇಬ್ಬರೂ ಪರಮಸ್ನೇಹಿತರು.

೨

ಇಂದಿರಾಳ ದಾರಿಯನ್ನೇ ಕಾಯುತ್ತಿದ್ದ ಸರಳೆಗೆ ಅವಳು ಬಂದ ಕೂಡಲೆ ಬಹಳ ಸಂತೋಷವಾಯಿತು—"ಎಷ್ಟು ಬೇಗ ಬಂದುಬಿಟ್ಟೆ ಇಂದೂ. ನೀ ಬರ್ತೀಯೋ ಇಲ್ವೋ ಅಂತ ಅನುಮಾನಿಸ್ತಾ ಇದ್ದೆ. ಶಾಪ ಹಾಕ್ತಾ ಇದ್ದೆ."

"ಸದ್ಯ ಶಾಪ ಗೀಪ ಹಾಕ್ಬೇಡ. ನಿನ್ನ ಶಾಪ ನಿಜವಾಗ್ಬಿಡತ್ತೆ, ಅಂತಿದ್ರು ರಮೇಶ್."

"ಛಿ. ನಾಚಿಕೆ ಇಲ್ಲದ ಹುಡುಗಿ ಮದುವೆಗ್ಮುಂಚೇನೇ ಗಂಡನ ಹೆಸ್ರು ಹೇಳ್ತಾಳೆ."

"ಮದುವೆಗ್ಮುಂಚೆ ಆಗಿದ್ದಕ್ಕೇ ಮತ್ತೆ ಹೇಳಿದ್ದು. ಈಗೇನೂ ಇನ್ನೂ ಅವರು ನನ್ನ ಗಂಡ ಅಲ್ವಲ್ಲಾ. ಸರಿ. ಎಲ್ಲಿ ಪೇಷಂಟ್ಸ್? ವಾರ್ಡ್?" ಎಂದಳು ಡಾಕ್ಟರ ಠೀವಿ ತೋರಿಸುತ್ತಾ.

"ಇಲ್ಲೇ ಬನ್ನಿ ಡಾಕ್ಟರ್" ಎಂದು ನರ್ಸಿನಂತೆ ಡಾಕ್ಟರ ಜೊತೆಯಲ್ಲಿ ಕೋಣೆಗೆ ಬಂದಳು.

ತಾಯಿಗೇನೋ ಸ್ವಲ್ಪ ಸ್ವಲ್ಪ ಎಚ್ಚರವಾದಂತಾಗಿತ್ತು. ಆದರೆ ಬಾಲಕಿ ಮಾತ್ರ ಕಣ್ಣು ಬಿಟ್ಟಿರಲೇ ಇಲ್ಲ. ಇಂದಿರಾ ಮೊದಲು ತಾಯಿಯನ್ನು ಪರೀಕ್ಷಿಸಿ "ಏನೂ ಆಗಿಲ್ಲ" ಎನ್ನುವಂತೆ ತಲೆ ಆಡಿಸಿದಳು. ಸರಳೆಗೆ ಸುಲಭವಾಗಿ ಉಸಿರಾಡುವಂತಾಯಿತು. ಬಾಲಕಿ ಮಾತ್ರ ಬಹಳ ಬಾಧೆ ಪಡುತ್ತಿರುವಂತೆ ಕಂಡಿತು. ಮೂಗಿಗೇ ಗಾಯವಾದ ಕಾರಣ ಮುಖವೆಲ್ಲಾ ಬಾತಿತ್ತು. ಉಸಿರೂ ಸಹ ಕಷ್ಟದಿಂದ ಆಡುತ್ತಿತ್ತು.

"ಏನೂ ಪರವಾಗಿಲ್ಲ. ಯಾರಿಗೂ ದೊಡ್ಡ ಪೆಟ್ಟಾಗಿಲ್ಲ. ಷಾಕ್ ಸ್ವಲ್ಪ ಜಾಸ್ತಿ ಆಗಿದೆ. ಸ್ವಲ್ಪ ವಿಶ್ರಾಂತಿ ತೊಗೊಂಡ್ರೆ ಸರಿಹೋಗುತ್ತೆ" ಎಂದಳು ವೈದ್ಯೆ.

"ಬಹಳ ಥ್ಯಾಂಕ್ಸ್ ಡಾಕ್ಟ್ರೆ. ತಮಗೆಷ್ಟು ಕೆಲಸ ಇದ್ರೂ ಎಲ್ಲಾ

ಪಕ್ಕಕಿಟ್ಟು ಬಂದು ನನ್ನ ಬಂಧುಗಳನ್ನ ನೋಡಿದ್ರಲ್ಲಾ. ನಿಮ್ಮನ್ನ ಹೇಗೆ...." ಕೊಂಕು ಮಾತಿನಲ್ಲಿ ಇಂದಿರಳನ್ನು ಛೇಡಿಸಿದಳು ಸರಳಾ.

ಅಷ್ಟರಲ್ಲಿ ತಾಯಿ ಎದ್ದು ಕುಳಿತುಕೊಳ್ಳಲು ಪ್ರಯತ್ನಿಸುತ್ತಿದ್ದಳು.

"ಏಳಬೇಡಿ, ಪರವಾಗಿಲ್ಲ ಇನ್ನೂ ಸ್ವಲ್ಪ ರೆಸ್ಟ್ ತೊಗೊಳ್ಳಿ" ಎಂದಳು ಇಂದಿರಾ.

"ಏನೂ ಪರವಾಗಿಲ್ವಾ ಡಾಕ್ಟ್ರ ? ಸರಳಾಗೂ ಏನೂ ಆಗಿಲ್ವಾ ?"

ಸರಳಗೇನು ಧಾಡಿ ಎನ್ನುವಂತೆ ಸರಳೆಯ ಕಡೆ ನೋಡಿದಳು ಇಂದು. ತನಗೇನಾಗಿದೆ ಎಂದು ತನ್ನನ್ನೇ ನೋಡಿಕೊಂಡಳು ಸರಳಾ. ಹಿಡಿಮಾಡಿದ ಕೈಯ ಹೆಬ್ಬೆರಳನ್ನು ನಕಾರವಾಗಿ ಆಡಿಸಿದಳು.

"ಸರಳಾಗೇನೂ ಆದಂತಿಲ್ಲ. ಅಷ್ಟಕ್ಕೂ ಅವಳೇನೂ ಗಾಡಿಯಲ್ಲಿರ ಲಿಲ್ಲವಲ್ಲಾ."

"ಇದ್ಲು ಡಾಕ್ಟ್ರೆ. ನೋಡಿ ಮೂಗೆಲ್ಲಾ ಹೇಗೆ ಜಜ್ಜಿ ಹೋಗಿದೆ ನನ್ನ ಸರಳಾಗೆ."

ಗೆಳತಿಯರಿಬ್ಬರೂ ಒಮ್ಮೆಲೇ ನಕ್ಕರು.

"ನಿಮ್ಮ ಹುಡುಗಿಯ ಹೆಸರು ಸರಳಾನಾ ? ಇವಳೂ ಸರಳಾನೇ. ಸ್ವಲ್ಪ ಆಭಾಸವಾಯಿತು, ಏನೂ ಪರವಾಗಿಲ್ಲಮ್ಮ. ಮೂಗು ಒಂದೆರಡು ದಿನದಲ್ಲಿ ಸರಿಯಾಗುತ್ತೆ. ಎಲ್ಲಿ ಅವಳನ್ನ ಈ ಕಡೆ ಮಲಗಿಸಿ....ರಾಜಮ್ಮಾ....ರಾಜಮ್ಮಾ ....ಸ್ವಲ್ಪ...."

ಸರಳ ತಡೆದು ಹೇಳಿದಳು—"ರಾಜಮ್ಮ ಇಲ್ಲ, ಈಗ ನಾನೇ ರಾಜಮ್ಮಾ ಏನು ಬೇಕಿತ್ತು ಡಾಕ್ಟ್ರೆ" ಮತ್ತೆ ಕುಚೋದ್ಯ.

"ಎಲ್ಲಿ ಹೋದ್ರು ರಾಜಮ್ಮ ?"

"ತಮ್ಮನ ಮಗಳ ಬಾಣಂತನಕ್ಕೋಸ್ಕರ ಆರು ತಿಂಗಳು ರಜಾ"

"ಅಂದರೆ ನೀದೇ ಅನ್ನು ಪಾಕ. ಆಮೇಲೆ ಅದರ ವಿಷಯ ಮಾತಾಡೋಣ. ಸ್ವಲ್ಪ ಬಿಸಿ ನೀರಿದ್ರೆ ತೊಗೊಂಬಾ....ಹಾಗೇಸ್ವಲ್ಪಕಾಫೀಇದ್ರೇ...." ಆಜ್ಞಾಪಿಸಿದಳು.

"ಈ ಕಾಫಿ ಚಟ ಯಾವತ್ತು ಬಿಡ್ತೀಯೋ ಇಂದೂ ನೀನು. ನಿಂಗೆ ಕಾಫಿ ಸಪ್ಲೈನಲ್ಲೇ ರಮೇಶ ಪಾಪರ್‍ರಾಗಬೇಕು ಅಷ್ಟೆ."

"ನಂಗಲ್ವೆ ನಮ್ಮಮ್ಮ. ಈ ಮಾತ್ರೆ ನುಂಗಿ ಕಾಫಿ ಕುಡಿದು ವಿಶ್ರಾಂತಿ ತೊಗೊಂಡ್ರೆ ಈಕೇಗೆ ಬೇಗ ವಾಸಿ ಆಗುತ್ತೇಂತ. ಅಷ್ಟಕ್ಕೂ ನಾನೀಗ ಕಾಫೀನೇ ಕುಡ್ಯೋಲ್ಲ."

"ಆ ಹಾ ಹಾ...."

"ಪ್ರಾಮಿಸ್ ?"

"ಈಗ ಕೊಟ್ರೆ ನೀ ಕುಡ್ಯೋದೇ ಇಲ್ವಾ ?"

"ಖಂಡಿತ ಇಲ್ಲ."

"ನೋಡೋಣ ಹಾಗಾದ್ರೆ" ಎಂದು ಹೊರಟಳು ಸರಳಾ ಅಡಿಗೆಯ ಮನೆಗೆ. ಒಂದೇ ನಿಮಿಷದಲ್ಲಿ ಬಿಸಿ ನೀರು ತಂದುಕೊಟ್ಟು ಕಾಫಿ ತಯಾರಿಗಾಗಿ ಹಿಂತಿರುಗಿದಳು.

ಕೈಚಳಕ ಚುರುಕಾದ ಇಂದಿರಾ ಮಗು ಸರಳಾಗೆ ನೋವಾಗದಂತೆ ಹೆಪ್ಪುಗಟ್ಟಿದ್ದ ರಕ್ತವನ್ನೆಲ್ಲಾ ಒರೆಸುತ್ತಿದ್ದಳು. ಆಕೆ ಮಾತ್ರ ಬಟ್ಟಲಗಲದ ಕಣ್ಣುಗಳಿಂದ ಇಂದಿರಳನ್ನೇ ನೋಡುತ್ತಿದ್ದಳು.

ಆಕೆಗೇನೋ ಇಬ್ಬರಲ್ಲಿ ತುಂಬು ಗಾಂಭೀರ್ಯದ ದೊಡ್ಡ ಹೆಣ್ಣು ಸರಳಾನೇ ಇಷ್ಟವಾಯಿತು. ಸುಂದರತೆಗೆ ದೂರವಿದ್ದರೂ ಸರಳತೆಯ ತೌರಿನ ಸರಳಾ ಹೆಚ್ಚು ಶೋಭಿಸಿದಳು.

ಇಂದಿರಾ ಸುಂದರಿ. ಆದರೆ ಆಡಂಬರದ ಛಾಯೆಯಿತ್ತು. ಬೇಡವೆ ? ಹಣವಂತರ ಹೆಣ್ಣುಮಗಳು. ಮೇಲಾಗಿ ವೈದ್ಯೆ. ಕಾರಿನಲ್ಲಿ ಬಂದಿಳಿದ ಕೂಡಲೇ ಗಣ್ಯವ್ಯಕ್ತಿಯಂತೆ ಕಾಣಬೇಡವೇ ಧನಿಕಾತ್ಮಜೆ ! ಇವರಿಬ್ಬರಿಗೂ ಅದು ಹೇಗೆ ಸ್ನೇಹ ಅಂಕುರಿಸಿತೋ. ಮನಸ್ಸು ತೆರೆತೆರೆಯಾಗಿ ಏನೇನನ್ನೋ ಊಹಿಸುತ್ತಿದ್ದರೂ ಆಕೆಯ ಬೊಗಸೆ ಕಂಗಳು ಇಂದಿರಳ ಕೈ ಚಾಕಚಕ್ಯದ ಮೇಲೆ ನೆಟ್ಟಿತ್ತು. ಈ ಆಡಂಬರದ ಹೆಣ್ಣಿನ ಕೈಗಳು ಎಲ್ಲಿ ತನ್ನ ಮಗುವನ್ನು ನೋಯಿಸುವುದೋ ಎಂಬ ಕಾತರ ಆಕೆಗೆ. ಆದರೆ ಆಕೆ ಬಗೆದಷ್ಟು ಅಚಾತುರ್ಯ ಮಾಡುವವಳಲ್ಲ ಇಂದಿರಾ.

ನಿಷ್ಠೆಯಿಂದ ಮಗುವಿನ ಗಾಯವನ್ನು ತೊಳೆಯುತ್ತಿದ್ದ ಇಂದಿರಾಳಿಗೆ ಒಮ್ಮೆಲೇ ನಗು ಬಂತು. ಸರಳಾನ ನೆಂಟರಲ್ಲವೆ ಇವರು ? ಸರಳಾಗೆ ನೆಂಟರಲ್ಲ

ದವರಾರು? ನೆಟ್ಟ ದೃಷ್ಟಿಯಿಂದ, ಊದಿದ ಮುಖದ ಮೇಲೆ ಮುಲಾಮನ್ನು ತಿಕ್ಕುತ್ತಿದ್ದ ಡಾಕ್ಟರ್ ನಕ್ಕದ್ದು ಆಕೆಗೆ ಸರಿಯೆನಿಸಲಿಲ್ಲ.

"ಯಾಕೆ ಡಾಕ್ಟ್ರೆ ನಕ್ಕಿರಿ ?"–ಎಂದು ಕೇಳಿಯೇಬಿಟ್ಟಳು.

"ಯಾಕೂ ಇಲ್ಲ, ನಮ್ಮ ಸರಳಾನನ್ನು ನೆನಸಿಕೊಂಡು ನಕ್ಕೆ.

"ನಗು ತರಿಸುವಂತಹ ವ್ಯಕ್ತಿಯೇನು ಆಕೆ ?"-ಈ ಪ್ರಶ್ನೆಯ ಉತ್ತರಕ್ಕೆ ಇಂದಿರಾ ಸಿದ್ಧಳಿರಲಿಲ್ಲ. ಮಾತು ಬದಲಾಯಿಸಿದಳು.

"ಈಗ ನಿಮಗೆ ಸ್ವಲ್ಪ ವಾಸಿ ಎನಿಸಿರಬಹುದಲ್ವಾ ? ಅಂದಹಾಗೆ ನಿಮ್ಮ ಹೆಸರೇನು ?"

"ಸುಮಿತ್ರಾ, ನಿಮ್ಮದು ?"

"ಇಂದಿರಾ. ನೀವು ಅದು ಹೇಗೆ ಬಿದ್ದಿರಿ. ನಡೆದದ್ದಾದರೂ ಏನು ?"

"ಈವತ್ತು ನಮ್ಮ ಯಜಮಾನ್ರ ಅಕ್ಕನ ಮನೇಲಿ ಮಗುವಿನ ಹುಟ್ಟಿದ ಹಬ್ಬ. ಊಟಕ್ಕೆ ಕರೆದಿದ್ರು. ಇವ್ರಿಗೆ ರಜಾ ಸಿಕ್ಲಿಲ್ಲಾಂತ 'ನೀ ಮಕ್ಳನ್ನ ಕರ್ಕೊಂಡು ಹೋಗು. ಸಾಧ್ಯವಾದ್ರೆ ನಾನು ಆಫೀಸಿಂದಾನೇ ಬರ್ತೀನಿ' ಅಂದ್ರು. ಊಟ ಮುಗಿಸಿ ಬಿಸಿಲು ತುಂಬಾ ಏರೋದ್ರೊಳ್ಗೆ ಮನೆ ಸೇರ್ಕೋಳ್ಳೊಂಣಾಂತ ಹೊರಟೆ. ಬಹಳ ಹೊತ್ತು ಕಾದ್ಮೇಲೆ ಈ ಗಾಡಿ ಸಿಕ್ತು. ಬಹಳ ಬಿಸಿಲು ಮಕ್ಕಳು ಸೊರಗ್ತಾರಲ್ಲಾಂತ 'ಹತ್ರ ಆಗುತ್ತೆ ಈ ಕಡೇನೇ ಬಿಡು' ಅಂದೆ ಗಾಡೀನ. ಪಾಪ ಮುದುಕ ಬಹಳ ಹಿಂದುಮುಂದು ನೋಡ್ದ. ನಾನೇ ಬಲವಂತ ಮಾಡಿ ಗಾಡಿ ಹೊಡೆಸ್ದೆ, ಪ್ರಾಯಶ್ಚಿತ್ತ ವಾಯ್ತು. ಏನಾಯ್ತೂಂತಾನೇ ತಿಳೀಲಿಲ್ಲಾರಿ. ಒಂದೇ ಸಲ ಒಳ್ಳೇ ಕುಂಬಳಕಾಯಿ ಉರುಳಿದ್ಹಾಗೆ ಉರುಳಿಬಿಟ್ಟೆ. ಸರಿಯಾಗಿ ಜ್ಞಾನ ಬಂದಾಗ ಇಲ್ಲಿದ್ದೆ ಡಾಕ್ಟ್ರೆ. ಗಾಡಿ, ಕುದುರೆ ಗಾಡೀವ್ನೂ ಏನಾದ್ರೋ ಏನೋ."

ಒಂದೇ ಸಮನೆ ನಡೆದ ಕತೆಯನ್ನೆಲ್ಲಾ ಮುಗಿಸಿಬಿಟ್ಟಳು ಸುಮಿತ್ರಾ. ಅವಳ ಮಾತಿನ ಸರಣಿ ನೋಡಿ ಇಂದಿರಾಗೆ ಆಶ್ಚರ್ಯವಾಯಿತು.

"ನೀವೇನೂ ಯೋಚನೆ ಮಾಡಬೇಡಿ. ಗಾಡಿ, ಕುದುರೆ, ಮುದುಕ ಎಲ್ಲಾರೂ ನಮ್ಮ ಸರಳಾ ಯೋಗಕ್ಷೇಮದಲ್ಲಿ ಸೇರಿದ್ಮೇಲೆ ಏನೂ ಯೋಚ ನೇನೇ ಮಾಡಬೇಕಿಲ್ಲ."

"ಆಕೆ ಬಹಳ ಒಳ್ಳೇವ್ರು, ಹಾಗೆ ಕಾಣ್ತಾಳೆ, ಅಲ್ವೆ ಡಾಕ್ಟ್ರೆ ?"

"ಅವಳ ಒಳ್ಳೇತನಾನ ನೀವೀಗ್ಲೇ ಏನು ನೋಡಿದ್ರಿ. ಅವಳ ಒಳ್ಳೇ ತನವೇ ಅವಳ ಶತ್ರು. ಹೌದಮ್ಮ, ಅವಳೊಬ್ಬ ಪುಣ್ಯಜೀವಿ. ನೀವು ಅವಳ ಮನೆ ಮುಂದೆ ಬಿದ್ದದ್ದು ನಿಮ್ಮ ಪುಣ್ಯ. ಅವಳ ಬಂಧುಗಳ ಗುಂಪಿನಲ್ಲಿ ನಿಮಗೂ ಒಂದು ಸ್ಥಾನ ಸಿಕ್ತು."

"ಅಂದರೆ ?–ಹೆಚ್ಚು ಕುತೂಹಲಿಯಾದಳು ಸುಮಿತ್ರಾ.

"ನಿಮಗೇ ತಿಳಿಯುತ್ತೆ ನಿಧಾನವಾಗಿ."

ಅಷ್ಟರಲ್ಲಿ ಸರಳಾ ಒಂದು ಬೆಳ್ಳಿಯ ತಟ್ಟೆಯಲ್ಲಿ ಎರಡು ಲೋಟಗಳನ್ನಿಟ್ಟು ಕಾಫಿ ತಂದಳು.

"ಎಲ್ಲಿ ಇದನ್ನು ನುಂಗಿ ಸ್ವಲ್ಪ ಕಾಫಿ ಕುಡೀರಿ ಸುಮಿತ್ರಾ" ಎಂದು ಇಂದಿರಾ ಸುಮಿತ್ರೆಯ ಕೈಗೆ ಎರಡು ಮಾತ್ರೆಗಳನ್ನು ಕೊಟ್ಟಳು.

ಸುಮಿತ್ರಾ ಎಲ್ಲಿಯೋ ಕೇಳಿದ ನೆನಪು. ಊಹುಂ ತನ್ನ ಪರಿಚಿತರಾದವರಾರೂ ಆ ಹೆಸರಿನವರಿಲ್ಲವೇ ಇಲ್ಲ. ಕೆಲವು ಬಾರಿ ಹಾಗಾಗುವುದುಂಟು. ಕೆಲವು ಮುಖಗಳನ್ನು ಕಂಡ ಕೂಡಲೇ ಎಲ್ಲಿಯೋ ನೋಡಿರುವೆನಲ್ಲಾ ಎಂದು ತಲೆ ಕೆರೆದುಕೊಳ್ಳುವಂತಾಗುವುದು. ನೆನಪಿಗೆ ಬರುವುದಿಲ್ಲ. ಅಂತೆಯೇ ಹೆಸರುಗಳು. ಅದಕ್ಕೆ ಅಮ್ಮ ಹೇಳುತ್ತಿದ್ದುದು ಯಾವ ಜನ್ಮದಲ್ಲೋ ಪರಿಚಿತರಾಗಿದ್ದರೆ ಈಗ ಹಾಗಾಗುತ್ತದೆ. ಒಂದು ಪರಿಚಯದ ಅನುಭವ ಆಗುತ್ತದೆ ಎಂದು. ಇರಲಿ ಯಾರಾದರೇನು ಎಂದು ತನ್ನ ಯೋಚನಾ ಸರಣಿಗೆ ತಡೆ ಹಾಕಿದಳು ಸರಳಾ ಮತ್ತು ಕೇಳಿದಳು–"ಮಗು ಏಳಲೇ ಇಲ್ಲವೇನಮ್ಮ, ಎಬ್ಬಿಸಿ ಸ್ವಲ್ಪ ಕಾಫಿ ಕುಡಿಸಿ."

ಬಲವಂತದಿಂದ ಪುಟ್ಟ ಸರಳಾನನ್ನು ಎಬ್ಬಿಸಿ ಮಾತ್ರೆ ನುಂಗಿಸಿ, ಕಾಫಿ ಕುಡಿಸಿದರು ಮೂವರೂ ಸೇರಿ.

"ಇನ್ನೊಂದು ಎರಡು ಗಂಟೆ ಮಲಗಿ ನಿದ್ದೆ ಮಾಡಿಬಿಡಿ ಸುಮಿತ್ರಾ. ಏಳುವ ವೇಳೆಗೆ ಮೈ ಕೈ ಕಾಲು ನೋವು ಕೂಡ ಮಾಯ"---ಡಾಕ್ಟರರ ಆಶ್ವಾಸನೆ.

ಈಗ ಗಂಟೆ ಎಷ್ಟು ?" ಕಾತರಿಸಿದಳು ಸುಮಿತ್ರಾ.

"ಮೂರೂವರೆ. ಕಡೆಯ ಪಕ್ಷ ಆರು ಗಂಟೆಯವರೆಗಾದರೂ ನೀವು ರೆಸ್ಟ್ ತೊಗೋಬೇಕು. ತಿಳೀತಾ ?" ಎಚ್ಚರಿಸಿದಳು ಇಂದಿರಾ.

"ಆರು ಗಂಟೆವರೆಗಾ ? ಅವರು ಮನೇಗೆ ಬರೋ ಹೊತ್ತು"– ಸುಮಿತ್ರಳ ದನಿಯಲ್ಲಿ ನೋವಿತ್ತು.

ಗಂಡ ಮನೆಗೆ ಬರುವ ವೇಳೆಗೆ ಮನೆಯಲ್ಲಿ ಇಲ್ಲದಿದ್ದರೆ ಏನನ್ನುವರೋ ಎಂಬ ಬೆದರಿಕೆಯಿಂದ ಆಕೆ ಆ ಮಾತು ನುಡಿದಿರಬೇಕೆಂದು ತಿಳಿದಳು ಇಂದಿರ. ಅದಕ್ಕೆ ಸ್ವಲ್ಪ ಖಾರವಾಗಿ, "ಬಂದರೆ ಬರುತ್ತಾರೆ, ಏನು ಮಾಡಲು ಸಾಧ್ಯ. ಅಲ್ರೀ, ಮೈ ಕೈ ಜಜ್ಜಿ ನುಜ್ಜು ಗುಜ್ಜಾಗಿರೋವಾಗ ದೇಹಕ್ಕೆ ವಿಶ್ರಾಂತಿ ಕೊಡದಿದ್ದರೆ ಹೇಗೆ ಹೇಳಿ ?" ಎಂದು ಗದರಿದಳು.

ಆದರೆ ಸರಳಾ. ಸುಮಿತ್ರಳ ಮಾತನ್ನು ಅರ್ಥಮಾಡಿಕೊಂಡ ರೀತಿಯೇ ಬೇರೆ

ಎಂತಹ ಪ್ರೀತಿಯ ಮಡದಿ ಸುಮಿತ್ರಾ. ತನಗಿಷ್ಟು ಬಾಧೆಯಿದ್ದಾಗಲೂ ಪತಿಯದೇ ಧ್ಯಾನ. ಆತ ಮನೆಗೆ ಬರುವ ವೇಳೆಗೆ ತಾನು ಆತನ ಬರವಿಗಾಗಿ ಕಾದು ನಿಲ್ಲಬೇಕೆಂಬ ಆಸೆ. ಧನ್ಯೆ ಸುಮಿತ್ರಾ, ಎಂದು ಮನಸ್ಸಿನಲ್ಲೇ ಶ್ಲಾಘಿಸಿದಳು. ಮತ್ತೂ ಅಂದಳು––

"ಏನೂ ಚಿಂತೆಮಾಡಬೇಡಿ ಸುಮಿತ್ರಾ. ನಿಮ್ಮಾತ ಮನೇಗೆ ಬರೋ ವೇಳೆಗೆ ನಿಮ್ಮನ್ನು ಮನೇ ತಲುಪಿಸೋ ಏರ್ಪಾಟುಮಾಡೋಣ. ಈಗ ನಿಶ್ಚಿಂತೆಯಾಗಿ ಮಲಗಿ."

ಸುಮಿತ್ರೆಗೆ ನಾಚಿಕೆಯಾಯಿತು, ನಿಜವಾದ ಕಾತುರಕ್ಕಿಂತ ತಾನು ಸ್ವಲ್ಪ ಹೆಚ್ಚಾಗೇ ಗಾಬರಿ ತೋರಿಸಿದೆನೇನೋ ಎಂದು. ಕೃತಜ್ಞತೆಯ ಕುರುಹಾಗಿ ಕುತ್ತಿಗೆ ತುಂಬಿ ಬಂದು ನುಡಿದಳು---"ಯಾವ ಋಣವೋ ಸರಳಾ. ನಿಮಗೆ ಭಾರವಾಗಿ ಬಂದು ನಿಂತೆ."

"ಏನು ನೀವು ಮಾತಾಡೋದು? ಈ ಸಂದರ್ಭದಲ್ಲಿ ಯಾವ ಮನುಷ್ಯನಾದ್ರೂ ಇಷ್ಟು ಮಾಡೇ ಮಾಡ್ತಾನೆ. ಇಲ್ದೆ ಇದ್ರೆ ಅವನ್ನ ಮನುಷ್ಯ ಅನ್ನೋಕ್ಕಾಗೋಲ್ಲ. ಭೂತದಯೆ ಇರಬೇಕು ಸುಮಿತ್ರಾ ಮನುಷ್ಯನಿಗೆ ಸಮಯಕ್ಕಾಗದಿದ್ದ ಮೇಲೆ ಪಶೂಗೂ ಅವನಿಗೂ ವ್ಯತ್ಯಾಸ ಇಲ್ಲ."

"ಅದೇನೋ ನಿಜಾನ್ನಿ. ಆದರೂ ನೀವು ಇಷ್ಟು...."

"ಸಾಕು ಸಾಕು. ನಾನು ಇಷ್ಟೇ ಇಷ್ಟು ಎಂದು ನಕ್ಕು "ಡಾಕ್ಟ್ರೆ, ಪೇಷಂಟ್ಸ್ ಹತ್ರ ಬಹಳ ಹೊತ್ತು ನಿಲ್ಲಬಾರದಲ್ವೇ ವಿಸಿಟರ್ಸ್, ಬನ್ನಿ ಹೊರಗೆ ಹೋಗೋಣ ಎಂದಳು.

ನೋವು ಕೃತಜ್ಞತೆ ಕಾತರಗಳಿಂದ ಕಣ್ಣಲ್ಲಿ ನೀರುಗೂಡಿದ್ದರೂ ನಕ್ಕಳು ಸುಮಿತ್ರಾ, ಈ ನಿಷ್ಕಾಮ ಜೀವಿಯ ಮಾತು ಕೇಳಿ.

ಇಂದಿರಾ ಯಾವ ಪೇಷಂಟನ್ನೂ ಇಷ್ಟು ಸನ್ನಿಹಿತವಾಗಿ ಮಾತನಾಡಿಸುತ್ತಿರಲಿಲ್ಲ. ಆದರೆ ಅದೇಕೋ ಸುಮಿತ್ರೆ ಬಹಳ ಹತ್ತಿರವಾಗಿ ಕಂಡಳು. ಬಹುಶಃ ಇಬ್ಬರೂ ಒಂದೇ ಓರಿಗೆಯವರಾದುದಕ್ಕಿರಬಹುದೆ? ಛೆ ! ಸ್ನೇಹಕ್ಕೆ ವಯಸ್ಸೇನು ಮಾಡುತ್ತದೆ. ಅಲ್ಲ ಅಗಲ್ಲ. ಅದು ಸುಮಿತ್ರಳ ಸು–ಮಿತ್ರತ್ವ. ಆ ಬೊಗಸೆ ಕಂಗಳ ಆಕರ್ಷಣೆ. ನೀಳವಾದ ಕಪ್ಪಾದ ರೆಪ್ಪೆಯ ಕೂದಲು ಕಣ್ಣು ಮಿಟುಕಿಸಿದಾಗಲೆಲ್ಲಾ ಹತ್ತಿರ ಹತ್ತಿರ ಕರೆಯುತ್ತಿದ್ದಂತಿತ್ತು. ಸುಮಿತ್ರೆಯನ್ನು ಮೆಚ್ಚುತ್ತಾ ಅಲ್ಲಿ ನಿಂತುಕೊಳ್ಳಲು ಡಾಕ್ಟರಿಗೆ ಸಮಯವಿರಲಿಲ್ಲ. ತನ್ನ ಸ್ವಂತ ಕೆಲಸಗಳೆಷ್ಟೋ ಉಳಿದಿರುವಾಗ, ಸರಳಾಳ ಆಗ್ರಹಕ್ಕಾಗಿ ಬಂದಿದ್ದಳು.

"ಏನು ಇಂದೂ, ಬಹಳ ಯೋಚ್ನೆ ಮಾಡ್ತಾ ಇದ್ದೀಯಲ್ಲಾ" ಸರಳಾಗೆ ಆಶ್ಚರ್ಯ ಇಂದಿರಾ ಏನನ್ನೇ ಆಗಲಿ, ಯೋಚನೆ ಮಾಡಬಲ್ಲಳೆ" ಎಂದು.

"ಸಂಜೆ ಏನು ಕೆಲಸವಿತ್ತು ಅಂತ ಯೋಚಿಸ್ತಾ ಇದ್ದೆ"–ಸುಳ್ಳಾಡಿದಳು.

"ಸುಳ್ಳು, ಈಗ ರಮೇಶ್ ಏನ್ಮಾಡ್ತಾ ಇರ್ಬಹ್ದು. ಇಬ್ರೂ ಸಂಜೆ ಯಾವ ಪಿಕ್ಚರಿಗೆ ಹೋಗೋಣ, ಯಾವ ಸೀರೆ ಉಟ್ಕೊಳ್ಲಿ, ಹೇಗೆ ಕೋಡೆ ಕಟ್ಲಿ...."

"ಸಾಕು ಸುಮ್ನಿರು ಸರಳಾ. ನಾ ಯಾವಾಗ್ಲೂ ಹಾಗೇ ಇರ್ತೀನಿ ಅಂದ್ಕೊಂಡ್ಯಾ."

"ಕೋಪ ಯಾಕಮ್ಮಾ, ವೈದ್ಯನಿ–ಇಲ್ಲ ಇಂದೂ, ನೀನು ಸದಾ ಹಾಗೇ ಇರ್ಬೇಕು ಅಂತ ಆಸೆ ನನ್ಗೆ. ಮಗುವಿನ ತರಹ."

"ಹೌದು ಹೌದು. ಇಪ್ಪತ್ತೈದು ದಾಟಿದ್ರೂ ನಾನು ಮಗೂ ತರಹ ಇರಬೇಕು. ಮೂವತ್ತು ದಾಟಿದ ನೀನು ಅಜ್ಜಿ ತರಹ ಇರ್ಬೇಕು ಅಲ್ವಾ ?"

"ನಾ ಹಾಗೆ ಹೇಳಿದ್ನಾ ಇಂದಿರ ಈಗ" ಎನ್ನುತ್ತಿರುವಾಗಲೇ ಎಲ್ಲಿಂದಲೋ 'ಚಿಕ್ಕಮ್ಮಾ' ಎಂಬ ಕೂಗು ಕೇಳಿಸಿತು.

ಚಟ್ಟನೆ ಬಾಗಿಲಕಡೆ ನೋಡಿದರು, ಇಬ್ಬರೂ ಎಂಟು ವರ್ಷದ ಗೋಪಿ, ಮಾಧೂನ್ನ ಹೆಗಲ ಮೇಲೆ ಕೂಸುಮರಿ ಮಾಡುತ್ತಾ ಒಳಗೆ ಬಂದ.

"ನೋಡು ಇಂದೂ, ಎಷ್ಟು ಮುದ್ದಾಗಿದಾನೆ ಮಾಧೂ" ಎಂದು ತಾಯ್ತನವೇ ಮೈವೆತ್ತಿ ಬಂದಂತೆ ಮಗುವನ್ನು ಮುದ್ದಿಸುತ್ತಾ—"ಇಷ್ಟು ಹೊತ್ತೂ ಎಲ್ಲಿ ಹೋಗಿದ್ದೆ ಗೋಪಿ. ಮಾಧು ಹಟ ಮಾಡಿದ್ನಾ ?"

"ಇಲ್ಲ ಚಿಕ್ಕಮ್ಮ. ಒಂಚೂರೂ ಅಳ್ಲಿಲ್ಲ. ತುಂಬಾ ಒಳ್ಳೇವ್ನು ಮಾಧು. ಈಗ ಮಾತ್ರ ಕಾಯಿ ಕಿತ್ಕೊಡು ಅಂತ ಅತ್ತುಬಿಟ್ಟ. ಪಾಪಂಗೆ ಹಸಿವ್ರೋ ಏನೋ ಚಿಕ್ಕಮ್ಮ."

"ಮಾಧೂಗೆ ಹಸಿವಾಗಿದ್ಯೋ ಇಲ್ವೋ. ನಿಂಗಂತೂ ಆಗಿದೆ. ಅಲ್ವೇನೋಮರಿ" ಎಂದಳು ಮಗುವಿನಕಡೆ ನೋಡುತ್ತಾ. ಅರ್ಥವಾಗದಿದ್ರೂ ನಕ್ಕಿತು ಮಗು.

"ಎಷ್ಟು ಮುದ್ದಾಗಿ ನಗ್ತೀಯೋ ಮುಟ್ಠಾಳ" ಎಂದು ನಗುತ್ತಿದ್ದ ಆ ಬಾಯನ್ನೇ ತಿಂದು ಬಿಡುವಂತೆ ಮುತ್ತಿಟ್ಟಳು.

"ಏ ಸರಳಾ, ಮಗೂಗೆ ಬಾಯ್ಮೇಲೆ ಮುತ್ತಿಡಬಾರ್ದೂಂತ ತಿಳೀದು ನಿನಗೆ"—ಖಂಡಿಸಿದಳು ಇಂದಿರಾ.

ಹೃದಯತುಂಬಿ ನಿಂತಿದ್ದ ಸರಳೆಯಮುಖ ಸ್ವಲ್ಪ ಕಾಂತಿಹೀನವಾಯಿತು.

"ಗೊತ್ತಿದೆ ಇಂದೂ, ಆದರೂ ಅತಿ ಮಮತೆ. ವೆರಿಸಾರಿ ಡಾಕ್ಟರ್" ಎಂದು ಪೆಚ್ಚಾದಳು. ಸರಳೆಯ ಈ ವಾಕ್ಯ ಕೇಳಿ ಇಂದಿರಾಳ ಮನಸ್ಸೇಕೋ ಬಹಳ ನೊಂದಿತು—

"ನಾನೊಂದು ಮಾತು ಹೇಳ್ತೀನಿ ಸರೂ. ನಿಂಗೆ ಮಕ್ಕಳೂಂದ್ರೆ ಇಷ್ಟು ಇಷ್ಟವಲ್ಲಾ, ನೀ ಯಾಕೆ ಒಂದು ಮದ್ವೆ ಮಾಡ್ಕೋಬಾರ್ದು ?"

ಈ ಮಾತಿನಿಂದ, ಸರಳೆಯ ಮುಖ ರಸಪೂರ್ತಿ ಹಿಂಡಿಬಿಟ್ಟ ಕಬ್ಬಿನ ಸಿಪ್ಪೆಯಂತೆ ಬಿಳಿಚಿಕೊಂಡಿತು. ಆದರೂ ಸಂಬಾಳಿಸಿಕೊಂಡು ಹೇಳಿದಳು;

"ಮಕ್ಕಳ ಮೇಲಿನ ಇಷ್ಟಕ್ಕೂ, ಮದುವೆಗೂ ಸಂಬಂಧ ಇಲ್ಲ ಇಂದಿರಾ ಮಕ್ಕಳು ನಮ್ಮವೇ ಆಗಬೇಕೂಂತ ಏನೂ ಇಲ್ಲವಲ್ಲ. ಯಾರ ಮಗುವಾದ

ರೇನು ಪ್ರೀತಿಗೆ. ನೀ ಬೇಗ ಮದ್ವೆ ಆಗಿ ಒಂದೆರಡು ಮಕ್ಕಳನ್ನ ಪಡೆದ್ರೆ ನಂಗೊಂದು ಕೊಟ್ಟುಬಿಡು, ನಾ ಸಾಕ್ಕೊಳ್ತೀನಿ."

ಮಾತು ಸ್ವಲ್ಪ ಬಿರುಸಾಗತೊಡಗಿತು. ಜೊಂಪಿನಲ್ಲಿದ್ದ ಸುಮಿತ್ರೆಗೆ ಎಲ್ಲವೂ ಸರಿಯಾಗಿ ಕೇಳಿಸಲಿಲ್ಲವಾದರೂ ಮಕ್ಕಳ ಪ್ರಕರಣ ಬಂದ ಕೂಡಲೆ ಪೂರ್ಣ ಎಚ್ಚರವಾಯಿತು. ಎರಡು ಧ್ರುವಕ್ಕೆ ಎರಡು ದೃಷ್ಟಿಕೋನಗಳಿರುವ ಈ ವಿದ್ಯಾವಂತ ತರುಣಿಯರ ಸಂಭಾಷಣೆ ಬಹಳ ಸ್ವಾರಸ್ಯವಾಗಿತ್ತು.

"ನಾ ಮಗೂನ್ನ ಕೊಡೋದೂ ಬಿಡೋದೂ ಬೇರೆ ವಿಷಯ. ಆದರೆ ನಾ ಕೇಳಿದ ಪ್ರಶ್ನೆಗೆ ಉತ್ತರ ಸಿಕ್ಕಲಿಲ್ಲ"–ಇಂದಿರಾ.

"ಯಾವುದಮ್ಮ ಆ ನಿನ್ನ ಯಕ್ಷ ಪ್ರಶ್ನೆ ?"

ವ್ಯಂಗ್ಯದಿಂದ ಕೂಡಿದಂತಿದ್ದ ಸರಳೆಯ ಮಾತಿಗೆ ಇಂದಿರಾ ನುಡಿದಳು-

"ತಮಾಷೆ ಮಾತಲ್ಲ ಸರಳಾ. ನಿಂಗೆ ದೇವರು ಯಾವುದಕ್ಕೆ ಕಡಿಮೆ ಮಾಡಿದ್ದಾನೆ ಹೇಳು ? ರೂಪ ಇದೆ, ಹಣ ಇದೆ, ಎಲ್ಲಕ್ಕೂ ಹೆಚ್ಚಾಗಿ ಗುಣ ಇದೆ. ಯಾವ ಯುವಕನನ್ನೂ ಭಾಗ್ಯಶಾಲಿ ಮಾಡೋಕ್ಕೆ ನಿಂಗೆ ಮನಸಿಲ್ವಾ ಸರಳಾ."

"ಈ ವಿಷಯ ಮಾತಾಡೋದು ಬೇಡ ಇಂದೂ ಕ್ಷಮ್ಸು"–ಕಣ್ಣು ತುಂಬಾ ನೀರು.

"ನೀನು ಇಷ್ಟು ಬೇಜಾರು ಮಾಡ್ಕೋತಿ ಅಂದ್ಕೊಳ್ಳಿಲ್ಲ ಸರಳಾ. ಇಷ್ಟವಿಲ್ದಿದ್ರೆ ಬೇಡ, ಹೇಳ್ಬೇಡ. ಆದರೂ ಎಷ್ಟು ಆತ್ಮೀಯಳಾಗಿ ನಾನಿದ್ದರೂ ನನ್ನಿಂದಾನೂ ಮರೆಮಾಚೋ ವಿಷಯ ಏನಿದೆ ಸರೂ ?"

"ಮರೆಮಾಚಲು ಏನೂ ಇಲ್ಲ ಮದುವೆ ನಂಗಿಷ್ಟ ಇಲ್ಲ ಅಷ್ಟೆ."

"ಏಕೆ. ವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ಬರಬಹುದೆಂದೆ ?"

"ಹುಚ್ಚು, ನಾನು ಆದರ್ಶ ಸತೀತ್ವದ ಪಂಥಕ್ಕೆ ಸೇರಿದವ್ಳು."

"ಹಾಗಾದ್ರೆ ನಿನಗೆ ಯೋಗ್ಯನಾದವನು ಇನ್ನೂ ಹುಟ್ಟಿಬಂದಿಲ್ಲಾಂತ್ಲೆ ?"

"ನೀನು ನನ್ನನ್ನ ಅರ್ಥವೇ ಮಾಡಿಕೊಂಡಿಲ್ಲ ಇಂದಿರ. ನಾನು ಅಲ್ಪ ತೃಪ್ತಳು,"

"ನಿನ್ನ ಸಂಪಾದನೆ ನಿಲ್ಲಿಸ ಬೇಕಾಗಬಹುದೂಂತಾನಾ ?"

"ದುಡ್ಡಿನ ಮಧ್ಯದಲ್ಲಿರೋ ನಿನಗೆ ಈ ಪ್ರಶ್ನೆ ಹಾಕಬೇಕು ಅನಿಸಿದ್ದು ಆಶ್ಚರ್ಯ ಏನಲ್ಲ. ಕಾರಣ ಏನೇ ಇರಲಿ. ನನಗೆ ಇಷ್ಟವಿಲ್ಲ ; ಅರ್ಥವಾಯ್ತಾ?"

"ಕಾರಣ ತಿಳೀದೇ ಅರ್ಥವಾಗೋ ಸಮಸ್ಯೇನಾ ನಿಂದು ?"

"ನಂಗ್ಯಾಕೆ ಮದುವೆ ಹೇಳು ? ನನ್ನ ಕಾಲವೇ ಮುಗೀತಾ ಬಂತು."

"ಹೌದು. ಪಾಪ ಊರು ಹೋಗನ್ನುತ್ತೆ, ಕಾಡು ಬಾ ಅನ್ನುತ್ತೆ. ಸುಮ್ನಿರಮ್ಮ ಸಾಕು. ನೋಡು ಸರಳಾ, ನಾನು ಡಾಕ್ಟರಾಗಿ ಹೇಳ್ತೀನಿ. ನಿನ್ನ ಹೃದಯದಲ್ಲಿ ಅಡಗಿರೋ ಅಗ್ನಿಪರ್ವತಾನ್ನ ಒಂದ್ಸಲ ಹೊರಗಟ್ಟದೆ ಹೋದ್ರೆ ನೀನು ಬಹಳ ಕಾಲ ಉಳಿಯೋಲ್ಲ."

"ಗೊತ್ತು ಇಂದಿರಾ. ಹೇಳ್ತೀನಿ. ಕಣ್ಣು ಮುಚ್ಕೋದ್ರೊಳ್ಗೆ ಒಂದ್ಸಲ ಯಾರಿಗಾದ್ರೂ ಹೇಳ್ತೀನಿ. ಆದ್ರೆ ಒಂದ್ಮಾತು. ಇನ್ಮೇಲೆ ಯಾವಾಗ್ಲೇ ಆಗ್ಲಿ ದಯವಿಟ್ಟು ನನ್ನನ್ನ ಈ ವಿಷಯವಾಗಿ ಪ್ರಶ್ನಿಸ್ಬೇಡ" ಎಂದು ಗೋಗರೆದಂತೆ ನುಡಿದಳು, ಸರಳಾ.

"ಇಲ್ಲ ಖಂಡಿತವಾಗೂ ಕೇಳೋಲ್ಲ. ಸೌಮ್ಯವಾಗಿ ಎಲ್ಲರ್ನೂ ತಾಯಿ ಹಾಗೆ ಆದರಿಸೋಳು ನೀನು. ನಿನ್ನ ಕಣ್ಣಲ್ಲಿ ನೀರು ತರ್ಸಿ ಯಾವ ನರಕಕ್ಕೆ ಹೋಗಲಿ ? ಅಳಬೇಡ ಸರೂ. ನಾನು ನಕ್ಕರೆ ಮಗುವಿನತರಹ ಅಂದೆಯಲ್ಲಾ. ನೀನು ನಕ್ಕರೆ ದೇವತೆ ತರಹಾ ಸರಳಾ" ಎಂದು ಭಾವೋದ್ವೇಗದಿಂದ ಹತ್ತಿರ ಬಂದು ಸರಳಾನನ್ನು ಅಪ್ಪಿ ಹಿಡಿದಳು.

"ಹುಚ್ಚಿ ಇಂದಿರಾ ಇದೇನಿದು ? ನಾನು ರಮೇಶ್ ಅಂದ್ಕೊಂಡ್ಯೇನು" ವಾತಾವರಣ ಸಡಿಲಿಸಿ, ಮಾತು ತೇಲಿಸಿದಳು ಸರಳಾ.

ಸುಂದರಿ ಇಂದಿರಾ ನಾಚಿಕೆಯಿಂದ ಕೆಂಪೇರಿದಳು. ಸರಳಾಳ ಬೆನ್ನ ಮೇಲೆ ಪಟಾರೆಂದು ಹೊಡೆದಳು.

"ಕೋಪ ಬಂತೇನು ನವವಧುವಿಗೆ ? ಸ್ವಲ್ಪ ಕಾಫಿ ಕುಡಿದ್ರೆ ಸರಿ ಹೋಗುತ್ತೆ. ನಮ್ಮಿಬ್ಬರ ಮಾತಿನಲ್ಲಿ ಮಾಧೂ ನೋಡು ಹೇಗೆ ಪೆದ್ದಾಗಿ ಕೂತಿದ್ದಾನೆ."

ಅವನು ಕಂಕುಳಿನಿಂದ ಯಾವಾಗ ಜಾರಿ ಕೆಳಗಿಳಿದು ಹೊರಟು ಹೋದನೋ ಸರಳೆಗೆ ತಿಳಿಯದು. ಇಂದಿರೆಗೆ ಮಾಧೂಗೆ ಕಾಫಿ ಕೊಟ್ಟು

ಗೋಪಿಗಾಗಿ ಹುಡುಕಿದಳು. ಗೋಪಿ ತನ್ನ ಸಂಜೆಯ ದಿನಚರಿಗೆ ಹೊರಟು ಹೋಗಿದ್ದ.

ಕಾಂಪೌಂಡಿನಲ್ಲಿದ್ದ ಮಲ್ಲಿಗೆ ಬಳ್ಳಿಯಿಂದ ಮೊಗ್ಗು ಬಿಡಿಸಿ ತಂದು ಚಿಕ್ಕಮ್ಮನಿಗೆ ಕೊಡುವುದು ಅವನ ಕೆಲಸ. ಸಂಜೆ ಐದು–ಆರು ಗಂಟೆಗೆ ಮಾಡಬೇಕಿದ್ದ ಕೆಲಸವನ್ನು ಅವನು ಇಂದು ಆಗಲೇ ಆರಂಭಿಸಿದ್ದ.

ಚಿಕ್ಕಮ್ಮ ಅಳುವುದನ್ನು ಅವನು ನೋಡಲಾಗುತ್ತದೆಯೇ. ಈ ಡಾಕ್ಟರ್ ಆಂಟಿ ಯಾವಾಗ ಬಂದರೂ ಅಷ್ಟೆ. ಚಿಕ್ಕಮ್ಮನೊಂದಿಗೆ ಜಗಳ. ಯಾಕಾರೂ ಬರ್‍ತಾರೋ. ಆದ್ರೂ ಚಿಕ್ಕಮ್ಮಂಗೆ ಈ ಆಂಟೀನ್ನ ಕಂಡ್ರೆ ಇಷ್ಟ. ನಾ ದೊಡ್ಡೋನಾದ್ಮೇಲೆ ಆಂಟಿ ಜಗಳಕ್ಕೆ ಬಂದ್ರೆ ಚಿಕ್ಕಮ್ಮನ ಪರವಾಗಿ ನಾನೇ ಜಗಳ ಆಡ್ಬಿಟ್ಟು ಓಡಿಸ್ಬಿಡ್ತೀನಿ—ಆ ಪುಟ್ಟ ಮನಸ್ಸು ಇನ್ನೂ ಏನೇನನ್ನೋ ಕಲ್ಪಿಸಿ ಕನಸು ಕಾಣುತ್ತಿತ್ತು. ನವಿರು ಬೆರಳುಗಳು ಮೊಗ್ಗು ಬಿಡಿಸುತ್ತಿದ್ದುವು.

"ಗೋಪಿ. ಗೋಪಿ. ಎಲ್ಲಿ ಹೋದ್ಯೋ ?"—ಕೂಗಿದಳು ಸರಳಾ.

"ಇಲ್ಲಿ ಚಿಕ್ಕಮ್ಮಾ. ಮೊಗ್ಗು ಬಿಡಿಸ್ತಾ ಇದೀನಿ."

"ಇಷ್ಟೊತ್ತಿಗೇ ಬೇಡಪ್ಪಾ. ಬಿಸಿಲಲ್ಲಿ ಬಿಡಿಸಬಾರ್‍ದು. ಕಾಫಿ ಕುಡಿ ವಂತೆ ಬಾ."

"ನಂಗೇನೂ ಬೇಡ. ನಂಗೆ ಕೋಪ ಬಂದಿದೆ ಚಿಕ್ಕಮ್ಮ."

"ಕೋಪನಾ ? ಯಾಕಪ್ಪಾ ?"

"ಯಾಕೋ ಗೊತ್ತಿಲ್ಲ. ಅಂತೂ ಕೋಪ ಬಂದಿದೆ."

"ಹೇಗಿರುತ್ತೋ ಕೋಪ ಗೋಪಿ ?" ಎನ್ನುತ್ತಾ ಲೋಟ ಹಿಡಿದು ಗಿಡದ ಬಳಿ ಬಂದಳು,

"ಒಂತರಾ ಚೆನ್ನಾಗಿರುತ್ತೆ ಚಿಕ್ಕಮ್ಮ. ನಿಂಗೆ ಬರೋಲ್ಲ ಅದಕ್ಕೆ ನಿಂಗೆ ಗೊತ್ತಾಗೋಲ್ಲ."

ಸರಳಾಗೆ ಬಹಳ ನಗು ಬಂತು. ಅದಕ್ಕಲ್ವೇ ಮಕ್ಕಳು ಅನ್ನೋದು !

"ಈಗ ಕಾಫಿ ಕುಡಿ, ಕೋಪ ಹೊರಟೋಗುತ್ತೆ."

"ಕಾಫಿ ಕುಡಿದ್ರೂ ಹೋಗದಿದ್ರೆ, ಚಕ್ಕುಲಿ ಕೊಡ್ತೀಯಾ ?"

"ಓ ಪಾಪ, ನಿಂಗೆ ಹಸಿವಾಗಿತ್ತು. ಅದಕ್ಕೆ ಕೋಪ. ಒಳಗೆ ಬಾ ಮತ್ತೆ ತಿಂಡಿ ಕೊಡ್ತೀನಿ."

"ಆ ಆಂಟಿ ಹೊರಟೋದ್ರಾ ? ಹೋಗಿದ್ರೆ ಬರ್ತೀನಿ."

"ಇದ್ದಾರೆ. ಅವರು ತುಂಬಾ ಒಳ್ಳೇವ್ರು ಗೋಪಿ."

"ನೀ ಸುಳ್ಳು ಹೇಳ್ತಿ ಹೋಗು ಚಿಕ್ಕಮ್ಮ. ಒಳ್ಳೆವ್ರಾದ್ರೆ ಮತ್ತೆ ಯಾಕೆ ಬಂದಾಗೆಲ್ಲಾ ನಿನ್ನ ಜೊತೆ ಜಗಳ ಆಡ್ತಾರೆ ?"

"ಜಗಳ ಅಲ್ಲಾ ಗೋಪಿ. ಅವ್ರು ತುಂಬಾ ಓದಿದಾರೆ. ಓದಿದ್ದೆಲ್ಲಾ ಹೇಳೋವಾಗ ಹಾಗೆ ಜೋರು ಜೋರಾಗಿ ಹೇಳ್ತಾರೆ."

"ನೀನೂ ತುಂಬಾ ಓದಿದ್ದೀಯಲ್ಲ ಚಿಕ್ಕಮ್ಮ. ನೀನೂ ಜೋರಾಗೇ ಹೇಳ್ಬಿಡು. ನಾನು ದೊಡ್ಡೋನಾದ್ಮೇಲೆ ತುಂಬಾ ಓತ್ತೇನಲ್ಲ. ಆವಾಗ ನಾನು ಆ ಆಂಟೀನ ಜೋರಾಗಿ ಅಂದ್ಬಿಡ್ತೀನಿ. ಅ್ಞ ?"

"ಹಾಗೇ ಮಾಡೀವಂತೆ. ಈಗ ಒಳಗೆ ಬಾ"....ನವಿರು ಮಾತಿನಿಂದ ಕರೆದೊಯ್ದಳು.

ಮುಡಿ ತುಂಬ ಮೊಗ್ಗು ಓಡಿದು ಒಳಗೆ ಬಂದ ಗೋಪಿಯನ್ನು ಕಂಡು, ಅವನ ಕೆನ್ನೆ ಹಿಂಡಲು ಮುಂದೆ ಬಂದಳು ಇಂದಿರಾ. ಅವನು ತುಂಟ. ಇಂದಿರೆಯ ಮೇಲೆ ಕೋಪ. ಆದಕ್ಕಾಗಿ ಅವಳ ಕೈಗೆ ಸಿಕ್ಕದೆ ನುಸುಳಿದ. ಮೊಗ್ಗನ್ನು ಅದರ ಸ್ಥಾನದಲ್ಲಿ ದೇವರ ಮುಂದಿದ್ದ ಬೆತ್ತದ ತಟ್ಟೆಯಲ್ಲಿಡ ಬೇಡವೇ. ಯಾವ ಪದಾರ್ಥ ಎಲ್ಲಿರಬೇಕೋ ಅಲ್ಲಿಯೇ ಇರಬೇಕು. ಕತ್ತಲಿ ನಲ್ಲಿ ಕೈ ಇಟ್ಟರೂ ಸಿಗಬೇಕು ವಸ್ತುಗಳು. ಶಿಸ್ತಿನ ಚಿಕ್ಕಮ್ಮನ ಬಳಿಯೇ ಹೆಚ್ಚು ಭಾಗವನ್ನು ಕಳೆಯುತ್ತಿದ್ದ ಗೋಪಿ ಶಿಸ್ತಿನ ಅಪರಾವತಾರ.

"ನಾನಿನ್ನು ಹೊರಡ್ತೀನಿ ಸರಳಾ–ನಾಲ್ಕೂವರೆ ಆಗ್ತಾ ಬಂತು" ಹೊರಟು ನಿಂತಳು ಇಂದೂ.

"ಒಂದು ಮಾತು ಇಂದು" ಕೇಳಬಹುದೋ ಬಾರದೋ ಎಂದು ಅನು ಮಾನಿಸುತ್ತಾ

"ಸ್ವಲ್ಪ ಸಾಯಂಕಾಲ ನಿನ್ನ ಕಾರಿನಲ್ಲಿ ಇವರ್ನ ಯಾಕೆ ಮನೆ ತಲಪ್ಸಿ ಬಿಡಬಾರದು."

"ಇದು ಬಹಳ ಅತಿಯಾಯ್ತು ಸರೂ, ಪ್ರತಿ ಪೇಮೆಂಟನ್ನೂ ನಾ ಮನೆ ತಲುಪಿಸ್ತಾ ಕೂತ್ಕೊಂಡ್ರೆ...."

"ಉಶ್, ಮೆಲ್ಲಗೆ. ಒಂದ್ವೇಳೆ ಸುಮಿತ್ರಾಗೆ ಎಚ್ಚರ ಆಗಿರಬಹುದು."

"ಇರಲಿ. ಅರ್ಥ ಮಾಡ್ಕೋತಾರೆ, ನಾನು ಸಾಯಂಕಾಲ ರಮೇಶ್ ಜೊತೆ ಪಿಕ್ಚರಿಗೆ ಹೋಗ್ಬೇಕು."

"ಹೋಗೋವಾಗ ಹಾಗೇ ಡ್ರಾಪ್ ಮಾಡಿ ಹೋಗು. ಬೇಕಾದ್ರೆ ರಮೇಶ್‌ಗೆ ನಾನೇ ಹೇಳ್ತೀನಿ."

"ಅಂತ ಶಿಫಾರಸ್ಸೇನೂ ಬೇಡ. ಅಷ್ಟಕ್ಕೂ ಸುಮಿತ್ರಾ ನಿಂಗೇ ನಾಗ್ಬೇಕೂಂತ...."

"ಏನೋ ಗಂಡ ಬರೋವಷ್ಟರಲ್ಲಿ ಮನೇಲಿರಬೇಕೂಂತ ಚಡಪಡಿಸ್ತಾ ಇದ್ಲಲ್ಲಾಂತ. ಎರಡು ಮಕ್ಕಳನ್ನೂ ಕಟ್ಕೊಂಡು ಬಸ್ಸಿಗೆ ಕಾಯೋದು ಕಷ್ಟ. ಆಟೋರಿಕ್ಷ ಸಿಗುತ್ತೇಂತ ಹೇಳೋಕ್ಕಾಗೋಲ್ಲ, ಕುದುರೆ ಗಾಡೀಲ್ಲಂತೂ ಸದ್ಯ ಇನ್ನೊಂದು ಆರು ತಿಂಗಳಾದ್ರೂ ಹತ್ತುತಾಳೇಂತ ನಂಗನ್ನಿಸೋಲ್ಲ. ಅದಕ್ಕೆ ರಿಕ್ವೆಸ್ಟು. ನಿಂಗೆ ಇಷ್ಟ ಇಲ್ಲ ಅಂದ್ರೆ ಸರಿ. ಬೇಡ. ಏನ್ಮಾಡೋ ಕಾಗುತ್ತೆ. ಕಾರಿದ್ಯಲ್ಲಾಂತ ಕೇಳ್ದೆ ಅಷ್ಟೆ"---ಮುಖ ಸಪ್ಪೆ ಮಾಡಿದಳು.

"ಇದೇ ನಿನ್ನಲ್ಲಿರೋದು ನೋಡು. ನನ್ನ ಹತ್ರ ಕಾರಿದೆ ಅಂತ಼್ೇ ಇಷ್ಟು ಮಾಡೋವ್ರು. ಇನ್ನು ನೀನೇ ಕಾರಿಟ್ಟಿದ್ರೆ, ಬಹುಶಃ ಬಸ್ಸುಗಳು ಓಡಾ ಡೋದೇ ಬೇಕಿರಲಿಲ್ಲ ಅಂತ ಕಾಣುತ್ತೆ. ಸರಿ, ಬರ್ತೀನಿ."

"ಬರ್ತೀನೀಂದ್ರೆ ಸಂಜೆ ಬರ್ತೀನೀಂತ಼್ೋ, ಈಗ ಹೋಗ್ತಾ ಇದೀ ನೀಂತಲೋ ?"

"ಸಾಯಂಕಾಲ ಬಂದು, ಈ ನಿನ್ನ ಹೊಸ ಬಂಧೂನ್ನ. ಸಂಸಾರ ಸಮೇತ ನನ್ನ ಪಲ್ಲಕ್ಕೀಲಿ ಮೆರವಣಿಗೆ ಕರ್ಕೊಂಡ್ಹೋಗಿ ಸ್ವಸ್ಥಾನ ಸೇರಿಸಿ ಬರ್ತೀವೀಂತ ಅರ್ಥ. ಸಾಕೋ ಇನ್ನೂ ಬಿಡ್ಸಿ ಹೇಳ್ಲೋ ?"

ಪ್ರಫುಲ್ಲವದನಳಾಗಿ ನುಡಿದಳು ಸರಳಾ--"ನಂಗೊತ್ತು, ದೊಡ್ಡೋರ ಮಾತಿಗೆ ಇಂದಿರಾ ಬೆಲೆಕೊಡ್ತಾಳೇಂತ,"

"ಕೊಡ್ತಾಳೆ ಬಾ ಅಂತ. ಹಾಳಾದ್ದು ನಿನ್ನೆದುರ್ಗೆ ಬಂದ್ರೆ, ನಿನ್ನ

ಮುಂದೆ, ನಿನ್ನ ವಾದಗಳ ಮುಂದೆ, ನಿನ್ನ ವೇದಾಂತಗಳ ಛಾಯೇಲ್ಲಿ ನನ್ನ ಬಹಳ ಸ್ವಲ್ಪ ಅನ್ನಿಸ್ಬಿಡ್ತಿ."

ಛೆ ಛೆ. ಹಾಗಾದ್ರೆ ಬೇಡಮ್ಮ, ಇನ್ಮೇಲೆ ಖಂಡಿತಾ ಇಲ್ಲಿ ಬರ್ಲೇ ಬೇಡಮ್ಮ" ಎಂದು ಹಾಸ್ಯವಾಗಿ ನುಡಿದಳು.

"ನಿಜವಾಗೂ ಬರೋಲ್ಲ. ಸಂಜೆ ಆರುಗಂಟೆ ಒಳಗೆ ನಿಮ್ಮನೆ ಕಡೆ ಬಂದ್ರೆ ನೋಡ್ಕೋ."

"ಪಾಪ ಪಾಪ, ಕಾಫಿ ಕುಡ್ಯೋಲ್ಲ ಪ್ರಾಮಿಸ್ ಅಂತ ಹೇಳೀನೂ, ಕೊಟ್ಟ ಕೂಡಲೇ ಕಲಗಚ್ಚು ಹೀರಿದ ಹಾಗೆ ಹೀರಿದ ಡಾಕ್ಟರಮ್ನೋರು...."

ಮಾತು ಮುಗಿಯುವ ಮುಂಚೇನೇ ಎರಡು ಮೆಟ್ಟಲು ಇಳಿದಿದ್ದ ಇಂದಿರಾ ಸರ್ರೆಂದು ಮೇಲೆ ಬಂದು ಸರಳಾಳ ಕೆನ್ನೆಗೆ ಹೊಡೆದು---"ನನ್ನ ಯಾಕಿಷ್ಟು ಅಳಿಸೋದು" ಎಂದಳು.

ಹೊಡೆದ ಕೈಯನ್ನು ಕೈಯಲ್ಲಿ ಹಿಡಿದು---"ಈ ಕೈ ಎಷ್ಟು ತರಪೇತಿ ತೊಗೋತಿದೆ. ಪಾಪ ರಮೇಶ್‌ಗೆ ಹೇಳಬೇಕು. ಕೆನ್ನೆಗಳು ಸ್ವಲ್ಪ ಜೋಪಾನಾಂತ" ಎಂದು ಕೀಟಲೆಮಾಡಿ, ಕೂಡಲೆ ಗಂಭೀರಳಾಗಿ ನುಡಿದಳು ಸರಳಾ "ಈ ಕೈ ಯಾವಾಗ್ಲೂ ನನ್ನ ಹೊಡೆಯೋಷ್ಟು ಸನ್ನಿಹಿತವೇ ನಮ್ಮಲ್ಲಿರಲಿ, ನಂಗೆ ಒಂದೇ ಒಂದು ಭಯ. ನಮ್ಮಿಬ್ಬರ ಸ್ನೇಹದಲ್ಲಿ ರಮೇಶ್ ಬಂದಿದ್ದಾನೆ. ಅವನ ಸನಿಯದಲ್ಲಿ ಈ ಸರಳಾನ್ನ ಮರ್ತೇ ಬಿಡ್ತೀಯೋ ಏನೋ."

"ಅದು ಸಾಧ್ಯವೇ ಸರಳಾ ?" ಎಂದು ನುಡಿದ ಇಂದಿರಾ ಸರಳಾನನ್ನೇ ನೋಡುತ್ತಾ ನಿಂತಳು ಒಂದು ಘಳಿಗೆ. ತಕ್ಷಣ ಎಚ್ಚೆತ್ತು, "ಬರ್ಲಾ, ನಾನಿನ್ನು. ಬೈ ಬೈ...." ಎಂದು ಹೊರಟಳು.

ಠೀವಿಯಿಂದ ನಡೆಯುತ್ತಿದ್ದ ಅವಳನ್ನೇ ನೋಡುತ್ತಿದ್ದಳು ಸರಳಾ. ಕಾರಿನ ಬಾಗಿಲು ತೆಗೆದು ಸ್ಟಿಯರಿಂಗ್ ಚಕ್ರದ ಬಳಿ ಕುಳಿತು ಮತ್ತೊಮ್ಮೆ ಕೈಚಾಚಿ 'ಟಾಟಾ' ಮಾಡಿದಳು ಇಂದಿರಾ. ಕಾರು ಸದ್ದು ಮಾಡುತ್ತಾ ಮಿಂಚಿನಂತೆ ಮಾಯವಾಯಿತು.

ಮೋಡಕ್ಕಿದ್ದ ಬೆಳ್ಳಿಯಂಚು ಮಾಯವಾಗಿ, ಮೋಡ ಘನವಾಗ ತೊಡಗಿತು. ಎರಡು ನಿಮಿಷ ಬಾಗಿಲಲ್ಲೇ ನಿಂತಿದ್ದ ಸರಳಾ ನಿಧಾನವಾಗಿ ಒಳಗೆ ಬಂದಳು.

ಗೋಪಿ ಚಕ್ಕುಲಿಗಾಗಿ ಎದುರು ನೋಡುತ್ತಿದ್ದ. ಚಕ್ಕುಲಿ ಕೈಗೆ ಬೀಳುತ್ತಲೇ ಮನೆಗೆ ಹೋಗಲು ತವಕಿಸಿದ. ಆ ಬಾಲಕ ಪ್ರತಿನಿತ್ಯವೂ ನಾಯಕನಾಗುತ್ತಿದ್ದ. ಅವನಿಗೆ ಆ ದಿನ ಬರೀ ಒಂದು ಎಕ್ಸ್‌ಟ್ರಾನ ಪಾತ್ರ ದೊರೆತದ್ದು ಅಸಮಾಧಾನ. "ನಾ ಮನೆಗೇ ಹೋಗ್ತೀನಿ ಚಿಕ್ಕಮ್ಮ"— ಹೊರಟೇ ನಿಂತ ಬಾಲಕ.

ಪರಧ್ಯಾನದಲ್ಲಿದ್ದ ಸರಳಾ "ಹುಂ ಹೋಗಿ ಬಾ. ಜೋಪಾನ ರಸ್ತೇಲಿ" ಎಂದಳು. ಮನೆ ಅಷ್ಟೇನೂ ದೂರವಿಲ್ಲದಿದ್ದರೂ ದಿನವೂ ಹೇಳುವ ವಾಕ್ಯ ಹೇಳಿದಳು. ಅವಳ ಈ ನೀರಸ ಉತ್ತರ ಆ ಬಾಲಕನ ಮನಸ್ಸಿಗೆ ಇನ್ನೂ ನಿರಾಶೆಯನ್ನುಂಟುಮಾಡಿತು. "ಇರು ಗೋಪಿ ಎನ್ನಬಹುದು ಚಿಕ್ಕಮ್ಮ" ಅನಿಸಿತು. 'ಚಿಕ್ಕಮ್ಮನಿಗೆ ಏನೋ ಆಗಿದೆ ಈವತ್ತು. ನಾಳೆ ಸರಿಹೋಗುತ್ತೆ' ಎಂದು ನಿರಾಸೆಯಲ್ಲೂ ಆಸೆಯನ್ನೇ ಕಾಣುತ್ತಾ ಮನೆಗೋಡಿದ ಗೋಪಿ.

೩

ಕುಳಿತಿದ್ದಲ್ಲೇ ಮಲಗಿಬಿಟ್ಟಿತ್ತು ಸುಮಿತ್ರಾಳ ಕೂಸು.

ಸರಳಾಗೆ ತನ್ನ ಮನಸ್ಸಿನ ಭಾವನೆಗಳೇ ಬೇಸರ ತರುತ್ತಿದ್ದವು. ಅರ್ಧ ಗಂಟೆಗೆ ಮುಂಚೆ ಇದ್ದ ತನ್ನ ಗೆಲುವಿನ ಮನೋಭಾವ ಆಗಲೇ ಮಾಯ ವಾಗಿತ್ತು. ಕಾರಣ ? ಇಂತಹ ಕಾರಣವೇ ಎಂದು ಹೇಳುವಂತಿರಲಿಲ್ಲ.

ಮಲಗಿದ್ದ ಮಗುವನ್ನು ನೋಡಿ ತನ್ನ ಬಗೆಗೆ ತಾನೇ ಅಸಹ್ಯಪಟ್ಟು ಕೊಂಡಳು. "ಎಂದಾದರೂ ಹೆತ್ತು ಹೊತ್ತು ಸಾಕಿದ್ದರೆ ತಾನೇ ಗೊತ್ತು, ಅವುಗಳಿಗೆ ಏನು ಬೇಕು, ಏನು ಬೇಡ ಎಂದು. ಮಗುವಿಗೆ ನಿದ್ದೆ ಬಂದಿರ ಬಹುದೆಂಬ ಸುಳಿವಾದರೂ ಹೊಳೆಯಬೇಡವೇ ನನಗೆ" ಎಂದು ತನ್ನನ್ನೇ ಛೇಡಿಸಿಕೊಂಡಳು. ಮಗುವನ್ನು ಎತ್ತಿ ಅದರ ತಾಯಿಪಕ್ಕದಲ್ಲಿ ಮಲಗಿಸಿದಳು.

ಸುಮಿತ್ರೆಗೆ ಎಡಗಡೆ, ಗೋಡೆಯ ಕಡೆಗೆ ಬಾಲಚಂದ್ರನ ಮುಖದ

ಪುಟ್ಟ ಸರಳಾ. ಈ ಕಡೆ ಬೆಣ್ಣೆ ಕೃಷ್ಣನಂತಹ ಮಾಧು. ತಾಯಿ ಮಕ್ಕಳಿಗೆ ದೃಷ್ಟಿ ತಾಗುವಂತೆ ನೋಡುತ್ತಾ ನಿಂತಳು. ಎಷ್ಟೋ ದಿನಗಳು ಆಸೆಪಟ್ಟ ಪದಾರ್ಥ ಸಿಕ್ಕಕೂಡಲೇ, ಆ ದೀರ್ಘ ಆಸೆ ಒಮ್ಮೆಲೇ ಪರಿಹಾರವಾದಂತೆ ಅನುಭವ ಆಯಿತು ಸರಳೆಗೆ. ತನ್ನ ಕಣ್ಣೇ ತಗಲುತ್ತದೋ ಏನೋ ಈ ಸಂಸಾರಕ್ಕೆ ಎಂದು ಅಡುಗೆಯ ಮನೆಗೆ ಹೊರಟಳು.

ಐದು ಗಂಟೆ ಹೊಡೆಯಿತು ಗಡಿಯಾರ.

ಸರಳಾ ಕೇಸರಿಭಾತು ಮಾಡಿದಳು. "ಜೊತೆಗೆ ಚಕ್ಕುಲಿ, ಮಿಠಾಯಿ ಇದೆ. ಸಾಕು. ಅದಕ್ಕಿಂತ ಹೆಚ್ಚಿಗೆ ತಿನ್ನುವ ಚೈತನ್ಯ ಇವರಿಗೆ ಇಂದು ಇರ ಲಾರದು. ಇನ್ನೊಂದಿನ ಒಳ್ಳೆ ತಿಂಡಿ ಮಾಡಿ ಕೊಡ್ಬೇಕು, ಸುಮಿತ್ರಾಗೆ ಮಕ್ಕಳಿಗೆ" ಎಂದು ತನಗೆ ತಾನೇ ಹೇಳಿಕೊಂಡಳು. ಕೂಡಲೇ ಅವಳ ಅಂತ ರಾತ್ಮ ಎಚ್ಚರಿಸಿತು–

"ಹುಚ್ಚಲ್ಲವೆ ನಿನಗೆ? ಅವರು ಮತ್ತೊಮ್ಮೆ ಬಂದೇ ಬರುವರೆಂದು ಯಾಕೆ ಸಲ್ಲದ ನಂಬಿಕೆ. ಅವರು ಯಾರು. ಬರೀ ದಾರಿಹೋಕರು. ಮನೆಯ ಮುಂದೆ ಆಪಘಾತಕ್ಕೀಡಾದುದರಿಂದ ನಿನ್ನ ಮನೆಗೆ ಬಂದರು ಅಷ್ಟೇ. ನಿನ್ನ ಕೈಲಾದ ಸಹಾಯ ಮಾಡಿದೆ. ಅವರು ಹೊರಟುಹೋಗುತ್ತಾರೆ ಇನ್ನೊಂದು ಗಂಟೆಯಲ್ಲಿ."

ಈ ವಾಸ್ತವ ಸತ್ಯ ಅವಳಿಗೆ ನೋವುಂಟುಮಾಡಿತು. ಆದರೂ ಮಾಡಿ ಯಾಳು ತಾನೇ ಏನು ? ಕೋಣೆಯ ಒಳಗಡೆ ಬಂದು ರೇಡಿಯೋ ಹಾಕಿ, ಅದರ ಮುಂದೆ ಕುಳಿತಳು. ಅವಳ ದೃಷ್ಟಿ ಮಾತ್ರ ಆ ತಾಯಿ ಮಕ್ಕಳ ಕಡೆಗೆ.

ಸರಳಾ ! ಮುದ್ದು ಸರಳಾ ! ಅವಳಿಗೇಕಿಟ್ಟರೋ ಈ ನತದೃಷ್ಟ ಹೆಸರು. ಕೂಡದು ನತದೃಷ್ಟಳಾಗಕೂಡದು. ಆ ಹೆಸರಿನವರೆಲ್ಲಾ ಹಾಗಾಗುತಾರೇನು ?

ನಾಲಕ್ಕು ವರ್ಷದ ಬಾಲೆಯಾದರೂ ಮಿಂಚಿದ ಬೆಳವಣಿಗೆಯಿತ್ತು. ಸಾಧಾರಣ ಉಡುಪು ಹಾಕಿತ್ತು. ಅತ್ತೆಯ ಮನೆಗೆ ಊಟಕ್ಕೆ ಹೋಗಿದ್ರೂ ಇಷ್ಟೇ ಸಾಧಾರಣ ಉಡುಪೇ. ಹೊಸ ಬಟ್ಟೆ ಬೇಕೆಂದು ಹಟಮಾಡಲಿಲ್ಲ ವೇನೋ. ತಾನು ಆ ವಯಸ್ಸಲ್ಲಿ ಎಷ್ಟು ಹಟಮಾರಿ ಅಂತ ಅಮ್ಮ ಹೇಳ್ತಿ ದ್ರಲ್ಲಾ. ಅಥವಾ ಅಷ್ಟು ಅನುಕೂಲಸ್ಥರಲ್ಲವೇನೋ. ಇರಲಾರದು,

ಸುಮಿತ್ರಾನೂ ಅಷ್ಟೆ. ಒಂದು ಸಾಧಾರಣ ಸೀರೆ ಉಟ್ಟಿದ್ದಳು. ಒಡವೇನೂ ಏನೂ ಹಾಕಿಕೊಂಡಿರಲಿಲ್ಲ. ಒಂದು ವೇಳೆ ತನ್ನಂತೆ ನಿರಾಡಂಬರ ಜೀವಿ ಯಿರಬಹುದು.

ಹಬ್ಬ ಹುಣ್ಣಿಮೆಯೆಂದರೆ ಪ್ರೀತಿಯ ಗಂಡನಾದರೂ ಸುಮ್ಮನೆ ಬಿಡುವನೆ ಒಳ್ಳೆ ಬಟ್ಟೆ ಉಡದಿದ್ದರೆ. ಪತ್ನಿಯ ಆಸೆಯಲ್ಲಾ ಪತಿಯನ್ನು ಸಂಪ್ರೀತಿಯಿಂದ ಇಟ್ಟುಕೊಳ್ಳುವುದಲ್ಲವೆ? ಪಾಪ ಶ್ರೀಮಂತರಲ್ಲದಿರಬಹುದು. ಅವಳ ಗಂಡನಿಗೆ ಏನು ಕೆಲಸವಿರಬಹುದು ? ಹುಂ ತನಗೇಕೆ ಅವೆಲ್ಲಾ. ಆತ ಯಾರಾದನೇನು ? ಆತನ ಉದ್ಯೋಗ ಏನಾದರೆ ತನಗೇನು ? ಒಟ್ಟಿನಲ್ಲಿ ಆತ ಅದೃಷ್ಟ ಶಾಲಿ. ಒಳ್ಳೆಯ ಪ್ರೀತಿಯ ಹೆಂಡತಿ ಇದ್ದಾಳೆ. ಮುದ್ದಾದ ಮಕ್ಕಳಿದ್ದಾರೆ.

ಸರಳೆಯ ಮನಸ್ಸು ಸುಮಿತ್ರೆಯನ್ನು ಕುರಿತು ಚಿಂತೆಯಲ್ಲೇ ನಡೆದಿತ್ತು. ಎಂತಹ ಬಿಳುಪು ಸುಮಿತ್ರೆಯದು ! ಮುಖ ಬೆಳದಿಂಗಳು ಚೆಲ್ಲಿದಂತಿದೆ, ಅಂತೆಯೇ ಆರೋಗ್ಯ ತುಳುಕಿ ನಿಂತಿದೆ. ಒಂದು ಚಿಂತೆಯ ಗೆರೆಯೂ ಗೋಚರಿಸದು ಆ ಪ್ರಫುಲ್ಲ ಮನದಲ್ಲಿ. ಕಪ್ಪಾದ ಕೂದಲು ಮೆಟ್ಟಲು ಮೆಟ್ಟಲಾಗಿ ಸರಿದಿದೆ. ಬಾಚಣಿಕೆಗೆ ಸಿಕ್ಕದ ಪುಡಿಕೂದಲು, ಮುಖದ ಮೇಲೆ ಬಂದು ಹೋಗಿ ಮಾಡುತ್ತಿತ್ತು. ಅಗಲವಾದ ಮುಖ. ಮುಖದ ಮಧ್ಯದಲ್ಲಿ ನಯಾ ಪೈಸದ ಅಗಲದ ಕುಂಕುಮ, ಸ್ವಚ್ಛ ಆಕಾರದಲ್ಲಿ ತುಂಬು ಚಂದಿರನಂತೆ ರಾರಾಜಿಸುತ್ತಿತ್ತು. ಬಿದ್ದು ಎದ್ದು ಮಲಗಿದ್ದರೂ ಸ್ವಲ್ಪವೂ ಚೆದರಲಿಲ್ಲ ಸುಮಂಗಳತ್ವದ ಕುರುಹಿದ ಆ ಕುಂಕುಮ. ಆ ಕುಂಕುಮ ಶಾಶ್ವತವಾಗಿ ನಿಲ್ಲಲಿ ಎಂದು ಹಾರೈಸಿತು ಸರಳಾಳ ಹೃದಯ.

ಮತ್ತಿನ್ನೇನೂ ಸುಂದರವಾಗಿ ಕಂಡುಬರಲಿಲ್ಲ ಸುಮಿತ್ರೆಯಲ್ಲಿ. ಹೌದು, ಕಣ್ಣುಗಳು ಸಾಟಿಯಿಲ್ಲದವೇ ಆಗಿದ್ದರೂ, ಚಪ್ಪಟೆ ಮೂಗು, ಅಂದವಿಲ್ಲದ ಹಲ್ಲುಸಾಲು, ಸುಮಿತ್ರೆಯನ್ನು ಅಂದದವರಲ್ಲಿ ಬಹಳ ಕೆಳಗೇ ಇಡುವಂತೆ ಮಾಡಿದ್ದುವು.

ಮಕ್ಕಳಿಗೆ ಮಾತ್ರ ತಾಯಿಯ ಹೋಲಿಕೆಯಿಲ್ಲ. ಬಣ್ಣ ಮಾತ್ರ ತಾಯಿ ಯಿಂದ ಪಡೆದಿದ್ದರು. ಆದರೆ ರೂಪ ! ತಂದೆಯದೇ ಇರಬೇಕು. ಆತ ಬಹಳ ಸುಂದರನೇ ಇರಬೇಕು, ಆತ ಹೇಗಿರಬಹುದು ನೋಡಲು ?

ಮಕ್ಕಳನ್ನು ನೋಡಿದರೆ ಮಾತ್ರ ಯಾರನ್ನೋ ನೋಡಿದ ನೆನಪಾಗುತ್ತದೆ. ಆ ತಂದೆ ನನಗೆ ಪರಿಚಿತರಿರಬಹುದೇ? ಛಿ, ಇದೇನಿದು ಆತನನ್ನ ಕುರಿತ ಚಿಂತೆ? ಎಂದು ಮನಸ್ಸನ್ನು ಬಲವಂತದಿಂದ ದೂರವಳೆಯಲು ಪ್ರಯತ್ನಮಾಡಿದಳು.

ಅವಳ ಕಿವಿ ರೇಡಿಯೋದಲ್ಲಿ ಬರುತ್ತಿದ್ದ ಕು. ವೆಂ. ಪು. ರವರ ಗೀತೆಯ ಕಡೆ ಹೊರಳಿತು.

ಯಾವ ಜನ್ಮದ ಮೈತ್ರಿ ಈ ಜನ್ಮದಲಿ ಬಂದು
ನಮ್ಮಿಬ್ಬರನ್ನು ಮತ್ತೆ ಬಂಧಿಸಿಹುದೋ ಕಾಣೆ ॥

ನಿಜ. ಯಾವ ಜನ್ಮದ ಮೈತ್ರಿಯೋ ಇದ್ದಿರಬೇಕು ತನಗೂ ಸುಮಿತ್ರೆಗೂ. ಇಲ್ಲದಿದ್ದರೆ ಈ ಅನುಭೂತಿ ಅನುಬಂಧಗಳ ಅರ್ಥ ?

ಒಂದರ ಹಿಂದೆ ಒಂದು ಎಲ್ಲವೂ ತನಗೆ ಬೇಕಾದ ಹಾಡುಗಳೇ ಬರುತ್ತಿದ್ದುವು. ಒಂದು ತೆರನಾದ ಮಧುರಾನುಭೂತಿಯಿಂದ ಕಣ್ಣೀರು ತಾನೇ ತಾನಾಗಿ ಹರಿಯುತ್ತಿತ್ತು.

ತಾನು ಬಾಗಿಲು ಹಾಕದೇ ಇದ್ದದ್ದು, ಮನೆಯ ಮುಂದೆ ಕಾರು ಬಂದು ನಿಂತು ಇಂದಿರಾ ಒಳಗೆ ಬಂದದ್ದು, ಅವಳ ತನ್ಮಯತೆಯಲ್ಲಿ ತಿಳಿಯಲೇ ಇಲ್ಲ ಸರಳಾಗೆ.

ಸುಂದರವಾಗಿ ಸಿಂಗರಿಸಿಕೊಂಡ ಇಂದಿರಾ ಒಳಗೆ ಬಂದು ನೋಡಿದಳು. ಎಲ್ಲೆಲ್ಲೂ ನಿಶ್ಶಬ್ದ. ಸುಮಿತ್ರೆ ಮತ್ತು ಮಕ್ಕಳು ಹೊರಟು ಹೋಗಿರಬಹುದೇನೋ ಎಂದು ನಿಧಾನವಾಗಿ ಕೋಣೆಯೊಳಗೆ ಬಗ್ಗಿ ನೋಡಿದಳು. ಅವರು ಮಂಚದ ಮೇಲೆ ಕಂಡರು. ಇನ್ನೂ ಎದ್ದಂತಿರಲಿಲ್ಲ ಸರಳಾ ಕುರ್ಚಿಯಲ್ಲಿ.

ಹಿಂದಿನಿಂದ ಬಂದು ಭುಜ ತಟ್ಟಿದಳು ಇಂದೂ. ಆದರೂ ಸರಳೆಯಲ್ಲಿ ಯಾವ ಚಲನವೂ ಇಲ್ಲ. ಚಿಕ್ಕ ಹುಡಿಗಿಯಂತೆ ಸರಳೆಯ ಕಣ್ಣು ಮುಚ್ಚಿದಳು ಕುರ್ಚಿಯ ಹಿಂದುಗಡೆ ನಿಂತು. ಕೈಯೆಲ್ಲಾ ತೇವವಾಯಿತು. ಸರಳೆಯ ಕಣ್ಣಿಂದ ಬುಗ್ಗೆ ಬುಗ್ಗೆಯಾಗಿ ನೀರು ಹರಿಯುತ್ತಿತ್ತು.

"ಯಾಕೆ ? ಯಾಕೆ ಸರಳಾ ಈ ಕಣ್ಣೀರು ?" ಕಾತುರದಿಂದ ಕೇಳಿದಳು, ಇಂದಿರಾ.

"ಯಾಕೂ ಇಲ್ಲ ಇಂದಿರಾ. ಯಾವುದಾದ್ರೂ ಒಳ್ಳೆ ಹಾಡು ಕೇಳಿದ್ರೆ

ಹಾಗಾಗುತ್ತೆ. ಈಗ ಒಂದೊಂದೂ ಎಂತೆಂತಹ ಒಳ್ಳೆಯ ಹಾಡು ಬಂತು ಅಂತಿ."

"ನೋವಿನ ಹಾಡು ಅಂತೀಯಾ. ಒಳ್ಳೇ ಹಾಡೂ ಅಂತೀಯಾ ಏನಿದು ಸರಳಾ ?"

"ಹೌದು ನನಗೆ ಅವೇ ಒಳ್ಳೇ ಹಾಡುಗಳು. ಇರಲಿ ನೀ ಬಂದು ಎಷ್ಟೊತ್ತಾಯ್ತು ? ಅವರು ಏಳಲೇ ಇಲ್ಲವಲ್ಲಾ ಇಂದಿರಾ ?"

"ಏಳದಿದ್ರೆ ಬೇಡ. ನಾನೇ ಬೇಕೂಂತ ನಿದ್ದೆ ಬರೋ ಗುಳಿಗೆ ಕೊಟ್ಟಿದ್ದೀನಿ. ಇಲ್ಲಿದ್ರೆ ಇವ್ರು ವಿಶ್ರಾಂತಿ ತೊಗೊಳ್ಳೋಲ್ಲಾಂತ. ಏನು, ಅವ್ರ ಗಂಡ ಬಂದ್ರೆ ಮಹಾ ಪ್ರಮಾದ ಆಗೋದು"

"ಈಗ ನಿನಗೆ ತಿಳ್ಯೋಲ್ಲಮ್ಮ. ಒಂದಿನ ಬರುತ್ತೆ. ಆಗ ಜ್ಞಾಪಿಸ್ತೀನಿ ಈ ಮಾತ್ನ"

"ಪಾಪ ಪಾಪ ! ನಿಂಗೆ ತುಂಬಾ ಅನುಭವ ನೋಡು"–ಇಂದಿರೆಯ ಅಣಕ.

"ಹೌದೇ ಹೌದು. ಕೆಲವು ವಿಷಯ ಸ್ವತಃ ಅನುಭವ ಮಾಡ್ದೇನೇ ತಿಳ್ಕೋ ಬಹ್ದು. ಈಗ್ಯಾಕ್ಹೇಳು ನಿನ್ನ ಮದುವೆ ಆಗಲಿ ಆಮೇಲೆ ತಿಳಿಯುತ್ತೆ. ಪಿಕ್ಚರಿಗೆ ಟೈಂ ಆಗೋಯ್ತು ಅಲ್ವಾ ?"

"ಎಂದೋ ಆಗೋಯ್ತು. ಇನ್ನೆಲ್ಲಿ ಪಿಕ್ಚರ್ರು ? ಒಂದೊಂದ್ಸಲ ನಂಗನ್ಸತ್ತೆ. ರಮೇಶ್ ನಿಂಗೆ ಸರಿಯಾದವ್ರು. ನಂಗಲ್ಲ ಅಂತ"

"ಹಾಗನ್ನಬಾರ್ದು. ಯಾಕೆ ? ಏನಾಯ್ತು ?"

"ಹೀಗ್ಹೀಗೆ ನಡೀತು. ಅವರ್ನೆಲ್ಲಾ ಮನೆ ತಲಪ್ಸೋ ಭಾರ ನಮ್ದು ಅಂದಿದಾಳೆ ಸರಳಾ ಅಂದ್ರೆ 'ವೆರಿಗುಡ್ ಬುದ್ಧಿವಂತ್ಳು ಅಂದ್ರು ಆ ಸರಳಾನೇ ನೋಡು. ಪಿಕ್ಚರಿಗೇನು ಇನ್ನೊಂದಿನ ಹೋದ್ರಾಯ್ತು. ಜನಕ್ಕೆ ಉಪಕಾರ ಮಾಡೋ ಸಣ್ಣಪುಟ್ಟ ಅವಕಾಶ ತಪ್ಪಿಸ್ಕೋಬಾರ್ದು ಅದ್ರಲ್ಲೂ ಅವರೇನೂ ಸಿನಿಮಾಗಾಗಿ ಡ್ರಾಪ್ ಕೊಡಿ ಅನ್ಲಿಲ್ವಲ್ಲಾ ಹೋಗ್ಬರೋಣ' ಅಂದ್ರು. ಈಗ ಹೇಳು ಅವರು ಯಾರ ಕಡೆ ?"

"ನಿನ್ನ ಕಡೇನೇ"

"ಅದ್ಹೇಗೆ ಸರಳಾ ?"

"ಹೇಗೇಂದ್ರೆ. ಒಂದ್ವೇಳೆ ಅಪ್ಪುನೂ ನಿನ್ನ ಹಾಗೇ ಭಾವಿಸಿದ್ರೆ, ನಾನೂ ಸುಮಿತ್ರಾ ಏನು ಅಂದ್ಕೋತಿದ್ವಿ 'ದೊಡ್ಡ ಮನುಷ್ಯರೇ ಹೀಗೆ ಸಹಾಯ ಮಾಡೋಕ್ಕೆ ಅಯೋಗ್ಯರು' ಅಂತ. ಬದ್ಲಾಗಿ ನಾವೂ ಎಲ್ಲರ ಹಾಗೆ ನಾಲ್ಕು ಜನಕ್ಕಾಗಿ ಬಾಳೋವು, ಅನ್ನೋ ಹಾಗ್ಮಾಡಿ ನಿನ್ನ ಹಂತಾನ್ನೂ ಒಂದು ಮೆಟ್ಲು ಮೇಲೆ ಹತ್ತಿಸಿದ್ದಾರೆ ರಮೇಶ್. ನೀನು ಲಕ್ಕಿ ಇಂದೂ, ಈಗ ರಮೇಶ್ ನಿನ್ನ ಜೊತೆ ಬರಲಿಲ್ವಾ"

"ಬರದೆ ! ದಾರೀಲಿ ಏನಂದ್ರು ಗೊತ್ತೇನು ?....ತಾಳು ಅವರನ್ನೇ ಕರೀತೀನಿ" ಎಂದು ಕಾರಿನಲ್ಲೇ ಕುಳಿತಿದ್ದ ರಮೇಶನನ್ನು ಕರೆತಂದಳು.

ಇಬ್ಬರನ್ನೂ ಜೊತೆಯಲ್ಲಿ ನೋಡಿ, ಬೇಗ ಇವರು ದಂಪತಿಗಳಾಗಿ ಬಿಡಬಾರದೆ ಎನಿಸಿತು ಸರಳೆಗೆ. ಅವರ ಜೋಡಿ ಅಷ್ಟು ಅಂದವೆಂದಲ್ಲ. ಅದರಿಂದ ದೂರವಿತ್ತು. ರಮೇಶ ಸುಂದರನಲ್ಲ. ಇಂದಿರಾ ಚಿನ್ನದ ಗೊಂಬೆ• ಈ ಆಸಾಮಿಗೆ ಆ ಹೆಣ್ಣೆ ಎನ್ನುವಂತಿತ್ತು. ರಮೇಶ ಗುಣದಲ್ಲಿ, ಹಣದಲ್ಲಿ ಬಹಳ ದೊಡ್ಡ ಮನುಷ್ಯ. ಮಾನವತೆಯಿಂದ ದೂರ ಸರಿದಿರಲಿಲ್ಲ ಅನೇಕ ಧನಿಕರಂತೆ. ಬಡಬಲ್ಲಿದ ವಾದಗಳಲ್ಲಿ ರಮೇಶ–ಇಂದಿರೆಯರಿಗೆ ಸಾಮರಸ್ಯವೇ ಇರುತ್ತಿರಲಿಲ್ಲ,

ಇಂದಿರೆಗೆ ರಮೇಶನಂತಹ ಗಂಡನೇ ಬೇಕು. ಆ ಬಿಳಿ ಕುದುರೆಗೆ, ಅವನುತಹ ಕಡಿವಾಣವೇ ಅಗತ್ಯವಿತ್ತು. ಅವನೂ ಒಂದು ಬಿಳಿ ಕುದುರೆಯಾಗಿದ್ದರೆ ಸಂಸಾರ ಏರುಪೇರು ಆಗುವುದರಲ್ಲಿ ಸಂದೇಹವೇ ಉಳಿಯುತ್ತಿರಲಿಲ್ಲ.

"ನಮಸ್ಕಾರ ಮಿ॥ ಸರಳಾ"

"ನಮಸ್ಕಾರ. ಬನ್ನಿ, ಯಾಕೆ ಬಂದವ್ರು ಕಾರಿನಲ್ಲೇಕೊತ್ಬಿಟ್ರೆಲ್ಲಾ. ಮನೆ ಒಳಕ್ಕೆ ಬರೋಕ್ಕೆ ಸಂಕೋಚವಾಯ್ತೇನು ?"

"ಇಲ್ಲ ಇಲ್ಲ. ಬೇರೆ ಯಾರೋ ಇದಾರೆ ಅಂತ ಕೇಳಿದ್ನಲ್ಲಾ, ಅದಕ್ಕೇ ಸಧ್ರಂತ ಬಂದ್ರೆ ಅಷ್ಟೇನೂ ಚೆನ್ನಾಗಿರೋಲ್ಲಾಂತ...." ಎನ್ನುತ್ತಾ ಬೆತ್ತದ ಕುರ್ಚಿಯಲ್ಲಿ ಕುಳಿತ.

"ನಿಮ್ಮನ್ನ ಇಂದೂ ಈಗ ಕರೆದಿದ್ದು ಯಾಕೆ ಗೊತ್ತೇನು ?"

"ಅರೆ, ನಂಗೆ ತಿಳೀದು. ಯಾಕ್ ಇಂದೂ ?"

"ನೀವೇನೋ ದಾರೀಲಿ ನನ್ಮೇಲೆ ಅಂದ್ರಂತೆ...." ಸರಳಾ ಇಂದಿರೆಯ ಕಡೆ ನೋಡಿದಳು.

"ಛೆ ಛೆ ನಾನೇನೂ ಅಂದಿಲ್ಲಪ್ಪ. ನಿಜವಾಗಿ ಹೇಳಬೇಕೂಂದ್ರೆ ನೋಡಿ ಸರಳಾ ನಂಗೆ ತಿಳಿದಿರೋ ಹೆಂಗಸ್ರೇ ಕಡಿಮೇ. ತಿಳಿದಿರೋವ್ರಲ್ಲಿ ನೀವೂ ಅಂದ್ರೆ ನನಗೆ ತುಂಬಾ ಗೌರವ. ಏನು ಹೇಳ್ದೆ ಇಂದೂ ಸುಳ್ಳು ಪಳ್ಳು ?"

"ಸುಳ್ಳು ಯಾಕೆ, ನೀವು ಹೇಳಿದ್ದು ಹೇಳ್ದೆ" ಎಂದು ಮೆಲ್ಲಗೆ ಕಿವಿಯಲ್ಲಿ ಉಸುರಿದಳು. ರಮೇಶನ ಮುಖ ನಾಚಿಕೆಯಿಂದ ಕೆಂಪಾಯಿತು.

"ನೀವಿಬ್ರೂ ಹೀಗೇ ಪಿಸುಗುಟ್ತಾ ಇರಿ. ನಾ ಒಂದಿಷ್ಟು ಕಾಫಿ ಮಾಡಿ ತರ್ತೀನಿ" ಎಂದು ಎದ್ದಳು ಸರಳಾ.

"ಅಲ್ಲೇ ಇರೋದು ವಿಷಯ ಸರಳಾ. ಇವರು ದಾರೀಲಿ ಹೇಳಿದ್ದೇ ನೂಂದ್ರೆ 'ಪಿಕ್ಚರಿಗೆ ಬೇಡಂದ್ಮೇಲೆ ನೀವ್ಯಾಕ್ಬರ್ಬೇಕು. ನಾನು ಸುಮಿತ್ರಾನ್ನ ಡ್ರಾಪ್ ಮಾಡಿ ಬರ್ತೀನಿ ಆಮೇಲೆ ಎಲ್ಲಾದ್ರೂ ಹೋಗೋಣ' ಅಂತ ನಾ ಅಂದ್ರೆ 'ಊಹುಂ, ನಾನು ಸರಳಾ ಮನೆಗೆ ಬರಲೇಬೇಕು, ಫಸ್ಟ್‌ಕ್ಲಾಸ್ ತಿಂಡಿ ಕೊಡ್ತಾರೆ, ಅದಕ್ಕೂ ಮುಂಚೆ ಫೈನ್ ಕಾಫಿ ಕೊಡ್ತಾರೆ ಅದಕ್ಕೆ ಸೊನ್ನೆ ಮಾಡ್ತೀಯಾ' ಅಂತ ಜಗಳಕ್ಕೆ ಬಂದ್ಬಿಟ್ರು."

ಮೂವರು ಗಟ್ಟಿಯಾಗಿ ನಕ್ಕರು,

"ಬಹಳ ಸಂತೋಷ ರಮೇಶ್. ನೀವು ನನ್ನ ವಿಷಯದಲ್ಲಿ ಇಷ್ಟೊಳ್ಳೆ ಅಭಿಪ್ರಾಯ ಇಟ್ಕೊಂಡಿದೀರಲ್ಲಾ. ಇಂದೂ ಅಂತೂ ಕೊಟ್ಟಿದ್ದೆಲ್ಲಾ ಹೊಡೆ ದ್ಬಿಟ್ಟು ಒಂದು ಥ್ಯಾಂಕ್ಸ್ ಕೂಡಾ ಹೇಳ್ದೆ ಹೊರಟೋಗ್ತಾಳೆ" ಎಂದು ಇಂದಿರಳ ಕಡೆ ನೋಡಿ ಕಣ್ಣು ಹೊಡೆದು ಅಡಿಗೆ ಮನೆಗೆ ನಡೆದಳು ಸರಳಾ.

"ರಮೇಶ್, ಅವ್ರಿನ್ನೂ ಎದ್ದೇ ಇಲ್ಲವಲ್ಲಾ. ನಾವು ವಾಕಿಂಗ್ ಹೋಗಿ ಬಂದುಬಿಡೋಣ. ಅಷ್ಟೊತ್ತಿಗೆ ಎದ್ದಿದ್ರೆ ಡ್ರಾಪ್ ಮಾಡ್ಬಿಟ್ಟು ಹೋಗೋಣ" ಎಂದು ಪಿಸುಮಾತಿನಲ್ಲಿ ಸಲಹೆ ನೀಡಿದಳು ಇಂದೂ. ತಾನಿಷ್ಟು ಅಲಂಕಾರ ಮಾಡಿಕೊಂಡು ಹೊರಟಿರುವಾಗ ವೃಥಾ ಸರಳಳ ಮನೆ ಯಲ್ಲಿ ಕಾಲ ಕಳೆಯುವುದೆ ಎಂಬ ಸಂಕಟ ಅವಳಿಗೆ.

ರಮೇಶನ ಕಷ್ಟವೇ ಬೇರೆ. ಬರದೆ ಬರದೆ ಸರಳಾಳ ಮನೆಗೆ ಅತಿಥಿ ಯಾಗಿ ಬಂದು ತಿಂಡಿ ತಿಂದ ಕೂಡಲೆ ಹೊರಟುಬಿಟ್ಟರೆ ಅವಳೇನು ತಿಳಿದಾಳು.

ತಿಂಡಿಪ್ರೋತ ಅಂದುಕೊಳ್ಳಲಾರಳೆ ? ಅಲ್ಲದೆ ತಾನು ತಮಾಷೆಗೆ ಅಂದ ಮಾತನ್ನು ಇಂದಿರಾ ಪ್ರಕಟಿಸಿಬಿಟ್ಟಿದ್ದಾಳೆ.

ಇತ್ತ ಇಂದಿರಳ ಪ್ರೇಮದ ಕರೆ. ಅತ್ತ ಸಂಕೋಚ ನಿಲ್ಲದೆ ಹೋಗಲು. ಈ ಹೋರಾಟದಲ್ಲಿ ಇಂದಿರಳ ಪ್ರೇಮವೇ ಗೆದ್ದಿತು.

ಪ್ರೇಮದ ಸುಳಿಯಲ್ಲಿ ಸಿಕ್ಕಿದ ವ್ಯಕ್ತಿಗಳಿಗೆ ಸ್ವಂತ ವ್ಯಕ್ತಿತ್ವವೆಲ್ಲಿ ಬಂತು? ಸ್ವಂತ ವ್ಯಕ್ತಿತ್ವ ಪ್ರಾಧಾನ್ಯವಾದಾಗ ಪ್ರೇಮ ಎಲ್ಲಿ ನಿಲ್ಲುತ್ತದೆ. ಸಮರವೇ ಜೀವನ. ವ್ಯಕ್ತಿಗಳ ಪರಸ್ಪರ ಸಹಕಾರ ಸೌಹಾರ್ದಗಳೇ ಅಲ್ಲವೇ ಪ್ರೇಮಕ್ಕೆ ಬುನಾದಿ.

ತಿಂಡಿ ತಿನ್ನುತ್ತಾ ತಮಾಷೆಯಾಗಿ ಮಾತನಾಡುತ್ತಾ ಕಾಲ ಕಳೆದರು ಮೂವರೂ. ರಮೇಶನ ಮಾತು ಸತ್ಯವಾಗಿತ್ತು. ತಿಂಡಿ ತಯಾರಿಯಲ್ಲಿ ಎತ್ತಿದ ಕೈ. ರಮೇಶನಿಗೆ ತೃಪ್ತಿಯಾಯಿತು.

ಸಾಧಾರಣವಾಗಿ ಗಂಡಸರು ಚೆನ್ನಾಗಿ ತಿನ್ನಬಲ್ಲರೆಂಬ ಸತ್ಯ ಅರಿತಿದ್ದ ಸರಳಾ ರಮೇಶನಿಗೆ ಸ್ವಲ್ಪ ಜಾಸ್ತಿಯಾಗಿಯೇ ಕೊಟ್ಟಿದ್ದಳು, ನೆಕ್ಕಿಹಾಕಿದಂತೆ ಖಾಲಿ ಮಾಡಿದ ರಮೇಶ ತಟ್ಟೆಯನ್ನು. ಆದರೆ ಇಂದಿರಾ ? ತಟ್ಟೆಯಲ್ಲಿ ಸ್ವಲ್ಪ ಬಿಡದಿದ್ದರೆ ಅನಾಗರಿಕವಲ್ಲವೆ ಈ ನಾಗರಿಕ ಜಗತ್ತಿನಲ್ಲಿ, ತನ್ನ ಲೋಟ ದಿಂದ 'ಕಾಫಿ ಜಾಸ್ತಿ ಸ್ವಲ್ಪ ತೆಗಿ' ಎಂದು ಹಟ ಮಾಡದಿದ್ದರೆ, ಮಾಡಿ ಕೊಟ್ಟವರ ಮುಂದೆ ಅಲ್ಪರಾಗುವುದಿಲ್ಲವೆ.

ರಮೇಶನಿಗೆ ಇದು ಬೇಸರವೇ ಆಯಿತು, ಇರಲಿ, ಅಪರಿಚಿತರ ಮನೆ ಗಳಲ್ಲಿ ಹಾಗೆಯೇ ನಡೆದುಕೊಳ್ಳಲಿ. ಆತ್ಮೀಯ ಅಕ್ಕನಂತಿರುವ ಸರಳೆಯ ಮನೆಯಲ್ಲಿ ಇವಳ ಸಮುದಾಚಾರವೆ? ಪ್ರೀತಿಯಿಂದ ಕೊಟ್ಟ ಅಮೃತ ಜಾಸ್ತಿ ಯಾಯಿತು ಚೆಲ್ಲುತ್ತೇನೆ ಅಂತಾಳಲ್ಲಾ ಆಡಂಬರದ ಇಂದೂ. ಅವಳಿಗೆ ಕೇಸರೀಬಾತೆಂದರೆ ಪ್ರಾಣ ಎನ್ನುವುದು ತನಗೆ ತಿಳಿಯದೇನು ? ಎಲ್ಲಾದರೂ ಹೋಗಲಿ. ಸರಳಾ ನೊಂದುಕೊಳ್ಳದಿದ್ದರೆ ಸರಿ.

ಚಾಟಿಯಿಂದ ಹೊಡೆದಂತೆ ಬಂತು ಸರಳಾಳ ದನಿ–"ಎಲ್ಲಾ ತಿಂದ್ಬಿಡು ಹುಡುಗಿ. ಈ ಗಜ್ಜುಗದಷ್ಟು ನಿನಗೇನೂ ಹೆಚ್ಚಾಗಲಾರದು. ನೀನು ಬಂದು ಚೆಲ್ಲಲಿ ಅಂತ ನಾನೇನೂ ಮಾಡಿಟ್ಟಿಲ್ಲಾ ಇಲ್ಲಿ ತಿಳೀತಾ ?"–ರಮೇಶ ನಿಗೆ ಸಂತೋಷವಾಯಿತು.

"ಇಲ್ಲ ಪ್ಲೀಸ್. ಎಕ್ಸ್‌ಕ್ಯೂಸ್ ಮಾಡು. ನಂಗೆ--" ಇಂದಿರಾ ಎಳೆದಳು ರಾಗ.

"ನಿಂಗೆ ಇದೂ ಅಂದ್ರೆ ಎಷ್ಟು ಇಷ್ಟ ಅನ್ನೋದು ನಂಗೊತ್ತು. ತಿನ್ನು ಅಂದ್ರೆ ಜಂಭ ಮಾಡ್ತಾಳೆ, ಜಂಭಗಾತಿ ಅನ್ನಿಸ್ಕೊಳ್ಳೋದು ಸುಲಭಾ ಇಂದಿರಾ. ಗಣ್ಯ ವ್ಯಕ್ತಿಯಾದ್ರೂ ನಿಗರ್ವಿ ಅನ್ನಿಸ್ಕೊಳ್ಳೋದ್ರಲ್ಲಿದೆ ಹಿರಿಯ ಗುಣ"--ಕಟುವಾಗಿತ್ತು ಸ್ವರ.

ಈ ಮಾತುಗಳು ಗಂಟಲಿಂದ ಇಳಿಯುತ್ತಿರುವಂತೆಯೇ ಉಳಿದಿದ್ದ 'ಬಾತು' ಸಹ ಒಳಗೆ ಹೋಯಿತು. ರಮೇಶ್ ಅಸೂಯೆಯಿಂದ ನುಡಿದ--

"ನೀವೇ ಪರವಾಗಿಲ್ಲ ಸರಳಾ. ಅವಳನ್ನ ಹಿಡಿತದಲ್ಲಿಟ್ಟಿದ್ದೀರಿ. ಒಂದ್ವೇಳೆ ನಾನೇನಾದ್ರೂ ಈ ಮಾತು ಹೇ...." ಪುಟ್ಟ ಮಕ್ಕಳಂತೆ ಮುಂದೆ ಮಾತನಾಡಬೇಡ ಎನ್ನುವಂತೆ ತನ್ನ ಕೈಯಿಂದ ಅವಳ ಬಾಯನ್ನು ಮುಚ್ಚಿದಳು ಇಂದಿರಾ.

ಪ್ರಣಯಿಗಳ ಸರಸ ನೋಡಿ, ತಾನಲ್ಲಿರಬಾರದೆಂದೆನಿಸಿತು ಸರಳಾಗೆ.

"ಸುಮಿತ್ರಾ ಇನ್ನೂ ಏಳಲಿಲ್ಲ. ನೀವೀಗ ಒಂದು ಕೆಲ್ಸ ಮಾಡಿ. ಹೀಗೇ ಸುತ್ತಾಡಿಕೊಂಡು ಬನ್ನಿ. ನಾನು ಅಷ್ಟರಲ್ಲಿ ಅವರನ್ನೆಬ್ಬಿಸಿ ತಯಾರು ಮಾಡಿರ್ತೀನಿ"--ಎಂದು ತಿಂದು ಬಿಟ್ಟಿದ್ದ ತಟ್ಟೆ ಲೋಟ ಒಂದೊಂದಾಗಿ ತೆಗೆಯಲುದ್ಯುಕ್ತಳಾದಳು. ರಮೇಶನಿಗೆ ಸರಳಾ ಒಂದು ಮನೋಜ್ಞ ಹೆಣ್ಣು ಅವಳಿಗೆ ಹೇಗೆ ತಿಳಿಯಿತು ತನ್ನ ಮನಸ್ಸಿನ ಹೋರಾಟ **Hats off to Sarala** ಎಂದು ನಿಡಿದಾದ ಉಸಿರು ಬಿಟ್ಟ.

* * * *

"ಸುಮಿತ್ರಾ....ಸುಮಿತ್ರಾ....ಏಳುವಿರಾ"ಸುಮಿತ್ರೆಗೆ ಎಚ್ಚರವಾಗಲಿಲ್ಲ. ಆದರೆ ಪುಟ್ಟ ಸರಳಾ ಕಣ್ಣು ಬಿಟ್ಟಳು. ದೊಡ್ಡ ಸರಳೆಯ ಕಣ್ಣುಗಳು ಪುಟ್ಟ ಸರಳಾಳ ಕಣ್ಣುಗಳೊಂದಿಗೆ ಸಮ್ಮಿಳಿತವಾಯಿತು. ಮುಗ್ಧನಗೆ ನಕ್ಕಳು ಬಾಲಕಿ. 'ನೀವು ನನಗೆ ಗೊತ್ತು' ಎನ್ನುವಂತೆ ನೋಡಿದಳು, ಸ್ವಲ್ಪವೂ ಬೆದರದೆ "ದೊಡ್ಡಮ್ಮ ನಾನು ಏಳಬೇಕು" ಎಂದು ಕೈ ಚಾಚಿದಳು.

ದೊಡ್ಡಮ್ಮ !! ಎಂತಹ ಅಸಾಧಾರಣ ಕರೆ. ತನ್ನನ್ನು 'ಅಕ್ಕ' ಎಂದವರಿದ್ದಾರೆ. 'ಅತ್ತೆ' ಎಂದ ಮಕ್ಕಳಿದ್ದಾರೆ. ಸುತ್ತಮುತ್ತ ಮಕ್ಕಳಿಗಂತೂ ತಾನು 'ಚಿಕ್ಕಮ್ಮ'. ಆದರೆ ಯಾರೂ 'ದೊಡ್ಡಮ್ಮ' ಎಂದಿರಲಿಲ್ಲ. ಮಗುವಿನ ಅರ್ಥವೇನೋ. ತಾನು ಅವಳ ಅಮ್ಮನಿಗಿಂತ ದೊಡ್ಡವಳೆಂದು ಆ ಮಗುವಿಗೆ ಗೋಚರವಾಯಿತೆ ?

ಸರಳೆಗೆ ಈ ಕರೆ ಬಹಳ ಇಷ್ಟವಾಯಿತು, ಅಳೆಯಲಸಾಧ್ಯವಾದ ಆನಂದ. ಕೈ ಚಾಚಿ ತಾಯಿಯ ಆ ಕಡೆಗಿದ್ದ ಹುಡುಗಿಯನ್ನು ಎತ್ತಿಕೊಂಡಳು.

"ನಿದ್ದೆ ಬಂತಾ ಮರಿ ಚೆನ್ನಾಗಿ, ಎಲ್ಲಾದ್ರೂ ನೋವಾಗ್ತಾ ಇದ್ಯಾಮ್ಮ ?"

"ಮೂಗು ನೋಯ್ತಾ ಇದೆ ದೊಡ್ಡಮ್ಮ. ನಾನು ನಿದ್ದೇಲಿ ಕುದ್ರೆಗಾಡಿಯಿಂದ ಬಿದ್ದುಬಿಟ್ಟೆ. ನನ್ಮೂಗು ಏನಾಗಿದೆ ?"--ಮುದ್ದು ಮುದ್ದಾಗಿತ್ತು ಅವಳ ಮಾತು.

"ನಿದ್ದೇಲಿ ಅಲ್ಲ ಮರಿ. ನಿಜವಾಗ಼್ೂ ನೀ ಬಿದ್ದೆ. ಅಮ್ಮನ ಜೊತೇಲಿ, ಮಾಧೂನ್ನ ಕರ್ಕೊಂಡು ಅತ್ತೆ ಮನೇಗೆ ಹೋಗಿರ್ಲಿಲ್ವಾ ನೀನು. ಆವಾಗ ಅಲ್ಲಿ ಅಪ್ಪ ಬಂದಿದ್ರಲ್ಲಾ...."

"ಅಪ್ಪ ಅಲ್ಲ ದೊಡ್ಡಮ್ಮ, ಅಣ್ಣ ಬಂದಿದ್ರು" ತಿದ್ದಿದಳು ಬಾಲಕಿ. ಬಹುಶಃ ಅಪ್ಪನೆಂದರೆ ತಾತನಿರಬೇಕು. 'ಅಣ್ಣ' ಅವಳ ತಂದೆ.

"ಹುಂ, ಅಣ್ಣ ಬಂದಿದ್ರು, ಅತ್ತೆ ಮನೆಯಿಂದ ಕುದ್ರೆ ಗಾಡೀಲಿ ಬರೋವಾಗ ನೀ ಬಿದ್ದು ಬಿಟ್ಟೆ ಮರಿ"

"ಓ ಹಾಗಾ ? ಅಯ್ಯೋ ನಾ ಕನಸಲ್ಲಿ ಅಂದ್ಕೊಂಡೆ. ಮತ್ತೆ ಅಮ್ಮ ಮಾಧು ?"

"ಅವರು ಬೀಳಲಿಲ್ಲ. ಅಷ್ಟರಲ್ಲಿ ಎಲ್ಲಾ ಸರಿಯಾಯ್ತು. ನಿಂಗ್ಮಾತ್ರ ಒಂಚೂರೇ ಚೂರು ಗಾಯ ಆಗಿದೆ. ನೀನೀವಾಗ ತಿಂಡಿತಿಂದು ಕಾಫಿ ಕುಡಿದು ಮನೇಗೆ ಹೋದ್ರೆ ಎಲ್ಲಾ ಸರಿಹೋಗುತ್ತೆ".

"ಹುಂ. ನೀನ್ಯಾಕೆ ದೊಡ್ಡಮ್ಮ ನಮ್ಮನೇಗೆ ಬರೋಲ್ಲ"?

ಈ ಪ್ರಶ್ನೆಗೆ ಏನು ಉತ್ತರ ಕೊಟ್ಟಾಳು. "ಇನ್ಮೇಲೆ ಬರ್ತೀನಿ. ಆ್ಞ?

ಈಗ ಮುಖ ತೊಳೆಯೋಣ್ವಾ ?"–ಹುಡುಗಿ ದೊಡ್ಡಮ್ಮನ ಸೇವೆಗೆ ತಲೆ ಕೊಟ್ಟಳು.

ಸರಳಾಗೆ ಈ ಇಬ್ಬರು ಮಕ್ಕಳೂ ತನಗೆ ಬೇಕೆನ್ನಿಸಿತು.

"ಇಬ್ಬರೂ ಏಕೆ ಒಬ್ಬರು ಕೂಡ ನಿನಗೆ ಸಿಗಲಾರರು. ನೀನೇನಾಗ ಬೇಕು ಅವರಿಗೆ"

"ಮಕ್ಕಳಿಗೆ ದೊಡ್ಡಮ್ಮ. ಸುಮಿತ್ರೆಗೆ ಗೆಳತಿ"–ಹೃದಯ ಉತ್ತರಿಸಿತು.

ವಿಕಟ ನಗೆ ಬುದ್ಧಿಯದು––"ಏಕೆ ಸರಳಾ, ಇಂದು ಹುಚ್ಚಿ ಹಾಗೆ ಆಡ್ತಿದ್ದಿ. ಆಸೆ ನಿರಾಸೆಗಳ್ನೆಲ್ಲಾ ತೊರೆದು, ವಿರಾಗಿಣಿ ಹಾಗೆ ಬದುಕ್ತಿದ್ದ ನೀನು, ಫಲಿಸ್ದೇ ಇರೋ ಬಂಧನಕ್ಕಾಗಿ ಆಶಿಸ್ತಾ ಇದ್ದಿ. ಅತೀ ಮಮತೆ ಯಿಂದ ಮತ್ತೆ ಇಟ್ಟ ತಪ್ಪು ಹೆಜ್ಜೇನ್ನೇ ಮತ್ತೆ ಇಡ್ತೀಯೇನು"–ಎಚ್ಚರಿಸಿತು ಬುದ್ಧಿ.

"ಮಕ್ಕಳಿಷ್ಟವೆಂದರೆ ತಪ್ಪೇನು ?"––ಹೃದಯಕ್ಕೆ ನೋವು.

"ನಿನಗೆ ಬಂಧನವೇ ತಪ್ಪು. ಯಾವುದನ್ನೂ ಅತಿಯಾಗಿ ಹಚ್ಚಿಕೊಳ್ತಿ. ಅದರಿಂದ ಕಿಂಚಿತ್ತು ಪ್ರೇಮವಾದ್ರೂ ಹಿಂತಿರುಗ್ದೆ ಹೋದಾಗ ಸಹಿಸೋಕ್ಕಾಗ ದಷ್ಟು ಬಾಧೆಪಡ್ತಿ. ನಿನ್ನ ಯೋಗ್ಯತೆ ನನಗೆ ತಿಳೀಬೇಕೆ. ಅದಕ್ಕೇ ಹೇಳ್ತಿ ದ್ದೀನಿ. ಇವರ ಸಂಪರ್ಕ ನಿನಗೆ ಹೆಚ್ಚು ಬೇಡ ತಿಳೀತೇನು ?" ಬುದ್ಧಿಯ ರೀತಿಯೇ ಹೀಗೆ ಯಾವಾಗ್ಲೂ.

ಹೃದಯ ಬುದ್ಧಿಗೆ ಶರಣು ಹೊಡೆಯಿತು. ತಾನು ಬಾಳಿನಲ್ಲಿ ಪೆಟ್ಟು ತಿಂದವಳು. ಪ್ರೇಮಾನುಬಂಧ, ವಾತ್ಸಲ್ಯ ಎಲ್ಲಾ ತನಗೇಕೆ ? ತಾನು ಎಷ್ಟೊಂದು ಮಕ್ಕಳನ್ನು ಪ್ರೀತಿಸಿ ಬೆಳೆಸಲಿಲ್ಲ. ಅವರೆಲ್ಲಾ ಬೆಳೆದು ದೊಡ್ಡ ವರಾಗಿದ್ದಾರೆ. ಅವರಿಗೆಲ್ಲಾ ಸರಳೆಯೆಂದರೆ ಇಷ್ಟವೆ. ಆದರೆ ಸರಳಾ ಅವರಿಗೆ ಅಂಟಿಯೂ ಅಂಟದಂತೆ ನಡೆದುಕೊಳ್ಳುತ್ತಾಳೆ.

ಆದರೆ ಇಂದೇಕೋ ಅವಳನ್ನು ಪರೀಕ್ಷೆ ಮಾಡುತ್ತಿರುವಂತಿದೆ ಸರಳಾ, ಮಾಧೂರ ಸನಿಯ. ಅವರು ತನ್ನ ಮಕ್ಕಳೇ ಯಾರೋ ಕದ್ದೊಯ್ದು ಸುಮಿತ್ರೆಗೆ ಕೊಟ್ಟಿದ್ದಾರೆ ಎನ್ನುವಷ್ಟು ಅನುಭವ ಆಗುತ್ತಿದೆ. ಏಕೆ ? ಏಕೆ ಈ ವ್ಯಾಮೋಹ ಇವರಲ್ಲಿ ಭಗವಾನ್ ? ಕಣ್ಣಲ್ಲಿ ನೀರು ಬಂತು ಸರಳೆಗೆ.

ಚಿಕ್ಕ ಸರಳಾ ಒಂದೇ ಸಮ ಏನೋ ಹೇಳುತ್ತಲೇ ಇದ್ದಳು.

"ದೊಡ್ಡಮ್ಮ, ನಿನ್ನ ಕಣ್ಣಲ್ಲಿ ನೀರು ಬರ್‍ತಿದೆ. ನೀ ಈರುಳ್ಳಿ ಹೆಚ್ಚಲೇ ಇಲ್ಲ. ಅಮ್ಮಂಗೆ ಈರುಳ್ಳಿ ಹೆಚ್ಚಿದ್ರೆ ಕಣ್ಣಲ್ಲಿ ನೀರು ಬರುತ್ತೆ."

"ನಿಂಗೂ ಬರುತ್ತಾ ಮರಿ"

"ನಾನು ಈರುಳ್ಳಿ ಹೆಚ್ಚೋಲ್ಲ. ನಂಗೆ ಅತ್ರೆ ನೀರು ಬರುತ್ತೆ"–– ಮಗುವಿನ ಸತ್ಯ.

"ಹಾಗಾದ್ರೆ ನಾನೂ ಅತ್ತಿದ್ದೀನಿ. ಅದಕ್ಕೇ ಕಣ್ಣಲ್ಲಿ ನೀರು" ಕುಚೋದ್ಯವಾಗಿ ಹೇಳಿದಳು.

"ಸುಳ್ಳು. ದೊಡ್ಡೋರು ಅಳೋಲ್ಲ ಅಂತ ಅಣ್ಣ ಹೇಳಿದ್ದಾರೆ. ಒಂದಿನ ಅಣ್ಣಂಗೆ ಕಣ್ಣಲ್ಲಿ ನೀರು ಬರ್‍ತಾ ಇತ್ತು 'ಯಾಕಣ್ಣ ಅಳ್ತಿ' ಅಂದೆ. 'ಇಲ್ಲ ಮರಿ ದೊಡ್ಡೋರು ಅಳೋಲ್ಲ' ಅಂತ ಹೇಳಿದ್ರು. ನೀನು ದೊಡ್ಡೋಳು ಅಲ್ವಾ ದೊಡ್ಡಮ್ಮ. ಅದಕ್ಕೆ ನೀನು ಅಳೋಲ್ಲ"

"ಹೌದಮ್ಮ ನಾ ಅಳೋಲ್ಲ" ಎನ್ನುತ್ತಿರುವಾಗಲೇ ಅವಳ ಕಂಠ ಗದ್ಗದ ವಾಯಿತು. ನಾನು ಅತ್ತಿದ್ದೀನಿ ಎಂದರೂ ಮಗು ನಂಬುವುದಿಲ್ಲ. ಒಳ್ಳೆಯ ಪಾಠವನ್ನೇ ಕಲಿಸಿದ್ದಾರೆ ಅವಳಣ್ಣ. ಬಹಳ ತಿಳಿದಾತನಿರಬೇಕು.

ಚಿಕ್ಕ ಸರಳಾಗೆ ತಿಂಡಿಕೊಟ್ಟು, ಸುಮಿತ್ರೆಯನ್ನು ಎಬ್ಬಿಸಿದಳು ಸರಳಾ.

"ಛೆ, ಎಷ್ಟು ಹೊತ್ತು ಮಲಗ್ಬಿಟ್ಟೆ ನಾನು" ಎಂದು ನಾಚುತ್ತಾ ಎದ್ದಳು ಸುಮಿತ್ರಾ.

"ನಾಚಲು ಏನಾಯ್ತು ಸುಮಿತ್ರಾ. ಅದು ಇಂದಿರಳ ಮಾತ್ರೆಯ ಮಹತ್ವ. ಏಳಿ ಸ್ವಲ್ಪ ಮುಖ ತೊಳೆದು ಕಾಫಿ ಕುಡಿದು ಹೋಗುವಿರಂತೆ."

ಬೇಕು ಬೇಡಗಳ ವಾದವಿವಾದ ನಡೆಸುವಷ್ಟು ಮನಸ್ಸಿರಲಿಲ್ಲ ಸುಮಿತ್ರೆಗೆ, ಚಡಪಡಿಸಿ ಎದ್ದು ಹೊರಡುವ ಸನ್ನಾಹ ಮಾಡತೊಡಗಿದಳು. ಮಾಧುವನ್ನೂ ಎಬ್ಬಿಸಿ ಸರಳಾ ವಿಶ್ವಾಸದಿಂದ ಕೊಟ್ಟ ತಿಂಡಿಯನ್ನು ತಿಂದಳು.

ಗಡಿಯಾರಕ್ಕನುಗುಣವಾಗಿ ನಡೆಯುವ ರಮೇಶ್, ಸರಳಾ ಹೇಳಿದ ಸಮಯಕ್ಕೆ ಸರಿಯಾಗಿ ಬಂದ ಇಂದಿರಳೊಂದಿಗೆ. ಈಗ ಇಂದಿರೆಯೂ ಇಳಿದು ಒಳಗೆ ಬರಲಿಲ್ಲ. ಸರಳೆಯೇ ಕಾರಿನ ಬಳಿಗೆ ಹೋಗಿ "ಸಿದ್ಧವಾಗಿದ್ದಾರೆ. ಕುಂಕುಮಕೊಟ್ಟು ಕಳಿಸಿಬಿಡ್ತೀನಿ. ಒಳಗ್ಬನ್ನಿ ಅಂತ ಕರ್‍ಯೋಕ್ಕೆ ಸಾಧ್ಯ ಇಲ್ಲ.

ಅಲ್ವಾ. ಮಿ॥ ರಮೇಶ್ ನಿಮ್ಮುಪಕಾರ ನಾನೇದೂ ಮರ್‍ಯೊ ಹಾಗಿಲ್ಲ. ನಿಮ್ಮ ಪ್ರೋಗ್ರಾಂ ಕೂಡ ಕ್ಯಾನ್ಸಲ್ ಮಾಡಿ ಬಂದಿರಿ"

"ಫುಲ್‌ಸ್ಕ್ಯಾಪ್ಪು, ಕಾಮ, ಒಂದೂ ಇಲ್ದೆ ಇರೋ ಭಾಷಣ ನಮಗೆ ಬೇಡ ಸರಳಾ. ನಾಳೆ ಸ್ಪೀಚ್‌ನ ಸರಿಯಾಗಿ ರೆಡಿಮಾಡ್ಕೋ ನಾ ಬಂದು ಕೇಳಿಸ್ಕೋ ತೀನಿ. ಇಲ್ದಿದ್ರೆ ಟೇಪ್ ರಿಕಾರ್ಡ್ ತಂದು...."

"ಸರಿಯಾಗಿ ಹೇಳಿದೆ ಇಂದೂ. ಅಲ್ಲಾ ಮಿ॥ ಸರಳಾ, ನಿಮ್ಮಿಂದೆ ನಾವೆಷ್ಟು ಮಹಾ ಅನ್ನೋ ಹಾಗೆ ಮಾಡ್ತಿದೀರ, ಪರೋಪಕಾರ ನೀವು ಮಾಡೋಷ್ಟು ನಮ್ಮಿಂದ ಸಾಧ್ಯಾನಾ ? ಕ್ರೆಡಿಟ್ ಎಲ್ಲಾ ನಿಮಗೇ ಹೋಗು ತ್ತಲ್ಲಾ, ನಮಗೂ ಒಂದು ಪಾಲಿರಲೀಂತ...."

ರಮೇಶ ಹಾಸ್ಯವಾಗಿಯೇ ಸರಳೆಯನ್ನು ಹೊಗಳಿದ.

"ಸರಿ, ನಾನಿಲ್ಲಿ ನಿಲ್ಲಿಸ್ತೀನಿ. ಇನ್ಮೇಲೆ ಎಂದೂ ನಿಮಗೆ ಉಪಚಾರದ ಮಾತು ಹೇಳೋಲ್ಲ. ಒಪ್ಪಿಗೆ ತಾನೇ" ಎನ್ನುತ್ತಾ ಒಳಗೆ ಬಂದಳು.

ಸುಮಿತ್ರಾ ಮಾಧುವನ್ನು ಎತ್ತಿಕೊಂಡು, ಅದೇ ಕೈಯಲ್ಲಿ ಬುಟ್ಟಿ ಯನ್ನೂ ಹಿಡಿದು, ಬಲಗೈಯಿಂದ ಸರಳಾನ ಕೈಹಿಡಿದು, ಹೊರಡಲು ನಿಂತಿ ದ್ದಳು.

"ಹೊರಟೇ ಬಿಟ್ರಾ ಸುಮಿತ್ರಾ. ತಾಳಿ ಕುಂಕುಮ ಕೊಡ್ತೀನಿ"

ಬಂದವಳು ಬರೀ ಕುಂಕುಮದೊಂದಿಗೆ ಬರಲಿಲ್ಲ. ಕೈಯ್ಯಲ್ಲೊಂದು ದೊಡ್ಡ ಪೊಟ್ಟಣ ಹಿಡಿದು ಬಂದಳು. ಕುಂಕುಮ ಇಟ್ಟುಕೊಂಡ ಸುಮಿತ್ರೆಗೆ ಪೊಟ್ಟಣ್ಣ ಏನೆಂದು ತಿಳಿಯಲಿಲ್ಲ, "ಏನದು" ಎಂಬಂತೆ ನೋಡಿದಳು.

"ಏನೂ ತಿಳ್ಕೋಬೇಡಿ ಸುಮಿತ್ರಾ. ಇನ್ನು ನೀವು ಮನೇಗೆ ಹೋಗಿ ಏನಾದ್ರೂ ತಯಾರು ಮಾಡೋದು ಅಂದ್ರೆ ಕಷ್ಟ ಆಗುತ್ತೆ, ಈವತ್ತು ನೀವು ಹೆಚ್ಚು ದೇಹಶ್ರಮ ಮಾಡ್ಕೊಳ್ಳೋದು ಬೇಡಾಂತ. ಅಂದಹಾಗೆ ಈಗ ಹೇಗಿದೆ ನಿಮಗೆ ?"

"ಎಲ್ಲಾ ಸರಿಯಾಗಿದೆ. ಆದ್ರೆ ತುಂಬಾ ತೂಕಡಿಸೋ ಹಾಗೆ ಆಗ್ತಾ ಇದೆ"

"ಒಳ್ಳೇದು. ಇದನ್ನ ನಿಮ್ಮೆಜಮಾನ್ರಿಗೆ ಮಕ್ಕಳಿಗೆ ಕೊಟ್ಟು ಆದಷ್ಟು ಚೆನ್ನಾಗಿ ವಿಶ್ರಾಂತಿ ತೊಗೊಳ್ಳಿ. ಅಡಿಗೆ ಮಾಡೋಕೆ ಹೋಗಲೇಬೇಡಿ."

"ನೋಡೋಣಮ್ಮ, ಹೇಗೆ ಆಗುತ್ತೋ"–ಸುಮಿತ್ರೆಯ ದನಿಯಲ್ಲಿ ಕಳವಳವಿತ್ತು.

"ಯಾಕೆ ಏನಾದ್ರೂ ಅಂತಾರೇನು ನಿಮ್ಮಾತ ? ನಡೆದದ್ದೆಲ್ಲಾ ಹೇಳ್ಬಿಡಿ"

"ಅರ್ಥ ಮಾಡ್ಕೋತಾರೆ, ಆದ್ರೂ ಎಷ್ಟೋ ದುಡಿದು ಬಂದಿರ್ತಾರೆ. ಮನೆಗೆ ಬಂದ ಕೂಡ್ಲೆ ಗೋಳೂಂದ್ರೆ...."

"ನಿಮ್ಮಾತು ನಿಜ ಸುಮಿತ್ರಾ" ಸುಮಿತ್ರೆಯ ಮಾತಿಗೆ ಮುದ್ರೆ ಹಾಕಿದಳು. ಸರಳೆಗೆ ಗೊತ್ತು ದುಡಿತದ ಮಹಿಮೆ. ಅವಳೂ ದುಡಿಯುವ ಮಹಿಳೆ.

ಸುಮಿತ್ರಾ ಹೊರಡುವ ಮುನ್ನ "ನಿಮ್ಮಿಂದ ನನಗೆ ಈವತ್ತಾಗಿರೋ ಉಪಕಾರದ ಋಣಾನ್ನ ಎಂದಿಗೆ ತೀರಿಸ್ತೀನೋ. ಆದಷ್ಟು ಬೇಗ ಅಂತಹ ಒಂದವಕಾಶ ನನಗೆ ಸಿಕ್ರೆ ಸಾಕು. ಹೆಚ್ಗೆ ಏನೂ ಹೇಳೋಕ್ಕೆ ತೋಚ್ತಾ ಇಲ್ಲ...." ಇನ್ನೂ ಏನೋ ಹೇಳಬೇಕೆಂದಿರೋಷ್ಟರಲ್ಲೇ ಹೊರಗಡೆ ಕಾರಿನ ಹಾರ್ನ್ ಜೋರಾಗಿ ಶಬ್ದವಾಯಿತು.

"ಹೋಗ್ಬನ್ನಿ ಸುಮಿತ್ರಾ. ಮತ್ತೆ ಯಾವಾಗ್ಲಾದ್ರೂ ಮಕ್ಕಳ್ನ ಕರ್ಕೊಂಡ್ಬನ್ನಿ. ಭಾನುವಾರವಾದ್ರೆ ಮನೇಲೇ ಇರ್ತೀನಿ, ಮಿಕ್ಕ ದಿನ ಸಂಜೆ ಆರರ ಮೇಲೆ ಬಂದಿರ್ತೀನಿ. ಸರಳಾ, ಬಂಗಾರು ಮರಿ ಹೋಗ್ಬರ್ತೀಯಾ"

"ನೀನೂ ನಮ್ಮನೇಗೆ ಬಾ ದೊಡ್ಡಮ್ಮ" ತೊದಲು ಆಹ್ವಾನವಿತ್ತಳು ಮರಿ ಸರಳಾ.

"ಖಂಡಿತ ಬರ್ತೀನಿ" ಎಂದು ಮುದ್ದಿಸಿ ಕಳುಹಿಸಿಕೊಟ್ಟಳು.

ಹೃದಯ ಶೂನ್ಯವಾಯಿತು. ಬಾಗಿಲ ಬಳಿ ಹೋಗಬೇಕೆಂದೂ ಅನ್ನಿಸಲಿಲ್ಲ. ವರಾಂಡದಲ್ಲಿದ್ದ ಸೋಫಾದಲ್ಲಿ ಕುಕ್ಕರಿಸಿದಳು. ಬೀದಿಯ ದೀಪಗಳೆಲ್ಲಾ ಹತ್ತಿ ಎಷ್ಟೋ ಹೊತ್ತಾಗಿತ್ತು. ಮನೆಯಲ್ಲೂ ಸುಮಿತ್ರೆ ಹೊರಟಾಗ ಹಾಕಿದ ದೀಪಗಳೆಲ್ಲಾ ಜಾಜ್ವಲಿಸುತ್ತಿದ್ದುವು. ರಾತ್ರಿಯ ಪ್ರಪಂಚ ಬೆಳಕಿನಿಂದ ಜಗಜಗಿಸುತ್ತಿತ್ತು. ಚಂದಿರನು ದೀಪಗಳ ಮೇಲಿನ ಪೈಪೋಟಿಗಾಗಿ ಮೇಲೆ ಮೇಲೆ ಬರುತ್ತಿದ್ದ. ಆದರೆ ಈ ಜೀವಿಯ ಹೃದಯ ಮಂದಿರದಲ್ಲಿ ಮಿಂಚು ಒಮ್ಮೆ 'ಝಳಕ್' ಎಂದು ಝಳಪಿಸಿ ಮಾಯವಾಗಿತ್ತು. ದೀಪ ಹಚ್ಚಿದಂತೆಯೇ ಇತ್ತು. ಆದರೆ ಹತ್ತಲಿಲ್ಲ.

೪

ಮನೆ ತಲುಪುತ್ತಿದ್ದಂತೆಯೇ ಸುಮಿತ್ರೆಗೆ ಹೃದಯಕ್ರಿಯೆ ಜೋರಾಗ ಆರಂಭಿಸಿತು. ಶ್ಯಾಮು ಬಂದುಹೋಗಿರಬಹುದೆ ? ಆತನೇನೋ ಎಂದೂ ಕೋಪಿಸಿಕೊಂಡವನಲ್ಲ. ಶಾಂತಮೂರ್ತಿ ಎಂದರೆ ತನ್ನ ಶ್ಯಾಮ. ತಾನೂ ಸಹ ಅವನ ಕೋಪಕ್ಕೆ ಎಂದೂ ಎಡೆ ಕೊಟ್ಟಿರಲಿಲ್ಲ. ಹಲವೊಮ್ಮೆ ಕೋಪಿಷ್ಟರಿಗಾದರೂ ಹೆದರದೆ ಇರಬಹುದು. ಆದರೆ ಶಾಂತ ಸ್ವಭಾವದವರ ಮೌನಕ್ಕೆ ಅಂಜಬೇಕಾಗುತ್ತದೆ, ತಾನೆಂದೂ ಈ ರೀತಿ ಹೊರಗಡೆ ಉಳಿದು ಶ್ಯಾಮುವಿಗೆ ಅನಾನುಕೂಲ ಮಾಡಿರಲಿಲ್ಲ.

ಕಾರು ಮನೆಯ ಮುಂದೆ ನಿಂತಾಗ ಮನೆಯಲ್ಲಿ ಕತ್ತಲಿತ್ತು, 'ಅವರು ಬಂದಂತೂ ಇಲ್ಲ' ಎಂದು ಧೈರ್ಯ ಮಾಡಿಕೊಂಡು ಮಕ್ಕಳನ್ನು ಇಳಿಸಿ ತಾನೂ ಇಳಿದಳು.

ಒಂದೂವರೆ ಮೈಲಿ ದೂರ ಕಾರಿನಲ್ಲಿ ಬಂದಿದ್ದರೂ, ಇಂದುವಾಗಲಿ ರಮೇಶನಾಗಲಿ ಒಂದು ಮಾತನ್ನಾದರೂ ಆಡಲಿಲ್ಲ ಸುಮಿತ್ರೆಯೊಂದಿಗೆ. ಅವಳಿಗೂ ತನ್ನ ಯೋಚನೆಯಲ್ಲಿ ಬೇಕಿರಲಿಲ್ಲ. ಆದರೂ ಇಳಿದಾಗ ಸಮುದಾಚಾರದ ಸೌಜನ್ಯಕ್ಕಾಗಿ—"ಬಹಳ ಥ್ಯಾಂಕ್ಸ್. ನಿಮಗೆ ನನ್ನಿಂದ ತೊಂದರೆಯಾಯ್ತು. ಕ್ಷಮ್ಸಿ. ಹಾಗೇ ನಾವು ಸುಖವಾಗಿ ಮನೆ ತಲುಪಿದೆವು ಎಂದು ಸರಳಾಗೆ ತಿಳಿಸಿಬಿಡ್ತೀರಾ."

"Sure" ಅಷ್ಟೆ. ಕಾರು ಓಡಿ ಮಾಯವಾಯ್ತು.

ತರಹ ತರಹದ ಜನ. ಏನು ಅಹಂ ಈಕೆಗೆ. ತನಗೇ ಕಾರಿದೆ ಎಂಬ ಸೊಕ್ಕು. ಈಕೆಯ ಕಾರಿನಲ್ಲಿ ತಾನು ಬರಬಾರದಿತ್ತು, ಸರಳಾಳ ಗೆಳತಿಯೆಂದು ಬರಬೇಕಾಯಿತು.

ದೇವತೆಯಂತಹ ಸರಳೆಗೆ ಈ ಆಡಂಬರದ ಮುದ್ದೆ ಗೆಳತಿ ! ಸೌಜನ್ಯಕ್ಕಾದರೂ ಅವಳು ತನ್ನೊಡನೆ ಒಂದು ಮಾತನ್ನಾಡಿದ್ದರೆ ಅವಳ ಗಂಟೇನು ಹೋಗುತ್ತಿತ್ತು,

ಕಹಿ ಉಗುಳಿತು ಮನಸ್ಸು. ಆದರೆ ಚೇತನ ಬಿಡಬೇಕಲ್ಲಾ, ಅದು ನಕ್ಕು ಹಿಯಾಳಿಸಿತು—"ಸುಮಿತ್ರಾ ನೀನೆಲ್ಲಿ! ಇಂದಿರ ಎಲ್ಲಿ! ಅವಳು ಲಕ್ಷಾಧೀಶನ ಮಗಳು. ಕೈತುಂಬಾ ಗಳಿಕೆಯುಳ್ಳವನ ಮಡದಿಯಾಗುವವಳು. ಮೇಲಾಗಿ ಸ್ವತಃ ವೈದ್ಯಳು. ಕಾರುಗಳಲ್ಲೇ ಓಡಾಡುವವಳು. ಆದೇ ನೀನು! ಬಡ ಶಾಲೆಯ ಮೇಸ್ಟರ ಮಗಳು. ಮಧ್ಯಮ ಜೀವನ ನಡೆಸುವವನ ಬಾಳ ಸಂಗಾತಿ. ಓದಿರಬಹುದು ನೀನೂ ಸಹ ಒಂದು ಬಿ.ಎ., ಕಾರಿನಲ್ಲಿ ತಿರುಗುವುದಿರಲಿ, ಕಾರನ್ನೇ ಸರಿಯಾಗಿ ಕಂಡರಿಯದವಳು ನೀನು, ಅವಳ ಸ್ನೇಹ ಸಿಕ್ಕಲಿಲ್ಲವೆಂದು ಚಡಪಡಿಸ್ತಿದೀಯಾ. ಮರದ ತುಟ್ಟ ತುದಿಯಲ್ಲಿರುವ ಹಣ್ಣಿಗಾಗಿ ಎಗರಿದನಂತೆ ಒಬ್ಬ ವಾಮನ. ಅಯ್ಯೋ ಪೆದ್ದಮ್ಮ."

ಸುಮಿತ್ರೆಗೆ ಮನಸ್ಸಿಗೆ ಹೇಗೆ ಹೇಗೋ ಆಯಿತು. "ಸರಳಾನೂ ಸಹ ಇಂದಿರೆಯ ಅಂತಸ್ತಿನವಳೇ ಅಲ್ಲವೇನು—ಅವಳೇನೂ ಹಾಗಿಲ್ಲವಲ್ಲ."

"ಸರಳಾ ಸಾಧಾರಣ ನಿಯಮಕ್ಕೊಂದು ಅಪವಾದ ಇರಬಹುದು. ಆದರೆ ಹೆಚ್ಚು ಜನ ಇಂದಿರೆಯರು ಈ ಜಗತ್ತಿನಲ್ಲಿ. ಸಾವಿರಕ್ಕೊಬ್ಬರೇ ಸರಳೆಯಂತವರು."

"ಇರಲಿ ಬಿಡು. ಸರಳೆ ತಾನೇ ತನ್ನ ಗೆಳತಿ ಎಂದು ಎಷ್ಟೇ ಸಮಾಧಾನ ತಂದುಕೊಂಡರೂ ಇಂದಿರಳ ಪ್ರತಿಷ್ಠೆಯೇ ಕಣ್ಣಮುಂದೆ ಲಾಸ್ಯವಾಡುತ್ತಿತ್ತು.

ಇಷ್ಟೆಲ್ಲಾ ಮನಸ್ಸಿನಲ್ಲಿ ಹೋರಾಟ ನಡೆಸುತ್ತಿರುವಾಗಲೇ, ನೆರೆಮನೆ ಯಿಂದ ಬೀಗದ ಕೈ ತಂದು, ಮನೆಯ ಬೀಗ ತೆಗೆದು ದೀಪ ಹಾಕಿದಳು. ಮಕ್ಕಳು ದಣಿದದ್ದರಿಂದ ಅವುಗಳನ್ನು ಮಲಗಿಸಿ, ಬಿಸಿ ಬಿಸಿ ಕಾಫಿ ಮಾಡಿ. ಸರಳಾ ಕೊಟ್ಟ ತಿಂಡಿಯೊಂದಿಗೆ, ಶ್ಯಾಮುವಿನ ಬರವನ್ನು ಎದುರು ನೊಡ ತೊಡಗಿದಳು.

ಗಂಟೆ ಒಂಭತ್ತಾದರೂ. ಶಾಮು ಮನೆಗ ಬರದೆ ಇರಲು ಸುಮಿತ್ರೆಗೆ ಹೆಚ್ಚು ಕಳವಳವಾಗತೊಡಗಿತು. ಎಂದೂ ಕೋಪಿಸಿಕೊಳ್ಳದಿದ್ದ ಅವರಿಗೆ ಕೋಪವೇ ಬಂದಿರಬೇಕು. ಎಂದಿನಂತೆ ಆರು ಗಂಟೆಗೆ ಮನೆಗೆ ಬಂದು ಬೀಗ ನೋಡಿ ಬೇಸರಪಟ್ಟು ಹೊರಟುಹೋಗಿರಬೇಕು.

ಒಂದು ದಿನವಾದರೂ ಮುಂಚೆ ತಿಳಿಸದೆ ಮನೆಗೆ ತಡವಾಗಿ ಬರುತ್ತಿರಲಿಲ್ಲ

ಶ್ಯಾಮು. ಎಲ್ಲಿ ಹೋದರೂ ಸುಮಿತ್ರೆಯನ್ನು ಕರೆದುಕೊಂಡೇ ಹೋಗುತ್ತಿದ್ದ. ಆದ್ದರಿಂದ ಇಂದು ಅವನಿಗೆ ಸ್ವಲ್ಪ ಬೇಸರ, ಕೋಪ ಬಂದಿದ್ದರೆ ಆಶ್ಚರ್ಯವೇನಿಲ್ಲ. ಅಷ್ಟಕ್ಕೂ ತನ್ನದು ಮಾತ್ರ ತಪ್ಪೇನಿದೆ. ತಾನೇನೂ ಅವರು ಬರೋ ವೇಳೆಗೆ ಬೇಕೆಂದು ಬೀಗ ಹಾಕಿ ಎಲ್ಲಿಯೂ ಹೋಗಿರಲಿಲ್ಲ. ಹಾದೀಲ್ಲಿ ಅಪಘಾತ ನಡೆದರೆ ಅದರಲ್ಲಿ ತನ್ನ ಹೊಣೆಯೇನಿದೆ ? ಆದಷ್ಟೂ ಬೇಗಲೆ ಹಿಂತಿರುಗಿದ್ದಾಳೆ. ಸರಳ ತನ್ನ ಆತುರ ತಿಳಿದುಕೊಂಡದ್ದೂ ಅಲ್ಲದೆ ಜಾಗ್ರತೆ ಕಳುಹಿಸಿಕೊಟ್ಟಿದ್ದಾಳೆ........ಹೀಗೆಯೇ ಯೋಚಿಸುತ್ತಾ ಹಾಗೇ ಪಕ್ಕದಲ್ಲಿ ಒರಗಿದಳು. ಯಾವಾಗ ನಿದ್ದೆ ಬಂತೋ ತಿಳಿಯದು.

ಒಂಭತ್ತರ ಮೇಲೆ ಇಪ್ಪತ್ತು ನಿಮಿಷವಾಗಿರಬಹುದು ಶ್ಯಾಮು ಮನೆಗೆ ಬಂದಾಗ.

ಬರುತ್ತಿರುವಾಗಲೇ ಮನೆಯ ನಿಶ್ಶಬ್ದ ಅವನಿಗೆ ಭಯ ತಂದಿತು. ಎಂದೂ ಸುಮಿತ್ರೆಗೆ ತಿಳಿಸದೆ ಹೊರಗೆ ಉಳಿಯದೆ ಇದ್ದ ಅವನಿಗೆ ಇಂದು ಹಾಗೆ ಉಳಿದದ್ದು ಮಹಾಪರಾಧ ಮಾಡಿದಂತೆ ಅನ್ನಿಸಿತ್ತು. ಸುಮಿತ್ರೆಗೆ ಬಹಳ ಬೇಗ ಕೋಪ ಬರುತ್ತಿತ್ತು. ಆ ಕೋಪವನ್ನು ಮಾತ್ರ ಎದುರಿಸಲು ಶ್ಯಾಮುವಿಗೆ ಆಗುತ್ತಿರಲಿಲ್ಲ. ಅದೊಂದು ದುರ್ಗುಣ ಬಿಟ್ಟರೆ ಸುಮಿತ್ರೆ ಒಳ್ಳೆಯ ಹುಡುಗಿ. ಅವಳು ತನ್ನ ಕೋಪವನ್ನು ದುರ್ಗುಣ ಎಂದು ಒಪ್ಪಿಕೊಳ್ಳುತ್ತಿರಲಿಲ್ಲ. 'ಮಾನವ ಅಂದಮೇಲೆ ಕೋಪ ತಾಪಗಳು ಇರಬೇಕು ಕೋಪ ಇಲ್ಲದೆ ಇರೋದು ಮನುಷ್ಯನಲ್ಲಿ ಒಂದು ದುರ್ಬಲತೆ' ಅಂತ ವಾದಿಸ್ತಾ ಇದ್ದಳು.

ಇಂದು ಯಾವ ಅಗ್ನಿಪರ್ವತ ತನ್ನ ಮೇಲೆ ಕುಸಿದು ಬೀಳುವುದೋ ಎಂದು ಮೆಲ್ಲನೆ ಬಾಗಿಲು ತಟ್ಟಿದ–"ಸುಮಿತ್ರಾ, ಸುಮಿತ್ರಾ"

ಸದ್ದಿಲ್ಲ. ಹನ್ನೊಂದು ಗಂಟೆಗೆ ಮುಂಚೆ ಮಲಗದ ಅವಳು ಈಗ ನಿದ್ರಿಸುತ್ತಿರಬಹುದೆ? ಅಥವಾ ಹಿಂದೆ ಏನಾದರೂ ಹೋಗಿರಬಹುದೆ? ಮನೆ ಚಿಕ್ಕದಾಗಿದ್ದುದರಿಂದ ಎಲ್ಲಿ ಹೇಗೆ ಕರೆದರೂ ಹಾವಿನ ಕಿವಿಯ ಸುಮಿತ್ರೆಗೆ ಕೇಳಿಸಿಯೇ ಇರಬೇಕು. ಕೇಳಿಸದೆ. ಸುಮ್ಮನೆ ಸತಾಯಿಸ್ತಾ ಇದ್ದಾಳೆ ಎಂದು ನೆನೆದ ಅವನು ಸ್ವಲ್ಪ ಬಿರುಸಾಗೇ ಕೂಗಿದ.

"ಸುಮಿತ್ರಾ, ಬಾಗಿಲು ತೆಗಿ"

ಈ ಮಾತಿನ ಬಿರುಸು ಅವಳನ್ನು ಹೊಡೆದು ಎಬ್ಬಿಸಿತು, ಮೊದಲೇ ಕೋಪಿಸಿಕೊಂಡಿರ್ತಾರೆ. ತಾನು ಎಚ್ಚರವಾಗಿರದೆ ತೂಕಡಿಸೋದೆ ? ಥೂ ಹಾಳು ನಿದ್ದೆ.

"ಬಂದೇ........" ಎಂದು ಬಾಗಿಲಿಗೆ ಬಂದಳು.

ಧ್ವನಿ ಕ್ಷೀಣವಾಗಿತ್ತು. "ಅತ್ತಿದ್ದಾಳೆ ಹುಚ್ಚಿ ಸುಮಿತ್ರಾ. ಒಂದು ದಿನ ತಡವಾಗಿ ಬಂದ ಮಾತ್ರಕ್ಕೆ ಇಷ್ಟು ಪೇಚಾಟವೇ, ನಡೆದದ್ದನ್ನು ಬೇಗ ಹೇಳಬೇಕು" ಎಂದು ತನಗೆ ತಾನೇ ಹೇಳಿಕೊಳ್ಳುತ್ತಾ ಒಳಗೆ ಬಂದ.

ಸುಮಿತ್ರೆಗೂ ಅಷ್ಟೇ ಆತುರ. ಅವರು ಇನ್ನೂ ಕೋಪದಿಂದ ಮಾತನಾಡುವ ಮೊದಲೇ ನಡೆದುದನ್ನೆಲ್ಲಾ ಹೇಳಬೇಕೆಂಬ ಕಾತುರ.

"ಸುಮಿತ್ರಾ. ಈವತ್ತು ಏನಾಯ್ತೂ...." ಶ್ಯಾಮುವಿನ ವಾಕ್ಯ ಮುಗಿಯುವುದರಲ್ಲೇ

"ಏನಿಲ್ಲ ಸ್ವಲ್ಪ ನಿದ್ರೆ...."

ಅವಳ ಮಾತು ಗಮನಿಸಲಿಲ್ಲ ಶ್ಯಾಮು. ಮುಂದುವರೆಸಿದ "ಏನಾಯ್ತು ಅಂದ್ರೆ ನನ್ನ ಜೊತೇವ್ರು ಒಬ್ರಿಗೆ ವರ್ಗ ಆಗಿತ್ತಲ್ಲಾ, ಅವರು ಅರ್ಜೆಂಟಾಗಿ ನಾಳೇನೇ ಹೊರಡಬೇಕಾಗಿ ಬಂತು. ಅವರಿಗೆ ಪಾರ್ಟಿ ಇಟ್ಕೊಂಡ್ರು ಸಂಜೆ. ಮಧ್ಯಾಹ್ನ ನಿಂಗೆ ಹೇಳ್ಬೇಕೂಂತಿದ್ದೆ. ಅಕ್ಕನ ಮನೆ ಗಲಾಟೇಲಿ ಮರೆತ್ಬಿಟ್ಟೆ, ಸ್ವಲ್ಪ ಲೇಟಾಯ್ತು ಸುಮಿ."

ಈ ಮಾತುಗಳನ್ನು ಕೇಳಿ ಸುಮಿತ್ರೆ ತನ್ನ ಕಿವಿಯನ್ನು ತಾನೇ ನಂಬಲಾರದಾದಳು. ಹಾಗಾದರೆ ಶಾಮು ಬಂದು ಹಿಂತಿರುಗಿರಲಿಲ್ಲ ! ಅಬ್ಬ ಸಧ್ಯ !

ಅವನು ಬಿಚ್ಚಿದ್ದ ಕೋಟನ್ನು ಕೈಯಲ್ಲಿ ತೆಗೆದುಕೊಂಡು ಹತ್ತಿರ ಬಂದು ಮೆಲ್ಲಗೆ ಉಸುರಿದಳು-"ನಾವು ಈಗಲೇ ಮನೆಗೆ ಬಂದದ್ದು."

"ಹಾಂ ? ಅದ್ಯಾಕೆ ? ಅಲ್ಲದೆ ಮಕ್ಕಳು ಮಲಗಿವೆ. ಊಟಗೀಟ...."

"ಅದೊಂದು ಕತೆ ಆಗೋಯ್ತು. ಮುಂಚೆ ಕೈಕಾಲು ತೊಳ್ಕೊಂಡು ಊಟ ಮಾಡಿ. ಆಮೇಲೆ ಹೇಳ್ತೀನಿ" ಎಂದು ಕೋಟನ್ನು ಹ್ಯಾಂಗರಿಗೆ ತಗುಲಿಸಿ ಅಡಿಗೆ ಮನೆಗೆ ಹೊರಟಳು.

ಶರಟು ಕಳಚುತ್ತಿದ್ದ ಅವನ ದೃಷ್ಟಿ ಪ್ರೀತಿಯ ಮಗಳ ಮೇಲೆ ಬಿತ್ತು. ಮುಖ ರಾಮಸೇವಕನ ಮುಖದ ರೂಪ ತಳೆದಿತ್ತು. "ಸುಮಿತ್ರಾ ಯಾಕಿದು ? ಸರೂ ಮುಖ ಹೀಗಾಗಿದೆ. ಹೇಳು ಸುಮಿತ್ರಾ" ಗಾಬರಿಯಿಂದ ಸುಮಿತ್ರೆಯೆಡೆಗೆ ಓಡಿದ.

"ಗಾಬರಿ ಆಗಬೇಡಿ. ಏನೂ ಆಗಿಲ್ಲ. ಬಿದ್ಲು ಸ್ವಲ್ಪ ಗಾಯ ಆಗಿದೆ"

"ನಿಂಗೇನು ಯಾವುದಕ್ಕೂ ಗಾಬರಿ ಇಲ್ಲ. ಅವಳ ಮುಖ ನೋಡಿದ್ರೆ ಅಯ್ಯೋ ಅನ್ನಿಸುತ್ತೆ. ಆಗಿದ್ದಾದ್ರೂ ಏನು ? ನನ್ನ ಕರುಳು ಎಷ್ಟು ಫೀಲ್ ಮಾಡುತ್ತೆ ಅಂತ ಗೊತ್ತೇನು ನಿಂಗೆ"

"ಅಯ್ಯೋ ಪಾಪ ನಂಗೆ ಹೇಗೆ ಗೊತ್ತಾಗ್ಬೇಕು. ನಂಗೆ ಕರುಳಿದ್ರೆ ತಾನೇ" ಹಾಸ್ಯವಾಗಿ ನುಡಿದಳು. ಕೂಡಲೇ ಗಂಭೀರವಾಗಿ---"ಇಲ್ಲ ಶ್ಯಾಮು ನಿಜವಾಗ್ಲೂ ಏನೂ ಆಗಿಲ್ಲ ಡಾಕ್ಟರ್ಗ್ಗೂ ತೋರಿಸ್ದೆ. 'ಪರವಾಗಿಲ್ಲ ಒಂದೆರ್ಡು ದಿನದಲ್ಲಿ ಸರಿಹೋಗುತ್ತೆ' ಅಂದ್ರು"

"ಹುಂ. ಏನು ಸರಿಹೋಗುತ್ತೋ. ನಂಗೆ ಊಟ ಬೇಕು ಅಂತಾನೇ ಅನ್ನಿಸ್ತಾ ಇಲ್ಲ"

"ಯಾಕೆ ಪಾರ್ಟಿ ಅಷ್ಟು ಜೋರೇನು ?"

"ಪಾರ್ಟಿ ಏನೂ ಜೋರಲ್ಲ. ಏನೋ ಈಗ ಮನಸ್ಸಿಗೇ ಒಂತರಾ ಆಗೋಯ್ತು."

"ಯಾಕಷ್ಟು ನೊಂದ್ಕೋತೀರಿ. ನಾ ಹೇಳ್ತಾ ಇದೀನಿ. ಸರೂಗೆ ಏನೂ ಪ್ರಮಾದ ಆಗಿಲ್ಲ"

"ಕೆಲವು ವಿಷಯಗಳಲ್ಲಿ ನಿಂಗಿರೋ ಧೈರ್ಯ ನಂಗಿಲ್ಲ ಸುಮಿತ್ರಾ. ನಾ ಪ್ರೀತಿಸೋ ಜನ ಎಲ್ಲಾ ನನ್ನ ಕೈಬಿಟ್ಟು ಹೋಗ್ತಾರೆ. ಅದಕ್ಕೇ ನನಗೆ ಅಧೈರ್ಯ."

"ಕೈಬಿಟ್ಟು ಹೋಗೋಷ್ಟು ಏನೂ ಆಗಿಲ್ಲ. ಸುಮ್ನೆ ತಲೇಲ್ಲಿ ಏನೇನೋ ಹಾಕ್ಕೋಬೇಡಿ. ಏಳಿ. ನಾನೂ ಏನೂ ಅಡಿಗೆ ಮಾಡಿಲ್ಲ. ಅನ್ನ ಮಾತ್ರ ಮಾಡಿದೀನಿ. ಮೊಸರಿದೆ. ಒಂದು ತುತ್ತು ಊಟಮಾಡಿ" ಮಗುವಿಗೆ ಸಮಾಧಾನ ಮಾಡುವಂತೆ ಎಬ್ಬಿಸಿದಳು.

"ನೀನು ಊಟ ಮಾಡಿದ್ಯಾ ?"

"ಎಂತಾ ಪ್ರಶ್ನೆ ! ನೀವು ಊಟಮಾಡ್ದೆ ನಾ ಎಂದಾದ್ರೂ ಮಾಡಿದೀನಾ ?"

"ನಿಂಗೆಷ್ಟು ಸಲ ಹೇಳಿದೀನಿ ಸುಮಿತ್ರಾ. ನಾವು ಗಂಡಸ್ರು ಹೊರಗಡೆ ಕೂಡಾ ಏನಾದ್ರೂ ತಿಂದು ಬರ್ತೀವಿ. ನೀನು ಹೊಟ್ಟೆ ಕಾಯಿಸ್ತಾ ಕೂತ್ಕೊಳ್ಳೋದು ಯಾಕೆ ಹೇಳು ?"

"ನೀವು ಹೊರಗಡೆ ತಿನ್ನೋದೂ ಬಿಡೋದೂ ನಿಮ್ಮಿಷ್ಟ. ಆದ್ರೆ ನಾ ಮಾತ್ರ...."

"ಹೌದು ಮರೆತಿದ್ದೆ. ನೀನು ಸೀತೆ, ಸಾವಿತ್ರಿ ಅವರ ಕಸಿನ್ ತಾನೇ" ಕುಚೇಷ್ಟೆ ಮಾಡಿದ.

"ನೀವೇನೇ ಅನ್ನಿ ನಮ್ಮಂತಾವ್ರು, ಅಂದ್ರೆ ಸ್ತ್ರೀಯರು, ಪತ್ನಿಯರು ಇನ್ನೂ ಹಿಂದಿನ ಧರ್ಮಗಳ್ನ ನಡೆಸ್ಕೊಂಡು ಬರ್‍ತಾ ಇರೋದ್ರಿಂದಾನೇ ನಮ್ಮ ಭಾರತದ ಸಂಸ್ಕೃತಿ ಅಚಲವಾಗಿ ನಿಂತಿದೆ. ಆದೇ ನೀವಿದ್ದೀರಲ್ಲಾ ಅರ್ಥಾತ್ ಗಂಡಸರು ಎಲ್ಲಾ ಪಾಶ್ಚಾತ್ಯ ಅದರಿಂದ ನಮ್ಮ ಸಂಸ್ಕೃತಿ ಕುಂಠಿತವಾಗ್ತಾ ಇದೆ...."

"ಇದ್ದಕ್ಕಿದ್ದ ಹಾಗೆ ಹಸಿವಾಗೋಕ್ಕೆ ಶುರು ಆಯ್ತಲ್ಲಾ. ಬಹುಶಃ ನಿನ್ನ ಭಾಷಣ ಕೇಳಿ ಪಾರ್ಟೀಲಿ ತಿಂದದ್ದೆಲ್ಲಾ ಅರಗೋಯ್ತೂಂತ ಕಾಣುತ್ತೆ. ಕೊಡು ಏನೇನು ಕೊಡ್ತೀಯೋ ತಿಂದುಬಿಡೋಣಂತೆ" ಎಂದು ಅಲ್ಲಿಯೇ ಅಣಿ ಮಾಡಿದ್ದ ಮಣೆಯ ಮೇಲೆ ಕುಳಿತ.

"ಸೋಲೋಪ್ಕೊಳ್ಳೋಕ್ಕೆ ಇಷ್ಟ ಇಲ್ದೆ ಏನೇನೋ ಹೇಳ್ಬಿಡೋದು. ಹೋಗ್ಲಿ ತೊಗೊಳ್ಳಿ ಪಾಪ ಸುಸ್ತಾಗಿದೀರಾ" ಎಂದು ಸರಳಾ ಕೊಟ್ಟಿದ್ದ ಕೇಸರಿಭಾತು, ಚಕ್ಕುಲಿ, ಮಿಠಾಯಿಕೊಟ್ಟು "ಇದೆಲ್ಲಾ ಆದಮೇಲೆ ಮೊಸರನ್ನ" ಎಂದು ಪಕ್ಕದಲ್ಲೇ ಕೂತಳು ಸುಮಿತ್ರಾ.

ತನಗಿಷ್ಟವಾದ ಸಿಹಿ ತಿಂಡಿ ಇಷ್ಟೆಲ್ಲಾ ಏಕೆ ಮಾಡಿದಳು ಈ ದಿನ !

"ಬರೀ ಅನ್ನ ಅಂದೆ; ಇಷ್ಟೊಂದು ತಯಾರಿಸಿದ್ದಿ. ಈವತ್ತು ನಿನ್ನ ಗಂಡನ ಹುಟ್ಟಿದ ಹಬ್ಬ ಏನು ?" ಚೇಷ್ಟೆಯಿಂದ ಕೇಳಿದ ಶ್ಯಾಮು,

"ಅಲ್ಲ ನಿಮ್ಮ ಮಗಳ ಅಪ್ಪಂದು ಹುಟ್ಟಿದ ಹಬ್ಬ. ತಿಂದು ನೋಡಿ ಹೇಗಿದೆ ಅಂತ ಹೇಳಿ"---ಅಷ್ಟೇ ಚೇಷ್ಟೆ ಅಡಗಿತ್ತು ಮಾತಿನಲ್ಲಿ.

ಮೆಲ್ಲಗೆ ಅವಳ ಕೈಹಿಡಿದು ಜಗ್ಗಿ ತನ್ನ ಮಡಿಲೊಳಕ್ಕೆಳೆದುಕೊಳ್ಳುತ್ತಾ-"ಏನ್ಸಮಾಚಾರ ಸುಮಿ" ಎಂದ ಕೆನ್ನೆಯ ಮೇಲೆ ಕೆನ್ನೆ ಒತ್ತುತ್ತಾ.

"ನಿಮಗಿದೆಲ್ಲಾ ಇಷ್ಟ ಅಂತ ಒಬ್ಬ ದೇವತೆ ಕಳಿಸಿಕೊಟ್ಟಳು"

"ಆ ದೇವತೆ ನನ್ನ ಸುಮಿ, ತಾನೇ ?"

"ಊ ಹೂಂ." ಎಂದು ಬಿಡಿಸಿಕೊಂಡು ಓಡಿ ಹೋದಳು.

ಸುಮಿತ್ರಾ ಅಲ್ಲವೇ ? ಮತ್ಯಾರು ಮಾಡಿದರು ? ಪೆದ್ದಾಗಿ ತಟ್ಟೆ ನೋಡುತ್ತಾ ಕುಳಿತ.

"ರಾಯರೆ ತಿನ್ನ ಬಾರದೇನು ? ಹಾಗೆ ನೋಡ್ತಾ ಕೂತ್ಬಿಟ್ರಲ್ಲಾ"

"ಹಾಸ್ಯ ಸಾಕು ಸುಮಿತ್ರ. ಇದನ್ನ ಯಾರು ಕೊಟ್ರು?" ಗಂಭೀರ ವಾಗಿ ಕೇಳಿದ.

"ಅದನ್ನೇ ಆಮೇಲೆ ಹೇಳ್ತೀನಿ ಅಂದದ್ದು. ಬೇಗ ಮುಗಿಸಿ. ನಾನೂಟ ಮಾಡಿ ಕೆಲ್ಸ ಎಲ್ಲಾ ಮುಗಿಸಿ ಮಲಗ್ಬೇಕು. ನಂಗೂ ಬಹಳ ಸುಸ್ತಾಗಿದೆ" —ಅವಳದೂ ಗಂಭೀರ ಉತ್ತರ.

ಮುಂದೆ ಮಾತನಾಡದೇ ಎಲ್ಲವನ್ನೂ ಮುಗಿಸಿ ಎದ್ದು ಬಿಟ್ಟ ಶ್ಯಾಮ ಸುಂದರ. ಸುಮಿತ್ರೆಯೂ ಚಕಾರವಾಡಲಿಲ್ಲ.

ಊಟವಾದ ಕೂಡಲೆ ಮಲಗಿ, ಸುಮಿತ್ರೆ ಬರುವುದಕ್ಕೂ ಮುಂಚೆ ನಿದ್ರಾದೇವಿಯನ್ನು ಅಪ್ಪುತ್ತಲಿದ್ದ ಶ್ಯಾಮು, ಈ ದಿನ ಸುಮಿತ್ರೆಗಾಗಿ ಕಾದು ಕುಳಿತು, ಮುದುಡಿದ್ದ ಮನಸ್ಸನ್ನು ಹಗುರ ಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದ. ತಮಗಿರಲಿ, ಇಲ್ಲದಿರಲಿ ಪರರ ಮನೆಯ ತಿಂಡಿ ಪದಾರ್ಥಗಳನ್ನು ಸ್ವೀಕರಿಸುತ್ತಿರಲಿಲ್ಲ ಸುಮಿತ್ರ. ಯಾರ ಮನೆಗಾದರೂ ಹೋದಾಗ ಮಕ್ಕಳು ತಿಂದರೆ ಏನೀಗ ಎನ್ನುತ್ತಿದ್ದರೂ ಹೀಗೆ ಸ್ವಾಗತಿಸುತ್ತಿರಲಿಲ್ಲ. ಪ್ರಾಯಶಃ ಈ ಸಿಹಿ ತಿಂಡಿ ನನಗಿಷ್ಟವೆಂದು ತೆಗೆದುಕೊಂಡಿರಬಹುದೆ ? ಬೇಕೆಂದರೆ ನಾವೇ ಮಾಡಿಕೊಂಡರಾಯ್ತು. ಪ್ರತಿದಿನ ಹಬ್ಬಮಾಡಿ ತಿನ್ನುವ ಶಕ್ತಿಯಿಲ್ಲದಿದ್ದರೂ ಬೇಕೆನಿಸಿದಾಗ ತಿನ್ನಲು ತಮಗೆ ದೇವರು ಕೊಟ್ಟಿದ್ದಾನೆ.

"ಇದೇನಿದು ಇನ್ನೂ ಕೂತೇ ಇದ್ದೀರಿ ? ಖಂಡಿತ ಮಳೆ ಬರುತ್ತೆ" ಕುಚೋದ್ಯ ಸುಮಿತ್ರೆಯಿಂದ.

"ಮಳೆ ಬಂದ್ರೆ ಪರವಾಗಿಲ್ಲ. ಗುಡುಗು ಮಿಂಚು ಜೋರಾಗಬಾರ್ದು

ಅಷ್ಟೆ"–ಅತ್ತರೂ ಸರಿ ವಾಗ್ವಾದ ಜೋರಾಗಬಾರದು ಎಂಬ ವಾಕ್ಚಾತುರ್ಯ ತೋರಿದ ಶ್ಯಾಮು.

ಸೂಕ್ಷ್ಮದ ಹೆಣ್ಣು ಸುಮಿತ್ರೆ ಸರಿಯಾಗೇ ಹಿಂತಿರುಗಿಸಿದಳು-"ಗುಡುಗು ಮಿಂಚು ಜೋರಾದ್ರೆ ಮಳೆ ಬರೋಲ್ಲ ಅಂತ ಅರ್ಥ. ಆದ್ರೆ ಮಳೆ ಬರ್ಲೇ ಬೇಕು ಅಂತದೇವ್ರು (ಪುರುಷ) ತೀರ್ಮಾನಿಸಿದ್ರೆ ಪ್ರಕೃತಿ (ಸ್ತ್ರೀ) ಏನು ತಾನೆ ಮಾಡ್ತಾಳೆ ?"

ಸುಮಿತ್ರೆಯ ಚಮತ್ಕಾರ ಬುದ್ಧಿಗಳಿಗೆ ತಲೆದೂಗಿದ ಶ್ಯಾಮು.

ಹಾಸಿಗೆಯನ್ನು ಸರಿಪಡಿಸಿ ಮಲಗ ಹೇಳಿದಳು.

'ನೀನು' ಮರುಪ್ರಶ್ನೆ ಹಾಕಿದ.

"ಇನ್ನೂ ಹತ್ತೂವರೆ ಕೂಡ ಇಲ್ಲ. ಹನ್ನೊಂದಾದ್ರೂ ಆಗ್ಬೇಕು ನಾ ಮಲಗೋಕ್ಕೆ"

"ಸರಿ ಓದೋಕ್ಕೂ ಏನೂ ಇಟ್ಕೊಂಡ ಹಾಗಿಲ್ಲ. ಈ ಅರ್ಧಗಂಟೆ ಏನ್ಮಾಡ್ತಿ ?"

"ಈ ಮಗೂಗೆ ಒಂದ್ಕತೆ ಹೇಳ್ಬಿಟ್ಟು ಮಲಕ್ಕೊಳ್ತೀನಿ" ಎಂದು ಪ್ರೀತಿಯಿಂದ ಹತ್ತಿರ ಬಂದಳು.

ಶ್ಯಾಮುವಿಗೆ ಪರಮಾಶ್ಚರ್ಯ. ಸುಮಿತ್ರೆಯ ಮನಸ್ಸೇ ಅವನಿಗರ್ಥವಾಗದು, ಸುಮಿತ್ರೆ ಬಹಳ ಸತಾಯಿಸಬಹುದು. ತಾನು ಹೇಗೆ ಕೇಳಿದರೆ ಅವಳು ಹೇಳಬಹುದು ಅಂತ ಪ್ಲಾನಿನ ಮೇಲೆ ಪ್ಲಾನು ಹಾಕುತ್ತಾ ತಲೆಕೆಡಿಸ್ತಾ ಕೂತಿದ್ರೆ, ಅಜ್ಜಿ ಮಗೂಗೆ 'ಬಾ ಕತೆ ಹೇಳ್ತೀನಿ' ಅಂತ ಕರೆದ್ಹಾಗೆ ಮಾಡಿ ಬಿಟ್ಟಳು. ಶ್ಯಾಮುವಿನ ಮನಸ್ಸು ಉಲ್ಲಸಿತವಾಯ್ತು. ಸಿಹಿ ತಿಂಡಿಯ ಉಗಮ ಈಗ ತಿಳಿಯಲೇ ಬೇಕಲ್ಲ.

ಎದ್ದು ಹಾಸಿಗೆಯ ಮೇಲೆ ಉರುಳಿದ. ಅಡಿಕೆಎಲೆ ಪ್ರಿಯನಾದ ಅವನಿಗೆ ಎಲೆ ಮಡಸಿಕೊಡುತ್ತಾ ಸುಮಿತ್ರಾ ಮಂಚದ ಮೇಲೆ ಅವನ ಪಕ್ಕದಲ್ಲಿ ಕುಳಿತು, ತಾನು ಅವನ ಅಕ್ಕನ ಮನೆಯಿಂದ ಹೊರಟು ಬಸ್ಸಿಗಾಗಿ ಕಾದಾಗಿನಿಂದ, ಶ್ಯಾಮು ಮನೆಗೆ ಬಂದವರೆಗೆ ನಡೆದದ್ದೆಲ್ಲಾ ಹೇಳಿದಳು. ಕೇಳುತ್ತಾ ಕೇಳುತ್ತಾ ಅವನಿಗೂ ಸರಳೆಯ ವಿಷಯದಲ್ಲಿ ಕುತೂಹಲ ಬೆಳೆಯಿತು.

"ಅವಳಂತಾವ್ರನ್ನ ನಾನು ನೋಡೇ ಇಲ್ಲಪ್ಪ. ಎಷ್ಟು ಚೆನ್ನಾಗಿ ಮಾತಾಡಿಸ್ತಾಳೆ. ನಮ್ಮ ಮಕ್ಕಳ್ನ ಕಂಡ್ರೆ ಅಂತೂ ಅವಳಿಗೆಷ್ಟೋ ಆಸೆ. ಎಷ್ಟು ಸರಳ ಸ್ವಭಾವದವಳೊಂತ. ಹೆಸರೂ ಸರಿಯಾಗಿದೆ 'ಸರಳಾ' ನಮ್ಮ ಸರೂನೂ ಹಾಗಾದ್ರೆ ಸಾಕು. ಅದೇ ಆ ಡಾಕ್ಟರ್ ಇದಾಳಲ್ಲ. ನಂಗೇನೋ ಸ್ವಲ್ಪಾನೂ ಇಷ್ಟ ಆಗ್ಲಿಲ್ಲ." ಸುಮಿತ್ರ ಹೇಳುತ್ತಲೇ ಇದ್ದಳು.

"ಹಾಗಾದ್ರೆ ನಂಗೇನೋ ಆ ಡಾಕ್ಟರೆ, ಇಷ್ಟ."–ಸುಮಿತ್ರೆಯನ್ನು ಅಣಕಿಸುವುದೆಂದರೆ ಅವನಿಗೆ ಆನಂದ. ಸುಮಿತ್ರೆಯೇನೂ ಕೋಪಿಸಿಕೊಳ್ಳಲಿಲ್ಲ. ಬದಲಾಗಿ---

"ಎಲ್ಲಿ ನಿಮ್ಮುಖ ನೋಡೋಣ. ಸಾಧಾರಣವಾಗಿ, ಸೌಮ್ಯವಾಗಿ, ಗಂಭೀರವಾಗಿರೋ ಹುಡುಗೀರ್ನ ತಲೆಯತ್ತಿ ನೋಡೋಕ್ಕೆ ಇಲ್ಲ ಎದೆ. ಇನ್ನು ಆ ಇಂದಿರಾನ್ನ ನೀವು...."

ಅವಳು ತನ್ನಲ್ಲಿಟ್ಟಿರುವ ನಂಬಿಕೆಗೆ ಅವನಿಗೆ ಹೃದಯ ತುಂಬಿ ಬಂತು. ಅಷ್ಟು ನಂಬಿಕೆಗೆ ತಾನು ಅರ್ಹನೆ ಎಂದು ತವಕಪಟ್ಟನು.

"ನಿನ್ನ ಗೆಳತೀರ ಗುಂಪಿಗೆ ಇನ್ನೂ ಇಬ್ರು ಸೇರಿದ್ರೂನ್ನು"

"ಸರಳ ನನ್ನ ಗೆಳತಿ ಅಲ್ಲ. ಅದಕ್ಕೂ ಹೆಚ್ಚು, ಅವಳು ಯಾವ ಜನ್ಮದಲ್ಲೋ ನಂಗೆ ಅಕ್ಕನೋ ತಾಯಿಯೋ ಆಗಿದ್ದಿರಬೇಕು ಅನ್ನಿಸುತ್ತೆ. ಮಿಕ್ಕೆಲ್ಲಾ ಗೆಳತೀರು ಇಲ್ಲದಿದ್ರೂ ಬೇಡ ಅವಳೊಬ್ಬು ಶಾಶ್ವತವಾಗಿ ನನಗೆ ಉಳಿದ್ರೆ ಸಾಕಪ್ಪ"

"ಯಾರಲ್ಲೂ ಇಷ್ಟು ಕುರುಡು ನಂಬಿಕೆ ಇರಬಾರ್ದು ಸುಮಿ, ಕಡೆಗೆ ನಿನ್ನ ಗಂಡನಲ್ಲೂ ಸಹ...."

ಅವನ ಬಾಯನ್ನು ಮುಚ್ಚಿ ಹಿಡಿದಳು 'ಇನ್ನು, ಸಾಕು' ಎನ್ನುವಂತೆ.

"ಆ ಮಾತು ಮಾತ್ರ ಆಡಬೇಡಿ. ನಿಮ್ಮನ್ನ, ಸರಳನ್ನ ನಂಬದಮೇಲೆ ಆಮೇಲೆ ಯಾರನ್ನ ತಾನೇ ನಂಬೋಕೆ ಸಾಧ್ಯ. ಸರೀ....ತಿಂಡಿ ಹೇಗಿತ್ತೂಂತ ನೀವು ಹೇಳಲೇ ಇಲ್ಲ" ಮಾತು ಬದಲಾಯಿಸಿದಳು.

"ಚೆನ್ನಾಗೇ ಇತ್ತು" ಸಾಧಾರಣವಾಗಿ ನುಡಿದ.

"ಚೆನ್ನಾಗೇ ಇತ್ತು ಅಂತೀರಲ್ಲ ಅಷ್ಟೇನೆ?" ನಿರಾಶೆಯಿತ್ತು ಧ್ವನಿಯಲ್ಲಿ.

"ಚೆನ್ನಾಗಿಲ್ಲ ಅಂದ್ರೆ ನೀ ಬಿಡ್ತೀಯ? ನಿನ್ನ ಯಾವ ಜನ್ಮದ ಅಕ್ಕನೋ, ಆಕೆ ಮಾಡಿದ ತಿಂಡಿ ಚೆನ್ನಾಗಿಲ್ಲಾಂದ್ರೆ...."

"ನಿಮಗೆಲ್ಲಾ ತಮಾಷೆ. ಹಾಗಾದ್ರೆ ನಾ ಹೇಳಿದ್ದೆಲ್ಲ ವಿಚಿತ್ರ. ಅಂತಾವ್ರು ಇರೋಲ್ಲಾಂತ ನಿಮಗನಿಸುತ್ತೇನೋ. ಒಂದ್ಸಲ ನೀವು ಆಕೇನ ನೋಡಿದ್ರೆ ಆಗ ಒಪ್ಕೋತೀರ...."

"ಈಗ್ಲೇ ಒಪ್ಕೋತೀನಿ, ನೀ ಹೇಳೋದು ಕೇಳಿದ್ರೆ ಆಕೆ ಒಬ್ಬ ಸಹೃದಯಿ ಅಂತ ಗೊತ್ತಾಗುತ್ತೆ, ಆಕೇನ್ನ ದೇವ್ರು ಚೆನ್ನಾಗಿಟ್ಟಿರಲಿ"-ತುಂಬು ಹೃದಯದಿಂದ ನುಡಿದ.

ಸುಮಿತ್ರೆಗೆ ಸಂತೋಷವಾಯಿತು. ಅವನು ನುಡಿದ ನುಡಿಗಳನ್ನೇ ಉಚ್ಚರಿಸುತ್ತಾ ಮಲಗಿದಳು, ಮಲಗಿದ ಎರಡೇ ನಿಮಿಷಗಳಲ್ಲಿ ನಿದ್ರಾದೇವಿಯ ತಕ್ಕೆಯಲ್ಲಿದ್ದಳು.

ನಿದ್ರೆಯಿಂದ ದೂರವಾದವನು ಶ್ಯಾಮಸುಂದರ. ಸುತ್ತಿ ಸುತ್ತಿ ಅವನ ಮನಸ್ಸು ಸರಳೆಯ ಮೇಲೆ ಕೇಂದ್ರೀಕರಿಸುತ್ತಿತ್ತು. ಸುಮಿತ್ರೆ ಹೇಳಿದಷ್ಟೇ ಒಳ್ಳೆಯವಳಿರಬಹುದೆ ? ಇರಬಹುದು. ಸಾವಿರಕ್ಕೊಬ್ಬರು ಅಂತಹ ಪರಿಪೂರ್ಣರಿರಲಾರರೆ? ತನಗ್ಯಾಕೆ ಪರಹೆಂಗಸಿನ ಚಿಂತೆ,ಬಂಗಾರದಂತಹ ಸುಮಿತ್ರೆ ತನ್ನ ಮಡದಿಯಾಗಿರೋವಾಗ, ಆದರೂ ತನಗೇನೋ ಒಂದು ಬಗೆಯ ನೋವು ಸರಳೆಯ ಕುರಿತು ಕೇಳಿದಾಗ. ಏಕೆ ? ಏಕೆ ?

ದೂರದಲ್ಲಿ ಒಂದು ಗಂಟೆ ಹೊಡೆಯಿತು. ನಿಧಾನವಾಗಿ ಜೊಂಪು ಹತ್ತಿತ್ತು ಶ್ಯಾಮುವಿಗೆ. ಕನಸಿನಲ್ಲೂ ಊಹಾವ್ಯಕ್ತಿ ಸರಳಾ ಗೋಚರಿಸಿದಳು.

ಒಂದು ತಿಂಗಳು ಕಳೆದರೂ ಸುಮಿತ್ರೆಯದಾಗಲಿ, ಮಕ್ಕಳದಾಗಲಿ ಸುದ್ದಿಯೇ ತಿಳಿಯಲಿಲ್ಲ. ಒಂದೆರಡು ದಿನಗಳಲ್ಲಿ ಸುಮಿತ್ರೆ ಮಕ್ಕಳೊಂದಿಗೆ ಬರಬಹುದಿದ್ದಿತು, ಎಂಬ ಆಸೆಯಿಂದ ಎದುರು ನೋಡುತ್ತಿದ್ದ ಸರಳಾಗೆ ಬಹಳ ನಿರಾಸೆಯಾಯಿತು. ಆದರೆ ಅವಳ ಬಾಳೆಲ್ಲಾ ಆಸೆ ನಿರಾಸೆಗಳ ಕಣ್ಣು ಮುಚ್ಚಾಲೆಯೇ ಆದುದರಿಂದ, ನೊಂದು ಪ್ರಯೋಜನವಿಲ್ಲವೆಂದು ನಿಶ್ಚಯಿಸಿದಳು. ಆದರೂ ಅವಳ ಸೂಕ್ಷ್ಮ ಹೃದಯ ರೋದಿಸುತ್ತಲೇ ಇದ್ದಿತು—

"ಇಷ್ಟೇನೇ ಜನದ ಬೆಲೆ ! ತನಗೂ ಸುಮಿತ್ರೆಗೂ ಏನು ಸಂಬಂಧವಿತ್ತು. ಆದರೂ ತಾನವಳಿಗೆ ನೆರವಾಗಲಿಲ್ಲವೆ. ತನ್ನ ಗಂಡನನ್ನು ನೋಡಲು ಆತುರಪಟ್ಟು ಹೊರಟೇಹೋದಳು. ಮತ್ತೊಮ್ಮೆ ಬಂದಾದರೂ ಕೃತಜ್ಞತೆ ಸಲ್ಲಿಸಬಾರದಿತ್ತೆ"

ಎಂದಿನಂತೆಯೇ ಹೃದಯದೊಂದಿಗೆ ಹೋರಾಡಲು ಬುದ್ಧಿ ಸಿದ್ಧವಾಗೇ ಬಂತು—

"ಹಾಗಾದರೆ ಕೃತಜ್ಞತೆಯ ಫಲಾಪೇಕ್ಷೆಗಾಗಿಯೇ ನೀನು ಪರರಿಗೆ ಸಮಯಕ್ಕಾಗುತ್ತೀ ಅನ್ನು"

"ಅಲ್ಲವೇ ಅಲ್ಲ. ಅವಳನ್ನೂ ಅವಳ ಮಕ್ಕಳನ್ನೂ ನೋಡುವ ಆಸೆ ಹಾಗೆ ಆಡಿಸಿತು. ಯಾವಾಗಲೇ ಆಗಲಿ ಪ್ರತಿಫಲ ಅಪೇಕ್ಷಿಸಿದ್ದೇನೇನು ?" —ಮೆತ್ತಗಿನ ಹೃದಯ.

"ಅದಕ್ಕೆ ಹೇಳಿದೆ. ನಿಷ್ಕಾಮಿ ನೀನು. ಅಂತಹವಳು ಮಾತ್ರ ಮತ್ತೆ ಆಸೆ ಪ್ರೇಮಗಳನ್ನು ಅಪೇಕ್ಷಿಸುತ್ತಾ ಹೊರಟೆಯಲ್ಲಾ ಎಂದು ವ್ಯಥೆಯಾಗುತ್ತಿದೆ ಸರಳಾ"—ಬುದ್ಧಿಗೂ ಅನಿಶ್ಚಿತ ಹೃದಯದ ಮೇಲೆ ಮರುಕವುಂಟಾಯಿತು. ಹೃದಯ ರೋಸಿ ನುಡಿಯಿತು—"ಪ್ರತಿಸಲವೂ ನಿನಗೇ ಜಯ ಸಿಕ್ಕಿ ನನ್ನ ನಾಶವಾಗುತ್ತಿದೆ. ನಾನು ಬಾಳಿನಲ್ಲಿ ಏನೂ ಆಶಿಸಬಾರದೆ ? ಏನು ನೀನನ್ನುವ ಮಾತು"

"ನೋಯಬೇಡ ಸರಳಾ. ನೀನು ಫಲ ಬಿಟ್ಟ ಮರದಂತೆ, ನಿನ್ನ ಫಲ ಪರರಿಗೆ ಮಾತ್ರ. ಅದರಲ್ಲೇ ನಿನ್ನ ಸುಖ. ಮರ ನೆರಳೂ ಕೊಡುತ್ತದೆ.

ಜೀವಿಗಳಿಗೆ ಹಣ್ಣೂ ಕೊಡುತ್ತದೆ. ಹಾಗೆಯೇ ಕಲ್ಲಿನಿಂದ ಏಟೂ ತಿನ್ನುತ್ತದೆ. ಆದಕ್ಕಾಗಿ ಮರಕ್ಕೆ ದುಃಖವಿಲ್ಲ ನೀನೂ ಅಷ್ಟೆ. ನಿನಗಾಗಿ ನೀನೇನಾದರೂ ಬಯಸಿದಲ್ಲಿ ಅದು ನಿನಗೆ ಅಲಭ್ಯ. ಕೆಲವರು ಸುಖಕ್ಕಾಗಿ ಜನ್ಮ ಪಡೆಯು ತ್ತಾರೆ. ಕೆಲವರು ಪರರಿಗೆ ಸುಖಕೊಟ್ಟರೂ ತಾವು ನೊಂದಿಹೋಗುತ್ತಾರೆ...." ವೇದಾಂತ ಹೇಳುತ್ತಲೇ ಹೊರಟಿತು ಅವಳ ಚೈತನ್ಯ.

"ಸಾಕು ನಿಲ್ಲಿಸು ವೇದಾಂತ. ಸುಮಿತ್ರಳ, ಮಕ್ಕಳ ಸ್ನೇಹ ಬಯಸಿದ್ದೂ ತಪ್ಪಾಯಿತೆ ? ಹೋಗು"—ಅಂತೂ ಒಮ್ಮೆ ಹೃದಯದ ವಾದ ಗೆದ್ದಿತು.

"ಮುಂದೆ ನೀನೇ ಅನುಭವಿಸುವೆ ನನಗೇನಂತೆ"-ಎಂದು ಕಹಿ ನಗೆ ನಕ್ಕ, ಎಂದೂ ಗೆಲ್ಲುತ್ತಿದ್ದ ಬುದ್ಧಿ ಇಂದು ಸೋತು ಮರೆಯಾಯಿತು.

ಹೃದಯ ಬುದ್ಧಿಗಳಿಗೆ ಎಂದೂ ಹೋರಾಟವೇ ಅವಳ ಬಾಳಿನಲ್ಲಿ. ತಾನೇ ಆದರೂ ಅವರ ಮನೆಗೆ ಹೋಗಿ ಬರೋಣವೆಂದರೆ ಒಮ್ಮೆಯಾದರೂ ಸುಮಿತ್ರೆಯ ಮನೆಯ ಹಾದಿಯನ್ನು ಕೇಳಿ ತಿಳಿದುಕೊಳ್ಳಲಿಲ್ಲ. ಏನು ಮಾಡುವುದು ?

ಮಿಂಚಿನಂತೆ ಹೊಳೆಯಿತು ಉಪಾಯ. ಇಂದಿರ ಅವರ ಮನೆ ನೋಡಿ ದ್ದಾಳೆ. ಅವಳಿಂದ ತಿಳಿದುಕೊಳ್ಳಬಹುದು. ಈ ನಿರ್ಧಾರ ಎಷ್ಟೋ ಹಾಯೆನಿಸಿತು.

* * * *

ಆಫೀಸಿನಿಂದ ಸರಳ ಸಂಜೆ ಮನೆಗೆ ಬರುವ ವೇಳೆಗೆ, ಮನೆಯ ಬಾಗಿ ಲಲ್ಲಿ ಒಬ್ಬ ಮುದುಕ ಕಾದು ನಿಂತಿದ್ದ– "ಕೈ ಮುಗ್ದೆ ಕಣ್ರವ್ವಾ" ಎಂದ ನಮ್ರತೆಯಿಂದ.

"ಚೆನ್ನಾಗಿರಪ್ಪ. ಏನ್ಸಮಾಚಾರ ಬಂದ್ಯಲ್ಲಾ"

"ಏನಿಲ್ರವ್ವ, ನನ್ನ ಕುದುರೆ ನೆಟ್ಟಗಾಯ್ತು. ಎಲ್ಲಾ ನಿಮ್ದಯ ಕಣ್ರವ್ವಾ. ಆ ಡಾಕ್ಟ್ರು ನಿಂದಾಗೇ ನೋಡಿದ್ರವ್ವ. ಯೋಳಿ ಓಗಾನಾಂತ ಬಂದೆ"

"ನಾನೇನು ಮಾಡ್ದೆ ಮಹಾ, ಮುದುಕಪ್ಪ. ಆವತ್ತು ಕುದ್ರೇನ ಹ್ಯಾಗೆ ಕರ್ಕೊಂಡು ಹೋದ್ಯೋ ಏನೋ ಒಂದೂ ತಿಳೀಲಿಲ್ಲ."

"ನೀವು ಒಳ್ಗಿದ್ರಿ. ತೊಂದ್ರೆ ಯಾಕ್ಕೊಡೋದು ಅಂತ ಒಂಟೋದೆ ಕುದ್ರೇಗೆ ಕಟ್ಟು ಬಿಚ್ಚಿ ಕರ್ಕಂಡೋಗು ಪರ್ವಾಗಿಲ್ಲ ಅಂದ್ರು ಡಾಕ್ಟ್ರು. ನನ್ಮಗಾನ್ನ ಕರ್ಕಂಬಂದು ಎಳ್ಕೊಂಡೋಗ್ಬುಟ್ಟೆ. ಎಂಗಿದ್ರೂ ಇನ್ನು ಗಾಡಿ ಕಟ್ಕೋಕ್ಕೆ ಆಗಾಕಿಲ್ಲ ಅಂತ ಅಳ್ಳೀ ಕಡೆ ಓಗ್ಬಂದೆ. ಅತ್ತಳ್ಳಿ ಕೆಲ್ಸಾನೂ ಮುಗೀತು. ಇತ್ಕಡೆ ಕುದ್ರೇನೂ ನೆಟ್ಗಾಯ್ತು. ಎಲ್ಲಾ ಒಳ್ಳೇವ್ರುದಯದ ಆಸೀರ್ವಾದ ತಾಯಿ. ಬರ್ತೀನಿ."

"ಹಾಗೇ ಹೋಗ್ಬೇಡ ತಾಳು ಬಂದೆ. ನಿನ್ನ ಹೆಸರೇನಪ್ಪ ?"

"ರಾಮಯ್ಯ, ತಾಯಿ."

ರಾಮಯ್ಯನ ಕಷ್ಟಸುಖ ಎಲ್ಲಾ ವಿಚಾರಿಸಿ, ಅವನಿಗೊಂದು ಲೋಟ ಕಾಫಿ ಕೊಟ್ಟು ಎರಡು ರೂಪಾಯಿ ಕೈಲಿ ಕೊಟ್ಟು "ಹೋಗಿ ಬಾ" ಎಂದಳು.

"ದೇವ್ರು ನನ್ನವ್ವನ್ನ ತಣ್ಣಗಿಟ್ಟಿರಲಿ. ಯಾವಾಗಾರಾ ಗಾಡಿ ಬೇಕಾದ್ರೆ ರಾಮಯ್ಯನ್ನ ಮರೀ ಬ್ಯಾಡ್ರವ್ವ."

"ಹಾಗೇ ಆಗಲಪ್ಪ" ಎಂದಳು ಸರಳಾ.

ಒಂದು ಬಡಜೀವಿಯ ಬದುಕು ನೇರವಾಯಿತು. ಮಗ ಸಂಪಾದಿಸ್ತಾ ಇದ್ರೂ ಅವನ ಮೇಲೆ ತಾನು ಭಾರವಾಗಲು ಇಷ್ಟವಿಲ್ಲದ ಅಭಿಮಾನಿ ಮುದುಕ ತನ್ನ ಮತ್ತು ಕುದುರೆಯ ಕೈಲಾಗುವವರೆಗೂ ಗಾಡಿ ಕಟ್ಟೇ ಕಟ್ಟುತ್ತೇನೆಂಬ ಛಲವಿತ್ತು. ಬಾಪು ಮುದುಕ ಬಾಪು ಎಂದು ಹಾರೈಸಿದಳು.

ಇಂದಿರಳ ಮನೆ ತಲುಪಿದಾಗ ಸಂಜೆಯಾಗಿತ್ತು. ಮನಸ್ಸು ಉಲ್ಲಸಿತ ವಾಗಿತ್ತು. ತುಟಿಯ ಮೇಲೆ ಮೆಲುನಗೆಯನ್ನು ಹೊತ್ತು ಬರುತ್ತಿದ್ದ ಸರಳೆಯನ್ನು, ಆಗತಾನೆ ಶತಪಥ ಮುಗಿಸಿದ್ದ ರಾಯರು ನೋಡಿದರು.

ರಾಯರ ಸ್ವಭಾವ ಅದು. ಮನೆಯಲ್ಲಿದ್ದಷ್ಟು ಹೊತ್ತೂ, ಕೆಲಸವಿಲ್ಲದ ವೇಳೆಯಲ್ಲೆಲ್ಲ ದೊಡ್ಡದಾದ ತಮ್ಮ ಮನೆಯ ಹಜಾರದಲ್ಲಿ ಶತಪಥ ಸುತ್ತು

ವುದು. ಮನೆಯ ಆಗು ಹೋಗುಗಳೆಲ್ಲಾ ಅದರ ಮೂಲಕ ಅವರಿಗೆ ತಿಳಿಯುತ್ತಿತ್ತು. ಕಡೆಗೆ ಇಂದಿರಾ–ರಮೇಶರ ಚಲನವಲನಗಳೂ ಕೂಡ, ಹಜಾರದಲ್ಲಿ ಶತಪಥ ತಿರುಗುವ ಅವರ ದೃಷ್ಟಿಯಿಂದ ತಪ್ಪಿಸಿಕೊಳ್ಳುತ್ತಿರಲಿಲ್ಲ.

ಶ್ವೇತಾಂಬರಧಾರಿ ಸರಳಾ, ಮನೆಯ ಮುಂದಿನ ಕತ್ತಲ ತೋಟದೊಳಗಿಂದ ಬೆಳಕಿನ ಮನೆಯೊಳಕ್ಕೆ ಬರುತ್ತಿದ್ದಾಗ ರಾಯರಿಗೆ ಯಾವುದೋ ದೇವತೆಯ ದರ್ಶನವಾದಂತಾಯ್ತು.

ಓಹೋ ಹೋ ಎಷ್ಟು ದಿನದ ಮೇಲೆ ? ಬಾಮ್ಮಾ ಬಾಮ್ಮಾ ಸರಳಾ. ಊರಿನಲ್ಲೇ ಇದ್ಯೋ ಅಥವಾ ನಮ್ಮನೆ ಇಲ್ಲಿರೋದು ಮರೆತು ಬಿಟ್ಯೋ ಎಂದು ಆದರದಿಂದ ಸ್ವಾಗತಿಸಿದರು.

ಸುಮ್ಮನೆ ನಕ್ಕು–"ಅಂತದ್ದೇನಿಲ್ಲ, ಎಲ್ಲಿ ಸಮಯವೇ ಆಗೋಲ್ಲ.... ಇಂದಿರ ಮನೇಲ್ಲಿ ಇಲ್ವೇನು ?" ಎಂದು ತಲೆಯೆತ್ತಿ ರಾಯರೆಡೆಗೆ ನೋಡದೇ ಕೇಳಿದಳು.

ಅವಳ ಪ್ರಶ್ನೆ ಅನವಶ್ಯಕವಾಗಿತ್ತು. ಸಾಧಾರಣವಾಗಿ ಇಂದಿರಳ ಇರವನ್ನು ಅವಳ ರೇಡಿಯೋ ಸಾರುತ್ತಿತ್ತು, ರಾಯರ ಮನೆಯಲ್ಲಿ ರೇಡಿಯೋ ಸದ್ದಿದ್ದರೆ ಡಾ|| ಇಂದಿರಾ "ಇನ್" ಇಲ್ಲದಿದ್ದರೆ "ಔಟ್" ಈ ವಿಷಯ ಇಂದಿರಳ ಪರಿಚಿತರೆಲ್ಲರಿಗೂ ಗೊತ್ತು.

"ಇಲ್ಲಮ್ಮ. ಯಾವುದೋ 'ಅರ್ಜೆಂಟ್ ಕೇಸ್ ಬಂದಿದೆ ಬರ್ಬೇಕು, ಅಂತ ಫೋನು ಬಂತು, ಐದು ಗಂಟೇಗೇ ಹೋದ್ಲು. ಇನ್ನೇನು ಬರೋ ಹೊತ್ತು. ಅವಳಿಲ್ದೆ ಇದ್ರೆ ನೀನು ಬರಲೇ ಬಾರ್ದೇನು ?"–ಸೂಕ್ಷ್ಮವಾಗಿ ನೋಡಿದರು ರಾಯರು.

ಈ ದೃಷ್ಟಿಯನ್ನೇ ಸರಳೆ ಅಸಹ್ಯಪಟ್ಟುಕೊಳ್ಳುತ್ತಿದ್ದುದು. ರಾಯರು ಸುಂದರಾಂಗರಲ್ಲದಿದ್ದರೂ ಭೀಮಕಾಯರು. ಸರಳಾ ಅವರನ್ನು ಎಂದೂ ತಲೆಯೆತ್ತಿ ಮಾತನಾಡಿಸುತ್ತಿರಲಿಲ್ಲ. ಗೌರವಕ್ಕಾಗಿ ಅಲ್ಲ. ಅವರ ದೃಷ್ಟಿ ಎದುರಿಸುವ ಎದೆಗಾರಿಕೆ ಸರಳೆಗಿರಲಿಲ್ಲ. ಅವರು ಅವಳನ್ನು ಮಾತ್ರ ಹಾಗೆ ನೋಡುವರೋ ಇಲ್ಲ ಅವರ ದೃಷ್ಟಿಯೇ ಹಾಗೋ ಅವಳಿಗೆ ತಿಳಿಯದು. ಅವಳಿಗಂತೂ ಅವರು ಎದುರಿಗಿದ್ದರೆ ಏನೋ ಒಂದು ವಿಧವಾಗಿ ಜುಗುಪ್ಸೆಯಾಗುತ್ತಿತ್ತು. ಇಂದಿರಳ ಮನೆಗೆ ಬರದೆ ಇರಲು ಇದ್ದ ಪ್ರಬಲ ಕಾರಣ ಅದೇ ಆಗಿತ್ತು. ಮತ್ತೆಲ್ಲಾ ಕಾರಣಗಳು ನೆಪಮಾತ್ರ.

ರಾಯರಿಗೆ ದೇವರು ಯಾವುದಕ್ಕೂ ಕಡಮೆ ಮಾಡಿರಲಿಲ್ಲ. ಆದರೆ ಅವರು ಜೀವನದ ರಸವನ್ನು ಪೂರ್ತಿ ಹೀರುವ ಮುನ್ನವೇ ಪತ್ನಿಯನ್ನು ಕಳೆದುಕೊಂಡಿದ್ದರು. ಶ್ರೀ ರಾಮಚಂದ್ರನಷ್ಟು ಏಕಪತ್ನೀವ್ರತರಾಗಿದ್ದ ರಾಯರಲ್ಲಿ ಪತ್ನೀವಿಯೋಗ ದೊಡ್ಡ ಮಾರ್ಪು ತಂದಿತು. ಚಿಕ್ಕಮಕ್ಕಳಾದ ಶ್ರೀಧರ, ಮುರಳೀಧರ, ಇಂದಿರೆಯರನ್ನು ಮಲತಾಯಿಯ ಪೋಷಣೆಯಲ್ಲಿಟ್ಟು ಜೀವನವನ್ನು ಗಂದರಗೋಳ ಮಾಡಿಕೊಳ್ಳಲು ಅವರು ಇಷ್ಟಪಡಲಿಲ್ಲ. ಮಕ್ಕಳ ಪೋಷಣೆಯೇ ತಮ್ಮ ಹೆಚ್ಚಿನ ಕರ್ತವ್ಯವೆಂದು ತಮ್ಮ ಬಯಕೆ ಕೋರಿಕೆಗಳನ್ನು ಅದುಮಿಡಲು ಯತ್ನಿಸಿದರು.

ಪಾಪ! ರಾಯರು ಅಷ್ಟು ಸಂಯಮಿಗಳಲ್ಲ. ಮಕ್ಕಳ ಪೋಷಣೆಗೆ ದಾದಿ ಬಂದಳು. ಅಡಿಗೆ ಕೆಲಸಕ್ಕೆ ನಿರಂತರವಾಗಿ ಜಾನಕಮ್ಮ ನೇಮಿಸಲ್ಪಟ್ಟರು. ಇನ್ನು ರಾಯರಿಗೇನಿದೆ ಕೆಲಸ. ಅವರ ಎಲ್ಲಾ ಕೋರಿಕೆಗಳು ಒಮ್ಮೇಲೆ ಅವರನ್ನು ಮುತ್ತಿ ಕಾಡಲು ಆರಂಭಿಸಿದುವು. ರಾಯರ ಮನ ಜಾರಿತು. ಬೆಲೆವೆಣ್ಣುಗಳ ಶರಣು ಹೋದರು.

ತಾವು ಮಾಡುತ್ತಿರುವುದು ತಪ್ಪೆಂದು ಅವರಿಗೆಂದೂ ಅನ್ನಿಸಲಿಲ್ಲ. ಮಕ್ಕಳಿಗೆ ಅನ್ಯಾಯ ಮಾಡದೆ ತಮ್ಮ ತೃಪ್ತಿಯನ್ನೂ ಒದಗಿಸಿಕೊಂಡದ್ದು ಅವರಿಗೆ ಒಂದು ವಿಧದಲ್ಲಿ ಆತ್ಮ ತೃಪ್ತಿಯಾಗಿತ್ತು.

ರಾಯರಲ್ಲಿದ್ದ ಈ ದುರ್ಬಲತೆ ಯಾರಿಗೂ ಏನೂ ಹಾನಿ ಮಾಡುತ್ತಿರಲಿಲ್ಲ. ಸರಳೆಗೂ ಗೊತ್ತು, ರಾಯರು ಯಾವ ಆಸೆಯಿಂದಲೂ ತನ್ನನ್ನು ಆ ರೀತಿ ನೋಡುತ್ತಿಲ್ಲವೆಂದು. ಆದರೂ ರಾಯರ ಅತೀ ಸಲಿಗೆಯ ಸನಿಹದ ದೃಷ್ಟಿ ಅವಳಿಗೆ ಬೇಡ. ತಾನು ಅವರ ಮಗಳಂತಲ್ಲವೆ ? ಅವರು ಯಾಕೆ ಹಾಗೆ ತನ್ನನ್ನು ನೋಡಬೇಕು. ಎಂಬುದು ಅವಳಿಗೆ ಬಹಳ ಕಳವಳದ ವಿಷಯ.

ಸರಳೆ ತಲೆ ಎತ್ತದೆ ಮಾತನಾಡಿದಾಗ ರಾಯರ ಅಭಿಮಾನಕ್ಕೆ ಧಕ್ಕೆ ಬಂದಿತು. 'ನನ್ನ ಮಗುವಿನೊಂದಿಗೆ ಮಗುವಾಗಿ ಓಡಾಡಿದ ಸರಳೆಗೆ ನನ್ನ ಎದುರಿಗೆ ಸಂಕೋಚವೆ ? ಬೆಳೆದು ದೊಡ್ಡವಳಾದುದಕ್ಕೆ ನಾಚಿಕೆಯೆ? ಅಲ್ಲವೇ ಅಲ್ಲ. ನಾನೇನು ನೋಡುತ್ತಿಲ್ಲವೆ. ರಮೇಶನೊಂದಿಗೆ ಸಹ ಮುಖಕ್ಕೆ ಮುಖ ಕೊಟ್ಟು ನಗು ನಗುತ್ತಾ ಮಾತನಾಡುವ ಸರಳಾ ನನ್ನಂತ ಮುದುಕನೊಂದಿಗೆ

ವಿಮುಖಳಾಗಲು ಕಾರಣ? ಹೋಗಲಿ ಹುಡುಗಿ ಎಲ್ಲಾದರೂ ಸುಖವಾಗಿರಲಿ, ನನ್ನೊಂದಿಗೆ ಮಾತನಾಡದಿದ್ದರೆ ಏನಾಯಿತು. ಇಂದಿರೆಗೆ ಒಳ್ಳೆಯ ಗೆಳತಿ. ಅಷ್ಟು ಸಾಕು.

ಎಲ್ಲಾ ಸರಿ, ಯಾಕೆ ಅವಳು ಮದುವೆ ಮಾಡಿಕೊಳ್ಳಲಿಲ್ಲವೋ. ಪಾಪ. ತಾಯಿ ತಂದೆಯಿದ್ದಿದ್ದರೆ ಚೆನ್ನಾಗಿತ್ತು. ಅಣ್ಣಂದಿರು ಈಗಿನ ಕಾಲದ ಹುಡುಗರು. ಶುದ್ಧ ಬೇಜವಾಬ್ದಾರಿ. ಚಿನ್ನದಂತಹ ಹುಡುಗಿ ಅನ್ಯಾಯ ವಾಗಿ ಯೌವನವನ್ನು ಕಳೆದು ಬಿಡುವುದೆ? ಇಷ್ಟು ಚಿಕ್ಕವಳಿಗೇಕೆ ಈ ವೈರಾಗ್ಯ ?" ಹೀಗೇ ಅವರ ಯೋಚನಾ ಸರಣಿ ನಡೆದಿತ್ತು.

ರಾಯರ ದೃಷ್ಟಿ, ಅದರ ಹಿಂದೆ ಅಡಗಿದ್ದ ತರ್ಕ ಅವರ ಮನಸ್ಸಿನಲ್ಲಾ ಗುತ್ತಿದ್ದ ತುಮುಲಗಳನ್ನು ಸರಳೆಗೆ ಹೇಳುವವರಾರಿದ್ದರು.

"ಕೂತ್ಕೋಮ್ಮಾ ಸರಳಾ. ಅವಳು ಬರೋವರ್ಗೂ ನಿಂತೇಯಿರ್ತೀ ಯೇನು ?"

ತೆಪ್ಪಗೆ ಕುಳಿತುಬಿಟ್ಟಳು ಸೋಫಾದಲ್ಲಿ. ಕೆಲವೇ ನಿಮಿಷಗಳಲ್ಲಿ ಹೊರಡಲು ಚಡಪಡಿಸಲಾರಂಭಿಸಿದಳು.

"ಫೋನ್ ಮಾಡ್ತೀನಿ ತಾಳಮ್ಮ. ನೀನೇನೋ ಬಹಳ ಅವಸರದಲ್ಲಿದ್ದ ಹಾಗಿದೆ"

'ಛೆ, ಅವರಿಗೆ ಹೇಗೆ ತಿಳಿಯಿತು ತನ್ನ ಮನೋಭಾವ' ಎಂದುಕೊಂಡಳು ಸರಳಾ. ಫೋನ್ ಮಾಡಲು ತಮ್ಮ ಕೋಣೆಗೆ ಹೋದರು ರಾಯರು.

ಸರಳಾ ಕುಳಿತಲ್ಲಿಯೇ ಇದ್ದಳು. ಯಾರೋ ಬಾಗಿಲು ತಟ್ಟಿದಂತಾಯ್ತು. ರಾಯರ ಸ್ನೇಹಿತರಿರಬಹುದೇನೋ ಎಂದು ಕಲ್ಪಿಸಿಕೊಂಡ ಸರಳೆಯ ಊಹೆ ತಪ್ಪಾಯಿತು.

ಬಂದಿದ್ದವಳು ಭಾರತಿ. ಭಾರತಿಯ ಮುಖ ಕಂಡ ಕೂಡಲೇ ಸಾವಿರ ಚೇಳು ಒಮ್ಮೆಲೆ ಕುಟುಕಿದಂತಾಯಿತು ಸರಳೆಗೆ. ತನ್ನ ಆಶ್ಚರ್ಯ, ಭಯ ಕೋಪಗಳನ್ನು ನುಂಗಿಕೊಂಡು 'ಬನ್ನಿ' ಎಂದು ಆಹ್ವಾನಿಸಿದಳು.

ಅವಳು ಯಾರಿಗಾಗಿ ಬಂದಿರಬಹುದು ಎಂಬ ಊಹೆ ಕೂಡ ಸಾಧ್ಯ ವಾಗಲಿಲ್ಲ ಸರಳೆಗೆ. ಮುಖಚರ್ಯೆಯಲ್ಲಿ ಯಾವ ಬದಲಾವಣೆಯೂ ಇಲ್ಲದೆ

ಒಳಗೆ ಬಂದ ಭಾರತಿ "ಅದೇನು ನೀವಿಲ್ಲಿ" ಎಂದಳು. ಅವಳಂದ ರೀತಿಯಲ್ಲಿ "ಈ ಮನೆ ನನ್ನದು ನೀನೇಕೆ ಬಂದೆ ?" ಎನ್ನುವ ಮನೋಭಾವವಿತ್ತು.

ಸರಳೆಗೆ ಉತ್ತರಿಸುವ ಇಷ್ಟವಾಗಲಿಲ್ಲ. ಉತ್ತರ ಕೊಡುವ ಕಷ್ಟವೂ ತಪ್ಪಿತು. ರಾಯರು ಬಂದಿದ್ದರು–"ಬಾ ಭಾರತಿ ನೀ ಬರಬಹುದು ಎಂದು ಎಣಿಸಿದ್ದೆ ಅಷ್ಟರಲ್ಲಿ ಸರಳಾ ಬಂದಳು" ಎಂದರು ರಾಯರು.

ಈ ಮಾತಿಗೆ ಭಾರತಿ ಬುಸುಗುಟ್ಟಿದಳು ಒಳಗೊಳಗೇ. "ಏನು ನನ್ನ ಬದಲಿಗೆ ಇವಳೇ" ಎಂದು ಗೊಣಗಿಕೊಂಡಳು.

ಅದೇ ಸಮಯದಲ್ಲಿ ಸರಳಾಳ ಮನ ಉಗುಳಿತು "ಛೆ ಇವಳಿಗೆ ತಾನು ತುಲನೆಯೆ ! ರಾಯರ ಕಡೆಗೆ ತಿರುಗಿ "ಇಂದಿರಾ ಏನು ಹೇಳಿದಳು" ಎಂದು ಕೇಳಿದಳು. ಅವಳ ಹೊಳೆಯುವ ಕಣ್ಣುಗಳ ಕಾಂತಿಯನ್ನು ರಾಯರು ನೋಡಿದರು. ಅಗ್ನಿಯಿತ್ತು ಜಾಜ್ವಲ್ಯಮಾನವಾಗಿ, ಸರಳಾ ಬೆಂಕಿಯಷ್ಟು ಪವಿತ್ರಳು ಎಂದುಕೊಂಡರು ರಾಯರು.

"ಹೊರಟಿದ್ದಾಳಂತಮ್ಮ. ಇನ್ನೇನು ಬರ್ತಾಳೆ. ಈಕೆ ಗೊತ್ತೇನು ನಿಂಗೆ ? ಭಾರತೀಂತ, ನನ್ನ ಹಳೆಯ ಗೆಳೆಯ ಚಂದ್ರಶೇಖರಯ್ಯನೋರ ಮಗಳು. ಎಂ. ಎ. ಮಾಡಿದ್ದಾಳೆ. ಇಲ್ಲೇ ಒಂದು ಕಂಪನೀಲಿ ಕೆಲ್ಸ ಮಾಡ್ತಾಳೆ"

ಸರಳಾ ಏನೂ ಮಾತನಾಡಲಿಚ್ಛಿಸಲಿಲ್ಲವಾದರೂ "ಗೊತ್ತು ಒಮ್ಮೆ ನೋಡಿದ್ದೀನಿ" ಎಂದಳು. ಎಲ್ಲಿ ನೋಡಿದೆ, ಹೇಗೆ ಗೊತ್ತು ಎಂದು ಹೇಳಲಿಲ್ಲ ಅವಳು.

"ಭಾರತಿ, ಇವಳು ಸರಳಾಂತ. ನಮ್ಮ ಇಂದಿರಾಗೆ ಪರಮಸ್ನೇಹಿತೆ, ಇಲ್ಲೇ ಆಫೀಸರಾಗಿದ್ದಾಳೆ. ಬಹಳ ಒಳ್ಳೆಯವಳು" ಎಂದು ಪರಿಚಯ ಮಾಡಿದರು.

ದರ್ಪದಿಂದ 'ನಮಸ್ತೆ' ಎಂದು ಹೇಳಿ ಅಲ್ಲಿಯೇ ಇದ್ದ ಪೇಪರನ್ನು ಓದುವ ನಟನೆ ಮಾಡಿದಳು ಭಾರತಿ. ಅವಳಿಗೆ ದರ್ಪ ಎನ್ನುವುದಕ್ಕಿಂತ, ಸರಳೆಯನ್ನು ಕಂಡು ಭಯವಾಗಿತ್ತು. ತನ್ನ ಗುಟ್ಟು ಬಯಲಾಗಿ ಬಿಡಬಹುದೆಂಬ ಕಾತರವಿತ್ತು. ಅವಳ ಮುಖಭಾವದಿಂದಲೇ ಅದನ್ನರಿತ ಸರಳಾ ತನ್ನೊಳಗೇ ನಕ್ಕಳು.

"ನೀನು ಬೇಕಾದ್ದು ಮಾಡಬಹುದು ಭಾರತಿ. ಆದರೆ ನಾನು ನಿನ್ನ ಮಟ್ಟಕ್ಕೆ ಇಳಿಯೋದಿಲ್ಲ. ಎಂದೆಂದಿಗೂ ನನಗೆ ಆ ಶಕ್ತಿಯಿಲ್ಲ. ಉರುಳೋ ಸಂಸಾರಾನ್ನ ಕೈಲಾದ್ರೆ ಎತ್ತಿ ನಿಲ್ಲಿಸಬಲ್ಲೆನೇ ಹೊರತು ಚಿಗುರೋ ಕುಡಿಗಳ್ನ ನಶಿಸಿ ಹಾಕಲಾರೆ. ನೀನೆಲ್ಲಿ ಹೋದ್ರೆ ನನಗೇನು. ನೀ ಮಾಡಿದ್ದನ್ನ ನೀನೇ ಉಣ್ತೆ. ಅದರಲ್ಲಿ ನನ್ನದೇನು ಗೊಡವೆ" ಎಂಬಂತಿತ್ತು ಅವಳ ನಗು. ಆ ನಗುವಿನೊಂದಿಗೇ ಅವಳಿಗೆ ಆತ್ಮವಿಶ್ವಾಸ ಬಂದಂತಾಯ್ತು. ಆ ವಿಶ್ವಾಸ ವನ್ನು ಹೆಚ್ಚು ಮಾಡುವಂತೆ, ಇಂದಿರಾ ಬಂದಳು.

"ಇದೇನು ! ಸರಳಾ ! ನಾನು ನೋಡ್ತಾ ಇರೋದು ಕನಸಲ್ಲ ತಾನೇ" ಎಂದು ಓಡಿ ಬಂದು ಸರಳಾಳ ಕೈ ಹಿಡಿದು "ಅದೇನು ಆಫಿಸರಮ್ಮಾವ್ರು ಇಷ್ಟು ದೂರ ಪರಾಂಬರಿಸಿದ್ದಾರೆ, ಈ ಭಕ್ತಳ ಮೇಲೆ ಕರುಣೆ ತೋರಿ...."

"ಉಶ್" ಎಂದು ಬಾಯಿ ಮುಚ್ಚಿದಳು ಸರಳಾ. ಒಬ್ಬರ ಹೆಗಲ ಮೇಲೊಬ್ಬರು ಕೈ ಹಾಕಿ ಹೊರಟರು. ಈ ಜೋಡಿ ನೋಡಿ ರಾಯರಿಗೆ ಮಹದಾನಂದವಾಯಿತು. ನೋಡುತ್ತಾ ನಿಂತುಬಿಟ್ಟರು ಮತ್ತೂ ಅಂದರು–

"ನೋಡಿದ್ಯಾ ಭಾರತಿ ನನ್ನ ಮಕ್ಕಳಿಬ್ರನ್ನೂ."

ಭಾರತಿ, ಮೆಲ್ಲಗೆ ಪೇಪರಿನಿಂದ ಮುಖವೆತ್ತಿ ನೋಡಿದಳು ಇಂದಿರೆಯ ಕಡೆಗೆ. ಸಮುದಾಚಾರದ ನಿಯಮಗಳನ್ನು ತಿಳಿದ ಇಂದಿರ "ಹಲೋ" ಎಂದು ಮುಗುಳುನಕ್ಕಳು. ಪ್ರತ್ಯುತ್ತರದ 'ಹಲೋ' ಬಂದಿತು ಭಾರತಿ ಯಿಂದ.

ತಮ್ಮ ತಂದೆಯ ಸ್ನೇಹಿತರಾದ ಆಗರ್ಭ ಶ್ರೀಮಂತ ರಾಯರಮಗಳು, ಸರಳೆಯೆಡೆಗೆ ತೋರುವ ಸ್ನೇಹವನ್ನು ತನ್ನೆಡೆಗೆ ತೋರದೆ ಇರುವುದು ಅಸಮಾಧಾನಕ್ಕೀಡಾತ ಅಸೂಯೆಯನ್ನು ಕೆದರಿತು ಭಾರತಿಯಲ್ಲಿ. ಮೃದುವಾಗಿ ಒಲಿಸಿಕೊಳ್ಳುವವಳಂತೆ ಪ್ರೇಮದ ನುಡಿಗಳಲ್ಲಿ––"ಯಾಕೀದೂ, ಇಷ್ಟು ಲೇಟಾಯ್ತು. ಏಳು ಬೇಗ ಕೈ ಕಾಲು ತೊಳೆದು ಟಿಫ಼ಿನ್ ತೊಗೊಳ್ಳುವೆಯಂತೆ ಮಾವಯ್ಯಾನೂ ನಿನಗಾಗಿ ಕಾಯ್ತಾ ಇದಾರೆ" ಎಂದಳು.

ಜೇನು ಸುರಿಯಿತು ಬಿನ್ನಾಣದ ನುಡಿಯಲ್ಲಿ.

ಭಾರತಿಯನ್ನು ಕಂಡರಿಯದವಳಲ್ಲ ಇಂದಿರ—"ನಂಗೀಗೇನೂ ಬೇಡ. ಥ್ಯಾಂಕ್ಸ್, ನಂಗೋಸ್ಕರ ಸರಳಾ ಬಂದು ಕಾಯ್ತಾ ಇದಾಳೆ. ನಾವಿಬ್ರು

ಆಮೇಲೆ ತೊಗೋತೀವಿ....ಬಾ ಸರೂ...." ಎಂದು ಗೆಳತಿಯನ್ನು ಎಳೆದು ಕೊಂಡೇ ಮಹಡಿ ಹತ್ತಿ ತನ್ನ ಕೋಣೆಗೆ ಹೋದಳು.

ಇಂದಿರಳ ನುಡಿ, ನಡೆದ ಭಾವ ಸರಳಿಗೊಂದು ವಿಜಯವನ್ನು ತಂದಂತಿತ್ತು.

"ಈ ಮನೆಯಲ್ಲಿ ನಾನು ಒಡತಿ, ಸರಳ ನನ್ನ ಗೆಳತಿ. ನಾವಿಬ್ಬರಾದ ಮೇಲಲ್ಲವೆ ನೀನು" ಎಂಬಂತ್ತಿತ್ತು ಇಂದಿರೆಯ ಚಲನವಲನ. ಭಾರತಿಗೆ ಹೊಟ್ಟೆ ಉರಿದು ಹೋಯಿತು,

"ಮಾವಯ್ಯ ನಾ ಬೇಗ ಹೋಗ್ಬೇಕು. ಬರ್‍ತೀನೀಂತ ಹೇಳಿದ್ನಲ್ಲಾಂತ ಬಂದೆ. ಅಂತೂ ಇಂದಿರ ಬಹಳ ಬದಲಾಗಿ ಹೋಗಿದ್ದಾಳೆ ಮಾವಯ್ಯ."– ಮತ್ಸರದಿಂದ ನುಡಿದಳು,

ಹೊಗಳುತ್ತಿದ್ದಾಳೆಂದು ರಾಯರು–"ಹೌದಮ್ಮ ನಂಗದೇ ಸಂತೋಷ. ಸರಳ ರಮೇಶ್ ಇಬ್ರೂ ನ್ ಇಂದಿರಳ ಜೀವನದಲ್ಲಿ ಎರಡು ಸ್ತಂಭಗಳು. ಒಂದೇ ಹೆಣ್ಣಾಗಿ ಬೆಳೆದು, ಅರ್ಥ ಕೆಟ್ಟಿದ್ದ ಅವಳನ್ನ ಚೆನ್ನಾಗಿ ಮಾಡಿದ್ದಾರೆ. ನನ್ನ ತುಂಗಾ ಇದ್ದಿದ್ದರೆ ಈವತ್ತು ಎಷ್ಟು ಸಂತೋಷಪಡ್ತಿದ್ಲೋ ?"ಎಂದು ನಿಟ್ಟುಸಿರುಬಿಟ್ಟರು,

ರಾಯರಾಡಿದ ಯಾವ ಮಾತೂ ಭಾರತಿಯ ಮೆದುಳಿನಲ್ಲಿ ನುಸುಳಲೇ ಇಲ್ಲ. ಅವಳ ಮಾತೇ ಅವಳಿಗೆ–"ಸರಳಾಗೂ ಇಂದಿರಾಗೂ ಸ್ನೇಹ ಹೇಗಾಯ್ತು ಮಾವಯ್ಯ, ಇಂದೂ ನೋಡಿದ್ರೆ ಜೀವನಾನ್ನ ತುಂಬಾ ಪ್ರೀತಿ ಸೋವ್ಳು. ಸರಳಾನೋ ವೈರಾಗ್ಯದ ಗೊಡ್ಡು"

"ಛೆ, ಛೆ. ಹಾಗನ್ನ ಬೇಡ ಭಾರತಿ. ಯಾವ ಹುತ್ತದಲ್ಲಿ ಯಾವ ಹಾವೋ ! ಸರಳಾ ಒಂದು ಆಣಿಮುತ್ತು ಭಾರತಿ, ಸಾವಿರ ಮುತ್ತುಗಳಿಗೂ ಇಂತಹ ಒಂದು ಘಟ್ಟಿ ಮುತ್ತು ಇರೋಲ್ಲಮ್ಮ. ಅವಳ ನಿರಾಡಂಬರ ನೋಡಿ ಹಾಗಂದ್ಕೋಬೇಡ. ಇವರಿಬ್ರ ಸ್ನೇಹ ಕೇಳ್ದಿ ಅಲ್ವಾ ನೀನು ? ಚಿಕ್ಕವರಿದ್ದಾಗಿನಿಂದ ನಮ್ಮ ಮುರುಳೀನೂ ಸರಳಾನೂ ಕ್ಲಾಸ್‌ಮೇಟ್ಸು. ಅವರಿಬ್ರು ಒಂದು ಕ್ಲಾಸಾದ್ರೂ ಸ್ನೇಹ ಬೆಳೆದದ್ದು ಇವರಿಬ್ರಲ್ಲಿ. ಮಧ್ಯೆ ಒಂದು ಹತ್ತು ವರ್ಷ ಅವಳು ಬೆಂಗಳೂರ್‍ಗೆ ಹೊರಟು ಹೋಗಿದ್ಲು. ಈಗ ಇಲ್ಲೆ ಕೆಲ್ಸ ಆಯ್ತಿಗೆ. ಒಳ್ಳೆ ಹಕ್ಕಿ ಯಾರ ಬಲೆಗಾಗಿ ಕಾಯ್ತಾ ಇದ್ಯೋ."

ಸರಳೆಯ ಹೊಗಳಿಕೆಯನ್ನೇ ಕೇಳುತ್ತಾ, ಎಷ್ಟು ಹೊತ್ತು ಕುಳಿತಿರ್ತಾಳೆ ಭಾರತಿ, ಎದ್ದು ನಿಂತಳು "ನಾ ಬರ್ತೀನಿ ಮಾವಯ್ಯ."

"ಒಳ್ಳೇದಮ್ಮ ಹೋಗಿ ಬಾ" ಎಂದರು ರಾಯರು.

ಭಾರತಿಯ ನಿರೀಕ್ಷೆಗೆ ನಿರಾಸೆಯಾಯಿತು. 'ನಿಂತ್ಕೋ ಕಾರಿನಲ್ಲಿ ಕಳಿಸ್ತೀನಿ' ಎಂದೋ 'ರಮೇಶ ಬರಲಿ ಜೊತೇಗೆ ಕಳಿಸ್ತೀನಿಂತ್ಲೋ' ಹೇಳ ಬಹುದೆಂದು ನಿರೀಕ್ಷಿಸಿದ್ದಳು.

ರಾಯರಿಗೆ ಇದು ತೋಚಲಿಲ್ಲ. ತೋಚಿದ್ದರೂ ಇಂದಿರಳ ವಹಿವಾಟಿ ನಲ್ಲಿದ್ದ ಕಾರನ್ನು ಅವಳನ್ನು ಕೇಳದೆ ರಾಯರು ಉಪಯೋಗಿಸುತ್ತಿರಲಿಲ್ಲ. ಇಂದಿರಾ, ಭಾರತಿಯರು ಅಷ್ಟೇನೂ ಸನ್ನಿಹಿತವಾಗಿ ನಡೆದುಕೊಳ್ಳದ್ದರಿಂದ, ಆ ಯೋಚನೆ ಬಿಟ್ಟು ಬಿಡುತ್ತಿದ್ದರು ರಾಯರು.

* * * *

ಕೋಣೆ ಸೇರಿದ ಗೆಳತಿಯರಿಗೆ ಏನು ಮಾತನಾಡಬೇಕೆಂಬುದೇ ತೋಚ ಲಿಲ್ಲ. ಭಾರತಿಯ ಆಗಮನದಿಂದ ವಾತಾವರಣವೇ ಕಲಕಿ ಹೋಗಿತ್ತು. ಒಂದೈದು ನಿಮಿಷದ ನಂತರ ಇಂದಿರ–"ಅದೇನು ಸರೂ. ಈ ಹೊತ್ತಿನಲ್ಲಿ ಬಂದೆ ? ಫೋನ್ ಮಾಡಿದ್ರೆ ನಾನೇ ಬರ್ತಿದ್ನಲ್ಲಾ" ಎಂದಳು.

ಸರಳೆಯ ಕಣ್ಣು ಮುಂದೆಲ್ಲಾ ಭಾರತಿಯ ಚಿತ್ರವೇ ನಾಟ್ಯವಾಡುತ್ತಿದ್ದು ದರಿಂದ, ಇ ದಿರಳ ಮಾತಿನ ಕಡೆಗೆ ಅವಳ ಧ್ಯಾನ ಹರಿಯಲಿಲ್ಲ, ಎಚ್ಚೆತ್ತವ ಳಂತೆ "ಹ್ಞಾ ? ಏನಂದೆ ?.... ಇಂದೂ. ಈ ಭಾರತಿ ನಿಮ್ಮನೇಗೆ ಹೇಗೆ ಪರಿಚಯ ?" ಎಂದಳು. ಮುಖದಲ್ಲಿ ಕಳವಳ ತುಂಬಿ ನಿಂತಿತ್ತು.

"ಅವಳ ಸಮಾಚಾರ ಯಾಕ್ಸರ್ರಾ ಈವಾಗ ? ನಮ್ಮಪ್ಪಯ್ಯನ ಸ್ನೇಹಿತ್ರು ಚಂದ್ರಶೇಖರಯ್ಯ ಅಂತ ಇದ್ರಂತೆ. ಆತ ಈಗ ಇಲ್ಲ. ಅವರ ಮಗಳು ಇವಳು. ಇವಳಿಗೆ ಒಬ್ಬಕ್ಕ, ಒಬ್ಬಣ್ಣ ಇದ್ದಾರೆ. ಅವನು ಪೋಲೀ ಪಟಾಲಂ ಆಗಿ ಮೂರುಕಾಸಿಗೂ ಪ್ರಯೋಜನವಿಲ್ದೆ ಬೆಳೆದು ಕಡೇಗೆ ಮಿಲಿಟರಿ ಸೇರಿಕೊಂಡ. ದೊಡ್ಡವಳು, ಯಾರೋ ಕ್ಲಾಸ್‌ಮೇಟಂತೆ ಒಬ್ಬ ಮುಸಲ್ಮಾನ. ಸಂಪ್ರದಾಯದ ನೆರಳಲ್ಲಿ ಬೆಳೆದ ತಾಯಿ ಬೇಡಾಂತ ಹೇಳ್ಬಿದ್ರೂ, ಅವನ್ನ

ಮದ್ವೆ ಮಾಡ್ಕೊಂಡು ಹೊರಟೋದ್ಲು. ಆ ದುರದೃಷ್ಟ ತಾಯಿಗೆ ಕಡೇ ಮುದ್ದಿನ ಮಗಳು ಈ ಭಾರತಿ. ಇವಳೂ ಸ್ವಲ್ಪ ಹಾಗೆ ಹಾಗೇನೇ ಅಂತ ಕೇಳಿದೀನಿ."

"ಅವಳು ಎಂತಾವ್ಳು ಅನ್ನೋದು...." ಸರಳೆ ಮಾತು ಮುಗಿಸು ವಷ್ಟರಲ್ಲಿ, ಇಂದಿರಾ ತಡೆದು "ನಿನಗೆ ಗೊತ್ತೇನು ಅವಳು" ಎಂದು ಉತ್ತರಕ್ಕೆ ಕಾಯದೆ ಮುಂದುವರೆಸಿದಳು–

"ಶಿವಮೊಗ್ಗಾದಲ್ಲಿ ಕೆಲಸದಲ್ಲಿದ್ದಳಂತೆ. ಬೆಂಗಳೂರಲ್ಲಿ ಬಹಳ ದಿನ ಇದ್ಲಂತೆ. ಈಗಂತೂ ಈ ಊರಲ್ಲಿದ್ದಾಳೆ. ಆಗಾಗ ಅಪ್ಪಯ್ಯನ್ನ ನೋಡೋಕೆ ಬರ್‍ತಾ ಇರ್‍ತಾಳೆ. ಎಷ್ಟೇ ಮನಸ್ಸು ಮಾಡಿದ್ರೂ ನಂಗೆ ಅವಳ ಸ್ನೇಹಾನೇ ಯಾಕೋ ಸರಿಹೋಗೋಲ್ಲ. ಈ ವಿಷಯ ಅಪ್ಪಯ್ಯಂಗೂ ಗೊತ್ತು. ಅಪ್ಪಯ್ಯಾನೂ ಸ್ನೇಹಿತನ ಮಗಳಲ್ವಾಂತ ಸಹಾಯ ಮಾಡ್ತಿರ್‍ತಾರೆ."

"ಅಷ್ಟೇ ಆದ್ರೆ ಪರವಾಗಿಲ್ಲ. ಆದ್ರೆ ಅವಳ ಕಣ್ಣು ಇನ್ಯಾರ ಮೇಲೂ ಇಲ್ದಿದ್ರೆ ಸರಿ."

"ನಿಂಗೆಲ್ಲೋ ಹುಚ್ಚು. ಶ್ರೀಧರ, ಮುರಳಿ, ಅವಳನ್ನ ಕಣ್ಣೆತ್ತಿ ಕೂಡ ನೋಡೋಲ್ಲ," ರಾಯರು ಬಹುಶಃ ಭಾರತಿಯನ್ನು ಸೊಸೆಯನ್ನಾಗಿ ಬಯ ಸಿರಬಹುದೆಂದು ಸರಳ ಊಹಿಸಿರಬಹುದು ಎಂದು ಬಗೆದಳು ಇಂದಿರಾ.

"ನಾ ಹೇಳೋದನ್ನ ಸ್ವಲ್ಪ ಕೇಳಿಸ್ಕೊ. ಭಾರತಿ ಮನೇವ್ರು ವಿಷ್ಯ. ನಿಂಗೊತ್ತೇ ವಿನಾ ಭಾರತಿ ವಿಷ್ಯ ನಿಂಗೊತ್ತಿಲ್ಲ. ನಾ ಹೇಳ್ತಾ ಇರೋದು ನಿಮ್ಮಣ್ಣಂದಿರನ್ನು ಕುರಿತಲ್ಲ. ನಿನ್ನ–ರಮೇಶ್‌ರನ್ನು ಕುರಿತು"

"ವಾಟ್ ನಾನ್ಸೆನ್ಸ್ ! ನಿನ್ನ ತಲೇಗೆ ಏನು ಹೊಕ್ಕಿದೆ ಸರೂ ಈವತ್ತು. ಏನೇನೋ ಮಾತಾಡ್ತಿದ್ದಿ" ದಂಡಿಸುವಂತೆ ಹೇಳಿದಳು.

ಸರಳೆಯ ಕಣ್ಣಲ್ಲಿ ನೀರು ತುಂಬಿತು-"ನನ್ನ ತಪ್ಪು ತಿಳೀಬೇಡ. ಭಾರತಿ ವಿಷದ ಹುಳ, ಎರಡು ತುಂಬು ಪ್ರೇಮಿಗಳ ಪ್ರೇಮಕ್ಕೆ ಹುಳಿಹಿಂಡಿ ದೂರ ನಿಂತು ಆಟ ನೋಡಿದವಳು ಭಾರತಿ, ಅವಳ ಹೆಸ್ರು ಕೇಳಿದ್ರೇನೇ ಮೈ ಉರಿಯುತ್ತೆ" ಹಲ್ಲು ಕಚ್ಚುತ್ತಿದ್ದಳು ಸರಳಾ.

"ಅಂದ ಮೇಲೆ ಅವಳು ನಿನಗೆ ಚೆನ್ನಾಗೇ ಗೊತ್ತಿರಬೇಕು,"

"ಭಾರತಿಯ ಪರಿಚಯ ಇಲ್ವಾಂತ ಹೇಗೆ ಹೇಳ್ಲಿ. ನನ್ನ ಪ್ರೀತಿಯ

ಗೆಳತಿ ಬಾಳ್ನ ಹೊಸುಕಿ ಹಾಕಿದ ಆ ದ್ರೋಹೀನ್ನ ಮರೆಯೋದಾದ್ರೂ ಹೇಗೆ ಅವಳೇನೋ ನಾನು ಯಾರೂಂತ ಪರಿಚಯವೇ ಇಲ್ಲದೋಳ ಹಾಗೆ ನಡ ಕೊಂಡ್ರೂ ನನ್ನ ಹೊಟ್ಟೆಹುಣ್ಣನ್ನ ಅವಳೇನು ಬಲ್ಲಳು ಹೇಳು" ಭಾರತೀಯ ವ್ಯವಹಾರದೀದ ಘಾಸಿಪಟ್ಟು ನುಡಿದಳು.

"ಬೇಸರಪಟ್ಕೋ ಬೇಡ ಸರೂ. ನಡೆದದ್ದಾದೂ ಏನು ? ಎಷ್ಟು ನೊಂದ್ಕೊಳ್ತಾ ಇದ್ದೀ. ನೀನೇ ಇಷ್ಟು ಬಾಧೆ ಪಡಬೇಕಾದ್ರೆ ನಿನ್ನ ಗೆಳತಿ ಯಾತನೆ ಎಷ್ಟಿರಬೇಡ" ಇಂದಿರೆಯ ದನಿಯಲ್ಲೂ ಕಕ್ಕುಲತೆ ತುಂಬಿಬಂತು.

"ನಡೆದದ್ದೇನನ್ನೂ ನಾ ಹೇಳಲಾರೆ. ಹೇಳಿ ಪ್ರಯೋಜನವಾದರೂ ಏನು ? ಆದ್ರೂ ಭಾರತೀ ವಿಷ್ಯದಲ್ಲಿ ಎಚ್ಚರವಾಗಿರು. ರಮೇಶ್ ಹಣಗಾರ ಅನ್ನೋದು ಅವಳಿಗೆ ತಿಳೀಬಾರ್ದು, ರಮೇಶ್ ಅವಳನ್ನ ಹೆಚ್ಚು ನೋಡ್ದೆ ಇರೋ ಹಾಗೆ ಜಾಗರೂಕಳಾಗಿರು ಅಷ್ಟೆ."

"ನಿಂಗೆಲ್ಲೋ ಭ್ರಾಂತು. ಯಾವನೋ ಒಬ್ಬ, ಭಾರತೀಗೆ ಮರುಳಾಗಿ, ನಿನ್ನ ಗೆಳತಿ ಬಾಳು ಕೆಟ್ಟುದಕ್ಕೆ ಎಲ್ಲರೂ ಹಾಗಾಗುತ್ತೇನು. ನಿನ್ನ ಸ್ನೇಹಿತೆಯ ಗಳೆಯ, ಬಹಳ ದುರ್ಬಲ ಹೃದಯದವನಾಗಿದ್ದಿರಬಹುದು. ರಮೇಶ್ ಹಾಗಲ್ಲವಲ್ಲ. ನೂರು ಬ್ಯೂಟಿಫುಲ್ ಹುಡುಗೀರ ಮಧ್ಯೆ ಬಿಟ್ರೂ, ನನಗಾಗಿ ಹುಡುಕ್ತಾರೆ ರಮೇಶ್. ಹೆದ್ರಿಕೆ ಬೇಡ ಸರೂ. ರಮೇಶ್–ಇಂದಿರ ಒಬ್ಬರಿಗಾಗಿ ಒಬ್ಬರು ಹುಟ್ಟಿದ್ದಾರೆ. ಬ್ರಹ್ಮ ಬಂದ್ರೂ ಅವರನ್ನ ಬೇರೆ ಮಾಡಲಾರ. ಇನ್ನು ಭಾರತಿ !!!...." ಎಂದು ನಗೆ ಚಾಟಿಕೆಯ ನಗೆ ನಕ್ಕುಬಿಟ್ಟಳು.

ಸರಳಗೆ ಇನ್ನೂ ನೋವಾಯಿತು, "ಇಂತಹ ಕುರುಡು ನಂಬಿಕೆಗಳೆ ಅಲ್ಲವೆ ಆಪತ್ತುಗಳಿಗೆ ಎಡೆಮಾಡುವುದು. ಹೇಗಾದರೂ ದೇವರು ಆ ಜೋಡೀನ್ನ ಬೇಗ ದಂಪತಿಗಳನ್ನಾಗಿ ಮಾಡಿದರೆ ಸಾಕು. ವಿಷಸರ್ಪ ತನ್ನ ವಿಷ ಹರಡುವ ಮೊದಲೇ ಶುಭ ನಡೆದು ಹೋಗಬಾರದೆ ?" ಎಂದು ಮುಲುಗಿತು ಮನ.

ಅವಳ ಊಹಾ ಪ್ರಪಂಚದಲ್ಲಿ, ರಾಯರ ದುರ್ಬಲತೆಯನ್ನು ಭಾರತಿಯ ಕಡೆಗೆ ವಾಲಿಸಿ, ಅವಳು ಹೇಳುವಂತೆ ಕುಣಿಯುವ ರಾಯರನ್ನು ಕಂಡಳು. ಏನೇನೋ ಭಯ, 'ಇಂದಿರೆಗೆ ಏನೂ ಆಗಕೂಡದು. ರಮೇಶ್

ಅವಳನ್ನು ಅಗಲಕೂಡದು' ಮನಸ್ಸು ಪ್ರಶ್ನೆಗಳ ಹುಚ್ಚು ಕೂಗಾಟದಲ್ಲಿ ಸಿಕ್ಕಿಕೊಂಡು ವಿಲಿ ವಿಲಿ ಒದ್ದಾಡತೊಡಗಿತು.

ಇಂದಿರ ಸರಳೆಯನ್ನು ದೃಷ್ಟಿಸಿ ನೋಡಿ–"ನಿಜವಾಗ಼್ೂ, ನಿನಗೇನೋ ಆಗಿದೆ ಈವತ್ತು. ಅಪರೂಪಕ್ಕೆ ಬಂದ್ಯಲ್ಲಾ, ತಮಾಷೆಯಾಗಿ ಕಾಲ ಕಳೆಯೋಣ ಅದ್ಕೊಂಡೆ. ಚಿಂತೆಯಿಲ್ಲ. ಆದ್ರೂ ನಿನ್ನ ತಾಪತ್ರಯ ಏನೂ ಅಂತಾನೇ ನಂಗೆ ತಿಳೀತಿಲ್ಲ ಸರೂ. ಆಫೀಸಿನಲ್ಲಿ ಹೆಚ್ಚು ಕೆಲಸವೇನು ? ಬಹಳ ಸುಸ್ತಾಗಿ ಕಾಣ್ತಿದೀಯ" ಎನ್ನುತ್ತಲೇ ಮೆಡಿಸನ್ ಚೆಸ್ಟಿನಿಂದ ಎರಡು ಮಾತ್ರೆ ತೆಗೆದು ಜಾನಕಮ್ಮ ತಂದಿಟ್ಟ ಕಾಫಿಯೊಂದಿಗೆ ಬಲವಂತವಾಗಿ ನುಂಗಿಸಿದಳು.

ತಂದಿಟ್ಟ ತಿಂಡಿ ಆರಿಹೋಗಿತ್ತು. ಇಂದಿರೆಗೆ ಹಸಿವಿದ್ದರೂ ಸರಳೆಯ ಪರಿಸ್ಥಿತಿ ನೋಡಿ ತನಗೂ ಬೇಕೆನಿಸಲಿಲ್ಲ. ನಿಜಕ್ಕೂ ಸರಳೆಯ ಸ್ಥಿತಿ ಒಮ್ಮೆಲೆ ಚಿಂತಾಜನಕವಾಯ್ತು. ಮೈ ಬೆವರಿಡುತ್ತಿತ್ತು. ಜ್ವರ ಬಂದಿತು. ಅವಳ ತಲೆಯಲ್ಲಿ ಏನೋ ಗೊಂದಲ. ಕಣ್ಣು ಮುಂದೆ ಏನೇನೋ ದೃಶ್ಯಗಳು ಸುಮ್ಮನೆ ಗೋಡೆ ದೃಷ್ಟಿಸುತ್ತಾ ಕುಳಿತು ಬಿಟ್ಟಳು.

ಸರಳೆಯ ಸ್ವಭಾವ ತಿಳಿದ ಇಂದಿರ ಅವಳ ಅಂತರ್ ಪ್ರಪಂಚಕ್ಕೆ ಅಡ್ಡಿ ಬರಲಿಲ್ಲ. ಸರಳಾ ಥಟ್ಟೆಂದು "ಭಾರತಿ, ಬೇಡ ಹೊರಟು ಹೋಗು. ಸರ್ವನಾಶ ಮಾಡಬೇಡ" ಎಂದು ಚೀರಿ ಕುರ್ಚಿಯಿಂದ ಕೆಳಗುರುಳಿ ಬಿಟ್ಟಳು.

ಡಾಕ್ಟರ್ ಇಂದಿರೆಗೆ ತಬ್ಬಿಬ್ಬಾಯಿತು. ಬೇಗನೆ ಎದ್ದು ಒಂದು ಇಂಜೆಕ್ಷನ್ ಚುಚ್ಚಿ ಮಂಚದಮೇಲೆ ಮಲಗಿಸಿದಳು.

ಸಲ್ಪ ಹೊತ್ತಿನ ನಂತರ ಚೇತರಿಸಿಕೊಂಡ ಸರಳಾ ತನ್ನ ಬಗೆಗೆ ತಾನೇ ನಾಚಿಕೊಂಡಳು.

"ಇಂದೂ ನಾ ಮನೆಗೆ ಹೋಗ್ತೀನಿ."

"ಊಹುಂ ಈವತ್ತು ನೀನಿಲ್ಲೇ. ಎಲ್ಲೂ ಹೋಗೊ ಹಾಗಿಲ್ಲ" ಕಟ್ಟಪ್ಪಣೆ ಮಾಡಿದಳು ಡಾಕ್ಟರ್.

"ಬೇಡಮ್ಮ, ನನ್ನ ಹಾಸ್ಗೆ ಬಿಟ್ಟು ಮತ್ತೆಲ್ಲಿ ಮಲಗಿದ್ರೂ ನನಗೆ ಸರಿ ಹೋಗೊಲ್ಲ. ನಂಗೇನೂ ಆಗಿಲ್ಲ. ನಾ ಹೋಗ್ತೀನಿ" ಮೊಂಡತನ ಮಾಡಿದಳು,

ಸರಳೆಯ ಮೊಂಡುವಾದದ ಮುಂದೆ ಇಂದಿರಾ ತಗ್ಗಬೇಕು. ಅದು ನಿಯಮ.

"ಆದ್ರೆ ನೋಡು ಸರಳಾ. ಒಂದು ಪ್ರಾಮಿಸ್ ಮಾಡ್ಬೇಕು, ನನ್ನ ವಿಷ್ಯವಾಗಿ ನೀ ಯೋಚಿಸಕೂಡ್ದು. ಅಲ್ಲದೆ ಆ ಡರ್ಟಿ ಎಪಿಸೋಡನ್ನ ಮನಸ್ನಲ್ಲಿಟ್ಕೊಂಡು ಭಾರತೀನ್ನ ನೆನಸ್ಕೊಂಡು ಬೇಜಾರ್ಮಾಡ್ಕೋ ಕೂಡ್ದು. ಅದಕ್ಕೆ ಬದಲಾಗಿ ನಿನ್ನ ಪ್ರೀತಿಯ ದೇವರು ಶ್ರೀರಾಮನನ್ನಾದ್ರೂ ನೆನೆಸ್ಕೋ, ನೀನೇ ಹೇಳೋ ಹಾಗೆ ಪುಣ್ಯಾನಾದ್ರೂ ಬರುತ್ತೆ ಅದು ಬಿಟ್ಟುಬಿಟ್ಟು ಲೋಕಕ್ಕೆ ಅನ್ಯಾಯ ಮಾಡಿದ ಒಂದು ವ್ಯಕ್ತೀನ ಯಾಕೆ ಜಪಮಾಡ್ತಿ ಹೇಳು."

ಇಷ್ಟು ದಿವಸಕ್ಕೆ ಒಂದು ಸಲ ಇಂದಿರಳ ಕೈ ಮೇಲಾಯಿತು.

"ನಿಜ. ನೀ ಹೇಳೋದೂ ಸರಿ. ಮನೇಗೆ ಹೋದ ಕೂಡ್ಲೆ ಮಾಡ್ತೀನಿ ಭಜನೆ. ಈಗ ನನ್ನ ಕಳಿಸಿಕೊಡು ಪ್ಲೀಸ್"––ಎಂದು ಬೇಡಿದಳು ಸರಳಾ.

ಇಬ್ಬರೂ ಕಾರಿನಲ್ಲಿ ಇಂದಿರಳ ಮನೆ ತಲುಪಿದಾಗ ರಾತ್ರಿ ಒಂಭತ್ತು ಗಂಟೆಯಾಗಿತ್ತು. ಇಂದಿರ, ಸರಳೆಯ ಮನಸ್ಸನ್ನು ಪ್ರಸನ್ನಮಾಡಿ, ನೊಂದ ಮನವನ್ನು ದೇವರಡೆಗೆ ತಿರುಗಿಸಿ, ಹಿಂತಿರುಗಿದಳು.

ಸಂಪ್ರೀತಿಯ ಸುದ್ದಿಯನ್ನು ಕೇಳಿಬರಲು ಹೊರಟ ದುರ್ದೈವಿ ಸರಳಾ ಹೊರಲಾರದ ನೋವನ್ನು ಹೊತ್ತು ಮನೆಗೆ ಹಿಂತಿರುಗಿದಳು. ಭಾರತಿಯ ಪ್ರಕರಣದಲ್ಲಿ ತಾನು ಹೋದ ಕೆಲಸ ಕೂಡ ಮರೆತುಬಿಟ್ಟಳು.

೬

ಅಂದು ಭಾನುವಾರ. ಸರಳಾ ಸುಮಿತ್ರೆಯ ಮನೆಗೆ ಹೋಗಲು ಯೋಚನೆ ಮಾಡಿದ್ದ ದಿನ. ಆದರೆ ಸರಳಳಿಗೆ ಎಲ್ಲಿ ಹೋಗಲೂ ಮನಸ್ಸಿಲ್ಲ, ಜೀವನದಲ್ಲಿ ತಾನು ಆಸೆ ಪಟ್ಟ ತನ್ನ ಸಣ್ಣಪುಟ್ಟ ಆಸೆಗಳೂ ಸಹ ನೆರವೇರದೆ ಹೋದ ಮೇಲೆ ಆಸೆಪಟ್ಟು ಫಲವೇನು? ಅಷ್ಟಕ್ಕೂ ತನಗೇಕೆ ಸುಮಿತ್ರೆಯ ಮೇಲೆ ವ್ಯಾಮೋಹ. ಬೇಡ. ಬಂದರೆ ಮಾತನಾಡಿಸುವುದು. ಬರದಿದ್ದರೆ ಬೇಡ.

ಸುಖದಲ್ಲಿ ಉಬ್ಬುವುದೂ ಬೇಡ. ನಿರಾಶೆಯಲ್ಲಿ ತಗ್ಗುವುದೂ ಬೇಡ. ಅದೇ ತಾನೇ ಸ್ಥಿತಪ್ರಜ್ಞರ ಗುಣಗಳು, ತನ್ನ ಪಾಡಿಗೆ ತಾನೇ ನಕ್ಕಳು ಸರಳಾ, "ಸ್ಥಿತಪ್ರಜ್ಞರೆಲ್ಲಿ ತಾನೆಲ್ಲಿ" ಎಂದು. ವ್ಯಾಮೋಹ ವಾತ್ಸಲ್ಯಗಳನ್ನು ತಾನು ಬಿಡಲೇಬೇಕು. ತನಗಾರದೋ ಶಾಪವಿದೆ ಮಮತೆಗೂ ತನಗೂ ದೂರವಿರಲೆಂದು, ತಾನು ಎಷ್ಟು ಮಮತೆ ತೋರಿಸಿದರೂ ಕಡೆಗೆ ತನಗೆ ಸಿಗುವುದು ಅನಾದರಣೆ. ತಿಳಿದೂ ತಿಳಿದೂ ತಾನು ಅದೇ ಹೆಜ್ಜೆ ಇಡುತ್ತಾಳೆ. ಅದಲ್ಲವೆ ಸೋಜಿಗ. ಅಂತೂ ಮನಸ್ಸನ್ನು ಗಟ್ಟಿಮಾಡಿ, ಸುಮಿತ್ರೆ ಮಕ್ಕಳ ಯೋಚನೆಯನ್ನು ಬದಿಗೆ ತಳ್ಳಿ, ತನ್ನ ಭಾನುವಾರದ ದಿನಚರಿಯಲ್ಲಿ ಲೀನಳಾದಳು.

ಭಾನುವಾರ ರಜದ ದಿನವೆಂದು ವಿನೋದಗಳಲ್ಲಿ ಕಾಲ ಕಳೆಯುವವರ ಗುಂಪಿನಲ್ಲಿ ಅವಳು ಸೇರಿರಲಿಲ್ಲ. ಹಾಗೆಯೇ ಮನೆಯೆಲ್ಲಾ ಚೊಕ್ಕಟಮಾಡಿ, ಮೈಸುಸ್ತು ಮಾಡಿಕೊಂಡು ಇತರ ದಿನಗಳಿಗಿಂತ ಭಾರವಾಗಿ ಭಾನುವಾರ ಕಳೆಯುವವರಿಂದಲೂ ದೂರವಿದ್ದಳು. ಅವಳಿಗೆ ವಿನೋದಗಳಲ್ಲಿ ಆಸಕ್ತಿಯಿರಲಿಲ್ಲ. ಮನೆಯ ಕೆಲಸಕ್ಕೆ ಬೇರೆಯವರಿದ್ದುದರಿಂದ ಅವಳು ದಣಿಯಬೇಕಿರಲಿಲ್ಲ. ಅವಳ ದಿನಚರಿಯೇ ವಿಚಿತ್ರ ರೀತಿಯದು.

ತಲೆಗೆ ಎಣ್ಣೆನೀರು ಹಾಕಿಕೊಂಡು ಶ್ರೀರಾಮನ ಭಜನೆಯಲ್ಲಿ ತೊಡಗುತ್ತಿದ್ದಳು. ಆ ಭಜನೆಗೆ ಆದಿಯಿಲ್ಲ, ಅಂತ್ಯವಿಲ್ಲ ಇಷ್ಟು ಹೊತ್ತಿಗೇ ಆರಂಭಿಸಿ, ಇಷ್ಟು ಹೊತ್ತಿಗೇ ಮುಗಿಸಬೇಕೆಂಬ ನಿಯಮವಂತೂ ಇರಲಿಲ್ಲ.

ಅವಳ ಹೃದಯ ಏತಕ್ಕೋಸ್ಕರವೋ ನೊಂದುಕೊಳ್ಳುತ್ತಿದೆ ಎಂದು ತಿಳಿದಿದ್ದ ರಾಜಮ್ಮ ಅವಳ ಇಷ್ಟಾನಿಷ್ಟಗಳಿಗೆ ಎಂದೂ ಅಡ್ಡಿ ಬರುತ್ತಿರಲಿಲ್ಲ. ಅವಳ ಬಳಿ ತಾವು ನೌಕರಿಯಲ್ಲಿದ್ದರೂ, ಸರಳ ಆಕೆಯನ್ನು ಕೆಲಸದವಳಂತೆ ಕಂಡಿರಲಿಲ್ಲ. ಅಂತೆಯೇ ರಾಜಮ್ಮನೂ, ಸರಳ ತಮ್ಮ ಮಗಳು ಎನ್ನುವಂತೆ ಕಂಡು ಅವಳಿಗಾಗಿ ಏನು ಬೇಕಾದರೂ ಮಾಡುತ್ತಿದ್ದರು. ಅವಳ ಒಳ್ಳೆಯತನದ ಮುಂದೆ ರಾಜಮ್ಮ ಅವಾಕ್ಕಾಗಿ ಸೋಲುತ್ತಿದ್ದರು.

ಅವರ ತಮ್ಮನಿಂದ ಕಾಗದ ಬಂದಾಗ "ರಾಜಮ್ಮ ಯಾರದು ಕಾಗದ" ಎಂದು ವಿಚಾರಿಸಿದಳು, ಸಾಧಾರಣವಾಗಿ ಆಕೆಗೆ ಎಲ್ಲಿಂದಲೂ ಪತ್ರ ಬರುತಿರಲಿಲ್ಲ.

"ನನ್ನ ತಮ್ಮ ಬರೆದಿದ್ದಾನೆ. ಮಗಳು ಬಾಣಂತಿತನಕ್ಕೆ ಬಂದಿದ್ದಾಳಂತೆ. ಯಾರೂ ಸಹಾಯಕ್ಕೆ ಇಲ್ಲವಂತೆ. ಅದಕ್ಕೆ...." ಅನುಮಾನಿಸಿದ್ದರು ರಾಜಮ್ಮ

"ಅದಕ್ಕೆ ?........" ಪ್ರೋತ್ಸಾಹ ನೀಡಿದಳು ಸರಳಾ.

"ಬಂದರೆ ಅನುಕೂಲವಾಗತ್ತೆ ಅಂತ ಬರೆದಿದಾನೆ. ಆದ್ರೆ ನಂಗೆ ಹೋಗೋಕ್ಕೆ ಇಷ್ಟ ಇಲ್ಲ."

"ಛೆ, ಹಾಗಂದ್ರೆ ಹೇಗೆ ರಾಜಮ್ಮ ಸಹಾಯಬೇಕೂಂತ ಕೇಳ್ದಾಗ ಇಲ್ಲ ಅನ್ನಾರ್ದು–ನಮ್ಮ ಹತ್ರ ಇದೆ ಅಂತ ಸಹಾಯ ಮಾಡೋದಕ್ಕಿಂತ, ಅವರಿಗೆ ಅಗತ್ಯ ಬಿದ್ದಾಗೆ ಮಾಡೋ ಸಹಾಯಕ್ಕೆ ಹೆಚ್ಚು ಬೆಲೆ ಅಲ್ವೆ? ನೀವು ಹೋಗ್ಬಿಟ್ಟು ಬನ್ನಿ"

"ಹುಂ. ಬೇಕಾದಾಗ ಬರೀತಾನೆ. ನಾನು ಕಷ್ಟದಲ್ಲಿದ್ದು ಸಾಯ್ತಿ ದೀನಿ ಅಂದ್ರೂ ತಿರುಗಿ ನೋಡೋಲ್ಲ. ಅಂತವನ ಸಹಾಯಕ್ಕೆ ನಾನೀಗ ಹೋಗ್ಬೇಕಾ ?" ತಾತ್ಸಾರವಾಗಿ ನುಡಿದರು ರಾಜಮ್ಮ. ಸರಳಾ ಬಿಡಲಿಲ್ಲ–"ಅದು ಅವರ ಚಿಕ್ಕಗುಣ. ಅವ್ರು ಹಾಗಂದ್ರೂಂತ ನೀವು ಸಣ್ಣತನ ತೋರಿಸ್ಬಾರ್ದು. ಈ ಸಲ ಹೋಗ್ಬನ್ನಿ. ನಿಮ್ಮನ್ನು ಅವ್ರು ನಿಕೃಷ್ಟವಾಗಿ ನಡೆಸ್ಕೊಂಡ್ರೆ ಆಮೇಲೆ ಯಾವತ್ತು ಹೋಗ್ಬೇಡಿ ತಿಳೀತಾ? ನಂಗೂ ಅಭಿಮಾನದ ಅರ್ಥವಾಗತ್ತೆ. ನಮನ್ನೆಷ್ಟು ತುಳಿದ್ರೂ, ತುಳಿಸ್ಕೊಂಡು ಇರ್ಬೇಕೂಂತ ನಾ ಅನ್ನೋಲ್ಲ, ಆದ್ರೂ ಕರಳು ಸಂಬಂಧ ಅಷ್ಟು ಬೇಗ ಕಿತ್ಕೋಗಬಾರ್ದು ರಾಜಮ್ಮ"

ರಾಜಮ್ಮನಿಗೆ ಈ ಮಾತುಗಳು ಅಚ್ಚರಿ ತಂದುವು. 'ಅನುಭವದ ಕಮ್ಮಟದಲ್ಲಿ ಬೆಂದು ಬಂದಿದ್ದಾಳೆ ಹುಡುಗಿ. ಎಂದುಕೊಂಡರು ಮತ್ತು ಕಕ್ಕುಲತೆಯಿಂದ ಕೇಳಿದರು––

"ನಾ ಹೋದ್ರೆ ನಿಂಗ್ಯಾರು ಹೊತ್ಹೊತ್ತಿಗೆ ಮಾಡ್ತಾರೆ. ನೀನಂತೂ ನಿಂಗೇ ಏನ್ಬೇಕು ಅನ್ನೋದೂ ಸಹ ಮರೆತ್ಬಿಡ್ತೀಯಮ್ಮ"

"ಹೇಗೋ ಆಗುತ್ತೆ. ಒಬ್ಬಳಿಗೆ ಇಷ್ಟು ಬೇಯಿಸಿಕೊಳ್ಳಲಾರನೆ ?

"ಏನು ಮಾಡ್ಕೋತೀಯೋ ಏನೋಮ್ಮ. ಆರೋಗ್ಯ ನೋಡ್ಕೊ ಸರಳಾ. ಚಿಂತೆಗ್ಳು ನಮಗೆ ಯಾವಾಗ್ಲೂ ಇರುತ್ವೆ. ಅವುಗಳ್ನ ಕುರಿತು

ಯೋಚ್ನೆ ಮಾಡ್ಬಾರ್ದು. ಅದೇ ನಮ್ಮ ಮಿತ್ರರು. ಸುಖ, ಸಂತೋಷಗಳು ಎಲ್ಲೋ ಒಂದೊಂದ್ಸಲ ಮಿಂಚಿನಂತೆ ಬಂದು ಹೋಗ್ಬಿಡತ್ವೆ. ನಮ್ಗೆ ಕಡೇ ವರ್ಗ್ಗೂ ಜೊತೇಗೆ ಉಳಿಯೋದು ಚಿಂತೆಗಳೇ. ಅದಕ್ಕೆ ಬೇಜಾರು ಮಾಡ್ಕೋ ಬೇಡಮ್ಮ ಜೋಪಾನ," ತಾಯಿ ಬದಲಿಗೆ ತಾಯಾಗಿ ಹೃತ್ಪೂರ್ವಕ ಎಚ್ಚರಿಕೆ ಕೊಟ್ಟು ಹೋಗಿದ್ದರು ರಾಜಮ್ಮ.

ರಾಜಮ್ಮನ ಮಾತು ಸತ್ಯ. ಚಿಂತೆಗಳೇ ಮಾನವನ ಮಿತ್ರರು. ಆ ಚಿಂತೆಗಳನ್ನು ಬದಿಗಿರಿಸಬಲ್ಲ ಮಿತ್ರನೊಬ್ಬ ದೊರಕಿದ್ದ ಸರಳೆಗೆ, ಅವಳ ನೆಚ್ಚಿನ ದೈವ ಶ್ರೀರಾಮಚಂದ್ರ.

ಇಂದು ಮನಸ್ಸು ತೃಪ್ತಿಯಾಗುವಷ್ಟು ಶ್ಲೋಕಗಳನ್ನು ಹೇಳಿದಳು. ವೀಣೆಯ ಮೇಲೆ ಹಲವಾರು ಗೀತೆಗಳನ್ನು ನುಡಿಸಿದಳು. ನೈವೇದ್ಯ ಒಂದು ಚೂರು ಬಾಯಿಗೆ ಹಾಕಿಕೊಂಡು, ದೇವರಿಗೆ ನಮಸ್ಕರಿಸಿ ತನ್ನ ಕೋಣೆಗೆ ನಡೆದು ಬಾಗಿಲು ಹಾಕಿಕೊಂಡಳು.

ರಾಜಮ್ಮನ ದೃಷ್ಟಿಯಿಂದಲೂ ಅಗೋಚರವಾಗಿ ಉಳಿದದ್ದು ಸರಳೆಯ ಈ ಕಡೆಯ ಕೆಲಸ. ಕೋಣೆಯಲ್ಲಿ ಬಾಗಿಲು ಹಾಕಿಕೊಂಡು ಏನುಮಾಡ ಬಹುದು ಎಂದು ಎಷ್ಟು ಯೋಚಿಸಿದರೂ ಆಕೆಯ ಊಹೆಗೆ ಸಿಕ್ಕುತ್ತಿರಲಿಲ್ಲ.

ಕೆಲವು ದಿನ ಅರ್ಧಗಂಟೆಯಲ್ಲಿ ಹೊರಗಡೆ ಬರುತ್ತಿದ್ದಳು. ಮತ್ತೆ ಕೆಲವು ದಿನ ಒಂದೆರಡು ಘಂಟೆಗಳಾದರೂ ಬರುತ್ತಿರಲಿಲ್ಲ. ಮಾಡಿದ ಅಡಿಗೆ ಆರಿ ಹೋಗುತ್ತಿತ್ತು. ಆದರೂ ಪ್ರಸನ್ನಳಾಗಿ ಊಟಮಾಡುತ್ತಿದ್ದಳು. ತೃಪ್ತಿಯಿಂದ ಮಾತನಾಡುತ್ತಿದ್ದಳು, ಈ ಊಹೆಗೆ ನಿಲುಕದ ಕಾರ್ಯಕ್ರಮಕ್ಕೆ ರಾಜಮ್ಮ ರೂಪಕೊಟ್ಟುದು ಹೀಗೆ–"ತಲೆಗೆ ಎಣ್ಣೆನೀರು ಹಾಕಿಕೊಂಡಿರ್ತಾಳೆ. ಸೂಕ್ಷ್ಮ ದೇಹದ ಹುಡುಗಿ, ಮಲಗ್ತಾಳೇನೋ. ವಾರವೆಲ್ಲಾ ದುಡಿದಿರ್ತಾಳೆ ಪಾಪ."––ಒಳಗೆ ಕೋಣೆಯಲ್ಲಿ ನಡೆಯುತ್ತಿದ್ದುದೇ ಬೇರೆ.

ಕೋಣೆಯೊಳಗೆ ಬಂದವಳೇ ಟೇಬಲ್ಲಿನ ಮೇಲೆ ಇಟ್ಟಿದ್ದ ಚಿಕ್ಕ ಬೀರುವಿನ ಬಾಗಿಲನ್ನು ತೆರೆದಳು. ಅದರಲ್ಲಿಯೇ ಇತ್ತು ಆ ಭಾವಚಿತ್ರ. ಕಣ್ತುಂಬ ನೋಡಿದಳು. ಕಣ್ಣು ತುಂಬಿ ಬಂದು ಚಿತ್ರ ಕಾಣಿಸದೆ ಹೋದಾಗ ಕಣ್ಣು ಮುಚ್ಚಿದಳು. ಮುತ್ತು ಮುತ್ತಾಗಿ ಉದುರಿತ್ತು ಕಂಬನಿ. ಕೆನ್ನೆಯ ಮೇಲೆ ತದೇಕ ಚಿತ್ತದಿಂದ ಕುಳಿತಳು.

ಅವಳ ಹೃದಯ ಭಾವಚಿತ್ರದೊಂದಿಗೆ ಮಾತನಾಡತೊಡಗಿತು–"ನೀನು

ನನಗೆ ಮೋಸ ಮಾಡಿದೆ. ಆದರೂ ನಾನೂ ನಿನ್ನನ್ನು ಇನ್ನೂ ಪ್ರೀತಿಸ್ತೀನಿ. ನಂಗೆ ಗೊತ್ತು ನಿನ್ನ ಪ್ರೀತಿಸೋ ಅಧಿಕಾರ ನನಗಿಲ್ಲಾಂತ. ನನ್ನ ಪ್ರೀತಿ ನಿನಗೆ ಬೇಡ ಅನ್ನೋ ಕಟುಸತ್ಯಾನೂ ಗೊತ್ತು. ಆದರೆ ಪ್ರೇಮ ಕೆಟ್ಟದು. ನಿನ್ನನ್ನು ಬಿಟ್ಟು ನಾನು ಯಾರನ್ನೂ ಆ ಸ್ಥಳದಲ್ಲಿಡಲಾರೆ.

ಎಂತಹ ಅನ್ಯಾಯ ಮಾಡಿಬಿಟ್ಟೆ ರಾಜ. ನಿನ್ನನ್ನು ದೇವರಂತೆ ಆರಾಧಿಸಿದ ನನಗಿಂತ ಸ್ವಲ್ಪ ಪರಿಚಯದ ಆ ಭಾರತೀನೇ ನಿನಗೆ ಹೆಚ್ಚಾಯಿತಲ್ಲವೆ ? ಅದು ನಿನ್ನ ತಪ್ಪಲ್ಲ. ನಿನ್ನಲ್ಲಿನ ದುರ್ಬಲತೆ. ತಿಳಿದೂ ಸಹ ನಿನ್ನಲ್ಲಿ ಅಪಾರ ನಂಬಿಕೆ. ಶ್ರದ್ಧೆ ಪ್ರೇಮ ಇಟ್ಟ ತಪ್ಪು ನನ್ನದು. ಆತ್ಮಾರ್ಪಣೆಯ ಜೊತೆಗೆ ದೇಹವನ್ನೂ ಒಪ್ಪಿಸಿಕೊಂಡೆ ನೀನು ನನ್ನವನೆಂದು ನಂಬಿ ನಿನ್ನ ಪ್ರೇಮದನಟನೆ ನನಗೆ ತಿಳಿಯಲಿಲ್ಲ. ನನ್ನ ನಿಷ್ಕಳಂಕ ಪ್ರೇಮ ನಿನಗೆ ಬೇಕಾಗಲಿಲ್ಲ. ಆದರ್ಶ ಸತಿಯಾಗಿ ಬಾಳಲೆಂದು ಕನಸು ಕಂಡು ನಿನ್ನ ತೆಕ್ಕೆಯಲ್ಲಿ ಬಿದ್ದು ಪತಿತಳಾಗ ಬೇಕಾಯಿತು ನಾನು....ಅಲ್ಲ, ನಾನು ಪತಿತಳಲ್ಲ ಪವಿತ್ರಳು. ನಿನ್ನನ್ನು ಬಿಟ್ಟು ಯಾರನ್ನೂ....ಊಹುಂ ಅದು ಸಾಧ್ಯವಿಲ್ಲ. ಈ ಬಾಳಿಗೆ ಇಷ್ಟೆ.

ನಿನ್ನ ಸಂತೋಷಕ್ಕಾಗಿ, ಹಿಂದೆ ಮುಂದೆ ನೋಡದೆ. ಒಂದು ನಿಷ್ಪಾಪ ಜೀವಿಯ ಸರ್ವನಾಶ ಮಾಡಿಬಿಟ್ಟೆ ರಾಜ ನೀನು. ನನ್ನ ಪವಿತ್ರತೆಯ ಒಂದು ಬಿಸಿಯುಸಿರು ನಿನ್ನನ್ನು ಭಸ್ಮಮಾಡಬಲ್ಲುದೋ ಏನೋ. ಆದರೆ ನೀನು ನೀಚಕ್ಕಿಳಿದೆಯೆಂದು ನಾನು ಇಳಿಯಲಾರೆ. ಜೀವನದಲ್ಲಿ ಸುಖ, ಸಂತೋಷ ಲಾಲಸೆಗಳೇ ಮುಖ್ಯವಲ್ಲ. ನೀತಿ, ನಿಯಮ, ಸಂಯಮಗಳೂ ಅಗತ್ಯ. ಅದನ್ನು ನೀನರಿಯದೆ ಹೋದೆ. ನಿನ್ನ ವಿಲಾಸಗಳಿಗೆ ಹೆಚ್ಚು ಪ್ರೋತ್ಸಾಹ ಕೊಡಲಿಲ್ಲವೆಂದಲ್ಲವೆ ನಾನು ನಿನಗೆ ಬೇಡವಾದೆ. ನಾನು ಕೊಡದ ಏನನ್ನು ತಾನೆ ಭಾರತಿ ನಿನಗೆ ಕೊಟ್ಟಳು. ಹೇಳು ರಾಜ ಹೇಳು.

ಹೋಗಲಿ ಬಿಡು. ಈಗೇಕೆ ಹಳೆಯ ಕಥೆ. ನಿನಗೆ ಮದುವೆ ಆಯಿತೆಂದೂ ಕೇಳಿದೆ. ಈಗಲಾದರೂ ಹೆಣ್ಣಿನ ಪ್ರೇಮವನ್ನು ಅರ್ಥಮಾಡಿಕೊಂಡು ನಿನ್ನ ದುರ್ಬಲತೆ ಕಡಿಮೆಮಾಡಿ ನಿನ್ನ ಹೆಂಡತೀನ್ನ ವಂಚಿಸದಿದ್ದರೆ ನನಗೆಷ್ಟೋ ಸಂತೋಷ. ನನಗನ್ಯಾಯವಾಗಿದ್ದರೂ, ನೀನು . ಸುಖವಾಗಿ ಸಂಸಾರ ಮಾಡಿಕೊಂಡು ಪತ್ನಿಯೊಂದಿಗೆ ಅನ್ಯೋನ್ಯವಾಗಿ ಬಾಳುವೆ ನಡೆಸುತ್ತಿದ್ದರೆ ಎಲ್ಲಿದ್ದರೂ ನಾನು ಸಂತೋಷಿಸ್ತೀನಿ. ಇನ್ನು ಮೇಲಾದರೂ ಭಾರತಿಯಂತವರನ್ನು ಜೀವನದಲ್ಲಿ ಪ್ರವೇಶಿಸಲು ಎಡೆಗೊಡಬೇಡ. ಅವಳು ಕೆಟ್ಟ

ವಳೆಂದಲ್ಲ. ಆದರೆ ತುಂಬು ಪ್ರೇಮಿಗಳ ನಡುವೆ ಹೋಗುವುದು ಪಾಪ ವೆಂದು ಅವಳು ತಿಳಿದಿಲ್ಲ. ಗಂಡಸರೊಂದಿಗೆ ಸಲುಗೆಯಿಂದಿದ್ದರೆ ತಪ್ಪೇನು ಎನ್ನುವ ಚಿಟ್ಟೆ ಅವಳು. ನವನಾಗರೀಕತೆಯ ಸೋಗು ಹಾಕಿ ಶೀಲವನ್ನು ಕೆಳಮಟ್ಟಕ್ಕಿಳಿಸುವ ಪಂಥ ಅವಳದು. ಅವಳ ಎದುರಿಗೆ ನನ್ನಂತಹ ನಿಷ್ಠೆ ಹೆಣ್ಣು ನಿನಗೆ ಶುದ್ಧ ಗೊಡ್ಡು ಎನಿಸಿರಬಹುದು,

ಅವಳಂತಹವರ ಸಲುಗೆ ನಿನಗೆ ಬೇಡ, ನನಗಾಗಿ ನಾನು ಹೇಳುತ್ತಿಲ್ಲ. ನಿನಗಾಗಿ, ನಿನ್ನ ವಿಷಯವೇ ತಿಳಿಯದೆ, ನಿನ್ನಲ್ಲಿ ಅಪಾರ ನಂಬಿಕೆಯಿಟ್ಟು ನಿನ್ನನ್ನು ಆರಾಧಿಸಬಲ್ಲ ನಿನ್ನ ಹೆಂಡತಿಗಾಗಿ, ನಿನ್ನ ಆದರ್ಶದಲ್ಲಿ ನಡೆಯುವ ನಿನ್ನ ಮಕ್ಕಳಿಗಾಗಿ. ಇದನ್ನೆಲ್ಲಾ ಹೇಳಲು "ನೀನು ಯಾರು" ಎನ್ನುವೆ ಯೇನೋ, ನಿಜ. ನಾನು ನಿನ್ನ ಮೊದಲ ಮಡದಿ. ನಗುವೆಯಾ ? ನಗು, ನನ್ನನ್ನು ನೋಡಿ ನಕ್ಕರೂ ಚಿಂತೆಯಿಲ್ಲ. ನೀನು ಒಳ್ಳೆಯ ಗೃಹಸ್ಥನಾಗ ಬೇಕು. ಹಳೆಯ ಬಾಳಿಗೆ ಪರದೆ ಎಳೆದು ಹೊಸಬಾಳ್ವೆ ನೀ ಬಾಳಬೇಕು. ಹೌದು, ನೀನೀಗ ಬಹಳ ಒಳ್ಳೆಯವನಾಗಿದ್ದಿ ಎಂದು ನನ್ನ ಹೃದಯ ಹೇಳುತ್ತಿದೆ. ರಾಜಾ" ಎಂದು ಮೃದುವಾಗಿ ಆ ಭಾವಚಿತ್ರವನ್ನು ಚುಂಬಿಸಿ ಯಥಾಸ್ಥಾನದಲ್ಲಿಟ್ಟಳು.

ಎಂತಹ ಆತ್ಮ ತೃಪ್ತಿ ! ಎಂತಹ ಜೀವಿ ಸರಳಾ ! ತನ್ನ ಸರ್ವಸ್ವ ವನ್ನೂ ತ್ಯಾಗಮಾಡಿ ಅವನಿಗಾಗಿ ನಿಂತಿದ್ದಳು. ಅವಳ ತ್ಯಾಗವನ್ನೂ, ಅವಳ ಪ್ರೇಮದ ಆಳವನ್ನೂ ಅರಿಯದಾದ ದೌರ್ಭಾಗ್ಯಶಾಲಿ ಅವನು. ಅವನಿಂದ ದೂರವಾಗಿದ್ದರೂ, ಅವನ ಒಳಿತಿಗಾಗಿ ಸದಾಕಾಲವೂ ಹಾರೈಸು ತ್ತಿದ್ದಳು. ಅವನಿಂದು ಒಂದು ವೇಳೆ ಬಾಳಿನಲ್ಲಿ ಚೆನ್ನಾಗಿ ಬಾಳುತ್ತಿದ್ದರೆ ಅದು ಅವಳ ಹಾರೈಕೆಯ ಫಲ. ಅವಳ ಸತೀತ್ವದ ಮಹಿಮೆ.

ಅವನೆಲ್ಲಿದ್ದಾನೇ ಎನ್ನುವುದೂ ಅವಳಿಗೆ ತಿಳಿಯದು. ತಿಳಿಯುವ ಕುತೂಹಲ ಮೊದಲೇ ಇಲ್ಲ. ಎಲ್ಲಿದ್ದರೇನು ? ತನ್ನವನಾಗಲು ನಿರಾಕರಿಸಿದ ಅವನನ್ನು ಮತ್ತೆ ಮತ್ತೆ ನೋಡಿ ಪ್ರಯೋಜನವೇನು ? ನೋವನ್ನು ಕೊಂಡುಕೊಂಡಂತೆ ಆಗುವುದರ ವಿನಹ ?

ಎದ್ದು ಮಂಚದ ಮೇಲೆ ಉರುಳಿ ಬಿಕ್ಕಿ ಬಿಕ್ಕಿ ಅತ್ತಳು. ಅದೇನೂ ಹೊಸದಲ್ಲ. ಪ್ರತಿ ಭಾನುವಾರ ನಡೆಯುತ್ತಿದ್ದುದೆ. ಅವಳ ಅನೇಕ ಕೆಲಸ

ಕಾರ್ಯಗಳು ಅಳಲೂ ಸಹ ಅವಳಿಗೆ ಬಿಡುವು ಕೊಡುತ್ತಿರಲಿಲ್ಲ. ಪ್ರತಿ ಘಳಿಗೆಯೂ ಅವಳ ಮನ ಅವನನ್ನೇ ನೆನೆದು ನೋಯುತ್ತಿದ್ದರೂ, ಅವಳ ದನ್ನು ತೋರಗೊಡುತ್ತಿರಲಿಲ್ಲ. ಆದರೆ ಭಾನುವಾರ ಮಾತ್ರ ಅವಳಿಗೆ ಆ ಭಾವಚಿತ್ರವನ್ನು ನೋಡದೇ ಇರಲಾಗುತ್ತಿರಲಿಲ್ಲ. ಆ ಭಾವಚಿತ್ರದ ಕಾರಣ ದಿಂದ ದುಃಖವೂ ಒಮ್ಮೆಲೆ ಕಟ್ಟೆಯೊಡೆದು ಬರುತ್ತಿತ್ತು.

ಅವಳು ಅವನನ್ನು ತೊರೆದು ಆರು ವರ್ಷಗಳಿಗೂ ಹೆಚ್ಚಾಗಿದ್ದರೂ. ನೆನ್ನೆಯೇ ನಡೆದಷ್ಟು ಹೊಸತಾಗಿತ್ತು ಅವಳ ಹೃದಯದ ಘಾಯ. ಆ ಘಾಯದ ವಾಸಿಗಾಗಿ ಎಷ್ಟೋ ಔಷಧಗಳನ್ನು ಮಾಡಿದ್ದರೂ ಮಾಯದ ಘಾಯ ಅದು, ಹೆಚ್ಚು ನೋವಾದಾಗ ಅಳುವುದು. ಮಿಕ್ಕೆಲ್ಲಾ ಸಮಯ ದಲ್ಲಿ ಹೊಕ್ಕು ಹಾಕಿದ ಹುಣ್ಣಿನಂತೆ ನೋವಿನ ಅರಿವು ಮಾತ್ರ ಇರುತ್ತಿತ್ತು. ಅಳು ಇರುತ್ತಿರಲಿಲ್ಲ. ತೃಪ್ತಿಯಾಗುವಷ್ಟು ಅತ್ತರೇನೇ ಮನಸ್ಸು ತಿಳಿಯಾಗು ತ್ತಿತ್ತು. ಉಳಿದರ್ಧ ದಿನ ಶಾಂತತೆಯಿಂದ ಕಳೆಯಲು ಆಗುತ್ತಿತ್ತು. ಆದರೆ ಈ ದಿನ ಆ ತೃಪ್ತಿಗೆ ತಡೆ ಬಂತು. "ದೊಡ್ಡಮ್ಮಾ, ದೊಡ್ಡಮ್ಮಾ" ಎಂಬ ಮುದ್ದು ಮುದ್ದಾದ ಕೂಗು. ಆ ಒಂದು ಕರೆ ಅವಳಿಗೆ ಪುಲಕಿತ ವನ್ನುಂಟು ಮಾಡಿತು. ಕಣ್ಣು ಒರೆಸಿ ಎದ್ದು ಬಾಗಿಲಿಗೆ ಓಡುವುದರಲ್ಲಿದ್ದಳು. ಅಷ್ಟರಲ್ಲೇ ನೆನಪಾಯಿತು. ಭಾವಚಿತ್ರದ ಬೀರುವಿನ ಬಾಗಿಲಿಗೆ ಬೀಗ ಹಾಕಿ ಉದ್ವೇಗವನ್ನು ಅದುಮಿಕೊಳ್ಳುತ್ತಾ ನಿಧಾನವಾಗಿಬಾಗಿಲು ತೆಗೆಯಲು ಬಂದಳು. ಬಾಗಿಲಲ್ಲಿ ಸುಮಿತ್ರಾ ಮತ್ತು ಮಕ್ಕಳು ! ಯಾರನ್ನು ತಾನಿಂದು ಭೇಟಿ ಮಾಡಬೇಕೆಂದು ಹಾತೊರೆಯುತ್ತಿದ್ದಳೋ ಅವರೇ ಸಾಕ್ಷಾತ್ಕರಿಸಿದ್ದರು. ದೈವಲೀಲೆ !

"ಸುಮಿತ್ರಾ, ನೀಗೆ ಮಕ್ಕಳಿಗೆ ನೂರು ವರ್ಷ ಆಯಸ್ಸು" ಎಂದು ಹರಸಿದಳು. ತನ್ನ ಏಕವಚನ ಸಂಭೋಧನೆ ತನಗೇ ಕಸಿವಿಸಿಯಾಯಿತು.

"ಬಾ ಸುಮಿತ್ರ. ಏಕವಚನದಲ್ಲಿ ಮಾತಾಡಿಸ್ತಿದೀನೀಂತ ಏನು ಅಂದ್ಕೋಬೇಡಮ್ಮ. ನಂಗೇಕೋ ನಿನ್ನ ನೋಡಿದಾಗಲಿಂದ ಏಕವಚನದಲ್ಲೇ ಮಾತನಾಡಿಸ್ಬೇಕು ಅನ್ನಿಸ್ತು" ಕ್ಷಮೆ ಕೇಳುವಂತೆ ಕೇಳಿದಳು.

ನಿಜಕ್ಕೂ ಬಹುವಚನದಿಂದ ಏಕವಚನಕ್ಕಿಳಿದ ಸರಳೆಯ ಸಂಭಾಷಣೆ ಯಲ್ಲಿ ಪ್ರೀತಿನ ಸಖಿ ಕಂಡಳು ಸುಮಿತ್ರಾ. ಆತ್ಮೀಯತೆ ಗೋಚರವಾಯಿತು.

ಇಲ್ಲದ ಕೋಪ ನಟಿಸುತ್ತಾ "ನಂಗೆ ಏಕವಚನದ ಅಭ್ಯಾಸಾನೇ ಇಲ್ಲಾರಿ. ಇನ್ನೂ ಒಂದ್ಸಲ ನೋಡೋ ವೇಳೆಗೆ ಯಾಕ್ರಿ ನಿಮಿಗಿಷ್ಟು ಸಲಿಗೆ...." ಮಧ್ಯೆ ಏನೋ ಹೇಳಲು ಸರಳ ಬಾಯಿ ತೆಗೆದಳು. ಸುಮಿತ್ರಾ ಬಿಡಲಿಲ್ಲ "ಈಗ ನೀವು ಮಾಡಿರೋ ತಪ್ಪಿಗಾಗಿ ಒಂದು ಮಾತು ಹೇಳ್ತೀನಿ. ಅದನ್ನ ನೀವು ಕೇಳಿದ್ರೇನೇ ಕ್ಷಮಿಸೋದು."

ಸುಮಿತ್ರಾಳ ನಟನೆ ತಿಳಿಯಿತು ಸರಳೆಗೆ. ಆದರೂ ಸ್ವಲ್ಪ ಶಂಕೆಯೇ ಆಯಿತು 'ಹೊಸ ಪರಿಚಯದವಳು. ಬೇಜಾರು ಮಾಡಿಕೊಂಡಳೋ ಏನೋ' ಎಂದು.

"ಏನಮ್ಮ ಹೇಳಿ ಹಾಗಾದ್ರೆ ಬೇಗ"

"ನಾನು ನಿಮ್ಮನ್ನ ಅಕ್ಕ ಅನ್ನೋಕ್ಕೆ ನೀವು ಒಪ್ಪಿಕೊಂಡ್ರೆ ಸರಿ. ಇಲ್ಲ ದಿದ್ದರೆ...." ಮುಂದೆ ಮಾತು ಅನಾವಶ್ಯಕವಾಯಿತು.

ಸರಳೆಯ ಧ್ವನಿ ಗದ್ಗದಿತವಾಯಿತು "ನನ್ನನ್ನು ಅಕ್ಕ ಎನ್ನುವವರು ಯಾರೂ ಇರಲಿಲ್ಲ ಸುಮಿತ್ರಾ. ನಂಗೆ ಹೊಸ ಪಟ್ಟ ಕೊಡ್ತಿದ್ದಿ. ಇದಕ್ಕೆ ಏನುತ್ತರ ಕೊಡ್ಬೇಕೋ ತಿಳೀದು. ಆದ್ರೆ ತಂಗಿ ಆದೋಳು ಅಕ್ಕನ ಮಾತು ಕೇಳ್ಬೇಕಲ್ವಾ ?"

"ಖಂಡಿತವಾಗಿ"

"ತಂಗಿ ಅಕ್ಕನ್ನ ಬಹುವಚನದಲ್ಲಿ ಮಾತನಾಡಿಸ್ತಾಳಾ"

"ಇಲ್ಲ"

"ಹಾಗಾದ್ರೆ ಸುಮಿತ್ರಾ ಸರಳಾನ್ನ ಬಹುವಚನದಲ್ಲಿ ಯಾಕೆ ಮಾತ ನಾಡಿಸೋದೂಂತ ಅಕ್ಕನ ಪ್ರಶ್ನೆ"

"ಇನ್ಮೇಲೆ ಸರಳಾ ಜೊತೆ ಸುಮಿತ್ರಾ ಏಕವಚನದಲ್ಲೇ ಮಾತ ನಾಡ್ತಾಳೇಂತ ತಂಗಿ ಉತ್ತರ"

ಎರಡು ಹೃದಯಗಳೂ ತೃಪ್ತಿಯಾಗಿ ನಕ್ಕವು

ತನ್ನವರೆಂಬುವವರು ಯಾರೂ ಬಳಿಯಲ್ಲಿಲ್ಲವಲ್ಲಾ ಎಂದು ಕೊರತೆ ಪಡುತ್ತಿದ್ದ ತಂಗಿಗೆ ಅಕ್ಕರೆಯ ಅಕ್ಕ ಒಬ್ಬಳು ದೊರಕಿದಳು.

ಆತ್ಮೀಯರ ಬರದಿಂದಾಗಿ ತೊಳಲುತ್ತಿದ್ದ ಅಕ್ಕನ ಹೃದಯದ ಕರೆಗೆ ಓಗೊಡಲು ಆತ್ಮೀಯ ತಂಗಿ ಸಿಕ್ಕಿದಳು.

ಮಕ್ಕಳಿಗೆ, ತಾವು ಸಂಭಾಷಣೆಯಲ್ಲಿ ಬಿಟ್ಟು ಹೋದದ್ದು ಸರಿ ಹೋಗಲಿಲ್ಲ. ಪುಟ್ಟ ಸರಳಾ ದೊಡ್ಡಮ್ಮನ ಗಮನವನ್ನು ಸೆಳೆಯಲು—"ದೊಡ್ಡಮ್ಮ ಮತ್ತೆ....ಮತ್ತೆ ದಾರೀಲಿ ಮಾಧೂ ಚಾಕ್ಲೇಟು ಕೇಳಿದ್ರೆ ಅಮ್ಮ ಕೊಡ್ಲೇ ಇಲ್ಲ." ತಾಯಿಯ ಮೇಲೆ ಚಾಡಿ ಅವಳದು.

"ಹೋಗ್ಲಿ ಬಿಡು ಮರಿ. ನಾಕೊಡ್ತೀನಿ ಚಾಕ್ಲೇಟು" ಎಂದು ಅವಳನ್ನೆತ್ತಿಕೊಂಡು ಒಳಗೆ ನಡೆದಳು. ಮಾಧುವನ್ನು ಎತ್ತಿಕೊಂಡಿದ್ದ ಸರಳಾ ಹಿಂಬಾಲಿಸಿದಳು.

"ಅದ್ಸರಿ ಸರಳಕ್ಕ, ನಾ ಬಂದು ಒಂದು ಗಂಟೆ ಬಾಗಿಲು ಬಡೀತಾ ಇದ್ರೂ ನೀನು ಏನ್ಮಾಡ್ತಿದ್ದೆ ರೂಮಲ್ಲಿ ಕೂತ್ಕೊಂಡು ? ನಿನ್ನ ಬಾಗಿಲ್ಹತ್ರ ನೋಡಿದ ಕೂಡ್ಲೆ ನೀನು ಅತ್ತಿದ್ದಿ ಅನ್ನಿಸ್ತು. ಹೌದಾ ? ನಿಜಾನಾ ?" ಕಂಡು ಹಿಡಿದು ಬಿಟ್ಟವಳಂತೆ ಕೇಳಿದಳು.

"ಛೆ, ಇಲ್ಲಪ್ಪ, ನಾ ಯಾಕಳ್ತೀನಿ ? ದೇವರು ನಂಗೆ ಯಾವುದಕ್ಕೂ ಕಡಿಮೆ ಮಾಡಿಲ್ಲ. ತಲೇಗೆ ಸ್ನಾನ ಮಾಡಿದ್ದೆ ಸುಸ್ತಾಗಿತ್ತು. ಹಾಗೇ ನಿದ್ದೆ ಮಾಡ್ಬಿಟ್ಟೆ. ನೀಬಂದು ನಿಜವಾಗ್ಲೂ ಒಂದು ಗಂಟೆ ಆಯ್ತಾ" ಸುಳ್ಳನ್ನೂ ನಿಜವೆಂಬಂತೆ ಆಡಿದಳು.

"ನಿಜವಾಗ್ಲೂ ಗೊತ್ತಾ. ನೀನು ಹಾಗಾದ್ರೆ ಕುಂಭಕರ್ಣನ ತಂಗೀನೇ. ಒಂದೇಸಮ ಬಾಗಿಲು ಬಡಿದ್ರೂ ಎಚ್ಚರ ಆಗ್ಲಿಲ್ಲವಲ್ಲಾ...." ಮತ್ತಷ್ಟು ಸುಳ್ಳು.

ಎಂತಾ ಅನ್ಯಾಯ ಸುಮಿತ್ರಾ ಇದು. ಶೂರ್ಪನಖಿ ಅಂತೀಯಲ್ಲ, ನನ್ನ. ಅಷ್ಟು ಮೋಸವಾಗಿದ್ದೀನಾ ನಾನು ನೋಡೋಕ್ಕೆ ?"

"ಉಂಟೆ ? ರಾಮನಲ್ಲಿ ಅನುರಕ್ತಳಾಗಿ ಬರೋ ಆ ಮಹಾತಾಯಿ ನಿನಗಿಂತ್ಲೂ ಚೆನ್ನಾಗಿದ್ಲು"

ಮಕ್ಕಳಿಗೆ ಚಾಕ್ಲೇಟು ಕೊಡುತ್ತಾ ಸರಳಾ "ನೋಡಿದ್ದೆನೋ ಮರಿ, ನಿಮ್ಮಮ್ಮ ಒಂದೇ ಮಾತ್ನಲ್ಲಿ ಶೂರ್ಪನಖಿ ಅಂದುಬಿಟ್ಲು ನನ್ನ" ಎಂದು ಅತ್ತಂತೆ ಮಾಡಿದಳು.

ಮಕ್ಕಳು ನಕ್ಕವು.

"ಅಲ್ವೇನೋ ಮಾಧೂ, ನೀ ಹೇಳೋ ನೀ ಗಂಡ್ಸು. ಸರಳಾ

ಸುಂದರವಾಗಿಲ್ವಾ ? ಆ ಹುಬ್ಬು, ಆ ಮೂಗು, ಆ ಕೆನ್ನೆ...." ರಸಿಕನನ್ನು ಕೇಳುವಂತೆ ತನ್ನ ಮಗುವನ್ನು ಕೇಳಿದಳು.

"ನಿಲ್ಸು ನಿಲ್ಸು. ಏನಾದ್ರೂ ಕತೆಗಿತೆ ಬರ್‍ಯೋ ಹವ್ಯಾಸ ಇದ್ಯಾ ಏನು ಕಥೆ ?"

"ಇಲ್ಲಪ್ಪ, ಬರೆಯೋ ಹುಚ್ಚೇನೋ ಇತ್ತು. ಆದ್ರೆ ಓದೋ ಕಾಲ್ದಲ್ಲಿ ಓದ್ಕೊಳ್ಳೋದೇ ಆಗೋಯ್ತು. ಒಂದು ಡಿಗ್ರಿ ಸಿಕ್ತು. ಆಮೇಲೆ ಮದ್ವೆ ಆಯ್ತು ಎರಡನೇ ಡಿಗ್ರಿ. ಆಮೇಲೆ ಮೂರು ನಾಲ್ಕು ಇವೆರಡು ಡಿಗ್ರಿಗಳು. ಈ ಮೂರು ಮಕ್ಕಳ್ನ ನೋಡ್ಕೊಂಡು, ಬಿದ್ಕೊಂಡ್ರೆ ಸಾಕು ಅನ್ನೋಷ್ಟು ಹಣ್ಣಾಗಿ ಹೋಗಿರ್‍ತೀನಿ. ಆದ್ರೆ ಯಾವುದನ್ನಾದ್ರೂ ಮೆಚ್ಚೋ ಯೋಗ್ಯತೆ ಇದೆ. ನಾನು ರಸಿಕಳು ಮಾತ್ರ ಕಲೆಗಾರಳಲ್ಲ."

"ನೀ ಹೇಳಿದು ಅರ್ಥವಾಯ್ತು. ಆದ್ರೆ ನಿಂಗೆ ಎರಡೇ ಅಲ್ವೆ ಮಕ್ಕಳು ?"

"ಹೌದು ಎರಡೇ"

"ಮತ್ತೆ ಈಗ ಮೂರು ಮಕ್ಕಳನ್ನ ನೋಡ್ಕೋಬೇಕು ಅಂದ್ಯಲ್ಲಾ" ಫಕ್ಕೆಂದು ನಕ್ಕುಬಿಟ್ಟಳು ಸುಮಿತ್ರಾ. ಸರಳೆಗೆ ಪೆಚ್ಚಾಯಿತು.

"ಏನು ಸರಳಾ, ಅಷ್ಟು ತಿಳ್ಕೊಳ್ಳಿಲ್ಲ ನೀನು. ಮೂರನೇ ಮಗು ಅಂದ್ರೆ ನಮ್ಮ ಯಜಮಾನ್ರು. ಕೆಲವು ಸಲ ಇವರನ್ನಾದ್ರೂ ನೋಡ್ಕೊಳ್ಳೋದು ಸುಲಭ, ಅವರನ್ನ ಮಾತ್ರ ನೋಡ್ಕೊಳ್ಳೋದು ಅಂದ್ರೆ ಒಂದು ಸಾಹಸಾನೇ ನೋಡ್ಕೋ,"

"ಹಾಗಂತೀಯಾ ? ಹಾಗಾದ್ರೆ ಒಂದು ಮಗೂನ್ನ ನಂಗೆ ಕೊಟ್ಬಿಡು. ನಾ ಸಾಕ್ಕೋತೀನಿ"

"ನಿಜವಾಗ್ಲೂ ? ಆ ಮೇಲೆ ಹಿಂತೆಗೀಕೂಡ್ದು" ಏನೋ ಚೇಷ್ಟೆಯ ಹುರುಪಿತ್ತು ಕಣ್ಣಿನಲ್ಲಿ.

"ಖಂಡಿತ ಇಲ್ಲ. ಪ್ರಾಮಿಸ್"

"ಹಾಗಾದ್ರೆ ದೊಡ್ಡ ಮಗೂನ್ನೇ ಕೊಟ್ಬಿಡ್ತೀನಿ ಸಾಕ್ತೀಯಾ ?"

"ಓ ಯಸ್, ಸರಳಾನ್ನ ತಾನ್ನೇ"

ಹೊಟ್ಟೆ ಹುಣ್ಣಾಗುವಂತೆ ನಕ್ಕಳು ಸುಮಿತ್ರಾ "ಅಲ್ಲಾ ಅದಕ್ಕೂ

ದೊಡ್ಡ ಮಗು" ಎಂದು ಹೇಳಿ.

ಸರಳೆಗೆ ಬೇಸರವಾಯಿತು. "ಹುಡುಗಾಟ ಆಡ್ತೀಯಾ ಸುಮಿತ್ರಾ. ನ್ಗೊತ್ತು ಯಾವ ತಾಯೀನೂ, ತನಗೊಂದು ದರ್ಜೆ ಮಕ್ಕಳಿದ್ರೂ ಒಂದನ್ನೂ ಕೊಟ್ಟುಬಿಡೋದಕ್ಕೆ ಒಪ್ಪಲ್ಲಾಂತ. ನಾ ಕೇಳಿದ ಪ್ರಶ್ನೆ ತಪ್ಪು" ನೊಂದು ನುಡಿದಳು.

"ಬೇಜಾರು ಮಾಡ್ಕೊಂಡ್ಯಾ ? ಛೆ, ಛೆ, ಏನಮ್ಮಾ ನೀನು. ಸ್ವಲ್ಪ ತಮಾಷೆ ಮಾಡ್ದೆ. ಬೇಕಾದ್ರೆ ವಾಧೂ, ಸರಳಾ ಇಬ್ರನ್ನೂ ನೀನಿಟ್ಕೊ ಅಕ್ಕ. ಈ ಮಾತು ತಮಾಷೆ ಅಲ್ಲ"

"ಬೇಡ ಬಿಡು. ಈ ಮಾತು ಇಲ್ಲಿ ನಿಲ್ಲಿಸ್ಬಿಡೋಣ. ಅವತ್ತು ನಿನ್ನ ಯಜಮಾನ್ರು ಏನಂದ್ರು ಏನ್ಸಮಾಚಾರ ಒಂದೂ ಹೇಳ್ಳೇ ಇಲ್ವಲ್ಲಾ" ಮಾತು ಬದಲಾಯಿತು.

ನಡೆದುದನ್ನೆಲ್ಲಾ ತಿಳಿಸಿದಳು ಸುಮಿತ್ರಾ.

"ತುಂಬಾ ಸಂತೋಷ. ನೀನು ತುಂಬ ಲಕ್ಕಿ ಸುಮಿತ್ರ ಒಳ್ಳೇ ಗಂಡನ್ನ ಪಡೆದಿದ್ದಿ, ಅಲ್ಲಾ ಸುಮಿತ್ರ, ಒಂದು ತಿಂಗಳ್ಗೂ ಮೇಲಾಯ್ತಲ್ಲ ಆಕ್ಸಿಡೆಂಟ್ ನಡ್ದು, ಆದ್ರೂ ಒಂದ್ಸಲಾನಾದ್ರೂ ನಮ್ಮನೆ ಕಡೆ ಬರಬೇಕು ಅಂತ ನಿಂಗನ್ನಿಸಲ್ವಾ ?"

"ಅದೇನು ಹೇಳ್ತಿ ಸರಳಕ್ಕ, ಸರೂದು ಮೂಗೇನೋ ಮೂರೇ ದಿನಕ್ಕೆ ಸರಿಯಾಯ್ತು. ಅದರ ಮುಂದಿನ ಭಾನುವಾರಾನೇ ಬರಬೇಕೂಂತ ಯೋಚನೆ ಮಾಡಿದ್ದೆ. ಅಷ್ಟರಲ್ಲಿ ಎಲ್ಲಾ ತಲೆಕೆಳಗು. ಅವರಣ್ಣನ ಹೆಂಡ್ತಿ ಏನೋ ಜಾರಿ ಬಿದ್ದುಬಿಟ್ರಂತೆ ! ಸ್ವಲ್ಪ ದಿನ ಸುಮಿತ್ರಾನ್ನ ಸಹಾಯಕ್ಕೆ ಕಳಿಸ್ತೀಯಾಂತ ಭದ್ರಾವತಿಯಿಂದ ಬಂತು ತಂತಿ ದೂತ. ಕೇಳ್ಬೇಕಾ ಈ ಸಹಾಯ ಶೂರರು ನಿನ್ನ ಮೈದುನ...."?

"ಯಾರದು ನನ್ನ ಮೈದುನ...."

"ಅದೇ ನಿನ್ನ ತಂಗಿ ಸುಮಿತ್ರೆಯ ಗಂಡ"—ಸುಮಿತ್ರೆಯ ಮಾತು ಸರಳೆಗೆ ಹಿತವಾಗಿತ್ತು.

ಹೊಸ ಹೊಸ ಸಂಬಂಧಗಳು. ನವೀನ ಮಾದರಿಯ ಮಾತು.

ನಗುತ್ತಲೇ ಕೇಳಿದಳು "ಏನಂದ್ರು ನನ್ನ ಮೈದುನ ?"

"ಸಹಾಯಕ್ಕೆ ಅಂತ ಕರೆದ್ರೆ ಇಲ್ಲ ಅನ್ನಾರ್ರು. ಮಕ್ಕಳ್ನೂ ಕರ್ಕೊಂಡು ಒಂದಿಪ್ಪತ್ತು ದಿನ ಹೋಗಿ ಬಾ" ಅಂದ್ರು. 'ಈ ಸಹಾಯ ಬುದ್ಧಿ ಯಾರು ಕಲಿಸಿಕೊಟ್ರೋ' ಅಂತ ನಾನಂದ್ರೆ "ಒಬ್ಬ ದೇವತೆ" ಅಂದು ಬಿಟ್ರು. ಹೊರಟೋಗಿದ್ದೆ ಸರಳಾ. ಭದ್ರಾವತಿಯಿಂದ ಮೊನ್ನೆ ಬಂದೆ. ಮೊನ್ನೇಗೆ ಮುಂದಿನ ಭಾನುವಾರ ಅಂದ್ರೆ ಈವತ್ತು ತಾನೇ. ಸರಿ, ಸಂಸಾರ ಸಮೇತ ವಾಗಿ ಹಾಜರ್ರೂ ಉ ಊ...."

"ಸುಳ್ಳು, ರಾಯರೆ ಇಲ್ದೆ ಸಂಸಾರಾನಾ ?"

ಮಾತು ಎತ್ತೆತ್ತಲೋ ಹರಿಯುತ್ತಿತ್ತು. ನಿಮಿಷಗಳು ಗಂಟೆಗಳಾಗಿ ಉರುಳಿದರೂ ಇಬ್ಬರಿಗೂ ಪರಿವೆಯಿಲ್ಲ. ಹೊರಡುವ ಸೂಚನೆ ಕೊಟ್ಟವನು ಮಾಧೂ.

"ಅಮ್ಮ ಓಗೋನಾ...." ರಾಗ ಎಳೆದ.

"ನಾನೆಂಥಾವ್ಳು. ಮಕ್ಕಳಿಗೆ ಏನಾದ್ರೂ ಕೊಡಬೇಡ್ವ ? ಮಕ್ಕಳಿ ಗಿಂತ ನಿಂಗೆ ಕೊಡ್ಬೇಕು ಸುಮಿತ್ರ. ಎಷ್ಟು ಚೆನ್ನಾಗಿ ಮಾತಾಡ್ತಿ. ಎಲ್ಲಿ ಕಲಿತೆ."

"ಅದನ್ನೇ ರಾಯರು ಯಾವಾಗ್ಲೂ ಕೇಳೋದು. ಆದಕ್ಕೆ ನಾನು ಏನು ಹೇಳ್ತೀನಿ ಗೊತ್ತ ? ಒಬ್ಬ ದೇವ್ರು ಅಂತೀನಿ"

"ಆತ ತಪ್ಪು ತಿಳ್ಕೊಳ್ಳಲ್ವ ?"

"ಮತ್ತೆ ಮಾತೆತ್ತಿದ್ರೆ, ಯಾವ ಒಳ್ಳೆ ಗುಣಾನೇ ಆಗ್ಲಿ ಹೊಗಳಿದ್ರೆ "ದೇವತೆ ಕಲಿಸಿಕೊಟ್ಳು" ಅಂತ ಅಂತಾರಲ್ಲ. ಅದಕ್ಕೇ ನಂದು ಸವಾಲು."

"ನೀ ಬಿಡ್ತೀಯಾ! ನಾ ನೋಡ್ಬೇಕು ಆ ದೌರ್ಭಾಗ್ಯಶಾಲಿನ್ನ ಒಂದ್ಸಲ"

"ಏನನ್ಯಾಯ ಇದು. ನಮ್ಮ ಯಜಮಾನ್ರನ್ನ ದೌರ್ಭಾಗ್ಯಶಾಲಿ ಅನ್ನೋದು"

ಒಬ್ಬರನ್ನೊಬ್ಬರು ಕುಚೇಷ್ಟೆ ಮಾಡುತ್ತಲೇ ದಿನ ಕಳೆಯಿತು. ಸರಳಾ ಅವರಿಗೆಲ್ಲಾ ಸೆಜ್ಜಪ್ಪ ಕೋಡುಬಳೆ ಕೊಟ್ಟಳು. ಅವರಿಗೆ ಅದು ಪರರ ಮನೆ ಎನಿಸಲಿಲ್ಲ. ಬೇಕಾದಷ್ಟು ಕೇಳಿ ಪಡೆದು ತಿಂದರು.

"ಒಬ್ಳೇ ಇದ್ರೂ ಇದೆಲ್ಲಾ ಮಾಡ್ತೀಯಲ್ಲ ಸರಳಕ್ಕ"

"ನನಗಾಗಿ ಮಾಡ್ಲಿಲ್ಲಮ್ಮ. ಈವತ್ತು ನಿಮ್ಮನೆ ಪತ್ತೆ ಮಾಡಿ, ಬರ

ಬೇಕೂಂತ ಎಲ್ಲಾ ಮಾಡಿಟ್ಟೆ. ನಿಮ್ಮನೇ ಎಲ್ಲಿ ಅನ್ನೋದೇ ತಿಳೀದೇ ಸುಮ್ನೆ ಕೂತ್ಬಿಟ್ಟೆ. ದೇವ್ರೇ ನಿನ್ನ ಇಲ್ಲಿಗೆ ಕಳಿಸ್ದ. ನೀ ತೃಪ್ತಿಯಿಂದ ಇದ್ರೆ ನಂಗೇನೋ ಸಂತೋಷ ಸುಮಿತ್ರ"

"ಸ್ವೀಟ್ ತುಂಬಾ ಚೆನ್ನಾಗಿದೆ. ನಂಗೇನನ್ನಿಸುತ್ತೆ ಗೊತ್ತ ಸರಳಕ್ಕ ನನ್ನವ್ರು ನಿನಗೆ ಯಜಮಾನರಾಗಬೇಕಿತ್ತು."

"ಸುಮಿತ್ರಾ!! ಏನು ನೀನು ಹುಡುಗಾಟಕ್ಕೆ ಎಲ್ಲೆ ಇರಬೇಕು."

"ನಾನೇನಂದೆ ಈವಾಗ ?"

"ಏನಂದೆ ಅಂತ ಮತ್ತೆ ಹೇಳ್ಬೇಕಾ ?"

"ಓ, ಸಾರಿ. ನಾನು ಯಾವ ಅರ್ಥದಲ್ಲೂ ಹೇಳ್ಲಿಲ್ಲ. ಅವ್ರಿಗೆ ಸ್ವೀಟು ಅಂದ್ರೆ ಪ್ರಾಣ. ನೀ ಮಾಡಿಟ್ರೆ ಅವರುಂತಾವ್ರು ಪಗದಸ್ತಾಗಿ ಕೂತು ಹೊಡೀತಿರಬಹುದ್ದೂಂತ ಹೇಳ್ದೆ ಅಷ್ಟೆ. ನೀನು ತಪ್ಪು ತಿಳ್ಕೊಂಡ್ಬಿಟ್ಟೆ."

"ಹಾಗಾದ್ರೆ ಸರಿ. ನಿನ್ನಾತಂಗೆ ಅಷ್ಟಿಷ್ಟು ಆದ್ರೆ ಒಂದೆರಡು ತೊಗೊಂಡು ಹೋಗು"

ಸುಮಿತ್ರಳಿಂದ ಉತ್ತರ ಬರಲಿಲ್ಲ.

"ಯಾಕೆ ಅನುಮಾನಿಸ್ತೀಯಾ ? ಬೇಡ ಅಂದ್ರೆ ಬೇಡ. ಆತ ತಪ್ಪು ತಿಳೀಬಾರ್ದು. ಇಂತಾ ವಿಷಯದಲ್ಲಿ ನನಗಿಂತ ನೀನು ದೊಡ್ಡೋಳು ಸುಮಿತ್ರಾ"

"ಕೊಡು ಅಕ್ಕ. ನಿನ್ನ ವಾತ್ಸಲ್ಯಕ್ಕಿಂತ ಯಾವುದೂ ದೊಡ್ಡದಿಲ್ಲ. ಅಮೃತ ಕೊಡೋಕ್ಕೆ ಬಂದ್ರೆ ನಿರಾಕರಿಸಬಾರದು. ಅದ್ರಲ್ಲೂ ನಾನು ಅಮೃತ ಪಾನಮಾಡಿ. ನನ್ನವ್ರಿಗೆ ಬೇಡ ಅಂದ್ರೆ ಯಾರೂ ಮೆಚ್ಚೋಲ್ಲ. ಕೊಡು. ನನಗೆಂತ ಅಕ್ಕ ಸಿಕ್ಕಿದ್ದಾಳೆ ಅನ್ನೋದು ಅವ್ರಿಗೂ ಚೆನ್ನಾಗಿ ತಿಳೀಲಿ" ಎಂದಳು. ಮತ್ತೆ ನಕ್ಕು "ಉಂಡೂ ಹೋದ್ಲು ಕೊಂಡೂ ಹೋದ್ಲೂ ಅಂತಾರಲ್ಲ ಹಾಗಾಯ್ತು" ಎಂದಳು.

ಸುಮಿತ್ರೆ ಕುಂಕುಮ ವೀಳ್ಯದೊಡನೆ ಹೊರಡುತ್ತಿರುವಾಗ ಸರಳಾ ಎಚ್ಚರಿಸಿದಳು.——

"ನೋಡು ಸುಮಿತ್ರಾ, ನಾನು ನಿಮ್ಮನೇಗೆ ಬರಲಿ ಬಿಡಲಿ. ನೀನು ಮಾತ್ರ ಆಗಾಗ ಮಕ್ಕಳೊಂದಿಗೆ ಬರ್ತಾ ಇರು. ನಾನು ನಿಮ್ಮನೇಗೆ ಬರ

ಬಾರ್ದ್ದೂಂತಲ್ಲ. ನಾನು ಹೊರಗೆ ದುಡಿಯೋವ್ಳು. ನನ್ಗೆ ಆರಾಮು ಕಡಿಮೆ ಅದಕ್ಕೋಸ್ಕರ ಹೇಳ್ದೆ. ಭಾನುವಾರ ನೀ ಬಂದ್ರೆ ಹಾಯಂತ ದಿನ ಕಳೆದು ಹೋಗುತ್ತೆ. ಬೇಕೂಂದ್ರೆ ಮೈದುನಂಗೂ ಇಲ್ಲಿಂದ್ಲೆ ತಿಂಡಿ ಕಳಿಸಿ ಬಿಡಬಹ್ದು. ಏನಂತಿ ಅಕ್ಕ ?....ಯಾಕೆ ಸುಮಿತ್ರಾ ಸಗ್ತಾ ಇದ್ದಿ"

"ನಮ್ಮ ರಾಯರಿಗೂ ಭಾನುವಾರವೇ ರಜಾ ಮೇಡಂ"

"ಹೌದು ಇರಲಿ. ಏನು ಪ್ರತಿ ಭಾನುವಾರಾನೂ...." ಏನು ಹೇಳ ಬೇಕೋ ತೋಚಲಿಲ್ಲ ಸರಳೆಗೆ. ಪ್ರಬುದ್ಧಳಾದರೂ ಗಂಡ ಹೆಂಡಿರ ವಿಷಯ ದಲ್ಲಿ ಅಪ್ರಬುದ್ಧಳು.

ಸರಳ ಮಾತು ನಿಲ್ಲಿಸಿದನ್ನು ನೋಡಿ ಸುಮಿತ್ರೆಯೇ ಹೇಳಿದಳು-- "ಬರ್ತೀನಿ ಸರಳಾ ಖಂಡಿತ ಬರ್ತೀನಿ. ಇನ್ನೆಲ್ಲಿ" ಹೋಗ್ಬೇಕಾದ್ರೂ ನಂಗಿಷ್ಟು ಸಂತೋಷ ಆಗೋಲ್ಲ. ದಿನಾ ಬರೋದಕ್ಕೆ ಸಾಧ್ಯವಾದ್ರೆ ದಿನಾಗ್ಲೂ ಇಲ್ಲಿಗೆ ಬರೋಕ್ಕೆ ನಂಗಾಸೆ."

"ಹಾಗೇಂತ, ನಿನ್ನಾತನ ಮನಸ್ಸು ನೋಯಿಸ್ಬೇಡ ತಿಳೀತಾ. ಆತ ಮಕ್ಕಳು ಮೊದಲು. ಆಮೇಲೆ ನನ್ಗೆ ಜಾಗ ನಿನ್ನ ಹೃದಯದಲ್ಲಿ. ಯಾಕೋ ಏನೋ ಸುಮಿತ್ರ ನಾನು ಯಾರ್ಗೂ ಇಷ್ಟು ಅಂಟ್ಕೊಳ್ಳೋಲ್ಲ. ನಿನ್ನ ಗೆಳೆ ತನ ಮಾತ್ರ ಬೇಕೇ ಬೇಕು ಅಂತ ಹೇಳುತ್ತೆ ನನ್ನ ಅಂತರಾತ್ಮ"

"ನನ್ಗೂ ಹಾಗೇ ಇದೆ ಸರಳಕ್ಕ. ಯಾವ ಜನ್ಮದ ಋಣಾನುಬಂಧವೋ ತಿಳೀದು. ಬರ್ಲಾ? ಹೋಗಿ ಬರ್ಲಾ?" ಹಿಂತಿರುಗಿ ನೋಡುತ್ತಾ ನೋಡುತ್ತಾ ಮಕ್ಕಳೊಂದಿಗೆ ಹೊರಟು ಹೋದಳು ಸುಮಿತ್ರ.

## ೭

ಎಷ್ಟೋ ಭಾನುವಾರಗಳು ಉರುಳಿ ಹೋದವು.

ಪ್ರತಿ ಭಾನುವಾರವೂ ತಪ್ಪದೆ ಸುಮಿತ್ರ ಸರಳೆಯ ಮನೆಗೆ ಬರುತ್ತಿ ದ್ದಳು ಅದೇ ಒಂದು ಕಾರ್ಯಕ್ರಮವಿದ್ದಂತೆ.

ಸುಮಿತ್ರಾ ಮತ್ತು ಮಕ್ಕಳು ಸರಳೆಯ ಬರಡು ಜೀವನದಲ್ಲಿ ಓಯಸಿಸ್‌ಗಳಂತೆ ಕಂಗೊಳಿಸಿದರು. ಮಕ್ಕಳಿಗೆ ತಮ್ಮ ಮನೆಗಿಂತ ದೊಡ್ಡಮ್ಮನ ಮನೆಯ ಮೇಲೆಯೇ ಹೆಚ್ಚು ಹೆಚ್ಚು ವ್ಯಾಮೋಹ ಬೆಳೆಯುತೊಡಗಿತು.

ಇದರ ಪರಿಣಾಮ ಶ್ಯಾಮಸುಂದರನ ಮೇಲೂ ಬೀಳದಿರಲಿಲ್ಲ. ಪ್ರತಿ ಭಾನುವಾರವೂ ಅವನು ಮನೆಯಲ್ಲಿ ಏಕಾಕಿ, ಮಧ್ಯಾಹ್ನಗಳಲ್ಲಿ. ಇದರಿಂದ ಅವನಿಗೇನೂ ಬೇಸರವಾಗಿರಲಿಲ್ಲ. ಕಷ್ಟ ಸುಖಕ್ಕಾಗುವ ಆತ್ಮ ಬಂಧುವೊಬ್ಬಳು ದೊರಕಿದ್ದಳು.

ಅವನಿಗೆ ತಾನೂ ಸಹ ಒಮ್ಮೆ ಸರಳೆಯನ್ನು ನೋಡಬೇಕು ಎಂಬ ಕುತೂಹಲ. ಹಾಗೆಂದುಕೊಂಡ ಕೂಡಲೆ ಅವನ ಹೃದಯವದೇಕೋ ಬೆಚ್ಚಿತು.

ಒಮ್ಮೆಯಾದರೂ ಸುಮಿತ್ರ "ಸರಳಾ ನಿಮ್ಮನ್ನೂ ಕರೆದಳು ಬನ್ನಿ" ಎನ್ನಲಿಲ್ಲ ಯಾಕೆ ? ಸುಮಿತ್ರೆಗೆ ತನ್ನ ಗಂಡನನ್ನ ಬೇರೆ ಯಾರಿಗೂ ಪರಿಚಯ ಮಾಡಿಸುವ ಇಷ್ಟವಿಲ್ಲವೆ ? ಯಾವಾಗಲೂ ತನ್ನನ್ನು ಹೊಗಳುವ ಸುಮಿತ್ರೆಗೆ ಅಸೂಯೆಯಿರಬಹುದೆ? ಅಥವಾ ಮದುವೆಯಾಗದ ಸರಳೆಗೆ ತನ್ನ ಪರಿಚಯ ಮಾಡಿಸಿದರೆ ತಪ್ಪು ಎಂದು ಸುಮ್ಮನೆ ಇರಬಹುದೆ ? ಛಿ ! ಸುಮಿತ್ರೆಯನ್ನು ಸಂಶಯಿಸಬಹುದೆ ? ಅವಳು ತನ್ನನ್ನು ಬಹಳ ನಂಬುತ್ತಾಳೆ, ಹಾಗೆಯೇ ಸರಳಾ ಎಂದರೂ ಅವಳಿಗೆ ಅಸಾಧಾರಣ ವ್ಯಕ್ತಿ.

ತನಗೇ ಈಗ ಅಸೂಯೆ ಪ್ರತಿ ಭಾನುವಾರವೂ ಸುಮಿತ್ರೆಯನ್ನು ತನ್ನಿಂದ ಕಸಿದು ಕೊಳ್ಳುವ ಸರಳೆಯ ಮೇಲೆ.

ಕೈಯಲ್ಲಿ ಹಿಡಿದಿದ್ದ ವೃತ್ತ ಪತ್ರಿಕೆ ಕೈಯ್ಯಲ್ಲೇ ಇತ್ತು. ಒಂದು ವಾಕ್ಯವೂ ಅವನಿಂದ ಓದಲಾಗಲಿಲ್ಲ. ನಿದ್ದೆಯೂ ಬರಲಿಲ್ಲ. ಸರಳಾ—ಸುಮಿತ್ರೆಯರೇ ಅವನ ಕಣ್ಣಮುಂದೆ ಹಾದು ಹೋಗುತ್ತಿದ್ದರು. ಒಂದು ಕಂಡ ವ್ಯಕ್ತಿ. ಮತ್ತೊಂದು ? ಪ್ರಭಾವ ಬೀರಿದ ವ್ಯಕ್ತಿ. ಅವನ ಯೋಚನಾ ಸರಣಿ ಕಡಿಯುವಂತೆ ಕೇಳಿಸಿತು ಒಳಗಡೆಯಿಂದ ಸುಮಿತ್ರೆಯ ಧ್ವನಿ—

"ಹೋಗು ಸರೂ, ಅಣ್ಣನ ಹತ್ರ. ಫ್ರಾಕ್ ಕಟ್ಟಿಸ್ಕೋ. ನಾನು ಮಾಧೂಗೆ ಅಂಗಿ ಹಾಕ್ತೀನಿ. ಹುಂ, ಬೇಗ ಹೋಗು."

ಓಡಿ ಬಂದಳು ಹುಡುಗಿ, ಮಂಚದ ಮೇಲೆ ಗೋಡೆಯ ಕಡೆಗೆ ತಿರುಗಿ

ಪತ್ರಿಕೆ ಓದುವ ವ್ಯಾಜದಲ್ಲಿದ್ದ ಶ್ಯಾಮಸುಂದರನನ್ನು ಹಿಡಿದು ಜಗ್ಗಿದಳು--
"ಅಣ್ಣಾ ಇದು ಸ್ವಲ್ಪ ಕಟ್ಟಣ್ಣಾ."

ಎದ್ದು ಕುಳಿತ ಶ್ಯಾಮು, ಸರೂವನ್ನು ಮಂಚದ ಮೇಲಕ್ಕೆ ಎತ್ತಿ ನಿಲ್ಲಿಸಿಕೊಂಡು, ಅವಳ ಫ್ರಾಕಿನ ಬೆಲ್ಟನ್ನು ಕಟ್ಟತೊಡಗಿದ. ಮಗು ಅತ್ತಿತ್ತ ಅಲುಗಾಡಿದಾಗ----

"ಸರಿಯಾಗಿ ನಿಂತುಕೊ ಮರಿ. ಇಲ್ದಿದ್ರೆ ಆಫೀಸಿಗೆ ಹೊತ್ತಾಗುತ್ತೆ ನೋಡ್ಕೋ" ಎಂದನು.

"ಊಂ, ಈವತ್ತೇನೂ ಆಫೀಸಿಲ್ಲ. ಭಾನುವಾರ."

"ನಂಗಲ್ಲ ಮರಿ ಆಫೀಸು. ನಿಂಗೆ, ಅಮ್ಮಾಗೆ, ಮಾಧೂಗೆ."

ಒಳಗಿನಿಂದಲೇ, ಈ ಮಾತು ಕೇಳಿದ ಸುಮಿತ್ರ ಧಾವಿಸಿ ಬಂದಳು.

"ಏನದು ನೀವಂದದ್ದು ಈಗ ?"

"ನಾನೇನೂ ಅನ್ನಲಿಲ್ಲವಲ್ಲ." ನಟಿಸಿದ ಶ್ಯಾಮು.

ಸುಮಿತ್ರೆಗೆ ದುಃಖವಾಯಿತು. ಸದಾಕಾಲವೂ ಅವನಿಗಾಗಿ ತಾನು ಸಮಸ್ತವನ್ನೂ ಮಾಡುತ್ತಿದ್ದರೂ ಭಾನುವಾರ ಮಧ್ಯಾಹ್ನ ತಾನು ತನ್ನ ಗೆಳತಿಯ ಮನೆಗೆ ಹೋಗುವುದೂ ಸಹ ಅವನಿಗಿಷ್ಟವಿಲ್ಲದೆ, ಅದಕ್ಕೆ ಕೇಳಿಯೇ ಬಿಟ್ಟಳು----

"ನಾನು ಭಾನುವಾರಗಳು ಸರಳೆಯ ಮನೆಗೆ ಹೋಗೋದ್ರಿಂದ ನಿಮಗೆ ಬೇಜಾರಾ ?"----ದನಿಯಲ್ಲಿ ದುಗುಡ ತುಂಬಿ ನಿಂತಿತು.

"ನಾನು ಹಾಗಂದೆನೇನೀಗ ?" ಗಂಭೀರವಾಗಿಯೇ ಕೇಳಿದ ಶ್ಯಾಮು.

'ಹುಂ, ಹೌದು, ನಂಗೆ ಹೊಟ್ಟೆಕಿಚ್ಚು' ಎಂದು ಅವನಂದಿದ್ದರೆ ಅದು ನಗೆ ಚಾಟಿಕೆಯೆಂದು ತಿಳಿಯುತ್ತಿದ್ದಳು, ಆದರೆ ಶ್ಯಾಮುವಿನ ಗಂಭೀರದ ಮಾತು ಸುಮಿತ್ರೆಯನ್ನು ಚುಚ್ಚಿತು.

"ಹೋಗಲಿ ಬಿಡಿ. ಇನ್ಮೇಲೆ ಅವಳ ಮನೇಗೆ ಹೋಗೋದೇ ಇಲ್ಲ. ನಿಮಗಿಷ್ಟವಿಲ್ಲದ ಕೆಲ್ಸಮಾಡಿ. ಬೇಸರ ತಂದು, ನಾನೂ ಯಾಕೆ ಬೇಜಾರು ಮಾಡಿಕೊಳ್ಳಲಿ. ಮಕ್ಕಳನ್ನ, ನನ್ನ ನೋಡ್ದೆ ಇದ್ರೆ ಸರಳಾಳ ಹೃದಯ ಅಳುತ್ತೆ. ಯಾರದೋ ಹೃದಯ ನೊಂದ್ಕೊಳ್ಳುತ್ತೆ ಅಂತ ನಿಮ್ಮ ಮನಸ್ಸು ಬೇಜಾರ್ಮಾಡ್ಕೊಳ್ಳೋಕ್ಯಾಗುತ್ತೇನು"----ದಿಟ್ಟತನದಿಂದ ಇಷ್ಟೆಲ್ಲಾ ಭಾಷಣ

ಅವಳು ಮಾಡಿದ್ದರೂ ಕಣ್ಣು ತುಂಬಿ ಬಂದು ಅಲ್ಲೇ ಬಾಗಿಲಿಗೆ ಒರಗಿನಿಂತಳು.

ಶ್ಯಾಮು ತನ್ನ ಯೋಚನೆಗಳಿಂದ ಪೂರ್ಣ ಎಚ್ಚತ್ತಿದ್ದ. ಸುಮಿತ್ರೆಯ ಕಣ್ಣಲ್ಲಿ ನೀರು ! ಸ್ವಲ್ಪಕ್ಕೆ ಅಳುವ ಹುಡುಗಿಯಲ್ಲ ಅವಳು. ತಾನು ಅವಳ ಮನನೋಯುವಂತೆ ಮಾಡಿದುದು ಸರಿಯೆ? ಎಂದು ತನ್ನನ್ನು ತಾನೇ ಛಳಿಸಿ ಕೊಂಡು, ಎದ್ದು ಬಂದು ಬಾಗಿಲು ಮುಂದೆ ಮಾಡಿ, ಎರಡೂ ಕೈಗಳಿಂದ ಸುಮಿತ್ರೆಯನ್ನು ಹತ್ತಿರಕ್ಕೆಳೆದುಕೊಂಡ. ಮೃದುವಾಗಿ ಪಿಸುಗುಟ್ಟಿದ.

"ಅಳ್ತಿದೀಯಾ ಸುಮಿ"

"ಸುಮಿ" ಮತ್ತೂ ಮೃದುವಾಗಿತ್ತು ಧ್ವನಿ. ತನ್ನ ಕೆನ್ನೆಯನ್ನು ಅವಳ ಕೆನ್ನೆಗೆ ಒರಗಿಸಿ ಕರೆದ. ಅವಳ ಕೆನ್ನೆ ಒದ್ದೆಯಾಯಿತು----"ಏನಿದು ಹುಚ್ಚು ಸುಮಿತ್ರಾ" ಕಳವಳದಿಂದ ಕೇಳಿದ.

"ನನಗೆ ಸರಳಾನ್ನ ಕಂಡ್ರೆ ತುಂಬಾ ಇಷ್ಟ ಶ್ಯಾಮೂ" ಎಂದು ಗದ್ಗದಿತಳಾಗಿ ಅವನ ಎದೆಯ ಮೇಲೆ ಒರಗಿ ಬಿಕ್ಕಳಿಸಿದಳು.

ಅವನು ಅವಳ ಬೆನ್ನ ಮೇಲೆ ಕೈಯಾಡಿಸಿ ಆಶ್ವಾಸನೆಯ ದನಿಯಲ್ಲಿ ನುಡಿದ----

"ಒಳ್ಳೆಯದು ಸುಮಿತ್ರಾ, ನಿನಗಂತಹ ಗೆಳತಿ ಸಿಕ್ಕಿದ್ದಾಳೇಂತ ನಂಗೂ ಸಂತೋಷ. ನಾನೇನೂ ನಿನ್ನನ್ನ ಹೋಗ್ಬೇಡ ಅನ್ನಲಿಲ್ಲ. ಸುಮ್ನೆ ಮಗೂನ್ನ ತಮಾಷೆ ಮಾಡ್ದೆ. ನಿಜವಾಗಿ ಹೇಳಬೇಕೂಂದ್ರೆ ಆ ಸರಳಾನ್ನ ಒಂದ್ಸಲ ನೋಡ್ಬೇಕೂಂತ ನಂಗೂ ಇದೆ. ಆದ್ರೆ ನೀ ಒಂದ್ಸಲಾನಾದ್ರೂ ನನ್ನ ಕರೆದಿಲ್ಲ ಯಾಕೆ ಸುಮಿ ?"

"ನಾವು ನಾವು ಹೆಂಗ್ಸರ ಮಧ್ಯೆ ನೀವ್ಯಾಕೇಂತ ಕರೆದಿಲ್ಲ ಅಷ್ಟೆ."

"ಅಂದರೆ ನನ್ಮೇಲೆ ಚಾಡಿ ಮಾತೆಲ್ಲಾ ಹೇಳ್ಬಿಟ್ಟಿರ್ತೀಂತನ್ನು ಅವ್ಳಿಗೆ."

"ಅದು ಅವಳನ್ನೇ ಕೇಳಿದ್ರೆ ಗೊತ್ತಾಗುತ್ತೆ. ಈವತ್ತೇ ಬನ್ನಿ ನೀವೂನೂ ಹೋಗೋಣ."

--ಸಮಿತ್ರೆಯಲ್ಲಿ ದುಗುಡ ಮಾಯವಾಗಿ ಗೆಲುವು ಕಾಣುತ್ತಾ ಬಂತು

"ಬೇಡ ಬೇಡ. ಅವಳಿಗೆ ಷಾಕ್ ಆಗ್ಬಿಡಬಾರ್ದು"-- ಹಿಂತೆಗೆದ ಯಾಕೋ ಶ್ಯಾಮು.

"ಹಾಕ್ ಯಾಕೆ, ಅವಳಿಗೆ ತುಂಬಾ ಸಂತೋಷ ಆಗುತ್ತೆ."

'ಸಂತೋಷ ಆಗ್ಬಹುದ್ದು. ಆದ್ರೆ ಹೇಳ್ದೆ ಕೇಳ್ದೆ ಹಾಗೆ ಹೋಗೋದು ಚೆನ್ನಾಗಿಲ್ಲ. ಮುಂದಿನ ಸಲ ನೋಡೋಣ. ಈಗ ನೀನು ಹೋಗಿ ಬಾ."

"ಹೃತ್ಪೂರ್ವಕವಾಗಿ ಹೇಳ್ತಿದೀರಾ ಈ ಮಾತನ್ನ ?"

"ಎಂಥ ಹೊಸ ಪ್ರಶ್ನೆ ಇದು ಸುಮಿತ್ರಾ ? ನಾನು ಯಾವತ್ತಾದ್ರೂ ಅರ್ಧರ್ಧ ಮನಸ್ನಲ್ಲಿ ಮಾತಾಡಿದ್ದೇನಾ ? ನನಗೆ ಗೊತ್ತಿದೆ ಸುಮಿ. ಯಾವುದೋ ಅನುಬಂಧ ನಿನ್ನನ್ನ ಅವಳಿಗೆ ಹತ್ತಿರವಾಗಿ ಎಳೆಕೊಂಡು ಹೋಗ್ತಾ ಇದೆ. ನೀನು ಅಲ್ಲಿಗೆ ಹೋಗಿ ಬಂದ ದಿನ ಎಷ್ಟು ಸಂತೋಷವಾಗಿ ರ್ತೀಯ ಅನ್ನೋದೂ ನಂಗೊತ್ತು. ಅಂತಹ ವ್ಯಕ್ತಿತ್ವ ನಿನ್ನಕ್ಕಂದು. ಅವಳ ಆಫೀಸ್ನವ್ರು ಒಬ್ಬಬ್ರು ನನ್ಹತ್ರ ಹೇಳಿದ್ರು ಅವಳಂತ ಆಫೀಸರ್ ಸಿಕ್ಕೋದೇ ಕಷ್ಟ, ಅಂತ. ಬಡ ಗುಮಾಸ್ತರನ್ನ ತಾನೇ ಕರೆದು ಮಕ್ಕಳ ವಿದ್ಯಾಭ್ಯಾಸಕ್ಕೆ ಏನು ಮಾಡಿದ್ದಾರೆ ಅಂತ ವಿಚಾರಿಸಿ ಸಹಾಯ ಮಾಡ್ತಾಳಂತೆ. ಬಡ ವಿದ್ಯಾರ್ಥಿಗಳು ಯಾರೇ ಆಗಲಿ ಕರುಣೆ ತೋರಿಸ್ತಾಳಂತೆ. ನಮಗೂ ಒಂದು ಕಾಲಕ್ಕೆ ಸಹಾಯಕ್ಕಾಗ್ತಾಳೆ."

"ಅಂದರೆ ?"

"ಅಂದ್ರೆ ನಮ್ಮ ಹುಡುಗರು ಓದೋಕಾಲಕ್ಕೇಂತ."

"ನಿಮಗೇನೋ ಬಡತನ ಬಂದಿರೋದು." ಎಂದು ಅವನ ಉದ್ದವಾದ ಅಂದವಾದ ಮೂಗನ್ನು ಹಿಡಿದು ಜಗ್ಗಿದಳು.

"ನನ್ನ ಮೂಗಿನ ಮೇಲೆ ಯಾಕೆ ನಿನ್ನ ಕಣ್ಣು ?"

"ಅದು ಯಾಕಷ್ಟು ಚೆನ್ನಾಗಿರಬೇಕೂಂತ."

"ಹೊಟ್ಟೆಕಿಚ್ಚಿನ ಮೊಟ್ಟೆಕೋಳಿ. ನಿನ್ನ ಮೂಗಿನ ಮೇಲೆ ಲಾರಿ ಹರಿದು ಚಪ್ಪಟೆ ಆಗಿದ್ರೆ ಅದಕ್ಕೆ ನಾನೇನ್ಮಾಡ್ಲಿ ?" –ಕುಚೋದ್ಯವಾಡಿದ.

"ಏನು ? ಏನಂದ್ರಿ ?" ಎಂದು ಹತ್ತಿರ ಬಂದು ಅವನ ಕ್ರಾಪಿನಲ್ಲಿ ಕೈ ತೂರಿಸಿ ಕ್ರಾಪೆಲ್ಲಾ ಕೆಡಿಸಿಬಿಟ್ಟಳು. ಅವನು ಅವಳ ಕೈ ಹಿಡಿದು ಹತ್ತಿರ ಎಳೆದುಕೊಳ್ಳುವಷ್ಟರಲ್ಲೇ ತಪ್ಪಿಸಿಕೊಂಡು."

"ನಂಗೆ ಹೊತ್ತಾಯ್ತಪ್ಪ. ಸರಳಾ ಮಾಧೂ ಹೋಗೋಣ ನಡೀರಿ" ಎಂದು ಓಡಿದಳು.

"ಆಹಾ ಬಹಳ ಚೆನ್ನಾಗಿದೆ. ಸ್ವಲ್ಪ ಕನ್ನಡೀಲಿ ಮುಖ ನೋಡ್ಕೊಂಡು ದಯಮಾಡ್ಸಿ. ಸುಮಿತ್ರ ಅಂದ್ರೆ ಇಷ್ಟುದ್ದ ಅಷ್ಟುದಪ್ಪ. ಅಂತ ಆ ಸರಳ ತಿಳ್ಕೊಂಡಿರೋದು. ಇದು ನೋಡಿದ್ರೆ ಶುದ್ಧ ಅಳುಮೂಂಜಿ"—ಕೀಟಲೆ ಮಾಡಿದ ಶ್ಯಾಮು.

ನಿಜ ತಾನು ಅತ್ತಿದ್ದಳು. ಸ್ವಲ್ಪ ಕನ್ನಡೀಲಿ ಮುಖ ನೋಡ್ಕೊಂಡು ಪೌಡರು ಬಳಿದುಕೊಂಡು ಹೋಗುವುದೇ ಸರಿ ಎನಿಸಿತು.

ಶ್ಯಾಮು ಕುಳಿತ ಕುರ್ಚಿಯನ್ನು ಹಾದುಕೊಂಡೇ ಕನ್ನಡಿಯ ಬಳಗ ಹೋಗಬೇಕಿತ್ತು, ಶ್ಯಾಮು ಹೊಂಚು ಕಾಯುತ್ತಿದ್ದ ವಿಷಯವೇ ಮರೆತು ಹೋಗಿತ್ತು ಸುಮಿತ್ರೆಗೆ.

ಸುಮಿತ್ರ ಬಳಿಗೆ ಬಂದೊಡನೆಯೇ ಹಿಡಿದುಕೊಂಡ.

"ಬಿಡಿ, ಇದೇನು ಒಳ್ಳೆ ಚಿಕ್ಕವರ ಹಾಗೆ. ಹೊತ್ತು ಬೇರೆ ಆಯ್ತು. ಸ್ವಲ್ಪ ಪೌಡರು....

ಮೆಲ್ಲಗೆ ಕೇಳಿದ...."ನಾವು ಚಿಕ್ಕವರಲ್ಲದೆ ಮುದುಕರೇನು ? ಪೌಡರು ಹಾಕಿದ ಮೇಲೆ ಮತ್ತೆ ಕೆಟ್ಟುಹೋಗುತ್ತೆ, ನೀ ಬೈತಿ, ಅದಕ್ಕೆ ಈಗಲೇ ಒಂದೇ ಒಂದು...."

"ಮಕ್ಕಳನ್ನ ಕರೆದೆ. ಬಂದ್ರೋ ಏನೋ....ಬಿಡಿ" ತಪ್ಪಿಸಿಕೊಳ್ಳಲು ನೋಡಿದಳು.

ಅವಳಿಗೆ ಇಷ್ಟವಿರಲಿಲ್ಲವೆಂದಲ್ಲ. 'ಬೇಡ ಬೇಡ' ಎಂದು ಪಡೆದರೇನೇ ರುಚಿ. ಬೇಡಿದ ಕೂಡಲೇ ಕೊಟ್ಟರೆ ಅದರಲ್ಲಿ ಮೋಜೇನು ಬಂತು.

"ಪಾಪ, ನಾನು ನಿನಗೆ....ಕೊಟ್ಟಿರೋದು ಅವು ನೋಡೇ ಇಲ್ಲ ಅಲ್ವಾ ? ಮೊನ್ನೆ ಕಳ್ಳಿ ಸರೂ ಏನು ಕೇಳ್ತಿದ್ಲು ಗೊತ್ತೇನು ?"

"ಏನು ಕೇಳಿದ್ಲು ?" ಕಣ್ಣು ಮಿಟುಕಿಸಿದಳು ಸುಮಿತ್ರಾ.

"ನೀನು ಅಮ್ಮಂಗೆ ಕೊಡ್ತೀಯಲ್ಲಾ. ಅದು ನಂಗೂ ಕೊಡಣ್ಣ ಅಂದ್ಲು."

"ಅವಳಂದದ್ದು, ನೀವು ನಂಗೆ ಕೊಡ್ತಿರಲ್ಲಾ ಏಟು. ಅದನ್ನಿರ ಬೇಕು."

"ಸುಮಿತ್ರಾ. ಯಾವ್ಯಾವಾಗ ನಿನ್ನ ಹೊಡೆದಿದ್ದೀನಿ. ಹೇಳು"—ವ್ಯಾಕುಲವಾಗಿಯೇ ಕೇಳಿದ.

"ಬೇಕಾದಷ್ಟು ಸಲ. ಹೇಳೋಕ್ಕಾಗದಷ್ಟು ಸಲ"–ಕೀಟಲೆ ಮಾಡುತ್ತಲೇ ಇದ್ದಳು.

"ಸುಳ್ಳು. ಸುಳ್ಳು ಹೇಳ್ತೀಯಾ?" ಎಂದು ತನ್ನ ತುಟಿಯಿಂದ ಅವಳ ಹಾಲುಗೆನ್ನೆಯನ್ನು ಒತ್ತಿದ. ಅದುಬರಿ ಕೆನ್ನೆಯ ಕಡೆಗೆ ಹೋಗದೆ ಅವಳ ಬಾಯನ್ನು ಮುಟ್ಟಿತು.

ಶ್ಯಾಮುವಿಗೆ ತೃಪ್ತಿಯಾಯಿತು. ಸುಮಿತ್ರಾ ! ತನ್ನನ್ನು ಅನವರತವೂ ನಂಬಿರುವ ಸುಮಿತ್ರಾ ! ತಾನು ಭಾಗ್ಯಶಾಲಿ.

"ಹೋಗು ಸುಮಿ, ಬೇಗ ರೆಡಿ ಆಗಿ ಹೊರಡು"—ಅವನೇ ಆತುರಪಡಿಸಿದ.

ಬಸ್‌ಸ್ಟಾಪಿನವರೆಗೂ ಹೋಗಿ ಮಕ್ಕಳೊಂದಿಗೆ ಸುಮಿತ್ರೆಯನ್ನು ಬಸ್ಸು ಹತ್ತಿಸಿ ಬಂದ— "ಎಷ್ಟು ಹೊತ್ತು ಬೇಕಾದ್ರೂ ಇದ್ದು ಬಾ. ಇಲ್ಲಾ ಎಂಟು ಗಂಟೆ ಹೊತ್ಗೆ ನಾನೇ ಬಂದು ಕರ್ಕೊಂಡು ಬರ್ತೀನಿ."– ಎಂದು ಹೇಳಿದ.

ಸುಮಿತ್ರ ಯಾವಾಗಲೂ ಸಮಯದ ಮೇಲೆ ಗಮನವಿದ್ದವಳು "ಎಂದಿನಂತೆ ಆರು ಗಂಟೆಯ ಹೊತ್ತಿಗೆ ಬಂದು ಬಿಡ್ತೀನಿ" ಎಂದು ಆಶ್ವಾಸನೆ ನೀಡಿದಳು.

ಮನೆಗೆ ಹಿಂತಿರುಗಿದ ಶ್ಯಾಮುವಿಗೆ ಧ್ಯಾನ ಅಂತರ್ಮುಖವಾಯಿತು. ಅವನಿಗೇನೋ ಕಳವಳ. ಏಕೆಂದು ತಿಳಿಯದು. ತಾನು ಏನನ್ನೋ ಕಳೆದು ಕೊಳ್ಳುತ್ತಿದ್ದಂತೆ ಭಾಸವಾಗುತ್ತಿತ್ತು. ಅದು ಏನು ಎಂದು ತಿಳಿಯದು. ಸುಮಿತ್ರೆಯಲ್ಲಿ ಏನೂ ಬದಲಾವಣೆಯಿಲ್ಲ. ಸರಳೆಯ ಸ್ನೇಹವಾದ ಮೇಲೆ ಇನ್ನೂ ಕೋಪತಾಪ ಬಿಟ್ಟಿದ್ದಾಳೆ. ಆದರೂ ತನಗೇಕೋ ಅಶಾಂತಿ. ಎಲ್ಲಾ ನೆಮ್ಮದಿಯಿದ್ದರೂ ಯಾರೋ ತನ್ನನ್ನು ಅಣಕಿಸುವಂತೆ ಅನಿಸುತ್ತಿತ್ತು.

"ಸರಳಾ, ಓಯ್ ಸರಳಾ, ಓ ಹೋಯ್ ಸರಳಾ, ಏನ್ಮಾಡ್ತಾ ಇದ್ದೆ"

"ಒಗ್ಗರಣೆ ಹಾಕ್ತಾ ಇದ್ದೆ. ಸದ್ದಿನಲ್ಲಿ ಕೇಳಿಸ್ಲಿಲ್ಲ."

"ನಾನೇನು ಹೊರಡ್ಲೋ ಬೇಡ್ವೋ" ಬಂದು ಎಷ್ಟೋ ಹೊತ್ತಾದ ಮೇಲೆ ಹೋಗುವ ಜ್ಞಾನ ಸುಮಿತ್ರೆಗೆ.

"ಹೋಗು, ನಾನೇನೂ ಬೇಡ ಅನ್ನಲಿಲ್ಲವಲ್ಲಾ, ಸ್ವಲ್ಪ ಹುಳಿಯುವ ಲಕ್ಕಿ ತಿಂದು ಹೋಗ್ತೀಯೇನೋ ಅಂತ ಅವಸರವಸರವಾಗಿ ಮಾಡ್ದೆ. ಅದೇ ಮಿಗ್ತು ಹೋಗು."

"ಏನು ಹುಳಿಯುವಲಕ್ಕೀನಾ ? ಹಾಗಾದ್ರೆ ತಿಂದೇ ಹೋಗೋದು. ಸರೂ, ಮಾಧೂ ಬನ್ರೋ. ಎಲ್ಲಿ ಅವ್ರು."

"ಯಥಾಪ್ರಕಾರ ಕೇರ್ ಆಫ್ ಗೋಪಿ."

"ಸ್ವೀಟೇನೂ ಮಾಡ್ಲಿಲ್ವಾ....ಓ ಪೂರ್ ಶ್ಯಾಮು !"

"ಏನದು ಒಬ್ಳೇ ಗೊಣಗುಟ್ತಾ ಇದ್ದೀಯಲ್ಲಾ ?"

"ಆ್ಞ ? ಏನಿಲ್ಲ. ಒಂದು ಮಾತು ಕೇಳ್ಲಾ ಸರಳಕ್ಕ. ನಿನ್ನ ರೂಂ ನಲ್ಲಿ ಟೇಬಲ್ ಮೇಲಿದ್ಯಲ್ಲಾ ಸಣ್ಣ ಬೀರು. ಅದರಲ್ಲೇನಿದೆ ?"

ಬೆಚ್ಚಿಬಿದ್ದಳು ಸರಳಾ. 'ಒಂದ್ವೇಳೆ ಬೀಗ ಹಾಕೋದು ಮರೆತೆನೆ ? ಇಲ್ಲವಲ್ಲಾ. ಖಂಡಿತ ಹಾಕಿದ್ದೀನಿ. ಸುಮಿತ್ರ ಕುತೂಹಲದಿಂದ ಕೇಳಿರ ಬೇಕು ಅಷ್ಟೆ' ಎಂದು ಸಂಬಾಳಿಸಿಕೊಂಡು,

"ಏನಿಲ್ಲ ಒಂದಿಷ್ಟು ಬುಕ್ಸ್ ಇದೆ" ಎಂದಳು.

"ನಂಗೆ ಹೊಡೀಬೇಡ ಸುಳ್ಳು. ಪುಸ್ತಕಗಳಿರೋವಷ್ಟು ದೊಡ್ಡದಾಗಿಲ್ಲ ಆ ಬೀರು. ಅಲ್ಲದೆ ಘಂಅಂತ ಏನೋ ಒಂತರಾವಾಸನೆ ಇದೆ ಅದರೊಳಗಿಂದ"

"ಅಬ್ಬ ಸದ್ಯ ಇವಳು ನೋಡಿಲ್ಲ ಗೆದ್ದೆ" ಎಂದು ನಿಟ್ಟುಸಿರು ಬಿಟ್ಟು—

"ಬೆಳಿಗ್ಗೆ ಊದುಕಡ್ಡಿ ಹಚ್ಚಿ ಆ ಬೀರೂಗೆ ಸಿಗ್ಸಿದ್ದೆ. ಅದು ವಾಸ ನೇಂತ ಕಾಣುತ್ತೆ. ಬುಕ್ಸ್ ಅಂದ್ರೆ ಪ್ರಿಂಟಾಗಿರೋವಲ್ಲ, ನನಗೆ ಬರೆಯೋ ಹುಚ್ಚಿದೆ. ಬರೆದಿರೋದನ್ನ ಒಂದಿಷ್ಟು ಅದ್ರಲ್ಲಿ ತುರುಕಿದ್ದೀನಿ."

"ಹಾಗಾದ್ರೆ ನನಗೆ ತೋರ್ಸು, ನಾನು ಓತ್ತೀನಿ."

"ಬೇಡ. ಅದು ಎಲ್ಲಾರೂ ಓದೋಹಾಗಿಲ್ಲ."

"ಎಲ್ಲರೂ ಬೇಡ. ನಾನೊಬ್ಳು ಓತ್ತೀನಿ."

ಯಾಕೋ ಸುಮಿತ್ರೆಗೆ 'ಇಲ್ಲ' ಅನ್ನಲಾರದಾದಳು. ಆದರೂ ಆ ಬೀರು ಏನಲ್ಲಿ ಪುಸ್ತಕವಿದ್ದರಷ್ಟೆ ತೆಗೆದುಕೊಡುವುದು ! ಸುಮಿತ್ರೆಯ ಕಣ್ಣು ತಪ್ಪಿಸ ಲೋಸುಗ—

"ಸುಮಿತ್ರಾ ಒಲೇ ಮೇಲಿರೋದನ್ನ ಸ್ವಲ್ಪ ನೋಡ್ಕೋತಾ ಇರು, ಈಗಲೇ ತಂದ್ಕೊಡ್ತೀನಿ."

ಎಂದು ನಡೆದಳು. ಒಲೆಯ ಮೇಲಿರೋದನ್ನೇನೂ ನೋಡುವ ಅಗತ್ಯವಿರಲಿಲ್ಲ. ಸುಮಿತ್ರೆ ತನ್ನ ಹಿಂದೆಯೇ ಕೋಣೆ ಪ್ರವೇಶಿಸದಿದ್ದರೆ ಸಾಕು,

ಎಲ್ಲಿಯೋ ತುರುಕಿಟ್ಟಿದ್ದ ಕಥೆ ತಂದುಕೊಟ್ಟಳು ಸರಳಾ.

ಕಥೆ ಓದುತ್ತಾ ಕುಳಿತ ಸುಮಿತ್ರಾ ಮನೆಗೆ ಹೋಗುವ ವಿಷಯವೇ ಮರೆತಳು.

"ಹೇಗಿದೆ ಸುಮಿತ್ರಾ ಕಥೆ"—ಸರಳೆಯ ಪ್ರಶ್ನೆ ಕುತೂಹಲದ್ದಾಗಿತ್ತು, ಯಾರ ಕೈಗೂ ಹೋಗದೆ ಇದ್ದ ಹಸ್ತಪ್ರತಿ ಅದು.

ಮೊದಲ ಓದುಗಳು ಸುಮಿತ್ರ.

"ಬಹಳ ಚೆನ್ನಾಗಿದೆ. ಶೈಲಿ ಕಥೆ ಎಲ್ಲಾ ಸ್ವಾರಸ್ಯವಾಗಿದೆ. ಪಾತ್ರ ಗಳಂತೂ ತುಂಬಾ ಜೀವಂತವಾಗಿ ತಂದಿದ್ದಿ-ಮಾದ, ಮಾಲತಿ. ನಂಜುಂಡ—ಅದರಲ್ಲೂ ಲಚ್ಚಿ ! ! ತುಂಬು ಪ್ರೇಮದ ಲಚ್ಚಿಯ ಜೀವನಾನ್ನ ಅಷ್ಟು ದುರಂತ ಮಾಡಿದುದರ ಅರ್ಥವೇನು ಸರಳಕ್ಕ ?"

"ಅವಳ ಬಾಳು ದುರಂತವಾಗದೆ ವಿಧಿಯೇ ಇಲ್ಲ, ಮಾದನ ಮೇಲಣ ಅವಳ ಪ್ರೇಮ ಯಾವ ತ್ಯಾಗಕ್ಕೂ ಸಿದ್ಧವಿತ್ತು. ತನ್ನ ಶೀಲವನ್ನಾದ್ರೂ ಬಲಿ ಮಾಡಿ ಮಾದನನ್ನು ಉಳಿಸುವ ಅಗತ್ಯವಿತ್ತು. ಅವಳ ತ್ಯಾಗದ ಪರ ಮಾವಧಿ ಇದು. ಆದರೆ ಅವಳ ತ್ಯಾಗ ಮಾದನನ್ನು ಉಳಿಸಲಿಲ್ಲ. ಮಾದನೇ ಕಣ್ಮರೆಯಾದ ಮೇಲೆ ಅವಳ ಪ್ರೇಮ ಶಿಖರ ಕುಸಿದುಬಿತ್ತು. ಪ್ರೇಮ ಶೀಲ ಎರಡನ್ನೂ ಕಳೆದುಕೊಂಡ ಲಚ್ಚಿಯ ಅಂತ್ಯವಾಗಲೇಬೇಕಾಯಿತು."

"ನಾನು ಒಪ್ಪೋಲ್ಲ ಸರಳಾ. ಪ್ರೇಮ ಸ್ವರೂಪಿ ಲಚ್ಚಿಗೆ ಹೇಗಾದರೂ ಮಾಡಿ ನೀನು ಮಾದನನ್ನು ದೊರಕಿಸಿಕೊಡಬೇಕಿತ್ತು. ಲಚ್ಚಿಗೆ ಬಹಳ ಅನ್ಯಾಯ ಮಾಡಿದ್ದಿ."

"ಹೌದು, ಅದು ಕಥೆ. ನನ್ನ ಕೈಲಾದ ಹಾಗೆ ಯಾವಾಗ ಬೇಕಾ

ದರೂ ತಿದ್ದಬಹುದು. ಆದರೆ ಸುಮಿತ್ರಾ, ದಿನ ನಿತ್ಯದಲ್ಲಿ ಲಚ್ಚಿಯಂತೆ "ಪ್ರೇಮವೇ ದೈವ" ಎಂದು ಯಾವ ಬಲಿದಾನಕ್ಕಾದರೂ ಸಿದ್ಧವಾಗೋ, ನಮ್ಮ ಅಕ್ಕ ತಂಗೀರ ಬಾಳು ಸರಿ ಮಾಡೋಕ್ಕೆ ನಮ್ಮಿಂದ ಸಾಧ್ಯ ಆಗ್ತಾ ಇದ್ಯಾ ಹೇಳು ?"–ಈ ಮಾತು ಸರಳ ಆಡಿದಂತಿರಲಿಲ್ಲ. ಲಚ್ಚಿಯೇ ಎದ್ದು ಬಂದು ಪ್ರಶ್ನಿಸಿದಂತಿತ್ತು.

"ನೀನು ನೊಂದು ನುಡಿಯೋದು ನೋಡಿದ್ರೆ, ನಿನಗೆ ತಿಳಿದ ವ್ಯಕ್ತಿಯ ಕತೇನ್ನೇ ಬರೆದ ಹಾಗಿದ್ಯಲ್ಲಾ."

"ಅಂತಾವ್ರು ಇರೋಲ್ಲ ಅಂತೀಯಾ ಸುಮಿತ್ರಾ. ನೂರಕ್ಕೆ ಒಬ್ಬರಲ್ಲ ದಿದ್ರೂ. ಸಾವಿರಕ್ಕಾದ್ರೂ ಒಬ್ರು ಇರ್ತಾರೆ. ಜೀವನದಲ್ಲಿ ನಿಷ್ಠೆ ಪ್ರಾಮಾಣಿಕತೆಗಳಿಗೆ ಬೆಲೆ ಕೊಡೋ ಪ್ರತಿ ಹೆಣ್ಣೂ ಒಬ್ಬನಿಗೆ ಮನಸ್ಸು ಕೊಟ್ಟ ಮೇಲೆ ಮತ್ತೊಬ್ಬನನ್ನು ಪ್ರೇಮಿಸಲಾರಳು.

ಸ್ತ್ರೀಯ ಹೃದಯ ಒಂದೇ ಒಂದು ಪ್ರತಿಬಿಂಬವನ್ನು ತೋರಿಸುವ ಕನ್ನಡಿ. ನನ್ನ ಈ ವಾದ ಈಗಿನ ಕಾಲದ ತರುಣ–ತರುಣಿಯರಿಗೆ ಹಿಡಿಸೊಲ್ಲ. ಅವರಿಗೆ ವಿನೋದ ವಿಲಾಸಗಳು ಪ್ರಾಮುಖ್ಯ. ಹುಡುಗರೂ. ಹುಡುಗಿಯರೂ ಒಟ್ಟೊಟ್ಟಿಗೆ ಓಡಾಡಿ ಕುಣಿದು ಕುಪ್ಪಳಿಸೋದೇ ಬಾಳು ಅಂತ ತಿಳಿಯೋ ಅವ್ರಿಗೆ ನಂದು ಒಣ ವೇದಾಂತ, ಗೊಡ್ಡು ಅಭಿಪ್ರಾಯ.

ನೀನೂ ಸ್ವಲ್ಪ ನನ್ನ ಅಭಿಪ್ರಾಯಗಳ ಕಡೆಗೇ ಇರೋದ್ರಿಂದ ಈ ಭಾಷಣ ಅಷ್ಟೆ. ಈ ಕಾರಣಕ್ಕಾಗೇ ನನಗೂ ಇಂದಿರಾಗೂ ಯಾವಾಗ್ಲೂ ವಾದ ವಿವಾದ. ನಾನು ಪೂರ್ವ ಅಂದ್ರೆ, ಅವಳು ಪಶ್ಚಿಮ ಅಂತಾಳೆ. ಅನ್ನೋದೇನು ಅವಳು ಶುದ್ಧವಾಗಿ ಪಶ್ಚಿಮವೇ."

"ಅಂದಹಾಗೇ, ಇತ್ತೀಚೆಗೆ ಒಂದ್ಸಲನಾದ್ರೂ ನಾನ್ನೋಡ್ಲಿಲ್ಲ ವಲ್ಲಾ ಡಾಕ್ಟರನ್ನ. ಈ ಕಡೆ ಹೆಚ್ಚಾಗಿ ಬರೋಲ್ವ ?"

"ಬರ್ತಾಳಲ್ಲ. ಬರದೇ ಏನು ? ಮೊದಲೇ ಕುಬೇರಪುತ್ರಿ, ಮೇಲು... ವೈದ್ಯವೃತ್ತಿ, ಈಗ ಕೇಳ್ಬೇಕಾ ಪ್ರೇಯಸಿ ಬೇರೆ. ಅವಳಿಗೆ ಪುರಸೊತ್ತಿರೋಲ್ಲ. ನೀನು ನನ್ನೊಂದಿಗೆ ನನ್ನವಳಾಗಿ ಸ್ವಲ್ಪಕಾಲ ಉಳಿಯೋಕ್ಕೇಂತ ಬರೋ ತಂಗಿ, ಅದಕ್ಕಾಗಿ ಭಾನುವಾರ ಆರಿಸಿ ನನ್ನ ಬಿಡುವು ನೋಡಿ ಬರುತ್ತೀ.

ಅವಳೇ ನನ್ನ ಒಳಿತು ಕೋರಿ ಯೋಗಕ್ಷೇಮ ನೋಡೋ ಗೆಳತಿ. ಯಾವಾಗ ಸಮಯ ಸಿಕ್ರೆ ಆವಾಗ ಬಂದು ನೋಡಿ ಹೋಗ್ತಾಳೆ.

"ಸರಿ....ಸರಳಕ್ಕ ನಾನೀಕಥೇನ್ನ ಮನೇಗೆ ತೊಕೊಂಡು ಹೋಗ್ಲಾ ?"—ಗಿಂಜುತ್ತಾ ಕೇಳಿದಳು. ಅವಳಿಗೆ ಗೊತ್ತು ಸಿಗುವುದು ನಕಾರದ ಉತ್ತರ ಎಂದು.

ಸರಳಾ 'ಏಕೆ' ಎಂಬಂತೆ ಪ್ರಶ್ನಾರ್ಥಕವಾಗಿ ನೋಡಿದಳು.

"ನನ್ನವರಿಗೆ ತೋರಿಸೋಣಾಂತ" ಉತ್ತರ ನೀಡಿದಳು ತಂಗಿ.

"ನತಿಂಗ್ ಡುಯಿಂಗ್, ನಿಂಗೆ ತೋರ್ಸಿದ್ದೇ ಹೆಚ್ಚು. ನಾ ಬರೆಯೋದನ್ನ ಪ್ರಚಾರಕ್ಕಿಡೋದಿಲ್ಲ. ಸುಮ್ನೆ ನನ್ನ ತೃಪ್ತಿಗೆ ಬರೆದಿಡ್ತೀನಿ."

"ಇದನ್ನ ನಾನು ತೆಗೊಂಡು ಹೋಗೇ ಹೋಗ್ತೀನಿ"—ಖಂಡಿತವಾಗಿ ನುಡಿದಳು ಸುಮಿತ್ರ

"ನೋ ಅಂದ್ರೆ ನೋ. ನಿಂಗೊತ್ತಿಲ್ಲ ಸುಮಿತ್ರ. ಕತೆಗಳಲ್ಲಿ ಹೆಂಗಸ್ರಿಗಿರೋ ಆಸಕ್ತಿ ಗಂಡಸ್ರಿಗಿರೋಲ್ಲ. ಅದೂ ಇಂಥ ಕಥೆ ! ಸೆಂಟಿಮೆಂಟಲ್ ನಾನ್‌ಸೆನ್ಸ್ ಅಂತ ಬಿಸಾಕ್ತಾರೆ."

"ನಿಂಗೆ ನನ್ನವ್ರ ಸಮಾಚಾರ ಗೊತ್ತಿಲ್ಲಮ್ಮ."

"ನೀನೆಂದಾದ್ರೂ ಹೇಳಿದೀಯಾ ಗೊತ್ತಾಗೋಕ್ಕೆ. ಒಂದ್ಸಲಾನಾದ್ರೂ ಕರ್‍ಕೊಂಡ್ಬಂದು ಪರಿಚಯ ಮಾಡಿಸಿದ್ದೀಯಾ ಹೇಳು ?"

"ಪಾಪ ಬಹಳ ಕರೆದೆ ನೀನು ನೋಡು."

"ನಿನ್ನ ಗಂಡನ್ನ ನಾನು ಕರೆದ್ರೆ ಚೆನ್ನಾಗಿರುತ್ತೇನು ?"

"ಕರೀದೇನೇ ಕರ್‍ಕೊಂಡ್ಬಂದ್ರೆ ಚೆನ್ನಾಗಿರುತ್ತೇನು ?"

"ಅಬ್ಬ, ಸವಾಲಿಗೊಂದು ಸವಾಲು. ಹೋಗ್ಲಿ, ಇನ್ನೊಂದ್ಸಲ ಬರೋವಾಗ ಕರ್‍ಕೊಂಡ್ಬಾ. ತಿಳೀತಾ ನಿನ್ನ ಗಂಡ ನೋಡೋಕ್ಕೆ ತುಂಬಾ ಚೆನ್ನಾಗಿದಾರೇಂತ ಕಾಣತ್ತೆ. ಅದಕ್ಕೆ ನನ್ನ ಗೆಳೆತನ ಮಾಡ್ಸೋಕ್ಕೆ ನಿಂಗೆ ಭಯ."

"ಹೌದು ಮತ್ತೆ. ಚೆನ್ನ ಚೆನ್ನಾಗಿರೋವ್ರು ಇಬ್ರೂ ಸೇರ್‍ಕೊಂಡು...."

ಬೆನ್ನ ಮೇಲೊಂದು ಬಿತ್ತು ಸುಮಿತ್ರೆಗೆ.

"ಸರಳಕ್ಕಾ. ನಿಜವಾಗೂ ನಾನೀವತ್ತು ಅವರ್ನ ಬನ್ನೀಂತ ಕರೆದೆ. ಇನ್ನೊಂದಿನ ಅಂದ್ಬಿಟ್ರು."

"ನೀನು 'ಬನ್ನಿ' ಅಂತ ಖಂಡಿತ ಅಂದಿರೋಲ್ಲ ನಂಗೊತ್ತು. ಒಂದ್ವೇಳೆ ಅವರಾನೇ ಬರ್ತೀನೀಂತಂದ್ರೂ 'ಬೇಡ ನೀವ್ಯಾಕೆ' ಅಂದಿರ್ತಿ ನೀನು ಗಯ್ಯಾಳಿ" ಸದರದಿಂದ ನುಡಿದಳು.

"ಇಲ್ಲಮ್ಮ. ಖಂಡಿತ ಬನ್ನಿ ಅಂದೆ. ಹೇಳ್ದೆ ಕೇಳ್ದೆ ಹೋದ್ರೆ ನಿನ್ನ ಫ್ರೆಂಡು ಷಾಕ್ ಆಗ್ಬಿಡ್ತಾಳೆ ಇನ್ನೊಂದಿನ ಮೊದಲೇ ತಿಳಿಸ್ಬಿಟ್ಟು ಹೋಗೋಣ ಅಂದ್ರು. ಇದು ನಿಜ."

"ನಂಬ್ತೀನಿ ಬಿಡು. ಸುಮಿತ್ರಾ,"

ಸ್ವಲ್ಪ ತಡೆದು ಕೇಳಿದಳು–"ನಂಗೊಂದು ದೊಡ್ಡ ಸಂಶಯ. ಸಾಧಾರಣವಾಗಿ ಮದುವೆ ಆದ ಪ್ರತಿ ಹುಡುಗೀನೂ ನನ್ನ ಗಂಡ ಹೀಗೆ, ನನ್ನ ಮಕ್ಕಳು ಹಾಗೆ ಅಂತ ಹೇಳಿ ಹೇಳಿ ಬೋರ್ ಮಾಡ್ತಾರಲ್ಲಾ, ನೀ ಒಂದ್ಸಲಾನಾದ್ರೂ ನಿನ್ನ ಗುಡನ ಸುದ್ದಿ ನನ್ನ ಹತ್ರ ಹೇಳ್ಳಿಲ್ವಲ್ಲಾ ಎಂತ ತಮಾಷೆ. ಅಥವಾ ನಾನು ನನ್ನ ಭಾಷಣಗಳಲ್ಲಿ ನಿಂಗೆ ಆಸ್ಪದ ಕೊಡಲಿಲ್ವೋ ?"

"ಛೆ, ಹಾಗೇನಿಲ್ಲಪ್ಪ. ಹೇಳ್ಕೊಳ್ಳೋಂತಾ ಪವಾಡ ಪುರುಷರೇನಲ್ಲ ನನ್ನ ಗಂಡ. ಹಾಗೆಲ್ಲಾ ನನ್ನದೇ ನನ್ನದಾಗಿ ಹೇಳಿಕೊಳ್ಳೋ ಸ್ವಭಾವಾನೂ ನಂದಲ್ಲ: ನನ್ನ ಮಕ್ಕಳನ್ನ ನೋಡೇ ಇದ್ದಿ. ಅವರನ್ನ ಇಷ್ಟರಲ್ಲೇ ನೋಡ್ತಿ. ಇನ್ನೇನು ತಾನೇ ಹೇಳ್ಲಿ ?"––ಸರಳವಾಗಿ ನುಡಿದಳು ಸುಮಿತ್ರ.

ಸುಮಿತ್ರೆಯ ಮಾತು ಸರಳವಾಗಿದ್ದರೂ. ಸರಳೆಗೆ ಗೂಢವಾಗಿಯೇ ಗೋಚರಿಸಿತು. ಒಮ್ಮೆಯಾದರೂ ಗಂಡನನ್ನು ಹೊಗಳಿಕೊಳ್ಳದೆ ಇರುವ ತರುಣಿ ಇದಾಳೆಯೆ ? ಗಂಡ ಹೆಂಡಿರಲ್ಲಿ ಏನಾದರೂ ವಿರಸವೆ? ಇರಲಾರದು. ಸುಮಿತ್ರೆಯ ಮುಖವೇ ಹೇಳುತ್ತದೆ, ಅವಳು ಸಂಪ್ರೀತಿಯಿಂದ ಇದ್ದಾಳೆಂದು ನೊಂದವಳಾಗಿದ್ದರೆ ಒಮ್ಮೆಯಾದರೂ ಬಿಸಿ ನುಡಿ ಹೊರ ಬರಬೇಕಿತ್ತು. 'ಚೆನ್ನಾಗಿರಲಿ ತಂಗಿ' ಎಂದು ಅಂದುಕೊಂಡಳು.

"ನಾನು ನೋಡೋದಿರಲಿ. ಅದಕ್ಕೆ ಮುಂಚೆ ಸ್ವಲ್ಪ ಮುನ್ನುಡಿ ಹೇಳ ಬಾರದೇನು ?"

"ಹೇಳೋಷ್ಟು ಏನೂ ಇಲ್ಲ ಸರಳಾ. ಇಲ್ಲಿನ ಕಾಲೇಜ್‌ನಲ್ಲಿ ಲೆಕ್ಚರರ್

ಆಗಿದ್ದಾರೆ. ಸುಮಾರು ಐದುಸಾವಿರ ರೂಪಾಯಿ ಸಂಬಳ ಬರುತ್ತೆ. ಮನೆ ಕೆಲ್ಸದಲ್ಲಿ ನಂಗೆ ತುಂಬಾ ಸಹಾಯ ಮಾಡ್ತಾರೆ. ನನ್ನ ಕಂಡ್ರೆ ತುಂಬಾ ಇಷ್ಟ. ಮಕ್ಕಳನ್ನ ಕಂಡ್ರೆ ಪ್ರಾಣ. ಅದರಲ್ಲೂ ಈ ಸರಳಾ ಅಂದ್ರೆ ಹೇಳ್ಬೇಡ. ಆಮೇಲೆ....ಆಮೇಲೆ...."

"ನಿಲ್ಸು ಸುಮಿತ್ರಾ. ಏನದು ಹಾಗೆ ಹೇಳ್ತಿದ್ದಿ, ಮಕ್ಕಳು, ಗಟ್ಟಿ ಮಾಡಿದ ಪಾಠ ಒಪ್ಪಿಸೋವಾಗ ತಡವರಿಸೋ ಹಾಗೆ."

"ಸತ್ಯವಾಗ್ಲೂ, ನಂಗೆ ಹೇಗೆ ಹೇಳೋಕ್ಕೂ ತೋಚಲ್ಲ ಸರಳಾ."

"ಬೇಡದ್ದೆಲ್ಲಾ ತಲೆಹರಟೆ ಹೊಡ್ಕೋವಾಗ ನಿರರ್ಗಳವಾಗಿ ಸಾಗುತ್ತೆ. ನಾಲಗೆ."

"ನಿಜ, ಹೊಗಳ್ಕೋತೀನಿ ಅಂದ್ಕೋಬೇಡ. ನಂಗ್ಯಾವಾಗ್ಲೂ ನನ್ನ ವಿಷಯ ಮಾತಾಡ್ಬೇಕೂಂದ್ರೆ ನಾಲಗೆ ತಡವರಿಸುತ್ತೆ."

"ಹಾಗೇ ಇರ್ಬೇಕು ಸುಮಿತ್ರ, ಕನಕದಾಸರು ಒಂದ್ಸಲ ಅಂದ್ರಂತೆ– 'ಮೋಕ್ಷ ಪಡೆದು ಹೋಗುವವರು ಯಾರು' ಅಂದಾಗ "ನಾನು ಹೋದರೆ ಹೋದೇನು" ಅಂತ. ಜನ ಎಲ್ಲಾ 'ಇವನಿಗೆಷ್ಟು ಸೊಕ್ಕು. ಇವನಿಗೆ ಮಾತ್ರ ಮೋಕ್ಷವಂತೆ' ಅಂತ ಅಣಕಿಸಿದ್ರು. ಆಗ ಅವರು ನಕ್ಕು "ನಾನು ಅಂದ್ರೆ ನಾನು ಕನಕದಾಸ ಅಲ್ಲ. ನಾನು ಅನ್ನೋ ಅಹಂ" 'ನನ್ನತನ' ಹೋದರೆ ಮೋಕ್ಷ ಸಾಧ್ಯ ಅಂದ್ರಂತೆ. ಒಂದು ಬಾಲನುಡಿಯಿಂದ ಸಹಸ್ರರ ಕಣ್ಣು ತೆಗೆಸಿದ್ರು ದಾಸರು."

ಅಷ್ಟು ದೊಡ್ಡ ವೇದಾಂತ ನಮಗೆ ಬೇಡಾಂತಿಟ್ಕೊ. ನಾನು ನನ್ನ ಮನೆ. ನನ್ನ ಗಂಡ, ನನ್ನ ಮಕ್ಕಳು ಅನ್ನೋ ಅಭಿಮಾನ ಇರ್ಬೇಕು. ಆದ್ರೆ ಅದೇ ನಮ್ಮ ಮುಖ್ಯ ಧ್ಯೇಯಮಾಡಿ, ಮಿಕ್ಕದ್ನೆಲ್ಲಾ ತೃಣೀಕರಿಸ್ಬಿದ್ರೆ ಹೇಗೆ. ನಿನ್ನ ಗುಣಕ್ಕೆ ತಲೆ ತೂಗ್ತೀನಪ್ಪ.

ನಿಜಾನೇ. ತಾಯ್ತನ ಎಲ್ಲಕ್ಕೂ ಹೆಚ್ಚು. ಈ ವಿಷಯ ಎಲ್ಲರ್ಗೂ ತಿಳಿದಿರೋವಾಗ ಅದನ್ನೇ ಹೊಗಳ್ತಾ ಕೂತ್ಕೊಳ್ಳೋದಕ್ಕಿಂತ, ನಮ್ಮ ಸುತ್ತ ಮುತ್ತ ಇರೋ ಎಷ್ಟೋ ಸಮಸ್ಯೆಗಳ್ನ ಯೋಚ್ಸಿ, ಪರಿಹಾರ ಹುಡ್ಕಿ, ಸಾಧ್ಯವಾದ್ರೆ ಪರರಿಗೂ ಸಹಾಯ ಮಾಡಿ ಬಾಳ್ವೆ ನಡೆಸ್ಬೇಕು. ಈ ವಿಷಯಾನ್ನ,

ವಿದ್ಯಾವಂತರಾದ ಗೃಹಿಣೀರಾದ್ರೂ ತಿಳ್ಕೋಬೇಕು, ಆದ್ರೆ ಊಹೂಂ ಕೇಳ್ಬೇಡ ನಮ್ಮ ಸಮಾಜದಲ್ಲಿ....

"ಬೇಜಾರಾಯ್ತಾ ಸುಮಿತ್ರಾ ಒಂದೇ ಸಮ ಏನೇನೋ ಬಡಬಡಿಸ್ತಾ ಇದೀನಿಂತ"

"ಇಲ್ಲಪ್ಪ, ಈ ಪುಟ್ಟ ತಲೇಲಿ ಅದೆಷ್ಟು ವಿಷಯ ತುಂಬಿದೆ ಅಂತ ಬಾಯ್ಬಿಟ್ಕೊಂಡು ಯೋಚಿಸ್ತಾ ಇದ್ದೆ"

ಸುಮಿತ್ರೆ ಹಾಸ್ಯಕ್ಕೇನೂ ಹೇಳಲಿಲ್ಲ ಈ ಮಾತನ್ನು. ನಿಜಕ್ಕೂ ಅವಳಿಗೆ ಒಂದೊಂದು ಸಲವೂ ಸರಳೆಯ ಒಂದೊಂದು ಹೊಸ ಮುಖದ ಪರಿಚಯವಾಗುತ್ತಿತ್ತು.

ಸರಳ ಸಂಭಾಷಣೆಯ ಸರಳಾ, ಮಕ್ಕಳ ಗೆಳತಿ ಸರಳಾ, ಕರುಣಾಮಯಿ ಸರಳಾ, ನಿರಾಶಾವಾದಿ ಸರಳಾ, ಜಾಗೃತ ಪ್ರಜ್ಞೆಯ ಸರಳಾ, ಕಲೋಪಾಸಕಿ ಸರಳಾ, ಸಾಹಿತ್ಯಪ್ರಿಯೆ ಸರಳಾ, ಇತ್ಯಾದಿ ಇತ್ಯಾದಿ.

"ಸ್ವಲ್ಪ ಹಾಗೇ ಯೋಚಿಸ್ತಾನೇ ಇರು, ಒಲೆ ಮೇಲೆ ಹಾಲಿಟ್ಟಿದ್ದೆ ನೋಡಿ ಬರ್ತೀನಿ" ಎಂದು ಹಾಸ್ಯಮಾಡಿ ಒಳಗೆ ಹೋದಳು.

ಲಚ್ಚಿಯಂತವರು ನೂರಕ್ಕೊಬ್ಬರಲ್ಲದಿದ್ದರೂ ಸಾವಿರಕೊಬ್ಬರಾದ್ರೂ ಇರ್ತಾರೆ ಎಂದಿದ್ದಳು ಸರಳಾ. ಆದರೆ ಸರಳೆಯಂತವರು ಸಾವಿರಕ್ಕೆ ಒಬ್ಬರೂ ಇಲ್ಲ ಎಂದಿತು ಸುಮಿತ್ರೆಯ ಮನಸ್ಸು. ಆದರೂ ಸರಳೆಯ ಹೃದಯಾಂತರಾಳದಲ್ಲಿ ಯಾವುದೋ ಯಾತನೆ ಅಡಗಿದೆ ಎಂದು ಕೆಲವೊಮ್ಮೆ ಸ್ಫುರಿಸುತ್ತಿತ್ತು. ಕೇಳುವುದು ಹೇಗೆ ? ಏನೆಂದು ? ತಾನಷ್ಟು ಆತ್ಮೀಯಳೆ ಸ್ವಂತ ವಿಷಯ ಚರ್ಚಿಸುವಷ್ಟು ! ತನಗೆ ಅವಳು ಕೊಡುತ್ತಿರುವ ಅನವರತ ಆನಂದಕ್ಕೆ ಪ್ರತಿಯಾಗಿ ಒಂದಲ್ಲ ಒಂದು ದಿನ ತಾನು ಸರಳೆಯ ಹೃದಯವನ್ನು ಹಗುರಗೊಳಿಸಲೇಬೇಕು.

ಮನಸ್ಸೆಲ್ಲೋ ಓಡುತ್ತಿತ್ತು. ಆದರೆ ಕಣ್ಣುಗಳು ಮಾತ್ರ ಬಾಗಿಲಲ್ಲಿ ಬಂದು ನಿಂತು ಹುಡುಗನನ್ನು ನೋಡಿತು.

"ಯಾರು ಮಗು ನೀನು ? ಏನು ಬೇಕಿತ್ತು" ಕೇಳಿದಳು ಸುಮಿತ್ರಾ.

"ಸರಳಾ ಚಿಕ್ಕಮ್ಮ ಇಲ್ವೇನ್ರಿ ?"–ಹದಿಮೂರರ ಗಂಡಸು ಕೇಳಿದ.

ಹುಡುಗ ಚೂಟಿಯಾಗಿದ್ದ. ಆದರೂ ಅಶ್ಯಾಂತಿತ್ತು. ಅವನ ಮುಖ

ಗಲ್ಲಗಳು ಕೆಂಪೇರಿದ್ದುವು. ಕಣ್ಣಿವೆಗಳಲ್ಲಿ ಇನ್ನೂ ನೀರು ನಿಂತಿತ್ತು. ಅವನನ್ನು ನಗಿಸಬೇಕೆಂದು

"ಇಲ್ಲ ಕಣ್ರಿ ಸುಮಿತ್ರಾ ದೊಡ್ಡಮ್ಮ ಇದ್ದಾಳೆ ಬೇಕೇನ್ರಿ?" ಎಂದಳು.

ಹುಡುಗ ನಗಲಿಲ್ಲ.

"ಹಾಗಾದ್ರೆ ಚಿಕ್ಕಮ್ಮ ಇಲ್ವೇನ್ರಿ ? ಎಲ್ಲಿ ಹೋಗಿದ್ದಾರ್ರಿ ? ಎಷ್ಟು ಹೊತ್ತಿಗೆ ಬರ್ತಾರ್ರಿ ?" ಬಹಳ ವ್ಯಾವಹಾರಿಕವಾಗಿದ್ದಂತೆ ಕಂಡಿತು.

"ಒಳಗೆ ಬಾಪ್ಪ. ಸರಳಾ ಇದ್ದಾಳೆ. ನಾ ತಮಾಷೆಗೆ ಹೇಳ್ದೆ, ಕೂತ್ಕೋ ಬಾ....ಸರಳಾ ನಿನ್ಮಗ ಬಂದಿದಾನೆ ಬಾರಮ್ಮ ಇಲ್ಲಿ....ಯಾಕಪ್ಪಾ ಅಳ್ತಾ ಇದ್ದಿ ? ಯಾಕೊ ? ನಿನ್ನ ಹೆಸರೇನು"

ಒಂದಕ್ಕೂ ಉತ್ತರವಿಲ್ಲ.

ಸರಳಾ ಹೊರಗಡೆ ಬಂದಳು. ಹುಡುಗ ಯಾರೆಂದು ಅವಳಿಗೆ ತಿಳಿಯದು. ಆದರೆ ರವಿಗೆ ಸರಳಾ ಚೆನ್ನಾಗಿ ಗೊತ್ತು. ಸರಳೆಯನ್ನು ಕಂಡ ಕೂಡಲೇ ಚಟ್ಟನೆ ನಿಂತ ರವಿ.

ಸರಳಾ ಅವನ ಬಳಿಯೇ ಬಂದು ಬೆನ್ನು ತಡವಿ "ಕೂತ್ಕೋಪ್ಪ. ಯಾರು ನೀನು ?" ಎಂದು ಮೃದುವಾಗಿ ಕೇಳಿ ಅವನ ಪಕ್ಕದಲ್ಲೇ ಸೋಫಾದಲ್ಲಿ ಕುಳಿತಳು.

"ನಾನು ರವಿ ಚಿಕ್ಕಮ್ಮ"—ನನ್ನನ್ನು ಮರೆತುಬಿಟ್ಟೆಯ ಎನ್ನುವಂತಿತ್ತು ಅವನ ಉತ್ತರ.

"ಓ ರವೀನಾ ?ಸರಿ, ನೀ ಯಾರ್ಮಗ ಹೇಳು?" ನೀನಾರೋ ತಿಳಿಯದು ಎಂದು ಆ ಹುಡುಗನಿಗೆ ಹೇಳಲಾರದೆ ಕೇಳಿದ ಮರುಪ್ರಶ್ನೆ ಸರಳೆಯದು

ರವಿ ಸರಳೆಯ ಮೃದು ನುಡಿ ಧೈರ್ಯ ಕೊಟ್ಟಿತು.

"ನಾನು ರಾಮಣ್ಣನೋರ ಮಗ. ಗೋಪಿ ಇಲ್ವಾ ಅವನಣ್ಣ ನಾಣಿ ಇಲ್ವಾ. ನಾಣೀನೂ ನಾನೂ ಫ್ರೆಂಡ್ಸು ? ಒಂದೇ ಕ್ಲಾಸ್.

"ಓ ನೀನು ನಾಣಿ ಫ್ರೆಂಡ್ಸಾ ? ಅಂದ್ರೆ ಎಸ್.ಎಸ್.ಎಲ್.ಸಿ. ಅನ್ನು. ಭಾಳ ಜಾಣ ನೀನು. ಈಗ್ಯಾಕೆ ನೀನು ಈ ಚಿಕ್ಕಮ್ಮನ್ನ ಹುಡುಕ್ಕೊಂಡು ಬಂದ್ಯಲ್ಲಾ....ಎಲ್ಲಿ ? ಅಳ್ತೀಯಾ ? ಯಾಕೆ ?"

"ಯಾಕೂ ಇಲ್ಲ ಚಿಕ್ಕಮ್ಮ. ಆಮೇಲೆ ಹೇಳ್ತೀನಿ"--ಎಂದು ಸುಮಿತ್ರೆಯ ಕಡೆಗೆ ನೋಡಿದ.

ಹುಡುಗ ಅಭಿಮಾನಿ ಇದ್ದಾನೆಂದು ತಿಳಿದು ಸರಳಾ ಸುಮಿತ್ರೆಯನ್ನು ಒಳಗೆ ಕಳುಹಿಸಿಬಿಟ್ಟಳು--"ಹೇಳು ರವಿ. ಯಾರಿಗೂ ಹೇಳೋಲ್ಲ ಹೇಳು."

ಹುಡುಗ ಬಿಕ್ಕುತ್ತಾ "ನಮ್ಮಣ್ಣ ನಾಳೆ ಪರೀಕ್ಷೆಗೆ ಹಣ ಕಟ್ಟಬೇಕಂತೆ. ಅಪ್ಪನ ಹತ್ರ ಒಂದು ಕಾಸೂ ಇಲ್ವಂತೆ 'ಈ ಸಲ ಕಟ್ಟಲೇಬೇಡ ಅಂತಂದ್ಬಿಟ್ರು. ಅಪ್ಪ ಎಲ್ಲೆಲ್ಲೋ ಕೇಳಿದ್ರಂತೆ. ಎಲ್ಲೂ ಸಿಕ್ಕಲಿಲ್ವಂತೆ ದುಡ್ಡು ಚಿಕ್ಕಮ್ಮ. ಅಣ್ಣ ಊಟ ಬಿಟ್ಟು ಮಲಗಿಬಿಟ್ಟಿದ್ದಾನೆ ಚಿಕ್ಕಮ್ಮ. ನಮ್ಮಣ್ಣ ತುಂಬಾ ಒಳ್ಳೇವ್ನು. ತುಂಬಾ ಬುದ್ಧಿವಂತ. ಯಾವಾಗ್ಲೂ ಫಸ್ಟ್‌ಕ್ಲಾಸೇ ಬರ್ತಿದ್ದ. ಅವನು ಎಂ.ಎಸ್.ಸಿ. ಮಾಡ್ಬಿಟ್ಟು ನನ್ನನ್ನು ಓದಿಸ್ತೀನಂತ ಹೇಳ್ತಾ ಇದ್ದ. ಈವಾಗ ಅವನ್ಗೇ ಇಲ್ಲ ಚಿಕ್ಕಮ್ಮ. ನಾವು ತುಂಬಾ ಬಡವ್ರು ಚಿಕ್ಕಮ್ಮ"--ಜೋರಾಗೇ ಅತ್ತುಬಿಟ್ಟ ರವಿ.

"ಅಳಬಾರ್ದು ರವಿ. ದೇವ್ರು ಯಾವಾಗ್ಲೂ ಬಡವ್ರನ್ನ ಅಳಿಸಿ, ಅವರಿಗೆ ಸಹಾಯ ಮಾಡಿ ನಗಿಸ್ತಾನೆ. ನೀವು ಈವಾಗ ಬಡವರಾದ್ರೂ ಅಣ್ಣ ಎಂ.ಎಸ್.ಸಿ. ಮಾಡಿ ದೊಡ್ಡ ಕೆಲ್ಸ ಹಿಡ್ದಾಗ ಬಡತನ ಎಲ್ಲಾ ದೇವರು ತೊಗೊಂಡ್ಬಿಡ್ತಾನೆ" ಬಾಲಕನೊಂದಿಗೆ ಬಾಲಕಿಯಂತೆ ಮಾತನಾಡಿದಳು ಸರಳಾ.

"ಅಣ್ಣ ಅಳ್ತಾ ಇದಾನೆ ಚಿಕ್ಕಮ್ಮ. ಅವನನ್ನ ನೋಡಿ ನಂಗೂ ಅಳು ಬಂದ್ಬಿಡ್ತು. ಅತ್ಬಿಟ್ಟೆ. ಆವಾಗ ನಾಣಿ ನಮ್ಮನೇಗೆ ಬಂದಿದ್ದ. ಅವನು 'ಏನು ಕಷ್ಟ ಬಂದ್ರು ಚಿಕ್ಕಮ್ಮಂಗೆ ಹೇಳ್ಬಿಟ್ರೆ ಸರಿಹೋಗುತ್ತೆ' ಅಂದ. ನೀವು ಏನೂ ಅಂದ್ಕೊಳ್ದೆ ಇದ್ರೆ ನಮ್ಮಣ್ಣಂಗೆ ಪರೀಕ್ಷೇಗೆ ಕಟ್ಟೋಕ್ಕೆ ಸಹಾಯ ಮಾಡ್ತೀರಾ ಚಿಕ್ಕಮ್ಮ" ಆಸೆಯಿಂದ ಕೇಳಿದ.

ಎಷ್ಟು ಚಿಕ್ಕ ಹುಡುಗ! ಎಷ್ಟು ಜವಾಬ್ದಾರಿಯ ಮಾತು!

"ಅಣ್ಣಂಗೆ ಕೆಲ್ಸ ಸಿಕ್ಕಿದ ಕೂಡ್ಲೇ ಖಂಡಿತ ವಾಪಸ್ಸು ತಂದ್ಕೊಟ್ಬಿಡ್ತೀನಿ"-ಈ ವಾಕ್ಯ ಸರಳೆಯ ಕಣ್ಣಲ್ಲಿ ನೀರು ತಂದಿತು.

ಎಷ್ಟು ಆಸೆಯಿಂದ ಬಂದಿದ್ದಾನೆ ಹುಡುಗ. ಈಗ ಅಣ್ಣ ಪರೀಕ್ಷೆಗೆ ಹೋಗದಿದ್ದರೆ. ಇವನ ಕಣ್ಣೆದುರಿಗೆ ಎಂತಹ ಭವಿಷ್ಯಮಂದಿರ ಕುಸಿದುಬೀಳು

ತ್ತದೆ. ಎಷ್ಟು ಕಷ್ಟದಲ್ಲಿದ್ದಾರೋ ಏನೋ? ಇಲ್ಲದಿದ್ದರೆ ಇಷ್ಟು ಓದಿಸಿದ ಕರ್ತವ್ಯನಿಷ್ಠ ತಂದೆ. ಪರೀಕ್ಷೆಗೇ ಕಟ್ಟಬೇಡ ಎಂದಿರುತ್ತಾರೆಯೇ !

ಅವಳ ಯೋಚನೆಗಳು ರವಿಗೆ ನಿರಾಶೆ ಮಾಡಿದುವು ಕೂಡಲೇ ನುಡಿದು ಬಿಟ್ಟ.

"ಕ್ಷಮಿಸಿ ಚಿಕ್ಕಮ್ಮ. ನಿಮ್ಮ ಹತ್ರಾನೂ ದುಡ್ಡು ಇದ್ಯೋ ಇಲ್ವೋ ಅಂತ ಯೋಚನೆ ಮಾಡ್ದೆ ಬಂದು ಬಿಟ್ಟು ತೊಂದ್ರೆ ಕೊಟ್ಟೆ. ಏನೂ ತಿಳ್ಕೋ ಬೇಡಿ."

"ಎಷ್ಟೆಷ್ಟು ದೊಡ್ಡ ಮಾತು ಕಲಿತಿದ್ದೀಯೋ ರವಿ. ಯೋಚನೆ ಮಾಡ ಬೇಡ ನೋಡೋಣಂತೆ. ಎಷ್ಟು ಕಟ್ಟಬೇಕಂತೆ ಅಣ್ಣಾ?"

ಗೊತ್ತಿದ್ದರೆ ತಾನೇ ಅವನಿಗೆ ಪಾಪ. ತಬ್ಬಿಬ್ಬಾದ—"ಅಯ್ಯೋ ಅದೇನೋ ಗೊತ್ತೇಇಲ್ಲ ಚಿಕ್ಕಮ್ಮ" ತಲೆ ತಗ್ಗಿಸಿ ಬಿಟ್ಟ.

"ನಿಂಗೊತ್ತಿಲ್ದೆ ಇದ್ರೂ ನಂಗೊತ್ತು. ಎಲ್ಲಿ ಈಗ ಹೋಗಿ ಚೆನ್ನಾಗಿ ಮುಖ ತೊಳಕೊಂಡು ಬಂದುಬಿಡು ನೋಡೋಣ. ರವಿ ಅತ್ತಿದ್ದಾನೆ. ಅನ್ನೋದು ತಿಳೀಬಾರ್ದು, ಹಾಗೆ, ಆ್ಞ?"

ಹೊರಗಡೆ ಆಡುತ್ತಿದ್ದ ಗೋಪಿ, ಸರಳಾ, ಮಾಧೂ ಒಳಗಡೆ ಬಂದರು.

ಅವರ ಸಹಾಯದಿಂದ ರವಿ ಮುಖ ತೊಳೆದು ಬಂದ. ಸರಳೆ ಕೊಟ್ಟ ಹುಳಿಯವಲಕ್ಕಿ ಸಜ್ಜಿಗೇನ ಎಲ್ಲರೂ ತಿನ್ನುತ್ತಿದ್ದಾಗಲೇ ಸರಳಾ—" ರವಿ ನೀ ಹೋಗಿ ನಿಮ್ಮಣ್ಣನ್ನ ಚಿಕ್ಕಮ್ಮ ಕರೀತಾಳೆ ಅಂತ ಕರ್ಕೊಂಡು ಬರ್ತೀಯಾ" ಎಂದಳು.

"ಬೇಡಿ, ಪ್ಲೀಸ್. ನೀ ಹೋಗಿ ಯಾಕೆ ಹೇಳ್ದೆ ಅಂತ ಬಯ್ತಾನೆ ಅಣ್ಣ."

"ಹಾಗಾದ್ರೆ....ನೀ ಈಗ ಮನೇಗೆ ಹೋಗ್ಬೇಡು. ಗೋಪಿ ನೀ ಹೋಗಿ ರವಿ ಅಣ್ಣನ್ನ...."

"ಯಾರ್ನ? ರಾಜೀವನ್ನ? ಚಿಕ್ಕಮ್ಮ" ಗೋಪಿ ತಡೆದು ಕೇಳಿದ.

"ಹುಂ ರಾಜೀವನ್ನ ನಾ ಕರ್ದೆ ಅಂತ ಕರೆದ್ಬಿಟ್ಟು ಬಾ, ಈಗ್ಲೆ, ಹುಂ, ಓಡು"

ರವಿ ಗೋಪಿ ಇಬ್ಬರೂ ಓಡಿದರು. ಸುಮಿತ್ರೆಯೂ ಹೊರಟು ನಿಂತಳು.

"ನಿಂಗೇನೋ ಕೆಲಸ ಅಂಟಿತಲ್ಲಾ ಸರಳಕ್ಕ."

"ಅದೊಂದು ಕೆಲ್ಸಾನಾ ? ರಾಜೀವ ಬಂದ್ರೆ ಅವನಿಗೊಂದಿಷ್ಟು ದುಡ್ಡು ಕೊಡೋದು."

"ನೀನೇನು ಖಜಾನೆ ಇಟ್ಟಿದ್ದೀಯೇನು ?"

"ಇಲ್ಲಮ್ಮ. ಏನೋ ಸಹಾಯ ಕೇಳಿದವರಿಗೆ ಇಲ್ಲ ಅನ್ನಲಾರೆ. ನಾ ಸಂಪಾದಿಸೋದು ನನಗೆ ಆಗಿ ಮಿಗುತ್ತೆ. ಸದ್ವಿನಿಯೋಗವಾಗಲೀಂತ."

"ಭವಿಷ್ಯದ ಯೋಚನೆ ಸ್ವಲ್ಪನಾದ್ರೂ ಬೇಡ್ವೆ ನಿಂಗೆ?

"ಇದ್ದೇ ಇದೆ. ಆ ಚಿಂತೆ ಸದಾ ಕಾಡುತ್ತೆ. ಆದ್ರೆ ಹಣಕ್ಕಾಗಿ ಅಲ್ಲ. ಶಕ್ತಿ ಉಡುಗೋವರ್ಗೂ ದುಡೀತೀನಲ್ಲಾ ಸುಮಿತ್ರಾ."

"ಅದಲ್ಲ ನಾ ಹೇಳಿದ್ದು. ಮದ್ವೆ, ಮಕ್ಕಳು, ಮರಿ...."

"ಆ ಸಮಸ್ಯೆ ಬರೋಲ್ಲ ಬಿಡು ನನ್ನ ಜೀವನದಲ್ಲಿ. ಆದ್ದರಿಂದ ಅದರ ಯೋಚನೆ ಇಲ್ಲ."

"ನೀ ಯಾಕೆ ಮದ್ವೆ ಮಾಡ್ಕೋಬಾರ್ದು. ದೇವರು ನಿಂಗೆಲ್ಲಾ ಕೊಟ್ಟಿದ್ದಾನೆ."

"ಪ್ರತಿ ಒಬ್ರೂ ಮದ್ವೆ ಆಗ್ಲೇಬೇಕು ಅಂತ ನಿಯಮ ಏನಾದ್ರೂ ಇದೆಯೇನು?"

"ಹೌದು ಇದೆ. ಮದ್ವೆ ಆಗದೆ, ಮಕ್ಕಳಿಲ್ಲದೆ ಇದ್ರೆ ಬಾಳು ಅಪೂರ್ಣ ಸರಳಾ."

"ಎಲ್ಲಾರ ಜೀವನಾನೂ ಒಂದೇ ತರಹ ಇರೋಲ್ಲ ಸುಮಿತ್ರಾ. ಈಗ ನೋಡು ದೈವ ಸೃಷ್ಟೀಲಿ ಎಷ್ಟು ತರಹದ, ಹೂ ಗಿಡ, ಬಳ್ಳಿ ಮರ ಇವೆ. ಹೂ ಭರಿತವಾಗಿವೆ, ಫಲ ಭರಿತವಾಗಿವೆ. ಅದೇ ಸೃಷ್ಟಿಯಲ್ಲೇ ಬೆಳೆಯುತ್ತೆ ಕ್ರೋಟನ್ ಗಿಡಾನೂ. ಎಲ್ಲಾ ಇತರ ಗಿಡಗಳ ಹಾಗೇ ಕ್ರೋಟನ್ನು ಕೂಡಾ ಒಂದುಪಯೋಗಕ್ಕೆ ಬರುತ್ತೆ. ದೊಡ್ಡವ್ರ ಬಂಗಲೆಗಳಲ್ಲಿ ಕ್ರೋಟನ್ ಇಲ್ದೆ ಅಂದಾನೇ ಇರೋಲ್ಲ. ಹಾಗೇನೇ ಮದುವೆ ಆದೋರು ಸಮಾಜಕ್ಕೆ ಒಂದ್ರು ವಿಧದಲ್ಲಿ ಪ್ರಯೋಜಕರಾದರೆ, ನನ್ನಂತಾವ್ರು ಮತ್ತೊಂದು ವಿಧದಲ್ಲಿ. ಈಗ

ಕೇಳಿಲ್ಲಿ. ನಾನು ಒಂಟಿಯಾಗುಳಿದು ಕೈ ತುಂಬಾ ಸಂಪಾದಿಸ್ತಾ ಇರೋ ದ್ರಿಂದ ತಾನೇ ಹೀಗೆ ಸಣ್ಣಪುಟ್ಟ ಸಹಾಯ ಮಾಡೋಕೆ ಶಕ್ತಿಯಿದೆ."

"ಮದ್ವೆ ಆದ್ರೆ ಮಾತ್ರ ಉದಾರಿಯಾಗಿರಬಾರದು ಅಂತಇದೆಯೇನು?"

"ಉದಾರಿಯಾಗಿರಬಾರದು ಅಂತ ಅಲ್ಲ. ಇರೋಕ್ಕೆ ಆಗೋಲ್ಲ. 'ನನ್ನ ಮನೆ', 'ನನ್ನ ಮಕ್ಕಳು' ಅವುಗಳ ಭವಿಷ್ಯ ಅಂತ ಸ್ವಾರ್ಥ ಶುರುವಾದ್ರೆ, ಸಹಾಯ ಮಾಡೋ ಕೈ ಕೂಡಾ ಬಿಗಿ ಆಗಿ ನಿಲ್ಲುತ್ತೆ."

"ನಿನ್ನ ವಾದಗಳು ನನ್ನ ನಿರುತ್ತರ ಮಾಡುತ್ತೆ. ಜನಕ್ಕೆ ಸಹಾಯ ಮಾಡ್ಬೇಕೂಂತ, ಸ್ವಂತ ಸಂತೋಷಾನ್ನ ಬದಿಗಿಟ್ಟು ಮದುವೆ ಆಗದೆ ಉಳೀ ತೀನಿ ಅನ್ನೋ ನಿನಗೆ ಏನುತ್ತರ ಕೊಡಬೇಕೋ ತಿಳೀದು."

"ನನಗದೇ ಹೆಚ್ಚು ಸಂತೋಷ, ಈಗ ನೋಡು, ರಾಜೀವ ಪಾಸ್ ಮಾಡಿ ಕೆಲ್ಸ ಹಿಡಿದು ತನ್ನ ತಮ್ಮ ತಂಗೀನ್ನ ಮುಂದಕ್ಕೆ ತಂದ್ರೆ ಅವರ ಮನೆ ಎಷ್ಟು ನಗುನಗ್ತಾ ಇರುತ್ತೆ. ಅದ್ರಲ್ಲಿ ನಮಗೆ ಸಂತೋಷ ಆಗೋಲ್ವ ?"

"ಸಂತೋಷ ಆಗತಲ್ಲ ಅಂತ ನಾನನ್ನೋಲ್ಲ. ಆದರೂ ನೀನು.

"ಈಗ ಇಷ್ಟು ಸಾಕು ಸುಮಿತ್ರ. ರಾಜೀವ ಬಂದ್ನೋ ಏನೋ ಕೇಸ್ ಈಸ್ ಅಡ್ಜರ್ನ್ಡ್" ಎಂದಳು ನಗುತ್ತಾ.

ಅವಳ ಊಹೆ ನಿಜವಾಗಿತ್ತು, ಇಪ್ಪತ್ತು ವರುಷದ ತರುಣ ರಾಜೀವ ಗೋಪಿಯ ಕೈ ಹಿಡಿದು ಬರುತ್ತಿದ್ದ.

೮

ರಾಜೀವನಿಗೆ ಇಪ್ಪತ್ತು ವರುಷಗಳ ತಾಳಿಕೆಯಿರಲಿಲ್ಲವಾದರೂ ನೋಡಲು ಸುಂದರನಾಗಿದ್ದ. ಬಿಳೀ ಪೈಜಾಮ ಷರಟನ್ನು ತೊಟ್ಟಿದ್ದ. ಮುಖ ಮಾತ್ರ ಎರಡು ಮೂರು ದಿನಗಳಿಂದ ಕ್ಷೌರ ಕಂಡಂತೆ ಕಾಣಲಿಲ್ಲ.

ಕೂದಲು ಕೆದರದೆ ಇದ್ದರೂ, ಅವನು ಕೂದಲ ಕಡೆಗೆ ಗಮನ ಕೊಟ್ಟಿದ್ದಂತೆ ಕಂಡು ಬರಲಿಲ್ಲ. ಹುಡುಗ ಸೌಮ್ಯನಾಗಿದ್ದ. ರವಿಯಲ್ಲಿದ್ದ ಚುರುಕುತನ ರಾಜೀವನಲ್ಲಿರಲಿಲ್ಲ. ಅವನ ನಡಿಗೆಯಲ್ಲಿ ದೊಡ್ಡವರ ಗಾಂಭೀರ್ಯವಿತ್ತು.

ಗೋಪಿಯ ಜೊತೆಯಲ್ಲಿ ಬರುತ್ತಿದ್ದ ಅವನನ್ನೇ ನೋಡುತ್ತಿದ್ದ ಸರಳಾ ಸ್ವಲ್ಪ ಗಟ್ಟಿಯಾಗೇ ಅಂದಳು."ಬಹಳ ಗಂಭೀರ ಸ್ವಭಾವದವನಿರಬೇಕು– ಎಷ್ಟು ಕಷ್ಟ ಬಂದರೂ ಒಳಗೇ ನುಂಗಿಕೊಳ್ಳುವಂತೆ ಕಾಣ್ತಾನೆ."

"ಹೌದು ನನ್ನಕ್ಕ ಸರಳೆಯಂತೆ. ಒಳಗೆ ಅಗ್ನಿ ಪರ್ವತ ಹೊಗೆಯಾಡು ತ್ತಿದ್ದರೂ ತಣ್ಣೀರಿನ ಝರಿಗಳನ್ನು ಹೊರಗೆ ಹರಿಸುವ ಪರ್ವತದಂತೆ"--- ಎಂದಳು ಸುಮಿತ್ರಾ.

ಸರಳಾ ಮಾತನಾಡಲಿಲ್ಲ.

ಕಾಂಪೌಂಡಿನ ಗೇಟನ್ನು ತಳ್ಳಿ ಒಳಗೆ ಬಂದ ರಾಜೀವನಿಗೆ ಸರಳೆ ಸುಮಿತ್ರೆಯರಿಬ್ಬರೂ ಎದುರಾದರು. ರಾಜೀವನಿಗೆ ಸಮಸ್ಯೆಯೇ ಆಯಿತು. 'ಸರಳಾ ಯಾರಿರಬಹುದು ಈ ಇಬ್ಬರಲ್ಲಿ? ಎಲ್ಲರೂ ಚಿಕ್ಕಮ್ಮ ಎನ್ನಬೇಕಾದರೆ ಸ್ವಲ್ಪ ವಯಸ್ಸಿನಾಕೆಯೇ ಇರಬೇಕು' ಎಂದು ಬಗೆದ. ಎರಡು ಮಕ್ಕಳ ತಾಯಾದ ಸುಮಿತ್ರೆ, ಕನ್ಯೆ ಸರಳೆಗಿಂತ ದೊಡ್ಡವಳಾಗಿ ಕಂಡುದರಿಂದ ಸುಮಿ ತ್ರೆಯನ್ನೇ ಸರಳೆಯೆಂದುಕೊಂಡ.

ಅವನ ಸಮಸ್ಯೆ ಗೋಪಿಯಿಂದ ಬಗೆಹರಿಯಿತು. ಗೋಪಿ ಧಾವಿಸಿ ಬಂದು. ಏದುಸಿರು ಬಿಡುತ್ತಾ-"ಚಿಕ್ಕಮ್ಮ, ಬಾ ಅಂದ್ರೆ ರಾಜೀವ ಬರೋಲ್ಲ ಅಂದ್ಬಿಟ್ಟ. ಆಮೇಲೆ ನೀನು ಕಾಯ್ತಾ ಇರ್ತೀಯ. ಬರದೆಹೋದ್ರೆ ಬೇಜಾರು ಮಾಡ್ಕೋತೀಯ ಅಂತೆಲ್ಲಾ ಹೇಳಿ ಕರ್ಕೊಂಡ್ಬಂದೆ" ಎಂದು ಸರ ಳೆಯ ಸೆರಗು ಹಿಡಿದು ಹೇಳಿದ.

ನಕ್ಕುಬಿಟ್ಟಳು ಸರಳ ಗೋಪಿಯ ಕೆನ್ನೆಗೆ ಮೃದುವಾಗಿ ಹೊಡೆಯುತ್ತಾ.

"ಒಳಗೆ ಬನ್ನಿ ಮಿ॥ ರಾಜೀವ್. ಕೂತ್ಕೊಳ್ಳಿ" ಆಹ್ವಾನಿಸಿದಳು.

ಈ ಅಪರಿಚಿತಳ ಮುಂದೆ ಹೇಗೆ ನಡೆದುಕೊಳ್ಳಬೇಕೆಂಬುದು ತಿಳಿಯದು ರಾಜೀವನಿಗೆ

"ಪರವಾಗಿಲ್ಲ" ಎಂದು ನಿಂತೇ ಇದ್ದ.

"ಕೂತ್ಕೋ ರಾಜಣ್ಣ"--ಗೋಪಿ ಎಳೆದು ಕುಳ್ಳಿರಿಸಿದ. ರಾಜೀವ ಚಕಾರವಾಡಲಿಲ್ಲ.

"ಏನು ರಾಜಣ್ಣ ಸಮಾಚಾರ ?"---ಒಮ್ಮೆಗೆ ತೀರಾ ಪರಿಚಿತಳಂತೆ ಕೇಳಿದಳು ಸರಳಾ,

ರಾಜೀವನಿಗೆ ದಿಗ್ಭ್ರಮೆಯಾಯಿತು. ಆಕೆ ಒಂದು ವೇಳೆ ತನಗೆ ಪರಿಚಯವಿದ್ದು ತಾನೇ ಮರೆತಿರಬಹುದೇನೋ ಎಂಬ ಸಂಶಯವೂ ಆಯಿತು.

"ಮಲಗಿದ್ದೆ. ಹೇಳಿಕಳುಹಿಸಿದ್ರಂತೆ. ಎದ್ದು ಬಂದೆ" ಮತ್ತೆ ಮೌನ.

"ನಾನೊಂದು ಮಾತು ಹೇಳಿದ್ರೆ ಬೇಜಾರ್ಮಾಡ್ಕೊಳ್ಳೋದಿಲ್ಲ ತಾನೇ"

ಎಂತಹ ಪ್ರಶ್ನೆ ಎನ್ನುವಂತೆ ನೋಡಿದ ತಾರುಣ್ಯದ ಹೊಸ್ತಿಲಿನಲ್ಲಿ ಕಾಲಿಟ್ಟ ದೊಡ್ಡ ಬಾಲಕ.

"ಕಷ್ಟ ಅನ್ನೋದು ಪ್ರತಿ ಒಬ್ರಿಗೂ ಬರುತ್ತಪ್ಪ. ಒಂದು ಪರೀಕ್ಷೆ ಕಟ್ಟೋಕ್ಕೆ ಆಗದೆ ಹೋದ ಮಾತ್ರಕ್ಕೆ ಇಷ್ಟು ಕಂಗಾಲಾಗಿ ಬಿಡೋದಾ ? ಆ್ಞ ? ಊಟ ತಿಂಡಿ ಬಿಟ್ರೆ ಏನು ತಾನೇ ಸಾಧಿಸಿದ ಹಾಗಾಯ್ತು ಹೇಳು. ಅಪ್ಪಂಗೆ ಸಾಧ್ಯವಾಗ್ದೇ ಹೋದಾಗ ಹೇಗೆ ತಾನೇ ನಿಂಗೆ ದುಡ್ಡು ಕೊಟ್ಟಾರು ಅಂತ ನೀನು ಯೋಚಿಸಬೇಕೋ ಬೇಡ್ವೋ ? ನಿಂಗೂ ಯೋಚನೆ ಮಾಡೋಷ್ಟು ವಿವೇಚನಾಶಕ್ತಿಯಿದೆ ಅಲ್ವಾ ?"

"ಇದೆ. ಎಲ್ಲಾ ಯೋಚ್ನೆ ಮಾಡ್ದೆ. ಆದ್ರೂ ಪ್ರತಿ ಕ್ಲಾಸ್ನಲ್ಲೂ ನಾನೇ ಫಸ್ಟ್ ಬಂದು ಈಗ ಹೀಗಾಯ್ತಲ್ಲಾ ಅಂತ ದುಃಖ. ಅಪ್ಪ ತಾನೇ ಏನ್ಮಾಡ್ತಾರೆ. ಮುಖ್ಯ ನನ್ನ ದುರದೃಷ್ಟ. ಸ್ವಲ್ಪ ದಿನ ಬೇಜಾರಾಗುತ್ತೆ ಆಮೇಲೆ ಅದೇ ಸರಿಹೋಗತ್ತೆ"--ನಿರಾಶೆಯಿಂದ ನುಡಿದ ರಾಜೀವ.

"ನಿಂಗೆ ದೇವ್ರಲ್ಲಿ ನಂಬ್ಕೆ ಇದ್ಯಾ ?"

"ಇತ್ತು, ಆದ್ರೆ ಈಗ ಆ ನಂಬಿಕೆಯ ಬುನಾದೀನೇ ಸಡಿಲವಾಗ್ತಾ ಇದೆ. ಮೇಲೆ ಮೇಲೆ ಆಪತ್ತು ಬರ್ತಾ ಇದ್ರೆ ಚೇತರಿಸಿಕೊಳ್ಳೋದಾದ್ರೂ ಹೇಗೆ ? ಒಂದ್ರಿಂದ ಎಚ್ಚೆತ್ಕೊಂಡ್ವಿ ಸದ್ಯ ಅನ್ನೋವಾಗ್ಲೇ ಮತ್ತೊಂದು ಎದುರಿಸ್ಬೇಕು. ನಾನಾದ್ರೂ ಪಾಸ್ಮಾಡಿ ಒಂದು ಕೆಲಸ ಹಿಡಿದ್ರೆ ಅಪ್ಪಂಗೆ ನೆರವಾಗುತ್ತೆ ಅಂದ್ರೆ, ಹೀಗಾಗ್ತಿದೆ."

"ಹಾಗೆ ಅಧೀರನಾಗಬೇಡ. ದೇವ್ರಲ್ಲಿ ನಂಬಿಕೆ ಮಾತ್ರ ಬಿಡಬಾರ್ದು.

ಇಂದಲ್ಲಿದ್ರೆ ನಾಳೆ. ಅವನಲ್ದೆ ನಮ್ಮಂಥ ಬಡವರಿಗೆ ಬೇರೆ ಯಾರು ತಾನೆ ಸಹಾಯ ಮಾಡ್ತಾರೆ, ಇರಲಿ. ನಿಮ್ಮ ಲೆಕ್ಚರರುಗಳು ಯಾರೂನೂ...."

"ಎಲ್ಲಾ ಮಕ್ಕಳೊಂದಿಗರು. ಯಾರನ್ನು ತಾನೇ ಕೇಳೋಕ್ಕೆ ಸಾಧ್ಯ ಈ ಕಾಲ್ದಲ್ಲಿ."

"ಮನೇಲ್ಲಿ ನೀವೆಷ್ಟು ಜನ ಮಕ್ಕಳು ?"

"ನಾವು ಆರು ಜನ. ನಮಗೆ ಇಬ್ರು ಅಕ್ಕಂದ್ರು ಮದುವೆ ಆಗಿ ಹೊರ ಟೋಗಿದ್ದಾರೆ. ನಾನು ಮೂರನೇವ್ನು, ಇಬ್ರು ತಂಗೀರಿದ್ದಾರೆ. ಆಮೇಲೆ ರವಿ. ನಾವೆಲ್ಲಾ ಚೆನ್ನಾಗಿ ಓತ್ತೇವೆ. ಅವರವರ ಕ್ಲಾಸಲ್ಲಿ ಅವರವರೇ ಫಸ್ಟ್. ನಮ್ಮ ತಂದೆ ಸೆಕೆಂಡ್ ಡಿವಿರ್ಶ ಗುಮಾಸ್ತೆ. ಇನ್ನೇನು ಒಂದೆರಡು ವರ್ಷದಲ್ಲಿ ರಿಟೈರಾಗುತ್ತೆ. ನನ್ನ ತಂಗಿ ತಮ್ಮಂದಿರ್ದ್ದೇ ಯೋಚನೆ ನನಗೆ. ನಾನು ಕೆಲಸಕ್ಕೆ ಸೇರಿ ಇವರಿಗೆಲ್ಲಾ ಒಳ್ಳೆ ವ್ಯಾಸಂಗ ಕೊಡಿಸ್ಬೇಕೂಂತ ಆಸೆ. ಆದರೆ ಆ ಆಸೆಯ ಬುದ್ಬುಧ ಆಗಲೇ ಒಡೆದು ಹೋಯ್ತಲ್ಲಾ."

ಎಂದೂ ಇಷ್ಟು ಮಾತು ಆಡಿರಲಿಲ್ಲವೇನೋ ಅವನು. ಸುಸ್ತಾಗಿ ಹೋದ. ಸರಳಾ ತಲೆ ತಗ್ಗಿಸಿ ಸುಮ್ಮನೆ ನೆಲ ನೋಡುತ್ತಿದ್ದವಳು--- "ಒಂದು ನಿಮಿಷ ಕೂತಿರು ರಾಜಣ್ಣ ಈಗ ಬಂದೆ" ಎಂದು ಒಳಗೆ ಹೋದಳು.

ವಾತಾವರಣ ಗಂಭೀರವಾಗಿದ್ದುದರಿಂದ ಸುಮಿತ್ರೆಯ ಮಕ್ಕಳೂ ಸಹ ನಿಶ್ಶಬ್ದವಾಗಿ ಇದ್ದುಬಿಟ್ಟಿದ್ದರು. ಸುಮಿತ್ರೆ ಸರಳೆಯ ದೊಡ್ಡ ಗುಣಕ್ಕಾಗಿ ಮಾರುಹೋಗಿದ್ದಳು. ಅವಳ ಮುಂದೆ ತಾನು ಅತಿ ಅಲ್ಪ ಎಂದು ಭಾಸ ವಾಯಿತವಳಿಗೆ. ಅಂತಹ ವ್ಯಕ್ತಿ ತನ್ನ ಗೆಳತಿ ಎಂಬ ಹೆಮ್ಮೆಯೂ ಆಯಿತು,

ಕತ್ತಲಾಗುತ್ತ ಬಂದಿತ್ತು. ಆಗಲೇ ಹೊರಡುತ್ತೇನೆಂದಿದ್ದ ಸುಮಿತ್ರೆ, ಇನ್ನೂ ಉಳಿದಿದ್ದಳು. ಈಗ ಚಡಪಡಿಸಿ ಎದ್ದಳು ಹೊರಡಲು.

ಹೊರಡುತ್ತಿದ್ದ ಸುಮಿತ್ರೆಗೆ "ಭಾನುವಾರ ಮತ್ತೆ ಬರ್ತೀಯಲ್ಲ. ಈ ಸಲ ನಿನ್ನ ಗಂಡನನ್ನೂ ಕರೆದುಕೊಂಡು ಬಾ. ನಾನು ಕರೆದೆ ಅಂತ ಹೇಳಿ ಕರಕೊಂಡು ಬಾ" ಎಂದು ಹೇಳಿ ಕಳುಹಿಸಿಕೊಟ್ಟಳು.

ರಾಜೀವನಿಗೆ ತನ್ನನ್ನು ಈಕೆ ಏಕೆ ಕರೆಸಿರಬಹುದು ಎಂಬ ಪ್ರಶ್ನೆ ಕಾಡ ತೊಡಗಿತು. ತಂದೆಗೆ ಪರಿಚಿತಳೇನೋ. ಈಕೆಯ ಮೂಲಕ ತನಗೆ ಸಮಾ ಧಾನ ಹೇಳಲು ಇರಬಹುದೇ. ಸರಳೆಯೊಂದಿಗೆ ಇರುವಾಕೆಯನ್ನು ಎಲ್ಲೋ

ನೋಡಿದಂತಿದೆ. ಆಕೆಯನ್ನೇ ತಾನು 'ಸರಳೆ' ಅಂದುಕೊಂಡೆನಲ್ಲವೆ ? ಆಕೆ ಯಾರು ? ಯಾರು....?

ಹೌದು ಅವರೇ. ಅವರೇ ಇರಬೇಕು.

"ಆಕೆ ಸುಂದರ್ ಅವರ ಹೆಂಡತಿ ಅಲ್ವಾ ?" ಕಡೆಗೂ ಕೇಳಿಬಿಟ್ಟ.

"ಇರಬಹುದಪ್ಪ. ಆತನ ಹೆಸರೇನೋ ನನಗೆ ತಿಳೀದು. ಆತ ಕೆಮಿಸ್ಟ್ರಿ ಲೆಕ್ಚರರ್‍ರಂತೆ"

ಈ ವಿಷಯವೇನೂ ಅವಳ ತಲೆಗೆ ಹೋಗಲಿಲ್ಲ. ಅವಳ ತಲೆ ತುಂಬಾ ಸದ್ಯದಲ್ಲಿ ರಾಜೀವನೇ.

ರಾಜೀವನಿಗೆ ತಿಂಡಿ ತಂದುಕೊಟ್ಟಳು. ಅವನ ಸಂಕೋಚವನ್ನು ಗಮನಿಸಿ ನಗುತ್ತಾ "ಚಿಕ್ಕಮ್ಮ ಕೊಡೋ ಉಪದೇಶಬೇಕು, ಇದು ಮಾತ್ರ ಬೇಡ್ವಾ ? ತಿನ್ನು ತೋಗೋ. ಅದೂ ನಂಗೊತ್ತು. ಈಗ ನಿಂಗೆ ಹೊಟ್ಟೆ ಚುರ್‍ರಂತ ಇರುತ್ತೆ. ನಿನ್ನೆಯಿಂದ ನೀ ಊಟ ಮಾಡಿಲ್ಲ ಹೌದಾ ?"

"ಈಕೆಗೆ ಹೇಗೆ ತಿಳಿಯಿತು ? ಅಸಾಧ್ಯಳೀಕೆ....!" ರಾಜೀವನಿಗೆ ಸೋಜಿಗ.

ನಿಧಾನವಾಗಿ ತಿನ್ನತೊಡಗಿದ. ಸರಳಾ ಮತ್ತೆ ಒಳಗೆ ಹೋದಳು. ರಾಜೀವನಿಗೆ ಯೋಚಿಸಲು ಸಮಯ ದಕ್ಕಿತು.

ತನ್ನ ತಾಯಿ, ತಂಗೀರು, ಜೊತೆಯಲ್ಲಿ ಓದುವ ರಾಣಿ, ಗೀತ ಇವರುಗಳನ್ನು ಬಿಟ್ಟರೆ ರಾಜೀವನಿಗೆ ಹೆಚ್ಚಾಗಿ ಹೆಂಗಸರ ಪರಿಚಯವಿಲ್ಲ. ತಂಗಿಯರು ಚಿಕ್ಕವರೆಂದು ಹೆಚ್ಚಾಗಿ ಅವರೊಂದಿಗೆ ಅವನು ಬೆರೆಯುತ್ತಿರಲಿಲ್ಲ. ರಾಣಿ ಮತ್ತು ಗೀತ ಗಡಸು ಹುಡುಗೀರು ಅವರನ್ನು ಕಂಡರೆ ಭಯ. ಆದರೆ ಈಕೆ ! ಬಹಳ ಬೇರೆ ರೀತಿಯವಳು. ಆಕೆಯ ಬಳಿ ಮಾತನಾಡುವಾಗ ಸಂಕೋಚವೆನಿಸುವುದಿಲ್ಲ ಯಾಕೋ.

ಚಿಕ್ಕಮ್ಮನೆಂದ ಕೂಡಲೆ ಒಬ್ಬ ದೊಡ್ಡಾಕೆಯನ್ನು ಚಿತ್ರಿಸಿಕೊಂಡಿದ್ದ ರಾಜೀವ. ತನಗಿಂತ ಕೇವಲ ಕೆಲವೇ ವರುಷಗಳು ದೊಡ್ಡವಳಾದ ಸರಳಾನನ್ನು ಚಿಕ್ಕಮ್ಮ ಅನ್ನುವುದಕ್ಕಿಂತ ಅಕ್ಕ ಎನ್ನಬಹುದೇನೋ, ತಿಂಡಿಯ ತಟ್ಟೆ ಖಾಲಿಯಾದರೂ ತಲೆಯ ತರಂಗಗಳು ಮಾತ್ರ ಖಾಲಿಯಾಗಲಿಲ್ಲ.

ಫಸ್ಟ್ ಬರ್‍ತಾ ಇದ್ದೆ ಅಂತೀಯಲ್ಲ ಸ್ಕಾಲರ್‌ಷಿಪ್ಪು, ಫ್ರೀಷಿಪ್ಪು...."
—ಒಳಗಿನಿಂದ ಬರುತ್ತಾ ಕೇಳಿದಳು ಸರಳಾ.

"ಎಲ್ಲಾ ಬಂದಿವೆ. ಅಪ್ಪಂಗೆ ಬರೋದು ಸಾಕಾಗಲ್ಲ. ಮನೇಲ್ಲಿ ಖರ್ಚು ಜಾಸ್ತಿ. ನಂಗೇ ಸಿಗೋ ಒಂದು ಕಾಸೂ ನಾ ಇಟ್ಕೊಳೋಲ್ಲ. ಎಲ್ಲಾ ಮನೇಗೆ ಕೊಟ್ಬಿಡ್ತಿದ್ದೆ. ಈ ಸಲ ಪರೀಕ್ಷೆಗೆ ಕಟ್ಟಿಬಿಟ್ರೆ ಆಮೇಲೆ ಭಯ ವಿಲ್ಲ."

"ಯೋಚನೆ ಮಾಡಬೇಡಪ್ಪ. ಹೇಗಾದ್ರೂ ಸಹಾಯ ಸಿಗುತ್ತೆ. ನೋಡು. ಈ ಕಾಗದ ತೊಗೊಂಡ್ಹೋಗಿ ನಿಮ್ಮ ತಂದೇಗೆ ಕೊಡು. ಈವತ್ತೇ ಕೊಡು. ಮರೀಬೇಡ" ಎಂದು ಎಚ್ಚರಿಸಿ ರಾಜೀವನ ಕೈಗೊಂದು ಕವರು ಕೊಟ್ಟಳು.

"ಖಂಡಿತ ಕೊಡ್ತೀನಿ. ನಾನಿನ್ನು ಬರ್‍ತೀನಿ" ಎಂದು ಎದ್ದು ನಿಂತ.

"ಬರ್‍ತೀನಿ ಅನ್ನೋದು ಹೋಗ್ತೀನಿ ಮಾಡ್ಬಿಡಬೇಡ. ಯಾವಾಗ್ಲಾದ್ರೂ ಬರ್‍ತಾ ಇರು. ಧೈರ್ಯ ಕೆಡಬೇಡ ರಾಜೀವ. ಜೀವನದಲ್ಲಿ ಇನ್ನೂ ಎಷ್ಟೋ ಕಷ್ಟಗಳನ್ನ ಎದುರಿಸಬೇಕಾಗುತ್ತೆ. ಇದು ಇನ್ನೂ ಮೊದಲ ಮೆಟ್ಟಲು"

"ಆಗಲಿ ನಿಮ್ಮ ಉಪದೇಶ ನೆನಪಾಗಿ ಇಟ್ಕೋತೀನಿ." ಧ್ವನಿಯಲ್ಲಿ ಆಸೆಯಿರಲಿಲ್ಲ ನಿರಾಶೆ ತುಂಬಿತ್ತು. ಉಪದೇಶಗಳೇ ಉದ್ಧಾರ ಮಾಡುವಂತಿದ್ದರೆ !

ಆಶಾಕಿರಣವನ್ನು ಅರಸಿ ಬಂದ ರಾಜೀವನಿಗೆ, ಕಿರಣ ಹೊರಡುತ್ತಿದ್ದ ಉಗಮ ಸ್ಥಳವನ್ನೇ ಯಾರೋ ನಿರ್ಮೂಲ ಮಾಡಿದಂತೆ ಕಂಡಿತು. ಧನ ಸಹಾಯ ಆಶಿಸಿ ಬಂದ ಅವನಿಗೆ ಉಪದೇಶದ ಸಿಂಚನವಾಯಿತು. ಕಾಲೆಳೆದು ಮನೆಗೆ ನಡೆದ.

ಮನೆಗೆ ಹೋಗಿ ಕೋಣೆಯಲ್ಲಿ, ಹಾಸಿಗೆಯಲ್ಲಿ ಉರುಳಿದ. ರಾಜೀವನಿಗೆ ನಿದ್ದೆ ಬಂದುಬಿಟ್ಟಿತು. ಬೇಸರದಿಂದ, ಎರಡು ದಿನಗಳಿಂದ ಊಟ ಮಾಡದೆ ಇದ್ದ ಅವನಿಗೆ ಸರಳಾ ಕೊಟ್ಟ ತಿಂಡಿಯಿಂದ ಹೊಟ್ಟೆ ತುಂಬಿತ್ತು. ಅಂತಲೇ ಭಾರಿಯ ನಿದ್ದೆ.

ಹೊತ್ತಿಲ್ಲದ ಹೊತ್ತಿನಲ್ಲಿ ಸೂರ್ಯ ಅಸ್ತಮಿಸೋ ಸಮಯದಲ್ಲಿ ಮಗ

ಮಲಗಿದನಲ್ಲಾ ಎಂದು ಪೇಚಾಡಿಕೊಂಡರು ತಾಯಮ್ಮ. ಅಂದರೆ ಆ ಎಳೆಯ ತರುಣನ ಮನಸ್ಸಿಗೆ ಆಗಿದ್ದ ಬೇಸರ, ಗಾಯಗಳನ್ನು ಅರ್ಥ ಮಾಡಿಕೊಂಡ ಆಕೆ ಅವನನ್ನು ಎಬ್ಬಿಸುವ ಗೋಜಿಗೆ ಹೋಗಲಿಲ್ಲ.

ರಾತ್ರಿ ಒಂಭತ್ತು ಗಂಟೆಯಾಗುತ್ತಾ ಬಂದಿತು. ಮಕ್ಕಳೆಲ್ಲಾ ನಿಶ್ಶಬ್ದ ವಾಗಿ ಓದಿಕೊಳ್ಳುತ್ತಿದ್ದರು. ತಾಯಮ್ಮ ರಾಮಾಯಣ ಕೈಲಿ ಹಿಡಿದು ತಮ್ಮ ಮಕ್ಕಳ ಭವಿಷ್ಯ ಕುರಿತು ಆಲೋಚಿಸುತ್ತಿದ್ದರು.

ರಾಮಣ್ಣ ಮನೆಗೆ ಬರುತ್ತಲೇ ಹಾಕಿದ ಪ್ರಶ್ನೆ— "ರಾಜ ಎದ್ದು ಏನಾದ್ರೂ ಊಟ ಮಾಡಿದನೇನು ?"

"ಎದ್ದೇನೋ ಎದ್ದ. ಒಂದರ್ಧ ಗಂಟೆ ಎಲ್ಲೋ ಹೊರಗಡೆ ಹೋಗಿ ಬಂದು ಮತ್ತೆ ಮಲಗಿಬಿಟ್ಟಿದ್ದಾನೆ....ನಾನೊಂದು ಮಾತು ಹೇಳ್ಲಾ ಅಂದ್ರೆ" ಭಯದಿಂದ ಕೇಳಿದರು ಗಂಡನಿಗೆ ಎದುರು ನುಡಿಯದ ಧರ್ಮಪತ್ನಿ ತಾಯಮ್ಮ.

ಕೋಟು ಪೇಟಗಳನ್ನು ಗೂಟಕ್ಕೆ ಹಾಕುತ್ತಾ "ಏನದು" ಎಂದರು ಆತ, ಯಾವ ಭಾವವೂ ಇರಲಿಲ್ಲ ಸ್ವರದಲ್ಲಿ. ಅವರಿಗೆ ಮಾತ್ರ ಇಲ್ಲವೆ ಮಕ್ಕಳ ಭವಿಷ್ಯದ ಕುರಿತು ಯೋಚನೆ.

ಆ ತಂದೆ ಎಷ್ಟು ಕಡೆ ಹೋಗಿ ದೇಹಿ ಎಂದು ಬಂದಿರಲಿಲ್ಲ. ನೂರು ರೂಪಾಯಿಗಳು ಹುಟ್ಟದೇ ಹೋದದ್ದು ರಾಜೀವನ ದೌರ್ಭಾಗ್ಯ.

"ಸೀತಾದು ಒಂದೆಳೆ ಸರ ಇದ್ಯಲ್ಲಾ ಅದನ್ನ...." ಅಂಜುತ್ತಲೇ ಹೇಳು ತ್ತಿದ್ದರು ತಾಯಮ್ಮ.

"ತಾಯಿ, ಬಾಯಿ ಮುಚ್ಚು. ಅದರ ಮೇಲೆ ನಿನಗಾಗ್ಲಿ ನನಗಾಗ್ಲಿ ಅಧಿಕಾರ ಎಲ್ಲಿದೆ. ಅವನು ಕಷ್ಟಪಟ್ಟು ಅಕ್ಕರೆ ತಂಗೀಗೆ ಅಂತ, ಅದೂ ಕೆಲ ಕಾಲದ ತಪಸ್ಸಿನ ಮೇಲೆ ತಂದುಕೊಟ್ಟಿದ್ದರೆ ಅದನ್ನು ಮಾರೂಂತೀಯಾ ? ಹೆತ್ತ ತಾಯಾದ ನಿನಗೆ ಹೇಗ್ಬಂತು ಮನಸ್ಸು ಈ ಮಾತಾಡೋಕ್ಕೆ ?" ರಾಮಣ್ಣನವರಿಗೆ ಕಣ್ಣಂಚಿನಲ್ಲಿ ನೀರು ನಿಂತಿತ್ತು.

ಬಿಡುವಿನ ವೇಳೆಯಲ್ಲಿ, ಗೆಳೆಯ ಗುರುಪ್ರಸಾದನ ತಂದೆಯ ಅಂಗಡಿ ಯಲ್ಲಿ ಲೆಖ್ಖ ಬರೆದು ರಾಜೀವ ಕೂಡಿಟ್ಟ ಕುಡಿಕೆಯ ಹಣದಿಂದ ಒಲವಿನ ತಂಗಿಗೆ ಹದಿನೈದರ ಹುಟ್ಟಿದ ಹಬ್ಬದಂದು ಒಂದೆಳೆಸರ ಮಾಡಿಸಿದ್ದ ರಾಜೀವ.

ಎಲ್ಲಾ ಒಡವೆಗಳನ್ನೂ ಕಳೆದುಕೊಂಡ ತಾಯಮ್ಮನವರ ದೃಷ್ಟಿ ಅದರ ಮೇಲೆ ಹೋಗಿತ್ತು. ಕಡೆಯ ಉಪಾಯವಾಗಿ ಸೂಚಿಸಿದ್ದರು ಅಷ್ಟೆ. ಆಸೆಯಿಂದ ಅಣ್ಣನ ಬಹುಮಾನವೆಂದು ಇಟ್ಟುಕೊಂಡಿದ್ದ ಸೀತೆಯ ಸರವನ್ನು ಏನೇ ಆಗಲಿ ಮಾರಲು ಸಿದ್ಧರಿರಲಿಲ್ಲ ರಾಮಣ್ಣನವರು.

"ಹೋಗಲಿ ಏಳಿ, ಮುಂಚೆ ಊಟಮಾಡಿ. ಆಮೇಲೆ ನೋಡೋಣ."

"ಊಟ ಯಾರಿಗೆ ಬೇಕು ಹೇಳು. ರಾಜೀವನನ್ನ ನೋಡಿದ್ರೆ ಕರುಳು ಕಿತ್ತು ಬರುತ್ತೆ. ಅಂತಹ ಬುದ್ಧಿವಂತ, ಗುಣವಂತ ಹುಡಗನಿಗೆ ತಂದೆ ಆಗೋಕ್ಕೆ ಅರ್ಹತೇನೇ ಇಲ್ಲ ನನ್ಗೆ. ಹತ್ತತ್ತು ಸಲ ಫೈಲ್ ಆಗಿದ್ರೂ, ಓದು ಓದು ಅಂತ ಬಲವಂತ ಮಾಡೋ ತಂದೇರೆಲ್ಲಿ ! ರ್‍ಯಾಂಕ್ ಬರೋ ಮಗನ್ನ ಪರೀಕ್ಷೆಗೆ ಹೋಗ್ಬೇಡ ಅನ್ನೋ ಪರಿಸ್ಥಿತೀಲಿ ಸಿಕ್ಕಿರೋ ನಾನೆಲ್ಲಿ"-ಕಣ್ಣೊರಸಿಕೊಂಡರು ರಾಮಣ್ಣ.

ತಾಯಿತಂದೆಯರ ಸಂಭಾಷಣೆ ನಡೆದೇ ಇತ್ತು. ಲಲಿತ, ಸೀತ, ರವಿ ಮಲಗುವ ಯೋಚನೆ ಮಾಡುತ್ತಿದ್ದರು. ಈ ಮಕ್ಕಳ ಯೋಚನೆಯಿರಲಿಲ್ಲ ಆ ದಂಪತಿಗಳಿಗೆ. ಸದ್ಯದ ಗಮನವೆಲ್ಲಾ ರಾಜೀವನಲ್ಲೇ. ಅತಿ ಸೂಕ್ಷ್ಮ ಸ್ವಭಾವದ ರಾಜೀವ, ಈ ದೊಡ್ಡ ನಿರಾಶೆಯಿಂದ ಏನಾಗುವನೋ ಎಂದು ಹಂಬಲಿಸಿದರು ರಾಮಣ್ಣ. ತಲೆಯ ಮೇಲೆ ಕೈಹೊತ್ತು, ಕುಳಿತರು.

ರಾಜೀವನಿಗೆ ಒಳ್ಳೆಯ ನಿದ್ದೆ. ಕನಸುಗಳು ಬೇರೆ. ಸರಳೆ ಬಿಳಿಯ ಉಡುಪು ಧರಿಸಿ ಮೆಲ್ಲಗೆ ನಭದಿಂದ ಕೆಳಗಿಳಿದು ಬಂದಳು. ಅವನನ್ನು ಕರೆದಳು. ಅವನು ನಾಚಿದ. "ನಾನು ನಿನ್ನಕ್ಕ. ನನ್ನ ಬಳಿ ನಾಚಿಕೆಯೇ" ಎಂದಳು. 'ಇಲ್ಲ' ಎಂದು ತಲೆಯಾಡಿಸಿದ. ಮೆಲ್ಲನೆ ಗಾಳಿ ಬೀಸಿತು. ಸರಳೆ ಮುಡಿದಿದ್ದ ಹೂ ದಂಡೆಯಿಂದ ಒಂದೊಂದೇ ಹೂವು ಅವನ ಮೇಲೆ ಉದುರತೊಡಗಿತು. ಸರಳಾ ಮಂದಸ್ಮಿತಳಾಗಿ ನೋಡುತ್ತಿದ್ದಳು. ಬೀಳುತ್ತಿದ್ದ ಒಂದೊಂದು ಹೂವೂ ಒಂದೊಂದು ನಾಣ್ಯವಾಗುತ್ತಿತ್ತು.

"ನೂರೊಂದು ಹೂ ಬಿದ್ದಿದೆ ಸಾಕಾ ರಾಜಣ್ಣ" ಎಂದಳು.

"ಓ ಸಾಕು"

"ನಿನಗೆ ದುರಾಶೆಯಿಲ್ಲ. ನೀನು ನಿಜವಾಗಿ ಬಾಳಿನಲ್ಲಿ ಮುಂದೆ ಬರ್‍ತೀ" ಎಂದು ತಲೆ ನೇವರಿಸಿದಳು. ಸ್ಪರ್ಶ ಹಿತವಾಗಿತ್ತು. ದೇವತೆ ಮಾಯವಾಗಿ

ದ್ದಳು. 'ಚಿಕ್ಕಮ್ಮ' ಎಂದು ಕೂಗಿದ. ತನ್ನ ಕೂಗಿನಿಂದಲೇ ಎಚ್ಚರವಾಗಿ ಬಿಟ್ಟಿತು.

ಎಂತಹ ಸುಂದರ ಕನಸು ! ಒಡೆದು ಹೋಯಿತಲ್ಲಾ.

ನಿಜ ಪ್ರಪಂಚ ಅವನಿಗೆ ಅಸಹ್ಯವಾಯಿತು.

ಕೋಣೆಯಲ್ಲಿ ದೀಪವಿರಲಿಲ್ಲ. ತಮ್ಮ ತಂಗಿಯರು ಮಲಗಿಬಿಟ್ಟಿದ್ದರು. ತಾಯಿ ತಂದೆಯರು ಮಾತ್ರ ಮೌನವಾಗಿ ಮ್ಲಾನವದನರಾಗಿ ಕುಳಿತೇ ಇದ್ದರು.

ಥಟ್ಟನೆ ನೆನಪಾಯಿತು. "ಈವತ್ತೇ ಕೊಡು ನಿಮ್ಮ ತಂದೆಗೆ, ಮರೀ ಬೇಡ"––ಸರಳೆಯ ಧ್ವನಿ ಎಚ್ಚರಿಸಿತು, ಕಿಸೆಯಿಲ್ಲಿದ್ದ ಕವರ್ ತೆಗೆದು ತಂದೆಯ ಬಳಿ ಹೋದನು.

ಮಗನಿಗೆ ಮುಖ ತೋರುವ ಧೈರ್ಯ ಬರಲಿಲ್ಲ ರಾಮಣ್ಣನವರಿಗೆ. ತಲೆ ಎತ್ತದಲೇ ಅಂದರು––"ಹೀಗೆ ಮಾಡಿದ್ರೆ ಹೇಗೆ ರಾಜ ? ಒಂತುತ್ತು ಊಟ ಮಾಡಿ ಮಲಗು, ನೀ ಹೀಗೆ ಹಟ ಮಾಡಿದ್ರೆ ಚಿಕ್ಕವ್ರು ನಿನ್ನನ್ನ ತಾನೇ ಹಿಂಬಾಲಿಸ್ತಾರೆ. ಯೋಚನೆ ಮಾಡಿ ನೋಡಪ್ಪ ನೀನೇ"

ತಂದೆಯ ದನಿಯ ನೆರಳಾದ ತಾಯಿಯ ಧ್ವನಿ––"ಹೌದು ರಾಜ, ಹೆತ್ತಕರುಳು ಎಷ್ಟು ಕುದಿಯುತ್ತೆ ಗೊತ್ತೇನೋ. ಒಂದು ತುತ್ತು ಊಟ ಮಾಡೋ, ಅನ್ನ ನಿನಗೇನು ಮಾಡ್ತು ? 'ಅನ್ನಂ ಪರಬ್ರಹ್ಮಂ' ಅಂದಿದ್ದಾರೆ ಹಿರೀರು. ಊಟ ನಿದ್ರೆ ಬಿಟ್ರೆ ತಾನೇ...."

ಇವರ ಮಾತು ಕೇಳಿಕೊಳ್ಳುವ ಇಷ್ಟವೇ ಇಲ್ಲ ರಾಜೀವನಿಗೆ.

"ಅಪ್ಪ. ಚಿಕ್ಕಮ್ಮ ಅಂತ ಹುಡುಗ್ರೆಲ್ಲಾ ಕರೆಯೋಲ್ವ ಆಕೆ ನಿನಗೆ ಇದನ್ನ ಕೊಡು ಅಂದ್ರು" ಎಂದು ಕವರನ್ನು ತಂದೆಗೆ ಕೊಟ್ಟು ಕೋಣೆಗೆ ಹೊರಟುಹೋದ.

ರಾಮಣ್ಣನವರು----"ಈ ಕೆಲ್ಸ ಮಾಡೋ ಹೆಂಗಸ್ರಿಗೆ ಇನ್ನೇನುಕೆಲಸ. ಯಾವುದೋ ಸಮಾಜ ಸೇವೆ. ಒಂದು ಬಿನಿಫಿಟ್ ನಾಟಕ. ದುಡ್ಡು ಕೊಡಿ ಅಂತ ಕೇಳಿ ಬರೆಯೋದೇ ಅವರ ಉದ್ಯೋಗ" ಎಂದು ಜುಗುಪ್ಸೆಯಿಂದ ಕವರನ್ನು ಬಿಚ್ಚಿದರು. ಒಳಗಿನಿಂದ ಹತ್ತು ರೂಪಾಯಿಗಳ ನೋಟುಗಳು

ಉದುರಿದುವು. ಆದರೂ ದಪ್ಪಗಿದ್ದ ಕವರನ್ನು ಖಾಲಿ ಮಾಡಲು ಎಳೆದರು, ಮತ್ತೆ ಕೆಲವು ಹತ್ತರ ನೋಟುಗಳು. ಜೊತೆಗೆ ಒಂದು ಕಾಗದ.

"ಪೂಜ್ಯರಿಗೆ.

ಈ ಪತ್ರವನ್ನೇ ಆಗಲಿ. ಇದರಲ್ಲಿರುವ ಹಣವನ್ನೇ ಆಗಲಿ ತಾವು ತಪ್ಪು ತಿಳಿಯಬಾರದು. ನಿಮ್ಮ ಪರಿಸ್ಥಿತಿ ನನಗೆ ಸ್ವಲ್ಪ ಮಟ್ಟಿಗೆ ತಿಳಿಯಿತು. ರಾಜೀವನಂತಹ ಚಾಣಾಕ್ಷ ವಿದ್ಯಾರ್ಥಿಗಳು ಮುಂದೆ ಬರದಿದ್ದರೆ. ನಮ್ಮ ದೇಶದಲ್ಲಿ ಭಾವೀ ಜ್ಞಾನಿಗಳಿಗೇ ಕೊರತೆಯಾದೀತು.ಅದ ಕ್ಕಾಗಿ ಕಳುಹಿಸಿದ್ದೇನೆ. ರಾಜೀವ, ರವಿಯಂತಹ ಮಕ್ಕಳನ್ನು ಪಡೆದ ನೀವು ಅದೃಷ್ಟಶಾಲಿಗಳು. ಚಿರಂಜೀವಿಗಳಿಗೆ ಆಶೀರ್ವಾದಗಳು. ನಾಳೆಯೇ ಕಡೆಯ ದಿನವಾದುದರಿಂದ ರಾಜೀವ ಹಣ ಕಟ್ಟಿ ಬಿಡಲಿ, ಮತ್ತೊಮ್ಮೆ ಬೇಡುತ್ತೇನೆ ನನ್ನನ್ನು ತಪ್ಪು ತಿಳಿಯಬೇಡಿ—

ಇತಿ ಮಕ್ಕಳ ಚಿಕ್ಕಮ್ಮ ಸರಳಾ"

ರಾಮಣ್ಣನವರಿಗೆ ಮೈ ನಡುಗಲಾರಂಭಿಸಿತು. ನರ ದೌರ್ಬಲ್ಯ, ವಾರ್ಧಿಕ್ಯಗಳಿಂದ ನರಳುತ್ತಿದ್ದ ಅವರಿಗೆ. ಈ ಅಶರೀರವಾಣಿಯನ್ನು ತಡೆದು ಕೊಳ್ಳುವುದಕ್ಕಾಗಲಿಲ್ಲ.

"ತಾಯಿ ಸ್ವಲ್ಪ ನೀರು...." ಎಂದು ಕೂಗಿಕೊಂಡರು.

ಗಾಬರಿಯಿಂದ ನೀರು ತಂದ ತಾಯಮ್ಮ ಪತಿಯ ಅವಸ್ಥೆ ನೋಡಿ, ಅವರಿಗೆಲ್ಲೋ ಕೆಲಸದಿಂದ ವಜ ಆಗಿಬಿಟ್ಟಿದೆಯೋ ಎನ್ನುವ ಮಟ್ಟಿಗೆ ಅಧೀರ ರಾದರು, ನೀರು ಕುಡಿದು ಚೇತರಿಸಿಕೊಂಡ ರಾಮಣ್ಣನವರು----"ದೇವರಿ ದ್ದಾನೆ ತಾಯಿ, ಖಂಡಿತ ಇದ್ದಾನೆ. ನಮ್ಮ ಪಾಲಿಗಿನ್ನೂ ಅವನಿದ್ದಾನೆ. ಇಲ್ಲಿ ನೋಡು. ನೂರ ಇಪ್ಪತ್ತು ರೂಪಾಯಿಗಳು ! ದೇವತೆ ರೂಪದಲ್ಲಿ ಕಳ್ಸಿ ದ್ದಾನೆ ಭಗವಂತ. ಯಾರು ತಾಯಿ ಆ ಸರಳಾ ಅನ್ನೋ ಆಕೆ ?"

ಒಂದೇ ನಿಮಿಷದಲ್ಲಿ ತಿಳಿಯಿತು ತಾಯಮ್ಮನವರಿಗೆ. ಬಡ ವಿದ್ಯಾರ್ಥಿ ಗಳ ಬಂಧು ಸರಳಾ ನೆರವು ನೀಡಿದ್ದಾಳೆಂದು.

ತುಂಬು ಹೃದಯದಿಂದ ಹೇಳಿದಳು-"ಮುಂದಿನ ಬೀದೀಲಿದ್ದಾಳೆ ಆಕೆ. ಒಳ್ಳೆ ಮನೆತನದ ಹುಡುಗಿ ಹಾಗೆ ಕಾಣ್ತಾಳೆ. ಯಾವ ಕಾರಣಕ್ಕೋ ಏನೋ ಮದ್ವೆ ಮಾಡ್ಕೊಂಡಿಲ್ವಂತೆ. ಆದ್ರೂ ಚಿನ್ನದಷ್ಟು ಶುದ್ಧದ ಹುಡುಗಿ

ಅಂತಾರಪ್ಪ, ಇರೋದು ಒಬ್ಳು ಕೈತುಂಬಾ ಸಾಂಪಾದಿಸ್ತಾಳಂತೆ. ಅದಕ್ಕೆ ವಿದ್ಯಾರ್ಥಿಗಳಿಗೆಲ್ಲಾ ಸಹಾಯ ಮಾಡ್ತಿರ್‍ತಾಳಂತೆ."

"ಯಾರಾದ್ರೂ ಆಗಿರಲಿ, ಆಕೇನ ದೇವ್ರು ಚೆನ್ನಾಗಿಟ್ಟಿರಲಿ. ಇಷ್ಟು ದಿನ ನಮುಗ್ಯಾಕೆ ಆಕೆ ಪರಿಚಯ ಆಗಿರ್‍ಲಿಲ್ಲ ?"

"ನೀವ್ರೂ, ನಿಮ್ಮಗ ಇಬ್ರೂ ಸರಿ. ಮಹಾ ಅಭಿಮಾನಿಗಳು. ಇನ್ನೊಬ್ರ ಹತ್ರ 'ದೇಹಿ' ಅನ್ನಲಾರಿರಿ. ಅದೂ ಅವನಿಗೆ ಸಾಲರ್‌ಷಿಪ್ಪು, ಫ್ರೀಷಿಪ್ಪು ಬರ್‍ತಿತ್ತು. ಅವನಿಗೆ ಸಹಾಯ ಬೇಕಾಗ್ಲಿಲ್ಲ."

"ಸಾಲರ್‌ಷಿಪ್ಪು, ಫ್ರೀಷಿಪ್ಪು ಅಲ್ಲಕಣೆ. ಸ್ಕಾಲರ್‌ಷಿಪ್ಪು? ಫ್ರೀಷಿಪ್ಪು ಅನ್ಬೇಕು"–ಪತ್ನಿಯನ್ನು ತಿದ್ದಿದರು. ಅವರ ಮುಖ ಪ್ರಫುಲ್ಲ ವಾಗಿತ್ತು. ತೃಪ್ತಿಗೊಂಡಿತ್ತು.

"ನನ್ನ ತಿದ್ದೋದಿರ್‍ಲಿ. ರಾಜೀವಂಗೆ ತಿಳ್ಸಿ ಮುಂಚೆ ಇದನ್ನ"—ತಾಯಿಯ ಗಮನ ಆಗಲೇ ಮಗನ ಕಡೆ.

"ರಾಜಾ ನೋಡಿಲ್ಲಿ. ನೋಡೋ ಇಲ್ಲಿ, ಬಾರೋ ಇಲ್ಲಿ" ಒಂದೇ ಉದ್ವೇಗ ಆತನಿಗೆ.

ಕೋಣೆಯಿಂದ ಹೊರಗಡೆ ಬಂದ ರಾಜೀವನಿಗೆ. ಹಾವೋ ಚೇಳೋ ಕಂಡು ಹೆದರಿದವರು ಕಾತರಗೊಂಡಂತೆ ಕಂಡರು ರಾಮಣ್ಣ.

"ಏನಪ್ಪ ಅದು ಹಾಗೆ ಹಾರಾಡ್ತೀಯ ?"–ನಿರುತ್ಸಾಹದ ತಾತ್ಸಾರ ರಾಜೀವಂದು.

ಸಂತೋಷದ ಉದ್ವೇಗದಲ್ಲಿದ್ದ ರಾಮಣ್ಣನವರಿಗೆ ಮಾತೇ ಹೊರಡದು.

"ನಿಮ್ಮ ಚಿಕ್ಕಮ್ಮ ಕಣೋ ರಾಜ, ದೇವತೆ ಕಣೋ. ತೋ.... ತೊ....ಗೋ ಇದನ್ನು ಓದು. ಓದೋ"–ತಮ್ಮ ಆತುರವನ್ನು ಅವನ ಮೇಲೆ ಹೇರುತ್ತಾ ಕಾಗದ ಕೈಯಲ್ಲಿ ಕೊಟ್ಟರು.

ಕಾಗದ ಓದಿದ ರಾಜೀವ ನುಡಿದುದು ಒಂದೇ ವಾಕ್ಯ–ಕೃತಜ್ಞತೆಯ ಉದ್ಗಾರ.

"ಚಿಕ್ಕಮ್ಮ ನೀವು ನನ್ನ ಪಾಲಿನ ದೈವ"

ಓಡಿಹೋಗಿ ಸರಳೆಯ ಕಾಲಿಗೆರಗಬೇಕೆನ್ನಿಸಿತು ಅವನಿಗೆ. ಜೀವವಿಲ್ಲದ

ಕಲ್ಲುಗೊಂಬೆಗೆ ಪೂಜೆಮಾಡಿ ದೇವರೆನ್ನುವ ಬದಲು ಸರಳೆಯಂತಹ ವ್ಯಕ್ತಿಗಳಿಗೆ ಮನ್ನಣೆ ಸಲ್ಲಿಸಬಾರದೇಕೆ! ಎಂದುಕೊಂಡ.

"ರಾಜ, ಆ ತಾಯೀಗೆ ನಮ್ಮ ವಿಷಯ ಹೇಗೆ ಗೊತ್ತಾಯ್ತು?"

"ಅದೇ ನಂಗೊತ್ತಿಲ್ಲಾಪ್ಪ ಮಧ್ಯಾಹ್ನ ಹೇಳಿಕಳಿಸಿದ್ರು ರವಿ ಫ್ರೆಂಡು ನಾಣಿ ತಮ್ಮ ಗೋಪಿ ಕೈಲಿ. ನೇರವಾಗಿ ನನ್ನ ಪರೀಕ್ಷೆ ವಿಷಯಾನೇ ವಿಚಾರಿಸಿದ್ರು. ಆಗ಼್್ಲ ನಾನು, ನನ್ಗೆ ಸುಮ್ನೆ ಉಪದೇಶ ಹೇಳ್ತಾ ಇದಾರೆ ಆಕೆ ಅಂದ್ಕೊಂಡೇಪ್ಪ. ಆಕೆ ದೊಡ್ಡ ಗುಣಾನ್ನ ಗುರುತಿಸ್ಲೇ ಇಲ್ಲ. ಈಗ ತಿಳೀತಾ ಇದೆ ನನ್ನ ಅಲ್ಪತನ"—ಎಂದು ತಲೆತಗ್ಗಿಸಿದ.

ಅವನ ಪಶ್ಚಾತ್ತಾಪ ಗುರುತಿಸಿದ ತಂದೆ-"ನಾಳೆ ಬೆಳಿಗ್ಗೆ ಆಕೆನ್ನ ಕಂಡು ಬರೋಣ ರಾಜೀವ. ಈಗಲಾದ್ರೂ ಊಟ ಮಾಡ್ತೀಯಾ ?" ಅಕ್ಕರೆಯಿಂದ ಕೇಳಿದರು.

"ಬೇಡಾಪ್ಪ, ಸಂಜೆ ಆಕೇನೇ ನನ್ನ ದಣಿದ ಹೊಟ್ಟೇಗೆ ಅಮೃತ ತಿನಿಸಿದ್ದಾಳೆ. ಈಗ ದಣಿದ ಮನಸ್ಸಿನ ನೋವನ್ನೂ ನಿವಾರಿಸಿದ್ದಾಳಪ್ಪ....ಅಮ್ಮಾ ಎಲ್ಲಪ್ಪ"

ದೈವಭಕ್ತೆ ತಾಯಮ್ಮ ಆ ದುಡ್ಡನ್ನು ದೇವರ ಮುಂದಿಟ್ಟು ಆ ಹೊತ್ತಿನಲ್ಲೂ ದೇವ್ರಿಗೆ ದೀಪ ಹಚ್ಚಿ ಪ್ರಾರ್ಥಿಸುತ್ತಿದ್ದರು. ಆ ತಾಯಿಯ ಹೃದಯ ಮಕ್ಕಳ ಭವಿಷ್ಯದ ಜೊತೆಗೆ ಕಂಡರಿಯದ ಸರಳೆಗಾಗಿಯೂ ಬೇಡುತ್ತಿತ್ತು.

ತಾಯಿಯನ್ನು ಹುಡುಕಿ ಬಂದ ರಾಜೀವ, ದೇವರ ಮುಂದೆ ಸಾಷ್ಟಾಂಗವೆರಗಿದ.

"ದೇವರಲ್ಲಿ ನಂಬಿಕೆ ಮಾತ್ರ ಬಿಡಬಾರದು. ಇಂದಲ್ಲದಿದ್ರೆ ನಾಳೆ ಅವನಲ್ಲದೆ ನಮ್ಮಂತಾವ್ರಿಗೆ ಬೇರೆ ಯಾರು ತಾನೇ ಸಹಾಯ ಮಾಡುತ್ತಾರೆ" ಎಂದು ತನ್ನ ದೈವ ನುಡಿದದ್ದು ಕಿವಿಯಲ್ಲಿ ಪ್ರತಿಧ್ವನಿಸಿತು. ಅವನು ತನಗಾಗಿ ದೇವರನ್ನು ಏನೂ ಬೇಡಲಿಲ್ಲ. ಸರಳೆಯನ್ನು ಚೆನ್ನಾಗಿಟ್ಟಿರಲಿ ಎಂದು ಪ್ರಾರ್ಥಿಸಿದ.

ಅಂದು ಆ ಬಡ ಕುಟುಂಬದಲ್ಲಿ ಶಾಂತಿ ನೆಲೆಸಿತ್ತು. ಸುಮಾರು ಹತ್ತು ದಿನಗಳಿಂದ ಮೂಡಿ ನಿಂತಿದ್ದ ಕಾರ್ಮೋಡ. ಒಂದೇ ಒಂದು ನಕ್ಷತ್ರ ಮೂಡಿ ಬಂದು. ಚಿದುರಿ ವಾತಾವರಣ ತಿಳಿಯಾಯಿತು.

ಎಲ್ಲರೂ ನಿಶ್ಚಿಂತೆಯಿಂದ ನಿದ್ದೆಮಾಡಿದರೂ ಎಚ್ಚರವಿದ್ದವನು ಬಾಲಕ, ರವಿನಾಥ. ಎಲ್ಲರೂ ನಿದ್ರಿಸಿದಂತೆ ಕಂಡಾಗ ಮೆಲ್ಲಗೆ ಎದ್ದು ದೇವರ ಕೋಣೆಗೆ ಹೋದ. ಅಮ್ಮ ಹಚ್ಚಿದ್ದ ದೀಪ ಇನ್ನೂ ಆರಿರಲಿಲ್ಲ. ಮೆಲ್ಲಗೆ ಕಣ್ಣು ಮುಚ್ಚಿ ಕುಳಿತು ದೇವರಿಗೆ ಒಂದು ದೊಡ್ಡ ಪಟ್ಟಿಯನ್ನೇ ಅರ್ಪಿಸಿದ.

"ಸರಳಾ ಚಿಕ್ಕಮ್ಮನಿಗೆ ಒಳ್ಳೇದು ಮಾಡು, ಅಣ್ಣನಿಗೆ ಫಸ್ಟ್ ಕ್ಲಾಸ್ ಬರಲಿ, ಅವನಿಗೆ ಒಳ್ಳೆ ಕೆಲಸ ಸಿಗಲಿ, ನಮ್ಮನ್ನೆಲ್ಲಾ ಓದಿಸ್ತಾನೆ. ಅಕ್ಕಂಗೆ ಒಳ್ಳೆ ಗಂಡ ಸಿಕ್ಕಲಿ" ಇತ್ಯಾದಿ.

ದೇವರಿಗೆ ಈ ಮಕ್ಕಳನ್ನ ಕಂಡರೆ ಇಷ್ಟವೇ ಇದ್ದಿರಬೇಕು. ಅದಕ್ಕಾಗೇ ಅವರ ವಿದ್ಯಾಭ್ಯಾಸದ ಹೊರೆಯನ್ನು ಸರಳೆಯ ಬೆನ್ನಮೇಲೆ ತಳ್ಳುವುದ ರಲ್ಲಿದ್ದ.

ರವಿ ಯಾವಾಗ ಬಂದು ಮಲಗಿದನೋ ಒಬ್ಬರಿಗೂ ತಿಳಿಯದು.

ಬೆಳಗಾಗುವ ವೇಳೆಗೆ ಬಾಗಿಲಲ್ಲಿ ರಾಜೀವನನ್ನು ಕಂಡು ಸ್ವಾಗತಿಸಿದಳು

"ಬಾ ರಾಜೀವ, ಏನು ನನಗೆ ಉದಯರಾಗ ಹಾಡೋಕ್ಕೆ ಬಂದೆ ಯೇನು ?"

"ಇಲ್ಲಾ...."

"ಮತ್ತೆ ಎದ್ದಿದ್ದಾಳೋ ಇಲ್ವೋ ಸೋಮಾರಿ ಚಿಕ್ಕಮ್ಮ ಅಂತ...."

"ಹೋಗೀಮ್ಮ ಹೇಳೋದು ಕೇಳಿಸ್ಕೊಳ್ಳಿ ಸ್ವಲ್ಪ. ನಮ್ತಂದೆ ಬಂದಿ ದ್ದಾರೆ. ನಿಮ್ಮನ್ನ...."

"ನಿಮ್ತಂದೆ ಬಂದಿದಾರಾ? ಕರಿ ಕರಿ ಒಳಗಡೆ."

ಅತಿ ಎತ್ತರವೂ ಅಲ್ಲದ ಕುಳ್ಳೂ ಅಲ್ಲದ ಆಕಾರ ರಾಮಣ್ಣನವರದು. ನೋಡಿದ ಕೂಡಲೇ 'ಗುಮಾಸ್ತ' ಎಂದು ಗುರುತು ಒತ್ತುವಂತ ಇತ್ತು ಅವರ ಪಂಚೆ ಕೋಟು. ಅಷ್ಟು ಬೆಳಿಗ್ಗೆಯಲ್ಲೂ ಕೋಟನ್ನು ಬಿಟ್ಟಿರಲಿಲ್ಲ ಅವರು. ದೊಡ್ಡವರನ್ನು ನೋಡಲು ಹೋಗುವಾಗ ಕೋಟಿಲ್ಲದೆ, ತಲೆಯ ಮೇಲೆ ಪೇಟವಿಲ್ಲದೆ ಹೋಗಬಾರದು ಎನ್ನುವ ಹಳೆಯ ಸಂಪ್ರದಾಯ ಅವರದು. ರಾಜೀವನ ಒತ್ತಾಯಕ್ಕೆ ಪೇಟ ಹಾಕಿರಲಿಲ್ಲ ಇಂದು.

"ಬೆಳಗ್ಗೆ ಇಷ್ಟು ಹೊತ್ತಿಗೆ ಪೇಟ ಕೋಟು ಯಾಕಪ್ಪಾ? ಅದೂ ನೀನೂ ಯಾವ ಆಫೀಸಿಗೂ ಹೋಗ್ತಾ ಇಲ್ಲ. ಚಿಕ್ಕಮನ ಮನೇಗೆ ತಾನೆ ?"

"ಹಾಗಲ್ಲ ರಾಜ. ಚಿಕ್ಕಮ್ಮ ನಮ್ಮ ಪಾಲಿಗೆ ದೊಡ್ಡೋಳು. ಆಕೇನ್ನ ನೋಡೋಕ್ಕೆ ಹೋಗಬೇಕಾದ್ರೆ...."

"ಆಕೆ ಏನೂ, 'ಪೇಟ ಯಾಕಿಟ್ಟಿಲ್ಲ ರಾಮಣ್ಣೋರೆ, ನಾನು ನಿಮ್ಮನ್ನ ಭೇಟಿ ಆಗೋಲ್ಲ ಅಂತಾಳೇನು ?"

"ಹಾಗಲ್ವೋ ರಾಜ"

"ಇನ್ನು ಹೇಗಪ್ಪ, ಅಪ್ಪ, ಕೋಟು ಬೇಕಾದ್ರೆ ಹಾಕ್ಕೋಪ್ಪ. ಆದೆ ಈ ಪೇಟ ಬೇಡಪ್ಪ"

"ಸರಿಯಪ್ಪ. ಹುಂ ನಡಿ ಹಾಗಾದ್ರೆ" ಎಂದು ಬೋಳು ತಲೆ ಬಿಟ್ಕೊಂಡೇ ಬಂದಿದ್ರು.

"ಬನ್ನಿ ಕೂತ್ಕೊಳ್ಳಿ ಬನ್ನಿ, ಇಷ್ಟು ದೂರ ಬಂದ್ರಲ್ಲಾ ನನ್ನಿಂದ ಏನಾದ್ರೂ...." ಎಂದು ಹಾರ್ದಿಕವಾಗಿ ಮಾತನಾಡಿಸಿದಳು.

"ಎಂತಹ ಸೌಜನ್ಯ ! ಎಂತಹ ವಿನಯ ! ನೂರು ಕಾಲ ಬಾಳು ತಾಯಿ ಹೆಣ್ಣುಗಳಿಂದಲೇ ನಮ್ಮ ಭಾರತ ಮಹಿಳೆ, ಆದರ್ಶ ಮಹಿಳೆ ಅನ್ನಿಸಿಕೊಂಡಿರೋದು. ಇಷ್ಟು ಚಿಕ್ಕವಯಸ್ಸಿಗೇ ನಿಂಗ್ಯಾಕಮ್ಮ ಇಂತ ತಪಸ್ಸು ವೈರಾಗ್ಯ!" —ತುಂಬಿದ ಮನಸ್ಸಿನಿಂದ ರಾಮಣ್ಣನವರು ಮನಸ್ಸಿನಲ್ಲೇ ಹೊಗಳುತ್ತಾ ನಿಂತುಬಿಟ್ಟರು. ಸರಳೆಗೆ ಉತ್ತರ ಕೊಡಲೇ ಇಲ್ಲ.

ಮಾತನಾಡಿದವನು ರಾಜೀವ–"ನಿಮಗೆ ಥ್ಯಾಂಕ್ಸ್, ಹೇಳ್ಬೇಕೋ ತಿಳೀದು. ಈವತ್ತು ನನ್ನ ಲೈಫ್‌ನಲ್ಲೇ ಯಾಕೆ ನಮ್ಮ ಮನೆಗೇ ಒಂದು ಶುಭದಿನ. ಅದಕ್ಕೇ ಕೃತಜ್ಞತೆ ಸಲ್ಲಿಸೋಕ್ಕೇಂತ ಅಪ್ಪ ಬಂದಿದ್ದಾರೆ"

ಈಗ ರಾಮಣ್ಣನವರೂ ದನಿಗೂಡಿಸಿದರು–"ಹೌದಮ್ಮ. ನಮ್ಮ ಪಾಲಿನ ದೇವ್ರಾಗಿ ಬಂದಿದ್ದೀಯಮ್ಮ. ಮೇಲಾಗಿ ಕ್ಷಮಿಸ್ಬೇಕು ಅಂತೀಯಲ್ಲಮ್ಮ. ಇದರಲ್ಲಿ ಕ್ಷಮಿಸೋಮಾತಲ್ಲಿದೆ. ಸಾಧ್ಯವಿದ್ದರೆ ನಿನ್ನ ಪುರಸ್ಕರಿ

ಸ್ತೀವಮ್ಮ. ಈವತ್ತು ದೇವ್ರು ನಮಗೆ ಅಷ್ಟು ಕೊಟ್ಟಿಲ್ಲ. ನಿನ್ನ ಆಶೀರ್ವಾದ ದಿಂದ ರಾಜೀವ ಮೇಲಕ್ಕೆ ಬಂದೇ ಬರ್‍ತಾನೆ. ಆಗ ನಾವು ಮಾಡೋ ಪುರಸ್ಕಾರಾನ ನೀನು ಬೇಡಾಂತ ಅನ್ನಬಾರ್‍ದು ತಾಯಿ."

"ನಾನು ಮಾಡಿರೋ ಸಣ್ಣ ಸಹಾಯಾನ್ನ ನೀವು ಇಷ್ಟು ಹೊಗಳಬಾರ್‍ದು. ನನ್ಗೆ ನಾಚಿಗೆ ಆಗುತ್ತೆ"

"ಅದು ನಿನ್ನ ದೊಡ್ಡ ಗುಣಾಮ್ಮ. ನಿನ್ನ ವಿಷಯ ಕೇಳಿದ್ವಿ. ಈವತ್ತು ನಿನ್ನನ್ನ ನೋಡಿದ ಹಾಗಾಯ್ತು. ನಿನ್ನ ಋಣ ತೀರಿಸಿಕೊಳ್ಳೋ ಅವಕಾಶ ದೇವ್ರು ಕಲ್ಪಿಸಿದ್ರೆ ಸಾಕು"

"ರಾಜೀವ ಎಂ.ಎಸ್.ಸಿ.ನ ಫಸ್ಟ್‌ಕ್ಲಾಸಿನಲ್ಲಿ ಪಾಸು ಮಾಡಿದ್ರೆ ಅದೇ ನನಗೆ ಪುರಸ್ಕಾರ. ಏನು ರಾಜಣ್ಣಾ ಏನಂತಿ ?"---ರಾಜೀವನ ಕಡೆ ನೋಡಿದಳು ಸರಳಾ.

"ಸರಳಾ ಚಿಕ್ಕಮ್ಮನ ಆಶೀರ್ವಾದ ಇದ್ಮೇಲೆ ರಾಜೀವಂಗೆ ಫಸ್ಟ್‌ಕ್ಲಾಸ್ ಗ್ಯಾರಂಟಿ"

"ಅರೆರೆ ! ಇಲ್ಲೂ ಜವಾಬ್ದಾರಿ ನನ್ನ ಮೇಲೆ ತಳ್ತೀಯಾ"

ಅಕ್ಕ ತಮ್ಮಂದಿರಂತೆ ಒಬ್ಬರನ್ನೊಬ್ಬರು ಛೇಡಿಸಿಕೊಳ್ಳುತ್ತಿದ್ದ ಅವ ರನ್ನು ನೋಡಿ 'ಯಾವ ಜನ್ಮದ ಋಣವೋ' ಎಂದುಕೊಂಡರು ಆತ.

"ನನ್ನ ಹುಡುಗನ ಜವಾಬ್ದಾರಿ ಹೊತ್ತೆಯಮ್ಮ ನೀನು....ಹುಂ ಬರ್‍ತೀವಮ್ಮ ನಾವಿನ್ನು" ಎಂದು ಕಣ್ಣೊರೆಸಿಕೊಂಡರು.

"ಯಾಕಪ್ಪಾ ಕಣ್ಣಲ್ಲಿ ನೀರು ಹಾಕ್ತೀರಿ. ನನ್ನ ಮನೇಗೆ ಬಂದವ್ರು ನಕ್ಕು ಹಿಂತಿರುಗಬೇಕೇ ವಿನಾ ಕಣ್ಣೊರೆಸ್ಕೊಂಡು ಹೋಗಬಾರ್‍ದು"

"ಅಳ್ತಿಲ್ಲಮ್ಮ ಸರಳಮ್ಮ. ನಿನ್ನಂತ ಜೀವಿಗಳು ಇನ್ನೂ ನಮ್ಮಲ್ಲಿದ್ದಾರಲ್ಲಾಂತ ಹೃದಯ ತುಂಬಿ ಬಂತು. ಬಡವ್ರಿಗೆ ಸಹಾಯ ಮಾಡೋದಿರಲಿ, ಕಣ್ಣೆತ್ತಿ ಕೂಡ ನೋಡದೆ ಇರೋ ಜನ ಇರೋ ಜಗತ್ತಿನಲ್ಲಿ ನಿನ್ನಂತಹ ನಕ್ಷತ್ರಗಳೂ ಇವೆಯಲ್ಲಾಂತ ಸಂತೋಷಾಮ್ಮ ನನಗೆ ಸಂತೋಷ"

"ದೇವ್ರು, ದೈವ ಅನ್ನೋದ್ರಲ್ಲಿ ನಂಬಿಕೆ ಇರೋವರ್‍ಗೂ ನ್ಯಾಯಕ್ಕೇ ಜಯ ಇದೆ ಅಂತ ನನ್ನ ಅಭಿಪ್ರಾಯ. ಅಂತಹ ದೊಡ್ಡ ದೊಡ್ಡ ಮರುಳು ಕಾಡುಗಳಲ್ಲೂ ಅಲ್ಲೊಂದು ಇಲ್ಲೊಂದು ಓಯಸಿಸ್ ಸೃಷ್ಟಿಯಾಗಿರುತ್ತೆ ದಾರಿ

ಹೋಕನಿಗಾಗಿ. ಹಾಗೇನೇ ಕತ್ತಲಲ್ಲಿ ತಡಕಾಡ್ತಾ ಇರೋವ್ರಿಗೆ ದಾರಿ ತೋರಿಸೋಕ್ಕೇಂತ ಚಂದ್ರ, ನಕ್ಷತ್ರಗಳು ಉದಯಿಸುತ್ತಾರೆ.

ಬಡವರು ಬಡವ್ರಾಗೇ ಉಳಿದುಬಿಡೋಲ್ಲ. ಹಾಗೇಂತ ಅವರ ಬಡತನಾನ್ನ ಯಾರೂ ನಿವಾರಿಸೋಕ್ಕೂ ಆಗೋಲ್ಲ. ಯಾವುದೋ ಒಂದು ಶುಭ ಗಳಿಗೇಲಿ, ಕಾಣದ ಮೂಲೆಯಿಂದ, ಒಂದು ಕಿರಣ ಕತ್ತಲಿನಲ್ಲಿ ಬಂದು ಬಿದ್ದರೂ, ಅದು ತನ್ನಷ್ಟಕ್ಕೇ ಪ್ರಕಾಶವನ್ನ ದೊಡ್ಡದು ಮಾಡ್ಕೊಂಡೇ ಹೋಗುತ್ತೆ. ಆ ಕಿರಣ, ಕತ್ತಲನ್ನ ಓಡಿಸೋಕ್ಕೆ ಬರೋ ಒಂದು ನೆಪ ಮಾತ್ರ. ಪೂರ್ಣಬೆಳಕು ಹರಡೋದು ಆ ಕಿರಣದಿಂದ ಅಲ್ಲ. ಕಿರಣ ಬಂದ ಕಾರಣದಿಂದ ಓಡಿಹೋಗೋ ಕತ್ತಲಿನಿಂದ.

"ಹಾಗೇ ನಾನು ಒಂದು ಸಣ್ಣ ನೆಪ. ಈಗ ಇವನು ಪಾಸಾದ್ಮೇಲೆ ಸರಳಳ ನೆನಪೂ ಉಳಿಯೋಲ್ಲ"

"ಹಾಗನ್ನಬೇಡಿ ಚಿಕ್ಕಮ್ಮ. ಇನ್ನು ಈ ಚಿಕ್ಕಮ್ಮನ್ನ ಈ ಜನ್ಮದಲ್ಲಿ ಮರೆಯೋದು ಸಾಧ್ಯವಿಲ್ಲ"

"ನೀನು ಮರೆತ್ಬಿಡ್ತಿ ಅಂತ ಆಗಲಿ, ಮರೀ ಬೇಕು ಅಂತ ಆಗ್ಲಿ ನಾ ಹೇಳ್ತಿಲ್ಲ ರಾಜೀವ, ಯಾರೇ ಆಗಲಿ ಮುಂದೆ ಬರಬೇಕಾದ್ರೆ ಕೆಲವು ಸುಸಮಯಗಳು, ಕೆಲವು ಒಳ್ಳೇ ನೆಪಗಳು ಬೇಕು. ಇದು ನೀನು ಮುಂದೆ ಬರೋಕ್ಕೆ ಹೆದ್ದಾರಿ. ನಿನ್ನಂಥ ವಿದ್ಯಾರ್ಥಿ ಪ್ರಗತಿಗೆ ಬರಬೇಕೂಂತ ನನ್ನನ್ನ ನೆಪವಾಗಿ ತಂದಿದಾನೆ ದೇವರು ಅಷ್ಟೆ. ನೀನು ಮುಂದೆ ಬಂದ ಕೂಡಲೆ, ಈ ನೆಪ ಪ್ರಾಧಾನ್ಯವಾಗಿ ಉಳಿಯೋಲ್ಲ. ಉಳಿಯಕೂಡ್ದು.

ನಾನ್ಯಾಕೆ ಇಷ್ಟೆಲ್ಲಾ ಹೇಳ್ತಿದಿನೀಂದ್ರೆ, ಸುಮ್ನ ಸುಮ್ನೆ ವ್ಯಕ್ತಿಗಳನ್ನ ಹೊಗಳೋದಾಗ್ಲಿ ಆರಾಧಿಸೋದಾಗ್ಲಿ ಸರಿಯಲ್ಲ. ನೀನು ನನ್ನ ಈವತ್ತು ದೈವಿಕವಾಗಿ ನೋಡಿ, ನಾಳೆ ನನ್ನಲ್ಲಿ ಏನಾದ್ರೂ ಲೋಪ, ದುರ್ಬಲತೆ ನೋಡಿದ್ರೆ ನೀನು ಸಹಿಸಲಾರೆ. ಆರಾಧಿಸೋ ಅಂತಾದ್ದು ಏನೂ ಇಲ್ಲ ನನ್ನಲ್ಲಿ. ಎಲ್ಲರ ಹಾಗೇ ನಾನೂನೂ. ಕಷ್ಟಕಾಲಕ್ಕೆ ಒದಗಿ ಬಂದಳು ಅಂತ ನೆನಪಿಟ್ಕೊಂಡು ಚೆನ್ನಾಗಿ ಓದಿ ಮುಂದೆ ಬಂದ್ರೆ ಸರಿ....ಅಷ್ಟೆ. ಅರ್ಥವಾಯಿತೇನು ನಾ ಹೇಳಿದ್ದು ?"

ಕಡೆಯ ವಾಕ್ಯ, ಮೇಷ್ಟರು ವಿದ್ಯಾರ್ಥಿಗೆ ಎಲ್ಲವನ್ನೂ ವಿವರಿಸಿ, ಬಾರು ಡೆಗೆ ಹೊಕ್ಕಿತೆ ಎಂಬಂತೆ ಆಯಿತು.

ಅವಳ ಮಾತಿನ ಅರ್ಥ ರಾಜೀವನಿಗೆ ಆಯಿತು. ಆದರೆ ರಾಮಣ್ಣ ನವರಿಗೆ ಎಲ್ಲಾ ವಿಚಿತ್ರವೆನಿಸಿತು. ಪ್ರತಿನಿತ್ಯವೂ, ಸುತ್ತಮುತ್ತಲ ವ್ಯಕ್ತಿಗಳ ಆಸೆ, ದುರಾಚಾರ, ಲೋಭ, ಅಸೂಯೆಗಳನ್ನು ನೋಡಿದ್ದ ಅವರಿಗೆ, ಸರಳೆ ಒಂದು ವ್ಯಕ್ತಿಯಾಗಿ ಉಳಿಯಲಿಲ್ಲ. ಸದ್ಗುಣಗಳ ನಿಧಿಯಂತೆ ಕಂಡಳು. ಒಂದು ಕಾಸಿನ ದಾನ ಮಾಡಿದ ಮನುಷ್ಯ ಒಂದು ಸಾವಿರ ಜನಕ್ಕಾದರೂ ಹೇಳಿಕೊಂಡು ಬರುವ ಈ ಯುಗದಲ್ಲಿ, ಒಂದು ಕುಟುಂಬದ ಭವಿಷ್ಯದ ಅಡಿ ಗಲ್ಲಿನಲ್ಲಿ ಬಿದ್ದ ತೂತನ್ನು ಮುಚ್ಚಿದರೂ, ಅದು ತಾನಲ್ಲ ದೈವದ ಆಟ ಎನ್ನುವ ಸರಳೆ, ಬರಿಯ ಹರೆಯದ ಹೆಣ್ಣಾಗಿ ಕಾಣಲಿಲ್ಲ. ದೈವೀ ಸ್ವರೂಪಿ ಯಾದ ತಾಯಿಯಾಗಿ ಕಂಡಳು. ಮನಸ್ಸಿನಲ್ಲೇ ಕೈ ಜೋಡಿಸಿದರು, ಮೇಲೆ ಮಾತ್ರ "ಬರ್ತೀವಮ್ಮ ವಿಶ್ವಾಸವಿರಲಿ" ಎಂದು ಎದ್ದರು.

"ವಿಶ್ವಾಸ ಇಟ್ಕೋಬೇಕಾದ್ರೆ, ನೀವು ಸ್ವಲ್ಪ ಹಾಲು ಕುಡಿದು ಹೋಗ್ಬೇಕು" ಎಂದು ಎರಡು ಲೋಟ ಹಾಲು ತಂದು ತಂದೆ ಮಕ್ಕಳ ಮುಂದಿಟ್ಟಳು.

ಅವಳ ಸರಳತೆಯ ಆದರದ ಮುಂದೆ ನುಡಿಹೀನರಾದರು ರಾಮಣ್ಣ.

ಸರಳಾ ಮುಂದುವರಿಸಿ ಹೇಳಿದಳು– "ಈವತ್ತು ನೀವು ನಮ್ಮನೇ ಹೊಸ್ತಿಲು ತುಳಿಯೋ ಹಾಗೆ ಮಾಡಿದ ಕೀರ್ತಿ ನಿಮ್ಮ ರವೀದು, ರಾಮ ಣ್ಣೋರೇ, ನೀವು ತುಂಬ ಅದೃಷ್ಟಶಾಲಿಗಳು. ರಾಜೀವ, ರವಿಯಂತಹ ಮಕ್ಕಳನ್ನ ಪಡೆದಿದ್ದೀರಿ. ತಮ್ಮ ತಂಗೀರನ್ನ ಮುಂದೆ ತರಬೇಕೂಂತ ಹಠ ತೊಟ್ಟಿರೋ ರಾಜೀವ, ಅಣ್ಣನ ನೋವು ತನ್ನ ನೋವು ಅಂತ ತಿಳಿದಿರೋ ತಮ್ಮ, ಲಕ್ಷ್ಮಣನಂತ ರವಿ."

"ಏನಮ್ಮ ನೀನು ಹೇಳ್ತಿರೋದು" ಆಶ್ಚರ್ಯದಿಂದ ಕೇಳಿದರು ಆತ.

ನಡೆದದ್ದೆಲ್ಲಾ ವಿವರಿಸಿದಳು. ರವಿಯ ಮೇಲೆ ಮಮತೆ ಬೆಳೆಯಿತು.

"ರಾಜೀವನ ಫೀಸ್ ಆದ್ಮೇಲೆ ಮಿಕ್ಕಿದ್ರಲ್ಲಿ ರವೀಗೆ ಏನು ಬೇಕೋ ಅದನ್ನ ನನ್ನ ಆಶೀರ್ವಾದ ಅಂತ ತೆಗೆಸ್ಕೊಡಿ"

"ಹಾಗೇ ಆಗ್ಲಮ್ಮ. ಇನ್ನು ಬರೋಣ್ವ ?"-ಎಂದು ಹೊರಟರು.

"ರಾಜೀವ, ನಿಮ್ಮಮ್ಮನ್ನ, ತಂಗೀರ್ನ ನಮ್ಮನೇಗೆ ಕರ್ರ್ಕೊಂಬಾಪ್ಪ."

"ಖಂಡಿತವಾಗಿ" ಎಂದು ಸಂತೃಪ್ತಿಯಿಂದ ತಂದೆಯ ಜೊತೆ ಸೇರಿ ಕೊಂಡ.

ನಿನ್ನೆ ಹೇಗಿದ್ದ!

ಕೆದರಿದ ಕೂದಲು, ಕ್ಷೌರವಿಲ್ಲದ ಮುಖ. ಆದರೆ ಈ ದಿನ!

ಸೊಗಸುಗಾರನಾಗಿದ್ದ ರಾಜೀವ. ಓಹ್ ತೃಪ್ತಿದೇವತೆ! ನಿನ್ನಲ್ಲಿ ಅದೇನನ್ನಡಗಿಸಿಟ್ಟಿರುವೆ? ಪ್ರತಿ ಮಾನವನಿಗೂ ನೀನು ಸಿಕ್ಕಿದ ಕೂಡಲೇ ಹೇಗೆ ಬದಲಾಗುತ್ತಾನೆ!

೯

"ಇನ್ನೂ ಹೀಗೆ ಮಲಗಿದ್ದೀರಲ್ಲಾ. ಏಳಿ ಮತ್ತೆ" ಎಂದು ಗಂಡನನ್ನು ಬಲಾತ್ಕರಿಸತೊಡಗಿದಳು ಸುಮಿತ್ರ.

"ಯಾಕಪ್ಪ? ಎದ್ದು ಏನ್ಮಾಡ್ಬೇಕು" ಎಲ್ಲವನ್ನೂ ಮರೆತು ಬಿಟ್ಟಂತೆ ನಟಿಸಿದ ಶ್ಯಾಮು.

"ಈವತ್ತು ಸರಳಾ ಮನೇಗೆ ಹೋಗೋಣ ಅಂತ ಅಂದಿರಲಿಲ್ವಾ? ಆ ಭಾನುವಾರದಿಂದ ಈ ಭಾನುವಾರದವರೆಗೆ ಹೇಳ್ತಾನೇ ಇದೀನಿ, ನೀವಿನ್ನೂ ಮೂಗೆಳೀತಾನೇ ಇದ್ದೀರಿ."

"ಯಾರ ಮೂಗು ನಿನ್ನದೋ ನನ್ನದೋ?"

"ನಿಮ್ಮದೇ, ಉದ್ದವಾಗಿ ಚೆನ್ನಾಗಿದೆ. ನನ್ನದೇಕೆ ಸದ್ಯ ಮೊಂಡು ಮೂಗು?" ಎಂದು ಪ್ರೀತಿಯಿಂದ ಬಂದು ಮಂಚದ ಮೇಲೆ ಅವನ ಪಕ್ಕ ದಲ್ಲಿ ಕುಳಿತು.

ಸರ್ರೆಂದು ದಿಂಬಿನಮೇಲಿದ್ದ ತನ್ನ ತಲೆಯನ್ನು ಸುಮಿತ್ರೆಯ ತೊಡೆಯ ಮೇಲಿಟ್ಟು "ಮೊಂಡು ಮೂಗಾದ್ರೇನೇ ಮತ್ತೆ, ಎಳೆದ್ರೆ ಚೆನ್ನಾಗಾಗುತ್ತೆ"

ಎಂದು ಅವಳ ಮೂಗನ್ನು ಹಿಡಿದುಕೊಳ್ಳಲು ಕೈಚಾಚಿದ. ಅವನ ಕೈಯ್ಯನ್ನು ಅಷ್ಟಕ್ಕೆ ತಡೆದು---

"ತಮಾಷೆ ಸಾಕಪ್ಪ. ಈಗ ಬರ್ತೀರೋಇಲ್ವೋಹೇಳಿಹೊತ್ತಾಯ್ತು?"

"ನಾ ಬರೋಲ್ಲ. ನನ್ನನ್ನೇನೂ ನಿನ್ನ ಗೆಳತಿ ಕರೆದಿಲ್ಲ"

"ಕರೆದ್ಳು, ಕರೆದ್ಳು. ಕರೆದ್ಳು. ಎಷ್ಟು ಸಲ ಹೇಳ್ಲಿ ಹೇಳಿ ? ನಿಮನ್ನ ಯಾರಾದ್ರೂ ಹೆಂಡ್ತೀನ್ನೂ ಕರ್ಕೊಂಬಾ ಅಂತ ಕರೆದ ಕೂಡ್ಲೆ. ನನ್ನ ಪ್ರಾಣ ತೆಗೀತೀರಿ "ಬಾ, ಬಾ" ಅಂತ. ಈಗ ಸರಳಾ ಎಷ್ಟು ವಿಶ್ವಾಸದಿಂದ "ನಿನ್ನ ವರನ್ನೂ ಕರ್ಕೊಂಬಾ" ಅಂತ ಅಂದಿದಾಳೆ. ಬನ್ನಿ ಅಂದ್ರೆ ನಿಮಗತೀ ಜಂಭ"

"ಓ ಹಾಗಾದರೆ ನಾನು ನಿನ್ನವನಾ ? ನಿಜವಾಗಿ ?"-ಕುಚೇಷ್ಟೆ ಮಾಡುತ್ತಲೇ ಇದ್ದ. "ಹೋಗಿ ನನ್ನ ಹತ್ರ ಮಾತಾಡಬೇಡಿ" ನಿಜವಾಗಿಯೂ ಕೋಪ ಬಂದಿತು ಸುಮಿತ್ರೆಗೆ. ಅವನೇ ಹೇಳಿದ್ದ ಮುಂದಿನ ಭಾನುವಾರ ಹೋಗೋಣಾಂತ. ಆದರೆ ಈಗ ಈ ಹಿಂದೇಟು ಯಾಕೋ ಅರ್ಥವಾಗದು.

"ಈ ವೊಂಡು ಮೂಗಿನ ತುದೀಲೇ ಇಷ್ಟು ಕೋಪ ಇದ್ರೆ. ಇನ್ನು ಒಂದ್ವೇಳೆ ಮೂಗು ಉದ್ದವಾಗಿದ್ದಿದ್ರೆ ಇನ್ನೆಷ್ಟು...."

"ನನ್ನ ಮೂಗು ಹೇಗಾದ್ರೂ ಇರಲಿ ಬಿಡಿ. ನೀವು ಚೆನ್ನಾಗಿದ್ದೀರಾಂತ ಗೊತ್ತಿಲ್ಲ." ಅವನ ತಲೆಯನ್ನು ತನ್ನ ತೊಡೆಯಿಂದ ಕೆಳಗಿಳಿಸಲು ನೋಡಿದಳು. ಚತುರ ಶ್ಯಾಮಸುಂದರ ಅವಳ ಕೋಪ ನಿಜವಾದದ್ದೆಂದು ಅರಿತುಬಿಟ್ಟ. ಮೆಲ್ಲಗೆ ಎದ್ದು ಕುಳಿತು—

"ಈವತ್ತು ಬೇಡ ಸುಮಿ ಪ್ಲೀಸ್. ನನಗೆ ಅರ್ಜೆಂಟ್ ಕೆಲಸ ಇದೆ. ಇನ್ನೊಂದಿನ ಖಂಡಿತ"

"ಬೇಡ. ನೀವು ಬರಬೇಡಿ. ಅವಳ ಮನೇಗೆ ನೀವು ಖಂಡಿತ ಬರೋದು ಬೇಡ. ಅವಳಂತಹ ವ್ಯಕ್ತಿ ಪರಿಚಯ ನಿಮಗೆ ಬೇಡ. ನಿಮ್ಮ ದುರದೃಷ್ಟಕ್ಕೆ ಅಳಬೇಕೋ ನಗಬೇಕೋ ಹೋಗಿ "----ಛೇಡಿಸಿದಳು.

"ಇನ್ನೊಂದಿನ ನೀ ಬರೋಲ್ಲಾಂದ್ರೂ ನಾ ಹೋಗ್ತೀನಿ ಗೊತ್ತಾ. ಅಂತಹ ಒಳ್ಳೇ ಆಕೇನ್ನ ಪರಿಚಯ ಮಾಡ್ಕೊಂಡೇ ಮಾಡ್ಕೋತೀನಿ"

"ಬೇಕಾದ್ರೆ ಹೋಗಿ, ನನ್ನೊತೆ ಏನೂ ಬರಬೇಡಿ" ಎಂದು ಎದ್ದು ಹೊರಟಳು.

ಶ್ಯಾಮು ಬಿಡಬೇಕಲ್ಲ–"ಕೋಪ ಬಂತ ಸುಮಿ ?" ಎಂದು ಕೈ ಹಿಡಿದು ಎಳಕೊಂಡ. ಮಂಚದ ಮೇಲೆ ಕುಕ್ಕರಿಸುವಂತಾಯಿತು ಸುಮಿತ್ರೆಗೆ,

"ಇಲ್ಲಪ್ಪ. ಸದ್ಯ ಕೋಪ ಯಾಕೆ ? ನೀವು ಗಂಡ ನಾನು ಹೆಂಡ್ತಿ. ಗಂಡನ ಮಾತು ತಾನೇ ನಡೀಬೇಕು ವೇದವಾಕ್ಯವಾಗಿ. ಹೆಂಡತೀಗೆ ವ್ಯಕ್ತಿ ಸ್ವಾತಂತ್ರ್ಯ ಎಲ್ಲಿ ಬರಬೇಕು ಸದ್ಯ"

"ಈವತ್ತೊಂದಿನ ಕ್ಷಮ್ಸು ಸುಮಿ, ಕಾಲೇಜಿನಲ್ಲಿ ಯಾರೋ ಭಾಷಣ ಮಾಡ್ತಾರೆ ನಾಲಕ್ಕು ಗಂಟೇಗೆ. ನಾನೇ ಎಲ್ಲಾ ಅರೇಂಜ್ ಮಾಡ್ಬೇಕು. ನಿನ್ನ ಪರವಾಗೂ ಸರಳ ಹತ್ರ ಎಕ್ಸ್‌ಕ್ಯೂಸ್ ಹೇಳ್ಬಿಡು"

ಸುಮಿತ್ರ ಮೆತ್ತಗಾದಳು. ಶ್ಯಾಮೂನ ನಿರಾಕರಣೆಗೆ ಕಾರಣವಿದೆ ಎಂದು ಅರಿತಾಗ ಗೆಲುವಾಯಿತು--"ಅದನ್ನ ನೀವು ಹೇಳಿಕೊಡಬೇಕೇನು ನನಗೆ ?"

"ಅಯ್ಯೋ ನಿಂಗೆ ನಾ ಹೇಳಿಕೊಡಬೇಕಾ ಮಾತಾಡೋದನ್ನ, ನನ್ನ ಬದಲು ನೀನು ಲೆಕ್ಚರರ್ ಆಗಿದ್ರೆ ಹುಡುಗರೆಲ್ಲಾ...."

ಏನು ಹೇಳುತ್ತಾನೋ ಎಂದು ಅವಳು ಆಸೆಯಿಂದ ಎದುರು ನೋಡು ತ್ತಿದ್ದರೆ "ಖತಂ" ಎಂದುಬಿಟ್ಟ.

ಕೈ ಕೊಡವಿ ಸಿಡುಕಿನಿಂದ ಎದ್ದುಬಿಟ್ಟಳು. ಹಿಂದೆಯೇ ಧುಮುಕಿ ನಿಂತ ಶ್ಯಾಮು.

"ಇದೇನು ಈ ನಡುವೆ ಪುನಃ ಇಷ್ಟು ಬೇಗ ಕೋಪ ಮಾಡ್ಕೋತಿ ಸುಮಿತ್ರ. ಸರಳೆಯ ಗೆಳೆತನ ಆದ್ಮೇಲೆ ಕೋಪ ಎಲ್ಲಾ ಬಿಟ್ಟಿದ್ದಿ ಅಂತ ಅಂದ್ಕೊಂಡೆ. ಆಕೇಗೆ ಮನಸ್ನಲ್ಲೇ ಥ್ಯಾಂಕ್ಸ್ ಕೂಡ ಹೇಳಿದ್ದೆ, ಆದ್ರೆ ನೀನೀಗ ನೋಡಿದ್ರೆ...." ಬಾಗಿಲಿಗೆ ಅಡ್ಡವಾಗಿ ನಿಂತ.

"ದಾರಿ ಬಿಡಿ. ಏನದು ಹುಚ್ಚಾಟ ? ನಾ ಕೋಪಿಷ್ಠಳು ಹೌದು. ನಿಮಗ್ಯಾಕೆ ನನ್ನಿಂದ ತೊಂದ್ರೆ"

"ಬಿಡೋಲ್ಲ ಏನ್ಮಾಡ್ತಿ ?" ಕೀಟಲೆ ಮಾಡಿದ.

"ದಾರಿ ಕೊಡ್ತೀರೋ ಇಲ್ವೋ ? ನಂಗೆ ಹೊತ್ತಾಯ್ತಪ್ಪ ಶ್ಯಾಮು" ಅಸಹನೆಯಿಂದ ಕೇಳಿದಳು.

"ದಾರಿ ಬಿಡ್ತೀನಿ ಕೊಡೋಲ್ಲ. ಆದ್ರೆ ಬೇರೆ ಕೊಡ್ತೀನಿ. ಇಷ್ಟು

ಕೋಪದಿಂದ ನೀ ಹೋದ್ರೆ ನನ್ಗೆ ಭಯ. ಒಂದ್ವೇಳೆ ಸರಳಾ, ಸುಮಿತ್ರೆ ಗಂಡ ಎಷ್ಟು ಒಳ್ಳೇವರೋ ಅಂದ್ಕೊಂಡಿದ್ರೆ ಈಗ ನಿನ್ನ ನೋಡಿ ಏನಂದ್ಕೋಬಹ್ದು"

"ಅಲ್ಲೂ ಸ್ವಾರ್ಥ, ಗಂಡಸ್ರೇ ಹೀಗೆ"

"ಹೆಂಗಸ್ರು ಹೇಗೋ"–ಎಂದನು. ದಾರಿಯಂತೂ ಬಿಡಲಿಲ್ಲ· ಬಾಗಿಲಲ್ಲಿ ಅಡ್ಡ ನಿಂತೇ ಇದ್ದ.

"ಮಕ್ಕಳು ನೋಡಿದ್ರೆ ಜಗಳ ಆಡ್ತಿದೀವಿ ಅಂದ್ಕೊಂಡಾರು. ದಾರಿ ಬಿಡೀಪ್ಪ"

"ಓಹೋ ನೀನೀಗ ಜಗಳ ಆಡ್ತಾ ಇಲ್ಲ ಅಂತ್ಲೋ. ಹಾಗಾದ್ರೆ ಇನ್ನು ಜಗಳ ಆಡ್ತಾ ಇದ್ರೆ ಹೇಗಿರುತ್ತೊ ಅಮ್ಮನೋರ ಮುಖ"

"ಅಮ್ಮನೋರ ಮುಖ ಯಾವಾಗ್ಲೂ ಚೆನ್ನಾಗೇ ಇರುತ್ತೆ"

"ಕೋಪ ಬಂದ್ರೆ ಮತ್ತೂ ಚೆನ್ನಾಗಿರತ್ತೆ" ಅನ್ನುತ್ತಾ ಮುಖವನ್ನು ಮುಖದ ಹತ್ತಿರ ಹಿಡಿದು ಕಣ್ಣನೊಳಗೆ ನೋಡುತ್ತಾ ಪಿಸು ಮಾತಿನಲ್ಲಿ ಕೇಳಿದ–"ಸುಮಿ, ಟೊಮ್ಯಾಟೊ ಹಣ್ಣು ಹೇಗೆ ತಿಂದ್ರೆ ಚೆನ್ನಾಗಿರುತ್ತೆ ಹೇಳು."

ಅವನ ಮಾತು ಅವಳಿಗೆ ಅರ್ಥವಾಗಲಿಲ್ಲ. ಆದರೂ ಹೇಳಿದಳು.

"ಒಂದ್ಕಡೆ ಸ್ವಲ್ಪ ಕಚ್ಚಿ ಹೀರಿದರೆ ರಸವೆಲ್ಲಾ ಬರುತ್ತಲ್ಲಾ ಬಾಯೊಳಕ್ಕೆ ಹಾಗೆ ತಿಂದ್ರೆ ನಂಗೆ ಚೆನ್ನ. ಈಗ್ಯಾಕಾ ಮಾತು...." ಇನ್ನೂ ಮುಕ್ತಾಯವಾಗಿರಲಿಲ್ಲ ಅವಳ ಮಾತು.

"ಹೀಗಾ ?" ಎಂದು ಅವಳ ತುಟಿಯ ಮೇಲೆ ತುಟಿ ಒತ್ತಿಯೇಬಿಟ್ಟ ಶ್ಯಾಮಸುಂದರ. ಮೊದಲೇ ಕೋಪದಿಂದ ಕೆಂಪಗಾಗಿದ್ದ ಬಿಳಿಯ ಸುಮಿತ್ರೆ ನಾಚಿ ನೀರಾದಳು.

"ನಾಚಿಕೆ ಹೇಚಿಕೆಯಿಲ್ಲದ ಮೊಂಡರು ನೀವು" ಹುಸಿಕೋಪ ಸೇರಿಸಿದಳು ಲಜ್ಜೆಗೆ.

"ಟೊಮ್ಯಾಟೋ ಹಣ್ಣು ತಿನ್ನೋ ವಿಧಾನ ನೀನೇ ಹೇಳಿಕೊಟ್ಟೆ. ನಾನು ತಿಂದೆ. ನನ್ನದೇನು ತಪ್ಪು" ಎನ್ನುವಂತೆ ಕಣ್ಣು ಮಿಟುಕಿಸಿದ.

ಸುಮಿತ್ರೆಯ ಕೋಪ ಎಲ್ಲಿಯೋ ಮಾಯವಾಯಿತು. ಪ್ರೀತಿಯ ಗಂಡನ, ಪ್ರೇಮದ ಒಂದು ಚುಂಬನ, ಒಂದು ಬಾಹುಬಂಧನ, ಸತಿಯ

ಎಂತಹ ಅಳಲನ್ನಾದರೂ ಮರೆಸುವಂತಹುದು, ಇದರ ಮರ್ಮ ತಿಳಿದವನು ಶ್ಯಾಮು. ಸುಮಿತ್ರೆಯ ಕೋಪ ಇಳಿಸಿ, ನಗುವಂತೆ ಮಾಡಿ ಸರಳೆಯ ಮನೆಗೆ ಕಳುಹಿಸಿಕೊಟ್ಟು, ತಾನು 'ಕಾಲೇಜಿಗೆ ಅಭಿಮುಖವಾಗಿ ಸೈಕಲ್ಲು ತುಳಿದ.

ಇಂದು ಸರಳೆಯ ಮನಸ್ಸಿಗೇಕೋ ನೆಮ್ಮದಿಯಿಲ್ಲ. ಎಂದಿನಂತೆ ತನ್ನ ಭಾನುವಾರದ ದಿನಚರಿಯನ್ನು ಮುಗಿಸಿದ್ದರೂ ಮನಸ್ಸಿಗೇನೋ ಆತಂಕ, ಕಳವಳ. ಯಾಕೆ ? ಯಾಕೆ ಹೀಗೆ ? ಎಂದು ತನ್ನನ್ನು ತಾನೇ ಪ್ರಶ್ನಿಸಿಕೊಂಡಳು. ಬೇಸರಕ್ಕೆ ಯಾವ ಕಾರಣವೂ ಇರಲಿಲ್ಲ. ಆದರೂ ಅಶಾಂತಿ. ಆಫೀಸು ಕೆಲಸವೂ ಏನೂ ಕುಂದಿಲ್ಲದೆ ನಡೆದಿತ್ತು. ಇಂದಿರಾ–ರಮೇಶರು ಹಿಂದಿನ ದಿನವೇ ಬಂದು ಹೋಗಿದ್ದರು. ಸುಮಿತ್ರೆ ಮತ್ತು ಮಕ್ಕಳು ಆರೋಗ್ಯವಾಗಿಯೇ ಇದ್ದರು. ಅಣ್ಣಂದಿರಿಂದ ಕಾಗದಗಳೂ ಬಂದಿದ್ದುವು. ರಾಜಮ್ಮ ಕೂಡ ತಾವು ನೆಮ್ಮದಿಯಿಂದಿರುವುದಾಗಿಯೂ, ಮುಂದಿನ ತಿಂಗಳು ಬರುವುದಾಗಿಯೂ ಬರೆದಿದ್ದರು. ತನ್ನ ಹೃದಯ ಆಂದೋಳನಕ್ಕೆ ಕಾರಣವೇ ಇಲ್ಲ. ಆದರೂ ಯಾಕೀ ಕಳವಳ.

ಮನಸ್ಸನ್ನು ಸ್ಥಿಮಿತದಲ್ಲಿಡಲು ವೀಣೆಯ ಮೊರೆಹೊಕ್ಕಳು. ಇಷ್ಟವಾದ ಕಲ್ಯಾಣಿ ಮೋಹನ, ಹಿಂದೋಳ ಹಂಸಾನಂದಿ ರಾಗಗಳನ್ನು ನುಡಿಸಿದಳು. ನುಡಿಸುತ್ತಾ ನುಡಿಸುತ್ತಾ ಭಾವಾವೇಶದಲ್ಲಿ ತನ್ನನ್ನು ತಾನು ಮರೆತಳು.

ಸುಮಿತ್ರೆ ಬಂದಾಗ ಬಾಗಿಲು ತೆರೆದ ಸರಳೆಯ ಮುಖ ಎಂದಿನ ಸರಳೆ ಇದ್ದಂತಿರಲಿಲ್ಲ. ಮುಗುಳುನಕ್ಕು ಸ್ವಾಗತಿಸಿದರೂ, ಅದು ನೋವಿನ ನಗೆಯಾಗಿತ್ತು.

"ಮೈಗೆ ಚೆನ್ನಾಗಿಲ್ವ ಸರಳಕ್ಕ ?" ಮೃದುವಾಗಿ ಕೇಳಿದಳು ತಂಗಿ.

ಸರಳಾ ಗಂಭೀರತೆಯಿಂದ ಹೇಳಿದಳು–"ಏನೋ ಸ್ವಲ್ಪ ಆಲಸ್ಯ ಅಷ್ಟೆ. ಸರಿ, ನಿನ್ನ ಯಜಮಾನ್ರು ಬರಲಿಲ್ವಾ ?"

ಹಾಸ್ಯವಾಗಿ ಏನಾದರೂ ಹೇಳಬೇಕೆಂದಿದ್ದ ಸುಮಿತ್ರೆಗೆ ಗಂಟಲು ಬಿಗಿಯಿತು.

"ಇಲ್ಲ ಸರಳಕ್ಕ. ಅವರಿಗೆ ಕಾಲೇಜಿನಲ್ಲಿ ಏನೋ ಕೆಲ್ಸ ಅಂತೆ. ಇನ್ನೊಂದ್ಸಲ ಬರ್‍ತೀನಿ. ನನ್ನ ಪರವಾಗಿ ಕ್ಷಮೆ ಕೇಳ್ಬಿಡು ಅಂದ್ರು."

"ಹಾಗೇ ಆಗ್ಲಿ ಬಿಡು" ಎಂದಳು ಸಾಧಾರಣವಾಗಿ. ಆತ ಬರೆದಿದ್ದುದು ಒಳ್ಳೇದೇ ಆಯಿತು. ಮನಸ್ಸೇ ಸರಿಯಿಲ್ಲದಿದ್ದಾಗ. ಆಗಂತುಕರನ್ನು ಆದರಿಸುವುದಾದರೂ ಹೇಗೆ !

"ದೊಡ್ಡಮ್ಮ ಉಷಾರಿಲ್ವಾ ?" ಕೇಳಿದಳು ಪುಟ್ಟ ಸರಳಾ.

"ಇಲ್ಲಮ್ಮ ಪುಟ್ಟ."

"ಹೊಟ್ಟೇ ನೋವಾ ದೊಡ್ಡಮ್ಮ ?" ಹೊಟ್ಟೆ ಮುಟ್ಟಿ ನೋಡಲು ಬಂದಳು ವೈದ್ಯಳ ಹಾಗೆ ಪುಟಾಣಿ ಸರಳಾ.

ಈಗ ಸರಳ ನಗದೆ ವಿಧಿಯೇ ಇರಲಿಲ್ಲ. ಗಂಭೀರತೆ ಬಿಟ್ಟು—"ಹೊಟ್ಟೆ ನೋವಲ್ಲ ಡಾಕ್ಟ್ರೆ. ತಲೆನೋವು ಇಲ್ಲಿ." ಎಂದು ತಲೆ ತೋರಿಸುತ್ತ ಮಗುವಿನ ಮುಂದೆ ನೆಲದ ಮೇಲೆ ಕುಳಿತಳು. ಪುಟ್ಟ ಕೈನಿಂದ ತಲೆಮುಟ್ಟಿ ಬಾಲಕಿ ಪರಿತಾಪವಾಗಿ—

"ಅಯ್ಯೋ ಸುಡ್ತಾ ಇದೆ ದೊಡ್ಡಮ್ಮ. ಅಮ್ಮ, ದೊಡ್ಡಮ್ಮಂಗೆ ಮಾತ್ರೆ ಕೊಡಮ್ಮ" ಎಂದಳು. ಸರಳೆ ಸುಮಿತ್ರೆಯರಿಬ್ಬರಿಗೂ ನಗು ಬಂತು

"ನೀನೇ ಕೊಡು, ದೊಡ್ಡಮ್ಮಂಗೆ ಮಾತ್ರೆ ನಿನ್ನ ಹತ್ರಾನೇ ಇದೆ." ಎಂದು ಬಗ್ಗಿ ಮುತ್ತುಕೊಡಲು ಹೇಳಿಕೊಟ್ಟಳು ಸುಮಿತ್ರಾ.

ಮಗುವಿನ ಮುಗ್ಧ ಮುತ್ತಿಗೆ ಮರುಳಾದಳು ಸರಳಾ. ಅವಳನ್ನೆತ್ತಿಕೊಂಡು ವೀಣೆಯ ಬಳಿ ಬಂದು "ಈ ವೀಣೆಯ ಧ್ವನಿ ಎಷ್ಟು ಇಂಪೋ ನಿನ್ನ ಮಾತೂ ಅಷ್ಟೇ ಮರಿ" ಎಂದು ಮಗುವಿನ ಕೆನ್ನೆಗಳ ಮೇಲೆ ಸಾಲ ತೀರಿಸಿ ಕೆಳಗಿಳಿಸಿದಳು.

ವೀಣೆಯುನ್ನು ಕಂಡ ಸುಮಿತ್ರ—"ವೀಣೆ ದನಿ ಕೇಳಿ, ನಾನೆಲ್ಲೊ ರೇಡಿಯೋದಲ್ಲಿ ಅಂದುಕೊಂಡೆ. ನೀನು ವೀಣೆ ನುಡಿಸ್ತಿದ್ದೆಯಾ" ಎಂದಳು.

"ಸುಮ್ಮನೆ ಹೊಗಳ್ತಿ ಸುಮಿತ್ರ. ರೇಡಿಯೋದಲ್ಲಿ ಬರೋ ವೀಣೆಯ ಪ್ರಾವೀಣ್ಯ ಎಷ್ಟು ನಾನು ನುಡಿಸೋದೆಷ್ಟು ? ನೀಗೊಂದು ವ್ಯಕ್ತೀನ್ನ ಕಂಡ್ರೆ

ಇಷ್ಟವಾದ ಮಾತ್ರಕ್ಕೆ ಅವರ ಕೃತ್ಯ ಎಲ್ಲಾ ಉತ್ತಮ ಅನ್ನೋ ಅಂಥ ಶ್ರದ್ಧೆ ತಪ್ಪು ಸುಮಿತ್ರ."

"ಅದೆಲ್ಲಾ ಇರಲಿ. ಅಂತೂ ಹದಿಮೂರಾಯ್ತು."

"ಏನದು ಹದಿಮೂರು ?"

"ನಂಗೊಬ್ಬ ಸರಳ ಅಂತ ಅಕ್ಕ ಇದ್ದಾಳೆ. ಅವಳಲ್ಲಿರೋ ಗುಣಗಳು. ವೀಣೆ ನುಡಿಸೋದು ಹದಿಮೂರನೇ ಗುಣ,"

"ಮಿಕ್ಕ ಹನ್ನೆರಡು ಯಾವ್ಯಾವ್ರೊ ? ಹೇಳು ಕೇಳೇಬಿಡೋಣ."

"ಊಹುಂ. ಹೇಳಿದ್ರೆ ನೀಗೆ ಜಂಭ ಬಂದುಬಿಟ್ರೆ. ಅಷ್ಟಕ್ಕೂ ನಾನೂ 'ಇವರೂ' ಸೇರಿ ಲೆಖ್ಖ ಹಾಕಿರೋದು ಅದು."

"ಅಂದ್ರೆ ಆತನ ಹತ್ರ ಎಲ್ಲಾ ಹೇಳಿಬಿಡ್ತಿ ಅನ್ನು"

"ಹೌದಮ್ಮ. ಅವ್ರಿಂದ ನಾನೇನೂ ಮುಚ್ಚಿಡೋಲ್ಲ. ಈಗ ಹರಟೆ ಬೇಡ ಸರಳ. ನೀ ವೀಣೆ ನುಡಿಸು, ನಾ ಕೇಳ್ಬೇಕು"

"ಕೇಳದೇನೇ ಇಷ್ಟು ಕುರುಡಾಗಿ ಹೊಗಳಿದ್ದಿ. ಅದು ಹಾಗೇ ಇರಲಿ. ಕೇಳಿದ್ರೆ ಇರೋ ಭಾವನೆ ಹೋಗಿ ನಿರಾಶೆ ಆಗ್ಬಹುದ್ದು ನಿನಗೆ"

"ಏನೂ ಇಲ್ಲ. ನೀನು ನುಡಿಸಲೇಬೇಕು. ದಿನಾ ನುಡಿಸ್ತೀಯಾ ಸರಳಾ ?"

"ಹುಂ, ಪ್ರತಿದಿನ ರಾತ್ರಿ ಒಂದರ್ಧ ಗಂಟೆನಾದ್ರೂ ನನ್ನ ಇಷ್ಟ ದೈವದ ಮುಂದೆ ನುಡಿಸ್ದೇ ಇದ್ರೆ ನನಗೆ ತೃಪ್ತಿ ಇರೋಲ್ಲ. ಆದ್ರೆ ಈವ ತ್ತ್ಯಾಕೋ ಮನಸ್ಸು ಬಹಳ ಒದ್ದಾಡ್ತಾ ಇತ್ತು, ಅದಕ್ಕೆ ಈಗ಼್ಲೇ ಇಟ್ಕೊಂಡು ಕೂತಿದ್ದೆ."

"ಚೆನ್ನಾಗಿ ಹೊತ್ತು ಹೋಗುತ್ತಲ್ವಾ ನುಡಿಸ್ತಾ ಇದ್ರೆ"

"ಒಳ್ಳೆ ಪ್ರಶ್ನೆ ಕೇಳ್ದೆ, ಹೊತ್ತು ಹೋಗೋದಿರ್ಲಿ. ಇದು ನನ್ನ ಭವಿಷ್ಯದ ಬಾಳಗೆಳತಿ ಸುಮಿತ್ರಾ. ನನ್ನ ನೋವು, ಭಾವನೆಗಳನ್ನೆಲ್ಲಾ ಕೇಳುವ, ನುಡಿಯುವ ನನ್ನ ಗೆಳತಿ ಇವಳು–'ವೀಣಾ !"

"ಬಹಳ ದಿನದಿಂದ ಕಲೀತಿದೀಯಾ ಸರಳಕ್ಕ ?"

"ಇಲ್ಲ ಈಗೋದು ನಾಲ್ಕೈದು ವರ್ಷಗಳಿಂದ ಮಾತ್ರ. ಈಗ್ಗೆ ಆರು ವರ್ಷಗಳ ಹಿಂದೆ ನನ್ನ ಲೈಫ್‌ನಲ್ಲಿ ಒಂದು ದೊಡ್ಡ ಗೊಂದಲ ಆಗ್ಬಿಡ್ತು.

ಆಗ ಶರಣು ಬಿದ್ದೆ ಈ ವೀಣಾಳಿಗೆ. ಅಂದಿನಿಂದ ನನಗೆ ನೆಚ್ಚಿನ ನಂಬಿಕೆಯ ಸಂಗಾತಿಯಾಗಿ ಉಳಿದಿದ್ದಾಳೆ."

"ಹಾಗಾದರೆ ನನ್ನ ಸ್ಥಾನ !" ಕುತೂಹಲಕ್ಕಾಗಿ ಕೇಳಿದಳು ಸುಮಿತ್ರಾ.

ದೊಡ್ಡ ನಿಟ್ಟುಸಿರು ಬಿಟ್ಟು ನುಡಿದಳು ಸರಳಾ—"ನಿನ್ನ ಸ್ಥಾನ ಬಹುಶಃ ಇದಕ್ಕೆ ಎರಡನೇದೇ ನಿಜ. ಸುಮಿತ್ರಾ. ನನಗೇನೋ ನೀನು ಸದಾ ನನ್ನವಳಾಗಿ ಉಳಿಯಬೇಕೂಂತ ಆಸೆ. ಆದ್ರೆ ಪ್ರೀತಿಯ ಗೂಡನಿಂದ ನಿನ್ನನ್ನ ಕಸಿದುಕೊಳ್ಳೋ ಉದ್ದೇಶ್ಯ ಮಾತ್ರ ನಂಗಿಲ್ಲ. ನೀನು ದಿನ ದಿನಕ್ಕೂ ನನ್ನ ಬಾಳಿನಲ್ಲಿ ಹೊಕ್ಕು ಬರ್‍ತಿದ್ದೀ. ಇದು ಒಳ್ಳೇದಕ್ಕೋ ಕೆಡುಕಿಗೋ ತಿಳೀದು ಸುಮಿತ್ರಾ. ತಿಳೀದು."

"ಹಾಗ್ಯಾಕಂತೀಯ. ಆಗೋದೆಲ್ಲಾ ಒಳ್ಳೆದಕ್ಕೇಂತ ದೊಡ್ಡವ್ರು ಹೇಳೋಲ್ವಾ ?"

"ಹೇಳ್ತಾರೆ, ದೊಡ್ಡವ್ರು ಎಷ್ಟೋ ಹೇಳ್ತಾರೆ. ಆದ್ರೆ ನನ್ನ ಲೈಫ್ ನಲ್ಲಿ ನಾನು ಬಯಸೋ ಯಾವ ವಸ್ತೂನೇ ಆಗಲಿ, ವ್ಯಕ್ತೀನೇ ಆಗಲಿ, ಬಹಳ ಕಾಲ ನಿಲ್ಲೋಲ್ಲ ಸುಮಿತ್ರಾ. ಅದು ನನ್ನ ದೌರ್ಭಾಗ್ಯ. ನಾನು ಹಚ್ಚಿ ಕೊಂಡು ಹೋದಷ್ಟೂ, ವಿಧಿ ಎಲ್ಲರನ್ನೂ ನನ್ನಿಂದ ಬೇರ್ಪಡಿಸುತ್ತೆ. ನಂಗ್ಯಾರ್‍ದ್ದೋ ಶಾಪ ಇರಬೇಕು."—ಸರಳ ಜೀವಿಯ ನೋವಿನ ನುಡಿ.

"ಈವತ್ತು ಯಾಕೋ ಒಂತರಾ ಇದ್ದಿ ಸರಳಕ್ಕ. ನಿನ್ನ ಮಾತು ಮಾತಿನಲ್ಲೂ ನೋವೇ ಕಾಣ್ತಾಇದೆ. ಅದು ಏನೂಂತ ನಂಗೆ ಹೇಳಬಾರ ದೇನು ?"

ಸರಳೆಗೆ ತನ್ನ ಬಗೆಗೆ ತನಗೇ ಭಯವಾಯಿತು. ಎಷ್ಟು ವರ್ಷಗಳಿಂದ ಮುಖವಾಡ ಹಾಕಿ ತನ್ನಲ್ಲೇ ಅಡಗಿಸಿಟ್ಟಿದ್ದ ನೋವನ್ನು ಎಲ್ಲಿ ಬಹಿರಂಗ ಮಾಡಿಬಿಡುವೆನೋ ಎಂದು ಅಂಜಿದಳು. ಸುಮಿತ್ರೆಯ ಆತ್ಮೀಯ ಕರೆಗೆ ಓ ಕೊಡಲು ಹಾತೊರೆಯಿತು ನೊಂದ ಮನಸ್ಸು. ಧೈರ್ಯ ತಂದುಕೊಳ್ಳಲು ಸಾಹಸ ಮಾಡಿದಳು.

"ಅದೆಲ್ಲಾ ಇನ್ನೊಂದಿನ ಮಾತಾಡೋಣ. ಈವಾಗ ವೀಣೆ ನುಡಿ

ಸ್ತೀನಿ ಬಾ" ಎಂದು ವಿಷಯ ಬದಲಾಯಿಸಿ ಬಲವಂತವಾಗಿ ವೀಣೆಯ ಮುಂದೆ ಕುಳಿತಳು. ಸುಮಿತ್ರ ಎದುರಿಗೇ ಚಾಪೆಯ ಮೇಲೆ ಕುಳಿತಳು.

ಮಕ್ಕಳಿಗಲ್ಲೇನು ಕೆಲಸ. ಅವರ ಕೆಲಸವೆಲ್ಲಾ ಮನೆಯ ಹೊರಗಡೆ. ಅಕ್ಕ ತಂಗಿಯರ ಸಂಭಾಷಣೆಯ ಭರದಲ್ಲಿ ನುಣುಚಿ ಹೋಗಿದ್ದರು ಜಿಂಕೆಯ ಮರಿಗಳು.

ವೀಣೆಯ ತಂತಿಯ ನಾದಕ್ಕೆ ಸುಮಿತ್ರಳ ಹೃದಯದ ತಂತಿ ಮಿಡಿಯಿತು. ಸರಳೆಯ ಕಣ್ಣ ನೀರಿಗೆ ಭಾವೋದ್ವೇಗದ ಅರ್ಥ ಕಲ್ಪಿಸಿಕೊಂಡಳು ಸುಮಿತ್ರ, ಸುಮಾರು ಒಂದೂವರೆ ಗಂಟೆಕಾಲ ವೀಣೆ ನುಡಿಸಿ, ತನ್ನ ಪರಮ ಪ್ರಿಯ ಕಾನಡಾ ರಾಗದಲ್ಲಿ 'ಪರಾಮುಖ ಮೇಲನಮ್ಮ ಪರಾಧೀನ ಪತಿತ ನಾಪೈ' ನುಡಿಸಿ ವೀಣೆ ಕೆಳಗಿಟ್ಟಳು ಸರಳ.

ಜೋರಾಗಿ ಕೈ ತಟ್ಟಿ ಸುಮಿತ್ರ–"ಸ್ಪ್ಲೆಂಡಿಡ್ ! ವಂಡರ್ ಫುಲ್ ! ಸರಳಾ" ಎಂದು ವೀಣೆಯ ಬಳಿ ಓಡಿಬಂದಳು.

"ಈಗಲಾದ್ರೂ ಹೊಗಳಬಹುದಾ ? ಅಪ್ಪಣೇನಾ?"

ಕಣ್ಣೀರು ಒರಸಿಕೊಂಡು ಸರಳಾ "ಈವತ್ತಿಗೆ ಇಷ್ಟು ಸಾಕು ಸುಮಿತ್ರ. ಸ್ವಲ್ಪ ಕಾಫಿಗೀಫಿ ಮಾಡಿ ಕುಡ್ಯೋಣ. ಪಾಪ ಬಹಳ ಸುಸ್ತಾಗಿದ್ದಿ ನನ್ನ ವೀಣೆ ಕೇಳಿ" ಎಂದು ಹಾಸ್ಯ ನುಡಿದಳು.

"ಹಾಸ್ಯ ಮಾಡ್ತೀಯಾ ? ನಂಗೇನೂ ಬರೋಲ್ಲ ಅಂತಾನಾ ? ಹಾಡೋಕ್ಕೆ ಬರದಿದ್ರೂ ಕೇಳಿಸ್ಕೊಳ್ಳೋಕೆ ಬರುತ್ತೆ ಲಕ್ಷಣವಾಗಿ. ಅದು ದೊಡ್ಡ ಗುಣ ಅಲ್ವಾ?

"ನಿಜವಾಗ್ಲೂ ದೊಡ್ಡ ಗುಣ."

ಇದು ಹಾಸ್ಯವೇ ಅಂದು ಕೊಂಡ ಸುಮಿತ್ರ ಗೀಜಿದಳು "ನಿಜವಾಗ್ಲೂ ಹೇಳಮ್ಮ ದೊಡ್ಡ ಗುಣ ಅಲ್ವಾ ? ನಂಗೊಂದು ದೊಡ್ಡಗುಣ ಬೇಡ್ವ ?"

"ಏನು ಮಾತನಾಡ್ತಿ ಸುಮಿತ್ರ. ನಿನ್ನಲ್ಲಿ ಎಲ್ಲಾ ಒಳ್ಳೇಗುಣಾನೇ ಇದೆ. ಸಂಗೀತ ಹಾಡೋಕ್ಕೆ ಬರದಿದ್ರೆ. ಚಿತ್ರ ಬರೆಯೋಕ್ಕೆ ಬರದಿದ್ರೆ. ಅದನ್ನ ಕುಂದು ಅಂತ ಯಾತಕ್ಕೆ ಅಂದ್ಕೋಬೇಕು. ಕಲೇನ್ನ ರೂಢಿಸಿ ಕೊಳ್ಳೋದಿರಲಿ. ಅನುಭವಿಸೋವ್ರು ತಾನೇ ಎಷ್ಟು ಜನ ಇರ್ತಾರೆ ನಮ್ಮಲ್ಲಿ.

ನನ್ನದೇನೂ 'ಕಲೆ' ಅನ್ನೋಷ್ಟು ಚೆನ್ನಾಗಿಲ್ಲ, ಆದ್ರೆ ನನ್ನ ಸಂತೋಷಕ್ಕಾಗಿ, ನಿನ್ನಂತಾವ್ರ ಅಭಿಲಾಷೆಗಾಗಿ ಆಗೋಷ್ಟು ನುಡಿಬಲ್ಲೆ ಅಷ್ಟೆ."

"ಆಮೇಲಾಮೇಲೆ" ನಾಟಕೀಯವಾಗಿ ನುಡಿದು ಕಣ್ಣು ಮಿಟುಕಿಸಿದಳು.

"ನಿನ್ನಲ್ಲೊಂದು ದೊಡ್ಡ ದುರ್ಗುಣ ಇದೆ ಸುಮಿತ್ರ. ಅದು ಏನು ಅಂತ ಹೇಳ್ಲೇನು ?"

"ಓಹೋ ಧಾರಾಳವಾಗಿ ಹೇಳು."

"ವ್ಯಕ್ತಿ ಆರಾಧನೆ. ನಿಂಗಿಷ್ಟವಾದ ವ್ಯಕ್ತಿಗಳನ್ನ ಪ್ರೀತಿಸು, ಗೌರವಿಸು, ನಂಬಿಕೆ ಇಡು. ಆದರೆ ದೇವರಂತೆ ಪೂಜಿಸಬೇಡ. ದೇವರು ಪರಿಪೂರ್ಣ ನಮ್ಮ ದೃಷ್ಟೀಲಿ. ವ್ಯಕ್ತಿಗಳನ್ನ ಆ ದೃಷ್ಟೀಲಿ ನೋಡಿ ಆರಾಧಿಸ್ತಾ ಇರೋವಾಗ, ಅವರಲ್ಲಿ ಒಂದು ಸಣ್ಣ ದುರ್ಬಲತೆ ಕಂಡ್ರೂ ಮನಸ್ಸಿಗೆ ಅಗಾಧ ನೋವಾಗುತ್ತೆ. ನಿನ್ನ ಪತೀನ್ನೇ ಆಗ್ಲಿ ನನ್ನದ್ನೇ ಆಗ್ಲಿ ಇಷ್ಟೊಂದು ಆರಾಧಿಸ್ಬೇಡ. ಎಲ್ಲರ ಹಾಗೇ ನಾವೂ ಮನುಷ್ಯರು. ಈ ವಿಷಯಕ್ಕೆ ನೀನು ಕುರುಡಾಗಿದ್ದಿ ಅಂತ್ಲೇ ನನಗೆ ಬಾಧೆ."

"ಹಾಗಾದ್ರೆ ನಾನು ಪ್ರೇಮಿಸೋ ನನ್ನ ಗಂಡ, ಪ್ರೀತಿಸೋ ನೀನು, ನಿಮ್ಮಲ್ಲಿ ಪರಿಪೂರ್ಣತೆ ನಾನು ಕಾಣ್ತಾ ಇಲ್ಲ ಅಂತೀಯ ?" ರಹಸ್ಯ ಶೋಧಿಸುವ ಸಂಶಯವಿತ್ತು ಅವಳ ಪ್ರಶ್ನೆಯಲ್ಲಿ.

"ಇಲ್ಲ, ಖಂಡಿತವಾಗೂ ಇಲ್ಲ. ನಿನ್ನಲ್ಲಿ ಇಲ್ದೆ ಇರೋ ಕೆಲವೊಂದ ಗುಣ ನನ್ನಲ್ಲಿರಬಹುದು. ಆದಕ್ಕಾಗಿ ನಾನು ನಿನಗೆ ಉತ್ತಮಳಾಗಿ ಕಾಣ್ಸಿರಬಹುದು. ಹಾಗೇಂತ ನಾನು ಪರಿಪೂರ್ಣಳಾಗಲು ಸಾಧ್ಯವೇ ಇಲ್ಲ, ಹಾಗೇನೇ ನಿನ್ನಾತನೂ. ನಿನ್ನ ಪ್ರೇಮ ಆತನ ದುರ್ಬಲತೆಗಳ ಕಡೇಗೆ ನಿನ್ನನ್ನು ಕುರುಡಾಗಿಸಿರಬಹುದು. ಅದು ನಿನ್ನ ಅರಿವಿಗೆ ಎಟುಕಿದಾಗ ಅದೇ ಬೃಹತ್ ಪರಿಣಾಮ ತಾಳಬಹುದು. ಆಗ ಅದನ್ನೆದುರಿಸಲಾರದೆ, ನೋಯೋದಕ್ಕಿಂತ ಈಗಲೇ ನಿನ್ನ ವ್ಯಕ್ತಿ ಆರಾಧನೆಗಳಿಗೆ ಕಡಿವಾಣ ಹಾಕಿದ್ರೆ ಒಳ್ಳೇದಲ್ವ ಸುಮಿತ್ರ. ನಾ ಹೀಗೆ ಹೇಳ್ತದೀನೀಂತ, ನೀನು ನನ್ನಲ್ಲಿಟ್ಟಿರೋ ಪ್ರೀತೀನ್ನೇ ಆಗ್ಲಿ, ನಿನ್ನ ಗಂಡನಲ್ಲಿಟ್ಟಿರೋ ಅನುರಾಗಾನ್ನೇ ಆಗ್ಲಿ ಕಡಿಮೆ ಮಾಡ್ಬೇಕೂಂತ ಅಲ್ಲ. ಆರಾಧನೆ ನಿಲ್ಲಿಸು ಅಂತ ಹೇಳ್ತದೀನಿ ಅಷ್ಟೆ"

ಎಂದು ಹೇಳಿ, ತಾನು ಹೇಳಿದ ಮಾತುಗಳನ್ನು ಮೆಲುಕು ಹಾಕಲು ಸುಮಿತ್ರೆಯನ್ನು ಅವಳ ಪಾಡಿಗೇ ಬಿಟ್ಟು ಕಾಫಿ ಕಷಾಯದ ತಯಾರಿಗಾಗಿ ಪಾಕಗೃಹವನ್ನು ಸೇರಿದಳು.

ಬರಿಯ ಕಾಫಿ ಏಕೆಂದು ಉಪ್ಪಿಟ್ಟು ಮಾಡಿದಳು. ಕಾಫಿಗಾಗಿ ಹಾಲು ಕಾಸಿ ಇಳಿಸಲು ಕೈಯ್ಯಲ್ಲಿ ತೆಗೆದುಕೊಳ್ಳುವ ವೇಳೆಗೆ "ಅಯ್ಯೋ ಸರಳಾ" ಎಂಬ ಕಠೋರ ಕೂಗು ಕವಿಯಲ್ಲಿ ಬಿದ್ದು ಪಾತ್ರೆ ಕೆಳಗೆ ಬಿದ್ದು ಹಾಲೆಲ್ಲಾ ಚೆಲ್ಲಿಹೋಯಿತು.

ಎಂತಹ ಅಪಶಕುನ ! ಹಾಲು ಮೊಸರು ಚೆಲ್ಲಿದರೆ ಜೀವ ಹೋದಷ್ಟು ಯಾತನೆಯಾಗುತ್ತಿತ್ತು ಸರಳೆಗೆ. ಮೊದಲೇ ನೊಂದಿದ್ದ ಅವಳಿಗೆ ಹಾಲು ಚೆಲ್ಲಿ ಹೋದದ್ದು ಅತಿ ಘಾಸಿಯಾಯಿತು, ನೋಡುತ್ತಾ ನಿಂತುಬಿಟ್ಟಳು. ಎಚ್ಚರವಾಗಲು ಒಂದು ನಿಮಿಷವೇ ಬೇಕಾಯಿತು.

ಸುಮಿತ್ರೆ ಕೂಗಿದ ಸ್ಥಳಕ್ಕೆ ಓಡಿದಳು. ಸುಮಿತ್ರೆ ಕಣ್ಣು ಕೆಂಪಗೆ ಮಾಡಿ ಮಕ್ಕಳನ್ನು ರಪರಪ ಹೊಡೆಯುತ್ತಿದ್ದಳು.

"ಏನಿದು ಪಶು ಕೃತ್ಯ ಸುಮಿತ್ರಾ !" ಎಂದು ಓಡಿ ತಾಯಿ ಮಕ್ಕಳಿಗೆ ನಡುವೆ ಬಂದಳು.

"ನೋಡು ನೋಡು. ನಿನ್ನ ತಂಗೀ ಮಕ್ಕಳ ದುರ್ಮಾರ್ಗತನ. ಹಾಳಾದ ಮಕ್ಕಳು"

ಎಂದು ರೋಷ ಬೇಸರಗಳೀದ ಚಿಕ್ಕ ಸರಳೆಗೆ ಇನ್ನೂ ಒಂದೇಟು ಹಾಕಿದಳು ಸುಮಿತ್ರ. ಸುಮಿತ್ರೆಯ ಬಾಯಲ್ಲಿ ಎಂದೂ ಇಂತಹ ಒರಟು ಮಾತು ಕೇಳಿರಲಿಲ್ಲ ಸರಳಾ. ನಡೆದ ಅನಾಹುತ ದೊಡ್ಡದೇ ಇರಬೇಕೆಂದು ಮಕ್ಕಳನ್ನು ಪಕ್ಕಕ್ಕೆ ಸರಿಸಿ ನೋಡಿದಳು.

ಕಂಡ ದೃಶ್ಯದಿಂದ ಅವಳಿಗೆ ಬವಳಿ ಬಂದಂತಾಯ್ತು.

ದಾರಿಯಲ್ಲಿ ವಾಹನದ ಅಪಘಾತಕ್ಕೊಳಗಾಗಿ ಕಾಲು ಕೈಗಳನ್ನು ಮುರಿದುಕೊಂಡು ಬಿದ್ದ ಮೇಧಾವಿಯಂತೆ ಒರಗಿತ್ತು ಸರಳೆಯ ಬಾಳಸಂಗಾತಿ ವೀಣಾ. ತಂತಿಗಳು ದೂರ ದೂರದಲ್ಲಿ ಬಿದ್ದಿದ್ದುವು. ವೀಣೆಯ ಬಳಿ ಕುಕ್ಕರಿಸಿಬಿಟ್ಟಳು. ಸರಳಾ. ಅದನ್ನು ತಬ್ಬಿ ಕಣ್ಣೀರು ಸುರಿಸಿದಳು.

ಸುಮಿತ್ರ ಅವಳ ಪಕ್ಕದಲ್ಲಿ ಕುಳಿತು ಬೆನ್ನು ಸವರುತ್ತ—"ಅಳಬೇಡ

ಸರಳಕ್ಕ. ನಿನಗೆ ಎಷ್ಟು ನೋವಾಗಿದೆ ಅಂತ ನನಗೆ ಗೊತ್ತು. ನಾನು ದುರ್ದೈವಿ. ನನ್ನ ಮಕ್ಕಳಿಂದ ನಿನಗೆ ಎಂತಹ ನೋವು"—ದೀನವಾಗಿ ಕೇಳಿದಳು.

ಬಿಕ್ಕಿ ಬಿಕ್ಕಿ ಅಳುತ್ತಿದ್ದಳು ಸರಳಾ. ವೀಣೆ ತಂತಿ ಕಿತ್ತುಹೋದ ನೋವಿಗಿಂತ, ಏಕೆ ಹೋಯಿತು ಎಂಬ ಬಾಧೆ ತಡೆಯಲಾರದೆ ಅಳುತ್ತಿದ್ದಳು. ಹೀಗೇಕಾಯಿತು !

'ನಾನು ತಂತಿ ಹಾಕಿಸಿಕೊಡ್ತೀನಿ. ವೀಣೆ ರಿಪೇರಿ ನಾನು ಮಾಡಿಸಿಕೊಡ್ತೀನಿ."

ಸರಳಾ ಬಿಕ್ಕುತ್ತಲೇ ಅಂದಳು. "ಇಲ್ಲ ಸುಮಿತ್ರಾ, ಅದು ಸಾಧ್ಯವಿಲ್ಲ. ಇದು ರಿಪೇರಿ ಮಾಡಲು ಸಾಧ್ಯವೇ ಇಲ್ಲ ಸುಮಿತ್ರಾ."

ಯಾಕಿಲ್ಲ, ನಾನು ಮಾಡಿಸಿಕೊಡ್ತೀನಿ"–ಆಶ್ವಾಸನೆಯೊಂದಿಗೆ ಹೇಳಿದಳು ಸಮಿತ್ರ.

"ನಿನ್ನಿಂದಲೂ ಸಾಧ್ಯವಿಲ್ಲ. ಯಾರಿಂದಲೂ ಸಾಧ್ಯವಿಲ್ಲ. ಮುರಿದಿರೋದು ವೀಣೆ ಅಲ್ಲ ಸಮಿತ್ರ.

"ಸಾಧ್ಯ ಏಕಿಲ್ಲ, ಖಂಡಿತ ಸಾಧ್ಯವಿದೆ. ನಾನು ಪ್ರಯತ್ನಿಸ್ತೀನಿ"

ಕಹಿ ನಗೆ ನಕ್ಕಳು ಸರಳಾ. ಜೋರಾಗಿ ಅಳುತ್ತಿದ್ದ ಮಕ್ಕಳ ರೋಧನ ಸಹಿಸಲಾರದೆ ಅವುಗಳ ಬಳಿ ಬಂದಳು. ತಾಯಿಯ ಹೊಡೆತದ ನೋವಿಗಿಂತ, ದೊಡ್ಡಮ್ಮನಿಗೆ ನೋವಾಗುವ ಯಾವುದೋ ದೊಡ್ಡ ತಪ್ಪು ತಾವು ಮಾಡಿದ್ದೇವೆ ಎಂಬುದರ ಅರಿವಿನಿಂದ, ಅಳುತ್ತಿದ್ದವು ಮಕ್ಕಳು. ಸರಳೆಯೂ ಹೊಡೆಯುವಳೇನೋ ಎಂದು ಹೆದರಿ ಮುದುರಿಕೊಂಡವು ಸರಳೆ ಸಮೀಪಿಸಿದಾಗ. ಆದರೆ ಸರಳೆ ಮಕ್ಕಳ ಬೆನ್ನಮೇಲೆ ಕೈಯ್ಯಾಡಿಸಿ ಕೇಳಿದಳು.

"ಯಾಕೆ ಮರಿ, ವೀಣೆ ತಂತಿ ಕಿತ್ತುಬಿಟ್ರಿ?"

ಚಿಕ್ಕ ಸರಳ ಧೈರ್ಯ ತಂದುಕೊಂಡು "ನಾನು ಕೀಳಲಿಲ್ಲ ದೊಡ್ಡಮ್ಮ. ವೀಣೆ ಸದ್ದು ಚೆನ್ನಾಗಿದೇಂತ ಟಂಗ್ ಟಂಗ್ ಅನಿಸಿದೆ. ಮಾಧೂ ಬಂದು ಕಿತ್ಬಿಟ್ಟ. ತಪ್ಪಾಯ್ತು ದೊಡ್ಡಮ್ಮ, ನೀ ಅಳ್ತಿ ಅಂತ ಗೊತ್ತಿರಲಿಲ್ಲ. ಬೇಕಾದ್ರೆ ನನ್ನ ಹೊಡಿ ದೊಡ್ಡಮ್ಮ. ನೀನು ಅಳಬೇಡ, ದೊಡ್ಡಮ್ಮ. ಅಣ್ಣಂಗೆ ಹೇಳಿ ಹೊಸಾ ವೀಣೆ ತರ್ಸಿಕೊಡ್ತೀನಿ" ಎಂದು ಗಟ್ಟಿಯಾಗಿ ಅತ್ತಳು.

ಮಗುವಿನ ಮಾತಿನಿಂದ ಮತ್ತಷ್ಟು ದುಃಖ ಒತ್ತರಿಸಿ ಬಂತು ಸರಳೆಗೆ. ಆದರೂ ಸಂಬಾಳಿಸಿಕೊಂಡು ಹೇಳಿದಳು—

"ನಾನೂ ಅಳೋಲ್ಲ. ನೀವೂ ಅಳಬಾರ್ದು, ಆ್ಞ ? ಈಗ ತಪ್ಪು ಒಪ್ಪಿಕೊಂಡ್ರಲ್ಲಾ ಸರಿಹೋಯ್ತು. ಬನ್ನಿ ಇಲ್ಲಿ" ಎಂದು ಎರಡು ಕೈಗಳಲ್ಲಿ. ಎರಡು ಮಕ್ಕಳನ್ನು ಎತ್ತಿಗೊಂಡು ಬಂದು ದೇವರ ಮುಂದೆ ನಿಲ್ಲಿಸಿದಳು. "ಈಗ ಹೇಳಿ, ಶ್ರೀರಾಮಚಂದ್ರ ತಪ್ಪಾಯ್ತಪ್ಪ. ಇನ್ನು ಮೇಲೆ ಯಾವಾಗ್ಲೂ ಇಂತ ಕೆಲ್ಸ ಮಾಡೋಲ್ಲ, ಯಾರಿಗೂ ನೋವು ಕೊಡೋಲ್ಲ ಅಂತ."

ಮಕ್ಕಳು ಅದನ್ನೇ ಉಚ್ಚರಿಸಿದವು ಬಗ್ಗಿ. ಮಕ್ಕಳ ಕೆನ್ನೆಯ ಮೇಲೆ ಹಸಿದಿದ್ದ ನೀರನ್ನು ಒರೆಸಿ ಮುತ್ತು ಕೊಟ್ಟಳು. ಅವಳ ಮನ ಬೇಡಿತು— ಅರಿಯದೆ ಮಾಡಿದ ಮಕ್ಕಳ ತಪ್ಪಿಗೆ ಕ್ಷಮೆಯಿರಲಿ ಭಗವಂತ. ಅರಿತು ಮಾಡಿಯೂ, ಪಶ್ಚಾತ್ತಾಪ ಪಡೆದ ನಿರ್ಘೃಣರಿಗಿಂತ ಈ ಮಕ್ಕಳೇ ಮೇಲು,"

"ಈಗ ತಿಂಡಿ ತಿನ್ನೋಣ ಬನ್ನಿ" ಎಂದಳು. ಸ್ವರ ಶಾಂತವಾಗಿತ್ತು. ಮೃದುವಾಗಿತ್ತು. ಸೌಮ್ಯವಾಗಿತು.

"ದೊಡ್ಡಮ್ಮ ನೀನೂ ಕಣ್ಣೀರು ಒರಸ್ಕೋ" ಎಂದು ತನ್ನ ಲಂಗದಿಂದ ಒರೆಸ ಬಂದಳು ಹುಡುಗಿ.

ಎಲ್ಲವನ್ನೂ ನೋಡುತ್ತಿದ್ದ ಸುಮಿತ್ರೆಗೆ ವಿಲಕ್ಷಣವೆನ್ನಿಸಿತು. ಅಂತಹ ಯಾತನೆಯಲ್ಲೂ ಇಂತಹ ಶಾಂತತೆ ಉಳಿಸಿಕೊಳ್ಳಲು ಹೇಗೆ ಸಾಧ್ಯ? ಅವಳ ಜೀವನಕ್ಕೆಜೀವವಾದ ವೀಣೆ ತುಂಡರಿಸಿ ಬಿದ್ದಿದ್ದರೂ ಎಷ್ಟುಸಾಧುವಾಗಿದ್ದಾಳೆ ಪರರ ಮಕ್ಕಳೆಂದು ಸುಮ್ಮನಿರಬಹುದೆ ?

"ಇಷ್ಟು ಘೋರ ನಡೆದಿದ್ರೂ, ಇಷ್ಟು ಶಾಂತವಾಗಿ, ಸೌಮ್ಯವಾಗಿ, ಇದ್ದೀಯಲ್ಲ ಸರಳಕ್ಕಾ"

"ಮತ್ತೇನು ಮಾಡಲು ಸಾಧ್ಯ ಹೇಳು? ಹೆಚ್ಚೆಂದರೆ ಮಕ್ಕಳನ್ನ ದಂಡಿಸ್ಬೇಕು ಅಷ್ಟೇ ತಾನೆ !"

ಅಸಹಾಯಕಳಾಗಿ ನುಡಿದಳು. ಕಣ್ಣಿನಲ್ಲಿ ನೀರು ತುಂಬಿ ಬಂತು. ಹಾಗೇ ಮುಂದುವರಿಸಿದಳು.

"ಮಕ್ಕಳು ತಿಳಿಯದೆ ಮಾಡಿವೆ ಸುಮಿತ್ರ. ನನ್ನ ಬಾಳಿನಲ್ಲಿ ಈ ವೀಣೆಗೆ ಎಷ್ಟು ಪ್ರಾಮುಖ್ಯತೆ ಇದೆ ಅಂತ ಅದಕ್ಕೇನು ಗೊತ್ತು? ಗೊತ್ತಿದ್ದರೆ ತಮ್ಮ

ಪ್ರೀತಿಯ ದೊಡ್ಡಮ್ಮನ್ನ ಅವರು ನೋಯಿಸ್ತಾ ಇರಲಿಲ್ಲ. ಒಂದ್ವೇಳೆ ಆವೇಶದಲ್ಲಿ ಮಕ್ಕಳ್ನ ದಂಡಿಸಿದ್ರೆ ಅಂತ್ಲೇ ಇಟ್ಕೊ. ಅದರಿಂದ ಪ್ರಯೋಜನ ಏನಿದೆ ?".

"ನಮ್ಮ ಮನಸ್ಸಿಗೆ ತೃಪ್ತಿ"

"ಹುಂ ತೃಪ್ತಿ ! ನಿನ್ನ ಮಕ್ಕಳು ವೀಣೆ ತಂತಿ ಮಾತ್ರ ಕಿತ್ತುಹಾಕಿದ್ದಾರೆ. ಅದೂ ಅಜ್ಞಾನದಿಂದ. ಆದರೆ ಸುಮಿತ್ರ, ಒಂದು ದೊಡ್ಡ ಮಗು, ತಿಳಿದೂ ತಿಳಿದೂ ನನ್ನ ಹೃದಯ ವೀಣೆಯ ತಂತೀನ್ನ ಮೀಟಿ. ಅದರ ನಾದಕ್ಕೆ ನಾದಕೊಟ್ಟು. ಅದರ ಮಧುರತೆ ಸವಿದು, ಬೇಸರ ಬಂದಾಗ ಆ ತಂತೀನ್ನೇ ಮುರಿದು ಓಡಿಹೋಗಿ ಅವಿತುಕೊಂಡ. ಅವನನ್ನು ನಾನು ಏನುತಾನೆ ಮಾಡಿದೆ ? ಈ ವೀಣೇನ್ನ ರಿಪೇರಿಯಾದ್ರೂ ಮಾಡಿಸ್ಬಹುದ್ದು. ಆದರೆ ಮುರಿದಿರೋ ನನ್ನ ಹೃದಯವೀಣೇನ್ನ ಯಾರು ಸರಿಮಾಡ್ತಾರೆ ಹೇಳು ಸುಮಿತ್ರಾ, ಹೇಳು" ಎಂದವಳೇ ಮುಖ ಮುಚ್ಚಿ ಅತ್ತಳು. ಬಾಳ ಆ ಕಹಿಘಟನೆ ಈಗಲೇ ನಡೆಯಿತೇನೋ ಎನ್ನುವಷ್ಟು ಬಾಧೆ ಪಡತೊಡಗಿದಳು.

"ಅಕ್ಕ, ನಾನು ಚಿಕ್ಕವಳು. ನಿನ್ನ ಹೃದಯದ ಬೇಗುದಿ ನನಗೆ ತಿಳೀದು. ನಿನ್ನ ಹೃದಯ ಮುರಿದು ಅವನು ಅಯೋಗ್ಯನಿರಬಹುದು. ಆದರೆ ಆ ವೀಣೆ ತಂತೀನ್ನ ಪುನಃ ಮೀಟೋವರು ಬರಲಾರರೆ ?"

"ಬರಬಹುದು. ತಂತೀನ್ನ ಮೀಟಲೂಬಹುದು. ಅದರೆ ಅದ್ರಲ್ಲಿ ಬರೋದು ಮೊದಲ ನಾದವಲ್ಲ. ಮೃದುಮಧುರವೀಣಾಗಾನವಲ್ಲ. ನೋವಿನ ಸ್ವರ. ಮೀಟುವವರ ಕೈಯೂ ಆ ನಾದಕ್ಕೆ ಹೆದರಬಹುದು ಸುಮಿತ್ರಾ."

"ಇಲ್ಲ ಸರಳಕ್ಕ. ಮೊದಲಿನ ನಾದಕ್ಕಿಂತ ಪರಿಪಕ್ವವಾದ ನಾದ ಹೊರ ಬೀಳಬಹುದು. ನೀನು ಪ್ರಯತ್ನವೇ ಮಾಡಿಲ್ಲವೆ ?"

"ನಾನು ಆಗಲೇ ಹೇಳಿದ ಹಾಗೆ ಸ್ತ್ರೀಯ ಹೃದಯ ಒಂದೇ ಒಂದು ಬಿಂಬವನ್ನು ಪ್ರತಿಬಿಂಬಿಸುವ ಕನ್ನಡಿ ಸುಮಿತ್ರ. ಹುಂ. ಈಗ ಆ ಮಾತು ಬೇಡ. ನಡೆದ ಯಾವುದೋ. ಪಡೆದ ಯಾವುದೋ ಗಾಯವನ್ನು ಕೆರೆದೇಕೆ ದೊಡ್ಡದು ಮಾಡಿಕೊಳ್ಳಬೇಕು ?"

"ನೀನು ಹೇಳಲೇಬೇಕು. ನಿನಗಾದ ಗಾಯ ನನಗೆ ತಿಳಿಯಲೇಬೇಕು. ಅದಕ್ಕೆ ಔಷಧ ನಾನು ತರ್ತೀನಿ. ಒಂದು ವೇಳೆ ನಾನು ನಿನಗಷ್ಟು ಆತ್ಮೀಯಳು

ಅನ್ನಿಸ್ದೆ ಇದ್ರೆ ಇಂದಿರ ಹತ್ರನಾದ್ರೂ ಹೇಳು ಸರಳಕ್ಕ. ನಿನ್ನ ಹೃದಯ ಹಗುರ ಆಗಲೇಬೇಕು".

"ಎಂಥ ಮಾತನಾಡ್ತಿ ಸುಮಿತ್ರ. ನಿನಗಿಂತ ಆತ್ಮೀಯರು ನನಗಾರೂ ಇಲ್ಲ. ಇಂದೂಗೆ ಹೇಳೋ ಹಾಗಿದ್ರೆ ಎಂದೋ ಹೇಳಿರ್‍ತಾ ಇದ್ದೆ. ಅವಳ, ನನ್ನ ಸ್ವಭಾವ ಉತ್ತರ ದಕ್ಷಿಣ ಧ್ರುವಗಳು. ನನ್ನದೆಲ್ಲಾ ಸೆಂಟಿಮೆಂಟಲ್ ನಾನ್ಸೆನ್ಸ್ ಅಂತಾಳೆ ಅವಳು"

"ಹಾಗಾದ್ರೆ ನನ್ನ ಹತ್ರ ಹೇಳು. ನೀ ಹೇಳದಿದ್ರೆ ನಾನು ಮನೇಗೇ ಹೋಗಲ್ಲ."

"ಈವತ್ತು ಬೇಡಮ್ಮ. ನೀ ಮನೇಗೆ ಹೋಗೋದು ತಡವಾಗಿಬಿಡತ್ತೆ, ನಿನ್ಮಾತ ತಪ್ಪು ತಿಳೀಬಾರ್‍ದು. ಮುಂದಿನ ಸಲ ಬಂದಾಗ ನೋಡೋಣ. ನನ್ನ ಹುಚ್ಚು ಹೃದಯದ ಕಥೆ".

"ಖಂಡಿತ ಹೇಳ್ಬೇಕು. ಅಥವಾ ಅಷ್ಟೊತ್ತಿಗೆ ಮನಸ್ಸು ಬದಲಾಯಿಸಿ ಬಿಡ್ತೀಯೋ" ಸುಮ್ಮನೆ ನಕ್ಕಳು ಸರಳಾ.

ಹೊಟ್ಟೆಯ ತುಂಬಾ ಅನೇಕ ಜಲಚರಗಳು, ಬೆಲೆ ಬಾಳುವ ವಸ್ತುಗಳು: ಪಾಚಿ ಮೊದಲಾದ ಕಚಡ ತುಂಬಿದ್ದರೂ, ಆನಂದದಿಂದ ಅಲೆಗಳನ್ನು ಕಳುಹಿಸುವ ಸಾಗರದಂತೆ ಕಂಡಳು ಸರಳೆ ಸುಮಿತ್ರೆಯ ಕಣ್ಣಿಗೆ.

ಎಲ್ಲರಿಗೂ ತಿಂಡಿಕೊಟ್ಟು ತಾನು ಮಾತ್ರ ಕೋಣೆಗೆ ನಡೆದಳು ಸರಳಾ ಮಂಚದ ಮೇಲೆ ಮಲಗಿ ಅಳಲಾರಂಭಿಸಿದಳು. ಸುಮಿತ್ರೆಯ ದೃಷ್ಟಿ ತಿಂಡಿಯ ಕಡೆಗೆ ಹೋಗದೆ ಸರಳೆಯನ್ನು ಹಿಂಬಾಲಿಸಿತು. ಹಿಂದೆಯೇ ಎದ್ದು, ಹೋದಳು. ಸರಳೆಯ ಪಕ್ಕದಲ್ಲಿ ಕುಳಿತಳು. ದೊಡ್ಡ ಹುಡುಗಿ ಅಳುತ್ತಿದ್ದರೆ ಚಿಕ್ಕ ಹುಡುಗಿ ಮೌನವಾಗಿ ಕಣ್ಣೀರು ತುಂಬಿಕೊಂಡಳು.

ತೃಪ್ತಿಯಾಗುವಷ್ಟು ಅತ್ತಿದ್ದ ಸರಳಾ, ಹೃದಯ ಹಗುರ ಮಾಡಿಕೊಂಡು ಎದ್ದು ಕುಳಿತು. ಕಣ್ಣೀರಿನ ಪರದೆಯಲ್ಲೇ ನಕ್ಕು ಕೇಳಿದಳು----

"ಹದಿನಾಲಕ್ಕಾ ಸುಮಿತ್ರ ?"

"ಏನು ಹದಿನಾಲಕ್ಕು"—ಸುಮಿತ್ರೆಗೆ ಮರೆತುಹೋಗಿತ್ತು.

"ಅಳುಮೂಂಜಿ ಗುಣ ಸರಳಾದು".

ಈ ಮಾತಿಗೆ ಸಮಿತ್ರಾ ನಗಲಿಲ್ಲ. ಅವಳ ಕಣ್ಣಿನ ನೀರಿನ ಹನಿ ಕೆನ್ನೆಯ ಮೇಲೆ ಉರುಳಿತು.

ಸರಳೆಯೇ ಮಾತನಾಡಿದಳು—"ಹುಚ್ಚಮ್ಮ ಅಳ್ತಿದೀಯಾ?"

"ಇಲ್ಲ. ನಿನ್ನ ಹಾಗೆ ಹೊಟ್ಟೆ ತುಂಬ ದುಃಖ ಇಟ್ಕೊಂಡು ಹುಚ್ಚು ನಗೆ ನಗ್ತಿದೀನಿ."

"ಓ ಕೋಪ ಬಂದಿದ್ಯೇನು ? ಇನ್ನೇನು ಮುಂದಿನವಾರ ಒಂದು ಒಳ್ಳೇ ಸಿನಿಮ ತೋರಿಸ್ತೀನಿ. ಇನ್ನೂ ಯಾಕಪ್ಪಾ ಕೋಪ ?"

ಇಬ್ಬರೂ ಎದ್ದರು. ಅಲ್ಲಿಂದ ಏನೂ ನಡೆಯದ ದಿನದಂತೆ ಕಳೆಯಿತು ಸರಳೆಯ ಪಾಲಿಗೆ, ಆದರೆ ಸರಳೆಯ ನೊಂದ ಮುಖ ಸುಮಿತ್ರೆಗೆ ವರ್ಗ ವಾಗಿತ್ತು. ಸುಮಿತ್ರ ಮನೆಗೆ ಹೊರಟಾಗ, ಎಂದಿನ ಹಗುರ ಮನಸ್ಸಿರಲಿಲ್ಲ. ದುಃಖದ ಭಾರ ಹೊತ್ತು ಹಿಂತಿರುಗಿದ್ದಳು.

## ೧೦

ಈಗೊಂದು ವಾರದಿಂದ ಸುಮಿತ್ರೆ, ಶ್ಯಾಮಸುಂದರನಿಗೆ ಒಂದು ಸಮಸ್ಯೆ ಯಾಗಿದ್ದಳು. ನಗು ನಗುತ್ತಾ ಕೀಟಲೆಗೆ ಕೀಟಲೆ ಮಾಡುತ್ತಾ ಇರುತ್ತಿದ್ದ ಸುಮಿತ್ರ ಗಂಭೀರವಾಗಿ ಬಿಟ್ಟಿದ್ದಳು. ಹಾಗೆಂದು ತನ್ನ ಯಾವ ಕೆಲಸ ದಿಂದಲೂ ವಿಮುಖಳಾಗಿರಲಿಲ್ಲ. ತನಗೆ ಮಾಡುತ್ತಿದ್ದ ಯಾವ ಶೋಡಷೋಪ ಚಾರಗಳಿಗೂ ಕಡಿಮೆ ಮಾಡಿರಲಿಲ್ಲ. ತಾನು ಸರಳೆಯ ಮನೆಗೆ ಕಳೆದ ವಾರ ಹೋಗಲಿಲ್ಲವೆಂದು ಕೋಪವಿರಬಹುದೇನೋ? ಎಂದು ಕೇಳಿಯೂ ಬಿಟ್ಟಿದ್ದ;

"ನಾನು ಬರಲಿಲ್ಲಾಂತ ಸರಳಾ ಏನಾದ್ರೂ ಹೇಳಿದಳಾ?"

"ಛೆ ಛೆ ! ಇಲ್ಲಪ್ಪ, ಇನ್ನೊಂದ್ಸಲಾನಾದ್ರೂ ಬರಹೇಳು ಅಂದ್ಲು. ನಿಮ್ಮ ಪರವಾಗಿ ಕ್ಷಮೆ ಕೇಳಿದ್ದೀನಲ್ಲ."

ಈ ಉತ್ತರ ಸ್ವಲ್ಪಮಟ್ಟಿಗೆ ಶ್ಯಾಮುವಿಗೆ ಸಮಾಧಾನ ಕೊಟ್ಟಿತಾದರೂ ಅವಳ ಗಂಭೀರತೆಗೆ ಅದೇ ಕಾರಣ ಎಂದಿತು ಅವನ ಕಲ್ಪನೆ.

ಈ ದಿನ ತಾನು ಅವಳ ಜೊತೆ ಹೋದರೆ ಸುಮಿತ್ರೆಗೆ ಸಂತೋಷವಾಗ ಬಹುದು. ಏನಾದರಾಗಲಿ, ತಾನಿಂದು ಸರಳೆಯನ್ನು ಭೇಟಿ ಮಾಡುವುದು. ಬಂದದ್ದು ಬರಲಿ. ಎದುರಿಸಿಬಿಡುವುದು ಎಂದು ನಿಶ್ಚಯ ಮಾಡಿಕೊಂಡ ಶ್ಯಾಮು.

ಆದರೆ ಸಮಿತ್ರ ಈ ದಿನ ಒಂದು ಬಾರಿಯಾದರೂ "ಹೋಗೋಣ ಏಳಿ" ಅನ್ನಲಿಲ್ಲ. ತನ್ನ ಪಾಡಿಗೆ ತಾನು ಸಿದ್ಧಳಾಗುತ್ತಿದ್ದಳು.

ಅವಳನ್ನು ಪ್ರಸನ್ನ ಮಾಡಲೋಸುಗ ಎಂಬಂತೆ ಬೇಗ ಎದ್ದು ಹೋಗಿ ಮುಖ ತೊಳೆದು ಬಂದ.

ಸುಮಿತ್ರೆಗೆ ಸೋಜಿಗವಾಯಿತು. ಕನ್ನಡಿಯ ಮುಂದೆ ಕುಳಿತು ತಲೆ ಬಾಚಿಕೊಳ್ಳುತ್ತಿದ್ದ ಶ್ಯಾಮುವಿನ ಕೈಯನ್ನು ಹಿಡಿದು, ಅವನ ಭುಜದ ಕಡೆ ಯಿಂದ, ಅವನ ಮೇಲೆ ವಾಲಿ, ಮೆಲ್ಲಗೆ ಅಂದಳು–"ನೀವೀವತ್ತು ಸರಳಾ ಮನೇಗೆ ಬರೋದು ಬೇಡ."

ಅದು ಅವಳ ಹಟವೆಂದು ಬಗೆದ ಶ್ಯಾಮಸುಂದರ.

ಹಿಂದಿನ ದಿನ 'ನೀವು ಬರ್‍ತೀನಿ ಅಂದ್ರೂ ಕರೆದೊಯ್ಯೋಲ್ಲ' ಅಂದಿದ್ದಳು. ಅದನ್ನೇ ಸಾಧಿಸುತ್ತಿದ್ದಾಳೆಂದು ತಿಳಿದ. ಅದಕ್ಕೆ ಹಾಸ್ಯವಾಗಿ–

"ನಾನು ಬಂದೇ ಬರ್‍ತೀನಿ. ನೀ ಕರೆದೊಯ್ಯದಿದ್ರೆ ನಾನೇ ಹೋಗ್ತೀನಿ" ಎಂದು ಮಕ್ಕಳಂತೆ ಚಂಡಿ ಹಿಡಿದ.

"ಬೇಡಿ ಶ್ಯಾಮು ಪ್ಲೀಸ್. ಈವತ್ತು ಬೇಡ" ಅವಳ ಧ್ವನಿಯಲ್ಲಿದ್ದ ಭಾವನೆ ಊಹಾತೀತವಾಗಿತ್ತು.

"ಯಾಕೆ ಸುಮಿ?"

"ಸುಮ್ನೆ" ಎಂದು ಅವನ ಸೂಕ್ಷ್ಮದೃಷ್ಟಿಗೆ ತನ್ನ ದೃಷ್ಟಿ ಕೊಡದೆ ಕಣ್ಣು ತಗ್ಗಿಸಿದಳು.

ಅವಳ ವರ್ತನೆ ಅವನಿಗೆ ಅರ್ಥವಾಗಲಿಲ್ಲ. ತನ್ನ ಕೈಯಿಂದ ಅವಳನ್ನು ಬಳಸಿ ಹತ್ತಿರಕ್ಕೆ ತೆಗೆದುಕೊಂಡು ಮತ್ತೆ ಕೇಳಿದ–"ಯಾಕೆ ಸುಮಿ. ಏನೋ ಕಾರಣ ಇರ್‍ಲೇಬೇಕು ಅಲ್ವಾ ?"

"ಇವತ್ತು ನಾನೂ ಸರಳಾ ಪಿಕ್ಚರಿಗೆ ಹೋಗೋಣಾಂತ...." ಸುಳ್ಳು ಹೇಳಿದಳು.

"ನಿನ್ನ ಗೆಳತಿ ಸಿನೀಮಾ ನೋಡೋಲ್ಲಾಂದಿದ್ದ"

"ಹೌದು. ಆದ್ರೂ ಈವತ್ತು ಹೋಗೋಣ ಅಂದಿದ್ದಾಳೆ." ಸುಳ್ಳನ್ನೇ ನಿಜ ಎನ್ನುವಂತೆ ಹೇಳುತ್ತಿದ್ದಳು ಸುಮಿತ್ರ.

"ನನ್ನನ್ನೂ ಕರ್ಕೊಂಡು ಹೋಗಲಿ. ಅವಳ ಪ್ರೀತಿಯ ತಂಗಿಯ ಗಂಡ ನಾನಲ್ವೇನು ?" ಆವನು ಹಾಸ್ಯಕ್ಕೆ ಕೇಳಿದ್ರೂ ಆ ಪ್ರಶ್ನೆಗೆ ಸಮಾಧಾನ ಏನು ತಾನೇ ಹೇಳಿಯಾಳು.

"ಬಹಳ ಚೆನ್ನಾಗಿದೆ ನೀವು ಹೇಳೋದು. ಇನ್ನೂ ವ್ಯಕ್ತಿಯ ಪರಿಚಯ ಮಾಡ್ಕೊಳ್ಳೋಕ್ಕೆ ಇಲ್ಲ. ಸಿನಿಮಾಕ್ಕೆ ಕರ್ಕೊಂಡು ಹೋಗು ಅಂತ ಕೇಳ್ತೀರೇನು, ಷೇಮ್ ಆನ್ ಯು"

"ತಮಾಷೆಗೆ ಹೇಳ್ದೆ–ಹೋಗ್ಲಿ. ನೋಡಿಲ್ಲಿ. ಇಷ್ಟು ದಿನ ನೀ ಹೋಗಿ ಆಕೆ ಮನೇಲಿ ತಿಂದು ಬರ್ತಾ ಇರೋದು ಅಲ್ದೆ ನಂಗೇಂತ ಕಟ್ಕೊಂಡು ಬರ್ತಾ ಇದ್ದಿ. ಆದ್ರಿಂದ ಈವತ್ತು ಸಿನಿಮಾದ ಖರ್ಚು ನೀನೇ ಇಟ್ಕೋ ಸುಮಿತ್ರಾ. ಆಕೇನ್ನ ಬಿಡಬೇಡ."

"ಶ್ಯಾಮೂ" ಎಂದು ಅವನಿಗೆ ಒರಗಿದಳು.

ಒರಟು ಕೆನ್ನೆಗೆ ಮೃದು ಕೆನ್ನೆ ಉಜ್ಜಿತು. ಕೃತಜ್ಞತೆಯ ಕುರುಹೆಂದು ತಿಳಿದ ಶ್ಯಾಮು, ಆದರೆ ಸುಳ್ಳನ್ನೇ ನಂಬುತ್ತಿರುವೆಯಲ್ಲಾ ಎಂಬ ಯಾತನೆಯ ಕುರುಹಾಗಿತ್ತದು.

"ಅಬ್ಬ ಎಷ್ಟು ಚುಚ್ಚುತ್ತೆ. ದಿನಾ ಷೇವ್ ತೊಗೊಳ್ಳೋಕ್ಕೇನು ನಿಮಗೆ ?"

"ನನಗೆ ದಿನಾ ಮಾಡ್ಕೊಳ್ಳೋಕ್ಕೆ ಬೇಜಾರು. ಅದಿರಲಿ ಮಕ್ಕಳನ್ನ ಕರ್ಕೊಂಡು ಹೋಗ್ತಿ ತಾನೇ ?"

"ಊ ಹುಂ"

"ಹಾಗಾದ್ರೆ ಅವ್ರು ?"

"ಅವರಪ್ಪನ ಕೇರ್ ಆಫ್"

"ಒಳ್ಳೆ ಚೆನಾಯ್ತು. ಕರ್ಕೊಂಡು ಹೋಗು ಸುಮಿತ್ರ. ನಿನ್ನ ಕಂಸುಳಿ.

ಗೊಂದು, ಸರಳಾಗೊಂದು. ನೀವಾದ್ರೆ ಚೆನ್ನಾಗಿ ನೋಡ್ಕೋತೀರಿ."

"ನೀವೂ ಚೆನ್ನಾಗೇ ನೊಡ್ಕೋತೀರಿ, ಪರವಾಗಿಲ್ಲ ಈವತ್ತೊಂದಿನ ನಂಗೋಸ್ಕ್ರ ಅಷ್ಟು ಮಾಡೋಕ್ಕಾಗೋಲ್ವ ಶ್ಯಾಮು ?"

"ಆಲ್‌ರೈಟ್, ಆದ್ರೆ ಒಂದು ಕರಾರಪ್ಪ. ಅವ್ರೇನಾದ್ರೂ ಗಲಾಟೆ ಮಾಡಿದ್ರೆ ಥಿಯೇಟರ ಹತ್ರ ತಂದುಬಿಡ್ತೀನಿ. ಯಾವ ಥಿಯೇಟರು ಹೇಳಿ ಹೋಗ್ಬಿಡು."

ಹೇಗೆ ಹೇಳಿಯಾಳು ಆ ಥೀಯೆಟರು ಸರಳೆಯ ಮನೆಯೇ ಎಂದು.

"ಯಾವುದೂಂತ ಇನ್ನೂ ಗೊತ್ತಿಲ್ಲ. ಒಂದ್ವೇಳೆ ಗಲಾಟೆ ಮಾಡಿದ್ರೆ ನಿಮ್ಮಕ್ಕನ ಮನೆಗೆ ಕರ್ಕೊಂಡು ಹೋಗಿ" ಸೂಚನೆ ಕೊಟ್ಟಳು.

"ಸರಿ, ನೀನೇನು ಮ್ಯಾಟಿನಿ ಮುಗಿಸ್ಕೊಂಡು ಬರೋವ್ಳೋ ಅಥವಾ ಫಸ್ಟ್ ಷೋನೂ ಹಾಗೇನೇ...." ಅನುಮಾನಿಸಿದಂತೆ ಕಣ್ಣು ಮಿಟುಕಿಸಿ ಕೇಳಿದ.

"ಎಂತ ತಮಾಷೆ ಇದು. ಒಂದೇ ದಿನದಲ್ಲಿ ಎರಡು ಚಿತ್ರ ಯಾರಾದ್ರೂ ನೋಡ್ತಾರಾ ?"

"ನೀನೇ ನೋಡ್ಬಹುದ್ದು. ನಿನ್ನ ಗಂಡ ಕರ್ಕೊಂಡು ಹೋಗ್ತಾನೋ ಇಲ್ವೋ ಪಾಪ."

"ಇನ್ನು ಹೆಚ್ಚು ಮಾತಾಡಿದ್ರೆ ಕೆನ್ನೆಗೊಂದು" ಎನ್ನುತ್ತಾ ಮೆಲ್ಲಗೆ ಹೊಡೆದಳು.

ಅವಳು ಹಾಸ್ಯವಾಗಿ ಮಾತನಾಡಿದುದೇ ಅವನಿಗೆ ಆನಂದವಾಯಿತು, ಅವಳ ಮುಖಚಂದ್ರನು ಬಾಡಿ ಕೆಲವು ದಿನಗಳಾಗಿತ್ತು. ಮತ್ತೆ ಅರಳುವಂತೆ ಮಾಡಲು, ಏನು ಮಾಡಲೂ ಅವನಿಗೆ ತೋಚಿರಲಿಲ್ಲ. ಈಗ ತಾನಾಗಿ ತಿಳಿಯಾದ ಅವಳ ಮುಖ ನೋಡಲು ಅವನಿಗೆ ಪರಮ ಸಂತೋಷವಾಯಿತು. ಅವಳನ್ನೇ ನೋಡುತ್ತಾ ನಿಂತುಬಿಟ್ಟ.

"ಹಾಗೇಕೆ ಕೆಕ್ಕರಿಸಿ ನೋಡ್ತೀರಿ ನನ್ನ. ಎಂದೂ ನೋಡಿಲ್ವಾ ನನ್ನ ?"

"ನಿನ್ನನ್ನೇನೋ ನೋಡಿದ್ದೆ. ಆದರೆ ಈಗೊಂದು ವಾರದಿಂದ ಎಲ್ಲೋ ಹೋಗ್ಬಿಟ್ಟಿದ್ಯಲ್ಲಾ ! ಬೇರೆ ಯಾರೋ ಹುಡುಗಿ ಇದ್ಲು ಇಲ್ಲಿ. ಎಲ್ಲಿ ಹೋಗಿದ್ದೆ ಸುಮಿತ್ರಾ ?"

"ನಿಮ್ಮ ತಲೆ ಒಳಕ್ಕೆ ಹೋಗಿದ್ದೆ."

"ಮತ್ತೆ ಹೊರಟ್ಹೋಗೋದಿಲ್ಲ ತಾನೇ." ಧ್ವನಿಯಲ್ಲಿ ಕಕ್ಕುಲತೆಯಿತ್ತು. ನಿನ್ನ ಮುಖ ಗಂಭೀರ ಮಾಡಬೇಡ ಸುಮಿತ್ರಾ ಎನ್ನುವ ಯಾಚನೆಯಿತ್ತು.

"ಗೊತ್ತಿಲ್ಲ."

"ಗೊತ್ತಿಲ್ಲವೆ ? ಗೊತ್ತಿಲ್ಲವೆ ? ಹೊರಟ್ಹೋಗೋಲ್ಲ ಅನ್ನು ಸುಮಿತ್ರ. ಇಲ್ದೆ ಇದ್ರೆ ನೀನಿವತ್ತು ಸರಳಾ ಮನೆಗೆ ಹೋಗೋ ಹಾಗಿಲ್ಲ."

"ಇಲ್ಲ, ನಾನು ನಿಮ್ಮನ್ನ ಬಿಟ್ಟು ಎಲ್ಲೂ ಹೋಗೋಲ್ಲ. ನಿಮ್ಮ ಹೃದಯದಲ್ಲಿ ಈ ಸುಮಿತ್ರಾಗೆ ಜಾಗ ಇರೋವರ್ಗ್ಗೆ ಅವಳೆಲ್ಲಿ ಹೋದಾಳು. ಸುಮಿತ್ರೆಯ ಹೃದಯದಲ್ಲಿ ನೀವು. ಅವಳ ಪ್ರಪಂಚ ನೀವು. ಆದರೂ...." ಅನುಮಾನಿಸಿದಳು,

"ಆದರೂ ಏನು ?"

"ಈಗ ಸರಳಾ ನನ್ನ ಬಾಳಿನಲ್ಲಿ ಬಂದಿದ್ದಾಳೆ. ಅವಳನ್ನ ಕಂಡ್ರೆ ನಂಗ್ಯಾಕೋ ತುಂಬಾ ಇಷ್ಟ. ಆ ಇಷ್ಟ ಅರ್ಥವಿಲ್ಲದ ಇಷ್ಟ. ಒಂದೊಂದ್ಸಲ ನಂಗನ್ನಿಸತ್ತೆ ಅವಳನ್ನ ನಮ್ಮನೇಗೆ ಕರೆದು ಯಾಕೆ ಇಟ್ಕೋಬಾರ್ದೂಂತ. ಹೇಗೂ ಒಬ್ಳೇ ಇದಾಳೆ. ಅದು ಹುಚ್ಚು ಯೋಚನೆ ಅಂತ ನಂಗೊತ್ತು. ಸರಳ ಅದಕ್ಕೆ ಒಪ್ಪೋಲ್ಲಾಂತಾನೂ ಗೊತ್ತು."

"ಇಂತ ಯೋಚನೆಯೆಲ್ಲಾ ಮಾಡ್ಬಾರ್ದು ಸುಮಿತ್ರ. ಪ್ರತಿ ಒಬ್ಬರ್ದೂ ಜೀವನ ಬೇರೆ ಬೇರೆ, ಆದಷ್ಟೂ ಒಬ್ಬರ ನೆರವಿಗೆ ಮತ್ತೊಬ್ರು ನಿಲ್ಲೋಕ್ಕೆ ಪ್ರಯತ್ನಿಸ್ಬೇಕೇ ವಿನಾ, ಅದಕ್ಕಿಂತ ಹೆಚ್ಚು ಬಯಸಬಾರ್ದು. ಏನಂತಿ ?"

"ಗೊತ್ತು ನಂಗೂ ಗೊತ್ತು. ನಾನವಳನ್ನ ಅತಿಯಾಗಿ ಪ್ರೀತಿಸೋ ದ್ರಿಂದ ನಿಮ್ಮ ಪ್ರೀತಿಗೆ ಕಡಿಮೆ ಮಾಡ್ತಿದೀನೀಂತ ನೀವು ತಪ್ಪು ತಿಳೀ ತೀರೇನೋ ಅಂತ ನನಗೆ ಭಯ."

"ಹುಚ್ಚುಚ್ಚು ಅಭಿಪ್ರಾಯಗಳನ್ನ ಬೆಳೆಸ್ಕೋಬಾರ್ದು. ನಾನೇನಾದ್ರೂ ಸುಮಿಯ ಆಸೆ ಆಕಾಂಕ್ಷೆಗಳಿಗೆ ಅಡ್ಡ ಬಂದಿದ್ದೀನೇನು ? ನೀನು ನಿಶ್ಚಿಂತೆ ಯಾಗಿ ಅವಳ ಗೆಳತಿಯಾಗಿ ಉಳಿ. ಆತ್ಮೀಯಳಾಗಿ ನಿಲ್ಲು. ನನ್ನದೇನೂ ಅಭ್ಯಂತರ ಇಲ್ಲ."

"ಓಹ್ ಶ್ಯಾಮು, ನೀವೆಷ್ಟು ಒಳ್ಳೇವ್ರು."---ಅವನ ತೋಳ ಮೇಲೆ ತಲೆಯಿಟ್ಟಳು.

ಹೊಸ ಹೊಸ ಭಾವನೆಗಳನ್ನು ಕಲ್ಪನೆ ಮಾಡ್ಕೊಂಡು ನೊಂದು ಕೊಳ್ಳುತ್ತಿರುವ ಸುಮಿತ್ರೆಯ ಮೇಲೆ ಅವನಿಗೆ ಕರುಣೆ ಅನುತಾಪ ಉದ್ಭವಿಸಿದುವು. ತಲೆ ನೇವರಿಸುತ್ತಾ---

"ಟೈಂ ಆಗ್ತಾ ಬಂತು ಡ್ರೆಸ್ ಬದಲಾಯಿಸಿ ಹೊರಡು ಮತ್ತೆ" ಎಚ್ಚರಿಸಿದ.

• • • •

ಸುಮಿತ್ರ ಖಂಡಿತವಾಗಿ ಬರುತ್ತಾಳೆಂದು ಸರಳೆಗೆ ಗೊತ್ತು. ಆದರೆ ತನ್ನ ವಿಷಯ ಅವಳಿಗೆ ತಿಳಿಸುವುದು ಉಚಿತವೆ ಎಂಬ ಪ್ರಶ್ನೆ ಬೃಹದಾಕಾರ ವಾಗಿ ಅವಳೆದುರಿಗೆ ನಿಂತಿತು. ದುಃಖವನ್ನು ಆತ್ಮೀಯರಿಗೆ ಹೇಳಿಕೊಂಡರೆ ಕಡಿಮೆಯಾಗುವುದು ಎನ್ನುತ್ತಾರೆ ನಿಜ. ಆದರೆ ಸುಮಿತ್ರ ಅಷ್ಟು ಆತ್ಮೀಯಳೆ ? ಎಂದಿತು ಹೃದಯ.

ಅದೇ ಹೃದಯ ಮರುತ್ತರವೂ ಕೊಟ್ಟಿತು---ಹೌದು ಅವಳು ಅತ್ಯಂತ ಆತ್ಮೀಯಳು. ಯಾವ ಜನ್ಮದ ಅನುಬಂಧವೋ ಅವಳು ತನಗೆ ಸಿಕ್ಕಿದ್ದಾಳೆ. ಆದರೂ ಎಷ್ಟು ವರ್ಷಗಳಿಂದ ಬಂಧನದಲ್ಲಿಟ್ಟಿರುವ ತನ್ನ ಭಾವನೆಗಳನ್ನು ಇಂದು ಬಹಿರಂಗಪಡಿಸಬೇಕು. ಬೇಕೆ ? ಬೇಡವೆ ? ಅಳದೆ ನಿರ್ವಿಕಾರ ವಾಗಿ ಇರಲು ಸಾಧ್ಯವೆ ? ಅವಳೆದುರಿಗೆ ಅಳುವುದೆ ? ಛೆ ! ತಾನಂತಹ ದುರ್ಬಲಳೆ ? ಸುಮಿತ್ರೆಗೇಕೆ ನನ್ನ ವಿಷಯದಲ್ಲಿ ಇಷ್ಟೊಂದು ಆದರ ?

ಸುಮಿತ್ರ ಎಂದಿಗಿಂತ ಅರ್ಧ ಗಂಟೆ ಮುಂಚಿತವಾಗಿಯೇ ಬಂದಳು. ಸರಳ ದುಃಖಿಯಾಗಿರಬಹುದೆಂದು ಊಹಿಸಿ ಬಂದ ಅವಳ ಊಹೆ ತಪ್ಪಾ ಗಿತ್ತು. ಸರಳ ಪ್ರಸನ್ನವಾಗಿದ್ದಳು. ಎಂದಿನಂತೆಯೇ ಉತ್ಸಾಹದಿಂದ ಸುಮಿತ್ರೆಯನ್ನು ಆಹ್ವಾನಿಸುತ್ತಾ ಕೇಳಿದಳು.

"ನನ್ನ ವಿಷಯ ತಿಳಿಯೋಕ್ಕೆ ಯಾಕೆ ಸುಮಿತ್ರ ಇಷ್ಟೊಂದು ಕುತೂಹಲ. ಇಷ್ಟು ಬೇಗ ಓಡಿ ಬಂದಿದ್ದಿ ?"

"ಕುತೂಹಲದ ಮಾತಲ್ಲ ಸರಳಕ್ಕ. ಮಕ್ಕಳನ್ನ ಅವರ ಜವಾಬ್ದಾರೀ

ಬಿಟ್ಟು ಬರಬೇಕಾದ್ರೆ, ಸುಳ್ಳು ಹೇಳಬೇಕಾಯ್ತು. ಸಿನಿಮಕ್ಕೆ ಅಂತ ಹೇಳಿದೆ. ಮ್ಯಾಟಿನಿ ಪ್ರಾರಂಭಕ್ಕಿಂತ ಮುಂಚೆ ಹೊರಡಬೇಕಾಯಿತಲ್ಲ, ಅದಕ್ಕೆ ಬೇಗ ಬರಬೇಕಾಯ್ತು."

"ಒಳ್ಳೇದಾಯ್ತು ಬಿಡು. ಆದ್ರೆ ನನ್ನ ಬಾಳನ್ನ ಯಾರೂ ಸಿನಿಮ ಮಾಡಲಾರರು, ಯಾಕೆ ಗೊತ್ತಾ ? ನನ್ನ ಕಥೇಲ್ಲಿ ಖಳನಾಯಕ ಇಲ್ಲ. ನಾಯಕ, ಖಳನಾಯಕ ಎಲ್ಲಾ ಒಬ್ಬನೇ. ನಾಯಕ ನಾಯಕೀರು ಪ್ರೇಮಿಸ್ಬೇಕು, ಖಳನಾಯಕ ಅಡ್ಡ ಬರಬೇಕು. ಕಡೇಗೆ ಅವನು ಸಾಯ ಬೇಕು. ಹೀರೋ ಹೀರೋಯಿನ್ ಒಂದಾಗ್ಬೇಕು. ಅಥವಾ ಖಳನಾಯಕಿ ಬರಬೇಕು, ಸಾಯ್ಬೇಕು. ಇವೆಲ್ಲಾ ಇಲ್ದೆ ಸಿನಿಮಾ ಆಗೋಲ್ಲ. ನನ್ನ ಕಥೆ ಇದರಿಂದ ದೂರ."

ಸುಮಿತ್ರೆಯನ್ನು ತನ್ನ ಕೋಣೆಗೇ ಕರೆದು ಕುಳ್ಳಿರಿಸಿದಳು. ತಾನು ಮಂಚದ ಮೇಲೆ ದಿಂಬಿಗೆ ಒರಗಿ ಕುಳಿತುಕೊಳ್ಳುತ್ತಾ ಹೇಳಿದಳು—

ರಾಜ ನಮ್ಮನೇಗೆ ಪರಿಚಯವಾದಾಗ ನನಗೆ ಹದಿನೈದು ವರ್ಷ. ಎಸ್.ಎಸ್.ಎಲ್.ಸಿ. ಓತ್ತಾ ಇದ್ದೆ. ಬೆಂಗಳೂರಿನಲ್ಲಿದ್ದೆವು ಆಗ ನಾವು. ರಾಜನ ಮನೇವ್ರು ಶಿವಮೊಗ್ಗಾದಿಂದ ವರ್ಗವಾಗಿ ಅಲ್ಲಿಗೆ ಬಂದಿದ್ದರು.

ರಾಜ ನಮ್ಮ ಕಡೇ ಅಣ್ಣ ಸತೀಶನಿಗೆ ಕ್ಲಾಸ್‌ಮೇಟು. ಇಂಟರ್‌ನಲ್ಲಿ ಓದುತ್ತಿದ್ದ, ಸಮಯವಲ್ಲದ ಸಮಯದಲ್ಲಿ ಕಾಲೇಜು ಬರಲಾದುದರಿಂದ ರಾಜನಿಗೆ ಪಾಠಗಳು ಅರ್ಥವಾಗುವುದು ಕಷ್ಟವಾಯಿತು. ಕ್ಲಾಸಿನಲ್ಲಿ ಬುದ್ಧಿ ವಂತನಾದ ನಮ್ಮಣ್ಣ ಸತೀಶನಿಗೆ ಗೆಳೆಯನಾದ. ಸತೀಶನ ಆಸರೆಯಿಂದ, ಫಸ್ಟ್‌ಕ್ಲಾಸಿನಲ್ಲಿ ಪಾಸಾಗದಿದ್ದರೂ ಸೆಕೆಂಡ್‌ಕ್ಲಾಸ್ ಗಳಿಸಿದ ರಾಜ.

ಸತೀಶ ಸುಲಭವಾಗಿ ಇಂಜನಿಯರಿಂಗ್ ಕಾಲೇಜಿನಲ್ಲಿ ಸೀಟು ಪಡೆದ. ಆದ್ರೆ ರಾಜ ಬಿ.ಎಸ್.ಸಿ. ಸೇರಬೇಕಾಯಿತು. ಕಾಲೇಜುಗಳು ಬೇರೆ ಯಾದುದರಿಂದ. ಸತೀಶ ರಾಜರ ಗೆಳತನ ಅತಿಯಾಗಿ ನಿಲ್ಲದೆ ಮಿತವಾಗ ತೊಡಗಿತು. ಆವರವರ ಆಸಕ್ತಿಗಳೂ ಸಹ ಬೇರೆ ಜಾಡು ಹಿಡಿದಿದ್ದವು. ಆಗ ನಾನು ಅವರಿಬ್ಬರ ಗೆಳತನದ ಕೊಂಡಿಯಾಗಿ ಉಳಿದೆ.

ರಾಜ ನಮ್ಮ ತಾಯಿಯ ಮೂರುಗಂಡುಮಕ್ಕಳ ಜೊತೆಗೆ ನಾಲ್ಕನೆಯವ ನಾದ. ತಂದೆಯವರಿಗಂತೂ ತಮ್ಮ ಮಕ್ಕಳಿಗಿಂತ ಅವನೇ ಅಚ್ಚುಮೆಚ್ಚು.

ಇಂಜಿನಿಯರ್ ಓದು ಮುಗಿಸಿ, ಟಾಟಾ ಇನ್‌ಸ್ಟಿಟ್ಯೂಟಿನಲ್ಲಿ ಹೆಚ್ಚಿನ ವ್ಯಾಸಂಗ ಮಾಡುತ್ತಿದ್ದ ನಮ್ಮಣ್ಣ ಭೂಷಣ ಸ್ವಲ್ಪ ಬಿಳೀ ಕುದುರೆ. ನಮ್ಮ ತಂದೆಯಿಂದ ದುಡ್ಡು ಪಡೆಯುವಾಗ ಮಾತ್ರವೇ ಅವನ—ಅವರ ಸಂಬಂಧ, ಎರಡನೆಯ ಉಮೇಶ ಮಿತ ಭಾಷಿ. ಅಳುಕು ಸ್ವಭಾವದವ. ಸತೀಶ ಶುದ್ಧ ಹುಡುಗು, ಬೇಜವಾಬ್ದಾರಿ. ಹಾಗಾಗಿ, ರಾಜ ವಯಸ್ಸಿನಲ್ಲಿ ಸತೀಶನ ಗಿಂತ ಹಿರಿಯ. ಉಮೇಶನಗಿಂತ ಕಿರಿಯ ನಮ್ಮ ತಂದೆಯ ಸಣ್ಣ ಪುಟ್ಟ ಕೆಲ್ಸ ಗಳಿಗೆ ನೆರವಾಗುತ್ತಿದ್ದ. ಎಷ್ಟೋ ಬಾರಿ "ರಾಜ ಬರಲಿಲ್ವಾಮ್ಮಾ ಸರಳಾ, ಸ್ವಲ್ಪ ಅದು ತರಿಸಬೇಕಾಗಿತ್ತು.....ಇದು ಬೇಕಿತ್ತು" ಎಂದು ಅವನ ಬರವಿಗೆ ಎದುರು ನೋಡುತ್ತಿದ್ದರು.

ಅಮ್ಮನಿಗೂ ತನ್ನ ನಾಲ್ಕನೆಯ ಮಗನ ಮೇಲೆ ವ್ಯಾಮೋಹ, ಕಾರಣ ಅವನ ಸ್ಫುರದ್ರೂಪಿತನಕ್ಕೆ ಮಾರುಹೋಗಿದ್ದರು ಅಮ್ಮ. ಸಮ್ಮೋಹಕ ರೂಪು. ಗುಂಗುರು ಗುಂಗುರಾದ ಜೊಕ್ಕ ಕ್ರಾಪು . ಅಗಲವಾದ ಹಣೆ ; ತುಂಬು ಕಣ್ಣುಗಳು ; ನೀಳವಾದ ಮಾಟವಾದ ಮೂಗು, ಆದೇ ತಾನೇ ಬೆಳೆಯುತ್ತಿದ್ದ ಚಿಗುರುಮೀಸೆ, ಚೂಪಾದ ಗಲ್ಲ, ವಯಸ್ಸಿಗೆ ಮೀರಿದ ಬೆಳವಣಿಗೆ, ತಮ್ಮ ಮಕ್ಕಳೆಲ್ಲರೂ ತಮಗೆ ಮುದ್ದಿನ ಮುದ್ದೆಗಳೇ ಆದರೂ ಅವರ ವಾತ್ಸಲ್ಯದಲ್ಲಿ ರಾಜನಿಗೂ ಒಂದು ಭಾಗ ಕೊಡಲು ಹಿಂತೆಗೆಯಲಿಲ್ಲ ನಮ್ಮ ತಾಯಿ ತಂದೆ.

ರಾಜನ ಅಣ್ಣನೂ ಒಬ್ಬ ಇಂಜನಿಯರಿಂಗ್ ಕಾಲೇಜಿನಲ್ಲಿ ಓದುತ್ತಿದ್ದು ದರಿಂದ ಅಷ್ಟೇನೂ ಅನುಕೂಲಸ್ಥರಲ್ಲದ ಅವನ ಮನೆಯವರು, ಇಬ್ಬರನ್ನೂ ಓದಿಸುವುದು ಕಷ್ಟವೆಂದು ರಾಜನನ್ನು ಬಿ.ಎಸ್.ಸಿಗೆ ಸೇರಿಸಿದ್ದರು. ಅತ್ತ ಅಣ್ಣ, ಇತ್ತ ಭೂಷಣ, ಉಮೇಶ, ಸತೀಶ ಎಲ್ಲರೂ ಇಂಜಿನಿಯರಿಂಗ್ ವಿದ್ಯಾರ್ಥಿಗಳು. ತನ್ನ ಪಾಲಿಗದಿಲ್ಲ ಎಂಬ ನೋವು ಅವನನ್ನು ಬಾಧಿಸು ತ್ತಿತ್ತು. ಆಗೆಲ್ಲಾ ಬುದ್ಧಿ ಹೇಳುತ್ತಿದ್ದರು ಅಮ್ಮ. "ಜೀವನದಲ್ಲಿ ಓದೇ ಮುಖ್ಯವಲ್ಲ ರಾಜು. ಒಳ್ಳೇತನಾನೂ ಅಷ್ಟೇ ಮುಖ್ಯ. ನನ್ನ ಮಕ್ಕಳೇನೋ ದೊಡ್ಡ ಓದೂಂತ ಓದ್ತಾ ಇದ್ದಾರೆ. ಆದ್ರೆ ಅವರೆಲ್ಲಾ ಬರೀ ಅಹಂಕಾರದ ಮುದ್ದೆಗಳಾಗ್ತಾರೋ ಅಂತ ಭಯ ನನಗೆ. ನೀನು ರಾಜ, ರಾಜನಾಗಿಯೇ ಉಳೀತಿಂತ ನಂಗೊತ್ತು" ಎಂದು ಹುರಿದುಂಬಿಸುತ್ತಿದ್ದರು,

ಅವನ ಮನಸ್ಸಿಗೆ ಹಿತವಾದ ಸಿಂಚನ ಕೊಡುತ್ತಿದ್ದವಳು ನಾನು, "ಹೋಗಲಿ ಬಿಡು ರಾಜ. ದೇಶದಲ್ಲಿ ಎಲ್ಲರೂ ಮನೆ, ಮಠ, ಜಲಾಶಯ' ಫ್ಯಾಕ್ಟರಿಗಳನ್ನು ಕಟ್ಟಿಸೋ ಇಂಜನಿಯರ್‍ರುಗಳೇ ಆದ್ರೆ. ಅಂತವ್ರನ್ನ ತಯಾರಿಸೋ ಉತ್ತಮ ಉದ್ಯೋಗ ಲೆಕ್ಚರರ್ ಕೆಲಸ ನೀ ಮಾಡುವೆಯಂತೆ. ಆಗ ಇಂತಾ ನೂರಾರು ಜನ ನಿನಗೆ ಗೌರವ ಸಲ್ಲಿಸುತ್ತಾರೆ" ಅಂತ ಅವನಲ್ಲಿ ಉತ್ಸಾಹ ತುಂಬ್ತಾ ಇದ್ದೆ. ಆ ಉತ್ಸಾಹದಿಂದ ಉತ್ತೇಜಿತನಾಗಿ ಓದುತ್ತಿದ್ದ.

ನನ್ನ ಅಣ್ಣಂದಿರು ನನ್ನನ್ನು ಮಮತೆಯಿಂದ ಕಾಣುತ್ತಿದ್ದರೂ, ನನಗೆ ಹತ್ತಿರ ಬಂದವನು ರಾಜ. ನನ್ನ ಸಣ್ಣ ಪುಟ್ಟ ಕೆಲಸಗಳನ್ನು ಮಾಡಿಕೊಡುತ್ತಿದ್ದವನೂ ಅವನೇ. ನಾನು, ನಮ್ಮ ತಂದೆ, ತಾಯಿ, ರಾಜನಿಗೆ ಪ್ರತ್ಯೇಕ ಸ್ಥಾನ ಕೊಟ್ಟೆವು. ರಾಜ ನಮ್ಮನೆಗೆ ಒಂದು ದಿನ ಬರದೆ ಇದ್ದರೂ, ನಾನೂ ಒಳಗೊಳಗೇ ಒದ್ದಾಡುತ್ತಿದ್ದೆ. ಅವನ ಸುಂದರ ಮುಖವನ್ನು ನೋಡದೆ ಇದ್ದ ದಿನ ನನಗೆ ಹೇಗೇ ಹೇಗೋ ಆಗುತ್ತಿತ್ತು. ನನ್ನ ಮನಸ್ಸಿನ ಭಾವನೆಗಳನ್ನು ಮೊದಲು ಕಂಡುಕೊಂಡವರು ನನ್ನ ತಾಯಿ.

ರಾಜ ನನ್ನಲ್ಲಿ ತೋರುತ್ತಿದ್ದ ಸ್ನೇಹ, ಒಲವು, ನಾನು ಅವನೆಡೆಗೆ ತೋರುತ್ತಿದ್ದ ಪ್ರತ್ಯೇಕ ಆದರಣೆಗಳು ಅಮ್ಮನ ಮನಸ್ಸಿನಲ್ಲಿ ಆಸೆ ಮೂಡಿಸಿದವು. ಒಮ್ಮೆ ಅಪ್ಪನ ಬಳಿ ಪ್ರಸ್ತಾಪಿಸಿಯೂ ಬಿಟ್ಟರು. ಸಾಧಾರಣವಾಗಿ ನಾನು, ಅಮ್ಮ, ಅಪ್ಪ ಒಂದು ಕೋಣೆಯಲ್ಲಿ ಮಲಗುತ್ತಿದ್ದೆವು. ನಾನು ನಿದ್ದೆ ಮಾಡಿರಬಹುದೆಂದು ತಿಳಿದು ಅಮ್ಮ ಕೇಳಿದರು—"ಏನೂಂದ್ರೆ ನನ್ನ ಯಾವ ಮಾತೂ ನೀವು ತಳ್ಳಿ ಹಾಕ್ತೀರ. ಇದೊಂದಾದ್ರೂ ನಡೆಸ್ತೀರಾ ?" ಮಲಗಿದ್ದ ಅವರ ಧ್ವನಿಗೆ ಸರಿಯಾಗಿ ಅಪ್ಪನೂ ಮೆಲ್ಲಗೆ "ಏನದು" ಎಂದು ಕೇಳಿದರು.

"ನಮ್ಮ ಸರೂನ್ನ ಕಂಡ್ರೆ ರಾಜನಿಗೆ ಜೀವ. ಅವನೂ ಅಂದ್ರೆ ಅವಳೂ ಪ್ರಾಣ ಬಿಡ್ತಾಳೆ. ಅವನ ತಾಯಿ ತಂದೆ ಹತ್ರ ಮಾತಾಡಿ ನಾವ್ಯಾಕೆ ನಮ್ಮ ಸರೂನ್ನ ಅವನಿಗೆ ಕೊಡಬಾರದು ?"

"ಛೆ! ಛೆ ! ಸ್ನೇಹದಿಂದಿರೋ ಮಾತ್ರಕ್ಕೆ ಅರ್ಥಗಳು ಕಲ್ಪಿಸಬಾರದು ಲಕ್ಷ್ಮಿ,'

"ಅರ್ಥ ಕಲ್ಪಿಸೋದಲ್ಲಾಂದ್ರೆ. ಕೊಟ್ರೆ ಚೆನ್ನಾಗಿರುತ್ತಲ್ವಾ ಅಂದೆ

"ನೋಡೋಣ ಲಕ್ಷ್ಮಿ. ಕಾಲ ಹೇಗೆ ಬರುತ್ತೋ. ಈಗಿನ್ನೂ ಇಬ್ಬರ್ದೂ ಎಳೆ ವಯಸ್ಸು. ಓದ್ತಾ ಬೇರೆ ಇದ್ದಾರೆ. ಅವರ ಮನಸ್ಸಿಗೆ ಈ ಭಾವನೇ ಹಾಕೋದು ಬೇಡ, ಅವನೂ ಓದು ಮುಗಿಸಿ ಒಂದು ಕೆಲಸ ಹಿಡಿದ ಮೇಲೆ ನೋಡೋಣ, ಅಲ್ಲೀವರ್ಗೂ ಅವರಿಬ್ಬರ ಸ್ನೇಹ ಹೀಗೇ ಇರಬೇಕಲ್ಲಾ."

"ಏನು ಮಾತಾಡ್ತೀರೀದ್ರಿ. ರಾಜನ ವಿಷಯ ಯಾಕೆ ಹಾಗಂತೀರಿ."

"ರಾಜ ಅಂತ್ಲೇ ಅಲ್ಲ ಲಕ್ಷ್ಮಿ. ಈಗಿನ್ನೂ ಇಪ್ಪತ್ತಿರಬಹುದು ಅವನಿಗೆ. ಅವನಿಗೆ ತನ್ನ ಮನಸ್ಸೇನು ಅನ್ನೋದೇ ತಿಳಿದಿರೋಲ್ಲ. ವಯಸ್ಸಿಗೆ ಬಂದ್ಮೇಲೆ ಅವನಿಗೂ ಸರಳನಲ್ಲಿರೋ ಸ್ನೇಹ ಬರೀ ತಂಗಿಯ ವಾತ್ಸಲ್ಯವಷ್ಟೇ ಆಗಿರಬಹುದು. ಅದು ಪ್ರೇಮವಲ್ಲದೆ ಇರಬಹುದು. ಈಗ ನಮ್ಮ ಮಕ್ಕಳೂ ಸರಳಾನ್ನ ಅಷ್ಟೇ ಪ್ರೀತಿಸೋಲ್ವ ಹೇಳು."

"ಹೌದು ನೀವನ್ನೋದೂ ನಿಜ. ನಮ್ಮ ಸರೂನೇ ಆ ಭಾವನೆ ಬೆಳಸಿಕೊಳ್ಳದೇ ಇರ್ಬಹ್ದು. ಮೂವರು ಅಣ್ಣಂದಿರಂತೆ ಇವನೂ ಒಬ್ಬ ಅಂದುಕೋಬಹುದು. ನಿಜ. ಇರಲಿ. ದೇವ್ರು ಹೇಗೆ ಮಾಡಿದ್ರೆ ಹಾಗೆ" ಅರ್ಥ ಮಾಡಿಕೊಂಡರು ಅಮ್ಮ.

ತಾಯಿತಂದೆಯವರು ಏನೇ ಅನ್ನಲಿ, ರಾಜ ಮಾತ್ರ ನನಗೆ ತುಂಬಾ ಬೇಕಾದವನಾಗಿದ್ದ. ನನ್ನ ರಾಜನೆಡೆಗಿನ ಈ ವಾಲಿಕೆಯಿಂದ ಅಮ್ಮನ ಆಸೆಗೆ ದಾರಿಕೊಟ್ಟೆನೇ ಏನಾ ಸಂಶಯಕ್ಕಿಲ್ಲ. ಅಮ್ಮ ಉದ್ದಿಶ್ಯವನ್ನು ಮರೆಯಲಿಲ್ಲ. ದಿನ ಕಳೆದಂತೆ ನನ್ನನ್ನು ಹೆಚ್ಚು ಹೆಚ್ಚು ರಾಜನ ಜೊತೆ ಇರಲು ಬಿಡುತ್ತಿದ್ದರು. ಪಾಪ ! ರಾಜ ವಯಸ್ಸಿಗೆ ಬಂದರೆ ಬದಲಾಗಿಬಿಡಬಹುದೆಂದು ಹೆದರಿದರೇನೋ. ಆ ಸುಂದರ ತರುಣನನ್ನು ಬಿಟ್ಟುಕೊಡಲು ಅಮ್ಮ ತಯಾರಿರಲಿಲ್ಲ.

ನಾನು ಸಂತೋಷದ ಪರಾಕಾಷ್ಠತೆಯಲ್ಲಿ ಮುಳುಗಿ ತೇಲುತ್ತಿದ್ದೆ. ಒಬ್ಬಳೇ ಹೆಣ್ಣು ಮಗಳು ಮಮತೆ ತಾಯಿತಂದೆಯರಿಗೆ, ಮುದ್ದಾದ ಚೋಟಿಯಾದ ಅಕ್ಕರೆಯ ತಂಗಿ ಮೂವರು ಅಣ್ಣಂದಿರಿಗೆ, ಪ್ರೇಮ ತುಂಬಿದ ಗಳತಿ ರಾಜನಿಗೆ, ನನ್ನ ಸಂತಸದ ಶಿಖರ ನೇರವಾಗಿ ಗಗನವನ್ನೇ ಮೆಟ್ಟಿ ನಿಂತಿತು. ಆದರೆ ವಿಧಿ ಅದನ್ನು ಸಹಿಸಲಿಲ್ಲ, ನನ್ನ ಬಾಳಿನ ಆರು ಅಚಲ ಸ್ತಂಭಗಳಲ್ಲಿ

ಒಂದು ಯಾರಿಗೂ ತಿಳಿಯದಂತೆ ಕುಸಿದು ಬಿತ್ತು. ನೋವೆಂದರೆ ಏನೆಂಬುದೇ ತಿಳಿಯದ ನನಗೆ ಅದು ಮೊದಲ ಉಳಿಪೆಟ್ಟು, ಅದು ವಾತ್ಸಲ್ಯಮಯಿ ಅಮ್ಮನ ಮರಣ.

ಅಂದು ಶುಕ್ರವಾರ, ಹೌದು ನನಗೆ ಚೆನ್ನಾಗಿ ನೆನಪಿದೆ. ಅಮ್ಮ ಎದ್ದು ಅದ್ದೂರಿಯಿಂದ ತುಲಸೀಪೂಜೆ ಮಾಡುತ್ತಿದ್ದ ದಿನವದು. ಪೂಜೆ ಮುಗಿಸಿ ಅಡಿಗೆ ಮನೆಯಲ್ಲಿದ್ದರು ನಾನು ಪರೀಕ್ಷೆ ಬಹಳ ಹತ್ತಿರ ಬಂದಿತ್ತಾದ್ದರಿಂದ ಏನೋ ಓದಿಕೊಳ್ಳುತ್ತಾ (ಇಂಟರ್‌ಗೆ ಕಟ್ಟಿದ್ದೆ) ಕೋಣೆಯಲ್ಲಿ ಕುಳಿತಿದ್ದೆ. ಅಣ್ಣಂದಿರೆಲ್ಲಾ ಹೊರಗಡೆ ಹೋಗಿದ್ದರು. ಅಪ್ಪ ಫ್ಯಾಕ್ಟರಿಗೆ ಹೊರಟುಹೋಗಿದ್ದರು. ರಾಜ ಸಾಧಾರಣವಾಗಿ ಬೆಳಗಿನ ಹೊತ್ತು ಮನೆಗೆ ಬರುತ್ತಿರಲಿಲ್ಲವಾದ್ದರಿಂದ ಮನೆಯಲ್ಲಿ ನಾನು, ಅಮ್ಮ ಇಬ್ಬರೇ. ಇದ್ದಕ್ಕಿದಂತೆ ಅಮ್ಮ ಕೂಗಿದರು "ಅಮ್ಮಾ, ಸರಳಾ."

"ಬಂದೆ ತಾಳಮ್ಮ" ಅಂತ ಅಸಹನೆಯಿಂದ ಉತ್ತರಕೊಟ್ಟೆನೇ ಹೊರತು ಎದ್ದು ಹೋಗಲಿಲ್ಲ. ತಮಗೇನಾದರೂ ಬೇಕಾದರೆ ಮೇಲೆ ಮೇಲೆ ಕೂಗುವ ಅಮ್ಮ ಅಂದು ಮತ್ತೆ ಕೂಗಲಿಲ್ಲ. ಪುಸ್ತಕ ಕೆಳಗಿಟ್ಟು ಅಡಿಗೆ ಮನೆಗೋಡಿದೆ. ತರಕಾರಿ ಹೆಚ್ಚುತ್ತಿದ್ದ ಅಮ್ಮ ಕೈಯಲ್ಲಿ ಆಲೂಗಡ್ಡೆ ಹಿಡಿದೇ ಪಕ್ಕಕ್ಕೆ ಒರಗಿದ್ದರು. ಎಬ್ಬಿಸಿ ಕೂರಿಸಲು ಹೋದೆ ಆಗಲಿಲ್ಲ. ಈಳಿಗೆ ಮಣೆಯನ್ನು ಎಳೆದು ಪಕ್ಕಕ್ಕಿಟು ಕೋಣೆಗೆ ಓಡಿ ಹಾಸಿಗೆ ಸರಿಪಡಿಸಿ ಬಂದೆ. ಒಬ್ಬಳೇ ಅಮ್ಮನನ್ನು ಅಲುಗಿಸಲೂ ಸಹ ಆಗಲಿಲ್ಲ. ಡಾಕ್ಟರನ್ನು ಕರೆ ತರಲೂ ಸಹ ಮನೆಯಲ್ಲಿ ಯಾರೂ ಇರಲಿಲ್ಲ, ಅಮ್ಮನನ್ನು ಬಿಟ್ಟು ನಾನು ಹೊರಟುಹೋದರೆ. ಒಂದುವೇಳೆ ಅಮ್ಮ ಮೊದಲೇ ಎಚ್ಚೆತ್ತರೆ ಗತಿಯೇನು ಎಂದು ಕೈ ಹೊಸಕಿಕೊಳ್ಳುತ್ತಿರುವಾಗಲೇ ದೇವರೇ ಕಳಿಸಿದನೇನೋ ಅನ್ನೋ ಹಾಗೆ ರಾಜ ಪ್ರತ್ಯಕ್ಷನಾದ.

"ರಾಜ, ಅಮ್ಮ ಯಾಕೋ ಅಡಿಗೇ ಮನೆಯಲ್ಲಿ ಬಿದ್ದುಬಿಟ್ಟಿದ್ದಾರೆ. ಸ್ವಲ್ಪ ಎತ್ತಿ ಮಲಗ್ಸೋಣ ಬಾ" ಅಂದೆ. ನಾನು ಧೈರ್ಯ ಕೆಟ್ಟಿರಲಿಲ್ಲ.

ರಾಜ ಒಂದೇ ನೆಗೆತಕ್ಕೆ ಅಡಿಗೇ ಮನೆಯಲ್ಲಿ ಕಾಲಿಟ್ಟ. ಅಮ್ಮನನ್ನು ಮುಟ್ಟಿದೊಡನೆ ಸಿಡಿಲು ಬಡಿದವನಂತೆ "ಸರೂ" ಎಂದು ಅರಚಿಕೊಂಡ "ಏನು" ಎನ್ನಲೂ ಸಹ ನನ್ನಿಂದಾಗಲಿಲ್ಲ. ಅವನು ನನ್ನನ್ನು ಎಳೆದು

ಕೊಂಡೇ ಕೋಣೆಗೆ ಬಂದ. ಮೃದುವಾಗಿ ಹತ್ತಿರ ಹಿಡಿದುಕೊಂಡು "ಸರೂ, ಅಮ್ಮ ಇನ್ನಿಲ್ಲ" ಎಂದ.

"ಅಂದರೆ" ತಿಳಿದೂ ಕೇಳಿದೆ ನಾನು.

"ಅಮ್ಮನ ಪ್ರಾಣಪಕ್ಷಿ ಹಾರಿಹೋಗಿದೆ ಸರಳಾ. ಹೃದಯ ಸ್ತಂಭನ ಇರಬೇಕು. ಕೂತಲ್ಲೇ ಕಣ್ಣು ಮುಚ್ಚಿದ್ದಾರೆ." ಏದುತ್ತಾ ನಿಂತುಬಿಟ್ಟ. ಮುಂದೇನು ಮಾಡಬೇಕೋ ತಿಳಿಯದು ಅವನಿಗೆ.

ಧೈರ್ಯ ತಂದುಕೊಂಡವಳು ನಾನೇ. "ಭೂಷಣಂಗೂ, ಅಪ್ಪಂಗೂ ಫೋನುಮಾಡಿ ಬಂದುಬಿಡು ರಾಜ" ಎಂದು ಕಳುಹಿಸಿದೆ. ಬರಬೇಕಾದವ ರೆಲ್ಲಾ ಬಂದರು. ಮಾಡಬೇಕಾದ್ದನ್ನೆಲ್ಲಾ ಮಾಡಿ, ಅಮ್ಮನ ಪಾರ್ಥಿವ ದೇಹವನ್ನು ಸುಟ್ಟು ಭಸ್ಮಮಾಡಿ, ನೀರಿನಲ್ಲಿ ಕದಡಿಬಿಟ್ಟರು. "ಮುತ್ತೈದೆ ಶುಕ್ರವಾರ ಕಣ್ಣು ಮುಚ್ಚಿದಳು ಪುಣ್ಯವಂತೆ ಮಹಾತಾಯಿ," ಅಂತ ಕೊಂಡಾಡಿದರು. ನಿಜ, ಅಮ್ಮನೇನೋ ಪುಣ್ಯಶಾಲಿಯಾದಳು. ಹಿಂದೆ ಉಳಿದ ನಾವು ತಾನೇ ಪುಣ್ಯಹೀನರಾದದ್ದು !

ಪರೀಕ್ಷೆಗೆ ಇಪ್ಪತ್ತೇ ದಿನ ಉಳಿದಿತ್ತು. ಚೆನ್ನಾಗಿ ಓದಿದ್ದರೂ ಪರೀಕ್ಷೆಗೆ ಹೋಗುವ ಮನಸ್ಸಾಗಲಿಲ್ಲ ನನಗೆ. ಅಪ್ಪನೊಂದಿಗೆ ಹೇಳಿಬಿಟ್ಟೆ ನಾನು ಬರೆ ಯುವುದಿಲ್ಲವೆಂದು. ಅಪ್ಪ ನನ್ನ ಮಾತಿಗೆ ತಲೆದೂಗಬಹುದೆಂದುಕೊಂಡೆ. ತಲೆದೂಗಿದರು ನಿಜ. ಆದರೆ ನಕಾರದಲ್ಲಿ.

"ಅಲ್ಲಮ್ಮ ಸರಳಾ, ಅಮ್ಮ ಕಣ್ಣು ಮುಚ್ಚಿದ್ದು ನಿಜ. ಹಾಗೆಂದು ನೀನು ಪರೀಕ್ಷೆಗೆ ಹೋಗದೆ ಇದ್ರೆ ಒಂದು ವರ್ಷವೇ ಹಾಳಾಗುತ್ತಲ್ಲಮ್ಮ ಒಂದು ವರ್ಷ ಮನುಷ್ಯನ ಜೀವನದಲ್ಲಿ ಹಲವಾರು ಘಟನೆಗಳನ್ನು ತರಬಹುದು. ಯಾವ ಕೆಲಸವೇ ಆಗಲಿ ಮುಂದೆ ಹಾಕಿ ಪ್ರಯೋಜನವಿಲ್ಲ. ಎಷ್ಟು ಓದಿದ್ದಿಯೋ ಅಷ್ಟು ಸಾಕು. ದೇವರಲ್ಲಿ ನಂಬಿಕೆ ಇಟ್ಟು ಬರೆದು ಬಾ" ಎಂದರು ಅಪ್ಪ.

ಪರೀಕ್ಷೆ ಮುಗಿದ ಕೂಡಲೇ, ಬೆಂಕಿ ಕಡ್ಡಿ ಗೀರಲು ಸಹಬಾರದ, ನಾನು, ಮನೆಯ ಗೃಹಿಣಿಯ ಸ್ಥಾನದಲ್ಲಿ ನಿಂತೆನೆಂದರೆ ನಂಬುವುದು ಕಷ್ಟ. ಒಂದೊಂದೇ ಕೆಲಸವನ್ನು ಕಲಿಯುತ್ತಾ ಬಂದೆ, ತಂದೆಯ ಸಮಯೋಚಿತ ಸಹಾಯ. ನೆರೆಮನೆಯಾಕೆ ಲೀಲಮ್ಮನವರ ಮಾರ್ಗದರ್ಶನದಲ್ಲಿ ಒಳ್ಳೆಯ ಗೃಹಿಣಿಯ ತರಪೇತು ಪಡೆದೆ.

ಪತ್ನಿಯನ್ನು ಕಳೆದುಕೊಂಡ ದುಃಖಕ್ಕಿಂತ ನನ್ನನ್ನು ಎಳೆಯ ವಯಸ್ಸಿನಲ್ಲಿ ಮನೆಯ ಜವಾಬ್ದಾರಿಗೆ ಹಾಕುವಂತಾಯಿತಲ್ಲಾ ಎಂದು ಕೊರಗಿದರು ನಮ್ಮಂದೆ. ಅಣ್ಣಂದಿರಿಗಂತೂ ನನ್ನ ಮುಖ ನೋಡುವುದಕ್ಕೂ ದುಃಖವಾಗುತ್ತಿತ್ತು. ಹೂವಿನಲ್ಲಿಟ್ಟು ಬೆಳೆಸುತ್ತಿದ್ದ ತಮ್ಮ ಒಲವಿನ ತಂಗಿ ಸರಳಾ, ತಮ್ಮ ಮನೆಯ ಏಕಮಾತ್ರ ದುಡಿವೆಗಾರ್ತಿಯಾಗಬೇಕಾಯಿತಲ್ಲಾ ಎಂದು ನೊಂದುಕೊಳ್ಳುತ್ತಿದ್ದರು.

ಆ ಎರಡು ಮೂರು ತಿಂಗಳ ಬೇಸಿಗೆ ರಜದಲ್ಲಿ ನನ್ನ ವ್ಯಕ್ತಿತ್ವವೇ ಬದಲಾವಣೆ ಹೊಂದಿತು. ಪ್ರತಿಯೊಂದಕ್ಕೂ ಕೋಪ. ಹಠ ಮಾಡುತ್ತಿದ್ದ ನಾನು ಎಲ್ಲವನ್ನೂ ಗಂಭೀರವಾಗಿ ತೆಗೆದುಕೊಳ್ಳುತ್ತಿದ್ದೆ. ತಂದೆಗೆ ನಾನು ಅವರ ಮಗಳು ಎನ್ನುವುದಕ್ಕಿಂತ ಅವರೇ ನನಗೆ ಮಗುವಾಗಿ ಕಾಣತೊಡಗಿದರು. ಕೀಟಲೆ ಚೆಲ್ಲಾತನದ ತವರಾಗಿದ್ದ ನಾನು ದೊಡ್ಡ ಹೆಂಗಸಿನಂತೆ ಗಂಭೀರ ತಾಳಿದುದನ್ನು ನೋಡಿ ಅಣ್ಣಂದಿರಿಗೆ ಹಿಂಸೆಯಾಯಿತು. ನೆರೆ ಹೊರೆಯ ಜನಕ್ಕೆ ನನ್ನಲ್ಲಿನ ಮಾರ್ಪಾಟಿನಿಂದ ಆನಂದವಾಯಿತು. ಅಷ್ಟು ಅಬ್ಬರಮಾಡಿ ನೆಳಸಿದರೆ ಹುಡುಗಿ ಕೆಟ್ಟು ಹೋಗುತ್ತಾಳೆ, ಲಕ್ಷಮ್ಮ, ಎಂದು ತಾಯಿಯೊಡನೆ ನುಡಿಯುತ್ತಿದ್ದ ಅವರು "ಎಷ್ಟು ಬೇಗ ಘನ ಗಾಂಭೀರ್ಯ ಕಲಿತುಬಿಟ್ಟಳು. ದೇವರು ಒಳ್ಳೆಯದು ಮಾಡಲಿ" ಅಂತ ಹರಸಿದರು.

ಒಂದೇ ಒಂದು ಉಳಿಯ ಪೆಟ್ಟಿಗೇ ಇಷ್ಟು ಹಣ್ಣಾದ ನಾನು, ಮುಂದೆ. ಅಂತಹ ಎಷ್ಟು ಪೆಟ್ಟುಗಳು ಕಾದಿದ್ದುವೋ ಊಹಿಸಲಾರದಾದೆ. ಅದರಲ್ಲಿ ನನ್ನ ಪರೀಕ್ಷೆ ಫಲಿತಾಂಶವೂ ಒಂದು. ಪರೀಕ್ಷೆಯೇನೋ ಬರೆದು ಬಂದಿದ್ದೆ ನಾದರೂ ಪಾಸಾಗುವ ಧೈರ್ಯವಿರಲಿಲ್ಲ. ಆದರೂ ಸೆಕೆಂಡ್ ಕ್ಲಾಸಿನಲ್ಲಿ ತೇರ್ಗಡೆಯಾಗಿದ್ದೆ. ನನ್ನ ಮಟ್ಟಿಗೆ ಇದು ಬಹಳ ಸಂತೋಷವಾಗಿತ್ತು. ಆದರೆ ತಂದೆಗೆ ನಿರಾಶೆಯಾಯಿತು. ನನ್ನ ಕಾಲೇಜಿನ ಲೆಕ್ಚರರುಗಳಿಗೆ ಅವರ ಹೆಮ್ಮೆಯ ಕಳಶವೇ ಮುರಿದು ಬಿದ್ದಂತಾಗಿತ್ತು. "ಈ ಬಾರಿ ನಮ್ಮ ಕಾಲೇಜಿನ ಫಸ್ಟ್ ರ್ಯಾಂಕ್ ನಮ್ಮ ಸರಳಾಗೇ" ಎಂದು ಹೆಮ್ಮೆಪಡುತ್ತಿದ್ದರು ಅವರು. ಅವರಿಗೆ ನಿರಾಶೆಯನ್ನು ತಂದಿದ್ದೆನಾದರೂ ಪಾಸೇ ಆಗುವುದಿಲ್ಲ

ವೆಂದು ಹಲುಬುತ್ತಿದ್ದ ನನಗೆ ಪಾಸು ಆದದ್ದೇ ಪರಮ ಸಂತೋಷವಾಗಿತ್ತು. ಆದರೆ ಮುಂದೇನು ಎಂದಾಗ ತಿಳಿಯಿತು, ನನ್ನ ಆಕಾಂಕ್ಷೆಯ ಗಾಳಿಗೋಪುರ ಕುಸಿದು ಬಿತ್ತು ಎಂದು. ಎಷ್ಟೋ ಚಿಕ್ಕವಳಿದ್ದಾಗಿನಿಂದಲೂ ಕಟ್ಟಿದ ಗೋಪುರ ಅದು, ನಾನು ಎಂ. ಬಿ. ಬಿ. ಎಸ್. ಓದಬೇಕೆಂದು, ಸಾಧಾರಣ ಎರಡನೆಯ ದರ್ಜೆಯಲ್ಲಿ ಪಾಸಾಗಿದ್ದ ನನಗೆ ಯಾರು ಕೊಡಬೇಕು. ನಾನು ಬಹಳ ನೊಂದೆ. ನನ್ನ ಕನಸಿನ ಗೋಪುರ ನನ್ನ ಕಾಲಡಿಯಲ್ಲೇ ಕುಸಿಯುತ್ತಿದ್ದಾಗ ಅಸಹಾಯಕಳಾಗಿ ಅತ್ತೆ. ನನ್ನ ಮನಸ್ಸಿಗಾದ ಆಗಿನ ಗಾಯವನ್ನು ಅಳಿಸಲು ಸಾಧ್ಯವೇ ಇಲ್ಲವೇನೋ ಎನ್ನಿಸಿತು. ಆದರೆ ಅವೆಲ್ಲಾ ಹುಚ್ಚು ಸುಮಿತ್ರಾ. ಸಿಡಿಲು ಬಡಿದ್ರೂ ಚೇತರಿಕೊಳ್ಳೋ ಶಕ್ತಿ ಇಟ್ಟಿದ್ದಾನೆ ಈ ದೇಹ, ಮನಸ್ಸುಗಳಲ್ಲಿ ದೇವರು.

ನಮ್ಮ ತಂದೆ, ಅಣ್ಣಂದಿರು ರಾಜ ಪ್ರತಿಯೊಬ್ಬರೂ ನನ್ನನ್ನು ಸಮಾಧಾನ ಮಾಡಿದರೂ ಮನಸ್ಸಿಗೆ ನೆಮ್ಮದಿ ಆಗಲಿಲ್ಲ. ಬಾಳೇ ಬರಿದಾದಷ್ಟು ವ್ಯಥೆ ಆಯಿತು. ಆದರೆ ಕೂಡಲೇ ನನ್ನ ಹೊಸ ಪಟ್ಟ "ಗೃಹಿಣಿಯ" ಸ್ಥಾನದ ನೆನಪಾಗಿ ಡಾಕ್ಟರ ವಿದ್ಯೆಗೂ ಇದಕ್ಕೂ ಸಾಧ್ಯವಿಲ್ಲ ಎಂದು ಮನಸ್ಸನ್ನು ಹದಗೊಳಿಸಲು ಯತ್ನಿಸಿಕೊಂಡೆ. ನನ್ನ ಓದು ಮುಖ್ಯವೋ? ಅಣ್ಣಂದಿರಿಗಾಗಿ, ತಂದೆಗಾಗಿ ಓದನ್ನೂ ತ್ಯಾಗಮಾಡಿ ಅವರನ್ನು ನೋಡಿಕೊಳ್ಳುವುದು ಮುಖ್ಯವೋ? ಎಂದು ತುಲನೆ ಮಾಡಿದಾಗ ನನ್ನ ವೈದ್ಯದ ಓದಿನ ಆಸೆ ಎಲ್ಲಿಯೋ ಅಡಗಿ ಹೋಯಿತು. ನಾನು ನೆಮ್ಮದಿ ತೋರಿಸಿದಾಗ ಭೂಷಣ ಹೇಳಿದ "ತುಂಬಾ ದುಡ್ಡು ಡೊನೇಷನ್ ಕೊಟ್ಟರೆ ಸೀಟು ಸಿಗಬಹುದೇನೊ ಪ್ರಯತ್ನ ಮಾಡೋಣವೇ ಸರೂ."

"ಅಷ್ಟು ದುಡ್ಡಾದರೂ ಕೊಟ್ಟು ನಾನು ಓದಬೇಕು ಅಂತ ಏನಿದೇಣ್ಣ. ಅಷ್ಟಕ್ಕೂ ಎಂ. ಬಿ. ಬಿ. ಎಸ್. ಅಂದ್ರೆ ತುಂಬಾ ಓದಬೇಕಾಗುತ್ತೆ. ನನಗೆ ಮನೆ ಕೆಲಸಾನೂ ಮಾಡಿ ಅಷ್ಟು ಓದೋ ತಾಳ್ಮೆ ಇರಲಾರದು. ಹೋಗಲಿ ಬಿಡಣ್ಣಾ, ಅದಕ್ಕೇನು ಯೋಚನೆ ಮಾಡ್ತಿ. ನಂಗಿಷ್ಟೇ ಓದು ಸಾಕು" ಎಂದುಬಿಟ್ಟೆ ನಿರ್ಧಾರದ ಸುಡಿಯಲ್ಲಿ. ಎಂತಹ ನೋವಿನ ಹಿನ್ನಲೆಯಲ್ಲಿ ನಾನಾ ಮಾತನಾಡಿರಬೇಕು ಎಂದು ಅಣ್ಣ ಗ್ರಹಿಸಿದ. "ಓದು ಮಾತ್ರ ನಿಲ್ಲಿಸಕೂಡದು ಸರೂ ನೀನೊಂದು ಗ್ರ್ಯಾಜ್ಯುಯೇಟ್ ಆಗಲೇಬೇಕು. ಅಪ್ಪನ ಹತ್ರ ಮಾತಾಡ್ತೀನಿ" ಎಂದು ಹೊರಟು ಹೋದ.

ಅಪ್ಪ ಮಾರನೇ ದಿನವೇ ಪ್ರಸ್ತಾಪವೆತ್ತಿದರು. "ಏನಮ್ಮ ಸರಳಾ. ಓದು ಬೇಡಾಂತೀಯ ? ಛೆ, ಛೆ. ಏನೇ ಆಗ್ಲಿ. ಕೇಶವನ ಮಕ್ಕಳಿಲ್ಲಾ ವಿದ್ಯಾವಂತರು. ಬುದ್ಧಿವಂತರು ಅನ್ನಿಸ್ಕೋಬೇಕಮ್ಮ. ನಮ್ಮ ತಲೆಮಾರಿನಿಂದ ನಾವು ಹಣತಂದಿಲ್ಲ. ಆದರೆ ವಿದ್ಯೆ ಬುದ್ಧಿ ಗುಣ ಮಾತ್ರ ನಮ್ಮ ಸಂಪತ್ತು. ಸರಳಾ, ಎಂ.ಬಿ.ಬಿ.ಎಸ್. ಇಲ್ಲದ ಮಾತ್ರಕ್ಕೆ ಓದೇ ಬೇಡ ಎನ್ನುವಷ್ಟು ಬೇಸರ ಮಾಡ್ಕೋಬಾರದಮ್ಮ" ಎಂದು ನೊಂದು ನುಡಿದರು,

"ನಮ್ಮ ಮನೆತನಕ್ಕೆ ನಾನು ಕಪ್ಪು ಮಚ್ಚೆಯಾಗಲೆ ? ಓದಿಯೇ ಓದುತ್ತೇನೆ" ಎಂದು ತೀರ್ಮಾನಿಸಿ ಹೇಳಿದೆ. Physics ನಲ್ಲಿ ಹೆಚ್ಚು ಅಂಕಗಳು ಬಂದಿದ್ದುದರಿಂದ Physics ಆನರ್ಸ್‌ನಲ್ಲಿ ಸುಲಭವಾಗಿ ಸೀಟು ಸಿಕ್ಕಿತು. ಮೊದಲೆರಡು ತಿಂಗಳು ಜಿಗುಪ್ಸೆಯಿಂದ ಸಂಕಟಪಟ್ಟರೂ, ಕ್ರಮೇಣ ಅದೇ ನನ್ನ ದೈವನಿರ್ಮಿತ ಬಾಳಹಾದಿಯೆಂದು ಮುಂದುವರೆದೆ.' ಬಾಳಿನ ಎರಡನೇ ಘಟ್ಟ ಅದು. ಸಂತೋಷ ಸಾಗರದಲ್ಲಿ ಈಜುತ್ತಿದ್ದ ನನ್ನನ್ನು, ಜವಾಬ್ದಾರಿಯಿಲ್ಲದೆ ಕುಣಿಯುತ್ತಿದ್ದ ನನ್ನನ್ನು, ಅಮ್ಮನ ಮರಣ ಸಂಸಾರಕ್ಕೆ ಬಂಧಿಸಿತು. ನನ್ನದೇ ಆದ ಲೋಕದಲ್ಲಿ ವಿಹರಿಸಿ ದೊಡ್ಡ ದೊಡ್ಡ ಕನಸುಗಳನ್ನು ಕಾಣುತ್ತಿದ್ದ ನನ್ನ ಕಲ್ಪನೆಯ ಬುದ್ಬುಧ ಒಡೆದು ಹೋಗಿ ನನ್ನ ಜೀವನದಿಯ ಜಾಡು ಬೇರೆ ದಿಕ್ಕು ತಿರುಗಿತು. ನಾನೂ ಭಿನ್ನ ವ್ಯಕ್ತಿಯಾದೆ" ಎಂದು ನಿಲ್ಲಿಸಿದಳು ಸರಳಾ.

ಸುಮಿತ್ರೆ ಪ್ರಶ್ನಿಸಿದಳು. "ಅಣ್ಣನಿಗೆ ಮದುವೆ ಮಾಡಿಬಿಟ್ಟು. ಅತ್ತಿಗೆ ಮನೆಗೆ ಬಂದ್ಮೇಲೆ ಮತ್ತೆ ಎಂ.ಬಿ.ಬಿ.ಎಸ್.ಗೆ ಪ್ರಯತ್ನಿಸಬಹುದಿತ್ತಲ್ಲಾ, ಸರಳಕ್ಕ."

"ಅಣ್ಣ ಓದು ಮುಗಿದ ಕೂಡಲೇ ಉತ್ತರದ ಕಡೆ ಹೋಗುವ ಯೋಚನೆ ಮಾಡಿದ್ದ. ಎಂ.ಬಿ.ಬಿ.ಎಸ್. ಅಂದ್ರೆ ಆರು ವರ್ಷ ಸುಮಿತ್ರಾ. ನಮ್ಮ ತಂದೆಗೂ ರಿಟೈರಾಗುವ ವಯಸ್ಸು ಅವರನ್ನು ನೋಡಿಕೊಳ್ಳೋದು ನನ್ನ ಪ್ರಥಮ ಕರ್ತವ್ಯವಾಗಿತ್ತು. ಹೋಗಲಿ ಬಿಡು."

"ರಾಜನ ಸಮಾಚಾರ ಏನು ? ಆಮೇಲೆ ?"

"ರಾಜನೂ B.Sc. II Classನಲ್ಲಿ ಪಾಸು ಮಾಡಿದ. ಮತ್ತೊಮ್ಮೆ ಇಂಜನಿಯರಿಂಗ್‌ಗಾಗಿ ಪ್ರಯತ್ನಿಸಿ ಸೀಟು ಸಿಕ್ಕದೆ ಕೆಮಿಸ್ಟ್ರಿ ಎಂ.ಎಸ್.ಸಿ.ಗೆ

ಸೇರಿದ. ನಾನು ಮೊದಲ ವರ್ಷದಲ್ಲಿದ್ದೆ. ಅವನು ಎರಡನೇ ಆನರ್ಸ್‌ಗೆ ಸೇರಿದ್ದ, ಇಬ್ಬರೂ ಒಂದೇ ಕಾಲೇಜು. ಭೂಷಣ ಬೊಂಬಾಯಿಗೆ ಹೋದ. ಉಮೇಶ್, ಸತೀಶರು ಓದಿನಲ್ಲಿ ಹೆಚ್ಚು ಆಸಕ್ತರು. ನನ್ನ ಮೇಲೆ ಅವರಿಗೆ ಅಧಿಕ ಮಮತೆ ವಾತ್ಸಲ್ಯಗಳಿದ್ದರೂ. ನನ್ನ ಕಷ್ಟ ಸುಖ ವಿಚಾರಿಸಲು ಅವರಿಗೆ ಪೊಳೆಯುತ್ತಿರಲಿಲ್ಲ. ನನಗೆ ತಾಯಿಯಾಗಿಯೂ ಉಳಿದವರು ಅಂದರೆ ನಮ್ಮ ತಂದೆ. ಮಿಕ್ಕೆಲ್ಲಾ ವಿಷಯಗಳಲ್ಲಿ ನೆರವಾಗುತ್ತಿದ್ದವನು ರಾಜ. ರಾಜ ನನಗೆ ಅತೀವ ಸನಿಯಕ್ಕೆ ಬಂದ. ನಮ್ಮದನ್ನು ಸ್ನೇಹ ಎಂದು ಹೇಳ ಲಾಗುತ್ತಿರಲಿಲ್ಲ. ನಮ್ಮ ಸಂಬಂಧದ ಅರ್ಥವೇ ನನಗೆ ತಿಳಿಯದು.

ಮೂರು ನಾಲ್ಕು ವರ್ಷಗಳು ನಮ್ಮ ಯಾರ ಜೀವನದಲ್ಲೂ ಏನೂ ಘಟನೆಗಳು ನಡೆಯಲಿಲ್ಲ. ನಮ್ಮ ನಮ್ಮ ವ್ಯಾಸಂಗಗಳೇ ಮುಖ್ಯವಾಗಿ, ಓದುತ್ತಿದ್ದೆವು. ಉಮೇಶ, ಸತೀಶರಿಗೂ ಒಳ್ಳೊಳ್ಳೆಯ ಕೆಲಸಗಳು ಸಿಕ್ಕವು. ಎಲ್ಲರೂ ಉತ್ತರ ಇಂಡಿಯಾದ ಶರಣು ಹೊಕ್ಕರು."

"ಅಪ್ಪನ ಹತ್ತಿರ ಇರಲು ಒಬ್ಬರೂ ಮನಸ್ಸು ಮಾಡಲಿಲ್ವಾ ? ನೀನಾದ್ರೂ ಹೇಳಬೇಕಿತ್ತು. ಸರಳಾ" ಮಧ್ಯೆ ನುಡಿದಳು ಸುಮಿತ್ರಾ.

"ಹೇಳಿದೆ. ಅಪ್ಪನೂ ಹೇಳಿದ್ರು. ಆದರೆ "ಇಲ್ಲಿದ್ರೆ ಮುಂದೆ ಮುಂದೆ ಬರೋದು ಬಹಳ ಕಷ್ಟಪ್ಪಾ. ಅಲ್ಲಿ ಒಳ್ಳೊಳ್ಳೆ ಉದ್ಯೋಗ ಸಿಗುತ್ತೆ' ಅಂತ ತಮ್ಮ ಉದ್ಧಾರದ ವಿಷಯವಾಗೇ ಮಾತನಾಡಿಬಿಟ್ಟರು. ಅವರ ಪ್ರಗತಿಗೆ ನಮ್ಮ ಸ್ವಾರ್ಥ ಅಡ್ಡ ಬರುವುದು ನನಗಾಗಲಿ, ನನ್ನ ಅಪ್ಪನಿಗಾಗಲಿ ಇಷ್ಟವಾಗಲಿಲ್ಲ. ತುಂಬು ಹೃದಯದಿಂದಲೇ ಕಳುಹಿಸಿಕೊಟ್ಟೆವು. ಮನೆ ಯಲ್ಲಿ ಉಳಿದದ್ದು ಒಂದು ಆರಲು ಹತ್ತಿರ ಹತ್ತಿರ ಬರುತ್ತಿದ್ದ ದೀಪ. ಮತ್ತೊಂದು ಆಗತಾನೇ ಹತ್ತಿಕೊಂಡು ಜಾಜ್ವಲ್ಯವಾಗಿ ಉರಿಯಲು ಹವಣಿಸುತ್ತಿದ್ದ ಜ್ಯೋತಿ. ಈ ಜ್ಯೋತಿಗೆ ಎಣ್ಣೆ ಸುರಿಯಲು ಬರುತ್ತಿದ್ದ ಯುವಕ ರಾಜ.

ರಾಜನಿಗೆ M.Sc. ಆಯಿತು. ಅಲ್ಲಿಯೇ ಒಂದು ಕೆಲಸವೂ ಆಯಿತು ಬೆಳೆಯುವ ಪೈರು ಮೊಳಕೆಯಲ್ಲೇ ಕಾಣುವಂತೆ, ಮುದ್ದಾಗಿದ್ದ ದೊಡ್ಡ ಬಾಲಕ ರಾಜ. ಈಗ ತಾರುಣ್ಯದಲ್ಲಿ ಹತ್ತು ಜನರ ಗಮನವನ್ನು ಸೆಳೆಯುವ ಆಕರ್ಷಕ ರೂಪ ತಳೆದಿದ್ದ. ಅದು ನನಗೆ ಹೆಮ್ಮೆಯ ವಿಷಯ, ನಾನೇನೂ

ಕುರೂಪಿಯಲ್ಲದಿದ್ದರೂ. ರಾಜನ ಜೊತೆ ಹೊರಗಡೆ ಹೊರಡುವಾಗ ಮನಸ್ಸು ಅಳುಕುತ್ತಿತ್ತು. ನಾನು ಬರುಬರುತ್ತಾ ನನ್ನ ಉಡಿಗೆ ತೊಡಿಗೆ ಅಲಂಕಾರ ಗಳಿಗೂ ಹೆಚ್ಚು ಗಮನ ಕೊಡುತ್ತಿರಲಿಲ್ಲ. ಪುರಸತ್ತು ಇರುತ್ತಿರಲಿಲ್ಲ. ರಾಜ ಅಷ್ಟೇ ಆ ಕಡೆ ವಾಲಿದ್ದ. ಅವನೆಷ್ಟು ಅಂದವೋ ಅವನ ಉಡುಪೂ ಅಷ್ಟೇ ಸೊಗಸು. ಅವನು ಅಷ್ಟು ಸೊಗಸುಗಾರ ಪುಟ್ಟಿಸಾಮಿಯಾದರೂ ನನ್ನ ಸರಳತೆ, ನಿರಾಡಂಬರತೆಗಳನ್ನು ಬಹಳ ಮೆಚ್ಚುತ್ತಿದ್ದ.

"ನೀನು ಇಷ್ಟೊಂದು ಹೇಳುವುದು ನೋಡಿದರೆ ನನಗೆ ಆತನನ್ನ ನೋಡ ಬೇಕು ಅನ್ನಸ್ತೆ ಸರಳಕ್ಕ" ಕುತೂಹಲದಿಂದ ಹೇಳಿದಳು ಸುಮಿತ್ರಾ.

"ಈಗೆಲ್ಲಿದ್ದಾನೋ, ನನಗೆ ತಿಳಿದರೆ ನಿನಗೂ ತೋರಿಸುತ್ತೇನೆ."

"ಮುಂದೇನಾಯಿತು ?"

"ರಾಜನಿಗೊಂದು ಕೆಲ್ಸಾನೂ ಸಿಕ್ತು ಅಂತ ಹೇಳಿದೆ ಅಲ್ವಾ. ಅವನ ಮೊದಲ ಸಂಬಳದಲ್ಲಿ ನನಗೊಂದು ಬಿಳೀ ಸಿಲ್ಕ್ ಸೀರೆ ತಂದ. ಮನೆಗೆ ಬಂದವನೇ "ಸರೂ, ನನ್ನ ಫಸ್ಟ್ ಪೇ ನಲ್ಲಿ ನಿನಗೆ ಪ್ರಸೆಂಟ್" ಎಂದ.

ಅಷ್ಟುಹೊತ್ತಿಗಾಲೇ ಕರ್ತವ್ಯ, ಪರರ ಸಂತೋಷ ಮೊದಲಾದವುಗಳನ್ನು ಅರ್ಥಮಾಡಿಕೊಂಡಿದ್ದ ನಾನು "ನಿಮ್ಮಮ್ಮನಿಗೆ ತರಬೇಕಿತ್ತು ರಾಜ. ಅಮ್ಮ ಮೊದಲು ಬರಬೇಕು. ನಂತರ ಬೇರೆಯವರು" ಎಂದೆ. ನಾನು ಬಹಳ ಉಬ್ಬಿ ಕುಪ್ಪಳಿಸಿಬಿಡುವೆನೇನೋ ಎಂದು ಬಂದಿದ್ದ ರಾಜನಿಗೆ ನಿರಾಶೆ ಯಾದರೂ–"ಅಮ್ಮಂಗೂ ತಂದಿದ್ದೀನಿ ಸರೂ, ಮನೇಲಿ ಇಟ್ಟಿದ್ದೀನಿ" ಅಂದ. ಅದು ಸುಳ್ಳು. ಎಷ್ಟೇ ಸಣ್ಣ ಪದಾರ್ಥ ಕೊಂಡರೂ ನನಗ ಮುಂಚೆ ತೋರಿಸಿ ಮನೆಗೆ ಒಯ್ಯುತ್ತಿದ್ದ ರಾಜ, ತನ್ನ ತಾಯಿಗೆ ಸೀರೆ ತಂದಿದ್ದರೆ ಮನೆ ಯಲ್ಲಿ ಮುಚ್ಚಿಡುತ್ತಿದ್ದನೆ ? ಸುಳ್ಳೇಕೆ ಹೇಳಿದನೋ ತಿಳಿಯದು. ಆದರೂ ಅವನನ್ನೇಕೆ ನೋಯಿಸಬೇಕು ಎಂದು"ತುಂಬಾ ಚೆನ್ನಾಗಿದೆ ರಾಜ ಸೀರೆ,ನಂಗೆ ತುಂಬಾ ಇಷ್ಟ ಆಯ್ತು. ಬಿಳೀ ಸೀರೆ ಅಂದ್ರೆ ಪ್ರಾಣ ನನಗೆ" ಅಂದೆ.

"ನಂಗೊತ್ತು. ಬಿಳೀ ಅಂದ್ರೆ ಪ್ರಾಣಬಿಡ್ತಿ ಅಂತಾನೇ ತಂದೆ"ಎಂದು ಹೇಳಿ ಮೆಲ್ಲಗೆ "ಸರೂ ಸಂಜೆ ಹಾಗೇ ಎಲ್ಲಾದ್ರೂ ಸುತ್ತಿ ಬರೋಣ ಬರ್ತೀಯಾ ?" ಎಂದ.

"ಈವತ್ತಾಗೊಲ್ಲ ರಾಜ, ನಾಳೆ ಹೋಗೋಣ. ಕೆಲಸಾ ಎಲ್ಲಾ ಮಾಡಿಟ್ಟುಬಿಟ್ಟು ಅಪ್ಪಂಗೆ ಹೇಳಿ ಬರ್ತೀನಿ....ಆಗಬಹುದಾ ?" ಎಂದು ಅವನ ಕಡೆ ನೋಡಿದೆ. ಅವನ ದೃಷ್ಟಿ ಅಂದು ನನಗೇಕೋ ಹೊಸದಾಗಿತ್ತು ವಿಚಿತ್ರವಾಗಿತ್ತು. ಅವನ ಕಣ್ಣು ನನ್ನ ಕಣ್ಣೊಂದಿಗೆ ಮಿಳಿತವಾದ ಕೂಡಲೆ ಏನೋ ಹೊಸಭಾವನೆ ಉದಯವಾಯ್ತು. ಹೃದಯದ ಬಡಿತ ಜೋರಾಯ್ತು. ಕಣ್ಣು ತಗ್ಗಿಸಿಬಿಟ್ಟೆ. ಒಂದು ನಿಮಿಷ ಬಿಟ್ಟು ಮತ್ತೆ ತಲೆ ಎತ್ತಿದಾಗಲೂ, ಮುಗುಳುನಕ್ಕು ನನ್ನ ಕಡೆಗೇ ನೋಡುತ್ತಿದ್ದ ರಾಜ ಸಮ್ಮೋಹಕ ನಗೆ ಅದು. ನಾಚಿ ಮುದ್ದೆಯಾದೆ. ಪ್ರಥಮ ಬಾರಿಗೆ ನನಗೆ ಅರಿವಾಯಿತು, ನಮ್ಮಿಬ್ಬರ ಸ್ನೇಹದ ಅರ್ಥ. ನಾನ ವನನ್ನು ಪ್ರೇಮಿಸಿದ್ದೆ. ಆರಾಧಿಸುತ್ತಿದ್ದೆ. ಮೂರನೇ ಬಾರಿ ತಲೆ ಎತ್ತಲು ನನ್ನಿಂದ ಆಗಲಿಲ್ಲ. ಅವನೇ ಹತ್ತಿರ ಬಂದು ಗಲ್ಲದ ಬಳಿ ಕೈಯಿಟ್ಟು ತಲೆಯನ್ನು ಮೇಲಕ್ಕೆತ್ತಿ "ಆಗಬಹುದು" ಎಂದ, ಮತ್ತೆ ಅದೇ ನಗುವಿನಿಂದ.

ಅವನ ಆ ಒಂದು ದೃಷ್ಟಿಯಲ್ಲಿ ನಾನು ನನ್ನ ಸರ್ವಸ್ವವನ್ನೂ ಕಂಡೆ. ಆ ಒಂದೇ ಒಂದು ಶುಭ ಘಳಿಗೆಯಲ್ಲಿ ನನ್ನ ಹೃದಯದ ಚಕ್ರವರ್ತಿಯಾದ ನನ್ನ ರಾಜ. ನನ್ನ ಆತ್ಮಾರ್ಪಣೆಯಾಗಿತ್ತು" ಎಂದು ನಿಟ್ಟುಸಿರಿನಿಂದ ನಿಲ್ಲಿಸಿದ ಕೂಡಲೇ ಸರಳೆಯ ಕಣ್ಣಲ್ಲಿ ನೀರಿನ ಪೊರೆ ಬಂತು. ಸುಮಿತ್ರೆ ಅದನ್ನು ಗಮನಿಸಲಿಲ್ಲ. ಸರಳೆ ಮುಂದುವರಿಸದೆ ಸುಮ್ಮನೆ ಕುಳಿತಾಗ ಮಾತ್ರ "ಅದೃಷ್ಟಶಾಲಿ ರಾಜ. ಮಾರನೇ ದಿನ ನೀನವನೊಂದಿಗೆ ಹೋದೆಯಾ ?" ಎಂದಳು.

"ಅವನನೇನೋ ಅದೃಷ್ಟಶಾಲಿ ಸುಮಿತ್ರಾ. ಆದರೆ ದೌರ್ಭಾಗ್ಯಳು ನಾನು" ಎಂದು ಕಣ್ಣೊರಸಿಕೊಂಡಳು.

"ಅಂದರೆ. ಹೋಗಲಾಗಲಿಲ್ಲವೆ ?" ಕೇಳಿದಳು ತಂಗಿ.

ಸರಳೆಗೆ ತನ್ನನ್ನು ಸಂಬಾಳಿಸಿಕೊಳ್ಳಲು ಸ್ವಲ್ಪ ಸಮಯವೇ ಬೇಕಾ ಯಿತು. ಆ ದಿನದ ಘಟನೆಯನ್ನು ಮರೆಯಲು ಹೇಗೆ ಸಾಧ್ಯ ?

"ಅಂದು, ಅಂದರೆ ಆ ಮಾರನೆಯ ದಿನ ನನ್ನ ಜೀವನದ ಒಂದು ಘಟನಾತ್ಮಕ ದಿನ. ಶುಭ ದಿನ. ರಾಜ ನನ್ನವನಾದ ದಿನ ನಾನು ರಾಜನ ಮನೋ ರಾಣಿಯಾದ ದಿನ. ಅಂದು ಸಂಜೆ ಐದರ ವೇಳೆಗೆ ಎಲ್ಲ ಕೆಲಸ

ಮುಗಿಸಿಟ್ಟು, ಅಪ್ಪ ಒರುವುದನ್ನೇ ಕಾದು ಅವರಿಗೆ ಹೇಳಿದೆ. ಅವರೇನೂ ಬೇಡವೆನ್ನಲಿಲ್ಲ. ದಿನಕ್ಕಿಂತ ಚೆನ್ನಾಗಿ ಅಲಂಕರಿಸಿಕೊಂಡೆ. ರಾಜ ತಂದ ಬಿಳೀ ಸೀರೆ ಉಟ್ಟು ಬಿಳಿಯದೆ ಕುಬುಸ ತೊಟ್ಟುಕೊಂಡೆ. ಯಾವುದೋ ತಿಳಿಯದ ಆನಂದ ನನ್ನನ್ನೂ ಉಬ್ಬಿಸುತ್ತಿತ್ತು. ಎಷ್ಟೊತ್ತಿಗೆ ರಾಜನನ್ನು ಕಂಡೇನೋ ಎಂದು ತವಕಿಸುತ್ತಿದ್ದೆ. ಆಫೀಸು ಮುಗಿಸಿ ಬಂದಿದ್ದರೆ ಆರರ ವೇಳೆಗೆ ಬರಬೇಕಿತ್ತು. ಬರಲಿಲ್ಲ ರಾಜ. ಸ್ವಲ್ಪ ನಿರಾಶೆಯಾದಂತಾಯಿತು. ಮನಸ್ಸು ಚಿಕ್ಕದು ಮಾಡಿಕೊಳ್ಳುವ ವೇಳೆಗೆ ನನ್ನ ಮನಸ್ಸರಿತು ಬಂದಂತೆ ಹಾಜರಾದ.

ಒಳ್ಳೆಯ ಉಲ್ಲನ್ನು ಸೂಟು ಹಾಕಿ, ಟೈ ಕಟ್ಟಿ, ಗುಂಗುರು ಕೂದಲನ್ನು ಓರಣವಾಗಿ ಬಾಚಿ, ಟಿಕ್‌ಟಕ್ ಎಂದು ಮನೆಯ ಮೆಟ್ಟಿಲು ಹತ್ತಿದ ರಾಜ ನನ್ನ ಈಗ ಕಂಡಂತಿದೆ. ಒಳಗೆ ಬಂದವನೇ "ರೆಡಿ ?" ಎಂದ. ಒಳಗಡೆಯಿಂದ ನಮ್ಮ ತಂದೆ "ಯಾರು ರಾಜಾನಾ ?" ಎಂದರು. ತಂದೆಯ ಧ್ವನಿ ಕೇಳಿ ಸ್ವಲ್ಪ ಅಳುಕಿದ—"ಅಪ್ಪಂಗೆ ಹೇಳಿದ್ಯಾ ? ಏನಂದ್ರು ?" ಪಿಸುಮಾತಿನಲ್ಲಿ ಕೇಳಿದ. "ರಾಜಾ" ಎನ್ನುತ್ತಾ ಹೊರಕ್ಕೆ ಬಂದ ನಮ್ಮ ತಂದೆ ರಾಜನನ್ನು ನೋಡಿ ಅವಾಕ್ಕಾದರು. ಅದುವರೆಗೂ ರಾಜ ನಮ್ಮ ತಂದೆಯ ಕಣ್ಣಿಗೆ ಒಂದು ಮಗುವಾಗಿದ್ದ. ಅವನ ರೂಪಕ್ಕೆ ಪ್ರಾಧಾನ್ಯಕೊಟ್ಟು ಎಂದೂ ಅವರು ನೋಡಿರಲಿಲ್ಲ. ಅದಕ್ಕಾಗೇ ಆ ದಿನ ಬಂದಿರುವ ಯುವಕ ರಾಜನೆ ? ಎಂದು ಮತ್ತೊಮ್ಮೆ ನುಡಿದರು.

"ಅಪ್ಪ ಯಾಕೆ ಹಾಗೆ ನೋಡ್ತಿದೀರ ? ನಾನು ರಾಜ."

"ಅನುಮಾನ ಬಂತು ರಾಜ. ನಿನ್ನನ್ನು ಒಂದ್ಸಲಾನಾದ್ರೂ ಹೀಗೆ ನೋಡಿರಲಿಲ್ಲ. ಒಳ್ಳೇ Personality ನಿನ್ನದು. ಹುಂ ಇರಲಿ, ಏನು ಹೇಳೋಕ್ಕೆ ಬಂದೆ ಅಂದ್ರೆ....ನೋಡು....ಸರಳಾನ್ನ ಎಲ್ಲೋ ಹೊರಗಡೆ ಕರ್ಕೊಂಡು ಹೋಗ್ತೀನಿ ಅಂದ್ಯಂತೆ. ಜೋಪಾನ, ಬಹಳ ಹೊತ್ತು ಮಾಡ್ಕೊಂಡು ಬರಬೇಡಿ" ಎಂದು ಎಚ್ಚರವಿತ್ತರು." ಎಂದಳು ಸರಳಾ.

ಆ ಮಾತು ಕೇಳಿ ಸುಮಿತ್ರೆಗೆ ಅತ್ಯಂತ ಆಶ್ಚರ್ಯವಾಯಿತು. "ನಿಮ್ಮ ತಂದೆ ಹಾಗೆಂದರೆ ? ಅಂತಹ ತಂದೆಗಳನ್ನೇ ನೋಡಿಲ್ಲ. ಹಾಗೆಲ್ಲಾ ಹೋಗ ಬಾರದಮ್ಮ ಅಂತ ಉಪದೇಶ ಕೊಡ್ತಾರೆಯೋ ಹೊರತು ಮಕ್ಕಳ ಮನಸ್ಸು

ಅರ್ಥಮಾಡಿಕೊಳ್ಳೊ, ತಾಯಿ\ತಂದೇರು ಅಪರೂಪ. ಹುಂ ಆಮೇಲೆ ?" ಎಂದು ಕಥೆಗೆ ಎಳೆದಳು. ಸರಳ ಮುಂದುವರೆಸಿದಳು,

"ನಾವಿಬ್ರೂ ಹೊರಟ್ವಿ. ಎಲ್ಲಿಗೆ ಎಂದು ನಾನು ಕೇಳಲಿಲ್ಲ. ಅವನು ಹೇಳಲೂ ಇಲ್ಲ. ಆಟೋರಿಕ್ಷಾದಲ್ಲಿ ಕೂತು, ಲಾಲ್‌ಬಾಗ್‌ನ ಬಳಿ ಇಳಿದೆವು, ಎಷ್ಟು ಬಾರಿ ನೋಡಿರಲಿಲ್ಲ ನಾನು ಆ ತೋಟಾನ ! ಆದರೂ ಅಂದು ಪ್ರತಿಯೊಂದು ಪದಾರ್ಥಕ್ಕೂ ಹೊಸ ಅರ್ಥ ಕಾಣುತ್ತಿತ್ತು. ಒಂದೊಂದು ವಸ್ತುವೂ ನನ್ನ ಹೃದಯದ ತಂತಿಯನ್ನು ಮೀಟುತ್ತಿತ್ತು, ರಾಜನ ಸನಿಯದಿಂದ, ಓಹ್ ! ಆ ಅನುಭವ !

ನಿಧಾನವಾಗಿ ಅದೂ ಇದೂ ಮಾತನಾಡುತ್ತಾ ಬಂದು ಮರದ ಕೆಳಗೆ ಹುಲುಸಾಗಿ ಬೆಳೆದಿದ್ದ ಹುಲ್ಲುಮೇಲೆ ಕೂತೆವು. ನನ್ನ ಭಾವನೆಗಳು ಮಾತಿಗೆ ಸಿಲುಕದವು. ಏನೂ ಮಾತನಾಡಲಿಲ್ಲ. ನಾನು ತಲೆ ತಗ್ಗಿಸಿ ಕುಳಿತಿದ್ದವಳು ಅವನು ಏನು ಮಾಡುತ್ತಿರಬಹುದೆಂದು ತಲೆಯೆತ್ತಿ ನೋಡಿದೆ. ಹಿಂದಿನ ಸಂಜೆಯಂತೆ ನನ್ನನ್ನೇ ನೋಡುತ್ತಿದ್ದ. ಅದೇ ಮೆಲುನಗೆ, ಅದೇ ಸರ್ವವ್ಯಾಪಕ ದೃಷ್ಟಿ. ಕೂಡಲೆ ತಲೆ ತಗ್ಗಿಸಿದೆ. ಮುಂದಕ್ಕೆ ಬಾಗಿ ಕೇಳಿದ—"ನನ್ನನ್ನು ಕಂಡರೆ ನಾಚಿಕೆಯೋ ಸರೂ ?" ಕೇಳಬೇಕೇ ಆ ಪ್ರಶ್ನೆ. ನನ್ನ ಮುಖವೆಲ್ಲಾ ಕೆಂಪೇರಿತ್ತು. ಮೈ ಎಲ್ಲಾ ಪುಳಕಿತವಾಗುತ್ತಿತ್ತು. ಮತ್ತು ಹತ್ತಿರ ಬಂದು ಕೇಳಿದ.

"ಮಾತನಾಡುವುದಿಲ್ಲವೇ ಸರೂ ?"

"ಏನು ಮಾತಾಡಲಿ ? ನೀವೇ ಮಾತನಾಡಿ" ಎಂದೆ. ಅವನಿಗೂ ಅದೇ ಪ್ರಶ್ನೆ. ಏನು ಮಾತನಾಡಲಿ ? ಕಡೆಗೊಮ್ಮೆ ಕೇಳಿದ "ನಿನಗೆ ಬಿಳುಪೆಂದರೆ ಯಾಕೆ ಇಷ್ಟ ಸರಳಾ ?"

"ಅದು ಪವಿತ್ರತೆಯ ಕುರುಹು, ನನಗಿಷ್ಟ."

"ಹಾಗಾದರೆ ಬಣ್ಣಗಳನ್ನು ಇಷ್ಟಪಡುವವರು ಅಪವಿತ್ರರೆ ? ನಾನು ಅಪವಿತ್ರನೆ ?"

"ಛೆ ! ನಾನು ಹಾಗನ್ನಲಿಲ್ಲ........ಅವರವರ ಇಷ್ಟ. ನೀಲಿ ಬಣ್ಣ ಶಾಂತತೆಗೂ, ಹಳದಿ ಅಸೂಯೆಗೂ, ಹಸಿರು ಪ್ರೇಮಕ್ಕೂ, ಬಿಳುಪು

ಪವಿತ್ರತೆಗೂ, ಹೀಗೆ ಒಂದೊಂದಂದು ಬಣ್ಣ ಒಂದೊಂದು ಗುಣದ ಕುರುಹಾಗಿ ಹೇಳ್ತಾರೆ, ಅಷ್ಟೆ."

"ಹಾಗಾದರೆ ನಿನಗೆ ಹಸಿರು ಇಷ್ಟವಿಲ್ಲವೆ ?" ಎಂದ. ನಾನು ಮತ್ತೆ ನಾಚಿದೆ. ಅವನು ಹಸಿರು ಎಂದು ಕೇಳಿದುದು ಪ್ರೇಮ ಎಂಬರ್ಥದಲ್ಲಿ. ಅದು ಅವನು ಕೇಳಿದ ರೀತಿಯಲ್ಲೇ ತಿಳಿಯಿತು.

"ಇಷ್ಟವೇ ಇದೆ. ಆದರೂ ಬಿಳುಪಿಗೆ ಪ್ರಥಮ ಸ್ಥಾನ" ಅಂದೆ.'

"ಹಸಿರಿಗೆ ಎರಡನೆ ಸ್ಥಾನ ಅನ್ನು" ಮತ್ತೊಮ್ಮೆ ಅದೇ ರೀತಿ. ನಾನು ಮಾತನಾಡಲಿಲ್ಲ. ಆಗ ಪಿಸುಮಾತಿಗೂ ಮೃದುವಾದ ಧ್ವನಿಯಲ್ಲಿ ರಾಜ ಕೇಳಿದ "ಸರೂ ನನ್ನ ಕಂಡರೆ ನಿನಗಿಷ್ಟವೆ ?"

"ಇಷ್ಟವಿಲ್ಲವೆ, ಸರೂ ?'

"ಮಾತನಾಡು ಸರೂ."

ನಾನು ಅಷ್ಟೇ ಮೃದು ಧ್ವನಿಯಲ್ಲಿ "ರಾಜ, ನಿಮ್ಮನ್ನು ಕಂಡರೆ ನನಗಿಷ್ಟವಲ್ಲ. ಪ್ರಾಣ" ಎಂದೆ.

ಉನ್ಮತ್ತತೆಯ ಅಮಲಿನಲ್ಲಿ ಹತ್ತಿರ ಬಂದು ನನ್ನ ಸುತ್ತ ಕೈ ಹಾಕಿ ಒರಗಿ ಕುಳಿತ. ಒಂದೆರಡು ನಿಮಿಷ ಉರುಳಿ ಹೋಯಿತು.

"ನನಗೆ ಬಹಳ ತಲೆನೋವು ಸರಳಾ."

"ಇಷ್ಟೊತ್ತು ಸರಿಯಾಗಿದ್ದಿರಿ."

"ಅದೇನು ಬಹುವಚನ ಪ್ರಯೋಗ ? ಅದು ಯಾವಾಗಲಿಂದ ?"

"ನಿನ್ನೆಯ ಸಂಜೆ ನೀವು ನನ್ನನ್ನು ನೋಡಿದಾಗಲಿಂದ."

"ಹಾಗಾದರೆ ನಾನು ಸಹ ನಿನ್ನನ್ನು...."

"ಊಹುಂ. ನೀವು ದೊಡ್ಡವರು. ನೀವು ನನ್ನನ್ನು 'ಸರೂ' ಎನ್ನಬಹುದು.

"ಸರೂ" ಎಂದ ಕೂಡಲೆ.

"ಏನು ?"

"ಸರೂ ಅನ್ನಬಹುದು ಅಂದ್ಯಲ್ಲಾ, ಅಂದೆ" ಎಂದು ಕೆನ್ನೆ ಸವರಿದ.

"ನಿಜವಾಗಿಯೂ ನಿಮ್ಗೆ ತಲೆನೋವೆ ?"

"ಬೇಕಾದರೆ ಮುಟ್ಟಿ ನೋಡು" ಎಂದು ನನ್ನ ಕೈಯನ್ನು ತನ್ನ ಕೈಹಿಡಿದು ಹಣೆಗೆ ಒತ್ತಿಕೊಂಡ. ಅವನ ಹಣೆ ಸುಡುತ್ತಿತ್ತು. ಗಾಬರಿಯಾದೆ ನಾನು.

"ಮನೆಗೆ ಹೋಗೋಣ ರಾಜ" ಎಂದೆ. ಜೋರಾಗಿ ನಕ್ಕುಬಿಟ್ಟ.

"ತಲೆನೋವಲ್ಲ ಸರೂ. ಅದು ಹಾಗೇನೇ."

ಅದು ಹಾಗೇನೆ ಅಂದರೆ? ಅದು ಏಕೆ ಹಾಗೆ ? ಅವನ ಮೈ ಯಾವಾಗಲೂ ಬಿಸಿ ಎಂದೆ ? ನನಗೆ ತಿಳಿಯಲಿಲ್ಲ. ನನ್ನ ಮನಸ್ಸಿಗೆ ಯಾವುದೂ ವಿಶದವಾಗಲಿಲ್ಲ. ನನ್ನ ಕೈಯನ್ನು ತನ್ನ ಕೈಯಲ್ಲೇ ಹಿಡಿದು ಮೃದುವಾಗಿ ಅದುಮಿದ.

"ನಿನ್ನ ಕೈ ಎಷ್ಟು ತಣ್ಣಗಿದೆ. ಹಣೆಗೆ ಹಿಡಿದಾಗ ಹಾಯೆನಿಸುತ್ತಿತ್ತು" ಎಂದ.

"ಹಾಗಾದರೆ ಹಣೆ ಒತ್ತಲೇನು ?" ಅವನಿಗೆ ನಿಜವಾಗಲೂ ತಲೆ ನೋವೇ ಇರಬೇಕು. ಹೇಳಲು ಹಿಂತೆಗೆಯುತ್ತಿದ್ದಾನೆ ಎಂದು ಬಗೆದೆ.

"ನಾನು ತಲೆನೋವು ಬಂದರೆ ಮನೆಯಲ್ಲಿ ಏನು ಮಾಡುತ್ತೇನೆ ಗೊತ್ತಾ ?"

"ಏನು ಮಾಡುತ್ತೀರಿ ?"

"ಅಮ್ಮನ ತೊಡೆಯ ಮೇಲೆ ಹೀಗೆ ಮಾಡುತ್ತೇನೆ" ಎಂದು ನಿರಾಯಾಸವಾಗಿ ಸಂಕೋಚವಿಲ್ಲದೆ ನನ್ನ ತೊಡೆಯ ಮೇಲೆ ಮಲಗಿದ. ಓಹ್ ! ಆ ಅನುಭವ ! ಅದು ನಿನಗರ್ಥವಾಗುತ್ತೆ ಸುಮಿತ್ರಾ, ಪ್ರೇಮದಲ್ಲಿ ಸಿಲುಕಿರುವ ಪ್ರತಿಯೊಬ್ಬರಿಗೂ ಅದರ ಅಂಚನೆಯಿದ್ದೇ ಇರುತ್ತದೆ. ನನಗರಿವಿಲ್ಲದಂತೆಯೇ ನನ್ನ ಬೆರಳುಗಳು ಅವನ ಕ್ರಾಪಿನಲ್ಲಾಡುತ್ತಿದ್ದುವು. ಅವನು ನನ್ನ ಸೆರಗಿನ ಮೇಲೆ ಬಂದಿದ್ದ ನನ್ನ ಕೊರಳ ಚೈನನ್ನು ಬೆರಳಿಗೆ ಸುತ್ತಿಕೊಂಡು ಎಲ್ಲಿಯೋ ನೋಡುತ್ತಿದ್ದ. ಅವನ ದೃಷ್ಟಿಯನ್ನೇ ಹಿಂಬಾಲಿಸಿ ನೋಡಿದೆ ಎದುರು ಮರದ ಮೇಲೆ ಯಾವುದೋ ಎರಡು ಹಕ್ಕಿಗಳು ಚಕ್ಕಂದ ವಾಡುತ್ತಿದ್ದುವು. ಆ ಹಕ್ಕಿಗಳನ್ನೇ ನೋಡುತ್ತಾ ಅವನೆಂದ ಉನ್ಮಾದ ತುಂಬಿದ ದನಿಯಲ್ಲಿ "ಆ ಹಕ್ಕಿಗಳನ್ನು ನೋಡಿದೆಯೆ ಸರಳಾ ?"

"ನೋಡ್ತಾ ಇದ್ದೀನಿ."

"ಅದೇನು ಮಾತಾಡ್ತಾ ಇದೆ. ಅಂತ ಗೊತ್ತಾಯ್ತು ?"

"ಹಕ್ಕಿ ಭಾಷೆ ಗೊತ್ತೇನು ನಿಮಗೆ ?"

"ಓ ಗೊತ್ತು. ಹೇಳ್ಲಾ ? ಗಂಡು ಹಕ್ಕಿ ಹೇಳ್ತಾ ಇದೆ ಹೆಣ್ಣು ಹಕ್ಕಿಗೆ, ನಿನ್ನ ನಾನು ತುಂಬಾ ಪ್ರೀತಿಸ್ತೀನಿಂತ" ಎಂದ ರಾಜ.

"ಹೆಣ್ಣು ಹಕ್ಕಿ ಏನು ಹೇಳ್ತಾ ಇದೆ ಅಂತ ನಂಗೊತ್ತು."

"ಏನಂತಾ ಇದೆ ?" ಆಸೆಯಿಂದ ನನ್ನ ಕಡೆ ನೋಡಿದ. ನನ್ನ ಹೃದಯ ಪ್ರೇಮದ ಉದ್ವೇಗದಿಂದ ತುಂಬಿತ್ತು ಮಾತೇ ಹೊರಡಲಿಲ್ಲ. ಬಹಳ ಪ್ರಯಾಸದಿಂದ ಉತ್ತರಿಸಿದೆ.

"ನಿಮಗೇ ಗೊತ್ತಲ್ಲ ಹಕ್ಕಿ ಭಾಷೆ, ಹೇಳಿ" ಎಂದೆ.

"ಹೇಳ್ಲಾ ? ನಾನೂ ನಿನ್ನ ತುಂಬಾ ಪ್ರೀತಿಸ್ತೀನಿಂತ ಹೇಳ್ತಾ ಇದೆ. ಹೌದಾ ?"

"ಹೇಗೆ ಗೊತ್ತಾಯಿತು ನಿಮಗೆ ನನ್ನ ಹೃದಯ" ಎಂದುಬಿಟ್ಟೆ ಆತುರವಾಗಿ.

"ನಾನು ಹಕ್ಕಿಯ ವಿಷಯ ಹೇಳಿದೆ, ಓ ನಿನ್ನ ಹೃದಯಾನೂ ಅದನ್ನೇ ಹೇಳುತ್ತೇನು ?" ಅವರು ಹೇಳುವ ಮುನ್ನವೇ ನಾನು ಹೃದಯವನ್ನು ಬಹಿರಂಗಪಡಿಸಿದೆನಲ್ಲಾ ಎಂದು ನಾಚಿಕೊಂಡೆ, ಮುಖ ಕೆಂಪಾಯಿತು. ಅವನ ಕಡೆ ನೋಡದೆ ಎಲ್ಲಿಯೋ ನೋಡಿದೆ.

"ಎರಡು ಗುಲಾಬಿಗಳು ಎಷ್ಟು ಚೆನ್ನಾಗಿವೆ" ಎಂದ ಕೂಡಲೆ ಸುತ್ತಲೂ ಎಲ್ಲೂ ಗುಲಾಬಿ ಗಿಡಗಳೇ ಕಾಣಲಿಲ್ಲ. ಅದಕ್ಕೆ ನಾನು "ಎಲ್ಲಿ" ಎಂದು ಕೇಳಿದೆ.

"ಇಲ್ಲಿ" ಎಂದು ತನ್ನೆರಡು ಕೈಗಳಿಂದ ನನ್ನೆರಡು ಕೆನ್ನೆಗಳನ್ನು ಹಿಂಡಿದ. ಮತ್ತೂ ನಾಚಿದೆ. ಅವನು ಏನು ಮಾಡಿದರೂ ಸುಮ್ಮನಿರುತ್ತಿದ್ದ ನನ್ನ ಬಗೆಗೇ ಆಶ್ಚರ್ಯವಾಯಿತು.

"ನೀನು ನಾಚಿಕೊಂಡರೆ ಎಷ್ಟು ಚೆನ್ನಾಗಿರ್ತೀ ಸರಳಾ" ನನ್ನ ಸರದೊಂದಿಗೆ ಆಡ್ತಾ ಹೇಳಿದ.

"ನಿಮ್ಮಷ್ಟು ?"

"ಈ ಬಿಳೀ ಉಡುಪಿನಲ್ಲಿ ನೀನಿವತ್ತು ಎಷ್ಟು ಚೆನ್ನಾಗಿದ್ದೀ ಸರೂ" ತೊಡೆಯ ಮೇಲಿಂದ ತಲೆ ಸ್ವಲ್ಪ ಎತ್ತಿ ಉಸುರಿದ...."ವಾಯುದೇವನ ಮೇಲೆ ನನಗೆ ಎಷ್ಟು ಅಸೂಯೆ ಆಗ್ತಾ ಇದೆ, ಗೊತ್ತಾ ?"

ಏಕೆ ಏನ್ನುವಂತೆ ನೋಡಿದೆ. ಮಂದಾನಿಲ ಬೀಸುತ್ತಿತ್ತು, ಮರದ ಎಲ್ಲಾ ಎಲೆಗಳೂ ಅಲುಗಾಡುತ್ತಿದ್ದವು. ಬಳ್ಳಿಗಳು ಅಲುಗಿ ಅಲುಗಿ ಮರಗಳನ್ನು ಬಿಗಿಯಾಗಿ ಸುತ್ತಿಕೊಳ್ಳುತ್ತಿದ್ದವು. ನನ್ನ ಸೆರಗು ಸ್ವಲ್ಪ ಜಾರಿತ್ತು. ಮುಂಗುರುಳು ಹಣೆಯ ಮೇಲೆ ಹಾರುತ್ತಿತ್ತು. ಎವೆಯಿಕ್ಕದೆ ನನ್ನನ್ನೇ ನೋಡುತ್ತಿದ್ದ ರಾಜ,

"ಕಾಣದ ವ್ಯಕ್ತಿಯ ಮೇಲೆ ಅಸೂಯೆ ಯಾಕೆ ?" ಎಂದೆ ಅವನ ಕಿವಿಯ ಬಳಿ ಬಗ್ಗಿ.

"ಅವನಿಗೆ ನಿನ್ನ ಮೇಲಿರುವ ಅಧಿಕಾರ ನನಗಿಲ್ಲವಲ್ಲಾ ಎಂದು."

"ಅರ್ಥವಾಗಲಿಲ್ಲ ಎಂದೆ" ಪೂರ್ಣ ಅರ್ಥವಾಗಿದ್ದರೂ.

"ನಿನ್ನ ನುಣುಪಿನ ಕೆನ್ನೆ, ಮುದ್ದಾದ ಮೂಗು, ಭಾರವಾದ ಕೊರಳು. ಎಲ್ಲವನ್ನೂ ಅಪ್ಪಿ ಮುತ್ತಿಟ್ಟು ಹೋಗುತ್ತಿದ್ದಾನಲ್ಲಾ ಅವನು...."

"ಅವನಿಗೆ ಆ ಅಧಿಕಾರ ನಾನೇನೂ ಕೊಡಲಿಲ್ಲವಲ್ಲಾ."

"ಮತ್ತೆ ?"

"ಅವನೇ ತೆಗೆದುಕೊಂಡ. ಅವನಿಗೆ ನನ್ನ ಮೇಲೆ ಬಹಳ ಪ್ರೇಮ ಆದುದರಿಂದ"

"ಅವನಿಗಿಂತಲೂ ಹೆಚ್ಚು ನನ್ಗೆ ನಿನ್ಮೇಲೆ ಪ್ರೇಮವಿದೆ ಸರೂ" ಉದ್ವೇಗದಿಂದ ನುಡಿದ.

"ರಾಜ" ಎಂದೆ. ನನ್ನ ಮುಖ ಅವನ ಮುಖಕ್ಕೆ ಹತ್ತಿರವಿತ್ತು.

"ಸರೂ" ಎಂದು ತನ್ನ ಕೈಗಳಿಂದ ನನ್ನ ಮುಖವನ್ನು ಇನ್ನೂ ಹತ್ತಿರಕ್ಕೆಳೆದುಕೊಂಡು ನನ್ನ ತುಟಿಗಳನ್ನು ತನ್ನ ಹಣೆ, ಕಣ್ಣುಗಳ ಮೇಲೆ ಒತ್ತಿಕೊಂಡ. ನಾನು ಬಾಗಿದಾಗ ನನ್ನ ಸರ ಅವನ ಬಾಯ ಮೇಲೆ ಬಿತ್ತು. ಅದನ್ನು ತನ್ನ ತುಟಿಗಳಿಂದ ಒತ್ತಿ ಹಿಡಿದು "ನಾನೇ ಸರವಾದರೂ ಆಗಿದ್ದಿದ್ದರೆ, ಸದಾ ಕಾಲವೂ ನಿನ್ನ ಕೊರಳಲ್ಲೇ ಇರಬಹುದಿತ್ತು" ಎಂದು ನಿಟ್ಟುಸಿರು ಬಿಟ್ಟ.

ಅವನ ಕಣ್ಣಿನ ರೆಪ್ಪೆಗಳೊಂದಿಗೆ ತುಟಿಗಳಿಂದ ಆಡುತ್ತಿದ್ದ ನಾನು ಮೃದುವಾಗಿ, ನೀವು ನನ್ನ ಹೃದಯ ಸಿಂಹಾಸನದ ರಾಜನಾಗಿರೋವಾಗ ಸದಾಕಾಲ ನನ್ನ ಬಳಿ ಇರದೆ ಎಲ್ಲಿ ಹೋಗುತ್ತೀರಿ ? ನಿಮ್ಮನ್ನು ಬಿಡುವವ ರಾರು ?" ಎಂದು ರಮಿಸಿದೆ.

"ನಿಜವಾಗಿ ನನ್ನ ಪ್ರೇಮಿಸ್ತೀಯಾ ಸರಳಾ ?"

"ಆ ಪ್ರಶ್ನೆ ಕೇಳಬೇಕೆ ? ನಾನು ಎಂದಿನಿಂದಲೋ ನಿಮ್ಮವಳು ರಾಜ."

"ಓದಿನಲ್ಲಿ ನಾನೂ ನೀನೂ ಒಂದೇ ಆಗ್ತೀವೆ."

"ಪ್ರೇಮಕ್ಕೆ ಓದಿನ ಸಂಬಂಧವಿಲ್ಲ,"

"ನನಗೇನೂ ದೊಡ್ಡ ಕೆಲಸವಿಲ್ಲ,"

"ನಾನೂ ಬಡವರ ಮನೆಯ ಹುಡುಗಿ."

"ಬಡವರಾದರೂ ಭಾಗ್ಯವಂತರಾಗುತ್ತಿರುವವರು ನೀವು. ಅಣ್ಣಂದಿ ರೆಲ್ಲಾ ದೊಡ್ಡ ದೊಡ್ಡ ಉದ್ಯೋಗ ಮಾಡುತ್ತಿರುವವರು, ನನ್ನನ್ನು ಅಳಿಯ ನನ್ನಾಗಿ ಒಪ್ಪಿಕೊಳ್ಳುವರೆ ?"

"ಭಾಗ್ಯವಂತರಾದ ಮಾತ್ರಕ್ಕೆ ಹೃದಯವೇನೂ ಚಿಕ್ಕದಾಗುವುದಿಲ್ಲ. ಮನಸ್ಸೂ ಮನಸ್ಸು ಕಲೆತು ಪ್ರೇಮಿಸುವವರನ್ನು ಬೇರೆ ಮಾಡುವಷ್ಟು ಅಲ್ಪ ಬುದ್ಧಿಯವರಲ್ಲ ನಮ್ಮ ಅಣ್ಣಂದಿರು. ಆದರೆ...."

"ಏನು ಆದರೆ ?"

"ನಿಮ್ಮ ಮನೆಯವರ ಪರಿಚಯವೇ ನಮಗಿಲ್ಲ. ನೀವು ಇಷ್ಟು ವರ್ಷ ಗಳಿಂದ ನಮ್ಮವರೇ ಆಗಿದ್ದರೂ, ನಿಮ್ಮ ತಾಯಿ-ತಂದೆ. ಅಣ್ಣ-ಅಕ್ಕ. ನಿಮ್ಮ ಸುಂದರ ರೂಪಿಗೆ ತಕ್ಕಂತವಳು ನಾನಲ್ಲ ಎಂದೆಣಿಸಿದರೆ....", ತನ್ನ ದೊಡ್ಡ ಕೈಯಿಂದ ನನ್ನ ಬಾಯಿ ಮುಚ್ಚಿದ.

"ನಿನ್ನನ್ನು ಪ್ರೀತಿಸುತ್ತಿರುವವನು ನಾನು, ನಮ್ಮ ಮನೆಯವರಲ್ಲ". ಈ ಮಾತು ನನಗೆ ಧೈರ್ಯಕೊಟ್ಟಿತು ನನ್ನ ಹೃದಯ. "ಕೈ ತೆಗೆಯಿರಿ" ಎಂದು ಅರ್ಥಂಬರ್ಥ ಹೇಳಿದೆ.

"ಬೇಡ. ಕೈ ತೆಗೆದರೆ ಕೆಟ್ಟ ಮಾತಾಡುತ್ತೆ ಈ ಪುಟ್ಟ ಬಾಯಿ. ಸಾಧ್ಯ ವಿದ್ದಿದ್ದರೆ ನನ್ನ ಬಾಯಿಂದಲೇ ಮುಚ್ಚಿಬಿಡುತ್ತಿದ್ದೆ ಈ ಕೆಟ್ಟ ಬಾಯನ್ನು" ಎಂದು ಕೈ ತೆಗೆದ.

"ಸಾಧ್ಯ ಏಕಿಲ್ಲ ?" ಕುತೋದ್ಯದಿಂದ ಕೇಳಿದೆ.

"ಇಲ್ಲ. ಅದಕ್ಕೆ ನನಗೀಗಲೇ ಅಧಿಕಾರವಿಲ್ಲ" ಎಂದ.

ಎಷ್ಟೋ ಹೊತ್ತು ಅವನು ಹಾಗೆಯೇ ಮಲಗಿದ್ದ. ನಾನು ಹಾಗೇ ಕುಳಿತಿದ್ದೆ. ಬರುಬರುತ್ತಾ ಕತ್ತಲು ಹೆಚ್ಚುತ್ತಾ ಬಂತು. ಗಾಳಿಯಲ್ಲಿ ಶೀತ ಲತೆಯೂ ಹೆಚ್ಚುತ್ತಿತ್ತು,

"ಎಷ್ಟು ಹಿತವಾಗಿದೆ ತಂಗಾಳಿ, ಹಾಗೇ ನಿನ್ನ ಸನಿಯ, ನನಗೆ ಬುದ್ಧಿ ತಿಳಿದಾಗಿನಿಂದ ನನ್ನ ಜೀವಕ್ಕೆ ಅಮೃತಸಿಂಚನ ಮಾಡುತ್ತಿರೋವ್ರು ನೀನೂ ಮತ್ತು ನಿಮ್ಮ ಮನೇವ್ರು."

"ಒಂದು ಪ್ರಶ್ನೆ ರಾಜ. ನಮ್ಮ ವಿಷಯ ನಿಮ್ಮ ಮನೆಯಲ್ಲಿ ಹೇಳಿ ದ್ದೀರಾ ?"

"ಯಾಕೆ ಹಾಗೆ ಕೇಳ್ತಿ ? ಬೇಕಾದಷ್ಟು ಸಲ ಹೇಳಿದ್ದೀನಿ, ಆದರೆ ನಮ್ಮಿಬ್ಬರ ವಿಷಯ ಮಾತ್ರ ಇನ್ನೂ ಹೇಳೋ ಸಂದರ್ಭ ಬರಲಿಲ್ಲ. ಯಾಕೇಂತೀಯಾ ? ನನ್ನ ಪ್ರೇಮ ಒಂದು ವೇಳೆ ಒಕ್ಕಡೆಯದಿರಬಹುದು ನಿನ್ನ ಮನಸ್ಸು ತಿಳಿಯದೆ ಏನೂ ಹೇಳಬಾರದೂಂತ ಇದ್ದೆ."

ತಮಾಷೆಯಾಗಿ ಕೇಳಿದೆ ನಾನು "ಈಗ ತಿಳಿಯಿತೇನು ನನ್ನ ಮನಸ್ಸು ?"

"ಇಲ್ಲ. ಏನನ್ನುತ್ತೆ ಮನಸ್ಸು ?" ಎಂದು ನನ್ನ ಎದೆಯ ಮೇಲೆ ಕೈಯಿಟ್ಟ. "ಗೊತ್ತಿಲ್ಲ" ಅದನ್ನೇ ಕೇಳಿ ಎಂದೆ. ಕೇಳಿದಂತೆ ಎದೆಯ ಬಳಿ ಕಿವಿಯಿರಿಸಿದ—"ಹೇಳ್ತಾ, ಹೇಳೇಬಿಡ್ತಾ ? ರಾಜ. ರಾಜ. ರಾಜ. ಅಂತಾ ಇದೆ." ನಾನು ತುಂಬುನಗೆ ನಕ್ಕೆ. ತೃಪ್ತಿಯಿಂದ ನಕ್ಕೆ, ಕೂಡಲೇ ಒಂದು ಸಂದೇಹ ನನ್ನನ್ನಾವರಿಸಿತು. "ಎಲ್ಲಾ ವಿಷಯದಲ್ಲಿ ನಮ್ಮ ಜೋಡಿ ಸರಿಯೇ ಆದರೂ........"

"ಯಾವಾಗಲೂ ರೂ, ರೇಗಳಲ್ಲಿ ನಿಲ್ಲಿಸಬಾರದ್ದು. ಹೇಳಿಬಿಡು."

"ಇಲ್ಲ, ಏನಿಲ್ಲ ಬಿಡಿ."

"ನೋಡಿದ್ಯಾ ಮತ್ತೆ. ಹೇಳು ಸರೂ, ಅರ್ಧದಲ್ಲಿಯೇ ನಿಲ್ಲಿಸಿದರೆ ಹೇಗೆ ಸರಳಾ. ಅದೂ ಸಂದೇಹ ಸಂಶಯಗಳ ವಿಚಾರದಲ್ಲಿ ಮೂಗೆಳೆಯ ಬಾರ್ದು." ಯಾತನೆಯಿತ್ತು ಅವನ ಧ್ವನಿಯಲ್ಲಿ.

"ಈ ಮೂಗು ಇಷ್ಟು ಉದ್ದವಾಗಿ ಚೆನ್ನಾಗಿರುವಾಗ ಎಳೀದೇ ಇರೋದು ಹೇಗೆ? ಅದೇ ನನ್ನ ಸಂದೇಹ" ಎಂದು ಅವನ ಮೂಗನ್ನು ಹಿಡಿದುಕೊಂಡೆ. ?

"ಅಂದರೆ ?"

"ಅಂದರೆ, ನಿಮ್ಮ ರೂಪಿಗೆ ನಾನು ಸರಿಹೋಗೋಲ್ಲ. ಅಷ್ಟೆ."

"ಸರೂ, ಮಾತು ಹೇಳ್ತೀನಿ ತಿಳ್ಕೊ. ನೀ ಹೇಗಿದ್ರೂ ನನಗೆ ಚೆನ್ನ. ನೀನು ಚೆನ್ನಾಗಿಲ್ಲ ಅಂತ ಯಾರು ನಿನ್ನ ಮನಸ್ಸಿಗೆ ತುಂಬಿದ್ದಾರೋ ಏನೋ. ನೀನು ನಿಜವಾಗೂ ಚೆನ್ನಾಗಿದ್ದೀ ಸರಳಾ. ನಿನ್ನ ಮೂಗು, ಕಣ್ಣು, ಕೆನ್ನೆ.... ನಂಗೆ ಕವಿಗಳ ಹಾಗೆ ವರ್ಣಿಸೋಕ್ಕೆ ಬರೋಲ್ಲ. ಒಟ್ಟಿನಲ್ಲಿ ನೀನು ರೂಪವಂತೆ ಸರೂ."

"ಕೂಡಿದವರಿಗೆ ಕೋಡುಗ ಮುದ್ದು ಅಲ್ವಾ?" ನಗೆ ಚಾಟಿಕೆ ಮಾಡಿದೆ.

"ಕೋಡಗ ಅಲ್ಲ. ಕೋಡಗಿ, ಕೊಡಗದ ಸ್ತ್ರೀಲಿಂಗ" ಎಂದು ಕೆನ್ನೆ ಹಿಂಡಿದ ರಾಜ.

ಮಲಗಿದ್ದವನು ನನ್ನ ತೊಡೆಯ ಮೇಲಿಂದ ಏಳಲೇ ಇಲ್ಲ. ಹಾಗೆಯೇ ಕೇಳಿದ--"ಮನೇಗೆ ಹೋಗೋದು ಬೇಡವೇನು?

"ಬೇಡ."

"ಮತ್ತೆ?"

"ನೀವು ನನ್ನ ತೊಡೆಯ ಮೇಲೆ ಹೀಗೇ ಮಲಗಿರಿ. ನಾನು ಹೀಗೇ ಕೂಳಿತಿರ್ತೀನಿ. ಯುಗ ಯುಗಗಳು ಕಳೆದುಹೋದ್ರೂ ನಂಗಷ್ಟು ಸಿಕ್ಕಿದ್ರೆ ಸಾಕು."

"ಅಮ್ಮ ! ಹೊಟ್ಟೆ !" ಎಂದು ನನ್ನ ಹೊಟ್ಟೆಯ ಮೇಲೆ ಕೈಯಿಟ್ಟ.

"ಹೊಟ್ಟೆ ಇದ್ದೇ ಇದೆ, ಪ್ರೇಮದ ಮುಂದೆ ಅವೆಲ್ಲಾ ಏಕೆ ? ಎಂದೆ.

"ಹೊಟ್ಟೇನೂ ಬೇಕು ಮರಿ". ಎಂದು ಅವನೆಂದಾಗ ಎಂಟು ಗಂಟೆ ಹೊಡೆಯಿತು ದೂರದಲ್ಲಿ.

"ನೋಡು ನಾ ಹೇಳಿದ್ದು ನಿಜವಂತೆ ಗಂಟೆ ಹೊಡೆದಿದೆ."

"ಅಲ್ಲ. ಆಗ ನಾನು ಮನಸ್ಸಿನಲ್ಲಿ ಪ್ರೇಮವೇ ದೈವ. ನಮ್ಮ ಪ್ರೇಮ ಶಾಶ್ವತವಾಗಿ ನಿಲ್ಲಲಿ ಎಂದುಕೊಳ್ಳುತ್ತಿದ್ದೆ. ಗಂಟೆ ಹೊಡೆಯಿತು."

"ಹಾಗಾದ್ರೆ ಎರಡೂ ನಿಜ. ಹೋಗೋಣ ಏಳು."

"ಏಳಬೇಕಾದುದು ನೀವೋ, ನಾನೋ?"

"ನೀನೇ. ನನಗೆ ಬೇಕಾದ್ದು ನೀ ಕೊಟ್ರೆ ನಾ ಏಳ್ತೀನಿ. ಆಗ ನೀನೇ ಎದ್ದ ಹಾಗೆ."

"ನಿಮಗೆ ಬೇಕಾದ್ದು ಇದು ತಾನೇ?" ಎಂದು ಪ್ರೀತಿಯಿಂದ ಕೆನ್ನೆಗೆ ಹೊಡೆದೆ. "ಅಲ್ಲ ಇದು" ಎಂದು ನನ್ನ ತಲೆಯನ್ನು ತನ್ನ ಮುಖದ ಕಡೆ ಎಳೆದುಕೊಂಡು ಮುದ್ದಿಸಿದ, ಹಾಗೆಯೇ ಎದ್ದು ಕುಳಿತ–"ನನ್ನ ಕ್ರಾಪೆಲ್ಲಾ ಕೆಡಿಸಿಬಿಟ್ಟಿದ್ದೀ. ಈಗ ನಾನು ಮನೇಗೆ ಬರೋದು ಹೇಗೆ?" ಎಂದು ಅತ್ತಂತೆ ಮಾಡಿದ. ಜೇಬಿನಲ್ಲಿದ್ದ ಬಾಚಣಿಕೆಯಿಂದ ಹೇಗೋ ಬಾಚಿಕೊಂಡ ಇಬ್ಬರೂ ಕೈ ಕೈ ಹಿಡಿದು ಗೇಟಿನವರೆಗೆ ಬಂದು ಮತ್ತೆ ಆಟೋದಲ್ಲಿ ಮನೆ ತಲುಪಿದೆವು. ಅಪ್ಪ ನೆನಸಿದ ಸಮಯಕ್ಕಿಂತ ಮುಂಚಿತವಾಗಿಯೇ ಮನೆ ತಲುಪಿದ್ದೆವಾದ್ದರಿಂದ ಅವರಿಗೆ ಸಮಾಧಾನವಾಯಿತು.

ಆ ದಿನ ನನ್ನ ಮಾನಸಿಕ ಮದುವೆ ನಡೆದು ಹೋಯಿತು, ಸುಮಿತ್ರಾ. ನನ್ನನ್ನು ರಾಜನ ಮಡದಿಯ ಸ್ಥಾನದಲ್ಲಿ ಊಹಿಸಿಕೊಂಡೇ ನಲಿದೆ. ದಾಂಪತ್ಯವೊಂದು ಬಿಟ್ಟು ಮಿಕ್ಕೆಲ್ಲಾ ವಿಷಯಗಳಲ್ಲೂ ನಾನವನ ಮಡದಿ. ಅದು ಅವನಿಗೂ ಗೊತ್ತು. ನಮ್ಮ ತಂದೆಗೂ ಬಹುಶಃ ನಮ್ಮಿಬ್ಬರ ಅನ್ಯೋನ್ಯತೆ ತಿಳಿದಿತ್ತು. ಆದರೂ ಒಂದು ದಿನವಾದರೂ ಅವರು ಆ ವಿಷಯವಾಗಿ ಪ್ರಶ್ನಿಸಲಿಲ್ಲ. ಒಮ್ಮೆ ಅವರ ಅಂತರಂಗ ಬಹಿರಂಗವಾಗಿತ್ತು.

ನಾನು ಆನರ್ಸ್ ಪರೀಕ್ಷೆಯಲ್ಲಿ ಫಸ್ಟ್‌ಕ್ಲಾಸ್ ಬಂದಾಗ–"ನಿನಗೇನು ಬೇಕಮ್ಮ?" ಎಂದರು, "ನನಗೇನೂ ಬೇಡಪ್ಪ. ಸಾಯುವವರೆಗೂ ನಿಮ್ಮನ್ನು ನೋಡಿಕೊಂಡು ಇದ್ದು ಬಿಟ್ಟರೆ ಸಾಕು" ಎಂದೆ.

ನನ್ನ ಸಂತೋಷದಲ್ಲೂ ನನ್ನನ್ನು ಕಂಗಾಲಗೊಳಿಸುತ್ತಿದ್ದುದು ಆ ತುಮುಲ. ಒಂದು ವೇಳೆ ತಾನು ರಾಜನನ್ನು ಮದುವೆಯಾಗಿ ಹೊರಟು ಹೋದರೆ ಅಪ್ಪನ ಗತಿ? ಆಗೆಲ್ಲಾ ನನ್ನ ಕಣ್ಣು ಮುಂದೆ ತ್ಯಾಗಮಯಿ ಸರಳಾ ಕಾಣುತ್ತಿದ್ದಳು. ನನ್ನ ಪ್ರೇಮವನ್ನೂ, ರಾಜನನ್ನೂ ತ್ಯಾಗಮಾಡಿ ಅಪ್ಪನ ಬಳಿ ಉಳಿಯಬೇಕು. ಇನ್ನು ಮೇಲೆ ರಾಜನನ್ನು ಪ್ರೋತ್ಸಾಹಿಸಲೇ ಬಾರದು, ನನ್ನ ತೀರ್ಮಾನವನ್ನು ರಾಜನಿಗೆ ತಿಳಿಸಿಬಿಡಬೇಕು ಎಂದು ಅನೇಕ

ಸಲ ನಿರ್ಧರಿಸುತ್ತಿದ್ದೆ. ಆದರೆ ರಾಜನ ಮುಖ ಕಂಡೊಡನೆ ನನ್ನ ಕರ್ತವ್ಯ ನಿಷ್ಠೆ ಹಾರಿಹೋಗುತ್ತಿತ್ತು. ರಾಜನ ಬಳಿ ಹಾರುತ್ತಿತ್ತು ನನ್ನ ಹೃದಯ ಪಕ್ಷಿ. ಅವನಿಲ್ಲದಾಗ, ಕರ್ತವ್ಯದ ನೆನಪು ಕಾಡಿದರೆ, ಅವನ ಎದುರಿಗೆ ಪ್ರೇಮಾರಾಧಕಳು ನಾನು.

ನಮ್ಮ ತಂದೆ ಕೇಳಿದಾಗ ನನಗೇನೂ ಬೇಡ ಅಂದೆ. ಆದರೆ ಅವರು ಕೇಳಿದ ಮರು ಪ್ರಶ್ನೆಗೆ ಬೆಚ್ಚಿಬಿದ್ದೆ–"ರಾಜನೂ ಬೇಡವೇ ನಿನಗೆ? ಎಂದರು. ಉತ್ತರಹೀನಳಾದೆ. "ಓ ನಾಚಿಕೆ ಬಂದು ಬಿಡ್ತು ನಮ್ಮ ಸರಳಾಗೆ. ನಾಚೋದು ಯಾಕಮ್ಮ ? ನಿಮ್ಮಮ್ಮನೂ ಅದೇ ಆಸೆ ಪಡ್ತಾ ಇದ್ಲು. ಆದ್ರೆ ನಂದೂ ಒಂದು ಸ್ವಾರ್ಥ ಇದೇಮ್ಮ. ಕಡೇ ಪಕ್ಷ ಭೂಷಣಂಗಾದ್ರೂ ಮದ್ವೆ ಮಾಡ್ದೆ ನಿನ್ನ ಕಳಿಸಿಕೊಡಲಾರೇಮ್ಮ" ಎಂದು ಕಕ್ಕುಲತೆಯಿಂದ ನುಡಿದರು.

ನಾನು ಸಿದ್ಧಳಿರಲಿಲ್ಲ. ರಾಜನನ್ನು ನಾನು ಎಷ್ಟೇ ಆರಾಧಿಸಿದರೂ, ತಂದೆಯನ್ನು ಅಸಾಹಾಯಕ ಸ್ಥಿತಿಯಲ್ಲಿ ಬಿಡಲು ಮಾತ್ರ ನನ್ನ ಮನಸ್ಸು ಒಪ್ಪುತ್ತಿರಲಿಲ್ಲ.

೧೨

ದಿನಗಳುರುಳಿದವು. ಏಕೆ ತಿಂಗಳುಗಳೇ ಕಳೆದವು. ನನ್ನ ಮತ್ತು ರಾಜನ ಪ್ರೇಮ ಗಾಢವಾಯಿತು. ಆದರೂ ನಾವು ಬೀದಿ ಬೀದಿಗಳಲ್ಲಿ ನಾವು ನಾವೇ ಆಗಿ ತಿರುಗಾಡಲಿಲ್ಲ. ಸ್ವೇಚ್ಛೆಗೆ ಮಾತ್ರ ಇಳಿಯಲಿಲ್ಲ. ಎಂದಾದರೂ ಒಮ್ಮೆ ಹೊರಗಡೆ ಹೋಗುತ್ತಿದ್ದೆವು. ಮಿಕ್ಕೆಲ್ಲಾ ದಿನಗಳಲ್ಲಿ ಎಂದಿನಂತೆ ರಾಜ ಬರುತಿದ್ದ. ಎಂದಿನಂತೆಯೇ ಇರುತ್ತಿದ್ದೆವು.

ಬರಬರುತ್ತಾ ರಾಜನಲ್ಲಿನ ಒಂದು ದುರ್ಬಲತೆ ನನಗೆ ಅಧಿಕವಾಗಿ ಕಾಣತೊಡಗಿತ್ತು. ನೀತಿ ನಿಯಮ ಶ್ರದ್ಧೆಗಳಿಗೆ ಬೆಲೆ ಕೊಡುತ್ತಿದ್ದ ನನಗೆ ಅವನ ಈ ದುರ್ಬಲತೆ ಸ್ವಲ್ಪ ಅನಿಷ್ಟವಾಯಿತು.

ಯಾವಾಗಲೂ ತನ್ನ ಜೊತೆ ಕೆಲಸ ಮಾಡುವ ಹುಡುಗಿಯರನ್ನು ಕುರಿತು ಮಾತನಾಡಲು ಪ್ರಾರಂಭಿಸಿದ್ದ. ನೇರವಾಗಿ ನನಗೇ ಅವೆಲ್ಲಾ ಹೇಳುತ್ತಿದ್ದನಾದ್ದರಿಂದ ಅವೆಲ್ಲಾ ಅವನ ಹುಡುಗುತನ, ಹುಡುಗಿಯರ ಚೆಲ್ಲುತನ ಎಂದು ಅವನ ದುರ್ಬಲತೆಯ ಕಡೆಗೆ ಕುರುಡು ಕಣ್ಣು ತೋರಿಸ್ತಾ ಬಂದೆ.

ಇಷ್ಟರಲ್ಲಿ ಅವನ ಕೆಲಸದಲ್ಲಿ ಅವನು ಟೂರ್ ಹೋಗುವ ಸಂಭವಗಳು ಬಂದವು. ಹದಿನೈದು ದಿನಗಳಿಗೊಮ್ಮೆಯಾದರೂ ನನಗಾಗಿ ನನ್ನ ತಂದೆಯನ್ನು ನೋಡುವ ಸಲುವಾಗಿ ಬಂದು ಹೋಗುತ್ತಿದ್ದ.

ಒಮ್ಮೆ ಅವನು ಹಾಗೆ ಬಂದಾಗ ಭೂಷಣನೂ ಬೊಂಬಾಯಿನಿಂದ ಬಂದಿದ್ದ. ಭೂಷಣನಲ್ಲಿ ನನಗೆ ಗೌರವ ಇತ್ತು. ಸದರ ಅಕ್ಕರೆ ಇರಲಿಲ್ಲ. ಅವನದು ಎಲ್ಲಾ ಸ್ವಲ್ಪ ಹಂತಕ್ಕೆ ಮೀರಿದ ಧೋರಣೆ. ಒಂದು ತಿಂಗಳ ರಜೆ ಪಡೆದು ಬಂದಿದ್ದ ಭೂಷಣ, ಸಾಧ್ಯವಾದರೆ ಅವನಿಗೆ ಮದುವೆಮಾಡಬೇಕೆಂದೇ ಅಂದುಕೊಳ್ಳುತಿದ್ದರು ತಂದೆ. ಆದರೆ ಅವನ ಮದುವೆಯ ಮಾತು ಎತ್ತುವ ಮುಂಚೆಯೇ ನನ್ನ ಕುರಿತಾಗಿ ಅವನಿಗೆ ತಂದೆಗೆ ವಾಗ್ವಾದ ನಡೆಯಿತು. ನನ್ನ ಹೃದಯಕ್ಕೊಂದು ದೊಡ್ಡ ಪೆಟ್ಟು ಬಿತ್ತು.

ಈ ದಿನ ನಾನು ಆಗ ತಾನೇ ಆಫೀಸಿನಿಂದ ಬಂದಿದ್ದೆ. ಓ ನಾನು ಮರೆತುಬಿಟ್ಟೆ ಸುಮಿತ್ರಾ. ನನ್ನ ಎಂ. ಎಸ್. ಸಿ ಆದ ಕೂಡಲೇ ನಾನು ಕೆಲಸಕ್ಕೆ ಸೇರಿದೆ. ಅಪ್ಪನಿಗೆ ರಿಟೈರಾಗುವ ವಯಸ್ಸು. ಅಣ್ಣಂದಿರೇನೋ ಆಗಾಗ ಹಣ ಕಳುಹಿಸುತ್ತಿದ್ದರು. ತಿಂಗಳ ಖರ್ಚಿಗೆ ಬರೀ ಅಪ್ಪನ ಸಂಬಳ ಎಲ್ಲಿ ಸಾಕು? ಅಲ್ಲದೆ ಒಬ್ಬಳೇ ಮನೆಯಲ್ಲಿ ಕುಳಿತು ಮಾಡುವುದಾದರೂ ಏನು ಎಂದು, ಅಪ್ಪನ ಇಚ್ಛೆಗೆ ವಿರೋಧವಾಗಿ ಕೆಲಸಕ್ಕೆ ಸೇರಿಬಿಟ್ಟೆ. ನನ್ನ ಬೇಜಾರಿನ ಪರಿಹಾರಕ್ಕೋಸ್ಕರ ಹೋಗುತ್ತಿದ್ದೇನೆಂದು ಅಪ್ಪ ತಮಗೆ ತಾವೇ ಸಮಾಧಾನ ಹೇಳಿಕೊಂಡರು.

ಅಂದು ಆಫೀಸಿನಿಂದ ಆಗ ತಾನೇ ಬಂದಿದ್ದೆ ಅಂದೆ ಅಲ್ವಾ. ರಾಜನೂ ಊರಿಗೆ ಬಂದಿದ್ದ. ಯಥಾಪ್ರಕಾರ ಸಂಜೆ ಮನೆಗೆ ಬಂದಿದ್ದ. ನಮ್ಮ ತಂದೆ ತಿಂಡಿ ತಿಂದು ತಮ್ಮಪಾಡಿಗೆ ಕೋಣೆಯಲ್ಲಿ ಪತ್ರಿಕೆ ಓದುತ್ತಾ ಇದ್ದರು.

ನಾನೂ ರಾಜ, ಏನೋ ಕೀಟಲೆ ಮಾಡಿಕೊಳ್ತಾ ಇದ್ದೆವು. ಹೊರಗಡೆ ತಿರುಗಾಡಲು ಹೋದ ಭೂಷಣ ಮನೆಗೆ ಬಂದ. ಅವನು ಬಂದನೆಂದು

ನಾನಾಗಲೀ, ಭೂಷಣನಾಗಲೀ ಪ್ರತ್ಯೇಕ ಗಮನ ಕೊಡಲಿಲ್ಲ. ಭೂಷಣನೂ ನಮ್ಮನ್ನು ಲಕ್ಷಿಸದೆ ಬಟ್ಟೆ ಬದಲಿಸಿ ಕೈಕಾಲು ತೊಳೆದು ಒಂದು ಕೋಣೆಯಲ್ಲಿ ಕುಳಿತ.

ಸುಮಾರು ಒಂದರ್ಧ ಗಂಟೆ ಕಳೆದಿರಬಹುದು. ರಾಜ ಹೊರಡುತ್ತೇನೆಂದು ಹೊರಟ. ಈಗ ಹೋದರೆ ಮತ್ತೆ ನೋಡುವುದು ಹದಿನೈದು ದಿನಗಳ ನಂತರವಲ್ಲಾ ಎಂದು ಮನದಲ್ಲೇ ಬೇಸರಿಸಿಕೊಳ್ಳುತ್ತಿದ್ದ ನಾನು ಗೇಟಿನವರೆಗೆ ಹೋದೆ. ನನ್ನ ಕೈಯನ್ನು ತನ್ನ ಕೈಯಲ್ಲಿ ಹಿಡಿದು "ಹೋಗಬೇಕಲ್ಲಾ ಅನ್ನಿಸುತ್ತೆ ಸರೂ" ಎಂದು ಹಿತವಾಗಿ ಅದುಮಿದ.

"ಹೌದು. ಪ್ರೇಮದಷ್ಟೇ ಕರ್ತವ್ಯವೂ ಮುಖ್ಯ ರಾಜ" ಎಂದು ಕಳುಹಿಸಿಕೊಟ್ಟೆ. ತೂಲಿಕಾ ತಲ್ಪದಲ್ಲಿ ತೂಗುತ್ತಿತ್ತು ಹೃದಯ ಮನಸ್ಸುಗಳು. ಡೋಲಾಯಮಾನದ ಮನಸ್ಸಿನಿಂದ ಎಗರುತ್ತಾ ಒಳಗೆ ಬಂದೆ.

"ಸ್ವಲ್ಪ ಬಾಮ್ಮಾ ಸರಳಾ ಇಲ್ಲಿ" ಎಂದ ಭೂಷಣ. ನಿಧಾನವಾಗಿ ಅವನ ರೂಮಿಗೆ ಹೋದೆ. ಏಕೋ ಹೃದಯ ಹೊಡೆದುಕೊಂಡಿತು.

"ರಾಜ ಹೊರಟು ಹೋದನೇನು ?"

"ಹುಂ. ಏಕ್ಕಣ್ಣ ?

"ನೀನೀಗ ಬೆಳೆದು ದೊಡ್ಡವಳಾಗಿದ್ದಿ ಸರಳಾ ?

"ಹೌದು. ನನಗೂ ಗೊತ್ತಣ್ಣ."

"ಗೊತ್ತಿದ್ರೂ ಹೀಗೆ ನಡಕೋತಾ ಇದ್ದೀಯಾ"

"ಏನಣ್ಣ ಒಗಟಿನಲ್ಲಿ ಮಾತಾಡ್ತಾ ಇದ್ದಿ. ಅರ್ಥವಾಗೋ ಹಾಗೆ ಹೇಳಣ್ಣ"

"ನಿನಗೆ ಅರ್ಥವಾಗೋಲ್ವೆ ಸರಳಾ ? ರಾಜಾನೂ ಈಗ ಹುಡುಗ ಅಲ್ಲ. ನೀವಿಬ್ರೂ ಇಷ್ಟು ಸದರವಾಗಿ ನಡಕೊಳ್ಳೋದು ಚೆನ್ನಾಗಿಲ್ಲ ಸರಳಾ"

"ಅಲ್ಲಣ್ಣ...."

"ನೋಡಿಲ್ಲಿ ಸರಳಾ. ನಾಕೇಳೋ ಪ್ರಶ್ನೆಗೆ ಉತ್ತರಕೊಡು. ನೀನು ರಾಜನ್ನ ಪ್ರೇಮಿಸ್ತೀಯೇನು ?"

ಈ ಪ್ರಶ್ನೆಗೆ ನಾನು ಉತ್ತರ ಕೊಡಲಿಲ್ಲ. ಯಾಕೆ ಎಂದು ನನಗೇ ತಿಳಿಯದು. ಅಂದು 'ಹೌದು' ಎಂದು ನಾನಂದಿದ್ದರೆ ನನ್ನ ಜೀವನವೇ

ಬದಲಾಗುತ್ತಿತ್ತೇನೋ. ಈ ಅಂಧಕಾರವನ್ನು ನಾನು ಎದುರಿಸಬೇಕಾಗುತ್ತಿರಲಿಲ್ಲ.

"ಹೇಳು ಸರಳಾ. ನನಗೇ ನಿಮ್ಮಿಬ್ಬರ ವರ್ತನೆ ಅಸಹ್ಯವಾಗಿ ಕಂಡಿತೆಂದ ಮೇಲೆ ಹೊರಗಿನವರಿಗೇನನ್ನಿಸೀತು. ಪ್ರೇಮಿಸಿದ್ದರೆ ಹೇಳು. ಹೇಗಾದರೂ ಮಾಡಿ ಮದುವೆ ಮಾಡೋಣ, ಇಲ್ಲದಿದ್ರೆ. ಅತಿಯಾಗಿ ಅವನು ನಮ್ಮನೇಗೆ ಬರೋದು ಬೇಡ. ಈಗ ಮನೆಯಲ್ಲಿ ಯಾರೂ ದೊಡ್ಡ ಹೆಣ್ಣು ದಿಕ್ಕೂ ಇಲ್ಲ"

"ರಾಜ ಏನು ಹೊಸಬನೇನಣ್ಣ ? ಹೀಗೆ ಹೇಳ್ತೀದ್ದೀಯಾ ?

"ರಾಜ ಹೊಸಬನಲ್ಲ, ಆದರೆ ಅವನ ದುರ್ಗುಣ ನನಗೆ ಹೊಸದು. ತಿಳುವಳಿಕೆ ಇರೋ ನೀನು ಅವನನ್ನು ಪ್ರೇಮಿಸಿದ್ದೀನಿ ಅಂದ್ರೂ ನನಗೆ ಸಹಿಸೋಕ್ಕಾಗೊಲ್ಲ ಸರಳಾ. ನಿನಗೆ, ಅವನಿಗೆ ಬರೋದು ಬೇಡ ಅಂತ ಹೇಳೋಕೆ ಕಷ್ಟ, ಆದ್ರೆ ನಾ ಹೇಳ್ತೀನಿ" ಎಂದು ಗುಡುಗಿದ. ವಿಷಯವೇ ತಿಳಿಯದ ನಾನು ಕಕ್ಕಾಬಿಕ್ಕಿಯಾದೆ.

"ಅಣ್ಣಾ...." ಎಂದು ಏನೋ ತೊದಲಿದೆ ಮಧ್ಯದಲ್ಲಿ.

"ಅವನೆಂತಹವನು ಅಂತ ನಿನಗೆ ಗೊತ್ತಿಲ್ಲ ಸರೂ. ಚಿಕ್ಕವನಿದ್ದಾಗಿನಿಂದಲೂ, ಅಂದಗಾರ ಅಂತ ಅವನ್ನ ಉಬ್ಬಿಸಿ ಕೂರಿಸಿದ್ದಾರೆ, ಅವನು ತನ್ನ ಅಂದಾನ್ನ ಉಪಯೋಗ ಮಾಡ್ಕೋತಾ ಇದ್ದಾನೆ" ಎಂದು ಕೋಪದಿಂದ ಕೂಗಿದ ಅಣ್ಣ. ಕೂಡಲೇ ಕಣ್ಣಲ್ಲಿ ನೀರಾಡಿಸಿ "ಅವನಿಗೆ ಹುಡುಗಿಯರ ಸ್ನೇಹ ಜಾಸ್ತೀಮ್ಮ ಸರಳಾ. ಆಗಾಗ ನಾನು ವಿಷಯ ಕೇಳ್ತಾ ಇದ್ದೆ. ಆದ್ರೆ ಈಗ ಯಾವಳೋ ಕ್ರಿಶ್ಚಿಯನ್ ಹುಡುಗೀನ್ನ ಕಟ್ಕೊಂಡು ಮೂರುಹೊತ್ತು ತಿರುಗ್ತಾ ಇರ್ತಾನೇಂತ ನನಗೆ ಇಲ್ಲಿ ಬಂದ ಕೂಡಲೇ ತಿಳೀತು. ಕೇಳಿದ್ದನ್ನ ನಿನ್ನೆ ರುಜುವಾತು ಮಾಡ್ಕೊಂಡೆ. ಅವರಿಬ್ಬರೂ ನೀಲಗಿರಿ ಡೈರಿ ಫಾರಂನಲ್ಲಿ ಐಸ್ ಕ್ರೀಂ ಹೊಡೀತಾ ಇದ್ರು" ನೋವಿನಿಂದ ನುಡಿದ.

ಅವನ ನೋವು ನಾನರ್ಥ ಮಾಡಿಕೊಳ್ಳಲಿಲ್ಲ. ರಾಜನ ಮೇಲಿನ ಪ್ರೀತಿಯಿಂದ ಅಣ್ಣನ ಹೃದಯಕ್ಕೆ ಬಾಣಹೊಡೆದೆ. ಕೂಗಿದೆ ಕೋಪದಿಂದ "ನಿಲ್ಲಿಸಣ್ಣ ಸಾಕು. ನಿನಗೆ ರಾಜನನ್ನು ಕಂಡರೆ ಇಷ್ಟವಿಲ್ಲದ ಮಾತ್ರಕ್ಕೆ ಒಂದು ವ್ಯಕ್ತಿಯನ್ನು ಕೆಳಗೆ ಮಾಡಬಾರದಣ್ಣ. ನಾಲಿಗೆ ಹೊರಳುತ್ತೇಂತ ಹೇಗಂದ್ರೆ

ಹಾಗೆ ಹೊರಳಿಸಬಾರದು" ಎಂದು ಬಿಟ್ಟೆ. ನನ್ನ ದಿಟ್ಟತನದಿಂದ ಅಣ್ಣನ ಕೋಪದ ಬೆಂಕಿಗೆ ತುಪ್ಪ ಸುರಿಸಿದಂತಾಯ್ತು.

"ಸರಿ ಸರಳಾ, ಆ ಪೋಕರಿಗಾಗಿ ನನ್ನ ನಾಲಗೆ ಪ್ರಶ್ನಿಸೋ ಧೈರ್ಯ ಬಂತಲ್ಲಾ ನಿನಗೆ ? ಒಳ್ಳೆಯದು. ದೊಡ್ಡ ಮನುಷ್ಯಳಾಗಿಬಿಟ್ಟೆ. ನಿನ್ನಿಷ್ಟ ಬಂದಂತೆ ನಡೆಯಲಿ ನಿನ್ನ ಸ್ವೇಚ್ಛಾವೃತ್ತಿ"

ಈ ಮಾತುಗಳು ನನ್ನನ್ನು ತುಂಡು ತುಂಡಾಗಿ ಮಾಡಹತ್ತಿದುವು. ಕಣ್ಣು ತುಂಬಾ ನೀರು ತುಂಬಿ ಬಂತು, ಅಣ್ಣ ಮುಂದುವರೆಸಿದ "ಅತ್ತರೇನು ಬಂತು ಸರಳಾ. ದೇವರು ಕೊಟ್ಟಿರೋ ಬುದ್ಧೀನ ಉಪಯೋಗಿಸಿ ಬದುಕ ಬೇಕು. ಕೆಲವರಲ್ಲಿ ಹೃದಯ ತಲೆಯನ್ನಾಳುತ್ತದೆ. ಮತ್ತೆ ಕೆಲವರಲ್ಲಿ ತಲೆ ಹೃದಯವನ್ನಾಳುತ್ತದೆ, ಎರಡನೆಯ ಜಾತಿಗೆ ಸೇರಿದವರು ಬುದ್ಧಿಶಾಲಿ...." ಇನ್ನೂ ಏನೇನು ಹೇಳಲು ಯೋಚಿಸಿದ್ದನೋ ತಂದೆ ಹೊರಗಡೆ ಬರದಿದ್ದರೆ.

ನಮ್ಮಿಬ್ಬರ ಮಾತು ಒಲವಿನ ಅಣ್ಣ ತಂಗಿಯರ ಧೋರಣೆಯಲ್ಲಿ ಇರಲಿಲ್ಲವೆಂದು ಅಲ್ಲೊಂದು ಇಲ್ಲೊಂದು ಮಾತು ಕಿವಿಗೆ ಬಿದ್ದ ತಂದೆ, ಗ್ರಹಿಸಿ ನಡುವೆ ಬಂದರು. "ಏನದು ಭೂಷಣ, ನಿನ್ನ ಭಾಷಣ"

ಅಣ್ಣ ಮಾತನಾಡಲಿಲ್ಲ. ತಂದೆಗೆ ಎಂದೂ ಅವನು ಎದುರಾಡುತ್ತಿರಲಿಲ್ಲ.

"ಏನಮ್ಮಾ ಸರಳಾ ಸಮಾಚಾರ" ಎಂದು ನನ್ನನ್ನು ಕೇಳಿದರು.

ನಾನು ಸೂಕ್ಷ್ಮವಾಗಿ ಹೇಳಿದೆ. ತಂದೆ ಉದ್ವಿಗ್ನರಾಗಿ ಹೇಳಿದರು. "ಭೂಷಣ ಮನೆಗೆ ದೊಡ್ಡವನಾಗಿ ನಾನಿನ್ನೂ ಬದುಕಿದ್ದೀನಿ ಅನ್ನೋದು ಮರೆತುಬಿಟ್ಟೆಯೇನು ? ನಾನು ಕಣ್ಣು ಮುಚ್ಚಿದ ಮೇಲೆ ಸರಳಾನನ್ನು ನೀನೇ ದಂಡಿಸುವೆಯಂತೆ. ಆಗ ಅವಳು ನಿನ್ನ ಜವಾಬ್ದಾರಿ. ಅಲ್ಲಿಯವರೆಗೂ ಸ್ವಲ್ಪ ಸಹಿಸಿಕೊಳ್ಳಲು ನಿನ್ನಿಂದಾಗುತ್ತದೆ ತಾನೆ ?" ತಾಳ್ಮೆಯಿಂದ ಬಂದಿದ್ದರೂ ಮಾತುಗಳು ಮರ್ಮಭೇದಕವಾಗಿದ್ದುವು. ಅಣ್ಣ ತುಟಿ ಪಿಟ್ಕೆನ್ನಲಿಲ್ಲ.

ಅಂದು ಯಾರೂ ಊಟ ಮಾಡಲಿಲ್ಲ. ಮಲಗಿಬಿಟ್ಟೆವು. ಬೆಳಗ್ಗೆ ಎದ್ದಾಗ ಅದಕ್ಕೂ ದೊಡ್ಡ ಆಘಾತ ಕಾದಿತ್ತು. ಅಣ್ಣ ಮನೆಯಲ್ಲಿರಲಿಲ್ಲ. ಬದಲಾಗಿ ಅವನ ಮಂಚದ ಮೇಲೊಂದು ಚೀಟಿ ಕುಳಿತಿತ್ತು,

ಪೂಜ್ಯ ತಂದೆಯವರಿಗೆ,

ನಮ್ಮ ಮನೆ ಇಷ್ಟು ಬದಲಾಗಿ ಬಿಟ್ಟಿರಬಹುದೆಂದು ನಾನೆಣಿಸಿರಲಿಲ್ಲ. ತಪ್ಪು ಮಾಡುತ್ತಿರುವ ತಂಗಿಗೆ ಒಂದು ಒಳ್ಳೆಯ ಮಾತು ಹೇಳುವಷ್ಟೂ ಅಧಿಕಾರ ನನಗಿಲ್ಲವಾದ ಮೇಲೆ ನಾನಿಲ್ಲಿರುವುದು ಸರಿಯೆನಿಸಲಿಲ್ಲ, ಅದಕ್ಕೂ ಮಿಗಿಲಾಗಿ ರಾಜನ ಶೀಲದ ವಿಷಯವಾಗಿ ಕೇಳಿದ್ದೆನಾದ್ದರಿಂದ. ಸರಳಾನನ್ನು ಅವನಿಂದ ವಿಮುಖಗೊಳಿಸಲು ಪ್ರಯತ್ನಿಸಿದೆ. ಅದಷ್ಟೆ ನಿಮಗೂ ಸಿಟ್ಟು ಬಂತು. ತಂದೆ ಮಕ್ಕಳ ನಡುವೆಯಾಗಲೀ. ಪ್ರೇಮಿಗಳ ನಡುವೆಯಾಗಲೀ ಬರಲು ಬಹುಶಃ ನನಗೆಅಧಿಕಾರಇಲ್ಲವೇನೋ. ಇಲ್ಲಿಯೇ ಉಳಿದರೆ, ರಾಜರ–ಸರಳೆಯ ಸದರ, ಚೆಲ್ಲಾಟ ನೋಡಿಯೂ ಕಣ್ಣು ಮುಚ್ಚಿ ಕುಳಿತುಕೊಳ್ಳಲು ನನ್ನಿಂದ ಅಸಾಧ್ಯ. ಆದುವರಿಂದ ಇಂದೇ ಬೊಂಬಾಯಿಗೆ ಹಿಂತಿರುಗುತ್ತಿದ್ದೇನೆ. ಕುರುಡು ಶ್ರದ್ಧೆಗಳಿಂದ ಚಿ॥ ಸರಳಾಳ ಬಾಳು ನಂದದಿದ್ದರೆ ಸಾಕು.

ಇಂತಿ ನಿಮ್ಮ ಭೂಷಣ

ಕಾಗದ ಓದಿ ಒಂದು ನಿಮಿಷ ನಮ್ಮ ತಂದೆ ಏನೂ ಮಾತನಾಡಲಿಲ್ಲ. ನಂತರ ಮನಸ್ಸಿನಲ್ಲೇ ಹೇಳಬೇಕಾದುದನ್ನು ಸ್ವಲ್ಪ ಗಟ್ಟಿಯಾಗೇ ಉಚ್ಚರಿಸಿದರು––"ಇಷ್ಟಕ್ಕೆ ಅಷ್ಟು ಕಾರ್ಯವೇ ಭೂಷಣ. ಶುದ್ಧ ಹುಡುಗು. ಆದದ್ದಾದರೂ ಏನು, ಸ್ವಲ್ಪವಾದರೂ ತಾಳ್ಮೆ ಸಹನೆ ಇಲ್ಲದಿದ್ದರೆ ಹೇಗಪ್ಪಾ. ಎಂದಿಗೆ ಕಲಿತುಕೊಳ್ಳುತ್ತೀಯೋ ಏನೋ ನೀನು."

ಅಲ್ಲಿಯೇ ಇದ್ದು ಕೇಳಿಸಿಕೊಂಡ ನಾನು ಸ್ವಲ್ಪ ತಾತ್ಸಾರವಾಗಿಯೇ––"ಹೋದರೆ ಹೋಗ್ತಾನೆ ಬಿಡಪ್ಪ. ಮಹಾ ದೊಡ್ಡ ಮನುಷ್ಯ ಎಂದೆ. ರಾಜನ ಮೇಲಿನ ವ್ಯಾಮೋಹ ಅಣ್ಣನನ್ನು ಕಳೆದುಕೊಳ್ಳಲಿಕ್ಕೂ ಹಿಂದೆಗೆಯಲಿಲ್ಲ. ಆದರೆ ತಂದೆ ಆಡಿದ ಮಾತು !

"ಛಿ ! ಛಿ : ಹಾಗನ್ನಬಾರದಮ್ಮ. ರಕ್ತ ಹಂಚಿಕೊಂಡು ಹುಟ್ಟಿರೋ ಒಂದೇ ಕರುಳಿನ ಎರಡು ಕುಡಿಗಳು ನೀವು. ಹಾಗೆಂದರೆ ಹೇಗೆ ? ನಾಳೆ ನಾನು ಕಣ್ಣು ಮುಚ್ಚಿಕೊಂಡರೆ ಭೂಷಣನೇ ನಿನ್ನ ತಂದೇಮ್ಮ. ಕರುಳು ಸಂಬಂಧ ಹಾಗೆ ಕಿತ್ತೊಗೆಯಬಾರದಮ್ಮ" ಎಂದರು.

ನನ್ನ ಬಾಯೇ ಕಟ್ಟಿ ಹೋಯಿತು ಸುಮಿತ್ರಾ. ಅಂತಹ ತಂದೆಗೆ ನಾನು ಮಗಳೆ ! ಎಂದೂ ಅನ್ನಿಸದೆ ಇರಲಿಲ್ಲ.

ಎಂದೂ ಪೌರುಷದ ಮಾತನ್ನಾಡುತ್ತಿರಲಿಲ್ಲ ನಮ್ಮ ತಂದೆ. ನನ್ನಲ್ಲಿ ಎಷ್ಟೋ ಒಳ್ಳೆಯ ಮಾರ್ಪಾಟುಗಳಾಗಿದ್ದರೂ ಇನ್ನೂ ತಿದ್ದಿಕೊಳ್ಳಬೇಕಾದ್ದು ಬೇಕಾದಷ್ಟು ಉಳಿದಿತ್ತು.

ಅಡಿಗೆ ಎಲ್ಲಾ ಮುಗಿಸಿಟ್ಟು ದೇವರಿಗೆ ದೀಪ ಹಚ್ಚಿ ನಮಸ್ಕಾರ ಮಾಡುವಾಗ ನನ್ನ ಹೃದಯ ಮೊರೆಯಿಟ್ಟಿತು. "ನನ್ನ ರಾಜನ್ನ ನನ್ನಿಂದ ದೂರ ಎಳೆದೊಯ್ಯಬೇಡ ದೇವ್ರೆ".

ಫ್ಯಾಕ್ಟರಿಗೆ ಹೋಗುವ ಮುನ್ನ ತಂದೆ. "ಸರಳಾ, ನೀನು ಈವತ್ತೇ ಭೂಷಣನಿಗೊಂದು ಕಾಗದ ಬರೀಯಮ್ಮ. ಅವನು ಸೇರೋ ಹೊತ್ತಿಗೆ ಅದೂ ಸೇರಲಿ" ಎಂದು ಬೆಳಗ್ಗಿನಿಂದ ಏನೂ ನಡೆದಿಲ್ಲ ಎನ್ನುವಂತೆ ಶಾಂತವಾಗಿ ಹೇಳಿದರು.

"ನಾನಾ ?" ಎಂದೆ ಗಾಬರಿಯಾಗಿ

"ಹೌದು. ನೀನೇ. ಯಾವುದೋ ದುರ್ಬಲ ಘಳಿಗೆಯಲ್ಲಿ ಎದುರಾಡಿಬಿಟ್ಟೆ. ಯಾವ ಉದ್ದಿಶ್ಯದಿಂದಲೂ ಈ ರೀತಿ ಮಾತನಾಡಲಿಲ್ಲ. ಇನ್ನು ಮೇಲೆ ಸರಿಯಾಗಿ ನಡಕೋತೀನಿ. ನೀನು ಹೊರಟು ಹೋದದ್ದು ಅಪ್ಪಂಗೂ ನನಗೂ, ಬಹಳ ನೋವಾಗಿದೆ ಅಂತ ಕ್ಷಮೆ ಕೇಳಿ ಬರೀಮ್ಮ"

"ಅಪ್ಪ ನಾನು...."

"ಅದೆಲ್ಲಾ ಆಗೋಲ್ಲ. ನೀ ಬರಿಯಲೇ ಬೇಕಮ್ಮ. ನನಗೆ ಹೊತ್ತಾಯ್ತು ಬರ್‍ತೀನಿ" ಎಂದು ಹೊರಟೇ ಹೋದ್ರು.

ನಮ್ಮ ತಂದೆಯ ಮಾತು ಅಂದಮೇಲೆ ಸುಗ್ರೀವಾಜ್ಞೆ. ಅವರು ಎಷ್ಟು ಒಳ್ಳೆಯವರೊ ಅಷ್ಟೇ ಕಠಿನಾಜ್ಞೆಗಳು ಅವರದು, ಅವರು ಏನು ಹೇಳಿದ್ದರೂ ನನ್ನ ಒಳ್ಳೆಯದಕ್ಕೇ ಎಂದು ಭೂಷಣನಿಗೆ ಕಾಗದ ಬರೆದು, ಮನೆಗೆ ಬೀಗ ಹಾಕಿ, ಕಾಗದ ಟಪ್ಪಾಲು ಡಬ್ಬದಲ್ಲಿ ಬೀಳಿಸಿ ಆಫೀಸಿಗೆ ನಡೆದೆ, 'ಎಷ್ಟು ಹೊತ್ತಿಗೆ ನನ್ನ ಸಂಕಟಾನ್ನೆಲ್ಲಾ ಮಧುರಳಿಗೆ ಹೇಳಕೊಳ್ಳುತ್ತೇನೆ' ಎಂದು ಹೊರಟೆ.

ಮಧುರ ಯಾರೂಂತ ನಿನ್ನ ಪ್ರಶ್ನೆ ಅಲ್ವಾ? ಸುಮಿತ್ರಾ. ನಮ್ಮ

ಆಫೀಸರರ ಪ್ಯೂನೋ ಅವಳು. ನನಗಿಂತ ಒಂದೆರಡು ವರ್ಷ ದೊಡ್ಡವಳು. ನನಗಿಂತ, ಕೆಲಸಕ್ಕೂ ಮುಂಚೆ ಸೇರಿದ್ದವಳು. ಅವಳೊಬ್ಬಳೇ ನನ್ನ ಆತ್ಮೀಯ ಗೆಳತಿ. ನನ್ನ ಹರ್ಷ, ನೋವು, ಸಂಕಟ ಎಲ್ಲವನ್ನೂ ಹಂಚಿಕೊಳ್ಳುತ್ತಿದ್ದಳು. ತಂದೆಯಿಲ್ಲದಿದ್ದರೂ ತಾಯಿ ಮಗಳು ಕೂತು ತಿನ್ನುವಷ್ಟು ಆಸ್ತಿ ಮಾಡಿಟ್ಟು ಹೋಗಿದ್ದರು. ಮದುವೆಯವರೆಗೆ ಮನೆಯಲ್ಲಿ ಕುಳಿತು ಕಾಲಕಳೆಯುವುದೇ ಕೆಂದು ಹುದ್ದೆ ಹಿಡಿದಿದ್ದಳು. ಒಳ್ಳೆಯ ದಿಟ್ಟ ಹುಡುಗಿ ಮಧುರಾ.

ಆಫೀಸಿಗೆ ಹೋದಳು, ನನ್ನ ಜಾಗದಲ್ಲಿ ಕುಳಿತ ಶಾಸ್ತ್ರಮಾಡಿ, ಮಧುರಳನ್ನು ಹುಡುಕಿ ಹೊರಟೆ. ನನ್ನ ಮುಖ ನೋಡಿಯೇ ತಿಳಿದು ಕೊಳ್ಳುತ್ತಿದ್ದಳು ಮಧುರಾ ನಾನು ತಂದಿರುವುದು ಒಳ್ಳೆಯ ಸುದ್ದಿಯೇ ದುಃಖವೇ ಎಂದು. ಅದಕ್ಕೆ ನನ್ನ ಕಂಡ ಕೂಡಲೇ "ಏನು ಸರಳಾ? ಗಂಗಾ, ಭಾಗೀರಥಿ ಏನು?" ಎಂದಳು.

ಅವಳು ಕೇಳಿದುದೇ ತಡ. ಕಣ್ಣೀರು ಹರಿಯಿತು ನಡೆದುದೆಲ್ಲವನ್ನೂ ಒಂದೂ ಬಿಡದೆ ಹೇಳಿಬಿಟ್ಟೆ. ಹೃದಯ ಹಗುರವಾಯಿತು.

"ಕಣ್ಣು ಒರೆಸಿಕೊ ಸರಳಾ, ಎಲ್ಲರೂ ನಮ್ಮನ್ನೇ ನೋಡುತ್ತಾರೆ" ಎಂದಳಷ್ಟೇ. ಯಾವ ಸಮಾಧಾನವನ್ನೂ ಹೇಳಲಿಲ್ಲ. ಏನೋ ಯೋಚಿ ಸುತ್ತಾ ಕುಳಿತುಬಿಟ್ಟಳು.

"ನೀನೇನೂ ಹೇಳೋಲ್ವ ಮಧುರಾ?" ಆಸೆಯಿಂದ ಕೇಳಿದೆ.

ನಿಟ್ಟುಸಿರುಬಿಟ್ಟು ಹೇಳಿದಳು. "ನಾನೇನೂ ಹೇಳಲಾರೆ ಸರಳಾ. ಈ ವಿಷಯದಲ್ಲಿ. ಆದರೂ ನೀನು ರಾಜನ ಸ್ನೇಹ ಕಡಿಮೆ ಮಾಡುವುದೇ ಒಳ್ಳೆ ಯದು ಅಂತ ನನಗನ್ನಿಸುತ್ತೆ."

"ಹ್ಞಾ ! ಏನಂದೆ ಮಧುರಾ" ಆಶ್ಚರ್ಯದಿಂದ ಕೇಳಿದೆ.

"ನಿಮ್ಮಣ್ಣ ಹೇಳಿದ ಮಾತಿನಲ್ಲಿ ಸತ್ಯಾಂಶವಿದೆ ಸರಳಾ"

"ಯಾವ ಮಾತಿನಲ್ಲಿ"

"ರಾಜ ಕ್ರಿಶ್ಚಿಯನ್ ಹುಡುಗಿಯ ಜೊತೆ ತಿರುಗುವ ವಿಷಯದಲ್ಲಿ"

"ಮಧುರಾ !" ಎಂದು ಕೂಗಿದೆ.

"ಇಲ್ಲಿ ಬೇಡ, ಲೇಡೀಸ್ ರೂಮಿಗೆ ಹೋಗೋಣ ಬಾ" ಎಂದು ಕರೆ ದೊಯ್ದಳು.

ನನ್ನನ್ನು ಕೂರಿಸಿ ಹೇಳಿದಳು. "ನೋಡು ಸರಳಾ, ಅಂದವಾಗಿರೋವ್ರಿಗೆ ತಾವು ಸುಂದರವಾಗಿದ್ದೀವಿ ಅಂತ ತಿಳಿದಾಗಿನಿಂದ "ನನಗೇನು ನನ್ನ ಯಾರು ಬೇಕಾದ್ರೂ ಬಯಸ್ತಾರೆ" ಅಂತ ಅಂದ್ಕೋತಾರೋ ಏನೋ. ಅವರಿಗೆ ನಿಷ್ಠೆ, ನಿಯಮ ಒಂದೂ ಕಾಣಿಸೋಲ್ಲ. ಅವರು ಮಿಕ್ಕೆಲ್ಲಾ ಗುಣಗಳಿಗೆ ಅಂಧರು. ರಾಜನೂ ಅಷ್ಟೇ. ಈ ನಿಯಮದಿಂದ ಹೊರಗಿಲ್ಲ ಅವನು.

"ನೆನಪಿದ್ಯಾ ಈಗೊಂದು ತಿಂಗಳ ಹಿಂದೆ 'ಸಂಗಮ' ಚಿತ್ರಕ್ಕೆ ನಾನು ನಿನ್ನ ಕರೆದಾಗ "ಬರೋಲ್ಲ" ಅಂದೆ, 'ರಾಜನ ಜೊತೆ ಹೋಗಬೇಕು" ಅಂದೆ, ಹೋಗಿದ್ಯೇನು. ?"

"ಇಲ್ಲ, ರಾಜನಿಗೆ ಪುರಸತ್ತಾಗಲಿಲ್ಲ"

"ಪುರಸತ್ತು ! ಅದು ನಿನ್ನ ಭ್ರಮೆ. ಅವನು ಹೇಳಿದ ಕಟ್ಟು ಕಥೆ ಅದು. ನಾನು ನಮ್ಮ ಪಕ್ಕದ ಮನೆ ಶಾಂತಳೊಂದಿಗೆ ಅವತ್ತೇ ಆ ಚಿತ್ರಕ್ಕೆ ಹೋದೆ. ಅಲ್ಲಾಯಿತು ನಿನ್ನ ಪುರಸತ್ತಿಲ್ಲದ ರಾಜನ ದರ್ಶನ ಅವನ ಗೆಳತಿಯೊಂದಿಗೆ. ಗಾಬರಿಯಾಗಬೇಡ, ಸರಳಾ. ಹೇಳುವುದೆಲ್ಲಾ ಕೇಳಿಬಿಡು.

"ರಾಜನೇನೋ ನನ್ನನ್ನು ನೋಡಿಯೂ ನೋಡದಂತೆ ಹೋಗಲು ಹವಣಿಸಿದ್ದ. ಆದರೆ ನಾನೇ ಬೇಕೆಂದೇ ಅವರನ್ನು ಮಾತನಾಡಿಸಿದೆ. ಅವನ ಮುಖ ಏಕೆ ಬಿಳುಚಿಕೊಂಡಿತೋ ತಿಳೀದು. ಗೆಳತಿನ್ನಾದ್ರು ದೂರ ಬಿಡೋಣಾಂತ ನೋಡಿದ. ಊ ಹುಂ. ಆದರೆ ಆ ಹೆಣ್ಣು ಅವನ ಭುಜದ ಮೇಲೆ ಕೈ ಇಟ್ಟುಕೊಂಡೇ ನಿಂತಳು. ವಿಧಿಯಿಲ್ಲದೆ ಪರಿಚಯ ಮಾಡಿಸಿದ "ಇವಳು ಮೇರಿ ಡಿಸೋಜ. ನನ್ನ ಕೊಲೀಗು" ಅಂತ.

"ಸಾಧಾರಣವಾಗಿ ಡಿಸೋಜ ಅಂದರೆ ಗೋವ ಕಡೆಯ ಕ್ರಿಶ್ಚಿಯನ್ನರು. ಬೆಳ್ಳಗಿರಬೇಕಿತ್ತು. ಅವಳು ಬದಲಾಗಿ ಕರಿಮುದ್ದೆ. ನಾನೆಲ್ಲಿ ರಾಜನನ್ನು ಅವಳಿಂದ ಕಿತ್ತುಕೊಂಡು ಬಿಡ್ತೇನೋ ಅನ್ನೋ ಹಾಗೆ, ಅವನನ್ನು ಭದ್ರವಾಗಿ ಹಿಡಿದುಕೊಂಡಿದ್ದಳು. ನೋಟದ ಬಳಿ, ರಾಜನೇನೋ ನನ್ನಿಂದ ತಪ್ಪಿಸಿಕೊಳ್ಳೋ ಆತುರದಲ್ಲಿದ್ದ"

"ನನಗೆ ಅಸಹ್ಯವಾಯಿತು ಚೊಕ್ಕ ಚಿನ್ನದ ಬಣ್ಣದ ರಾಜ ? ಕೊಕ್ಕರೆಗರಿಯಂತ ಅವನ ಬಟ್ಟೆ. ಎಲ್ಲವನ್ನೂ ಅವಳು ಕಲುಷಿತ ಮಾಡುತ್ತಿದ್ದಾಳೆ ಎನಿಸಿತು. ರಾಜನಲ್ಲದೆ ಬೇರೆ ಯಾರೇ ಇದ್ದರೂ ಆ ಗೆಳೆತನದಲ್ಲಿ ಸಮರಸ

ಕಾಣುತ್ತಿರಲಿಲ್ಲ. ಇನ್ನು ರಾಜ ಅಂದಮೇಲೆ! ನನ್ನ ಹೃದಯ ಹಿಂಡಿ ಹೋಯ್ತು, ನಿನಗಾಗಿ ಮತ್ತು ಅವನಿಗಾಗಿಯೂ ಸಹ" ಎಂದಳು ಮಧುರಾ. ಎನ್ನುತಾ ಸರಳಾ ಜೋಮು ಹಿಡಿದಿದ್ದ ಕಾಲನ್ನು ಕೊಡವಿ ಭಂಗಿ ಬದಲಾಯಿಸಿ ಕುಳಿತಳು.

"ಅಂದರೆ ಮಧುರಳಿಗೆ ರಾಜನ ಪರಿಚಯ ಚೆನ್ನಾಗಿತ್ತು ಅಲ್ವಾ ?" —ಸುಮಿತ್ರ.

ನನಗಿದ್ದ ಒಬ್ಬ ಗೆಳತಿ ಅವಳು. ನನ್ನ ಪ್ರಿಯತಮ ಅವನು. ಅವಳು ನನ್ನ ಹಿತೈಷಿ. ನನ್ನ-ರಾಜನ ಪ್ರೇಮದ ಬಳ್ಳಿಗೆ ನೀರೆರೆಯುತ್ತಿದ್ದವಳು ಅವಳು, ಅದರಿಂದಲೇ ಅವಳಿಗೆ ರಾಜನ ಪರಿಚಯ ಮಾಡಿಕೊಟ್ಟಿದ್ದೆ. ಮೇಲಿನ ಮಾತುಗಳನ್ನು ಮಧುರಾ ಅಲ್ಲದೆ ಬೇರೆ ಯಾರು ಆಡಿದ್ದರೂ ಅವರ ಕೆನ್ನೆಗೆ ಹೊಡೆಯುತ್ತಿದ್ದೆ. ಮಧುರಳ ಬಾಯಿಂದ ಹೊರಬಿದ್ದುದಾದ್ದರಿಂದ ಸುಮ್ಮನೆ ಕೇಳಿಸಿಕೊಳ್ಳುತ್ತಿದ್ದೆ. ಮಧುರಾ ಮುಂದುವರೆಸಿದಳು. "ರಾಜನೂ ಮೇರಿನೂ ಹೊರಟು ಹೋದಮೇಲೆ ನನ್ನ ಫ್ರೆಂಡು ಶಾಂತ ಅಂದ್ಲು "ಅಲ್ಲಾರಿ ಮಧುರಾ, ಆತ ಒಳ್ಳೇ ರಾಜಕುಮಾರ ಇದ್ದ ಹಾಗಿದ್ದಾನೆ, ಈ ಕರಿ ಧುಡುಮಿನ್ನ ಯಾಕೆ ಕಟ್ಟಿಕೊಂಡನೊ"

"ಕಟ್ಟಿಕೊಂಡಿಲ್ಲ ಶಾಂತ. ಆತನಿಗಿನ್ನು ಮದುವೆ ಆಗಿಲ್ಲ. ಬರೀ ಫ್ರೆಂಡ್ ಇರಬಹುದು" ಅಂದೆ.

"ಹೋಗ್ರಿ ನೀವು ಸುಮ್ನೆ ಅವನನ್ನ ವಹಿಸ್ಕೋತಾ ಇದೀರಿ. ನಾನಂತೂ ಯಾವಾಗ್ಲೂ ನೋಡ್ತಿರ್ತೀನಿ ಇವ್ರಿಬ್ರನ್ನ. ಮೊನ್ನೆ ಅಲಸೂರು ಕೆರೆ ಹತ್ರ ಇವರ್ನ ನೋಡಿದ ಮೇಲೆ ಇವರು ಬರೀ ಫ್ರೆಂಡ್ಸ್ ಅಂತ ಅನ್ನೋಕ್ಕಾಗೋಲ್ಲಪ್ಪ" ಅಂದುಬಿಟ್ಟಳು ಶಾಂತ. ನೀನೇ ಭಾವಿಸಿಕೋ ಸರಳಾ. ರಾಜ ಅವಳೊಂದಿಗೆ ಹೊರಗಿನ ಪರಿವೆ ಕೂಡ ಇಲ್ಲದೆ ಎಷ್ಟರಮಟ್ಟಿಗೆ ವರ್ತಿಸಿರಬಹುದೂಂತ.

ಚಿತ್ರ ನೋಡಿದ ಸಂತೋಷಾನೇ ಹೋಗ್ಬಿಟ್ಟಿತ್ತು ನನಗೆ. ಈ ವಿಷಯ ನಿಂಗೆ ಹೇಳಬೇಕೋ ಬೇಡ್ವೋ ಅಂತ ಯೋಚಿಸೋದ್ರಲ್ಲಿ ಅವತ್ತೆಲ್ಲಾ ನಂಗೆ ನಿದ್ದೆ ಕೂಡ ಬರಲಿಲ್ಲ. ನಾ ಹೇಳಿದ್ದನ್ನೆಲ್ಲಾ ನೀನು ನಂಬೋಲ್ಲ ಅಲ್ವಾ ಸರಳಾ"

"ಖಂಡಿತ ನಂಬ್ತೀನಿ ಮಧುರಾ. ನೀನಾವತ್ತೇ ಯಾಕೆ ಹೇಳ್ಳಿಲ್ಲ"

"ಹೇಗೆ ಹೇಳ್ಲಿ ಹೇಳು ನಿನ್ನ ಮುಖ ನಗುನಗುತ್ತಾ ಅರಳಿ ನಿಂತಿರೋವಾಗ. ನಿನ್ನ ಹೃದಯ ಪ್ರೇಮರಾಗವನ್ನೇ ಹಾಡ್ತಾ ಇರೋವಾಗ, ಅದಕ್ಕೆಲ್ಲಾ ಹುಳಿ ಹಿಂಡೋದಕ್ಕೆ ನನಗೆ ಮನಸ್ಸು ಬರಲಿಲ್ಲ ಸರಳಾ. ಮೇಲಾಗಿ ನೀನು ಅಷ್ಟು ಕುರುಡಾಗಿ ರಾಜನ್ನ ಆರಾಧಿಸ್ತಾ ಇರೋವಾಗ ನಾನು ಹೇಳಿದ್ದರೂ ನನ್ನಲ್ಲಿ ನಿನಗೆ ಅಪನಂಬಿಕೆ ಆಗುತ್ತಿತ್ತೇ ವಿನಾ. ನಿನ್ನ ಅಚಲವಾದ ನಂಬಿಕೆ ರಾಜನಿಂದ ಸರಿಯದು ಎಂದು ಬಲ್ಲ ನಾನು ಎಷ್ಟೋ ಆಲೋಚಿಸಿದ ಮೇಲೆ ನಿನಗೆ ಹೇಳುವುದೇ ಬೇಡ ಅಂತ ನಿರ್ಧಾರ ಮಾಡಿಬಿಟ್ಟೆ. ಈಗ ಸಂದರ್ಭ ಬಂತು ಅಂತ ಹೇಳಿದ್ದೀನಿ.

ನನ್ನನ್ನು ತಪ್ಪು ತಿಳಿಬೇಡ ಸರೂ. ನಿನ್ನ ಮೇಲಿನ ಅಸೂಯೆಗಾಗಲಿ; ನಿಮ್ಮ ಪ್ರೇಮ ಒಡೀಬೇಕೂಂತ ಆಗಲಿ ನಾನು ಕಲ್ಪಿಸಿದ ಕತೆಯಲ್ಲ ಸರಳ ಇದು. ನಾನು ಕಂಡ ಸತ್ಯ. ವಾಸ್ತವ ಸತ್ಯ" ಎಂದು ನೊಂದು ಹೇಳಿದಳು.

ನಾನು ಮೌನವಾಗಿ ಅಳುತ್ತಿದ್ದೆ. "ಗಟ್ಟಿಯಾಗಿ ಅತ್ತುಬಿಡು, ಸರಳಾ. ಹೃದಯದ ಬೇಗುದಿ ಕಡಿಮೆಯಾದೀತು. ಸುಮ್ಮನೆ ಒಳಗೇ ಕುದಿಯಬೇಡ" ಎಂದು ನನ್ನನ್ನು ಮಡಿಲೊಳಕ್ಕೆಳೆದುಕೊಂಡಳು. ತೃಪ್ತಿಯಾಗುವಷ್ಟು ಅತ್ತೆ ಅವಳ ಮಡಿಲಲ್ಲಿ ಮುಖವಿಟ್ಟು. ಅವಳು ಏನೂ ಹೇಳದೆ ಬೆನ್ನು ಸವರುತ್ತಿದ್ದಳು. ಸ್ವಲ್ಪ ಹೊತ್ತಿನ ನಂತರ "ಸರೂ, ಈಗ ಸ್ವಲ್ಪ ಸಮಾಧಾನವಾಗಿರಬೇಕು ಅಲ್ವಾ ? ನಾನೊಂದು ಮಾತು ಹೇಳಿದರೆ ಕೇಳ್ತೀಯಾ" ಎಂದಳು ಮೃದುವಾಗಿ.

"ಹೇಳು ಮಧುರ"

"ನೀನು ಸಾಧ್ಯವಾದಷ್ಟೂ ರಾಜನಿಂದ ಸ್ವಲ್ಪ ದೂರ ಇರೋಕ್ಕೆ ಪ್ರಯತ್ನಿಸು. ನಿನ್ನ ಅನಾದರಣೆಯಾದರೂ ಅವನಲ್ಲಿ ಮಾರ್ಪು ತರಬಹುದು. ಅವನು ನಿನ್ನೆಡೆಗೆ ಹೆಚ್ಚು ಪ್ರೇಮ ತೋರಬಹುದು."

"ನನ್ನೊಂದಿಗೆ ಬಹಳ ಪ್ರೇಮದಿಂದಲೇ ವರ್ತಿಸ್ತಾನೆ ಮಧುರಾ. ಅವನ ಪ್ರೇಮದಲ್ಲಿ ನಾನು ಯಾವ ಲೋಪವನ್ನೂ ಕಂಡಿಲ್ಲ"

"ಅಯ್ಯೋ ಸರಳಾ ! ನಿನ್ನ ಅಂಧಶ್ರದ್ಧೆಗೆ ನನ್ನ ವಂದನೆಗಳು. ಆದರೂ ಹೀಗೆ ಆರಾಧಿಸಬೇಡ. ಅವನನ್ನು ಮನುಷ್ಯನಂತೆ ನೋಡುವುದು ಕಲಿತುಕೋ.

ನೀನು ಬಹಳ ನಿಷ್ಠಾವಂತಳು. ನಿಯತ್ತಿನವಳು ಭಾವುಕಳು ಕೂಡ. ನಿನಗೆ ಒಂದು ಸಣ್ಣ ವಯಸ್ಸಿನ ಘಾಯವೂ ಬಹಳ ದೊಡ್ಡ ಪರಿಣಾಮದಲ್ಲಿ ನೋಯಿಸುತ್ತದೆ ಸರಳಾ.

ತಿಳಿದೂ ತಿಳಿದೂ ದುಃಖವನ್ನೇ ಕೊಂಡುಕೊಳ್ಳಬೇಡ, ಅವನಿಂದ ದೂರ ಇರಲು ಪ್ರಯತ್ನಿಸು. ಅವನಿಗೆ ಹೆಚ್ಚು ಪ್ರೋತ್ಸಾಹ ಕೊಡಬೇಡ. ಮದುವೆಗೆ ಮುಂಚೆ ಪ್ರೋತ್ಸಾಹ ನೀಡೋದು ಅಪಾಯಕರ. ದಾಂಪತ್ಯಕ್ಕೆ ಹಾನಿ.

ಸರಳಾ, ಒಮ್ಮೊಮ್ಮೆ ನಂಗನ್ನಿಸುತ್ತೆ ರಾಜ ನಿನಗೆ ಯಾವ ವಿಧದಲ್ಲೂ ಜೋಡಿಯಲ್ಲಾಂತ. ನೀನು ಪ್ರಕೃತಿ ಪ್ರಿಯೆ, ಅವನಿಗೆ ನಿಸರ್ಗದೆಡೆಗೆ ದೃಷ್ಟಿ ಯಿಲ್ಲ. ನೀನು ಆದರ್ಶಗಳಿಗಾಗಿ ಬದುಕಲಾಶಿಸುವವಳು. ಅವನು ನಿಜ ಜೀವನದಲ್ಲಿ ಬೆಲೆಯಿರೋವನು. ನೀನು ಧಾರಾಳಿ. ಅವನ ಕೈ ಬಿಗಿ. ನೀನು ನಡೆದುದನ್ನೂ, ನಡೆಯುವುದನ್ನೂ, ಅಳೆದು ತೂಗಿ ನೋಡುವವಳು. ಅವನು ಇಂದಿನದನ್ನು ಮಾತ್ರ ಸವಿದು ಹಿಂದಿನದನ್ನು ಮರೆತು ಮುಂದಿನ ದನ್ನು ಯೋಚಿಸಲಿಷ್ಟವಿಲ್ಲದವರ ಗುಂಪಿಗೆ ಸೇರಿದವನು. ನಿನಗೆ ಜೀವನದಲ್ಲಿ ನಿಷ್ಠೆ ಶ್ರದ್ಧೆಗಳೇ ಧ್ಯೇಯ. ಅವನಿಗೆ ಬಾಳಿನಲ್ಲಿ ವಿಲಾಸ ರಸಿಕತೆಗೇ ಬೆಲೆ.

ನೀವಿಬ್ಬರೂ ಒಬ್ಬರಿಗೊಬ್ಬರು ಹೇಗೆ ಹೊಂದಿ ನಡೆಯುವಿರೆಂಬುದೇ ನನಗೆ ಸಂಶಯ ಸರಳಾ. ನೀನು ತುಂಬುಪ್ರೇಮಿ ನನಗೆ ಗೊತ್ತು. ನಿನ್ನ ಪ್ರೇಮವನ್ನು ಅದೇ ಪ್ರವಾಹಣದಲ್ಲಿ ಅವನು ಹಿಂತಿರುಗಿಸುತ್ತಿದ್ದಾನೆಯೋ ಅನ್ನೋ ಪ್ರಶ್ನೆ ನನ್ನನ್ನು ಕಾಡುತ್ತೆ. ಯೋಚನೆ ಮಾಡು ಸರಳಾ. ಒಂದು ವೇಳೆ ನೀನು ಅವನ ಕೇವಲ ರೂಪಕ್ಕೇ ಮನಸೋತಿದ್ದೀಯೇನೋ ಅಂತಾನೂ ನನಗನ್ನಿಸುತ್ತೆ.

ನಿನ್ನನ್ನ ಕುರಿತು ನೀನು ಯೋಚ್ನೆ ಮಾಡೋ ಸಮಯ ಈಗ ಬಂದಿದೆ ಸರಳಾ, ಒಂದೆರಡು ನಿಮಿಷ ರಾಜನ್ನ ನಿನ್ನ ಮನಃಪಟಲದಿಂದ ಹಿಂದೆ ತಳ್ಳಿ ನಿನ್ನನ್ನು ನೀನು ನೋಡಿಕೊ. ಮನುಷ್ಯನಿಗೆ ಸ್ವಲ್ಪ ಸ್ವಾರ್ಥವೂ ಇರಬೇಕು ಸರಳಾ." ಎಂದೆಲ್ಲಾ ಬಹಳ ಹೊತ್ತು ಬದ್ಧಿ ಹೇಳಿದಳು ಮಧುರಾ. ಕಡೆಗೆ ಸೇರಿಸಿದಳು--"ಇದೆಲ್ಲಾ ಬರಡು ಭಾಷಣ ಅಂತ ತಳ್ಳಿ ಹಾಕಬೇಡ. ನಿನ

ಗಿಂತ ನಾನು ಹಿರಿಯಳು. ಪ್ರಪಂಚಾನ್ನ ಹೆಚ್ಚು ನೋಡಿದ್ದೇನೆ. ಈಗ ಲಾದರೂ ನೀನು ಕಣ್ಣು ತೆಗೆದರೆ ನಿನಗೇ ಒಳ್ಳೆಯದು" ಎಂದು ನಿಲ್ಲಿಸಿದಳು.

"ಮಧುರಾ" ಎಂದು ನರಳಿದೆ ನೋವಿನಿಂದ.

"ನೊಂದುಕೊಳ್ಳಬೇಡ. ಧೈರ್ಯ ತಂದುಕೋ. ನಿನ್ನ ಹೃದಯ ಸಿಂಹಾಸನನಿಂದ ಅವನನ್ನು ಕೆಳಗಿಳಿಸಲಾರೆ ನೀನು ಅನ್ನೋದು ನನಗೆ ತಿಳಿದ ವಿಷಯ. ಆದರೆ ಅವನೇ ಅಲ್ಲಿಂದ ಉರುಳಿ ಬೀಳುತ್ತಿದ್ದಾಗ ತಡೆಯಲು ಸಾಧ್ಯವಿಲ್ಲದಿದ್ದರೆ ನಿರಾಶಳಾಗಬೇಡ. ಇಷ್ಟು ಸಾಕು. ಎಲ್ಲಿ ಎದ್ದು ಮುಖ ತೊಳೆದುಕೋ ಕೆಲಸದ ಕಡೆ ಹೋಗೋಣ" ಎಂದು ಎಬ್ಬಿಸಿದಳು.

ಮುಖತೊಳೆದು ನನ್ನ ಜಾಗಕ್ಕೆ ಹೋದೆ. ನನ್ನಿಂದ ಒಂದು ತೃಣ ಕೆಲಸವೂ ಮಾಡಲಾಗಲಿಲ್ಲ, ಪರ್ಮಿಷನ್ ಪಡೆದು ಮನೆಗೆ ಹೊರಟೆ. ಹೋಗುವ ಮುಂಚೆ ಮಧುರಳಿಗೆ ಹೇಳಿ ಹೋಗೋಣವೆಂದು ಅವಳ ಬಳಿ ಹೋದಾಗ––"ನನ್ನ ಮಾತು ನೆನಪಿಟ್ಟುಕೊ ಸರೂ. ನಿನ್ನ ಕುರಿತು ನೀನು ಯೋಚಿಸು. ರಾಜನ ನೆನಪೇ ಪ್ರಾಧಾನ್ಯ ಮಾಡಿಕೊಳ್ಳಬೇಡ. ನಿನಗೆ ವಂಚನೆ ಮಾಡಿಕೊಳ್ಳಬೇಡ. **Be a sensible girl.** ಹೋಗಿ ಬಾ" ಎಂದು ಕಳುಹಿಸಿಕೊಟ್ಟಳು.

ದಂಗು ಬಡಿದಂತೆ ಕತೆ ಕೇಳುತ್ತಿದ್ದ ಸುಮಿತ್ರಾ–"ರಾಜ ಏಕೆ ಹಾಗಾಗಿ ಬಿಟ್ಟ ಸರಳಕ್ಕ" ಎಂದಳು.

"ಅದೇ ನನ್ನ ಬೃಹತ್ಪ್ರಶ್ನೆ. ಅರಿವಾಗದ ಸಮಸ್ಯೆ. ರಾಜ ಏಕೆ ಹಾಗೆ, ಏಕೆ ಹಾಗೆ ಎಂದು ಒಂದೇ ಸಮ ನನ್ನ ಹೃದಯ ರೋದಿಸತೊಡಗಿತು. ನಾನವನಿಗೇನೂ ಕಡಿಮೆ ಮಾಡಿರಲಿಲ್ಲ. ಆದರೂ ಬೇರೆ ಹೆಣ್ಣುಗಳ ಗೆಳೆತನದ ಆಸೆಯೇಕೆ ಅವನಿಗೆ ಎನ್ನುವುದು ನನಗೆ ಅರ್ಥವೇ ಆಗಲಿಲ್ಲ. 'ಆಗಲಿಲ್ಲ' ಅನ್ನೋ ಭೂತಕಾಲವೇಕೆ ? ಇಂದಿಗೂ ನನಗರಿವಾಗದೆ ಇರೋ ಶೇಷ ಪ್ರಶ್ನೆ ಅದು. ರಾಜ ಹಾಗೆಯೇ ಉಳಿದುಬಿಟ್ಟಿದ್ದಾನೋ ಇಲ್ಲ ಪರಿವರ್ತಿಸಿದಾನೋ. ಅದೂ ನನಗೆ ತಿಳಿಯದು ಸುಮಿತ್ರಾ"

"ಎಂತಹ ಅನ್ಯಾಯ ಜರುಗಿಬಿಟ್ಟಿತು ಸರಳಕ್ಕ ನಿನ್ನ ಬಾಳಿನಲ್ಲಿ" ಕಳಕಳಿಸಿ ನುಡಿದಳು ತಂಗಿ.

"ನನ್ನಲ್ಲಿ ಇನ್ನೂ ಸ್ವಲ್ಪ ಪ್ರೇಮ, ಭೂತದಯೆ ಕರುಣೆಗಳು ಉಳಿ

ದಿದ್ದುವು ಅದನ್ನೂ ಪೂರ್ಣವಾಗಿ ಹೀರಿಬಿಡಲು ವಿಧಿ ನಿಶ್ಚಯಿಸಿತ್ತು. ನನ್ನ ಬಾಳಮಂದಿರದ ಒಂದು ಸ್ಥಂಭ ಎಂದೋ ಕುಸಿದು ಮಣ್ಣಾಗಿ ಹೋಗಿತ್ತಲ್ಲಾ ಮತ್ತೆ ಮೂರು ಸ್ತಂಭಗಳು ಈ ಮಂದಿರದ ಭಾರವನ್ನು ತೊರೆದು ದೂರ ನಿಂತುವು. ಉಳಿದ ಎರಡೇ ಸ್ತಂಭಗಳಲ್ಲಿ ಎರಡೂ ಕುಂಠಿತವಾಗುವ ಸೂಚನೆ ತೋರಿದುವು, ಒಂದು ರಾಜ, ಮತ್ತೊಂದು ಅಪ್ಪ.

ರಾಜನೂ ಜಾರಿಬಿಡುವ ಜಾಡು ಹಿಡಿದಿದ್ದ. ಯಾರು ಎಷ್ಟೇ ಅವನ ವಿಷಯವಾಗಿ ಹೇಳಿದರೂ ಅವನಿಂದ ನನ್ನ ಮನಸ್ಸನ್ನು ಹಿಂತೆಗೆಯಲಾರ ದಾದೆ, ಅಣ್ಣನ ನಿಷ್ಠುರ ನುಡಿಗಳು. ಗೆಳತಿಯ ಹಿತವಾದ ಉಪದೇಶ ಯಾವುವೂ ಅವನಲ್ಲಿ ನನಗಿದ್ದ ಅಚಲವಾದ ನಂಬಿಕೆ, ಶ್ರದ್ಧೆಗಳನ್ನು ಶಿಥಿಲ ಗೊಳಿಸಲು ಅಸಮರ್ಥವಾದುವು. ನಾನು ಕಣ್ಣಾರೆ ಕಂಡರೆ ಮಾತ್ರ ನಂಬು ತ್ತೇನೆ ಅವನ ಮೇಲಿನ ಅಪವಾದ ಎಂದು ನಿಶ್ಚಯಿಸಿದೆ.

## ೧೩

ಒಂದು ಹತ್ತು ದಿನಗಳು ಮತ್ತೆ ಮತ್ತೆ ಮನಸ್ಸಿನಲ್ಲಿ ತುಮುಲ. ಮತ್ತೆ ಅದೇ ನಿಶ್ಚಯ. ಅಪಾರ ನಂಬಿಕೆ ಶ್ರದ್ಧೆ. ಇಷ್ಟರಲ್ಲಿ ಮನಸ್ಸಿಗೆ ಮತ್ತೊಂದು ಉಳಿಯಪೆಟ್ಟು ಕಾದಿತ್ತು ಸುಮಿತ್ರಾ.

ಅಂಚೆಯವನು ಸ್ವಲ್ಪ ಅನಾಹುತದ ಒಂದು ಪತ್ರವೇ ತಂದುಕೊಟ್ಟ. ಪತ್ರ ಬಂದಾಗ ಅಪ್ಪ ಮನೆಯಲ್ಲಿರಲಿಲ್ಲ. ಭೂಷಣನ ಕೈಬರಹ ಗುರುತಿಸಿ ಕಾಗದ ಒಡೆದೆ. ಒಕ್ಕಣೆ ಮನಸ್ಸಿಗೆ ಘಾಸಿಮಾಡಿತು.

ಪೂಜ್ಯ ತಂದೆಯವರಿಗೆ.

ಚಿ॥ ಸರಳಾಳ ಪತ್ರ ಬಂತು. ಕ್ಷಮೆ ಕೇಳಿ ಒಳ್ಳೆಯತನ ತೋರಿದ್ದಾಳೆ. ನಾನು ಬಂದದ್ದು ನನ್ನ ಮದುವೆ ವಿಷಯ ಪ್ರಸ್ತಾಪಿಸಲು. ಸರಳಳ ಪ್ರಕರಣದಲ್ಲಿ ನನಗೇನೂ ಮಾತನಾಡಲು ಇಷ್ಟವಾಗಲಿಲ್ಲ. ಅದ

ಕ್ಕಾಗೇ ಈಗ ಬರೆಯುತ್ತಿದ್ದೇನೆ. ನಾನು ಇಲ್ಲಿ ಒಬ್ಬ ಹುಡುಗಿಯನ್ನು ಪ್ರೇಮಿಸಿದೆ. ನಮ್ಮ ಜನವೇ. ಮದುವೆ ಮುಹೂರ್ತ ನಿಶ್ಚಯಿಸಿದ್ದಾರೆ ಅವಳ ತಂದೆ ತಾಯಿಗಳು. ನೀವು ಸರಳಾಳನ್ನು ಕರೆದುಕೊಂಡು ಈ ತಿಂಗಳ ಇಪ್ಪತ್ತೆರಡಕ್ಕೆ ಬೊಂಬಾಯಿಗೆ ಬರುವುದು.

ಹುಡುಗಿಯನ್ನು ಕುರಿತು ಎಷ್ಟೋ ಬರೆದಿದ್ದ. ನನಗೆ ಓದಲು ಸ್ವಲ್ಪವೂ ಇಷ್ಟವಾಗಲಿಲ್ಲ. ಇವನು ಮದುವೆಯಾಗುವ ಹುಡುಗಿಯನ್ನು ನಾವು ನೋಡುವುದಾಗಲಿ, ನಮ್ಮ ಒಪ್ಪಿಗೆಯಾಗಲಿ ಯಾವುದೂ ಬೇಡವೇ ಅಣ್ಣನಿಗೆ. ನಾಳೆ ನನಗೆ ಅತ್ತಿಗೆಯಾಗುವವಳನ್ನು ನನಗೆ ಪರಿಚಯಪಡಿಸುವುದೂ ಬೇಡವೆ.

ನಾವೆಂದರೆ ಇಷ್ಟು ಅಸಡ್ಡೆಯೇ? ನಾನೇನೂ ಇವನ ಪ್ರೇಮಕ್ಕೆ ಅಡ್ಡ ಬರುತ್ತಿರಲಿಲ್ಲ. ಹೋಗಲಿ, ಅಪ್ಪನಿಗಾದರೂ ಬರೆದು ಅಪ್ಪಣೆ ಪಡೆಯಬಾರದಿತ್ತೆ. ಅಪ್ಪ ಎಂದೂ ಮಕ್ಕಳ ಸಂತೋಷಕ್ಕೆ ಅಡ್ಡ ಬಂದವರಲ್ಲ. ಅಂತಹವರೂ ನಿರ್ಲಕ್ಷ್ಯವೇ ಎಂದು ವಿಲಿವಿಲಿ ಒದ್ದಾಡಿತು ನನ್ನ ಮನಸ್ಸು. ಅಪ್ಪನಿಗೆ ಆದ ಅವಮಾನದಿಂದ ಮದುವೆಗೆ ಹೋಗುವುದೇ ಬೇಡ ಎಂದು ನಿರ್ಧರಿಸಿದೆ.

ಅಪ್ಪ ಸಂಜೆಗೆ ಬಂದು ಕಾಗದ ಓದಿದವರು ಏನೂ ಮಾತನ್ನು ಆಡಲಿಲ್ಲ. ಮೌನ ತಾಳಿದರು. ಅತೀತವಾದ ಮೌನ. ಬೆಂಕಿ ಕಡ್ಡಿ ಗೀರಿ ಆ ಪತ್ರ ಸುಟ್ಟುಬಿಟ್ಟರು—"ಭೂಷಣ ಇನ್ನು ನಮಗೆ ಪರಕೀಯ. ಹೋಗಲಿ ಎಲ್ಲಿಯಾದ್ರೂ ಸುಖವಾಗಿರಲಿ" ಎಂದರು ಅಷ್ಟೆ.

ಅವನ ಮದುವೆಗೆ ಹೋಗುವ ವಿಚಾರವಾಗಲಿ, ತಮ್ಮನ್ನು ನಿಕೃಷ್ಟ ಮಾಡಿದನೆಂಬ ನೋವಾಗಲಿ ಅವರು ಉಚ್ಚರಿಸಲಿಲ್ಲ. ಅದು ಯಾವ ಕೇಡಿಗೋ ಅಂತ ಹೆದರಿದೆ. ನನ್ನ ಭಯ ನಿಜವಾಯಿತು.

ರಾತ್ರಿ ಸ್ವಲ್ಪ ಜ್ವರ ಬಂತು. ಏನೇನೋ ಕನವರಿಸಿದರು. ಬೆಳಗಾಗುವ ವೇಳೆಗೆ ಪಾರ್ಶ್ವವಾಯು ಹೊಡೆದಿತ್ತು. ನರಗಳು ಅವರಿಗಾದ ಆಘಾತವನ್ನು ತಡೆದುಕೊಳ್ಳಲಿಲ್ಲ.

"ತ್ಸು ! ತ್ಸು ! ಎಂತಹ ಘೋರ. ಎಂತಹ ಕೃತಘ್ನ ಪುತ್ರನಾದ ಭೂಷಣ" ಎಂದು ಸುಮಿತ್ರ ದನಿಗೂಡಿಸಿದಳು.

"ಅವನನ್ನೇಕೆ ಅನ್ನಬೇಕು ಸುಮಿತ್ರಾ. ಅದು ನಮ್ಮ ಕರ್ಮ ಅಷ್ಟೆ. ನಮ್ಮ ತಂದೆ ಪಡುತ್ತಿದ್ದ ಭಾಧೆ ನೋಡಲಾಗುತ್ತಿರಲಿಲ್ಲ. ಎಂತಹ ಪುಣ್ಯಜೀವಿ ನಮ್ಮ ತಂದೆ. ಒಬ್ಬರಿಗೆ ಒಂದು ಕೆಡಕು ಮಾಡದ ಆ ಜೀವಿಗೆ ಎಂತಹ ಸ್ಥಿತಿ. ಈ ಪೆಟ್ಟಿನಿಂದ ನನಗೆ ದೇವರಲ್ಲಿ ನಂಬಿಕೆ ಕೆಟ್ಟಿತು. ಒಳ್ಳೆಯವರಿಗೇ ದುಃಖ ಕೊಡುವ ಅವನಿಗೇಕೆ ಮಣಿಯಬೇಕು ಎಂದು ವಾದಿಸಿತು ನನ್ನ ನೊಂದ ಹೃದಯ. ದೇವರಿಗೆ ದೀಪ ಹಚ್ಚುವುದನ್ನೂ ಸಹ ಬಿಟ್ಟು ಬಿಟ್ಟೆ. ಪೂರಾ ನಾಸ್ತಿಕಳಾಗದಿದ್ದರೂ. ಅಸ್ತಿಕತೆಯ ಅಡಿಗಲ್ಲು ಕಿತ್ತು ಹೋಯಿತು. ತಳಹದಿಯೇ ಶಿಥಿಲವಾದ ಮೇಲೆ ಮಂದಿರದ ಸ್ಥಿರತೆ ಎಲ್ಲಿ ಬಂತು. ಅದು ಕುಸಿಯಿತು.

ಅಕ್ಕ ಪಕ್ಕದ ಮನೆಯವರ ನೆರವಿನಿಂದ, ಅಣ್ಣಂದಿರಿಗೆ ತಂತಿ ಕೊಡಿಸಿದೆ. ಉಮೇಶ, ಸತೀಶ ಬಂದರು. ಭೂಷಣ ಬರಲಿಲ್ಲ. ಯಾರು ಬಂದು ತಾನೇ ಏನು ಮಾಡುವಂತಿದ್ದರು ಮದ್ದಿಲ್ಲದ ಖಾಯಿಲೆಗೆ ?

ಅಣ್ಣಂದಿರಿಬ್ಬರೂ ಚಿಕ್ಕಮಕ್ಕಳಂತೆ ಅತ್ತುಬಿಟ್ಟರು. ನಾನೇ ತಾಯಿಯಾಗಿ ಅವರಿಗೆ ಸಮಾಧಾನ ಹೇಳಿದೆ. ರಜೆ ತೀರಿದ ಕೂಡಲೇ ಹೊರಟು ಹೋದರು ನಿರುತ್ಸಾಹರಾಗಿ.

ತಂದೆಯವರು ಮೂಕವೇದನೆ ಅನುಭವಿಸುತ್ತಿದ್ದರು. ಮೊದಲೇ ಮನೆಯ ಎಲ್ಲಾ ಜವಾಬ್ದಾರಿ ಹೊತ್ತಿದ್ದ, ನನ್ನ ಎಳೆಯ ಬೆನ್ನಮೇಲೆ, ತಮ್ಮನ್ನೂ ಹೊರಿಸುವಂತಾಯಿತಲ್ಲಾ ಎನ್ನುವುದು ಅವರ ನೋವು.

ಎಲ್ಲರಿಗೂ ಸಮಾಧಾನ ನಾನು ಹೇಳುತ್ತಿದ್ದರೂ, ನನ್ನನ್ನು ಸಂತೈಸಲು ಯಾರೂ ಇರಲಿಲ್ಲ, ನನ್ನ ತಲೆದಿಂಬಿಗೆ ಮಾತ್ರ ತಿಳಿಯುತ್ತಿತ್ತು ನನ್ನ ವೇದನೆ. ಹಗಲೆಲ್ಲಾ ಧೈರ್ಯವಾಗಿರುತಿದ್ದ ನನ್ನನ್ನು ನೋಡಿ ತಂದೆಗೆ ಧೈರ್ಯಬಂತು. ಸಮಾಧಾನದಿಂದ ಇರತೊಡಗಿದರು. ಎಡಪಾರ್ಶ್ವ ಪೂರಾ ನಿತ್ರಾಣವಾಗಿ ಉಪಯೋಗವಿಲ್ಲವಾಯಿತು. ಆದರೂ ಅಧೀರರಾಗದೇ ಇದ್ದರು. ತಾವೇ ಅಧೀರರಾದರೆ ನಾನು ಇನ್ನೂ ಕುಗ್ಗಿ ಹೋಗಬಹುದೆಂದು ಅವರು ಮುಖವಾಡ ಹಾಕಿದ್ದರು. ನಾನು ನೋವು ತೋರಿಸಿದರೆ ಅವರು ಧೈರ್ಯಗೆಡುತ್ತಾರೆಂದು ನಾನು ಶಾಂತತೆಯ ನಟನೆ ಮಾಡುತ್ತಿದ್ದೆ. ಹೀಗೆಯೇ ನಡೆದಿತ್ತು ಕಣ್ಣುಮುಚ್ಚಾಲೆ.

ರಾಜನ ಚಿಂತೆಗೆ ಕೂಡ ಅವಕಾಶವಿಲ್ಲದಷ್ಟು ನಮ್ಮ ತಂದೆ ನನ್ನ ಹೃದಯದಲ್ಲಿ ತುಂಬಿಹೋಗಿದ್ದರು. ಮಲಗಿದಾಗ ರಾಜನ ನೆನಪು ಕಾಡುತ್ತಿತ್ತು. ಈಗ ಮನ ನಿರ್ಧಾರ ಮಾಡಿಬಿಟ್ಟಿತ್ತು "ಇನ್ನು ಪ್ರೇಮಕ್ಕೆ ಸ್ಥಾನವಿಲ್ಲ. ಕರ್ತವ್ಯಕ್ಕೆ ಮಾತ್ರ ನನ್ನ ಬಾಳು ಮೀಸಲು" ಎಂದು. ಹೇಗಿದ್ದರೂ ರಾಜನ ಮನಸ್ಸು ನನ್ನಿಂದ ದೂರ ಓಡುತ್ತಿದೆ, ನಾನಿನ್ನು ಅದನ್ನು ಅಟ್ಟಿಸಿಕೊಂಡು ಹೋಗಿ ನನ್ನದಾಗಿ ಮಾಡಿಕೊಳ್ಳುವ ಆಸೆ ನನ್ನಲ್ಲಿ ಉಳಿಯಲಿಲ್ಲ. ನನ್ನ ಕಣ್ಣಿಗೆ ಅಂದು ಕಾಣುತ್ತಿದ್ದ ಪೂರ್ಣ ಜಗತ್ತು ನಮ್ಮ ತಂದೆ, ಅವರ ಉಪಚಾರ.

ನನ್ನಲ್ಲಿ ಸಂತೋಷ, ಸುಖ ಶಾಂತಿ ಮೊದಲಾದ ಒಳ್ಳೆಯ ಉದ್ವೇಗಗಳನ್ನು ತೋರ್ಪಡಿಸುವ ಶಕ್ತಿಯೇ ಉಡುಗಿ ಹೋಯಿತು. ಅಂತೆಯೇ ಆ ಬಾರಿ ರಾಜ ಬಂದಾಗ ಎಂದಿನಂತೆ ಚಿಗರೆಯಂತೆ ಓಡಿಹೋಗಿ ಅವನನ್ನು ಸ್ವಾಗತಿಸುವ ಸರಳಾ ಸತ್ತುಹೋದಳು. "ಬನ್ನಿ" ಎಂದಷ್ಟೇ ಹೇಳಿ ನಮ್ಮ ತಂದೆಯ ಬಳಿ ಬಿಟ್ಟು ನನ್ನ ಕೆಲಸಕ್ಕೆ ಹೊರಟುಹೋದೆ.

ನನ್ನ ನಿರುತ್ಸಾಹ ತಂದೆಯ ಸ್ಥಿತಿಯಿಂದ ಇರಬಹುದು ಎಂದು ಅವನು ನನ್ನನ್ನು ಏನೂ ಮಾತನಾಡಿಸಲಿಲ್ಲ. ತಂದೆಯನ್ನು ಮಾತನಾಡಿಸಿ ಹೊರಟು ಹೋದ, ರಾಜನ ಮುಖ ಕಂಡೊಡನೆ, ನಾನು ಕಾಣದ, ಆ ಕರೀ ಧುಡುಮಿ ನನ್ನ ಊಹೆಯಲ್ಲಿ ಅವನ ಪಕ್ಕದಲ್ಲಿ ಕಾಣಿಸ ತೊಡಗಿದಳು. ಈ ಊಹೆ ನನ್ನನ್ನು ಇನ್ನೂ ಕಠಿಣ ಮನಸ್ಕಳನ್ನಾಗಿ ಮಾಡಿತು.

ಮತ್ತೊಮ್ಮೆ ರಾಜ ಬಂದಾಗಲೂ ನಾನು ವಿಮುಖಳಾಗಿಯೇ ಉಳಿದಾಗ–"ಸರೂ. ಹಾಗೇ ಹೊರಗಡೆ ಸುತ್ತಾಡಿ ಬರೋಣವೇ" ಎಂದ.

"ಅಪ್ಪನನ್ನು ಬಿಟ್ಟು ನಾ ಬರಲಾರೆ" ಎಂದುಬಿಟ್ಟೆ. ನಾನು ಅಪ್ಪನಿಗಾಗಿ ನನ್ನೆಲ್ಲಾ ಸೌಖ್ಯವನ್ನೂ ತ್ಯಾಗ ಮಾಡುತ್ತಿದ್ದೇನೆಂದು ಬಗೆದರೋ ಏನೋ ಅಪ್ಪ, ಅವರೇ ರಾಜನಿಗೆ ನನ್ನನ್ನು ಎಲ್ಲಾದರೂ ಕರೆದೊಯ್ಯಬೇಕೆಂದು ಸೂಚಿಸಿದರು. ವಿಧಿಯೇ ಇರಲಿಲ್ಲ ಹೋಗದೆ, ಹೊರಟೆ ಅವನೊಂದಿಗೆ.

ರಾಜನೂ ಬಹಳ ಸಪ್ಪೆಯಾಗಿದ್ದ. ಕಾರಣ ಕೇಳುವ ಆಸಕ್ತಿ ನನಗಿರಲಿಲ್ಲ. ಈ ನಿರಾಸಕ್ತಿಗೆ ಕಾರಣ ರಾಜನ ವಿಷಯವಾಗಿ ಕೇಳಿದ ಘಟನೆಗಳಲ್ಲ.

ತಂದೆಯ ಅನಾರೋಗ್ಯವೂ ಅಲ್ಲ. ಇದ್ದಕ್ಕಿದ್ದಂತೆಯೇ ನನ್ನಲ್ಲಿ ಮೂಡಿ ಬಂದ ಒಂದು ವೈರಾಗ್ಯ.

ನಡೆದುಕೊಂಡೇ ಹೊರಟಿದ್ದೆವು. ಸಂಜೆ ಸುಂದರವಾಗಿತ್ತು. ರಮ್ಯ ವಾಗಿತ್ತು. ತಂಗಾಳಿ ಬೀಸುತ್ತಿತ್ತು. ಪ್ರಿಯ ಪ್ರೇಯಸಿಗಳಾಗಿದ್ದರೂ ನಾವು ಇದನ್ನಾವುದನ್ನೂ ಸವಿಯುತ್ತಾ ಹೋಗುವ ಸ್ಥಿತಿಯಲ್ಲಿರಲಿಲ್ಲ. ನಿಸರ್ಗ ಪ್ರಿಯಳಾಗಿದ್ದ ನಾನು ಬಾಯೇ ಬಿಡದೆ ನಡೆದದ್ದು ರಾಜನಿಗೆ ಆಶ್ಚರ್ಯ ವನ್ನುಂಟು ಮಾಡಬೇಕಾಗಿತ್ತು. ಆದರೆ ಅವನ ಮನವೂ ಏನೋ ಗಂಭೀರ ಆಲೋಚನೆಯಲ್ಲಿತ್ತು.

ಮೌನವಾಗಿ ಕಬ್ಬನ್‌ಪಾರ್ಕ್ ಸೇರಿ. ಒಂದು ಕಲ್ಲ ಬೆಂಚಿನ ಬಳಿ ಬಂದಾಗ, "ಇಲ್ಲಿ ಕುಳಿತುಕೊಳ್ಳೋಣವೇ" ಎಂದ.

"ಹುಂ"

"ಬೇಡ ಹುಲ್ಲ ಮೇಲೆ ಕುಳಿತುಕೊಳ್ಳೋಣ. ಹಾಯಂತಿರುತ್ತೆ"

"ಹುಂ"

"ಸರೂ ಯಾಕಿಷ್ಟು ಬೇಸರದಲ್ಲಿದ್ದೀ"

"ಏನಿಲ್ಲವಲ್ಲ. ಯಾವಾಗಲೂ ಇದ್ದ ಹಾಗೆಯೇ ಇದ್ದೇನಲ್ಲ"

"ಹೀಗೇ ಇರುತ್ತಿದ್ದೆಯಾ ಯಾವಾಗಲೂ? ನಿನ್ನ ನಗುಮುಖವೇ ಮಾಸಿ ಹೋಗಿದೆ ಸರಳಾ"

"ಹುಂ, ನಗಲು ಏನಿದೆ ಅಂತ ನಗಬೇಕು"

"ಅಪ್ಪನಿಗೆ ಹಾಗಾಗಿದೆ ಅಂತ ಇಷ್ಟು ಬೇಜಾರು ಮಾಡಿಕೊಂಡರೆ ಹೇಗೆ ಸರಳಾ ?"

"ಹೌದು. ನನಗೆ ಅಪ್ಪನನ್ನು ಬಿಟ್ಟರೆ ಬೇರೆ ಯಾರಿದ್ದಾರೆ ? ಅವ ರಿಗೂ ಹೀಗಾಗಿಬಿಟ್ಟಿತು"

"ಧೈರ್ಯ ಕಡಬೇಡ ಸರೂ. ನಾನಿಲ್ಲವೇ ಸರೂ ನಿನಗೆ ?"

ನಾನು ಮಾತನಾಡಲಿಲ್ಲ.

"ಯಾಕೆ ನೀನು. ಮಾತೇ ಆಡ್ತಾ ಇಲ್ಲ ? ನಿನ್ನೊಂದಿಗೆ ಎಷ್ಟೋ ಮಾತಾಡಬೇಕೂಂತ ಬಂದೆ. ನನ್ನ ಹೃದಯದ ಕಷ್ಟ ಹೇಳ್ಕೋಬೇಕೂಂತ ಅರಸಿ ಬಂದೆ. ಆದರೆ ನೀನು...."

"ಹೇಳಿ, ಈ ಹೃದಯ ಇನ್ನೂ ಏನು ಬೇಕಾದ್ರೂ ಕೇಳೋಕ್ಕೆ ತಯಾರಿದೆ."

"ನನಗೊಬ್ಬಳು ಮೇರಿ ಅನ್ನೋ ಸಹೋದ್ಯೋಗಿ ಇದ್ದಳು."

"ಇದ್ದಳು ಯಾಕೆ ? ಇದ್ದಾಳೆ ಅನ್ನಿ. ಆ ನಿಮ್ಮ ಗೆಳತೀನ್ನ ನಾನು ಬಲ್ಲೆ."

"ಹಾ ! ಹೇಗೆ ಬಲ್ಲೆ ಸರೂ."

"ನೀವು ಹೇಳದಿದ್ದ ಮಾತ್ರಕ್ಕೆ ನನಗೆ ತಿಳಿಯೋಲ್ವೆ ? ನಿಜವಾದ ಪ್ರೇಮವಿದ್ದರೆ ಪ್ರೇಮಿಯ ಆಗುಹೋಗುಗಳೆಲ್ಲಾ ಕನ್ನಡಿ ಹಾಗೇ ತಿಳಿದು ಬಿಡುತ್ತೆ. ಸರಿ, ಏನು ಅವಳು" ನಾನು ನಿರ್ವಿಕಾರವಾಗಿ ಕೇಳಿದೆ.

"ಅವಳೀಗ ಇಲ್ಲ. ಅವಳಿಗೆ ಮದುವೆಯಾಯಿತು."

"ಓ, ಅವಳಿಗೆ ಮದುವೆ ಆಗಿಹೋಯಿತಲ್ಲಾ ಅಂತ ದುಃಖಪಡ್ತಿದ್ದೀರೇನು ?" ನನ್ನ ಧ್ವನಿಯಲ್ಲಿ ವ್ಯಂಗ್ಯ ಕೇಳಿಸಿತೋ ಏನ್ನೋ ತೀಕ್ಷ್ಣವಾಗಿ ನೋಡಿದ. ಆದರೆ ನಾನು ಯಾವ ಭಾವವನ್ನೂ ವ್ಯಕ್ತಪಡಿಸಿರಲಿಲ್ಲ.

"ದುಃಖವಲ್ಲ ಸರಳಾ, ಅವಳು ಬಹಳ ಒಳ್ಳೇವ್ಳು. ನನ್ನನ್ನು ಬಹಳ ಇಷ್ಟಪಡ್ತಿದ್ಳು."

"ಪಾಪ, ನೀವು ಅವಳ ಇಷ್ಟಾನ್ನ ಹಿಂತಿರುಗಿಸಲಿಲ್ಲವೇನೋ ?"

ಸರೂ !! ಅವಳು ಕ್ರಿಶ್ಚಿಯನ್."

"ಪ್ರೀತಿ ಪ್ರೇಮಗಳಿಗೆ ಜಾತಿ ಏನು ಮಾಡುತ್ತಿತ್ತು."

"ಜಾತಿ ಅಲ್ಲ ಸರಳಾ. ಅವಳು ನನ್ನ ಪ್ರೀತಿಸಿದ್ಳು. ನಾನು ಊಹುಂ"

"ಸುಮ್ಮನೆ ಅವಳ್ನ ಕಟ್ಕೊಂಡು, ಒಂದು ಹತ್ತು ಸಿನಿಮಾ, ನಾಲಕ್ಕು ಹೋಟೆಲು, ಒಂದೆರಡು ಪಿಕ್‌ನಿಕ್ ತಿರುಗಿದಿರಿ. ಅವಳ ಮನಸ್ಸಿನಲ್ಲಿ ನಿಮ್ಮ ಸುತ್ತ ಒಂದು ಆಶೆಯ ಕೋಪುರ ಕಟ್ಟಿಕೊಳ್ಳೋವರೆಗೂ ಎಳೆದಾಡಿ, ಕೈ ಬಿಟ್ಟಿರಿ ಅಲ್ಲವೆ ?"

"ಸರಳಾ !!" ಅವನಿಗೆ ಕೋಪ ಬಂತು, ನಿಜ ನುಡಿದಿದ್ದೆ ನಾನು ಅದಕ್ಕಾಗಿ.

"ರಾಜ ನನಗೆಲ್ಲಾ ಗೊತ್ತು. ಮನುಷ್ಯರೊಂದಿಗೆ ಆಡಬಹುದು,

ಆದರೆ ಮನಸ್ಸುಗಳೊಂದಿಗೆ ಆಡುವುದು ಹುಡುಗಾಟವಲ್ಲ" ನಿಟ್ಟುಸಿರಿನೊಂದಿಗೆ ಹೇಳಿದೆ.

"ನನಗೇನು ಗೊತ್ತು, ನಾನವಳಿಗೆ ಮಾಡುತ್ತಿದ್ದ ಸಣ್ಣಪುಟ್ಟ ಸಹಾಯಗಳನ್ನೇ ಅವಳು ಅಷ್ಟಾಗಿ ಭಾವಿಸುವಳೆಂದು. ಮಂಗಳೂರು ಕಡೆಯಿಂದ ಬಂದಿದ್ದಳು. ತನ್ನವರಾರೂ ಇರಲಿಲ್ಲವೆಂದು ಪೇಚಾಡುತ್ತಿದ್ದಾಗ ಅವಳಿಗೆ ನೆರವಾದೆ. ಅಷ್ಟಕ್ಕೆ ಅವಳು...."

"ಸಹಾಯ ಮಾಡಿದ ಮಾತ್ರಕ್ಕೆ ಪ್ರೀತಿಸಿಬಿಡುವಷ್ಟು ಮೂರ್ಖಳಲ್ಲ ಹೆಣ್ಣು. ಸಹಾಯ ಮಾಡಬೇಕಿದ್ರೆ ಅವಳನ್ನೇ ಕಟ್ಟಿಕೊಂಡು ಊರೆಲ್ಲಾ ಅಲೆಯಬೇಕಾಗಿರಲಿಲ್ಲ. ಹತ್ತೂ ಜನರ ಬಾಯಲ್ಲಿ ಬೀಳಬೇಕಾಗಿರಲಿಲ್ಲ. ಆದು ಸರಿ, ನಿಮ್ಮನ್ನು ಪ್ರೀತಿಸಿ, ಬೇರೆ ಯಾರನ್ನೋ ಹೇಗೆ ಮದುವೆಯಾದಳು ?" ನ್ಯಾಯಾಧೀಶಳಂತೆ ಪ್ರಶ್ನಿಸಿದ್ದೆ.

ತಲೆ ತಗ್ಗಿಸಿ ಕುಳಿತಿದ್ದ ರಾಜ. ಹೇಗೆ ತಲೆಯೆತ್ತಿಯಾನು ? ಅವನ ಹೇಯಕೃತ್ಯ ಬಹಿರಂಗವಾಗಿದ್ದಾಗ ! ತಲೆ ತಗ್ಗಿಸಿಯೇ ಉತ್ತರಿಸಿದ--"ನನ್ನನ್ನು ಮದುವೆಯಾಗುವೆಯಾ ಅಂತ ಕೇಳಿದ್ಳು. ನಾನು ಅವಳಿಗೆ ಹೇಳಿದೆ ನಾನು ಅವಳನ್ನು ಒಬ್ಬ ಗೆಳತಿಯಂತೆ ನೋಡಿದೆನೇ ಹೊರತು ಪ್ರೀತಿಸಲಿಲ್ಲ ಅಂತ. ಬಹಳ ಅತ್ತುಬಿಟ್ಟಳು. ಅವರ ತಂದೆ ಗೊತ್ತು ಮಾಡಿದ ಹುಡುಗನನ್ನೇ ಮದುವೆ ಆದಳು."

"ಒಂದು ವೇಳೆ ಅವಳು ಕ್ರಿಶ್ಚಿಯನ್ ಆಗದೆ ನಿಮ್ಮ ಜನವೇ ಆಗಿದ್ದಿದ್ದರೆ, ಆಗ ಏನು ಮಾಡುತ್ತಿದ್ದಿರಿ ? ಸರಳಾ ನಿಮ್ಮ ಪಾಲಿಗೆ ಸತ್ತು ಹೋಗಿದ್ದಾಳೆಂದು ತಿಳಿದಿದ್ದಿರೇನು ? ನನಗೆ ನಿಮ್ಮ ಈ ವಿಷಯ ತಿಳಿದಾಗ, ನಿಮ್ಮಲ್ಲಿನ ಅಚಲ ಅಂಧಶ್ರದ್ಧೆಯಿಂದಾಗಿ ನನಗೆ ಸುದ್ದಿ ಕೊಟ್ಟವರನ್ನೇ ಬೈದು ಕಳುಹಿಸಿದೆ. ಭೂಷಣನಿಗೂ ನನಗೂ ದೊಡ್ಡ ವಾಗ್ವಾದವೇ ಆಯಿತು. ಆದರೆ ಇಂದು ತಿಳಿಯಿತು, ನಿಮ್ಮ ಮನಸ್ಸಿನ ಕುದುರೆ ಯಾವ ಗಲ್ಲಿಗಾದರೂ ಓಡಲು ತಯಾರಿದೆ ಎಂದು" ಈ ಕಡೆಯ ವಾಕ್ಯ ಹೇಳುವಾಗ ತಡೆದು ಕಟ್ಟಿ ಹಾಕಿದ್ದ ಕಾವೇರಿ ಕಟ್ಟೆಯೊಡೆದು ಪ್ರವಾಹವಾಗಿ ಹರಿದಳು.

"ಅಳಬೇಡ ಸರಳಾ....ಸರೂ, ಛಿ, ಚಿಕ್ಕಮಗುವಿನ ಹಾಗೆ ಆಡುವಿ

ಯೆಲ್ಲಾ ಎಂದು ಬಳಿಗೆ ಕರೆದುಕೊಂಡ. ಅವನ ವಿಶಾಲವಾದ ಎದೆಯಲ್ಲಿ ಮುಖ ಹುದುಗಿಸಿ ಅತ್ತುಬಿಟ್ಟೆ.

"ತಪ್ಪಾಯ್ತು ಸರೂ, ನೀನಿಷ್ಟು ನೊಂದುಕೊಳ್ತಿ ಅಂತ ನಾನಂದು ಕೊಳ್ಳಲಿಲ್ಲ. ಹೋಗ ಬಿಡು. ಅವಳು ಹೊರಟುಹೋದಳಲ್ಲಾ ಇನ್ನ್ಯಾಕೆ ಬೇಸರ ಮಾಡಿಕೊಳ್ತಿ ?"

"ನೀವು ನನ್ನ ದೂರ ಮಾಡಿಬಿಡ್ತೀರಿ ರಾಜ. ಈ ಭಯ ನನ್ನನ್ನು ಕಾಡಿಸ್ತಾ ಇದೆ. ನಿಮ್ಮ ಕ್ಲಾಸ್‌ಮೇಟ್ ವಿಜಯಳನ್ನು ಹೇಗೆ ಪ್ರೋತ್ಸಾಹಿಸಿದ್ರಿ. ನನ್ನ ಕೈ ಬಿಡಬೇಡಿ ರಾಜ. ನಿಮ್ಮನ್ನೇ ನಂಬಿರೋವ್ಳು ನಾನು."

"ಹುಚ್ಚು ಮಾತಲ್ವೇನು ಇದು, ಒಂದು ಹೆಣ್ಣನ್ನು ಒಂದೆರಡು ಬಾರಿ ಎಲ್ಲಾದ್ರೂ ಕರೆಕೊಂಡು ಹೋದ ಮಾತ್ರಕ್ಕೆ ನಿನ್ನನ್ನು ಮರೆತೇ ಬಿಟ್ಟೆ ಅನ್ನೋಷ್ಟು ಕಲ್ಪಿಸಿಕೊಳ್ಳೋದೆ ಸರೂ" ದುಃಖದಿಂದ, ನಲ್ಮೆಯಿಂದ ಆದರಿಸಿದ.

ಹಗುರವಾಯಿತು ಮನಸ್ಸು. ಮಧುರಾ ಹೇಳಿದ ಉಪದೇಶವೆಲ್ಲಾ ಬೀಸುತ್ತಿದ್ದ ತಂಗಾಳಿಯಲ್ಲಿ ಐಕ್ಯವಾಯಿತು. ಕಲ್ಲಾಗಿದ್ದ ಹೃದಯ ರಾಜನ ತಂಪು ಮಾತಿನಲ್ಲಿ ಬೆಣ್ಣೆಯಾಯಿತು. ರಾಜನನ್ನು ಮತ್ತೆ ಪ್ರತಿಷ್ಠಾಪಿಸಿಕೊಂಡೆ ಹೃದಯ ಮಂದಿರದಲ್ಲಿ.

"ಆದರೆ ಸುಮಿತ್ರಾ, ನಾಯಿಯ ಬಾಲು ಡೊಂಕು ಎಂದು ಮಾತ್ರ ಹೇಳಿದರು ಹಿರಿಯರು. ಗಂಡಸರ ಮನಸ್ಸೂ ಅಷ್ಟೆ ಎಂದು ಏಕೆ ಹೇಳಲಿಲ್ಲವೋ" ಎಂದು ನಿಟ್ಟುಸಿರು ಬಿಟ್ಟಳು ಸರಳಾ. ಜೊತೆಯಲ್ಲೇ ಅಂದಳು "ಹೊತ್ತಾಯಿತು ಸುಮಿತ್ರಾ. ನೀನು ನಿನ್ನ ರಾಜನಿಂದ ದೂರನಾಗಬಾರದು ಈ ಅಕ್ಕನ ಸಲುವಾಗಿ."

"ಎಷ್ಟು ಹೊತ್ತೇ ಆಗಲಿ, ನಿನ್ನ ಹೃದಯದ ಬೇಗುದಿ ಕಡಿಮೆ ಮಾಡಿಯೇ ನಾನು ಇಲ್ಲಿಂದ ಕದಲುವುದು ಸರಳಕ್ಕ. ನೀನು ಇಷ್ಟು ದಿನಗಳಿಂದ ಒತ್ತಿ ಒತ್ತಿ ಹಿಡಿದಿರೋ ದುಗುಡ ಈವತ್ತು ಹೊರಹೊಮ್ಮಲೇ ಬೇಕು" ಎಂದು ಮೊಂಡು ಹಿಡಿದು ಕುಳಿತಳು ಸುಮಿತ್ರ.

"ಮೇರಿಯ ಪ್ರಕರಣದ ನಂತರ ಒಂದು ವರ್ಷ ನನ್ನ ಬಾಳಿನ ಒಂದು ರಸಘಟ್ಟ, ರಾಜ ನನ್ನವನಾಗಿ ಉಳಿದ, ನಾವು ನಾವಾಗೇ ನಲಿದೆವು.

ಆಗೆಲ್ಲಾ ಕಾಣುತ್ತಿದ್ದುದು ಒಂದೇ ಒಂದು. ರಾಜನ ಮುಖ ನನಗಾಗುತ್ತಿದ್ದ ಅನುಭೂತಿ ಅಂದರೆ ಅನುರಾಗ ಮಾತ್ರ.

ಅಪ್ಪನ ಸ್ಥಿತಿಯೂ ಸುಧಾರಿಸಿತ್ತು. ಅಣ್ಣನ ಆರೈಕೆಗಾಗಿ ಅವರ ತಂಗಿ ಬಂದಿದ್ದರು. ಆಕೆ ವಿಧವೆ, ಮಕ್ಕಳೆಲ್ಲಾ ಬೆಳೆದು ದೊಡ್ಡವರಾಗಿದ್ದುದರಿಂದ ನಿಶ್ಚಿಂತೆಯಿಂದ ಬಂದು ನಮ್ಮ ಮನೆಯಲ್ಲಿ ನಿಂತರು.

ಬತ್ತಿ ಹೋಗುತ್ತಿದ್ದ ನನ್ನ ಬಾಳ್ವೆಯಲ್ಲಿ ರಾಜ ಕಾರಂಜಿಯಾದ. ಟೂರ್ ಮಾಡುವ ಅಗತ್ಯವೂ ಇಲ್ಲದ್ದರಿಂದ ಬೆಂಗಳೂರಿನಲ್ಲೇ ಉಳಿದ. ಒಣಗುತ್ತಿದ್ದ ನನ್ನ ಆಶಾಬಳ್ಳಿ ಮತ್ತೆ ಚಿಗುರತೊಡಗಿತು.

## ೧೪

"ಸುಖ ಶಾಂತಿಗಳು ಕ್ಷಣಭಂಗುರ ಸುಮಿತ್ರಾ ನನ್ನ ಮತ್ತು ರಾಜನ ಪ್ರೇಮ, ಶಿಖರ ಮುಟ್ಟದಿದ್ದರೆ ಚೆನ್ನಾಗಿತ್ತೇನೋ. ಪ್ರೇಮ ಪ್ರೇಮವಾಗಿಯೇ ಉಳಿದಿದ್ದರೆ ಚೆನ್ನಾಗಿತ್ತು. ಆದರೆ ಪ್ರೇಮದ ಉನ್ಮತ್ತತೆಯಲ್ಲಿ ಮೈ ಮರೆತ ನಮ್ಮಲ್ಲಿ ಕಾಮಸಂಚಾರವಾಯಿತು. ಅದನ್ನು ಹೇಗೆ ಹೇಳಬೇಕೋ ತಿಳಿಯದು ಸುಮಿತ್ರಾ. ನನ್ನ ಹೃದಯ ಇಂದು ಬೆಂದು ಹೋಗುತ್ತಿರುವುದು ಆ ದಿನದ ಘಟನೆಯಿಂದ. ಅದು ಆಗಬಾರದಾಗಿತ್ತು. ಆದರೆ ಆಗಿಹೋಯಿತು" ಎಂದು ಹಾಸಿಗೆಯ ಮೇಲೆ ಉರುಳಿ ರೋದಿಸತೊಡಗಿದಳು ಸರಳಾ.

"ನಿನಗೆ ಹೇಳುವುದು ಕಷ್ಟವಾದರೆ ಬೇಡ ಸರಳಕ್ಕ. ಮನಸ್ಸಿಗೆ ಅಹಿತವಾದುದನ್ನು ನುಡಿಯುವುದು ಕಷ್ಟ ಎಂದು ನಾನು ಬಲ್ಲೆ."

ಎದ್ದು ಕುಳಿತ ಸರಳಾ, "ಇಷ್ಟೆಲ್ಲಾ ಹೇಳಿದ ಮೇಲೆ ಮುಖ್ಯವಾದ ಘಟ್ಟಗಳನ್ನೇ ಹೇಳದಿದ್ದರೆ ಹೇಗೆ ? ಹೇಳುತ್ತೇನೆ ಸುಮಿತ್ರಾ ಕೇಳಿಬಿಡು.

ಆದರೆ, ಅದೆಲ್ಲಾ ನಿನ್ನಲ್ಲೇ ಉಳಿಯಬೇಕೇ ವಿನಾ ಅಲ್ಲಿಂದ ಬಾಯಿಂದ ಬಾಯಿಗೆ ಹೋಗಬಾರದು ಅಷ್ಟೇ"

"ನನ್ನನ್ನು ನಂಬು ಸರಳಕ್ಕ. ಇಂದಿನವರೆಗೆ ಆ ಹೊಲಸು ವಿದ್ಯೆ ನನ್ನಲ್ಲಿಲ್ಲ. ಮುಂದೆಯಾದರೂ ಬರಬಹುದು ಅಂತ ನನಗನ್ನಿಸೋಲ್ಲ"

"ರಾಜನ-ನನ್ನ ಪ್ರೇಮ ಪರಮಾವಧಿ ಮುಟ್ಟಿತ್ತಾದರೂ, ನಾನು ಎಲ್ಲೆಂದರಲ್ಲಿಗೆ ಅವನೊಂದಿಗೆ ಅಲೆಯಲು ಆಸೆಪಡಲಿಲ್ಲ. ನನಗೆ ಅವನು ಬೇಕು. ಅವನ ಪ್ರೇಮ ಬೇಕಿತ್ತೇವಿನಹ ನಮ್ಮ ಪ್ರೇಮವನ್ನು ಕುರಿತು ಹತ್ತು ಜನರೂ ಪ್ರಶಂಸೆ ಮಾಡಲಿ ಎಂಬ ಆಕಾಂಕ್ಷೆಯಿರಲಿಲ್ಲ. ಅವನ ಮನಸ್ಸಿನಲ್ಲೇನಿತ್ತೋ ಅರಿಯದಾದೆ.

ಅಂದು ಹುಣ್ಣಿಮೆಯ ಹಿಂದಿನ ದಿನ, ಅವನ ಹುಟ್ಟಿದ ಹಬ್ಬ. ಅವನಿಗೆ ಉಡುಗೊರೆಯಾಗಿ ಒಂದು ಸ್ವೆಟರ್ ಹೆಣೆದಿಟ್ಟಿದ್ದೆ, ತಂದೆಯ, ಅತ್ತೆಯ ಎದುರಿಗೆ ಹೇಗೆ ಕೊಡುವುದು ಎಂದು ಯೋಚಿಸುತ್ತಿದ್ದೆ. ರಾಜನೆಂದರೆ ನನಗೆ ಮಮತೆ ಇದೆ ಎಂಬ ವಿಷಯ ಅತ್ತೆಗೆ ತಿಳಿದಿತ್ತು. ಆದರೆ ಆ ಮಮತೆ ಯಾವ ಹಂತದ್ದು ಎನ್ನುವುದು ಆಕೆಗೆ ತಿಳಿಯದು. ಅವನ ಹುಟ್ಟುಹಬ್ಬಕ್ಕಾಗಿ ನಮ್ಮ ಮನೆಯಲ್ಲಿ ಹಬ್ಬ ಮಾಡಿ ಎಂದು ಆಕೆಯನ್ನು ಕೇಳಲಾರದಾದೆ.

ಹಿಂದಿನ ದಿನ ಆಫೀಸಿನಿಂದ ಬರುವಾಗಲೇ ಸ್ವಲ್ಪ ಸಿಹಿ ತಿಂಡಿ ತಂದಿಟ್ಟೆ. ಎಂದಿನಂತೆ ರಾಜ ಸಂಜೆ ನಮ್ಮ ಮನೆಗೆ ಬಂದ. ಬಹಳ ಹೊತ್ತು ಹರಟುತ್ತಾ ಕುಳಿತಿದ್ದೆವು. ಅತ್ತೆ ಹರಿಕಥೆ ಕೇಳಲು ಹೋಗಿದ್ದರು. ಅಪ್ಪ ಮಾತ್ರ ಮನೆಯಲ್ಲಿದ್ದರು.

ಹುಣ್ಣಿಮೆಯ ಹಿಂದಿನ ದಿನವಾದುದರಿಂದ ಪ್ರಕೃತಿ ತುಂಬಿ ತುಳುಕುತ್ತಿತ್ತು. ಚಂದ್ರನು ಮೆಲ್ಲ ಮೆಲ್ಲನೆ ಪೂರ್ವ ದಿಶೆಯಲ್ಲಿ ಮೇಲೆ ಮೇಲೆ ಬರುತ್ತಿದ್ದ. ಎಂಟು ಗಂಟೆಯ ಹೊತ್ತಿಗೆ ಸುಮಾರು ನಡುನೆತ್ತಿಯವರೆಗೆ ಬಂದಿದ್ದ. ಮುತ್ತೈದೆಯ ಶುಭ್ರವಾದ, ಅಗಲವಾದ ಹಣೆಯ ಮಧ್ಯದಲ್ಲಿ ರಾರಾಜಿಸುವ ಪವಿತ್ರ ಕುಂಕುಮದಂತೆ ಕಂಗೊಳಿಸುತ್ತಿದ್ದ, ಪೂರ್ಣಚಂದ್ರ ನಭೋ ಮಧ್ಯದಲ್ಲಿ. ಗಾಳಿ ಆಗೊಮ್ಮೆ ಈಗೊಮ್ಮೆ ಬೀಸುತ್ತಿದ್ದರೂ ತಂಪಾಗಿತ್ತು.

ತಂದೆಯವರು ಕೋಣೆಯಿಂದ ಹೊರಗಡೆ ಬಂದು-"ಅಮ್ಮ ಸರಳಾ,

ಬೆಳದಿಂಗಳು ಆನಂದವಾಗಿದೆ. ನಾನು ಒಂದರ್ಧ ಗಂಟೆ ಹಾಗೇ ಹಾಯಾಗಿ ಸುತ್ತಾಡಿಬರ್‍ತೀನಿ. ರಾಜ, ಅಷ್ಟರಲ್ಲಿ ಹೊರಟುಬಿಡಬೇಡ ಸರಳನ್ನ ಒಬ್ಬಳನ್ನೇ ಬಿಟ್ಟು" ಎಂದು ಕೈಲಿ ಕೋಲು ಹಿಡಿದು ನಡೆದುಬಿಟ್ಟರು.

ನನ್ನ ದೈವದ ಬಾಗಿಲು ತೆರೆದಂತಾಯಿತು. ರಾಜನಿಗೆ ಉಡುಗೊರೆ ಕೊಡಲು ಸಮಯ ನಿರೀಕ್ಷಿಸುತ್ತಿದ್ದ ನನಗೆ ಎದುರಿಗೆ ಪ್ರತ್ಯಕ್ಷವಾಯಿತು ಕನಕ ಸಮಯ.

ನಾನು ಈಗ ಕುಳಿತಿರೋ ಹಾಗೆ ಹುಚ್ಚುಚ್ಚು ಅವಸ್ಥೆಯಲ್ಲಿ ಮಂಚದ ಮೇಲೆ ಕೂತಿದ್ದೆ. ನೀನು ಕುಳಿತಿದ್ದೀಯಲ್ಲಾ ಹಾಗೆ. ರಾಜ ಕುರ್ಚಿಯಲ್ಲಿ ಕುಳಿತಿದ್ದ. ಅಪ್ಪ ಹೊರಟ ಘಳಿಗೆಯಲ್ಲಿ ಅವನ ದೃಷ್ಟಿ ಟೆ ಬಲ್ಲಿನ ಮೇಲಿಟ್ಟಿದ್ದ ರಾಧಾಕೃಷ್ಣರ ಚಿತ್ರದ ಕಡೆಗೆ ನೆಟ್ಟಿತ್ತು. ಅವನ ಹೃದಯದಲ್ಲಿ ಆ ಕ್ಷಣದಲ್ಲಿ ಯಾವ ಉನ್ಮತ್ತತೆ ಹಾರಾಡಿತೋ. ಅಪ್ಪ ಹೋದಕೂಡಲೇ ಎದ್ದು ಬಂದು ನನ್ನ ಪಕ್ಕದಲ್ಲಿ ನನಗೆ ಒರಗಿ ಕುಳಿತ. ನಾನು ಸರಿಯಾಗಿ ಕುಳಿತುಕೊಳ್ಳಲು ಎದ್ದೆ. ಅವನು ಬೇಡವೆಂದು ಹಾಗೇ ನನ್ನ ಮೇಲೆ ಒರಗಿ "ಸರೂ" ಎಂದ ಜೇನು ತುಂಬಿದ ಮಧುರ ಧ್ವನಿಯಲ್ಲಿ.

"ಏನು ?" ಎಂದೆ.

"ಈವತ್ತು ನನ್ನ ಹುಟ್ಟಿದ ಹಬ್ಬ ನನಗೆ ಶುಭಾಶಯ ಹೇಳೋಲ್ಲವೇನು"

"ನಾನು ಹೇಳಬೇಕೇನು ? ನನ್ನ ಹೃದಯ ಯಾವಾಗಲೂ ನಿಮ್ಮ ಒಳಿತನ್ನೇ ಬಯಸುತ್ತಿರುತ್ತದೆ"

"ಹೃದಯ ಬಯಸಿದರೆ ಸಾಲದು. ಈ ಬಾಯೂ ನುಡಿಯಬೇಕು" ಎಂದು ತನ್ನ ಕೈಯಿಂದ ನನ್ನ ತುಟಿಗಳನ್ನು ಸವರಿದ.

"Many Many Happy Returns of the Day and for the coming year–ಆಯ್ತಾ ?" ಎಂದು ಮಗು ಗಟ್ಟಿಮಾಡಿದ ಪಾಠವನ್ನು ಒಪ್ಪಿಸುವಂತೆ ಹೇಳಿದೆ.

"ಹಾಗಲ್ಲ ಸರೂ"

"ಮತ್ತಿನ್ನ್ಹೇಗೆ ?"

"ಮತ್ತೆ, ಮತ್ತೆ...." ಎಂದು ನನ್ನನ್ನು ಹತ್ತಿರ ಎಳೆದುಕೊಳ್ಳಲು ಹಿಡಿದುಕೊಂಡ. ತಪ್ಪಿಸಿಕೊಂಡು ಹೊರಗಡೆ ಓಡಿದೆ. ಅವನು ಹಿಂಬಾಲಿಸ

ಲಿಲ್ಲ. ನಾನು ಬೀರುವಿನಿಂದ ಸ್ವೆಟರ್ ತರಲು ಹೋದಾಗ ಅವನು ತೆರೆದಿದ್ದ ಬಾಗಿಲು ಹಾಕಿದನೆಂದು ಕಾಣುತ್ತೆ. ನಾನು ಗಮನಿಸಲಿಲ್ಲ,

ಒಂದು ತಟ್ಟೆಯಲ್ಲಿ ಸಿಹಿ ತಿಂಡಿ, ಒಂದು ಕೈಯಲ್ಲಿ ಸ್ವೆಟರ್ ಹಿಡಿದು ಹಾಜರಾದೆ. ಕೋಪಗೊಂಡವನಂತೆ ತಲೆಯೆತ್ತದೆ ಕುಳಿತಿದ್ದ. ಮಕ್ಕಳನ್ನು ಆಡಿಸಿಕೊಳ್ಳುವಂತೆ ಅವನ ಮುಂದೆ ಸಿಹಿ ತಿಂಡಿ, ಸ್ವೆಟರುಗಳನ್ನು ಹಿಡಿದೆ-- "ನಿಮಗಿದರಲ್ಲಿ ಯಾವುದು ಬೇಕು ಹೇಳಿ" ಎಂದೆ.

"ಎರಡೂ ಬೇಡ. ನನಗೆ ಬೇರೆ ಬೇಕು"

"ಇತ್ತ ಕಡೆ ನೋಡಿ. ಇದರಲ್ಲಿ ಏನಿದೆ ಅಂತ ತಿಳಿದ್ರೆ, ಎರಡೂ ಕಿತ್ಕೊಳ್ತೀರ"

"ನನಗೆ ಬೇಡಲೇ ಬೇಡ" ಎಂದನೇ ಹೊರತು, ತಟ್ಟೆಯಲ್ಲಿ ಏನಿದೆ ಎಂದು ನೋಡಲೇ ಇಲ್ಲ.

ಚಿಕ್ಕ ಮಗುವಾದರೂ ಸಿಹಿ ಬೇಡ ಎನ್ನಬಹುದು. ಆದರೆ ರಾಜನಿಗೆ ಮಾತ್ರ ಸಿಹಿ ಎಂದರೆ ಸ್ವರ್ಗ. ತುಪ್ಪ ಕಾಸಿದ ಬಟ್ಟಲಲ್ಲಿ ಅಕ್ಕಿಹಿಟ್ಟು ಸಕ್ಕರೆ ಬೆರೆಸಿ ಸಿಹಿ ತಿಂಡಿ ತೊಕೋ ಎಂದು ಕೊಟ್ಟರೂ ಸಂಪ್ರೀತಿಯಿಂದ ತಿನ್ನುತ್ತಿದ್ದ.

"ತಟ್ಟೇಲೇನಿದೆ ಅಂತ ನೋಡಿ ಸ್ವಲ್ಪ. ಫಸ್ಟ್‌ಕ್ಲಾಸ್ ಸೋಹನ್ ಹಲ್ವ. ನನ್ನ ಫ್ರೆಂಡು ಒಬ್ಬಿಗೆ ಈವತ್ತು ಹುಟ್ಟಿದ ಹಬ್ಬ. ಅದಕ್ಕೋಸ್ಕರ ನಾನೇ ಸ್ವಹಸ್ತದಿಂದ ತಯಾರಿಸಿದ್ದು. ಬೇಡ ಅಂದ್ರೆ ನಾನೇ ತಿಂದುಬಿಡ್ತೀನಿ" ಎಂದು ಅವನ ಹತ್ತಿರ ಹೋಗಿ "ನೀವು ಕೇಳ್ತಾ ಇರೋ ವಸ್ತುಗಿಂತ ಸಿಹಿ ರಾಜ ಸೋಹನ್ ಅಲ್ವ" ಅಂತ ಪಿಸುಗುಟ್ಟಿದೆ.

"ಊಹುಂ. ಎರಡೂ ಬೇರೆ ಬೇರೆ ತರಹ ಸಿಹಿ. ಇದು ತಿಂದರೆ ಆಮೇಲೆ ಅದು ಕೊಡ್ತೀಯಾ ?"

"ನೋಡೋಣ. ಯೋಚನೆ ಮಾಡಲಾಗುತ್ತದೆ" ಎಂದೆ ನಾಟಕೀಯ ವಾಗಿ.

"ನೋಡು ಸರಳಾ. ಹುಟ್ಟಿದ ಹಬ್ಬದ ದಿನ ಮಕ್ಕಳಿಗೆ ನಿರಾಶೆ ಮಾಡ ಬಾರದು."

"ಪಾಪ ನೀವು ಮಗು ! ನಾಲಕ್ಕು ಮಕ್ಕಳ ತಂದೆ ಆಗೋ ವಯಸ್ಸಾಗಿದೆ"

"ಸರಿ. ಮಗು ಅಲ್ಲಿದ್ರೆ ಹೋಗ್ಲಿ. ಅಂತೂ ಹುಟ್ಟಿದ ಹಬ್ಬದ ದಿನ ನಿರಾಶೆ ಮಾಡಬಹುದೇನು ?"

"ನಾನೇನೂ ನಿರಾಶೆ ಮಾಡೋಲ್ಲ. ಅದಕ್ಕೆ ನಿಮಗಿಷ್ಟವಾದ ಸಿಹಿತಿಂಡಿ ಮತ್ತು ಒಂದು ಸಣ್ಣ ಕಾಣಿಕೆ" ಎಂದು ತಿಂಡಿಯ ಪ್ಲೇಟನ್ನು ಟೇಬಲ್ಲಿನ ಮೇಲಿಟ್ಟು ಸ್ವೆಟರನ್ನು ಅವನ ಕೈಯಲ್ಲಿ ಕೊಟ್ಟೆ. ಬಿಚ್ಚಿ ನೋಡಿ ಅವಾಕ್ಕಾದ. ಬಿಳಿಯ ಬಣ್ಣದ ಉಲ್ಲನ್ನಿನಲ್ಲಿ ಹೆಣೆದ ಪುಲ್ಓವರ್. ಅವನ ಹೃದಯ ಭಾವೋದ್ವೇಗದಲ್ಲಿ ತುಂಬಿ. ಕಂಠ ಗದ್ಗದವಾಯಿತು.

"ಇಷ್ಟೊಂದು ದುಡ್ಡುಕೊಟ್ಟು, ಇದನ್ನು ಈಗೇಕೆ ತಂದೆ. ಸರೂ" ಎಂದ ಆತ್ಮೀಯತೆಯಿಂದ.

"ಕೊಂಡುಕೊಂಡದ್ದಲ್ಲ, ಮಿಸ್ಟರ್. ಶ್ರೀಮತಿ ಸರಳಾದೇವಿಯವರು ಖುದ್ದು ಹೆಣೆದಿದ್ದು"

"ಯಾರದು ಸರಳಾದೇವಿ ?"–ಕೀಟಲೆಗೆ ಇಳಿದ.

"ಯಾರಾದರೆ ನಿಮಗೇನು ? ಮುಖ್ಯ ಚೆನ್ನಾಗಿದೆಯೋ ಇಲ್ಲವೋ ಹೇಳಿ"

"ಅದಕ್ಕಲ್ಲ ನಂಗೊಬ್ಬ ಸರಳಾದೇವಿ ಗೊತ್ತು. ಅವರಿಗೇನೂ ಬರೋಲ್ಲ. ಅವರೂ ಸ್ವಲ್ಪ ಎದ್ದುಮೊದ್ದು ಸ್ವರೂಪಾಯ. ಅದಕ್ಕೆ ಕೇಳಿದೆ"

ತನ್ನ ವಿಷಯುವಾಗಿ ಅವನ ಅಭಿಪ್ರಾಯ ಅಷ್ಟೇನೇ ಎಂದು ನನ್ನ ಮನಸ್ಸು ಚಿಕ್ಕದಾಯಿತು. ಅದು ಅವನಿಗೆ ತಿಳಿದುಹೋಯಿತು. ಹತ್ತಿರ ಬಂದು ಪ್ರೀತಿಯ ಮೃದುತ್ವದಿಂದ ಕೇಳಿದ. "ನೀನೇ ಹೆಣೆದೆಯಾ ಸರೂ ? ನಿನಗೆ ಬರದೇ ಇರೋ ವಿದ್ಯೇನೇ ಇಲ್ಲವಲ್ಲಾ ಸರೂ"

ಸುಮ್ಮನೆ ಹೊಗಳಬೇಡಿ. ನನ್ನಲ್ಲಿ ಹೊಗಳೋಂತಾದ್ದು ಏನೂ ಇಲ್ಲ. ಏನೋ ಎಲ್ಲಾ ಸ್ವಲ್ಪಸ್ವಲ್ಪ ತಿಳಿದುಕೊಂಡಿದ್ದೀನಿ. ಅಷ್ಟೆ ಮಾತ್ರ ನಾನೇನೂ ಪರಿಪೂರ್ಣಳಲ್ಲ.

"ನನ್ನಮಟ್ಟಿಗೆ ಹೇಳೋದಾದ್ರೆ ನನ್ನ ಸರೂ ಪರಿಪೂರ್ಣಳೇ ಹೌದು."

"ಅದು ನಿಮ್ಮ ಅಭಿಮಾನ" ಎಂದೆ ಹೆಮ್ಮೆಯಿಂದ–"ತೊಟ್ಟು ನೋಡ

ದೇನೇ ಹೊಗಳಿದ್ದೀರಿ. ಒಂದು ವೇಳೆ ತೊಟ್ಟಾಗ ಸರಿಹೋಗದಿದ್ದರೆ ಗೇಲಿ ಮಾಡ್ತೀರಿ––ತೊಟ್ಟುಕೊಳ್ಳಿ"

ಅವನು ಅದನ್ನು ಕೈಯಲ್ಲೇ ಹಿಡಿದು ಕೆನ್ನೆಗೆ ಒತ್ತಿಕೊಂಡ. ಎದೆಯ ಬಳಿ ಹಿಡಿದು "ಇದು ಬಹಳ ಬೆಚ್ಚಗಿರಬಹುದಲ್ಲಾ ಇದನ್ನು ಕೊಟ್ಟವರಷ್ಟೇ?" ಎಂದು ನನ್ನೆಡೆಗೆ ನೋಡಿದ. ಆ ಒಂದು ದೃಷ್ಟಿ ನನ್ನನ್ನು ಮೈ ಮರೆ ಸುತ್ತಿತ್ತು. ನಾಚಿಕೆಯಿಂದ ತಲೆ ತಗ್ಗಿಸಿಬಿಟ್ಟೆ.

"ನೋಡಿಲ್ಲಿ ಸರೂ, ಬಿಳಿಯ ಉಲ್ಲನ್ನಿನಲ್ಲಿ ಹೆಣೆದೆಯಲ್ಲಾ ಏಕೆ ?"

"ನನಗಿಷ್ಟ, ನಿಮಗೂ ಇಷ್ಟಾಂತ...." ನನ್ನ ಧ್ವನಿಯಲ್ಲಿ ನಿರಾಶೆ ಪ್ರತಿಧ್ವನಿಸಿತ್ತು.

"ಇಷ್ಟವೆ, ಇಷ್ಟವೆ. ಆದರೂ ನನಗೆ ಹಸಿರು ಬಹಳ ಇಷ್ಟ" ಎಂದು ಕಣ್ಣು ಹೊಡೆದ. ನಾನೇ ಹಿಂದೆ ಹೇಳಿದ್ದೆ ಹಸಿರು ಬಣ್ಣ ಪ್ರೇಮದ ಕುರುಹು ಎಂದು.

"ಹಸಿರು ಬಣ್ಣದ ಸ್ವೆಟರು ಗಂಡಸರಿಗೆ ಚೆನ್ನಾಗಿರೋಲ್ಲ ಗೊತ್ತಾ"

"ಗೊತ್ತು. ಆದರೂ ನನಗೆ ಹಸಿರು ಬೇಕಪ್ಪ" ಹಟ ಮಾಡಿದ. ಸ್ವಲ್ಪ ಪೆಚ್ಚಾದೆ ನಾನು.

"ಬಿಳುಪೂ ನೀವಿಷ್ಟ ಪಡಬಹುದೂಂತ ಕಷ್ಟಪಟ್ಟು ಹಾಕಿದೆ"

"ಪೆದ್ದು ಹುಡುಗಿ. ನನಗೂ ಬಿಳುಪು ಇಷ್ಟ. ಸ್ವಲ್ಪ ತಮಾಷೆ ಮಾಡಿದ್ರೆ ಆಗಲೇ ಮುಖ ಇಷ್ಟು ಚಿಕ್ಕದಾಗಬೇಕೆ ? ಬಹಳ ಚೆನ್ನಾಗಿದೆ ಸರೂ" ಎನ್ನುತ್ತಾ ತೊಟ್ಟುಕೊಂಡ.

ಅವನಿಗೆ ಮಾಡಿಸಿಟ್ಟಂತಿತ್ತು. ಎದೆ ಉಬ್ಬಿ ನಿಂತಿತ್ತು. ಮೊದಲೇ ಮೋಜುಗಾರನಾದ ರಾಜ ಬಹಳ ಮನಮೋಹಕವಾಗಿ ಕಂಡ.

"ಚೆನ್ನಾಗಿದೆಯಾ ಸರೂ ? ಹೇಗೆ ಕಾಣ್ತೇನಿ ?" ಆನಂದ ತುಳುಕು ತ್ತಿತ್ತು, ಅವನ ವದನದಲ್ಲಿ.

"ನೀವು ಹೇಳಿ"

"ತೊಟ್ಟವರು ಹೇಳೋಕ್ಕಾಗೋಲ್ಲ. ನೋಡೋವ್ರು ಹೇಳಬೇಕು"

"ಕೊಟ್ಟವರು ಹೇಳೋಕ್ಕಾಗೋಲ್ಲ. ತೊಗೊಂಡವ್ರು ಹೇಳಬೇಕು. ಕನ್ನಡೀಲಿ ನೋಡಿ ಹೇಳಿ"

"ನಿಲ್ಲಿ ಹಾಗಾದ್ರೆ, ಇಲ್ಲೇ ಇದೆ ನನ್ನ ಕನ್ನಡಿ" ಅಂತ ನನ್ನ ಕಣ್ಣ ಪಾಪೆಯಲ್ಲಿ ನೋಡಿದ.

"ಫೈನ್ ಆಗಿದೆ. ನನ್ನ ಅಳತೆ ಎಲ್ಲಾ ಹೇಗೆ ತಿಳೀತು ಸರಳಾ"

"ನಾನು ಕಾಣದ ಎದೆಯೆ, ನಾನರಿಯದ ತೋಳುಗಳೆ ನಿಮ್ಮವು ಹೇಳಿ ?"

"ತಿಳಿದರೆ ಮಾತ್ರ ಅಳತೆ ಗೊತ್ತಾಗುತ್ತಾ ?"

"ಪ್ರೇಮಿಸಿದವರಿಗೆ ಎಲ್ಲಾ ಗೊತ್ತಾಗುತ್ತೆ"

"ನಂಗೆ ತಿಳಿಯೋಲ್ವಲ್ಲಾ ?"

"ಹಾಗಾದ್ರೆ, ನೀವು ಪೂರ್ತಿಯಾಗಿ ಪ್ರೇಮಿಸೋಲ್ಲ"

"ಅದು ಸುಳ್ಳು" ಎಂದು ಹತ್ತಿರದಲ್ಲೇ ಇದ್ದ ನನ್ನನ್ನು ಇನ್ನೂ ಹತ್ತಿರಕ್ಕೆ ಕರೆದುಕೊಂಡು ಕೇಳಿದ–"ಇದಕ್ಕೆ ಎಷ್ಟು ಖರ್ಚಾಯಿತು ಸರೂ ?"

"ಉಡುಗೊರೆಗೆ ಬೆಲೆ ಕೇಳಬಾರದು"

"ಬೆಲೆ ತಿಳ್ಕೋಬೇಕೂಂತ ಕುತೂಹಲಕ್ಕೆ ಕೇಳ್ತಿಲ್ಲ ಸರೂ. ಕೊಂಡುಕೊಳ್ಳೋಕ್ಕಿಂತ ಅಗ್ಗವೇ ಅಂತ ಅಷ್ಟೆ, ಇಷ್ಟು ಶ್ರಮ ಸಾರ್ಥಕವೇ ಅಂತ?"

"ಅಗ್ಗವೇ ಆಗುತ್ತೆ. ಹಾಕೋದು ಶ್ರಮವೇ ಆದರೂ. ನಿಮಗಾಗಿಯಾದ್ದರಿಂದ...."

"ನನಗಾಗಿಯಾದರೂ ಇಷ್ಟು ಶ್ರಮ ಯಾಕೆ ಸರಳಾ ?" ಮೃದುವಾಗಿ ಕೇಳಿದ.

"ನಿಮಗಾಗಿ ನಾನು ಏನು ಬೇಕಾದರೂ ಮಾಡ್ತೀನಿ ರಾಜ. ನೀವು ಸದಾ ಸಂತೋಷವಾಗಿರಬೇಕು ಅನ್ನೋದು ನನ್ನ ಅಭಿಲಾಷೆ. ನನ್ನ ಬಲಿದಾನವಾದರೂ ನನ್ನ ರಾಜ ಸುಖವಾಗಿರಬೇಕು." ನನ್ನ ತುಂಬು ಹೃದಯದ ನುಡಿ ಕೇಳಿ ಅವನ ಮನಸ್ಸು ಹುಚ್ಚೆದ್ದು ಕುಣಿಯಿತು. "ಸರೂ" ಎಂದು ನನ್ನನ್ನು ಅಪ್ಪಿಕೊಳ್ಳಲು ಬಂದ. ತಪ್ಪಿಸಿಕೊಳ್ಳಲು ನಾನು ಮಾಡಿದ ಪ್ರಯತ್ನ ವಿಫಲವಾಯಿತು. ನನ್ನನ್ನು ನಾನು ಅರಿತುಕೊಳ್ಳುವಷ್ಟರಲ್ಲಿ ಅವನ ತೆಕ್ಕೆಯಲ್ಲಿ ಬಿಗಿದುಹೋಗಿದ್ದೆ.

"ಸರೂ" ಎಂದ. ಪಿಸು ಮಾತಿಗಿಂತಲೂ ಮೆಲ್ಲಗಿತ್ತು ಧ್ವನಿ.

"ಆ್ಞ !" ಅಷ್ಟೇ ಮೆಲ್ಲಗೆ ಉತ್ತರಿಸಿ ಅವನ ಕಡೆ ನೋಡಿದೆ. ಅವನ

ದೃಷ್ಟಿ ಆಗ ಆ ಸಮ್ಮೋಹಕ ಆಕರ್ಷಣೆಯುದಾಗಿರಲಿಲ್ಲ. ಅವನ ಕಣ್ಣಿನಲ್ಲಿ ಕೋರಿಕೆ, ಬಯಕೆ ಆಸೆ ಗೋಚರವಾಯಿತು. ನಾನು ಬಿಡಿಸಿಕೊಳ್ಳಲು ಹೋದಷ್ಟು ಅವನ ಬಾಹುಬಂಧನ ಬಿಗಿಯಾಗುತ್ತಿತ್ತು, ಮೈಯೆಲ್ಲಾ ಅವನ ಬಿಗಿಯಪ್ಪುಗೆಯಲ್ಲಿ ಗುಜ್ಜಾಗುತ್ತಿತ್ತು. ಏನೋ ಮಾತನಾಡಲು ಹೋದೆ. ಬಾಯಮೇಲೆ ಬಾಯಿ ಒತ್ತಿ ಬಾಯಿ ಮುಚ್ಚಿದ. ಮೈಮರೆತೆ. ಅನುಭವ ಹಿತವಾದ ನೋವಾಗಿತ್ತು. ನನ್ನ ಕೈಗಳನ್ನು ಮೇಲೆತ್ತಿ ಅವನಕೊರಳಿಗೆ ಹಾಕಿದೆ. ಅವನು ಆಲಿಂಗನ ಸಡಿಲಿಸಲೇ ಇಲ್ಲ. ವಿಮುಕ್ತಿಗಾಗಿ ನಾನು ಬಯಸಲೂ ಇಲ್ಲ. ನನಗೇನಾಗಿದ್ದಿತೋ ತಿಳಿಯದು ಸುಮಿತ್ರಾ. ಅವನು ನನ್ನನ್ನು ಅನಾಮತ್ತು ಎತ್ತಿಕೊಂಡು ಹೋಗಿ ಮಂಚದ ಮೇಲೆ ಮಲಗಿಸಿ ದಾಗಲೂ ನಾನು ಜಾಗೃತಳಾಗಿರಲಿಲ್ಲ. ನಡೆಯಬಾರದ್ದು ನಡೆದು ಹೋಯಿತು, ಸುಮಿತ್ರಾ, ವಿಪರೀತವಾಗಿ ಹೋಯಿತು. ಒಮ್ಮೆ ಕಳೆದುಕೊಂಡರೆ ಪುನಃ ಮತ್ತೆಲ್ಲೂ ಸಿಗದ ವಸ್ತುವನ್ನು ಅಂದು ಕಳೆದುಕೊಂಡುಬಿಟ್ಟೆ. ರಾಜನಿಗೆ ಬಲಿಮಾಡಿ ಬಿಟ್ಟೆ ನನ್ನ ದೇಹವನ್ನು....ನಾನು ಹೇಳಿದುದು ನಿನಗೆ ಸ್ಪಷ್ಟ ವಾಗಿರಬಹುದು ಸುಮಿತ್ರಾ. ನೀನು ಮದುವೆಯಾದ ಹೆಣ್ಣು

"ಅಂದರೆ ಆತ್ಮಾರ್ಪಣೆಯ ಜೊತೆಗೆ ದೇಹಾರ್ಪಣವೂ ಆಗಿಹೋಯಿತು ಅನ್ನು ಸರಳಕ್ಕ"

"ಹೌದು. ಹೊಸ ಅನುಭವದ ಗುಂಗಿನಲ್ಲಿ ನನಗೇನು ಮಾಡಲೂ ತೋಚಲಿಲ್ಲ. ಮುಂಚೆ ಎಚ್ಚರ ತಂದುಕೊಂಡವನೂ ರಾಜನೆ. ಅವನ ಕಣ್ಣಲ್ಲಿ ನೀರು ಬಂದಿತ್ತು"

"ಸರಳಾ, ನನ್ನನ್ನು ಕ್ಷಮಿಸು ಸರಳಾ. ಆವೇಶದಲ್ಲಿ ಮೈಮರೆತುಬಿಟ್ಟೆ"

"ಕ್ಷಮೆ ಯಾಕೆ ಕೇಳ್ತೀರಿ ? ನನ್ನದೂ ತಪ್ಪಿತ್ತು ಅಲ್ಲವೆ ?"

"ಸರಳಾ, ಇಷ್ಟು ಭರವಸೆ ಮಾತ್ರ ಕೊಡಬಲ್ಲೆ ನಿನಗೆ ಯಾವ ಹಾನಿಯೂ ಆಗಲಾರದು ಸರೂ. ಇನ್ನೊಮ್ಮೆ ಹೀಗಾಗದಂತೆ ನೋಡಿ ಕೊಳ್ತೀನಿ ಒಂದು ವೇಳೆ ಎಚ್ಚರ ತಪ್ಪಿದರೂ ನನ್ನನ್ನು ನೀನು ಎಚ್ಚರಿಸ ಬೇಕು. ಸರೂ ನೀನು ನನಗಿಂತ ಹೆಚ್ಚು ಸಂಯಮಿ" ಬಹಳವಾಗಿ ಪೇಚಾಡ ತೊಡಗಿದ. ಅವನ ಭಾಧೆ, ಮನೋವೇದನೆಗಳನ್ನು ಅರಿತುಕೊಂಡ ನಾನು, "ನಡೆದುದಕ್ಕೆ ಏಕೆ ಪೇಚಾಡ್ತೀರಿ. ಮರೆತುಬಿಡಿ. ಇನ್ನೊಂದ್ಸಲ ಎಚ್ಚರ

ದಿಂದಿರೋಣ" ಅಂತ ಅವನಿಗೆ ಆಶ್ವಾಸನೆ ನೀಡಿದೆ. ನಡೆದುದಾದರೂ ನಮ್ಮಿಬ್ಬರಲ್ಲಿ ತಾನೇ. ಮುಂದೆ ಪತಿಯಾಗುವ ರಾಜ ಒಮ್ಮೆ ಎಚ್ಚರ ತಪ್ಪಿದರೆ ಏನಾಯಿತು ಈಗ? ಎನ್ನುವ ವಿಶ್ವಾಸ ನನಗೆ ಧೈರ್ಯಕೊಟ್ಟಿತು.

"ನೀನೆಷ್ಟು ಒಳ್ಳೆಯವಳು ಸರೂ !"

"ಈಗೇನು ಒಳ್ಳೆಯದು ಕಂಡಿರಿ ?"

"ನಿನ್ನ ಮೇಲೆ ಅತ್ಯಾಚಾರ ನಡೆಸಿದರೂ ನನ್ನನ್ನು ಕ್ಷಮಿಸಿ ಕಳಿಸುತ್ತಿರುವೆಯಲ್ಲಾ"

"ಕ್ಷಮೆಯ ಪ್ರಶ್ನೆಯಲ್ಲ ರಾಜ. ಇಬ್ಬರೂ ತಪ್ಪು ಮಾಡಿರೋವಾಗ ದೇವರು ನಮ್ಮನ್ನು ಕ್ಷಮಿಸಬೇಕು. ಅಷ್ಟೆ. ಅಪ್ಪ ಬರೋ ಹೊತ್ತಾಗ್ತಾ ಬಂತು, ಸ್ವಲ್ಪ ಮುಖ ತೊಳ್ಕೊಳ್ಳಿ, ಬಹಳ ಬೆವರಿದ್ದೀರಿ" ಎಂದೆ.

ವಿಧೇಯವಾದ ಮಗು ತಾಯಿಮಾತು ಕೇಳಿ ನಡೆಯುವಂತೆ ರಾಜ ಎದ್ದು ಹೋಗಿ ಮುಖ ತೊಳೆದುಬಂದ. ತನ್ನ ಕೃತ್ಯದಿಂದಾಗಿ ಅವಮಾನವಾಗಿತ್ತು. ನನ್ನ ಕಡೆಗೂ ನೋಡದೆ ಕುಳಿತುಬಿಟ್ಟ. ಇದರಿಂದ ನನಗೆ ನೋವಾಯಿತು.

"ರಾಜ, ಸಿಹಿತಿಂಡಿ ತಿನ್ನೋದಿಲ್ವೆ ?" ಎಂದೆ ಸಂತೈಸುವ ಧ್ವನಿಯಲ್ಲಿ.

"ಹಾಸ್ಯ ಮಾಡ್ತೀಯಾ ಸರಳಾ ?"

"ಛೆ ! ಹಾಸ್ಯಕ್ಕೆ ಸಮಯ ಏನು ಇದು ?" ಎಂದು ಒಂದು ಚೂರು ಸಿಹಿ ತೆಗೆದು ಅವನ ಬಾಯಲ್ಲಿಡಲು ಗಲ್ಲದ ಬಳಿ ಕೈಯಲ್ಲಿಟ್ಟು ಅವನ ತಲೆಯನ್ನು ಮೇಲೆತ್ತಿದೆ. ಅವನ ಕಣ್ಣು ತುಂಬಾ ನೀರು ತುಂಬಿತ್ತು.

"ಹುಚ್ಚು ಹುಡುಗ" ಎಂದು ಕೈಯಿಂದ ಕಣ್ಣೀರು ಒರೆಸಿದೆ.

"ನನ್ನನ್ನು ಮುಟ್ಟಬೇಡ ಸರಳಾ. ನಿನ್ನ ಸನಿಯದಿಂದಲೇ ನನ್ನ ಮನಸ್ಸು ಹುಚ್ಚೆದ್ದು ಕುಣಿಯುತ್ತೆ, ಇನ್ನೂ ನಿನ್ನ ಸ್ಪರ್ಶ ! ನನ್ನನ್ನು ಬಹಳ ಕೆಳಗೆ ತಳ್ಳುತ್ತದೆ"

"ಅಂದರೆ ನಿಮ್ಮನ್ನು ಕೆಳಗೆಳೆಯುವಳು ನಾನೇನು ?" ಸ್ವಲ್ಪ ಬಿರುಸಾಗಿಯೇ ಕೇಳಿದೆ,

"ಇಲ್ಲ ಸರಳಾ. ಏನಿಲ್ಲದೇನೆ ನಾನು ನಿನಗಿಂತ ಬಹಳ ಕೆಳಗಿದ್ದೇನೆ.

ನನಗನೇಕ ಸಲ ಅನ್ನಿಸುತ್ತೆ ನಾನು ನಿನ್ನ ಪ್ರೇಮಕ್ಕೆ ಅರ್ಹನೆ ಅಂತ ? ನೀನು ನನಗೆ ನಿಲುಕದ ನಕ್ಷತ್ರವಾಗಿ ಬಿಡುವೆಯೋ ಏನೋ ಅಂತಾನೂ ಅನ್ನಿಸುತ್ತೆ."

"ಏನೇನೋ ಮಾತನಾಡಬೇಡಿ. ನಾನು ನಿಲುಕದ ನಕ್ಷತ್ರವಾಗುವುದೂ, ನಿಲುಕದ ಚುಕ್ಕೆಯಾಗುವುದೂ ನಿಮ್ಮ ಕೈಯಲ್ಲೇ ಇದೆ........ಒಂದು ಮಾತು ಕೇಳಲಿ ?"

ಕೇಳು ಸರಳಾ, ಸಂಕೋಚವೇಕೆ ?"

"ನಾವಿಬ್ಬರೂ ಯಾವಾಗ ಮದುವೆ ಮಾಡಿಕೊಳ್ಳೋಣ, ರಾಜ ?" ಸಾಧಾರಣವಾಗಿಯೇ ಕೇಳಿದೆ. ಆದರೆ ಅವನು ಅಚ್ಚರಿಯಿಂದ ನನ್ನ ಕಡೆಗೆ ನೋಡಿದ ಮತ್ತು ಕೇಳಿದ.

"ಏನು ? ಇಂದಿನ ನನ್ನ ನಡತೆಯಿಂದ ಆಪತ್ತು ಬರಬಹುದೂಂತ ಹಾಗೆ ಕೇಳ್ತಿದ್ದೀಯಾ ?"

"ಇಲ್ಲ. ಆಪತ್ತು ಬರೋಂತ ಪ್ರಮಾದ ಏನೂ ನಡೆದಿಲ್ಲ ಅಂತ ನನಗ್ಗೊತ್ತು. ಆದರೂ ಹೀಗೆ ಬರಿಯ ಪ್ರಣಯಿಗಳಾಗಿ ಎಷ್ಟು ಕಾಲ ಇರಲು ಸಾಧ್ಯ. ನನ್ನ ನಿಮ್ಮ ಪರಿಚಯವಾಗಿ ಆಗಲೇ ಹತ್ತು ವರುಷಗಳಾಗುತ್ತಾ ಬಂತು. ನಾವು ಪರಸ್ಪರ ಪ್ರೇಮಿಗಳಾಗಿ ನಾಲ್ಕು ವರ್ಷ ಆಯಿತು. ಇಂದು ಪ್ರೇಮದಲ್ಲಿ ಕಾಮಕ್ಕೂ ಸ್ಥಳ ಕೊಟ್ಟಾಯಿತು. ಪ್ರಣಯ ಎಂದಿದ್ದರೂ ದಾಂಪತ್ಯದಲ್ಲಿ ತಾನೇ ಪರ್ಯವಸಾನವಾಗಬೇಕು"

ರಾಜ ಮಾತನಾಡಲಿಲ್ಲ. ಸುಮ್ಮಗೆ ನೋಡುತ್ತಿದ್ದ. ನಾನು ಮುಂದುವರೆಸಿದೆ. "ಪ್ರೇಮ ಪ್ರೇಮವಾಗಿ ಉಳಿದಿರೋವರ್ಗೆ ಆತ್ಮ ವಿಕಾಸವಾಗುತ್ತದೆ. ನಾವೂ ಉಚ್ಚಮಟ್ಟದಲ್ಲಿರುತ್ತೇವೆ. ಆದರೆ ಆ ಸ್ವಚ್ಛ ಪವಿತ್ರ ಪ್ರೇಮದಲ್ಲಿ ಕಾಮ ತಲೆಯಿಟ್ಟಾಗ. ನಿಮ್ಮನ್ನು ನಾವು ಗೆಲ್ಲಲಾರೆವು ರಾಜ. ಕಾಮವನ್ನು ಸುಲಭವಾಗಿ ಜಯಿಸಿ ಪ್ರತಿ ಒಬ್ಬನೂ ಅದನ್ನು ಹದ್ದಿನಲ್ಲಿಟ್ಟು ಕೊಳ್ಳಲು ಸಕ್ತನಾಗುತ್ತಿದ್ದಿದ್ದರೆ, ಅದನ್ನು ಅರಿಷಡ್ವರ್ಗಗಳಲ್ಲಿ ಒಂದನ್ನಾಗಿ ಎಣಿಸುತ್ತಿರಲಿಲ್ಲ. ಅದು ಜಯಿಸಲಾಗದ ಶತ್ರು, ರಾಜ."

"ಎಷ್ಟು ವಿಷಯ ಗ್ರಹಿಸಿದ್ದೀ, ಸರಳಾ ನೀನು ?" ಎಂದ ರಾಜ.

ನಾನು ಹೇಳುತ್ತಲೇ ಇದ್ದೆ--"ದಂಪತಿಗಳ ಮಧ್ಯದ ಪ್ರೇಮವನ್ನೇ ಆಗಲಿ, ಕಾಮವನ್ನೇ ಆಗಲಿ ಸಮಾಜ ಪ್ರಶ್ನಿಸುವುದಿಲ್ಲ ರಾಜ, ಆದರೆ

ಮದುವೆಗೆ ಮುಂಚೆಯ ನಡತೆಯನ್ನು ಸಮರ್ಥಿಸೋಲ್ಲ ಸಮಾಜ. ಆದ್ದರಿಂದ ಹೇಳಿದೆ ಅಷ್ಟೆ. ಒಮ್ಮೆ ರುಚಿ ನೋಡಿದರೆ ಮತ್ತೆ ಮತ್ತೆ ಬೇಕೆನ್ನಿಸುವ ವಸ್ತುಗಳು, ಕೋರಿಕೆಗಳು, ಬಯಕೆಗಳು. ಆಭಾಸ ಆದ ಮೇಲೆ ತಿದ್ದಿಕೊಳ್ಳಲು ನಮ್ಮಿಂದಾಗುತ್ತದೆಯೇನು ?"

"ನೀನು ಹೇಳೋದೆಲ್ಲಾ ಅಕ್ಷರಶಃ ಸತ್ಯ ಸರಳಾ. ಆದರೆ ನಾನು ಭರವಸೆ ಕೊಡ್ತೀನಿ ಇಂದು ನಡೆದ ಘಟನೆ ಮತ್ತೆಂದೂ ನಡೆಯದಂತೆ ಎಚ್ಚರ ವಹಿಸುತ್ತೇನೆ."

"ಎಚ್ಚರ ವಹಿಸುತ್ತೇವೆ ನಿಜ. ಆದರೆ ವಾತಾವರಣ, ಪರಿಸ್ಥಿತಿಗಳು ನಮ್ಮ ಕೈಯಲ್ಲಿರುವುದಿಲ್ಲವಲ್ಲಾ. ಅದಕ್ಕಾಗಿ ನೊಂದುಕೊಳ್ಳುವ ಬದಲು, ದೇವರ ದೃಷ್ಟಿಯಲ್ಲಿ ಸತಿಪತಿಗಳಾದಂತೆಯೇ ಸಮಾಜದ ದೃಷ್ಟಿಯಲ್ಲೂ ಆಗೋಣ. ಅದಕ್ಕೆ ಅಡ್ಡಿಯೇನಿದೆ ರಾಜ."

"ಅಡ್ಡಿ ಏನೂ ಇಲ್ಲ. ಆದರೆ ನಮ್ಮಣ್ಣನ ಮದುವೆಯಾಗುವತನಕ ನನ್ನ ಮಾತನ್ನೆತ್ತಲು ಆಗುವುದಿಲ್ಲ ಸರಳಾ, ಮನೆಯಲ್ಲಿ"

"ಅಣ್ಣನ ಮದುವೆಗೇನಾದರೂ ಮಾತುಕತೆ ಆಗುತ್ತಿದೆಯೇನು ?"

"ತಿಳಿಯದು. ಅಣ್ಣ ಇರೋದು ಭಿಲಾಯ್. ಅಪ್ಪ, ಅಮ್ಮ ಇರೋದು ನಂಜನಗೂಡು. ನಾನು, ನನ್ನ ಪ್ರೇಯಸಿ ಇರೋದು ಬೆಂಗಳೂರು ಯಾವ ವಿಷಯವೂ ಬೇಗ ತಿಳಿಯೋಲ್ಲ"

"ನೀವೇ ಒಂದ್ಸಲ ಹೋಗಿ ತಿಳ್ಕೊಂಡು ಬನ್ನಿ. ಬೇಕಾದ್ರೆ ನಾನು ಅಪ್ಪನ ಕೈಲಿ ನಿಮ್ಮ ತಂದೆಗೆ ಬರೆಸ್ತೀನಿ."

"ಬೇಡ, ಸರೂ. ನಾನೀ ವಿಷಯವನ್ನ ಹೇಳೋಕ್ಕೆ ಮುಂಚೇನೇ ಅವರು ಬರೆಯೋದು ಬೇಡ. ನಾನು ಸರಿಯಾದ ಸಮಯ ತಿಳಿಸ್ತೀನಿ, ಸರಳಾ" ಧೈರ್ಯಕೊಟ್ಟ.

"ಆ ಸಮಯ ಯಾವಾಗ ಬರುತ್ತೋ" ಎಂದೆ ಸಂಶಯದಿಂದ.

"ಸಂಶಯವೇ ಸರಳಾ ? ನನ್ನನ್ನು ನಂಬಲಾರೆಯಾ ?"

"ಇದು ನಂಬಿಕೆ ಅಪನಂಬಿಕೆಗಳ ಪ್ರಶ್ನೆ ಅನ್ನೋದಕ್ಕಿಂತ ಗ್ರಹಚಾರ ಕಾಲದ ಪ್ರಶ್ನೆ. ನೀವು ಮದುವೆಗೆ ಮನಸ್ಸು ಮಾಡುವ ವೇಳೆಗೆ ನನ್ನ ಗ್ರಹಚಾರ ನನ್ನನ್ನು ನಿಮ್ಮಿಂದ ಬೇರೆ ಮಾಡಿಸಬಹುದು."

"ಯಾಕಂತಹ ಭಯ, ಸರಳಾ?"

"ಏನೋ ಕೆಲವರ ವಿಷಯಗಳನ್ನು ನೋಡಿದ್ದೇನೆ. ಮದುವೆ ಮುಂದೂಡಿದಷ್ಟೂ ಅವು ಒಡೆದ ನಿದರ್ಶನಗಳೇ ಹೆಚ್ಚು."

"ಛಿ, ಛಿ, ಅಂತದ್ದೆಲ್ಲಾ ಮಾತಾಡಬಾರದು. ಎಲ್ಲಿ ಒಮ್ಮೆ ನಕ್ಕುಬಿಡು"

"ನಿಮ್ಮ ಹುಟ್ಟಿದ ಹಬ್ಬದ ದಿನ ನಿಮ್ಮ ಮನಸ್ಸಿಗೆ ಬೇಜಾರು ಮಾಡಿದೆನೋ ಏನೋ ಕ್ಷಮಿಸಿ"

"ನನಗೇನೂ ಬೇಜಾರಾಗಿಲ್ಲ ಸರೂ. ನೀ ಮನಸ್ಸು ಚಿಕ್ಕದುಮಾಡಿಕೊಂಡೆಯಲ್ಲಾ ಅಂತ ನಂಗೂ ಮನಸ್ಸು ಹಿಂಡಿತು. ನೀನೇನು ಮಾತಾಡಿದರೂ ನನಗೆ ಬೇಸರವಿಲ್ಲ ಸರಳಾ....ಅಪ್ಪ ಅತ್ತೆ ಯಾರೂ ಇನ್ನೂ ಬರಲಿಲ್ಲವಲ್ಲಾ, ನಾನು ಹೋಗಬೇಡವೇನು?"

"ಇಲ್ಲೇ ಊಟಮಾಡಿ ಹೋದರಾಯಿತು. ಇಲ್ಲಿ ಊಟ ಮಾಡಿದ್ರೆ ನಿಮ್ಮ ಮಾವ ಬೈತಾನೇನು?"

"ಅವನೇಕೆ ಬೈತಾನೆ. ಅಷ್ಟುಳಿದದ್ದೇ ಸಾಕು ಅಂತಾನೆ."

"ನಿಮಗೆ ಬೇಜಾರಾಗೊಲ್ವ ಅಲ್ಲಿನ ಊಟ"

"ಏನು ಮಾಡೋದು. ಈ ಮಾವನ ಮನೆ ಊಟ ಖಾಯಂ ಆಗೋ ತನಕ ಅವನಿಗೆ ದಂಡ ತೆರಬೇಕು" ಹೋಟಲಿನ ಊಟದ ವಿಷಯವಾಗಿ ಹಾಗೆ ನುಡಿದಿದ್ದ.

ಅಪ್ಪ ಬಂದರು ನಿಧಾನವಾಗಿ. 'ಎಲ್ಲಿ, ಒಮ್ಮೆ ನಕ್ಕುಬಿಡು, ಸರೂ. ನಿನ್ನ ಮುಖ ಹೀಗೆ ಸಪ್ಪಗಿರಬಾರದು, ಅಪ್ಪ ನೋಡೋ ವೇಳೆಗೆ' ಎಂದು ಅಂಗಲಾಚಿದ. ನಾನು ಅವನು ಬಯಸಿದ ತುಂಬು ನಗೆಯನ್ನು ನಕ್ಕೆ. ಅವನು ಆ ನಗುವನ್ನು ತೃಪ್ತಿಯಿಂದ ಹೀರಿ, ಮಧುಪಾನ ಮಾಡಿದವನ ಮತ್ತತೆಯಲ್ಲಿ ಹೋಗಿ ಬಾಗಿಲು ತೆರೆದ.

"ಇದ್ದೀಯಾ ರಾಜ. ಲೇಟಾಯ್ತಲ್ಲಾ. ಇರ್‍ತೀಯೋ ಇಲ್ವೋ ಅಂದು ಕೊಂಡೆ. ಸರಳಾ, ಪಂಕಜ ಬರೋದು ಇನ್ನೂ ತಡವಾತಮ್ಮ. ನಾನೂ ಅಲ್ಲೀವರೆಗೆ ಹೋಗಿದ್ದೆ. ಅದಕ್ಕೆ ತಡವಾಯ್ತು" ಅಂದರು.

ರಾಜನಿಗೂ, ಅಪ್ಪನಿಗೂ ಬಡಿಸಿ ಊಟ ಮಾಡಿದೆ. ನಂತರ ರಾಜ ಹೊರಟುಹೋದ.

ನಡೆದ ಘಟನೆಯಿಂದ ನನ್ನ ಮನಸ್ಸಿಗೆ ಹರ್ಷವೇ ಆಗಿತ್ತು. ಇನ್ನು ಎಂದೆಂದಿಗೂ ರಾಜ ನನ್ನವನೇ ಎಂದು ಕುಣಿದಾಡಿತು ಮನಸ್ಸು. ಬಹಳ ಸಂತೋಷವಾಗಿ ಕಳೆದುಹೋಯ್ತು ದಿನಗಳು. ಅಂದಿನ ಘಟನೆ ಮಾತ್ರ ಪುನರಾವರ್ತಿಸಲು ಆಸ್ಪದ ಕೊಡಲಿಲ್ಲ ನಾನು.

೧೫

"ಉಳಿಯ ಪೆಟ್ಟು ಬೀಳದೆ ಶಿಲೆ ಶಿಲ್ಪವಾಗದು ಅಂತಾರೆ ಸುಮಿತ್ರಾ. ಆದರೆ ಆ ಪೆಟ್ಟುಗಳಿಗೆ ಇಷ್ಟೇ ಇರಬೇಕು ಎಂಬ ಲೆಖ್ಖ ನಿಯಮವಿದ್ದಂತೆ ಕಾಣೋಲ್ಲ. ಅಷ್ಟು ಪ್ರೇಮತೋರಿ ನನ್ನನ್ನು ಪೂರ್ಣವಾಗಿ ತನ್ನವಳನ್ನಾಗಿ ಮಾಡಿಕೊಂಡ ರಾಜನಿಗೆ, ಇದ್ದಕ್ಕಿಂದತೆ ನಾನು ಬೇಡವಾಗಿ ಬಿಟ್ಟೆ ಎಂದರೆ ಯಾರೂ ನಂಬಲಾರರು ಸುಮಿತ್ರಾ"

"ಅಕ್ಕ ಏನು ! ನೀನು ಹೇಳುತ್ತಿರುವುದು. ಇಷ್ಟೆಲ್ಲಾ ಆದಮೇಲೆ ಅವನೇ ನಿನ್ನ ಕೈ ಬಿಟ್ಟುಬಿಟ್ಟನೆ ? ಯಾಕೆ ಸರಳಾ ? ಏನಾಯಿತು ಅಂಥದ್ದೇನು ನಡೆಯಿತು" ಕಾತರಿಸಿ ಕೇಳಿದಳು ಸುಮಿತ್ರ.

"ಕಾರಣ ಮಾತ್ರ ತಿಳಿಯದು. ಬರಬರುತ್ತಾ ರಾಜನಿಗೆ ನನ್ನಲ್ಲಿ ಆಸಕ್ತಿ ಕಡಿಮೆಯಾಯಿತು. ನನಗೆ ತಿಳಿದ ಮಟ್ಟಿಗೆ ಸ್ವಲ್ಪ ಅವನ ದುರ್ಬಲತೆ ಕಾರಣ ಮತ್ತೆ ಸ್ವಲ್ಪ ನನ್ನ ಅಭಿಮಾನ. ಅವನು ನನ್ನನ್ನು ತಾತ್ಸಾರ ಮಾಡಿದಾಗ ನಾನು ಸಹಿಸಲಾರದಾದೆ.

ಪ್ರತಿದಿನ ಒಮ್ಮೆಯಾದರೂ ನನ್ನನ್ನು ನೋಡದಿದ್ದರೆ ಜೀವ ನಿಲ್ಲಲಾರದು ಎಂದು ಹೇಳುತ್ತಿದ್ದ ರಾಜ, ವಾರದಲ್ಲಿ ಒಂದೆರಡು ದಿನ ಮಾತ್ರ ಬರಲಾರಂಭಿಸಿದ. ಕಾರಣ ಕೇಳಿದಾಗ, 'ಆಫೀಸಿನಲ್ಲಿ ಬಹಳ ಕೆಲಸ, ಸರೂ. ಬಿಡುವೇ ಆಗುವುದಿಲ್ಲ. ಮನೆ ತಲುಪುವ ವೇಳೆಗೆ ರಾತ್ರಿ ಎಂಟರ ಮೇಲಾಗಿರುತ್ತೆ. ನಂತರ ಎಲ್ಲಿಗೆ ಹೊರಡಲೂ ಮನಸ್ಸಾಗೋಲ್ಲ' ಎಂದುತ್ತರಿಸಿದ,

ನಂಬಿದೆ. ಅವನ ಮಾತಿನ ಒಂದು ಪದದಲ್ಲಾದರೂ ಅಪನಂಬಿಕೆ ಇರಲಿಲ್ಲ ನನಗೆ. ಅಷ್ಟು ಕುರುಡ್ಡಳು ನಾನು.

ಒಮ್ಮೆ ನನ್ನ ಜೊತೆಯಲ್ಲಿ ಕೆಲಸ ಮಾಡುವ ಮೂರ್ತಿ ಸುಮ್ಮನೆ ಕೇಳಿದರು. "ಮಿಸ್ ಸರಳಾ. ನಿಮ್ಮನ್ನು ನೋಡಲು ಆಗಾಗ ಬರುತ್ತಿದ್ದರಲ್ಲಾ-ಅವರ ಹೆಸರು ನನಗೆ ತಿಳಿಯದು. ಅವರಿಗೆ ಮದುವೆಯಂತೆ ?"

ನನ್ನ ಹೃದಯ ಹಿಗ್ಗಿ ಹೀರೆಕಾಯಿಯಾಯಿತು, ರಾಜ ಕಡೆಗೂ ಮನಸ್ಸು ಮಾಡಿದನಲ್ಲಾ ಎಂದು ಹರ್ಷಪಟ್ಟೆ. ನನಗಿಂತ ಮುಂಚೆ ಮೂರ್ತಿಗೆ ಹೇಗೆ ತಿಳಿಯಿತು ಅಂತ "ನಿಮಗೆ ಹೇಗೆ ಗೊತ್ತು ಅವರು" ಎಂದೆ.

"ನನ್ನ ಕಸಿನ್ ಒಬ್ಬ ಅವರ ಆಫೀಸಿನಲ್ಲೇ ಕೆಲಸ ಮಾಡುತ್ತಾನೆ. ಅವನು ಹೇಳಿದ, ಅವರ ಆಫೀಸಿನಲ್ಲೇ ಹೊಸದಾಗಿ ಸೇರಿದ್ದಾಳಂತೆ ಒಂದು ಹುಡುಗಿ ಭಾರತಿ ಅಂತ. ಅವಳನ್ನಂತೆ"

ಏನು ! ತಾನಲ್ಲವೇ, ರಾಜನ ಹೆಣ್ಣು ! ಮೂರ್ತಿ ಇನ್ನೂ ಏನೇನು ಹೇಳಿದರೋ ಕೇಳಿಸಲಿಲ್ಲ ತನ್ನ ಕಿವಿಗಳಿಗೆ. ಎದೆ ಹೊಡೆದುಕೊಳ್ಳುತ್ತಿತ್ತು. ತಲೆ ಸುತ್ತಿತ್ತು. ಕಣ್ಣಾಲಿಗಳು ತಿರುಗಿದುವು. ಈ ಷಾಕ್‌ನಿಂದ ಚೇತರಿಸಿಕೊಳ್ಳಲು ಐದು ನಿಮಿಷಕ್ಕೂ ಹೆಚ್ಚು ಸಮಯ ಬೇಕಾಯಿತು. ಹೇಗೋ ನಟನೆಯ ಸೋಗಿನಿಂದ "ಅವರ ಮದುವೆಯ ವಿಷಯ ನನಗೆ ತಿಳಿಯದು. ಇರಬಹುದು. ಇಂದೋ ನಾಳೆಯೋ ನನಗೂ ಬರಬಹುದು ಆಹ್ವಾನ ಪತ್ರಿಕೆ" ಎಂದೆ.

ಹಿಂದಿನ ದಿನವೇ ನೋಡಿದ್ದೆ ರಾಜನನ್ನು, ಅವನು 'ಭಾರತಿ' ಎಂಬ ಹೆಸರನ್ನೇ ಎತ್ತಿರಲಿಲ್ಲ. ಛೆ, ಸುಮ್ಮನೆ ಮಾತು ಹುಟ್ಟಿರಬಹುದು. ಆ ಹುಡುಗಿ ಎಲ್ಲೋ ಚಲ್ಲು ಹುಡುಗಿ ಇರಬಹುದು, ಜನ ತಪ್ಪು ತಿಳಿದಿದ್ದಾರೆ ಎಂದು ಸುಮ್ಮನಾದೆ.

ಇನ್ನೂ ಒಂದು ವಾರ ಕಳೆದಿರಲಿಲ್ಲ. ಆಫೀಸು ಜವಾನ ರುದ್ರ ಹೇಳಿದ "ರಾಯರು ನಿನ್ನೆ ಬಯಸ್ಕೋಪಿಗೆ ಬಂದಿದ್ರಮ್ಮ ಅವರ ತಂಗೀನೂ ಜತೇಲಿದ್ರು" ರಾಜನಿಗೆ ಯಾವ ತಂಗಿಯೂ ಇಲ್ಲ ಎಂದು ನಾನು ಬಲ್ಲೆ. ಹಾಗಾದರೆ ಭಾರತಿಯೆ ಇರಬಹುದೆ ? ಎಂದು ನನ್ನ ಮನ ಶಂಕಿಸಿತು.

"ಹೌದು. ನಿನ್ನೆ ಮನೆಗೆ ಬರಲು ಕರೆದಾಗ. ಆಫೀಸಿನಲ್ಲಿ ಕೆಲಸ ಇದೆ

ಸರೂ,' ಅಂತ ತಪ್ಪಿಸಿಕೊಂಡಿದ್ದ. ಇದೇನೇ ಕೆಲಸ! ಭಾರತಿಯೊಂದಿಗೆ ಚಿತ್ರ! ತನಗೆ ಸುಳ್ಳು ಹೇಳುವ ಕಾರಣವೇನಿತ್ತು? ಭಾರತಿಯ ವಿಷಯ ತನಗೇಕೆ ತಿಳಿಸಲಿಲ್ಲ ಅವನು? ನಾನು ನೊಂದುಕೊಳ್ಳುತ್ತೇನೆಂದು ಹೇಳಲಿಲ್ಲವೆ? ನಾನಾಗಿಯೆ ಕೇಳಿದರೆ? ಸುಳ್ಳು ಅಪೋಹಗಳೆಂದುಕೊಂಡಾನು. ಇರಲಾರದು. ನನ್ನಲ್ಲಿ ಅಷ್ಟು ದೂರ ಸಂಬಂಧ ಬೆಳೆಸಿ ನನ್ನ ದೇಹದ ಮೇಲೂ ಸಹ ಅಧಿಕಾರ ಪಡೆದವನು. ಹಾಗೇನೂ ಮಾಡಲಾರ. ನನಗನ್ಯಾಯ ಮಾಡಲಾರ" ಎಂದು ಮತ್ತೊಮ್ಮೆ ನುಂಗಿದೆ ನುಂಗಲಾರದ ತುತ್ತನ್ನು.

ಆ ಸಂದರ್ಭದಲ್ಲೇ ಸುದ್ದಿ ತಂದವಳು ಯಮುನಾ. ಓದುತ್ತಿದ್ದಾಗಿನ ಗೆಳತಿ, ನನ್ನ ಮತ್ತು ರಾಜನ ಗೆಳೆತನ ತಿಳಿದವಳು. "ಏನೇ ಸರಳಾ, ನಿನಗೆ ಅವನನ್ನು ಕಂಡ್ರೆ ತುಂಬಾ ಪ್ರೀತಿ, ವಿಶ್ವಾಸ ಅಂದ್ಕೊಂಡಿದ್ದೆನಲ್ಲೆ. ಬಿಟ್ಟು ಕೊಟ್ಟು ಬಿಟ್ಟೆಯೇನು?" ಎಂದಳು. ಮತ್ತೆ ಅದೇ ಮಾತು ಅದೇ ಒಗಟು

"ಏನದು ನೀ ಹೇಳೋದು ಯಮುನಾ?"

"ಅದೇ ನಿನ್ನ ರಾಜನ ಸಮಾಚಾರ. ನಮ್ಮ ಪಕ್ಕದ ಮನೇಗೆ ಬಂದಿದ್ದಾರೆ ಒಬ್ಬರು. ಅವರ ಮಗಳು ಭಾರತೀಂತ. ರಾಜನ ಜೊತೇಲಿ ಕೆಲಸ ಮಾಡ್ತಾಳೆ. ಅವರಿಬ್ರೂ ಈಗ ಗಳಸ್ಯ ಕಂಠಸ್ಯ. ಬೆಳಿಗ್ಗೆ ಎಂಟು ಗಂಟೇಗೆ ಅವಳ ಮನೆಗೆ ಅವನು ಬಂದ್ರೆ, ಜೊತೇಲ್ಲೇ ಆಫೀಸಿಗೆ ಹೋಗಿ. ಸಂಜೆ ಹಾಗೇ ಸುತ್ತಾಡಿಕೊಂಡು, ರಾತ್ರಿ ಎಟಂಕ್ಕೆ ಅವಳನ್ನು ಮನೆ ತಲಿಪ್ಸಿ ಹೋಗ್ತಾನೆ, ಯಾವಾಗ್ಲೂ ನೀವಿಬ್ರು ಒಳ್ಳೇ ಜೋಡಿ ಅಂತ, ಅಂದ್ಕೊತಾ ಇದ್ದೆನಲ್ಲೇ ಸರಳಾ. ಯಾಕೆ ಬೇಜಾರಾಗೋಯ್ತೇನು ಅವನು ನಿಂಗೆ?" ಅವಳು ಹಾಸ್ಯವಾಗೇ ಕೇಳಿದ್ದರೂ. ನನಗೆ ಅತೀವ ನೋವಾಯಿತು.

"ತಪ್ಪು ತಪ್ಪಾಗಿ ತಿಳ್ಕೋಬಾರ್ದು ಯಮುನಾ. ಏನೋ ಒಂದು ಆಫೀಸಿನಲ್ಲಿ ಕೆಲಸ ಮಾಡ್ತಾರೆ. ಸ್ವಲ್ಪ Mix ಆಗ್ತಾರೆ" ಎಂದು ಬಾಯಿ ಮುಚ್ಚಿಸಿದೆ,

ಇದರಲ್ಲಿನ ಸೋಜಿಗವೆಂದರೆ. ಅವನು ಬಂದಾಗಲೆಲ್ಲಾ, ನನ್ನನ್ನು ಬಹಳ ಪ್ರೇಮದಿಂದಲೇ ಕಾಣುತ್ತಿದ್ದ. ಅವನಲ್ಲಿ ನಾನು ಯಾವ ಬದಲಾವಣೆಯನ್ನೂ ಕಾಣಲಿಲ್ಲ, ಆದರೆ ಕ್ರಮೇಣ ಮನೆಗೆ ಬರುವುದು ಮಾತ್ರ ವಾರಕ್ಕೊಮ್ಮೆ ಆಗತೊಡಗಿತು. ನನ್ನ ನೋವಿಗೆ ಆದಿ ಅಂತ್ಯವಿಲ್ಲವಾಯಿತು,

ಮೂಕವಾಗಿ ಅಳುತ್ತಿದ್ದೆ. ನಾನಾಗಿ ಆ ವಿಷಯ ಅವನ ಬಳಿ ಎತ್ತಲಿಲ್ಲ. "ಅವನ ದುರ್ಬಲತೆ ತಿಳಿದಿರೋವಾಗ ಅದನ್ನೇ ದೊಡ್ಡದು ಮಾಡಿಕೊಳ್ಳ ಬೇಡ. ಅವನು ನಿನ್ನನ್ನು ಪ್ರೀತಿಸುತ್ತಿದ್ದಾನೆ. ಅಷ್ಟು ನಂಬು" ಎಂದು ಹೃದಯ ಹೇಳುತ್ತಿತ್ತು.

ಅವನು ತನಗೆ ಬಹಳ ಕೆಲಸ ಎಂದು ಹೇಳಿದಾಗಲೆಲ್ಲಾ, ಅವನನ್ನು ಭಾರತಿಯೊಂದಿಗೆ ನೋಡಿದ ಹಾಗೆ ಒಬ್ಬರಲ್ಲದಿದ್ದರೆ ಒಬ್ಬರು ಸುದ್ದಿ ಕೊಡು ತ್ತಿದ್ದರು. ದಿನಕ್ಕೊಮ್ಮೆ ಏಟು ಬೀಳಲಾರಂಭಿಸಿತು ನನಗೆ.

ಅವನ ಆಫೀಸಿನಲ್ಲೇ ಕೆಲಸ ಮಾಡುತ್ತಿದ್ದ ಸತ್ಯವತಿಗೆ ನಮ್ಮಿಬ್ಬರ ಸ್ನೇಹ ಅಲ್ಪ ಸ್ವಲ್ಪ ತಿಳಿದಿತ್ತು. ಅವಳು ನನ್ನನ್ನು ಕಂಡಿರಲಿಲ್ಲವಾದರೂ, ನಾನು ದಿನಕ್ಕೊಮ್ಮೆಯಾದರೂ ಅವನಿಗೆ ಫೋನು ಮಾಡುತ್ತಿದ್ದೆನಾದ್ದರಿಂದ, ನಾವು ಪ್ರೇಮಿಗಳೇ ಇರಬೇಕೆಂದು ತಿಳಿದಿದ್ದಳು. ಅಕಸ್ಮಾತ್ತಾಗಿ ಭೇಟಿ ಯಾದಾಗ, ನಾನೇ ಸರಳೆಯೆಂದು, ತಿಳಿದು ಪರಿಚಯ ಮಾಡಿಕೊಂಡಳು.

ಅವಳೂ ಹೇಳಿದಳು "ರೀ ಸರಳಾ. ನಾ ಒಂದು ಮಾತು ಹೇಳ್ತೀನಿ. ನೀವು ಎಚ್ಚರಿಕೆ ವಹಿಸದಿದ್ದರೆ ನೀವು ಅವರನ್ನು ಕಳೆದುಕೊಳ್ತೀರಿ. ಭಾರತಿ ಅವರನ್ನು ಬಹಳ ಆಕರ್ಷಿಸಿ ಬಿಟ್ಟಿದ್ದಾಳೆ. ಅವರಿಬ್ಬರ ನಡೆವಳಿಕೆ ಸ್ವಲ್ಪ ಜಿಗುಪ್ಸೆಕರವಾಗಿಯೇ ಇರುತ್ತೇ ಅಂತಿಟ್ಕೊಳ್ಳಿ. ನಾನೀ ವಿಷಯದಲ್ಲಿ ತಲೆ ಹಾಕಬಾರದು. ಆದ್ರೂ ನಿಮ್ಮನ್ನು ಪರೋಕ್ಷವಾಗಿ ತಿಳಿದ ನಾನು ಸುಮ್ಮನೆ ಇರಲಾರದಾದೆ. ಎಚ್ಚರವಾಗಿರಿ, ಸರಳಾ"

ಬೆಂಕಿಕೊಟ್ಟು ಕೈಯಲ್ಲಿ ಹಿಡಿದರು ಎಂದು ಹೇಳಿ ಹೊರಟುಹೋದಳು ಅವಳು. ನನಗೆಲ್ಲಾ ಅಯೋಮಯವಾಯಿತು, ಯಾರನ್ನು ನಂಬಲಿ? ರಾಜನನ್ನೇ ಅಥವಾ ಸುತ್ತಲೂ ಬರುತ್ತಿರುವ ಸುದ್ದಿಯನ್ನೇ ? ಒಬ್ಬರಾದರೆ ಅಸೂಯೆಗೆ ಹೇಳಿದರೆನ್ನಬಹುದು. ಇಬ್ಬರಾದರೆ ತಪ್ಪು ತಿಳಿದು ಮಾತ ನಾಡಿದರೆನ್ನಬಹುದು. ನಾನೂ, ಅವನೂ ಪ್ರೇಮಿಗಳೆಂದು ತಿಳಿದ ಪ್ರತಿ ಯೊಬ್ಬರೂ ಭಾರತಿಯ ವಿಷಯ ಎತ್ತುತ್ತಿದ್ದರು.

ಆದರೂ ನಾನು ಕಣ್ಣು ತೆಗೆಯಲಿಲ್ಲ. ಸುಮಿತ್ರಾ, ರಾಜ ಎಂದಿ ನಂತೆಯೇ ಇದ್ದಾಗ ಅವನನ್ನು ನಂಬದಿರಲು ಸಾಧ್ಯವಾಗಲಿಲ್ಲ. ಆದರೆ ಅವನೇಕೆ ಭಾರತಿಯನ್ನು ಕುರಿತು ನನಗೆ ಹೇಳಲಿಲ್ಲ ಅನ್ನೋದು ನನಗೆ

ಸಮಸ್ಯೆಯಾಯಿತು. ತಡೆಯದೇ ಹೋದಾಗ ಪ್ರಶ್ನಿಸಿಯೇ ಬಿಟ್ಟೆ—"ನೆನ್ನೆ ಸ್ವಲ್ಪ ರೈಲ್ವೆ ಸ್ಟೇಷನ್ನಿಗೆ ಹೋಗಬೇಕು. ಜೊತೇಗೆ ಬನ್ನಿ ಅಂದೆನಲ್ಲಾ ರಾಜ, ಯಾಕೆ ಬರಲಿಲ್ಲ ನೀವು ?"

"ಬಹಳ ತಲೆ ನೋಯುತ್ತಿತ್ತು ಸರೂ. ಎಲ್ಲೂ ಬರಲಾಗಲಿಲ್ಲ."

"ನಿಜ ಹೇಳುತ್ತಿದ್ದೀರಾ ?"

"ಸತ್ಯವಾಗಿ"

"ನೆನ್ನೆ ಪ್ಲಾಸಾದಲ್ಲಿ ಚಿತ್ರಕ್ಕೆ ಹೋಗಿರಲಿಲ್ಲವೆ ?"

"ಇಲ್ಲವಲ್ಲಾ"

"ಸುಳ್ಳು ಹೇಳಿ ಏನು ಸಾಧಿಸಬೇಕೂಂತ ಇದೀರಿ ರಾಜ, ಅದರಲ್ಲೂ ನಿಮ್ಮಲ್ಲಿ ಅನುರಾಗ ಇಟ್ಟು, ನಿಮ್ಮನ್ನೇ ನಂಬಿರೋ ನನಗೆ ಸುಳ್ಳು ಹೇಳೋ ಪ್ರಮೇಯವಾದರೂ ಏನು ?"

"ಸರಿ. ಇನ್ನೇನು ಹೇಳಲಿ. ನನ್ನನ್ನು ನಂಬೋಕ್ಕೆ ಇಷ್ಟ ಇಲ್ದಿದ್ರೆ ನಾನೇನ್ಮಾಡ್ಲಿ ?" ಅಸಹನೆಯ ಮಾತು ರಾಜನ ಬಾಯಲ್ಲಿ ನನ್ನೆಡೆಗೆ !

"ನೀವು ಭಾರತಿಯೊಂದಿಗೆ ಚಿತ್ರಮಂದಿರದಿಂದ ಹೊರಬಂದದ್ದು ನಾನೇ ನೋಡಿದೆ. ನನಗೆ ಸುಳ್ಳು ಹೇಳಬೇಡಿ. ನನಗೇಕೆ ಅವಳನ್ನು ಪರಿಚಯ ಮಾಡಿಸಲಿಲ್ಲ ?"

"ನೀನು ಯಾರನ್ನೋ ನೋಡಿ ನಾನು ಎಂದುಕೊಂಡಿದ್ದಿ, ಅಷ್ಟಕ್ಕೂ ನೀನು ಭಾರತಿಯನ್ನೇ ನೋಡಿಲ್ಲವಲ್ಲಾ. ಸುಮ್ಮ ಸುಮ್ಮನೆ ಮನಸ್ಸಿಗೆ ಬೇಸರ ಮಾಡಿಕೋತಿ" ಎಂದು ತನ್ನ ಸುಳ್ಳನ್ನೇ ಸಾಧಿಸಿದ. ನಾನೂ ಸಹ "ನೋಡಿದೆ"ನೆಂದು ಸುಳ್ಳು ಹೇಳಿದ್ದೆ.

ವಾಸ್ತವವಾಗಿ ನಾನು ನೋಡಿರಲಿಲ್ಲ. ಯಮುನಾ ಸುದ್ದಿ ಕೊಟ್ಟಿದ್ದಳು. ರಾಜ, ಚಿತ್ರಕ್ಕೆ ಹೋಗಿರಲಿಲ್ಲವೆಂದು ಅಷ್ಟು ಸಾಧಿಸಿದಾಗ ನಾನು ಯಮುನಳನ್ನೇ ಸಂಶಯಪಟ್ಟೆ.

ಅಂದಿನಿಂದ ರಾಜ ಮನೆಗೆ ಬಂದಾಗಲೆಲ್ಲಾ—ಬರುವುದೇ ಅಪರೂಪವಾಗಿತ್ತು—ಭಾರತಿಯ ಕುರಿತಾಗಿ ವಾಗ್ವಾದವಾಗುತ್ತಿತ್ತು. ಪ್ರೇಮದ ಮೃದು ಧ್ವನಿಯಲ್ಲಿ ಸಂತೈಸುತ್ತಿದ್ದ ರಾಜ, ಇತ್ತೀಚೆಗೆ ಅವಳ ವಿಷಯ ಬಂದ ಕೂಡಲೇ ಅವಳೇ ಯಾವ ಜನ್ಮದ ಗೆಳತಿಯೋ,ವೃಥಾ ನಾನು ನಡುವೆ ಬಂದು

ಅಪಹನನ್ನು ಘಾಸಿ ಮಾಡಿದ ಹಾಗೆ ಮಾತನಾಡುತ್ತಿದ್ದ. ಅವಳ್ಯಾವ ಮೋಡಿ ಮಾಡಿದ್ದಳೋ ನನ್ನ ರಾಜನಿಗೆ, ನನ್ನ ಸವತಿಯಂತೆ ಬಂದು ನನ್ನ ರಾಜನ ಕೈಲೇ ನನ್ನ ಎದೆಗೆ ಒದೆಸುತ್ತಿದ್ದಳು.

ಹೃದಯಕ್ಕೇ ಈ ಬಾರಿ ಬಿದ್ದ ಪೆಟ್ಟು ಅಗಾಧ. ಇದುವರೆವಿಗೂ ಕೇಳಿಸಿಕೊಳ್ಳುತ್ತಿದ್ದ ದೃಶ್ಯವನ್ನು ಅಂದು ನಾನೇ ಕಂಡೆ.

ಆಫೀಸಿನಿಂದ ಹಿಂತಿರುಗುವುದು ಸಲ್ಪ ತಡವಾಯಿತು, ಆಟೋರಿಕ್ಷಾ ಮಾಡಿಕೊಂಡು ಬರುತ್ತಿದ್ದೆ. ಹಳೆಯ ಗಾಡಿ ಬಹಳ ಕುಲುಕುತ್ತಿತ್ತು. ಮೈಯನ್ನೆಲ್ಲಾ ಎತ್ತಿ ಹಾಕುತ್ತಿತ್ತು. "ಸ್ವಲ್ಪ ನಿಧಾನವಾಗಿ ನಡೆಸಪ್ಪ." ಎಂದು ನಿಧಾನವಾಗಿ ಹೋಗುತ್ತಿದ್ದೆ. ಎದುರಿಗೆ ಸತ್ಯವತಿ ಸಿಕ್ಕಳು. ಅವಳ ಬಳಿ ಮಾತನಾಡಲು ಗಾಡಿ ನಿಲ್ಲಿಸಿದೆ. ಗಾಡಿಯ ತಲೆದೀಪದ ಬೆಳಕಿನಲ್ಲಿ, ರಾಜನೂ, ಭಾರತಿಯೂ ಕೈ ಕೈ ಹಿಡಿದು ಬರುತ್ತಿದ್ದುದನ್ನು ನೋಡಿದೆ. ಹೃದಯ ಬಾಯಿಗೆ ಬಂದಂತಾಯಿತು. ಸತ್ಯವತಿಯ ಕೂಡ ಮಾತನಾಡಲೂ ಸಹ ಆಗಲಿಲ್ಲ ನನಗೆ. ಬಾಯರಸ ಒಣಗಿ ನಾಲಗೆ ಬತ್ತಿತ್ತು.

ಪಾಪ! ರಾಜನಿಗೇನು ಗೊತ್ತು, ಸತ್ಯವತಿಯೊಂದಿಗೆ ಮಾತನಾಡುತ್ತಿರುವವಳು ರಿಕ್ಷಾದೊಳಗಿದ್ದ ಸರಳಾಯೆಂದು! "ಏನ್ರಿ ಸತ್ಯವತಿ ನೀವಿಲ್ಲಿ!?" ಎಂದು ರಿಕ್ಷಾದ ಪಕ್ಕಕ್ಕೆ ಬಂದ. ಎದುರಿಗಾವುದೋ ಲಾರಿ ಬಂದಿತೆಂದು ಭಾರತಿಯ ಸೊಂಟಕ್ಕೆ ಕೈ ಹಾಕಿ "ಎಲ್ಲಾದರೂ ಸತ್ತುಹೋಗಿ ಬಿಟ್ಟೀಯಾ ಸಧ್ಯ. ನಿನ್ನ ಜವಾಬ್ದಾರಿ ನನ್ನದು" ಎಂದು ಪಕ್ಕಕ್ಕೆಳೆದುಕೊಂಡ. ರಿಕ್ಷಾದೊಳಗಿದ್ದ ನಾನು ಅಸೂಯೆ, ದುಃಖ, ಕೋಪಗಳಿಂದ ಜಡ್ಡಾಗಿಬಿಟ್ಟೆ. ಏನೂ ಮಾತನಾಡಲಿಲ್ಲ. ಸತ್ಯವತಿಯೇ ಹೇಳಿದಳು—"ಸರಳಾ ಲೇಟಾಗಿ ಮನೆಗೆ ಹೊರಟಿದಾರೆ. ಮಾತನಾಡಿಸಿದೆ".

ರಾಜ ಕುಸಿದು ಬೀಳುವುದೊಂದು ಬಾಕಿಯಿತ್ತು ಈ ಮಾತು ಕೇಳಿ. ನನ್ನನ್ನು ನೋಡಿ ಅವನೇಕೆ ಹೆದರಿದನೋ ತಿಳಿಯದು. ಕಷ್ಟಪಟ್ಟು ನನ್ನನ್ನು ಮಾತನಾಡಿಸಲೆತ್ನಿಸಿದ. ಮಾಯಲಾಗದ ಘಾಯ ಅವನು ನನಗೆ ಮಾಡಿದ್ದ. ನನ್ನ ಅಮೃತಮಯ ಹೃದಯಕ್ಕೆ ಒಡೆದಿದ್ದ, ತನ್ನ ಸುಳ್ಳಿನ ಕಂತೆಗಳಿಂದ, ವಂಚನೆಯ ಪ್ರೀತಿಯಿಂದ. ಕಹಿ ಉಗುಳಿತು ಮನಸ್ಸು ನನ್ನ ಬಗೆಗೆ ನನಗೇ ಅಸಹ್ಯವಾಯಿತು, ಪ್ರೇಮವೆಂದರೆ ಏನೆಂದು ತಿಳಿಯದ ಇವನಿಗೆ ನನ್ನ

ದೇಹವನ್ನು ಅರ್ಪಿಸಿಕೊಂಡೆನಲ್ಲಾ ಎಂದು ಈ ದೇಹವನ್ನು ಸುಟ್ಟು ಬಿಡ ಬೇಕೆನ್ನುವಷ್ಟು ತಾಳ್ಮೆಗೆಟ್ಟೆ.

ರಾಜನ ಮಾತಿಗೆ ಚಕಾರ ಉತ್ತರವನ್ನೂ ಹೇಳದೆ, ರಿಕ್ಷಾವನ್ನು ಆತುರವಾಗಿ ಬಿಡುವಂತೆ ಹೇಳಿ ಮನೆ ತಲುಪಿದೆ.

ಮನೆಯ ಮುಂದೆ ರಿಕ್ಷಾ ನಿಂತಾಗ, ತಂದೆಯ ಕೋಣೆಯಲ್ಲಿ ದೀಪ ವಿಲ್ಲದ್ದು ನೋಡಿ ನನಗೆ ಆಶ್ಚರ್ಯವಾಯಿತು. ಹತ್ತುವರೆಯಾದರೂ, ಏನನ್ನಾದರೂ ಓದುತ್ತಾ ಇರುತ್ತಿದ್ದ ಅಪ್ಪ ಇಷ್ಟು ಬೇಗ ಮಲಗಿಬಿಟ್ಟರೆ ? ಬಾಗಿಲ ಮೆಟ್ಟಲು ಹತ್ತಿದೆ. ರಿಕ್ಷಾದ ಸದ್ದಿನಿಂದ ಅತ್ತೆ ಬಾಗಿಲಿಗೆ ಬಂದಿದ್ದರು. ಬಾಗಿಲು ತೆಗೆದ ಕೂಡಲೇ ಕೇಳಿದೆ--

"ಅಪ್ಪ ಮನೇಲಿಲ್ವ ಅತ್ತೆ ?"

"ಇದಾನಮ್ಮ ಮಲಗಿದ್ದಾನೆ"

"ಮಲಗಿದ್ದಾರಾ? ಯಾಕಿಷ್ಟು ಬೇಗ? ಕಾತುರದಿಂದ ಕೇಳಿದೆ.

ಬಾಗಿಲಲ್ಲೇ ಹೇಳಿದರು ಅತ್ತೆ, "ಅಣ್ಣನ ನರದೌರ್ಬಲ್ಯ ನಿನಗೆ ಗೊತ್ತೇ ಇದೆ ಸರಳಾ. ಆದರೂ ತಡವಾಗಿ ಏಕಮ್ಮ ಬಂದೆ" ಎಂದು ನೊಂದರೂ ಆಕ್ಷೇಪಿಸುವ ದನಿಯಲ್ಲಿ ಹೇಳಿದರು.

"ನಾನೇನು ಮಾಡಲಿ ಅತ್ತೆ. ಆಫೀಸಿನಲ್ಲಿ ಈವತ್ತು ಕೆಲಸ ಸ್ವಲ್ಪ ಜಾಸ್ತಿ. ಮುಗಿಸಿ ಬರೋ ವೇಳೆಗೆ, ಬಸ್ಸಾಗಲಿ, ರಿಕ್ಷಾ ಆಗಲಿ ಸಿಕ್ಕಲಿಲ್ಲ ತಡವಾಯ್ತು. ಅಪ್ಪಂಗೆ ಏನಾಯ್ತು ಅತ್ತೆ?" ಒಂದೇ ಉಸಿರಿನಲ್ಲಿ ಕೇಳಿದೆ.

"ಸರಿಯಾಗೇ ಇದ್ದನಮ್ಮ. ಎಂದಿನಂತೆ ನೀನು ಯಾವಾಗ ಆರೂವರೆ ಒಳಗೆ ಬರಲಿಲ್ವೋ ಚಡಪಡಿಸೋದಕ್ಕೆ ಶುರುಮಾಡ್ದ. ಏಳು ಗಂಟೇವರ್‍ಗೂ ಒದ್ದಾಡ್ತಾನೇ ಇದ್ದ. ಅವನಿಗೆ ತಡಕೊಳ್ಳೋಕ್ಕಾಗಲಿಲ್ಲ ಕುಸಿದು ಬಿದ್ದು ಬಿಟ್ಟ. ನಾನೊಬ್ಬಳೇ ಏನು ಮಾಡಲಿ. ರಾಜನಾದ್ರೂ ಬರ್‍ತಾನೇನೋ ಅಂತ ನೋಡ್ದೆ. (ಈ ಮಾತು ಕೇಳಿ ನನಗೆ ಮೈಯೆಲ್ಲಾ ಉರಿದುಹೋಯ್ತು ಬರ್‍ತಾನೆ ರಾಜ ! ಊರಲೆಯುವುದಕ್ಕೆ ಪುರಸತ್ತಿಲ್ದೆ ಇರೋವ್ರಿಗೆ ನಮ್ಮ ನೆನಪಾದ್ರೂ ಇರುತ್ತೇನು ಅಂತ ಮನಸ್ಸಿನಲ್ಲೇ ಉದ್ವಿಗ್ನಳಾದೆ) ಹಿಂದಿನ ಮನೆ ಜಯರಾಮನ ಕೈಲಿ ಡಾಕ್ಟರನ್ನು ಕರಸ್ದೆ. ಡಾಕ್ಟ್ರು ಒಂದು ಇಂಜೆಕ್ಷನ್ ಕೊಟ್ಟು ಹೋಗಿದ್ದಾರೆ. ಈಗ ತಾನೇ ಮಲಗಿದ್ದಾನೆ. ಬೆಳಿಗ್ಗೇಗೆ ಚೇತರಿಸ್ಕೋ

ತಾನೆ ಹೆದರಬೇಡ ಸರೂ. ಆದ್ರೆ ಇನ್ನೊಂದ್ಸಲ ಹೀಗೆ ಹೇಳದೆ ತಡವಾಗಿ ಬರಬೇಡಮ್ಮ. ನೀನು ಅಂದ್ರೆ ಅವನಿಗೆ ಪ್ರಾಣ. ಅವನ ವಿಷಯ ನಿನಗ್ಗೊತ್ತು"

ಅಲ್ಲೇ ಸೋಫಾದ ಮೇಲೆ ಕುಕ್ಕರಿಸಿದೆ. ನನಗೆ ದಿಕ್ಕೇ ತೋಚದು. ಎಲ್ಲಾ ಗೊಂದಲ ಗೊಂದಲ. ಅಪ್ಪ ಚೇತರಿಸಿ ಕೊಳ್ತಾರೆ. ಆದರೆ ನಾನು ! ಚೇತರಿಸಿಕೊಳ್ಳಬಲ್ಲೆನೆ ? ಯೋಚನೆ ಮಾಡುವ ಶಕ್ತಿಯೇ ಉಡುಗಿ ಹೋಗಿತ್ತು. ಶೂನ್ಯದೊಳಗೆ ದೃಷ್ಟಿಯಿಟ್ಟು ಕುಳಿತುಬಿಟ್ಟಿದ್ದೆ. ರಾಜ ಭಾರತಿಯರೇ ಎದುರಿಗೆ ಬರುತ್ತಿದ್ದರು. ಒಬ್ಬರ ಕೈಯಲ್ಲಿ ಒಬ್ಬರ ಕೈ !

ಅವಳ ಸೊಂಟಕ್ಕೆ ಇವನ ಕೈ ! ಮೈ ಮೇಲೆ ಬೆಂಕಿ ಚೆಲ್ಲಿದಂತಾಯಿತು'

"ಎದ್ದೇಳು ಸರಳಾ ಹೀಗೆ ಕೂತ್ಬಿಟ್ಟೆಯಲ್ಲಾ ತಿಂಡಿ ತಿಂತೀಯೋ ಊಟಾನೇ ಮಾಡಿಬಿಡ್ತೀಯೋ ಹೊತ್ತಾಗಿದೆ"

"ಯಾವುದೂ ಬೇಡ ಅತ್ತೆ. ನಂಗೇನೂ ಬೇಡ ಅನ್ನಿಸ್ತಾ ಇದೆ"

"ಹಾಗಂದ್ರೆ ಹೇಗೆ ಸರೂ. ಅಣ್ಣಂಗೆ ಏನೂ ಆಗಿಲ್ಲ. ಬೇಲಿಗೆ ಇಗೆ ಸರಿ ಹೋಗುತ್ತೆ ಏಳಮ್ಮ"

ನನ್ನ ಅಳಲೆಲ್ಲಾ ತಂದೆಯ ಅಸ್ವಸ್ಥತೆಗಾಗಿ ಎಂದು ಬಗೆದರು ಅತ್ತೆ. ಮೊಸರಿನಲ್ಲಿ ಅನ್ನ ಕಲಸಿ ಉಪ್ಪಿನಕಾಯಿ ಹಾಕಿ. ನಾನಿದ್ದಲ್ಲಿಗೆ ತಂದರು. ಅವರ ಮಮತೆ ವಾತ್ಸಲ್ಯದಿಂದ ಎಚ್ಚರಗೊಂಡೆ. "ಬಂದೆ. ಕೈಕಾಲು ತೊಳೆದು ಬರ್ತೀನಿ. ಅತ್ತೆ" ಎಂದು ಎದ್ದು ಹೋದೆ. ದುಃಖಿಸಲು ಅಸ್ಪದ ಸಿಕ್ಕಿತು. ತೃಪ್ತಿಯಾಗುವಷ್ಟು ಅತ್ತು ಬಂದು, ತಟ್ಟೆ ಕೈಗೆ ತೆಗೆದುಕೊಂಡು, ಪ್ರೀತಿಯ ಅಮೃತದಲ್ಲಿ ಬೆರೆಸಿದ ಅನ್ನಕ್ಕೆ ಕಣ್ಣೀರು ಜೊತೆಗೂಡಿಸಿ ಊಟದ ಶಾಸ್ತ್ರ ಮುಗಿಸಿದೆ. ಅಪ್ಪನ ಬಳಿ ಬಂದು ಬೆತ್ತದ ಕುರ್ಚಿ ಎಳೆದುಕೊಂಡು ಕುಳಿತೆ. ನನ್ನ ಯೋಚನಾ ತರಂಗಗಳು ಮತ್ತೆ ರಾಜನ ಕಡೆಗೆ ಜಾರಿದುವು. ನನಗೀಗ ದುಃಖವಿರಲಿಲ್ಲ. ಏನೋ ಜುಗುಪ್ಸೆ, ಅಸಹ್ಯ.

ರಾಜನಲ್ಲಿನ ಈ ದುರ್ಗುಣವನ್ನು ಬದಲಾಯಿಸಲು ಸಾಧ್ಯವಿಲ್ಲವೆ ? ಅವನು ಯಾಕೆ ಹೀಗೆ. ಒಂದು ಹೂವಿನಿಂದ ತೃಪ್ತವಾಗದ ಭ್ರಮರವೆ ಅವನು ? ಅಥವಾ ಅವನು ನನ್ನನ್ನು ಪ್ರೀತಿಸುತ್ತಿರಲಿಲ್ಲವೆ ? ತಂಗಿಯ ಮೇಲಿನ ವಾತ್ಸಲ್ಯವಿರಬಹುದೇ ? ಹಾಗಾದರೆ ಆ ಚುಂಬನ, ಬಾಹುಬಂಧನ

ಗಳ ಅರ್ಥ ? ಅಂದು ನಡೆದ ಘಟನೆ ಅಣ್ಣ ತಂಗಿಯರಲ್ಲಿ ನಡೆಯುವಂತ ಹದೆ ? ರಾಜನ ಮನಸ್ಸಿನ ಚಂಚಲಕ್ಕೆ ನನ್ನಲ್ಲಿನ ಯಾವುದಾದರೂ ಲೋಪ ವಿರಬಹುದೆ ? ಅವನು ಇದೇ ರೀತಿ ಸಂಯಮಬಿಟ್ಟು ನಡೆದುಕೊಳ್ತಾ ಇದ್ರೆ ನಾಳೆ ನಾನು ಅವನ ಕೈಹಿಡಿದ ಮೇಲೂ ಹೀಗೇ ಆದರೆ ನಮ್ಮದೊಂದು ದಾಂಪತ್ಯವೇ ! ಒಂದು ವೇಳೆ ಅವನು....ನ....ನ್ನ ಕೈ ಬಿಟ್ಟು ಬಿಟ್ಟರೆ ! ನನ್ನ ಗತಿ ! ಗತಿ ! ಮೈಯ್ಯೆಲ್ಲಾ ನಡುಗ ಹತ್ತಿತ್ತು. ಬೇಡ ಭಗವಾನ್, ಹಾಗಾಗುವುದು ಬೇಡ ಎಂದು ಒಂದು ಮನಸ್ಸು ಮೊರೆಯಿಟ್ಟರೆ. ಇನ್ನೊಂದು ಮನಸ್ಸು "ಬಿಟ್ಟರೆ ಚಿಂತೆಯಿಲ್ಲ, ಇಂತಹ ಸಂಯಮವಿಲ್ಲದ ಬೇಜವಾಬ್ದಾರಿ ಯವನ ಮೇಲೆ ನಿನಗೇಕೆ ವ್ಯಾಮೋಹ" ಎಂದು ಧೈರ್ಯ ಹೇಳುತ್ತಿತ್ತು.

ನನ್ನ ಅಭಿಮಾನಕ್ಕೂ ಪೆಟ್ಟುಬಿದ್ದಿತು. ಅವನ ಮನಸ್ಸಿನ ದೇಹದ ಚಟ ತೀರಿಸಲಿಕ್ಕೆ ನಾನು. ಮಿಕ್ಕೆಲ್ಲಾ ಮೋಜಿಗೆ ಪರ ಹೆಣ್ಣುಗಳು. ನಾನೇನು ಅಂತ ಅಗ್ಗದ ವಸ್ತುವಲ್ಲ ಇವನಿಗೆ ಇಷ್ಟ ಬಂದಹಾಗೆ ಉಪ ಯೋಗಿಸಿಕೊಳ್ಳಲು ಎಂದು ಸೆಟೆದು ನಿಂತಿತು ಮನಸ್ಸು ಬುದ್ಧಿಗಳೆರಡೂ. ಎದುರಿಗೆ ಬಂದು ನಿಂತಳು ಮಧುರಾ––

"ನಾನು ನಿನಗೆಷ್ಟು ಬಾರಿ ಬುದ್ದಿ ಹೇಳಿದೆ ಸರೂ, ರಾಜನ ಸಹವಾಸ ಸಾಕು ಮಾಡು ಅಂತ. ಕೆಲವರಿಗೆ ತಮಗಾಗಿ ತಮಗೆ ಬುದ್ಧಿಯಿರುವುದಿಲ್ಲ. ಬೇರೆಯವರು ಹೇಳಿದ್ರೂ ಕೇಳುವುದಿಲ್ಲ. ನೀನು ಆ ಜಾತಿಗೆ ಸೇರಿದವ್ಳು, ಈಗೇನು ಮಾಡ್ತಿ ? ಇರಲಿ ಬಿಡು. ಈಗೇನೂ ಕಾಲ ಮಿಂಚಿಲ್ಲ. ಅವನನ್ನ ಮರೆ" ಮಧುರಾ ಮರೆಯಾದಳು.

ಅಮ್ಮ ಬಂದು ಅಂದರು--"ನಿನಗೆಷ್ಟು ಸಲ ಹೇಳಿದ್ದೀನಿ ಸರೂ. ತಾಳ್ಮೆ, ಸಹನೆ. ಹೆಣ್ಣಿಗೆ ಮುಖ್ಯವಾದ ಗುಣಗಳು. ನೀನು ಅದೊಂದು ಗುಣ ಕಲೀಬೇಕು. ತಾಳ್ಮೆ ತಂದುಕೊ ದುಡುಕಬೇಡ. ಅಭಿಮಾನಕ್ಕೆ ಹೆಚ್ಚು ಬೆಲೆ ಕೊಡಬಾರದು. ತಾಳ್ಮೆ ! ಸಹನೆ" ಅಮ್ಮ ಮರೆಯಾದರು.

ಭೂಷಣ ಗುಡುಗಿದ--"ಸರಿ, ಆ ಪೋಕರಿಗಾಗಿ ನನ್ನ ನಾಲಗೆ ಪ್ರಶ್ನಿಸೋ ಧೈರ್ಯ ಬಂತೆ ನಿನಗೆ" ಮತ್ತೆ ಮಧುರಾ "ಅಣ್ಣನ ಮಾತು ನಿಜ, ಸುಳ್ಳಲ್ಲ" ಯಮುನಾ-"ಅವರಿಬ್ಬರಿಗೂ ಗಳಸ್ಯ ಕಂಠಸ್ಯ" ಮೂರ್ತಿ----

"ಅವರಿಬ್ಬರಿಗೂ ಮದ್ವೇರಿ", ರುದ್ರ-"ಬಯಸ್ಕೋಪಿಗೆ ಬಾದಿದ್ರುವ್ವ" ಸತ್ಯವತಿ–"ಎಚ್ಚರ ವಹಿಸದಿದ್ರೆ ಕಳ್ಕೊಳ್ತೀರಿ"

ತಲೆಯಲ್ಲಿ ಬರೀ ಗೊಂದಲ ಸಿಕ್ಕು. ಗಟ್ಟಿಯಾಗಿ ತಲೆ ಹಿಡಿದುಕೊಂಡೆ ಊಹುಂ ತಲೆ ಸಿಡಿಯುತ್ತಿತ್ತು. ಎಲ್ಲವನ್ನೂ ಮೆಟ್ಟಿ ನಿಂತಿತು ಒಂದ್ದು ಕೂಗು. ನನ್ನ ಹೃದಯದ ಆರ್ತಕೂಗು–"ಸರಳೆ, ಸರೂ, ನೀನು ಪತಿತಳು. ಆಕ್ಕರೆ ಇಲ್ಲದವನಿಗೆ ಮೈ ಮನಗಳನ್ನೊಡ್ಡಿಕೊಂಡು ಹಾಳಾದೆ. ಆದರ್ಶ ಸತಿಯಾಗಿ ಬಾಳಬೇಕೆಂದು ಕನಸು ಕಂಡಿದ್ದೆಯಲ್ಲವೆ ? ಈಗ ಯಾವ ಪಾತಾಳಕ್ಕೆ ಬಿದ್ದಿರುವೆ ? ನಿನ್ನ ಜನ್ಮ ಸುಡು. ಕಡೆಗೆ ನಿನ್ನ ದೇಹವನ್ನಾದರೂ ಸುಟ್ಟು ಪವಿತ್ರ ಮಾಡು."

ಸರ್ರೆಂದು ಖುರ್ಚಿಯನ್ನು ಹಿಂದಕ್ಕೆ ತಳ್ಳಿ ಎದ್ದೆ. ಬಚ್ಚಲು ಮನೆಗೆ ಹೋಗಿ ಸೀಮೆಎಣ್ಣೆ ಹುಯ್ದುಕೊಂಡು ಸುಟ್ಟುಕೊಳ್ಳಬೇಕೆಂದು, ನಾನು ಆತ್ಮಹತ್ಯೆ ಮಾಡಿಕೊಳ್ಳುವುದನ್ನು ನನ್ನ ವಿಧಿ ಇಚ್ಛಿಸಲಿಲ್ಲ. ದಿನ ದಿನಕ್ಕೆ ಸ್ವಲ್ಪ ಸ್ವಲ್ಪವಾಗಿ ನನ್ನನ್ನು ಕರಗಿಸಿ ಕೊರಗಿಸಿ ಕೊಲ್ಲಬೇಕೆಂದು ಸಂಚು ಹೂಡಿದ್ದ ಆ ವಿಧಿಗೆ ನನಗೆ ಒಂದೇ ಏಟಿನಲ್ಲಿ ನಿಷ್ಕೃತಿ ಕೊಡಲು ಅನಿಷ್ಟವಾಗಿದ್ದಿರಬೇಕು.

ನಾನು ಕುರ್ಚಿ ತಳ್ಳಿದ ಸದ್ದಿಗೆ ಅಪ್ಪ ಎಚ್ಚರಗೊಂಡರು. 'ಸರಳಾನಾ?' ಎಂದರು.

"ಹೌದಪ್ಪ" ಆ ಒಂದು ಮಮತೆಯ ಪಾಶ ನನ್ನ ಹುಚ್ಚು ನಿರ್ಧಾರಕ್ಕೆ ಅಡ್ಡ ಹಾಕಿತು.

"ಊಟ ಮಾಡಿದೆಯಾಮ್ಮ ?"

'ಹುಂ. ಅಪ್ಪ........' ಏನೋ ಹೇಳಲು ಹವಣಿಸಿದೆ.

"ಈಗ ಮಲಕ್ಕೋ ಹೋಗಮ್ಮ. ಹೊತ್ತಾಗಿದೆ"

ಅವರು ಇನ್ನೇನೂ ಮಾತನಾಡಲಿಲ್ಲವಲ್ಲಾ ಎಂದು ನನಗೆ ದುಃಖವಾಯಿತು. 'ಏಕೆ ತಡ' ಅನ್ನಲಿಲ್ಲ. ಉಪದೇಶ ನೀಡಲು ಬರಲಿಲ್ಲ. ಆಳೆಯಲಾಗದ ಆಳ ನನ್ನ ತಂದೆಯ ಹೃದಯದ್ದು. 'ಅಪ್ಪಾ' ಎಂದು ಅವರ ಎದೆಯ ಬಳಿ ತಲೆಯಿಟ್ಟೆ. ಚೆನ್ನಾಗಿದ್ದ ತಮ್ಮ ಬಲಗೈನಿಂದ ತಲೆ ನೇವರಿಸಿ– "ದಣಿದು ಬಂದಿರ್ತಿ. ಹೊತ್ತೂ ಬಹಳ ಆಗಿದೇಮ್ಮ ಈಗ ಮಲಕ್ಕೋ.

ಬೆಳಿಗ್ಗೆ ಮಾತಾಡೋಣ" ಅಂದರು. ಎಷ್ಟೋ ಹೊತ್ತು ಅಲ್ಲಿಯೇ ಕುಳಿತಿದ್ದೆ. ನನ್ನ ಸಹಸ್ರಾರು ಯೋಚನೆಗಳನ್ನು ಮರೆತೆ ಆ ಬೆಚ್ಚಗಿನ ಹಸ್ತದ ನೇವರಿಕೆಯಲ್ಲಿ.

ತಂದೆಯ ಉಸಿರು ಭಾರವಾಗುತ್ತಾ ಬಂದು, ನೇವರಿಸುತ್ತಿದ್ದ ಕೈ ನಿಂತಿತು. ನಾನು ಮೆಲ್ಲಗೆ ಕೈಸರಿಸಿ ಎದ್ದು ನನ್ನ ಕೋಣೆಗೆ ಹೋದೆ. ನಿದ್ರಾದೇವಿ ಅಂದು ನನ್ನ ಬಳಿ ಸುಳಿಯುವಂತೆ ಕಾಣಲಿಲ್ಲ. ಮತ್ತೆ ಅದೇ ಯೋಚನೆಗಳು. ಅದೇ ಗೊಂದಲ. ಒಂದಕ್ಕೊಂದರ್ಥವಿಲ್ಲದ ಪ್ರಶ್ನೆಗಳು ಸುಳ್ಳು ಸಮಾಧಾನಗಳು.

ಬೆಳಗಿನ ಜಾವದವರೆಗೂ ಹೊರಳಾಡುತ್ತಲೇ ಇದ್ದೆ. ಅಳುತ್ತಲೇ ಇದ್ದೆ. ನನ್ನ ದಿಂಬಿಗೆ ಏನಾದರೂ ಜೀವವಿದ್ದಿದ್ದರೆ ನನ್ನ ಹೃದಯದ ಭಾವನೆಗಳನ್ನೆಲ್ಲಾ ಅದು ಎಲ್ಲರ ಬಳಿಯೂ ಹೇಳಿ ಬಿಡುತ್ತಿತ್ತೇನೋ.

ನನ್ನ ಹೃದಯದಹೋರಾಟದಲ್ಲಿ ಮಧುರಾ ಸ್ವಲ್ಪಮಟ್ಟಿಗೆ ಗೆದ್ದಿದ್ದಳು. ನಾನೊಂದು ನಿಷ್ಕರ್ಷೆಗೆ ಬಂದಿದ್ದೆ—"ಇನ್ನು ರಾಜ ನನ್ನ ಜೀವನದಲ್ಲಿಲ್ಲ. ಅವನಿಷ್ಟ ಬಂದ ಹಾಗೆ ಅವನು ನಡೆದುಕೊಳ್ಳಲಿ. ನಾನು ಯಾರು ಅವನನ್ನು ಪ್ರಶ್ನಿಸಲು ? ತಿಳಿಯದೆ ದುರ್ಬಲ ಹೃದಯದ ಅವನನ್ನು ಮನಸಾ ಪ್ರೀತಿಸಿ ದುಡುಕಿದೆ. ತಿಳಿದು ಮಾಡಿದ ತಪ್ಪಲ್ಲ. ಅವನನ್ನು ತಿದ್ದುವಷ್ಟು ಚೈತನ್ಯವೂ ನನಗಿಲ್ಲ" ಎಂಬ ದೃಢ ನಿಶ್ಚಯ ನೆಮ್ಮದಿಕೊಟ್ಟಿತು. ಹಾಗೆಯೇ "ಕೈಲಾಗದ ತಂದೆಗೆ ನನ್ನ ನೆರವು ಬೇಡವೇ ? ಜೀವವಿರುವವರೆಗೂ ಅವರನ್ನು ನೋಡಿಕೊಳ್ಳಬೇಕಾದದ್ದು ನನ್ನ ಧರ್ಮ, ಕರ್ತವ್ಯ. ಮಧ್ಯದಲ್ಲಿ ಈ ಸೋಪಿನ ಗುಳ್ಳೆ ರಾಜ ಏಕೆ ನನ್ನ ಬದುಕಿನಲ್ಲಿ ? ಯಾವ ಋಣಾನುಬಂಧವೂ ಇಲ್ಲಿಯವರೆಗೂ ಇಬ್ಬರನ್ನೂ ಎಳೆದು ತಂದು ಕಟ್ಟಿಹಾಕಿತು. ನಾನು ಅವನ ಲಾಲಸೆಗೆ ಬಲಿಯಾಗಬೇಕಿತ್ತು. ಆಯಿತಲ್ಲಾ. ಇನ್ನು ಮುಂದೆ ಬಾಳಿನಲ್ಲಿ ಪ್ರೇಮಕ್ಕೆ ಸ್ಥಳ ಇಲ್ಲ. ಪ್ರೇಮದ ನೌಕೆ ಒಡೆದು ತೂತಾಯಿತು. ಅಂಬಿಗನೇ ಮುಳುಗಿಸಲು ಮನಮಾಡಿದ ಮೇಲೆ ನೌಕೆಯ ಗೊಡವೆಯೇಕೆ ? ನಾನು ಹೃದಯವಿಲ್ಲದ ಕಲ್ಲಾಗಿ ನಿಂತರೆ ಸಾಕು. ಕರ್ತವ್ಯವೊಂದೇ ಇನ್ನು ನನ್ನ ಬಾಳಿನ ಭವಿಷ್ಯದ ಧ್ಯೇಯ, ಹೆಗ್ಗುರಿ." ಎಂದು ಮನಸ್ಸನ್ನು ಕಲ್ಲಾಗಿಸಿಕೊಂಡು

ಕಣ್ಣುಮುಚ್ಚಿ ಮಲಗಿದೆ. ಆಗ ನಿದ್ರಾದೇವಿ ನನ್ನನ್ನು ನಿರಾಕರಿಸಲಿಲ್ಲ. ತುಂಬು ಅಪ್ಪುಗೆಯಲ್ಲಿ ಕರಗಿಸಿಬಿಟ್ಟಳು.

"ಆಮೇಲೆ ರಾಜ ನಿನ್ನನ್ನು ನೋಡಲೇ ಇಲ್ಲವಾ ಸರಳಕ್ಕ" ಸುಮಿತ್ರ ಗದ್ಗದ ಗಂಟಲಿನಲ್ಲಿ ಕೇಳಿದಳು.

"ಅಳ್ತೀಯಾ ಸುಮಿತ್ರಾ ? ಅಳೋದು ಯಾಕೆ ಎಂದೋ ನಡೆದ ಕಥೆಗೆ ? ನಾನು ಹೇಳೋದೆ ಇಲ್ಲ ಬಿಡು"

"ಹೇಳು ಸರಳಾ. ಇನ್ನೂ ಎಷ್ಟು ಅನಾಹುತವಾಯಿತೋ ಹೇಳು"

"ರಾಜ ಬಂದ. ಬರದೇ ಏನು. ನನ್ನ ಹೃದಯಕ್ಕೆ ಒದೆಯುವುದೇ ಅವನ ಚೆಲ್ಲಾಟವಾಗಿದ್ದಾಗ ಬರದೆ ಇರ್‍ತಾನಾ ? ನಾನೊಬ್ಬಳೇ ಇರುವಾಗ ಬಂದರೆ ನಾನು ಮುಖ ಕೊಟ್ಟು ಮಾತನಾಡದೇ ಹೋಗಬಹುದೂಂತಲೋ ಏನೋ, ಅಪ್ಪನೆದುರಿಗೇ ನನ್ನನ್ನು ಮಾತನಾಡಿಸಲು ಹವಣಿಸುತ್ತಿದ್ದ. ನಾನು ಬರೀ 'ಹುಂ' 'ಉಹುಂ'ಗಳಲ್ಲಿ ಮುಗಿಸುತ್ತಿದ್ದೆ ನನ್ನ ಸಂಭಾಷಣೆ.

ಅವರ ಅಸ್ವಸ್ಥತೆಯಿಂದ ನಾನು ಮುದುರಿದ್ದೇನೆಂದು ತಿಳಿದ ಅಪ್ಪ— "ನನಗೇನೂ ಆಗಿಲ್ಲಮ್ಮ ಸರೂ. ನೀನು ರಾಜನೊಡನೆ ಹೋಗಿ ಬಾ" ಎಂದರು ರಾಜನ ಎದುರಿಗೇನೇ. ರಾಜನಿಗೆ ಬೇಕಿದ್ದುದೂ ಅದೇ—"ಹೌದು ಸರೂ, ಮನೆಯಲ್ಲೇ ಬೇಸರ ಮಾಡ್ಕೋತಾ ಇದ್ದಿ. ಹಾಗೇ ಹೋಗಿ ತಿರುಗಾಡಿ ಬರೋಣ" ಎಂದ.

ಅವನ, ಮುಖದ ತುಂಬಾ ಉಗುಳಿಬಿಡೋಣವೆನಿಸಿತು. ಪವಿತ್ರಳಾದ ನನ್ನನ್ನು ಕೆಡಿಸಿ, ಅಪವಿತ್ರ ಮುಖದಿಂದ ನನ್ನನ್ನು ಮಾತನಾಡಿಸುತ್ತಿದ್ದಾನಲ್ಲಾ. ಮಾನಗೇಡಿ ಎಂದುಕೊಂಡರೂ ತಂದೆಯ ಮುಂದೆ ಏನೂ ಮಾಡದಾದೆ. ನಾನು ಅಪ್ಪನ ಮಾತು ಮೀರುವುದಿಲ್ಲವೆಂದು ತಿಳಿದಿದ್ದ ಅವನು ಸಮಯ ಸಾಧಿಸಿ—"ಅಪ್ಪಾ ನಾಳಿದ್ದು ಭಾನುವಾರ ನಮ್ಮ ಆಫೀಸಿನಲ್ಲಿ Function ಇದೆ. ಸರೂನ ಕಳಿಸಿಕೊಡೀಪ್ಪ" ಎಂದನು.

"ನಾನು ಕಳಿಸಿಕೊಡೋದೇನು ಬಂತು ರಾಜ, ಕರಕೊಂಡುಹೋಗಪ್ಪ. ಹೋಗಿಬಾಮ್ಮ ಸರಳಾ" ಎಂದರು ಆ ಮುಗ್ಧ ತಂದೆ. ನನ್ನ ಮನದ ಬಿರುಕು ಆ ತಂದೆಗೆ ತಿಳಿಯದು.

"ಬೇಡಾಪ್ಪ. ನನಗೆ ಎಲ್ಲೂ ಹೋಗೋಕ್ಕೆ ಇಷ್ಟ ಇಲ್ಲಾಪ್ಪ"

"ಛೆ ಛೆ ನನಗ್ಗೊತ್ತು. ನೀನು ನನ್ನ ವಿಷಯಕ್ಕೆ ಬೇಜಾರು ಮಾಡಿ ಕೊಂಡಿದ್ದಿ. ನನಗಾಗಿ ನಿನ್ನ ವಿನೋದ ಸಂತೋಷ ತ್ಯಾಗಮಾಡಿ ನಿಲ್ಲ ಬಾರದಮ್ಮ. ಒಳ್ಳೇ ಹುಡುಗಿ ಹಾಗೆ ಹೋಗಿಬಾ" ಎಂದರು. ನನ್ನನ್ನು ಬಾವಿಯಲ್ಲಾದರೂ ನೂಕಬಾರದೆ ಅವರು ಎಂದು ಪೇಚಾಡಿದೆ.

ವಿಧಿಯಿಲ್ಲದೆ ಹೊರಡಲೇಬೇಕಿತ್ತು, "ಆಗಲಪ್ಪ" ಎಂದೆ.

ರಾಜ ಮೆಲ್ಲಗೆ "ಸರೂ ನಿನ್ನೊಂದಿಗೆ ಸ್ವಲ್ಪ ಮಾತಾಡಬೇಕಿತ್ತು" ಎಂದು ಹೆದರುತ್ತಾ ಕೇಳಿದ. ಧೈರ್ಯದ ಮಾತಾಡಲು ಮುಖವೆಲ್ಲಿತ್ತು.

"ಮಾತಾಡಿ, ನಾನು ಬೇಡವೆಂದಿಲ್ಲ" ತಿರಸ್ಕೃತ ನುಡಿ ನನ್ನದು.

"ಇಲ್ಲಿ ಸಾಧ್ಯವಿಲ್ಲ. ನನಗಾಗಿ ಒಂದರ್ಧ ಗಂಟೆ ಬಿಡುವು ಮಾಡ್ಕೊ ತೀಯ ಸರೂ" ಗಿಂಜಿದ.

ಹೃದಯ ಕಲ್ಲಾಗಿದೆಯೆಂದು ಎದೆ ತಟ್ಟಿಕೊಳ್ಳುವ ಸಾಹಸ ಮಾಡಿದ ಈ ಸರೂ, ತನ್ನ ಪ್ರಾಣವಾದ ರಾಜ, ತನ್ನ ಮುಂದೆ ಗೀಜಿದ ಕೂಡಲೇ ಕರಗಿ ಹೋದಳು. ಪ್ರೇಮದ ಮಹತ್ವ ಅಂತಹುದು ಸುಮಿತ್ರಾ. ನನ್ನೊಂದಿಗೆ ಅವನು ಏಕಾಂತ ಬಯಸಿದ ಕೂಡಲೇ ಮತ್ತೆ ಯಾವ ಪ್ರಪಂಚವೂ ನನ್ನ ಕಣ್ಣಿಗೆ ಕಾಣಲಿಲ್ಲ.

ತುಂಬು ಪ್ರೇಮಿ ಸರಳಾ ಕಂಡದ್ದು ನಿಷ್ಕಳಂಕ ಪ್ರೇಮ ಮಾತ್ರ. ಸಂಯಮರಹಿತ ರಾಜನನ್ನು ಅವಳು ಕಾಣಲಿಲ್ಲ. ತನ್ನ ಪ್ರೇಮಿ ರಾಜ ಮಾತ್ರವೇ ಕಂಡದ್ದು. "ಆಗಲಿ ನಾಳೆ ಸಂಜೆ ಎಲ್ಲಿಯಾದರೂ ಹೋಗುವ" ಎಂದೆ.

ನುಣುಚಿ ಹೋಗುತ್ತಿದ್ದ ರಾಜನನ್ನು ಹಿಡಿದಿಟ್ಟುಕೊಳ್ಳಲು ಅದೂ ಒಂದುಪಾಯ ಎಂದು ಚೆನ್ನಾಗಿ ಅಲಂಕರಿಸಿಕೊಂಡು ಅವನೊಡನೆ ಹೊರಟೆ.

ನಮ್ಮ ನಿರ್ದಿಷ್ಟವಾದ ಮರದ ಬುಡ ಸೇರುವವರೆಗೂ ಇಬ್ಬರೂ ಮಾತ ನಾಡಲಿಲ್ಲ. ಇಬ್ಬರೂ ಮೌನವಾಗಿ ಒಬ್ಬರೆದುರಿಗೊಬ್ಬರು ಕುಳಿತೆವು. ನಾನು ಸುತ್ತಲ ನಿಸರ್ಗವನ್ನು ನೋಡುತ್ತಿದ್ದೆ. ನಿಸರ್ಗ ನನಗೆ ಯಾವ ಚೇತನ ವನ್ನೂ ಕೊಡುವಂತಿರಲಿಲ್ಲ. ಒಳಗಡೆ ಅಗ್ನಿ ಪರ್ವತ ಹೊಗೆಯಾಡುತ್ತಿದ್ದರೆ, ಹೊರಗಿನ ಶಾಂತ ನಿಸರ್ಗ ಏನು ಶಾಂತಿ ಮಾಡಬಲ್ಲುದು. ಎಲ್ಲವನ್ನೂ ನೋಡು

ತ್ತಿದ್ದರೂ ಹೃದಯ ಮಾತ್ರ ಅಳುತ್ತಿತ್ತು. ಅವನೂ ಸುಮ್ಮನೆ ಕುಳಿತಿದ್ದ. ಕಡೆಗೆ ಮೌನವನ್ನು ಒಡೆದವಳು ನಾನೇ.

"ಏನೋ ಮಾತಾಡಬೇಕೆಂದಿರಿ. ನೀವು ಹೇಳಿದ ಅರ್ಧಗಂಟೆ ಮೌನ ದಲ್ಲೇ ಕಳೀತಾ ಇದೆ"

"ಏನಿಲ್ಲ ಸರಳಾ, ಸರಳಾ....ನಿ....ನ....ಗೆ ನನ್ನ ಮೇಲೆ ಕೋಪಾನ ?"

"ಕೋಪಿಸ್ಕೊಳ್ಳೋಕ್ಕೆ ಸದ್ಯ ನಾನು ಯಾರು ?"

"ನನ್ನನ್ನು ನೀನು ತಪ್ಪು ತಿಳ್ಕೊಂಡಿದ್ದಿ ಸರಳಾ"

"ಯಾವ ವಿಷಯವಾಗಿ ? ತಪ್ಪು ತಿಳ್ಕೊಳ್ಳೋಕ್ಕೆ ಏನೂ ಆಗಲಿಲ್ಲ ವಲ್ಲಾ ?" ಹೃದಯದ ನೋವನ್ನೆಲ್ಲಾ ಅಡಗಿಸಿ ನಟನೆ ಮಾಡಿ ಹೇಳಿದೆ.

"ನನ್ನ ಮತ್ತು ಭಾರತಿಯ ವಿಷಯವಾಗಿ"

"ಹುಂ. ನಾನು ತಪ್ಪು ತಿಳಿದರೆಷ್ಟು. ತಿಳಿಯದಿದ್ದರೆಷ್ಟು ? ಅದರಿಂದ ಯಾರಿಗೆ ಏನಾಗಬೇಕಿದೆ ಪ್ರತಿ ಒಬ್ಬರಿಗೂ ಅವರವರ ಸ್ವಂತ ವಿಷಯಗಳಿ ರುತ್ತವೆ ಪರರಿಗೇಕೆ ಅದರ ಗೊಡವೆ"-ಹೇಗೆ ನುಡಿದೆನೋ ಅಳು ಬರುವುದು ಬಾಕಿಯಿತ್ತು.

"ಸರೂ ನೀನು ಪರಕೀಯಳೆ ?" ಹತ್ತಿರ ಸರಿದು ಕೇಳಿದ

"ನಾನು ಆತ್ಮೀಯಳೋ, ಪರಕೀಯಳೋ ಎಂಬುದು ನಿಮಗೆ ಗೊತ್ತು"

"ಸರಳಾ...."

"ಬೇಡಿ, ನೀವು ಏನೂ ಹೇಳಬೇಡಿ. ನಿಮಗೆ ಯಾರ ಮೇಲೆ ಇಷ್ಟವೋ ಯಾರ ಮೇಲೆ ಪ್ರೀತಿಯೋ, ಅವರೊಂದಿಗೆ ಹಾಯಾಗಿರಿ ರಾಜ. ಸುಮ್ಮನೆ ಈ ತೋರಿಕೆಯ ಪ್ರೇಮಗಳಿಂದ ನಿಮ್ಮ ಮನಸ್ಸಿಗೂ ಬೇಸರ ನನಗೂ ನೋವು.

"ನನ್ನನ್ನು ಅರ್ಥ ಮಾಡ್ಕೋ, ಸರೂ"

"ಅರ್ಥ ಮಾಡ್ಕೊಳ್ಳೋಕ್ಕೆ ಏನುಳಿದಿದೆ ರಾಜ, ನಾವು ನೋಡಿದ ಹಾಗೇನೇ ನಿಮ್ಮ ಬಾಳಿನಲ್ಲಿ, ವಿಜಯ ಆಯಿತು. ಮೇರಿ ಆಯಿತು. ಈಗ ಭಾರತಿ. ನಾನು ಅವರ ಹಾಗೆ ನಾಲ್ಕನೆಯವಳಲ್ಲವೆ, ಹತ್ತು ಗೆಳತಿಯರಲ್ಲಿ ನಾನೂ ಒಬ್ಬಳಾಗಿ...."

"ಸರೂ, ನೋಡು, ಭಾರತಿ ಒಳ್ಳೆಯ ಹುಡುಗಿ. ನೀನು...."

"ಹೌದು, ನಾನು ಕೆಲಸಕ್ಕೆ ಬಾರದವಳು. ಕರೆಯುವ ವೇಳೆಗೆ 'ಥೈ' ಎಂದು ನಿಮ್ಮ ಜೊತೆ ಎಲ್ಲಿಗೆಂದರಲ್ಲಿಗೆ ಅಲೆಯಲು ಬರುವ ಅವಳು ಒಳ್ಳೆಯವಳಲ್ಲದೆ. ತಂದೆ, ತಾಯಿ, ಸುಖ ದುಃಖ ಆಗು ಹೋಗು ವಿಚಾರಿಸಿ, ತಪ್ಪು ಸರಿಗಳನ್ನು ತೂಗಿ ನೋಡೋ ನಾನು ಹೇಗೆ ತಾನೇ ಒಳ್ಳೇವಳಾಗ್ತೀನಿ"

"ಅವರು ಬಡವರು. ಮನೆಯಲ್ಲಿ ಗಂಡಸು ದಿಕ್ಕಿಲ್ಲ ಅವರಿಗೆ ಸಹಾಯ ಮಾಡಿದ್ರೆ ತಪ್ಪೇನು ?"

"ಸಹಾಯ ಮಾಡಬೇಕಾದಷ್ಟು, ಅವಳೊಬ್ಬಳನ್ನೇ ಕರಕೊಂಡು, ತಿಪ್ಪಗೊಂಡನಹಳ್ಳಿ, ಹೆಸರುಘಟ್ಟ, ನಂದಿ ಬೆಟ್ಟಗಳಿಗೆ ಪಿಕ್‌ನಿಕ್ ಹೋಗೋ ಅವಶ್ಯಕತೆ ಇಲ್ಲ. ಅಲ್ಲಿ ಮಾಡ್ತಿದ್ರೇನೋ ಸಹಾಯ ನೀವವಳಿಗೆ ?"

"ಸರಳಾ" ಅವನು ಕೂಗಿದ ರೀತಿ "ಬಾಯಿಮುಚ್ಚು ನಿನಗೇಕೆ ತಲೆ ಹರಟೆ" ಎನ್ನುವಂತಿತ್ತು. ನಂತರ ಸ್ವಲ್ಪ ನಿಧಾನಿಸಿ. "ಅವಳು ಈ ಊರಿಗೆ ಹೊಸಬಳು. ಯಾವ ಸ್ಥಳವನ್ನೂ ನೋಡಿಲ್ಲ. ಅವರ ತಾಯೀನೇ ಸ್ವಲ್ಪ ತೋರಿಸ್ತೀಯಾಪ್ಪ ಅಂದ್ರು. ಸಹಾಯ ಬೇಡಿದವ್ರಿಗೆ ಇಲ್ಲ ಅನ್ನಲಾಗಲಿಲ್ಲ"

ಅವನು ಮಾತನಾಡಿದ್ದು ಕೇಳಿದ್ರೆ ಅವನು ಬಹಳ ಸಹಾಯ ಬುದ್ಧಿಯವನಾಗಿಯೂ ನಾನು ಅವನಿಗೆ ಎಲ್ಲೆಲ್ಲೂ ಅದಕ್ಕೆ ಅಡ್ಡಿ ಹಾಕುತ್ತಿದ್ದಂತೆಯೂ ಮಾತನಾಡಿದ.

"ಹೋಗುವಾಗ ಸರಳಾ ಬದುಕಿದ್ಲು ತಾನೇ ?" ವ್ಯಂಗ್ಯದಿಂದ ಕೇಳಿದೆ.

"ನಿನ್ನನ್ನು ಕೇಳಿದರೆ ನೀನು ಬೇಸರ ಮಾಡಿಕೊಳ್ಳುತ್ತಿದ್ದೆ"

"ಏಕೆ ಬೇಸರ ಮಾಡಿಕೋತಾ ಇದ್ದೆ ?"

"ನಿನಗೇ ಏಕೆ ? ಎಲ್ಲ ಹೆಣ್ಣುಗಳಿಗೂ ಅಸೂಯೆ ಇರುತ್ತೆ. ಆದ್ರಿಂದ"

"ಪ್ರೇಮ, ಇರೋ ಕಡೆ ಅಸೂಯೆ ಇರಬಾರದೆ ? ಒಂದುವೇಳೆ ನಾನು ಬೇರೆ ಯಾರ ಜೊತೆಯಲ್ಲಾದರೂ ಹೋಗಿದ್ದರೆ ನಿಮಗೂ ಖಂಡಿತ ಅಸೂಯೆಯಾಗುತ್ತಿತ್ತು"

"ನೀನು ಹಾಗೆಲ್ಲ ಹೋಗೋದಿಲ್ಲ ಅಂತ ನಂಗೊತ್ತು. ಅಸೂಯೆ ಇರಬೇಕು. ಆದರೂ ನೀನು ಭಾರತಿಯ ಸ್ನೇಹ ಇಷ್ಟಪಡ್ತೀಯೋ ಇಲ್ವೋ ಅಂತ...."

ನನಗೆ ರೇಗಿ ಹೋಯಿತು. ಸಿಟ್ಟು ನೆತ್ತಿಗೇರಿತು. ಗಟ್ಟಿಯಾಗಿ ಹೇಳಿದೆ.

"ರಾಜ, ಒಮ್ಮೆ ಹೇಳಿ ಬಿಡಿ. ನಿಮಗೆ ಭಾರತಿ ಮುಖ್ಯವೋ, ಸರಳೆಯೋ ಅವಳ ಸ್ನೇಹ ನಾನು ಬಯಸುವೆನೋ ಇಲ್ಲವೋ ಅಂತ ನನ್ನನ್ನು ತಳ್ಳಿಡಲು ನೋಡಿದಿರಲ್ಲವೇ ? ಹೌದು. ಒಂದು ವೇಳೆ ನೀವು ನನ್ನನ್ನು ಪ್ರೀತಿಸುವುದೇ ನಿಜವಾಗಿದ್ದರೆ, ನನಗೆ ಗೆಳೆತನ ಇಷ್ಟವಿಲ್ಲದ ಹೆಣ್ಣಿನ ಜೊತೆ ನೀವು ಸದರ ಬೆಳೆಸುತ್ತಿರಲಿಲ್ಲ. ಈ ನಟನೆ ಇನ್ನು ಮೇಲೆ ಸಾಕು, ರಾಜ. ನನ್ನ ನಿಮ್ಮ ದೃಷ್ಟಿ ಕೂಡುವುದಿಲ್ಲ. ಹುಡುಗಿಯರಿಗೆ ಪ್ರೋತ್ಸಾಹ ಕೊಟ್ಟು ಅವರ ಜೊತೆ ಸರಸವಾಡುವುದು ನಿಮಗೆ ಮೋಜು, ಅದೇ ಕೃತ್ಯ ನನಗೆ ಪಾಪ"

"ನೀನು ಸ್ವಲ್ಪ ಬದಲಾಗಬೇಕು ಸರಳಾ. ನಮ್ಮಜ್ಜಂದಿರ ಕಾಲದ ಭಾವನೆಗಳನ್ನು ಹಿಡಿದು ಬದುಕ್ತೀನಿ ಅಂತಿ. ಪ್ರಗತಿಶೀಲ ಜಗತ್ತಿನಲ್ಲಿ ನೀನೀರೀತಿ ಇದ್ರೆ ಪೂರಾ ತೊಳೆದುಹೋಗ್ತಿ. ಈಗ ನಾನು ಮಾಡಿದ್ರಲ್ಲಿ ತಪ್ಪೇನೂಂತ್ಲೇ ನಂಗೆ ತಿಳೀತಿಲ್ಲ"

"ತಪ್ಪು ! ಯಾವುದೂ ತಪ್ಪಲ್ಲ. ತಪ್ಪು ಅಂತ ತಿಳಿದಿದ್ರೆ ತಪ್ಪು ಮಾಡ್ತೀವೇನು? ಖೂನಿಮಾಡೋ ಖೂನಿಕಾರನಿಗೆ ಖೂನಿಯೂ ತಪ್ಪಲ್ಲ. ಕೆಲವರ ಲೆಖ್ಖದಲ್ಲಿ ಗಂಡಸಿನೊಡನೆ ತಲೆ ಎತ್ತಿ ಮಾತಾಡಿದ್ರೆ ತಪ್ಪು. ನಮ್ಮಮ್ಮನಿಗ ಮಾತನಾಡಿದ್ರೆ ತಪ್ಪಲ್ಲ. ಸಲಿಗೆ ಕೊಡಬಾರದಷ್ಟೆ. ನನ್ನ ಮಟ್ಟಿಗೆ, ಪ್ರೀತಿಸುವವನೊಡನೆ ವಿಹರಿಸಿದರೆ ತಪ್ಪಲ್ಲ. ನಿಮ್ಮಂತವ್ರಿಗೆ ಯಾರೊಡನೆ ಬೇಕಾದ್ರೂ ಚಕ್ಕಂದವಾಡಬಹುದು. ತಪ್ಪಲ್ಲ. ನಮ್ಮ ಆಫೀಸಿನಲ್ಲಿ ಒಬ್ಬ ಇದ್ದಾನೆ. ಅವನಿಗೆ ಪರಹೆಣ್ಣನ್ನು ಪಕ್ಕದಲ್ಲಿ ಮಲಗ್ಸಿದ್ರೂ ತಪ್ಪಲ್ಲ...."

"ಸರೂ !!"

"ತಪ್ಪುಗಳು ಅವರವರ ಮನೋಧರ್ಮದ ಮೇಲೆ ನಿಲ್ಲುತ್ತೆ, ರಾಜ. ನೀವು ಹುಡುಗೀರ ಮೈಗೆ ಮೈ ಅಂಟಿಸಿಕೊಂಡರೆ ತಪ್ಪಲ್ಲ, ಏನಾಯ್ತು ಅಂತೀರಿ. ನನಗೆ ನಿಮ್ಮನ್ನು ಬಿಟ್ಟು ಪರಗಂಡಸರ ಬಳಿ ಬಹಳವಾಗಿ ಮಾತ ನಾಡಲೂ ಸಹ ಇಷ್ಟವಿಲ್ಲ"

ನನ್ನ ಭಾಷಣ ಅವನಿಗೆ ಬೇಕಿರಲಿಲ್ಲ. "ನನ್ನನ್ನು ಅರ್ಥಮಾಡಿಕೋ ಅಂದೆ. ಮಾಡಿಕೊಳ್ಳೋಕೆ ನೀನು ನಿರಾಕರಿಸಿದ್ರೆ ನಾನೇನೂ ಮಾಡಲಾರೆ

ಸರಳಾ. ನಿನ್ನ ತಾತನ ಕಾಲದ ಭಾವನೆಗೆ ಸರಿಯಾಗಿ ನಾನೇನೂ ವೈರಾಗ್ಯ ತಾಳಬೇಕಿಲ್ಲ" ಧೂರ್ತನಾಗಿ ನುಡಿದ.

"ನಿಮ್ಮನ್ನು ವೈರಾಗ್ಯ ತಾಳಿ ಅಂದೆನೇನು? ನಾನಿಲ್ಲವೆ ನಿಮ್ಮ ವೈರಾಗ್ಯಕ್ಕೆ ಅಡ್ಡಿಯಾಗಿ"

"ಮತ್ತಿನ್ನೇನು. ನೀನು ನನ್ನೊಡನೆ ಹೊರಗಡೆ ತಿರುಗಾಡಲು ಬರದ ಮೇಲೆ ನಾನು ಕೆಲವು ಗೆಳೆಯರೊಂದಿಗೆ ತಿರುಗಾಡಿದರೆ ತಪ್ಪು ಅನ್ನುವ ನಿನ್ನ ಮನೋಭಾವ ನನಗೆ ಸರಿಯೆನಿಸ್ತಾ ಇಲ್ಲ"

"ನೀವು ಗೆಳೆಯರೊಂದಿಗೆ ತಿರುಗಾಡಬೇಡಿ ಎಂದು ನಾನೆಂದೂ ಅನ್ನಲಿಲ್ಲ. ನೀವು ಸದಾ ಸಂತೋಷವಾಗಿರಬೇಕೂಂತ್ಲೇ ನಾನು ಯಾವಾಗ್ಲೂ ಹಲುಬೋದು. ಗೆಳತಿಯರೊಂದಿಗೆ ಏಕಾಂತ ಸರಸ ಬೇಡ. ಹತ್ತು ಜನರ ಬಾಯಲ್ಲಿ ಬೀಳಬೇಡಿ ಅಂತ ಕೇಳಿಕೊಳ್ತಿದ್ದೀನೇ ವಿನಾ ನಿಮ್ಮ ಯಾವ ಸಂತೋಷಕ್ಕೂ ನಾನಡ್ಡ ಬರುತ್ತಿಲ್ಲ"

"ಏನೋ ನಿನ್ನ ಭಾವನೆಗಳೆಲ್ಲಾ ವಿಚಿತ್ರಗಳು." ನನಗೆ ತಡೆಯಲಾಗಲಿಲ್ಲ. ಅಳುತ್ತಿದ್ದೆ. "ಈ ನಡುವೆ ಮಾತೆತ್ತಿದರೆ ಅತ್ತುಬಿಡುತ್ತಿ. ಅತ್ತು ನನ್ನನ್ನು ಹೆದರಿಸಬಾರದು, ಸರಳಾ. ಹಾಗೇ ನಿನ್ನ ಅಸೂಯೆನೂ ಸ್ವಲ್ಪ ಕಡಿಮೆಯಾದ್ರೆ ಒಳ್ಳೇದು." ಈ ಮಾತಿನಿಂದ ನನಗೆ ಚೂರಿಯಲ್ಲಿ ತಿವಿದಂತಾಯಿತು. ನಾನೇ ಅಸೂಯಾಪರಳು ! ನನ್ನನ್ನು ತಾತ್ಸಾರಮಾಡಬೇಡಿ ಎಂದು ಹೆಜ್ಜೆ ಹೆಜ್ಜೆಯಲ್ಲೂ ಬೇಡುತ್ತಿದ್ದ ನಾನು !

ನನ್ನ ಅಭಿಮಾನವೂ ಕೆರಳಿತು. ನುಡಿದೆ. "ಸರಿ, ನೀವಿನ್ನು ಸ್ವತಂತ್ರರು ರಾಜ. ನಿಮ್ಮಿಷ್ಟ ಬಂದಂತೆ ಇರಿ. ನಿಮ್ಮನ್ನು ಹೆದರಿಸಿ ಆಗಲಿ, ನೋಯಿಸಿ ಆಗಲಿ ನನಗೇನಾಗಬೇಕಾಗಿದೆ. ಎಲ್ಲಿಯಾದರೂ ಯಾರೊಂದಿಗಾದರೂ ಸುಖವಾಗಿರಿ. ನನಗೆ ಬೇಕಾದುದಷ್ಟೆ. ನಾನು ಒಳ್ಳೆಯವಳೋ ! ಕೆಟ್ಟವಳೋ ಕಾಲ ನಿರ್ಧರಿಸುತ್ತದೆ. ಈ ಹತ್ತು ವರ್ಷಗಳಿಂದ ನಿಮಗೆ ಪ್ರಾಣವಾಗಿದ್ದ ಸರಳಾ, ಇಂದು ನಿಮ್ಮ ಸ್ವೇಚ್ಛೆಗೆ ಒಂದು ಹೆಣ್ಣು ಸಿಕ್ಕಿದ್ದಾಳೆಂದು, ನಿಮ್ಮ ಕಣ್ಣಿಗೆ ವಿಚಿತ್ರವಾಗಿ ಕಾಣುತ್ತಿದ್ದಾಳೆ.

ಹೋಗಿ ಬನ್ನಿ ರಾಜ. ದೇವರು ಒಳ್ಳೆಯದು ಮಾಡಲಿ. ನನ್ನ ನೋವಿನಲ್ಲಿ ನಾನು ಅಂದಿರೋದನ್ನೆಲ್ಲಾ ಮನಸ್ಸಿನಲ್ಲಿಟ್ಕೋಬೇಡಿ. ಆದರೆ

ಇಷ್ಟು ಮಾತ್ರ ನೆನಪಿರಲಿ, ನಿಮ್ಮ ಸುಖ ಸಂತೋಷಗಳಲ್ಲಿ, ಒಂದು ನಿಷ್ಕಳಂಕ ಜೀವಿಯು ಬಲಿಯಾಗುತ್ತಿದೆಯೆಂದು. ಆದರೂ, ಎಂದೇ ಆಗಲಿ ಊರಿನ ಒಂದು ಮೂಲೆಯಲ್ಲಿ ಒಂದು ಜೀವಿ ನಿಮಗಾಗಿ ಎದುರು ನೋಡುತ್ತಿರುತ್ತದೆ ಎಂಬುದೂ ನೆನಪಿರಲಿ" ಎಂದವಳೇ ಮುಖವನ್ನು ಕೈಯಲ್ಲಿ ಮುಚ್ಚಿ ಬಿಕ್ಕಿ ಬಿಕ್ಕಿ ಅಳತೊಡಗಿದೆ.

ನನ್ನ ಸರ್ವಸ್ವವೂ ನನ್ನ ಕಾಲಡಿಯಲ್ಲೇ ಮಣ್ಣಾದಂತೆ ತೋರಿತು. ನನ್ನ ಪಾಲಿಗೆ ಇನ್ನು ಉಳಿದಿದ್ದವರೆಂದರೆ ಕಡೆಯನ್ನು ಎದುರು ನೋಡುತ್ತಿದ್ದ ಅಪ್ಪ ಒಬ್ಬರೇ. ಪ್ರಜ್ಞೆಯೇ ಉಳಿಯದಂತೆ ಅತ್ತೆ.

ಹತ್ತಿರ ಬಂದು ಬಾಗಿದ ನನ್ನ ತಲೆಯ ಮೇಲೆ ಮುಖವಿಟ್ಟು 'ಸರೂ' ಎಂದ. "ನನ್ನನ್ನು ಮುಟ್ಟಬೇಡಿ ಕೆಟ್ಟವರನ್ನು ಮುಟ್ಟಿ ನೀವೇಕೆ ಒಳ್ಳೇತನ ಕಳಕೊಳ್ಳಬೇಕು."

"ಅಬ್ಬ, ಎಂಥ ಅಭಿಮಾನ ನಿನಗೆ ಸರೂ, ಆ್ಞ ? ಬರುಬರುತ್ತಾ ಹುಚ್ಚು ಹುಡುಗಿ ಆಗ್ತಾ ಇದ್ದಿ." ಅಕ್ಕರೆಯಿಂದ ತಲೆ ಸವರಿ ಹತ್ತಿರಕ್ಕೆಳೆದು ಕೊಂಡ,

"ಹುಚ್ಚಾದರೂ ಹಿಡಿದಿದ್ದರೆ ಚೆನ್ನಾಗಿತ್ತು. ಆಗ ಹೃದಯಕ್ಕೆ ಈ ನೋವಾಗುತ್ತಿರಲಿಲ್ಲ."

"ಈ ಹೃದಯ ಏತರಲ್ಲಿ ಮಾಡಿದೆ ? ಹೀಗೆ ಸಣ್ಣ ಪುಟ್ಟದಕ್ಕೆಲ್ಲಾ ರೋದಿಸುತ್ತೆ ?" ಎಂದು ನನ್ನ ಎದೆಯ ಮೇಲೆ ಕೈಯಿಟ್ಟ." ಪ್ರಪಂಚಾನ ಸ್ವಲ್ಪ ಚೆನ್ನಾಗಿ ಕಣ್ಣುಬಿಟ್ಟು ನೋಡೋದು ಕಲಿತುಕೋ ಸರೂ, ಹೀಗೆ ನೀನಿದ್ರೆ ಬಹಳ ಘಾಸಿಪಡ್ತಿ."

"ನನ್ನ ಪ್ರಪಂಚ ಎಲ್ಲಾ ನೀವೇ ರಾಜ. ನಿಮ್ಮನ್ನೇ ಕಳಕೊಂಡ ಮೇಲೆ ನನಗೆ ಬೇರೆ ಜಗತ್ತು ಎಲ್ಲಿದೆ ?"

"ನನ್ನನ್ನು ಕಳಕೊಳ್ತೀಯಾ ಹಾಗಾದ್ರೆ ?"

"ನಾನು ಕಳಕೊಳ್ಳೋಲ್ಲ. ನಿಮಗೆ ಪ್ರಿಯರಾದವರು ಬಂದು ಕದ್ದು ಕೊಂಡು ಹೋಗ್ತಾರೆ."

"ಅಷ್ಟು ಸುಲಭವಾಗಿ ಕಳೆದುಹೋಗೋ ವಸ್ತು ಅಲ್ಲ ಸರೂ ಈ ಘಟ್ಟ

ಈ ವಸ್ತು ಎಲ್ಲಿರಬೇಕೋ ಅಲ್ಲಿ ಸದಾ ಇರುತ್ತೆ" ಮತ್ತೆ ಆ ಮಾತುಗಳು. ಅದು ನಟನೆಯೋ ತಿಳಿಯಲಿಲ್ಲ.

ಬಹಳ ಹೊತ್ತು ಅವನ ತೆಕ್ಕೆಯಲ್ಲಿದ್ದೆ. ಪ್ರಿಯನ ತೆಕ್ಕೆಯಲ್ಲಿದ್ದ ಪ್ರೇಯಸಿಗಾದ ಅನುಭವ ನನಗಾಗಲಿಲ್ಲ. ಮಗುವು ದುಃಖದಲ್ಲಿ ಯಾರದೋ ತೊಡೆಯ ಮೇಲೆ ತಲೆಯಿಟ್ಟು ಅತ್ತಾಗ ಆದ ಅನುಭವವಾಯಿತು.

ಅವನ ಮಡಿಲಲ್ಲೇ ಮುಖವಿಟ್ಟು ಅಳುತ್ತಿದ್ದರೂ, ರಾಜ ದೂರದೂರ ಹೋಗುತ್ತಿದ್ದಂತೆ ಭಾಸವಾಗುತ್ತಿತ್ತು ನನಗೆ. ಸ್ವಲ್ಪ ಹೊತ್ತಿನಲ್ಲೇ ಭಾರತಿ ಬಂದು ನಮ್ಮಿಬ್ಬರನ್ನೂ ದೂರ ದೂರ ಎಳೆದು ನನ್ನನ್ನು ತಳ್ಳಿ, ಅವನ ಕೈ ಹಿಡಿದು ಎಳೆದುಕೊಂಡು ಹೋದಂತೆ ಕಣ್ಣಮುಂದೆ ಚಿತ್ರ ಕಾಣಿಸಿತು.

"ಬೇಡ ರಾಜ, ಹೋಗಬೇಡ ರಾಜ. ನನ್ನಿಂದ ದೂರ ಹೋಗಬೇಡ" ಎಂದು ಕಿರಿಚಿ ಬಿದ್ದುಬಿಟ್ಟೆ. ನನಗೆ ಎಚ್ಚರವಾದಾಗ ಮಾರನೆಯ ದಿನ ಬೆಳಗಾಗಿತ್ತು, ರಾಜ ನಗುತ್ತಾ ನನ್ನ ಬಳಿ ಕುಳಿತಿದ್ದ.

ದಿನವು ಬೆಳಗಾಗಿದ್ದಂತೆಯೇ ನನ್ನ ಬಾಳಿನಲ್ಲೂ ಬೆಳಕು ತುಂಬಿದಂತೆ ಕಾಣಿಸಿತು. ನಗುನಗುತ್ತಲೇ ಎದ್ದೆ.

## ೧೬

"ಕತ್ತಲಾಗ್ತಾ ಬಂತು, ಸುಮಿತ್ರಾ. ಟೈಂ ಎಷ್ಟಾಯ್ತೋ ಏನೋ" ಎಂದಳು ಸರಳಾ.

"ಆರೂ ಮುಕ್ಕಾಲು" ಸುಮಿತ್ರೆಯ ಉತ್ತರ.

"ಅಬ್ಬ ಅಷ್ಟು ಹೊತ್ತಾಯ್ತೇನು ? ದೇವ್ರಿಗೆ ದೀಪ ಹಚ್ಚಿ ಬಂದ್ಬಿಡ್ತೀನೆ, ಸುಮಿತ್ರಾ ಹಾಗೇ ನಿನಗೂ ಕುಂಕುಮ ಕೊಡ್ತೀನಿ. ನೀ ಮನೆಗೆ ಹೋಗು ಬಹಳ ಹೊತ್ತಾದ್ರೆ ಚೆನ್ನಾಗಿರೋಲ್ಲ. ಕತೆಗೇನು ಇನ್ನೊಂದಿನ ಹೇಳ್ಕೋಬಹುದು" ಅನ್ನುತ್ತಾ ಎದ್ದುಹೋದಳು.

ಸರಳೆ ಧೈರ್ಯವಾಗಿದ್ದಳು, ನಿರ್ವಿಕಾರವಾಗಿದ್ದಳು. ಆದರೆ ಕತೆ ಕೇಳಿದ ಸುಮಿತ್ರೆಯ ಹೃದಯ ದ್ರವಿಸುತ್ತಿತ್ತು. ನೋವಿನ ಕುಲುಮೆಯಲ್ಲಿ ಬೆಂದಿದ್ದ ಸರಳೆಗೆ ಕತೆ ಹೇಳುವಾಗ ಅಲ್ಲಲ್ಲಿ ಹೃದಯ ಹಿಡಿದುಕೊಳ್ಳುತ್ತಿದ್ದರೂ ಅತ್ತು ಪ್ರಯೋಜನವಿಲ್ಲ ಎಂಬುದು ಮನದಟ್ಟಾಗಿತ್ತು. ಹೃದಯ ಇಂದು ತನ್ನ ಬಗೆಗೆ ಬೆಣ್ಣೆಯಂತಿರಲಿಲ್ಲ. ಅದು ಎಂದೋ ಮರಗಟ್ಟಿ ಹೋಗಿತ್ತು. ಆದರೆ ಹೆಚ್ಚು ಕಷ್ಟ ನೋವುಗಳನ್ನರಿಯದ ಸುಮಿತ್ರೆ, ದುರಂತ ಕತೆಗಳನ್ನು ಓದಿದರೇನೇ ಅಳುವ ಸುಮಿತ್ರೆ ಸರಳೆಯ ಕತೆ ಕೇಳುತ್ತಾ ತಡೆದುಕೊಳ್ಳಲಾರದೆ ಹೋದಳು.

ಸರಳೆ ಕೋಣೆಯಿಂದ ಹೊರಬಿದ್ದುದೇ ತಡ ಮಂಚದ ಮೇಲೆ ಮಲಗಿ ಅಳಲುಪಕ್ರಮಿಸಿದಳು. ದೇವರ ಮನೆಯಿಂದ ಬಂದ ಸರಳೆಗೆ ಇದಕ್ಕಿಂತ ಸೋಜಿಗದ ವಿಷಯವಿರಲಿಲ್ಲ. ಸುಮಿತ್ರ ಅದೆಷ್ಟು ಅಳುತ್ತಿದ್ದಾಳೆ ! ಎಂತಹ ಮೆತ್ತಗಿನ ಪ್ರಾಣಿ ಇವಳು ಎಂದು ಕರುಣೆಯೂ ಬಂದಿತು.

"ಛಿ, ಛಿ, ಸುಮಿತ್ರಾ, ಅಳಲು ಏನಾಯಿತು. ಯಾರದೋ ಕತೆ ಕೇಳಿ ಇಷ್ಟು ಅಳ್ತಾರೇನು ?"

"ನೀನು ನನಗೆ 'ಯಾರೋ' ಅಲ್ಲ ಸರಳಕ್ಕಾ, ನಿನ್ನ ಬಾಳಿನಲ್ಲಿ ಏನೆಲ್ಲಾ ಅನುಭವಿಸಿದ್ದೀ. ನೀನಿಂದು ಎಷ್ಟು ಪರಿಪಕ್ವತೆಯಿಂದ ಇದ್ದಿ ಅನ್ನೋದು ನೆನೆದೇ ಹೃದಯ ತುಂಬಿಬರುತ್ತೆ" ಎಂದು ಇನ್ನೂ ಅತ್ತಳು.

"ಹೋಗಲಿ, ಸಾಕು ಏಳು. ನನ್ನ ದಿನನಿತ್ಯದ ವಿಧಿಯನ್ನು ನಾನು ನಡೆಸಬೇಕು."

"ಏನು ?" ಅಂದಳು ಸುಮಿತ್ರಾ. ಆದರೆ ಏಳಲಿಲ್ಲ. ಸರಳಾ ಅವಳು ಏಳಲಿ ಎಂದು ಕಾಯಲಿಲ್ಲ. ಕೆಲವೇ ನಿಮಿಷಗಳಲ್ಲಿ ಅಲೆ ಅಲೆಯಾಗಿ ಬಂತು ವೀಣಾನಾದ. ಮಂತ್ರ ಮುಗ್ಧಳಾಗಿ ಸುಮಿತ್ರಾ ಎದ್ದು ಹೋಗಿ ಸರಳೆಯ ಮುಂದೆ ಕುಳಿತಳು.

ಪುಟ್ಟದಾದರೂ ಅಂದವಾಗಿ ಅಲಂಕರಿಸಲ್ಪಟ್ಟ ದೇವರ ಕೋಣೆ, ನೆಲಕ್ಕೆಲ್ಲಾ ಅಮೃತ ಶಿಲೆಯ ಹೆಂಚುಗಳು, ಒಂದೆಡೆಗೆ ಸುಮಾರು ಮನುಷ್ಯ ಎತ್ತರದ ಕರೀಮರದ ಮಂಟಪ. ಅದರ ಮಧ್ಯದಲ್ಲಿ ಅವಳ ಆರಾಧ್ಯದೈವ ಕೋದಂಡರಾಮ, ಮೂರಡಿಯ ಬಿಳೀ ಶಿಲೆಯ ವಿಗ್ರಹಗಳು, ರಾಮ

ಬಲಗೈಯನ್ನು ಅಭಯಹಸ್ತ ಮಾಡಿ, ಎಡಗೈಯ್ಯಲ್ಲಿ ಕೋದಂಡ ಹಿಡಿದು ಹಸನ್ಮುಖವಾಗಿ ನಿಂತಿದ್ದಾನೆ, ಎಡಗಡೆಗೆ ಸೀತಾಮಾತೆ, ಬಲಗಡೆಗೆ ಅನುಜ ಲಕ್ಷ್ಮಣ. ಪಾದದಡಿಯಲ್ಲಿ ನಿಷ್ಠ ಸೇವಕ ಹನುಮಾನ್. ಮಂಟಪಕ್ಕೆಲ್ಲಾ ಸಣ್ಣ ಸಣ್ಣ ಬಲ್ಬುಗಳಿಂದ ಅಲಂಕರಿಸಿದ್ದಳು. ವಿಗ್ರಹಗಳಿಗೆ ಪೀತಾಂಬರ ಉಡಿಸಿದ್ದಳು,

ಸರಳ ಮಾತ್ರ ಏಕೆ, ಯಾರೇ ಆಗಲಿ ಆ ಮಂಟಪನ್ನು ನೋಡಿದ ಕೂಡಲೇ ಅಡ್ಡ ಬೀಳುವಂತಿತ್ತು. ಶ್ರೀರಾಮಚಂದ್ರನ ಹಸನ್ಮುಖ, ಮೈ ಪುಳಕಿತ ತರುತ್ತಿತ್ತು. ಅವನ ಕರುಣೆ ತುಂಬಿದ ಕಂಗಳು.

'ದೇವರಲ್ಲಿ ನನಗೆ ನಂಬಿಕೆ ಹೋಯಿತು' ಎಂದಿದ್ದಾಳಲ್ಲಾ ಸರಳ ಎಂದು ಮನಸ್ಸಿನಲ್ಲೆ ತರ್ಕಿಸಿದಳು ಸುಮಿತ್ರಾ.

ಹಾಡು ನಿರರ್ಗಳವಾಗಿ, ಆತಂಕವಿಲ್ಲದೆ. ಹರಿಯುವ ಹೊಳೆಯಂತೆ ಸಾಗುತ್ತಿತ್ತು. ಕಾಮಾಚ್ ರಾಗದ 'ಬ್ರೋಚೇವಾರೆವರುರಾ ನಿನುವಿನಾ' ವಾಸುದೇವಾಚಾರ್ಯರ ಕೃತಿ, ಭಾವಪೂರ್ಣವಾಗಿ ಹಾಡಿಸುತ್ತಿದ್ದಳು. ಹೆಚ್ಚು ಪ್ರಕಾಶವಿಲ್ಲದ ಸಣ್ಣ ಬಲ್ಬುಗಳ ಕಾಂತಿಯಲ್ಲಿ, ಆಗತಾನೇ ಹಚ್ಚಿದ ಎಣ್ಣೆಯ ದೀಪದ ಬೆಳಕಿನಲ್ಲಿ ಅವಳ ಮುಖ ಶಾಂತತೆಯಿಂದ ಕಂಗೊಳಿಸುತ್ತಿತ್ತು, ಬೆರಳುಗಳು ತಂತಿಯೊಂದಿಗೆ ಆಡುತ್ತಿರುವಾತೆ ಕಣ್ಣುಗಳು ಹಾಡಿನ ರಾಗ ಭಾವದೊಂದಿಗೆ ನರ್ತಿಸುತ್ತಿದ್ದುವು.

'ಸರಳೆ ಸುಂದರಿಯಲ್ಲ' ಅಂದವರಾರು ಎನಿಸಿತು ಸುಮಿತ್ರೆಗೆ. ಅವಳ ಸೌಂದರ್ಯ ಮನಸ್ಸಿನ ವಿಕಾರಗಳನ್ನು ಹೊಡೆದೆಬ್ಬಿಸುವ ಸೌಂದರ್ಯವಲ್ಲ. ನೊಂದ ಹೃದಯಗಳಿಗೆ ತಂಪು ನೀಡುವ ಸೌಂದರ್ಯ, ಮಮತೆಯನ್ನು ನೀಡುವ ಸೌಂದರ್ಯ, ಅವಳ ಅಂತಃ ಸೌಂದರ್ಯ, ಬಾಹ್ಯರೂಪಕ್ಕೂ ಮೆರಗು ಕೊಟ್ಟಿತ್ತು.

ಸುಮಿತ್ರೆ ದೇವರನ್ನು ನೋಡುವುದಕ್ಕಿಂತ ಹೆಚ್ಚಾಗಿ ಸರಳೆಯನ್ನು ನೋಡುತ್ತಾ ಕುಳಿತುಬಿಟ್ಟಳು. ಸರಳೆ ತಲೆ ಕೂಡಾ ಸರಿಯಾಗಿ ಬಾಚಿರಲಿಲ್ಲ. ಕೂದಲು ಅಲ್ಲೊಂದು ಇಲ್ಲೊಂದು ಹಾರುತ್ತಿತ್ತು. ಹಣೆ ಅಂತಹ ಅಗಲವಾದದ್ದಲ್ಲವಾದರೂ ಅದರಲ್ಲಿ ಕಂಗೊಳಿಸುತ್ತಿತ್ತು ಅವಳ ಅಗ್ನಿಯಂತಹ ಪವಿತ್ರತೆಯ ತಿಲಕ. ತನ್ನ ಹಾಗೆ ಅಗಲ ಹಣೆಯಿಲ್ಲ ಸರಳೆಗೆ. ಆದರೂ ಆ

ಹಣೆಯಲ್ಲಿ ಎಷ್ಟು ಒಳಿತು ಕೆಡುಕುಗಳನ್ನು ಬ್ರಹ್ಮ ಬರೆದಿದ್ದಾನೆ. ಮಾಟವಾದ ಮೂಗು, ತನ್ನ ಚಪ್ಪಟೆಯ ಮೂಗಿಗೆ ಹೋಲಿಕೆಯೇ ಅಲ್ಲ. ಶ್ಯಾಮುವಿನ ಮೂಗಿನಂತೆ ಇತ್ತು. ಕಣ್ಣುಗಳು ಬೊಗಸೆ ಕಂಗಳಲ್ಲದಿದ್ದರೂ ಆಕರ್ಷಕ ಅಚ್ಚ ಕಪ್ಪಿನ ಕಣ್ಣು. ತಿದ್ದಿದ ಹುಬ್ಬು, ನುಣುಪಾದ ಕೆನ್ನೆ. ಭಾವವಾದ ನೀಳವಾದ ಕುತ್ತಿಗೆ, ಸರಳೆಯ ಅಂದದ ವಸ್ತು. ಒಂದೇ ಒಂದು ಎಳೆಯ ಸರ ಅದನ್ನಪ್ಪಿ ಕುಳಿತಿತ್ತು. ಉಬ್ಬಿದ ಎದೆ ದೇಹಕ್ಕೆ ತಕ್ಕ ಪ್ರಮಾಣದಲ್ಲಿ ಸರಳೆಯನ್ನು ಒಳ್ಳೆ ವಿಗ್ರಹವುಳ್ಳವರ ಗುಂಪಿಗೆ ಸೇರಿಸಿತ್ತು. ಅತಿ ಎತ್ತರವೂ ಅಲ್ಲದೆ. ಕುಳ್ಳರ ರಾಜ್ಯಕ್ಕೂ ಸೇರದ ಸರಳಾ, ಸಾಧಾರಣ ಬಿಳುಪಿನ ವ್ಯಕ್ತಿ.

ಸರಳೆಯ ಅಂದಚೆಂದಗಳನ್ನು ಮೆಚ್ಚಿಕೊಳ್ಳುತ್ತಾ ಕುಳಿತ ಸುಮಿತ್ರೆ "ಸೀತಾ ಪತೇ ನಾ ಪೈ ಅಭಿಮಾನಮು ಲೇದಾ" ಎಂದು ನುಡಿಸುತ್ತಾ ನುಡಿಸುತ್ತಾ ವೀಣೆಯ ಮೇಲೆ ತಲೆ ಒರಗಿಸಿ ಕುಳಿತ ಸರಳೆಯನ್ನು ಗಮನಿಸಲೇ ಇಲ್ಲ. ವೀಣಾನಾದ ನಿಂತು ವಾತಾವರಣ ನಿಶ್ಶಬ್ದವಾದಾಗಲೇ ಸುಮಿತ್ರೆಗೆ ತಿಳಿವು. ಗಕ್ಕನೆ ಎದ್ದು ಸರಳೆಯ ಬಳಿಗೆ ಬಂದು ತಲೆಯ ಮೇಲೆ ಕೈಯಿಟ್ಟು ತಲೆ ಮೇಲಕ್ಕೆತ್ತಿದಳು. ಸರಳೆಯ ಕಣ್ಣಲ್ಲಿ ಧಾರಾಕಾರವಾಗಿ ನೀರು ಸುರಿಯುತ್ತಿತ್ತು.

"ಸರಳಾ, ಇದೇನಿದು ? ಎಷ್ಟು ಧೈರ್ಯವಾಗಿದ್ದೆ. ಈಗೇಕೆ ಹೀಗೆ ?"

ಕಣ್ಣೀರಿನ ಮರೆಯಲ್ಲೇ ನಕ್ಕಳು ದೊಡ್ಡ ಹುಡುಗಿ ಮತ್ತೂ ಅಂದಳು. "ಭಾವೋದ್ವೇಗದ ಪರಮಾವಧಿ ಇದು ಅಷ್ಟೆ. ಸುಮಿತ್ರಾ, ನಾ ಅಳುತ್ತಿಲ್ಲ. ಅಳಲು ನನಗೆ ಚೈತನ್ಯವಿಲ್ಲ. ಆದರೆ ನನ್ನ ಹೃದಯ—ವೀಣೆಯ ತಂತಿ ಯಾವ ಉದ್ವೇಗದಲ್ಲೇ ಆಗಲಿ ನುಡಿದಾಗ ನನಗರಿವಿಲ್ಲದೇನೇ ಕಣ್ಣೀರು ಸುರಿದು ಹೋಗುತ್ತದೆ. ಈ ಕೀರ್ತನೆ ಯಾವಾಗ ಹಾಡಿದರೂ ಅಷ್ಟೆ. ಕಣ್ಣೀರು ಹರಿಯುತ್ತೆ."

"ಹಾಗಾದರೆ ಆ ಕೀರ್ತನೆ ಹಾಡಲೇ ಬೇಡ."

"ಚೆನ್ನಾಗಿ ಹೇಳಿದೆ. ಮೃದು ಮಧುರವಾದ ಕೀರ್ತನೆ ಅದು. ಅದನ್ನು ಹಾಡುತ್ತಿದ್ದರೆ ರಾಮನೆ ಪ್ರತ್ಯಕ್ಷವಾದಷ್ಟು ಹರ್ಷವಾಗುತ್ತೆ. ಮನಸ್ಸು ಅರಳುತ್ತೆ, ಸುಮಿತ್ರಾ. ಇರಲಿ ಏಳು. ನೋಡು ಅಲ್ಲಿ ಫ್ಲಾಸ್ಕಿನಲ್ಲಿ ಕಾಫಿ ಇದೆ. ಬಗ್ಗಿಸು ಇಬ್ಬರೂ ಕುಡಿಯೋಣ."

ಕಾಫಿ ಕುಡಿದ ಕೂಡಲೆ—"ಸುಮಿತ್ರಾ ನೀನಿನ್ನು ಹೊರಡು."

"ಸಾಧ್ಯವೇ ಇಲ್ಲ. ಎಲ್ಲಾ ಹೇಳ್ಬಿಡು ಸರಳಕ್ಕ. ಇಲ್ಲೇ ದೇವರ ಎದುರಿನಲ್ಲೇ. ನಮ್ಮಿಬ್ಬರ ಆತ್ಮೀಯತೆ ಸಾಕ್ಷಿ ಶ್ರೀ ರಾಮಚಂದ್ರ. ಸರಳಕ್ಕ ನಿನ್ನ ಮನಶಾಂತಿಗಾಗಿ ನಾನೇನು ಮಾಡಬೇಕಾದ್ರೂ ಸಿದ್ಧ."

"ನಿನ್ನ ಆತ್ಮೀಯತೆ ಇದೇ ರೀತಿ ಚಿರಾಯುವಾಗಿ ಉಳಿದರೆ ಸಾಕು. ನೀನೂ ನಿನ್ನ ಮಕ್ಕಳೂ ನನಗೆ ಬೇಕು ಸುಮಿತ್ರಾ."

"ನಾವೆಂದಿಗೂ ನಿನ್ನವರು ಸರಳಾ. ಅದರಲ್ಲಿ ಅಪನಂಬಿಕೆ ಬೇಡ.... ಆಮೇಲೆನಾಯಿತು ಸರಳಾ."

"ಅಂತೂ ನೀ ಬಿಡೋಲ್ಲ. ನೀ ಬಹಳ ಕೆಟ್ಟವಳಪ್ಪ.

ಅಂದು ಕಬ್ಬನ್‌ಪಾರ್ಕಿನಲ್ಲಿ ಎಚ್ಚರ ತಪ್ಪಿದ ನನ್ನನ್ನು ರಾಜನೇ ಟ್ಯಾಕ್ಸೀಲಿ ಮನೇಗೆ ಕರೆತಂದು ಉಪಚಾರ ಮಾಡಿದ್ದ. ಮಾರನೆ ಬೆಳಗ್ಗೆ ಕಣ್ಣು ಬಿಡೋ ವೇಳೆಗೆ ಇದ್ದ ಅಂದೆನಲ್ಲಾ. ಆ ದಿನ ಆಫೀಸಿಗೆ ರಜಾ ಹಾಕು ಅಂತ ಬಲವಂತ ಮಾಡಿದ. ರಾಜನಿಗೂ ಮಾರನೆಯ ದಿನದ ಫಂಕ್ಷನಿಗಾಗಿ ಆಫೀಸು ಕೆಲಸ ಇರಲಿಲ್ಲ. ನಾಟಕಕ್ಕೆ ಸಂಬಂಧಪಟ್ಟ ಕೆಲಸ, ಎಲ್ಲಾ ಬೇರೆ ಯವರಿಗೆ ಒಪ್ಪಿಸಿ, ನನ್ನ ಹಿಂದೆ ಮುಂದೆ ತಿರುಗುತ್ತಿದ್ದ. ಮುದುಡಿದ್ದ ನನ್ನ ಮನಸನ್ನು ಗೆಲವು ಮಾಡಲು ಪಂಥಕಟ್ಟಿ ನಿಂತಿದ್ದ. ನನ್ನ ದುರ್ಬಲತೆಯೂ ಅವನಿಗೆ ಗೊತ್ತು. ನಾಲಕ್ಕು ಒಳ್ಳೆಯ ಮಾತನ್ನಾಡಿಬಿಟ್ರೆ ನಾನು ಕರಗಿ ಬಿಡುವೆನೆಂಬುದು ಅವನಿಗೆ ತಿಳಿದ ವಿಷಯ. ಅದೇ ಅಸ್ತ್ರ ಉಪಯೋಗಿಸಿದ. ಮರುಳಾದೆ ನಾನು. ನನ್ನ ಮನಃಪಟಲದಿಂದ ಭಾರತಿ ಎಲ್ಲೋ ಅಡಗಿ ಹೋದಳು. ಅವನೂ ಅಷ್ಟೇ ಉಪಾಯದಿಂದ ಅವಳ ವಿಷಯವನ್ನೇ ಎತ್ತದೆ ಎಚ್ಚರವಹಿಸಿದ್ದ,

ಮಾರನೆಯ ಸಂಜೆ ಅವನ ಆಫೀಸಿನ ನಾಟಕ ನೋಡಲು ಹೋಗಲು ತಯಾರಾದೆ. ಮನಸ್ಸು ಕುಣಿದು ಕುಪ್ಪಳಿಸದಿದ್ದರೂ ಉಲ್ಲಾಸವಾಗಿತ್ತು. ಮುಂಚೆಯೇ ಹೋಗುವ ಅಗತ್ಯ ಬಿದ್ದುದರಿಂದ ನನ್ನನ್ನು ಬರಹೇಳಿ ಹೊರಟು ಹೋದ ರಾಜ.

ಚೆನ್ನಾಗಿ ಅಲಂಕರಿಸಿಕೊಂಡ ನನ್ನನ್ನು ನೋಡಿ ಅತ್ತೆಗೆ ಆಶ್ಚರ್ಯ ವಾಗಿರಬೇಕು. ಆಕೆ ಬಂದಾಗಿನಿಂದ ನನ್ನ ಗೆಲುವನ್ನೇ ಆಕೆ ನೋಡಿರಲಿಲ್ಲ.

ಆದಕ್ಕೇ ಅಂದರು. "ಎಷ್ಟು ಲಕ್ಷಣವಾಗಿ ಕಾಣ್ತಿ ಸರಳಾ ಅಲಂಕಾರ ಮಾಡಿ ಕೊಂಡ್ರೆ." ನನಗೆ ನಾಚಿಕೆ ಆಯ್ತು. ಅವರಿಗೆ ಮೆಚ್ಚಿಕೆ ಆಯ್ತು. "ಎಷ್ಟು ಓದಿ, ಕೆಲಸ ಮಾಡಿ, ಕೈ ತುಂಬಾ ಸಂಪಾದಿಸಿದ್ರೂ ನಾಚಿಕೆ, ದೊಡ್ಡವ ರೊಂದ್ರೆ ಭಯ ಭಕ್ತಿ ಎಲ್ಲಾ ಇಟ್ಕೊಂಡಿದ್ದಿ ಸರಳಾ. ನಿನ್ನಂತಾವ್ರು ಈಗ ಅಪರೂಪ. ಲಕ್ಷ್ಮಿ ಈಗ ಇದ್ದಿದ್ರೆ ಎಷ್ಟು ಸಂತೋಷ ಪಡ್ತಾ ಇದ್ಲೋ. ಅವಳಿಗೆ ಲಭ್ಯವಿಲ್ಲ."

"ನೀವೇ ಹೊಗಳ್ತಾ ನಿಂತ್ರಿ, ಹೇಗೆ ಅತ್ತೆ" ಎಂದೆ. ಎಂತಹ ವಿನಯ ವತಿ ನಮ್ಮ ಸರಳಾ ! ಎಂದುಕೊಂಡಿರಬೇಕು ಅತ್ತೆ.

"ಸರಳಾ ಹೋಗೋಕ್ಮುಂಚೆ ದೇವ್ರಿಗೆ ನಮಸ್ಕಾರ ಮಾಡಿ ಹೋಗಮ್ಮ"

ಅದೇ ನನಗಿಷ್ಟವಿಲ್ಲದ ಕೆಲಸ. ದೇವರಿಗೆ ಕೈ ಜೋಡಿಸಿ ಯುಗಗಳಾ ಗಿತ್ತು. ಧರ್ಮನಿಷ್ಠೆಯಾದ ಸತಿಗೆ, ಪತಿಯೇ ದೈವವಲ್ಲವೇ? ನನಗೆ ಮೇಲಿಂದ ಮೇಲೆ ದುಗುಡ ಬಂದದ್ದರಿಂದಲೂ, ನಾನು ರಾಜನನ್ನೇ ಪತಿಯ ಸ್ಥಾನ ದಲ್ಲಿಟ್ಟು ಆರಾಧಿಸಲು ಆರಂಭಮಾಡಿದಾಗಿನಿಂದಲೂ ನನಗೆ ಬೇರೆ ಯಾವ ದೇವರೂ ಉಳಿಯಲಿಲ್ಲ. ಆಗ ತಾನೇ ಅತ್ತೆ "ಭಯಭಕ್ತಿ ದೊಡ್ಡವರ ಮಾತಲ್ಲಿ ಇಟ್ಟುಕೊಂಡಿದ್ದಿ" ಎಂದಿರಲಿಲ್ಲವೆ. ಅವರ ಮಾತನ್ನು ಅಷ್ಟರಲ್ಲೇ 'ಇಲ್ಲವೆಂದು' ಮಾಡಲಿಷ್ಟವಿಲ್ಲದೆ ದೇವರಿಗೆ ಅಡ್ಡ ಬಿದ್ದೆ. ಆಗಲೂ ನನ್ನ ಹೃದಯ ನುಡಿದುದು ಒಂದೇ ವಾಕ್ಯ "ನನ್ನನ್ನು ನನ್ನ ರಾಜನಿಂದ ಅಗಲಿಸ ಬೇಡ ಭಗವಾನ್."

ಅವನ ಆಫೀಸು ತಲುಪಿದ ಕೂಡಲೇ ರಾಜನೇ ಬಂದು ನನ್ನನ್ನು ಕರೆದುಕೊಂಡು ಹೋಗಿ ಮುಂದುಗಡೆ ಸಾಲಿನಲ್ಲಿ ಕೂರಿಸಿ ಹೋದ. ನನ್ನ ಉಲ್ಲಾಸದ ಮುಖ ನೋಡಿ ಸತ್ಯವತಿಗೇಕೋ ಕಸಿವಿಸಿ. ಬಂದು ನನ್ನ ಪಕ್ಕ ದಲ್ಲೇ ಕುಳಿತಳು. ಆದಷ್ಟೂ ರಾಜನ ಚಲನವಲನಗಳು ನನ್ನ ಕಣ್ಣಿಗೆ ಬೀಳ ದಿರಲಿ ಎಂಬುದು ಅವಳ ಇಚ್ಛೆ ಇದ್ದಿರಬಹುದು. ಅವನ ವಿಷಯವನ್ನು ಎತ್ತದೆ ಮಿಕ್ಕೆಲ್ಲಾ ನನ್ನ ಕಚೇರಿ, ಮನೆ, ಗೆಳತಿಯರು ಎಲ್ಲಾ ವಿಷಯ ವಿಚಾರಿಸಿದಳು.

ಯಥಾ ಪ್ರಕಾರ ಪ್ರಾರ್ಥನೆ. ಸ್ವಾಗತ ಭಾಷಣ. ಅಧ್ಯಕ್ಷ ಭಾಷಣ, ಬಹುಮಾನ ವಿನಿಯೋಗ ಎಲ್ಲಾ ಮುಗಿದ ಮೇಲೆ ನೃತ್ಯ, ನಂತರ ನಾಟಕ.

ನಾಟಕ "ಸತಿ ಸಾವಿತ್ರಿ" ಬಹಳ ಚೆನ್ನಾಗಿತ್ತು. ಸಾವಿತ್ರಿ ಪಾತ್ರ ಅದ್ಭುತವಾಗಿತ್ತು. "ಚೆನ್ನಾಗಿ ನಟಿಸಿದಳು. ಆ ಹುಡುಗಿ ಯಾರು?" ಎಂದೆ ಸತ್ಯವತಿಯ ಕಿವಿಯಲ್ಲಿ. ಬಹಳ ಅನುಮಾನಿಸಿ ಹೇಳಿದಳು "ಭಾರತಿ" ನಾನೇನೂ ಮಾತನಾಡಲಿಲ್ಲ. ಮನಸ್ಸಿನಲ್ಲೇ ಅಂದುಕೊಂಡೆ ಯಾರಾದರೇನು? ಅವಳು ನನ್ನ ಬಾಳಿನ ಸರೋವರದ ಶಾಂತತೆಯನ್ನು ಕದಡಲು ಬಂದ ಮಾತ್ರಕ್ಕೆ ಅವಳ ನಟನೆ ಚೆನ್ನಾಗಿಲ್ಲವೆನ್ನಲಾಗುತ್ತದೆಯೇ ಕಲೆ ಎಲ್ಲಿದ್ದರೂ ಹೊಗಳಲೇ ಬೇಕು. ಅಂದು ಕತ್ತಲಿನಲ್ಲಿ ಕಂಡಾಗ ಸ್ವಲ್ಪವೂ ಚೆನ್ನಾಗಿರಲಿಲ್ಲ ಅವಳು. ಆದರೆ ಮೇಕಪ್ಪಿನಡಿಯಲ್ಲಿ ಬಹಳ ಸುಂದರವಾಗಿ ಕಾಣುತ್ತಿದಳು.

'ಭಾರತಿ' ಎಂಬ ಪದ ತಲೆಯಲ್ಲಿ ಹೊಕ್ಕ ಕೂಡಲೇ ನನ್ನ ಮನಸ್ಸು ಕಡಿವಾಣವಿಲ್ಲದ ಕುದುರೆಯಂತೆ ಓಡತೊಡಗಿತು. ಕಾರ್ಯಕ್ರಮ ಮುಗಿದದ್ದು ನನಗೆ ತಿಳಿದದ್ದು ರಾಷ್ಟ್ರಗೀತೆ ಹಾಡುವಾಗ ಎಲ್ಲರೂ ನಿಂತಾಗ. ನನ್ನ ಮನಸ್ಸನ್ನೇ ಹಿಂಬಾಲಿಸುತ್ತ ಇದ್ದಂತಿತ್ತು. ಸತ್ಯವತಿ ಅಥವಾ ನಗಗಾಗುವ ಆಘಾತ ಎದುರು ನೋಡಿದ್ದಳೋ. "ಮನೆಗೆ ಹೋಗೋಣವೇನು?" ಮೆಲ್ಲಗೆ ಕೇಳಿದಳು.

"ಅವರನ್ನು ಕೇಳಿ ಬರುತ್ತೇನೆ. ಈಗಲೇ ಬರುತ್ತಾರೋ ಏನೋ."

'ಬೇಡ ಕೇಳಬೇಡ ನೊಂದುಕೊಳ್ಳುವೆ' ಎಂದು ಹೇಗೆ ಹೇಳಿಯಾಳು ! ಅದಕ್ಕೇ "ಅವರು ಬಹಳ ಬಿಸಿಯಾಗಿರಬಹುದು. ನಾವು ಹೋಗೋಣ ಬನ್ನಿ"

ಛೆ ! ಎಂತಹ ಬಿಸಿ ? ಒಂದೇ ನಿಮಿಷ ಕೇಳಿ ಬಂದ್ಬಿಡ್ತೀನಿ. ಅವರು ಸಿಕ್ಕರೆ ನೀವು ಹೋಗಬಹುದು" ಎಂದೆ.

"ರಾಜ ಬಂದೇ ಬರ್ತಾನೆ ನನ್ನ ಕೂಡೆ. ಸ್ವಲ್ಪ ಕಾಯಬೇಕಾಗಬಹುದು. ಕಾದರೆ ಆಯ್ತು" ಎಂದುಕೊಂಡು ಗ್ರೀನ್ ರೂಮಿಗೆ ದಾರಿ ಕೇಳಿಕೊಂಡು ಹೋದೆ. ಅಲ್ಲಿ ನಾನು ಕಂಡದ್ದು ನಿಜವೋ ಸ್ವಪ್ನವೋ ತಿಳಿಯದಾದೆ. ಅವನು ರಾಜನೇ? ನನ್ನ ರಾಜನೆ? ನನ್ನ ಮುಂದೆ ಒಂದು, ಬೆನ್ನ ಹಿಂದೆ ಒಂದು ಮಾದರಿ ನಡೆದುಕೊಳ್ಳುವ ಇವನು ಸಜ್ಜನನೆ? ಧೂರ್ತ. ನನ್ನ ಮನಸ್ಸು 'ಸ್ಕೌಂಡ್ರಲ್ ! ' 'ರಾಸ್ ಕಲ್ !' ಎಂದು ಎಷ್ಟೋ ಅವಾಚ್ಯ ಶಬ್ದಗಳನ್ನಾಡಿತು. ಕಂಡಿದ್ದೇನು ಎಂದು ನೀನು ಊಹಿಸಲಾರೆ ಸುಮಿತ್ರಾ

ಅವಳು ಅವಳೇ, ಆ ಭಾರತಿ, ಸತಿ ಸಾವಿತ್ರಿ ಗೋಡೆಗೊರಗಿ ನಿಂತಿದ್ದಳು. ಅವನು ಎರಡೂ ಕಡೆ ತನ್ನ ಕೈಗಳನ್ನು ಗೋಡೆಗೆ ಆನಿಸಿ. ಅವಳ ಹತ್ತಿರ ಮುಖ ಹಿಡಿದು ಪಿಸು ಮಾತನ್ನಾಡುತ್ತಿದ್ದ.

ಭಾರತಿ ನನ್ನನ್ನು ನೋಡಿದಳು. ಗೋಡೆಗೆ ಮುಖ ಮಾಡಿದ್ದ ರಾಜನಿಗೆ ನಾನು ಕಾಣಲಿಲ್ಲ. ನಾನು ಯಾರೆಂದು ಭಾರತಿಗೆ ಸರಿಯಾಗಿ ತಿಳಿಯದು. ಆದುದರಿಂದ ಯಾರೋ ಎಂದು ಅವಳು ನನ್ನ ಕಡೆಗೆ ಗಮನ ಕೊಡಲಿಲ್ಲ. ಭೂಮಿಯೇ ಬಾಯಿ ತೆಗೆದು ನನ್ನನ್ನು ನುಂಗಿಬಿಡಬಾರದೆ ಇಂತಹುದ್ದನ್ನೆಲ್ಲಾ ನೋಡುವ ಬದಲು ಎಂದು ಮನಸ್ಸಿನಲ್ಲೇ ಉದ್ಗರಿಸಿದೆ.

ಐದು ಹತ್ತು ನಿಮಿಷಗಳಾದರೂ. ಅವರಿಬ್ಬರ ಸಲ್ಲಾಪ ನಡೆದೇಇತ್ತು,

ನಾನು ಗರಬಡಿದವಳಂತೆ ನೆಟ್ಟ ಕಣ್ಣಿನಿಂದ ಅವರನ್ನೇ ನೋಡುತ್ತಿದ್ದೆ. ಎಂತಹವಳೇ ಆಗಲಿ ಹೆಣ್ಣಲ್ಲವೆ ಭಾರತಿ ! ಪರಹೆಂಗಸು ತಮ್ಮಿಬ್ಬರನ್ನು ಏಕ ಚಿತ್ತದಿಂದ ಗಮನಿಸುತ್ತಿರುವುದನ್ನು ಕಂಡು ನಾಚಿದಳು. ರಾಜ ಅವಳ ಕೆನ್ನೆಯ ಮೇಲೆ ಕೈಯಿಟ್ಟ. ಅವಳು ಆ ಕೈಯನ್ನು ಹಿಡಿದುಕೊಂಡು ಕಿವಿಗೆ ತುಟಿ ತಾಕಿಸಿ ಪಿಸುಗುಟ್ಟಿದಳು. ಬಹುಶಃ ಯಾವುದೋ ಒಂದು ಬಿಕನಾಸಿ ಬಂದು ನಮ್ಮನ್ನೇ ನೋಡುತ್ತಾ ನಿಂತಿದೆ ಎಂದಿರಬೇಕು. ಕೂಡಲೆ ಹಿಂತಿರುಗಿ ನೋಡಿದ ರಾಜ.

ನನ್ನನ್ನು ಕಂಡು ನಡುಗಿಬಿಟ್ಟ. ನಂಬಿದರೆ ನಂಬು ಇಲ್ಲದಿದ್ದರೆ ಬಿಡು ಸುಮಿತ್ರಾ, ರಾಜ ನಡುಗುತ್ತಿದ್ದುದು ಕಣ್ಣಿಗೇ ಕಾಣುವಂತಿತ್ತು. ಮುಖ ಬಿಳಿಚಿಹೋಯ್ತು. ನಾಲಗೆ ಹೊರಳಲಿಲ್ಲ. ಸಿಡಿಲು ಬಡಿದಿದ್ದರೂ ಧೈರ್ಯವಾಗಿ ಎದುರಿಸುತ್ತಿದ್ದನೇನೋ. ಆದರೆ ಸಿಡಿಲಿಗಿಂತ ಪ್ರಮಾದವಾಗಿ ಕಂಡಿರಬೇಕು ನನ್ನ ಸಾಕ್ಷಾತ್ಕಾರ.

"ಸ....ರೂ....ನೀ, ನೀನ್ಯಾಕೆ ಇಲ್ಲಿಗೆ ಬಂದೆ ?" ಆ ಮಾತುಗಳು ಪಾತಾಳದಿಂದ ಬಂದಂತೆ ಧ್ವನಿಸಿತು ಅವನ ಧ್ವನಿ,

ಆ ಧ್ವನಿಗೆ ವಿರುದ್ಧವಾಗಿ ಗಡುಸಾಗಿ ಕೇಳಿದೆ "ಬರಬಾರದಿತ್ತೆ ?"

"ಅಲ್ಲ....ಇಲ್ಲ....ಮತ್ತೆ...."

"ಹೌದು ನಿಮ್ಮ ಚೇಷ್ಟೆ, ವಿಹಾರಗಳೆಲ್ಲಾ ನನಗೆ ತಿಳಿದುಬಿಟ್ಟವೆಂದು ಹೆದರಿಕೆ ನಿಮಗೆ" ಕೆಂಡ ಕಾರಿದೆ,

"ಮೆಲ್ಲಗೆ ಮಾತನಾಡು ಸರೂ. ಭಾರತಿಗೆ ಕೇಳಿಸಿಬಿಟ್ಟೀತು" ಹತ್ತಿರ ಬಂದು ಹೇಳಿದ.

"ಯಾರಿಗೆ ಕೇಳಿಸಿದರೆ ನನಗೇನಾಗಬೇಕಾಗಿದೆ. ನನ್ನವರ ವಿಷಯ ನಾನು ವಿಚಾರಿಸಿಕೊಳ್ಳಬೇಕಾಗಿದೆ. ಮನೆಗೆ ಹೋಗಲು ಜೊತೆಗೆ ಬರ್‍ತೀರೇನು ಎಂದು ಕೇಳಲು ಬಂದೆ. ಈಗ ಕರೆಯುವ ಮನಸ್ಸೂ ನನಗಿಲ್ಲ. ನಾನು ಹೋಗುತ್ತೇನೆ."

"ಸ್ವಲ್ಪ ಕಾಯ್ತೀಯಾ ಸರೂ. ಭಾರತೀನ್ನ ಮನೆ ತಲುಪಿಸೋ ಜವಾಬ್ದಾರಿ ನನಗೇ ಬಿದ್ದಿದೆ. ಟ್ಯಾಕ್ಸೀಲಿ ಮೂವರೂ ಹೋಗಿ ಅವಳನ್ನು ಬಿಟ್ಟು ಹೋಗೋಣ."

"ನಾನು ಬರೋದಿಲ್ಲ. ನಿಮ್ಮಿಬ್ಬರ ಏಕಾಂತಕ್ಕೆ ಮಧ್ಯೆ ಮೂರನೇವಳು ನಾನ್ಯಾಕೆ."

ಹೊರಟು ನಿಂತೆ ಬೆನ್ನುಮಾಡಿ. "ಸರಳಾ...." ಪಿಸುಮಾತಿನಲ್ಲಿ ಗೋಗರೆದ.

"ಇವರು ಯಾರು ? ನಿಮ್ಮ ಪರಿಚಿತರೆ ?" ಬಂದುಬಿಟ್ಟಳು ಸಾವಿತ್ರಿ ಬಲು ಬಿನ್ನಾಣವಾಗಿ ಮಾತನಾಡಿಸಲು.

ರಾಜನೇಕೆ ಸತ್ಯವಾನನ ಪಾತ್ರವನ್ನು ಮಾಡಲಿಲ್ಲವೋ. ನಿಜ ಜೀವನದಲ್ಲಿ ಇಷ್ಟೊಳ್ಳೆಯ ನಾಟಕ ಆಡುವ ರಾಜ, ಪಾತ್ರ ಚೆನ್ನಾಗಿಯೇ ನಿರ್ವಹಿಸಬಹುದು ಎಂದುಕೊಂಡೆ.

"ಹೌದು ಭಾರತಿ" ಬೆವರುತ್ತಲಿದ್ದ ರಾಜ.

"ಇಲ್ಲೇಕೆ ಬಂದರು ? ಏನಂತೆ ?" ಸಹಜವಾಗಿಯೇ ಕೇಳಿದಳು. ಅವಳದು ತಪ್ಪಿಲ್ಲ.

ಅವಳಿಗಿಂತಲೂ ಮುಂಚಿನಿಂದ ರಾಜನ ಬಾಳಿನಲ್ಲಿ ಒಬ್ಬಳಿದ್ದಾಳೆಂದು ಅವಳೇನು ಬಲ್ಲಳು ? ರಾಜ ಅವಳಿಗೆ ನನ್ನ ವಿಷಯವನ್ನೇ ಹೇಳಿರಲಿಕ್ಕಿಲ್ಲ. ನನ್ನ-ರಾಜನ ಪ್ರೇಮ ಅರಿತಿದ್ದರೆ, ನಮ್ಮ ಜೋಡಿಯನ್ನು ಇಬ್ಭಾಗ ಮಾಡಲು ಅವಳೂ ಸಹ ಬಗೆದಿರಲಾರಳು, ಅವಳ ವಿಷಯ, ಹೇಗೆ ಅವನು ನಾನಾಗಿ ಕೇಳುವವರೆಗೆ ನನಗೆ ಹೇಳಲಿಲ್ಲವೋ, ಹಾಗೆಯೇ ನನ್ನ ಪ್ರಸಂಗ ಅವಳೆದುರಿಗೆ ಬಂದಿರಲಾರದು, ಅದಕ್ಕಾಗಿಯೇ ಅವಳು ನನ್ನೆದುರಿಗೇ ತನ್ನ

ಪ್ರೇಮ ಪ್ರದರ್ಶನ ಮಾಡಿದಳು. ಎತ್ತರದ ರಾಜನ ಭುಜ ಎಟುಕದಿದ್ದರೂ ಅದರ ಮೇಲೆ ಕೈ ಇಟ್ಟು ಬಿಂಕವಾಗಿ ನಿಂತಿದ್ದಳು.

ಒಂದೇ ಒಂದು ನೋವಿನ ಉಸಿರು, ಬಿಸಿನುಡಿ ಅವನನ್ನು ಶಪಿಸಿತು. ಸುಮಿತ್ರಾ, 'ದ್ರೋಹಿ, ವಂಚಕ ಬೆಳಗಲಾಶಿಸುತ್ತಿದ್ದ ನನ್ನ ಮನಸ್ಸಿನ ದೀಪವನ್ನು ನಂದಿಸಿ, ಅಂಧಕಾರದಲ್ಲಿ ಕೆಡಹಿದ ನೀನು ಒಳ್ಳೆಯ ಬದುಕು ಬದುಕುವುದು ಬೇಡ. ಹೀಗೇ ಕಳೆಯಲಿ ನಿನ್ನ ಬಾಳು' ಎಂದು. ನಂತರ ಹಲ್ಲು ಕಚ್ಚಿಕೊಂಡೆ, ಎಷ್ಟಾದರೂ ನನ್ನ ರಾಜನಲ್ಲವೆ ! ಅವನು ನೀಚಕ್ಕಿಳಿದನಲ್ಲಾ ಎಂದು ನಾನೂ ಕೊಚ್ಚೆಯಲ್ಲಿಳಿಯಬಹುದೆ !

ಹಿಂತಿರುಗಿ ನೋಡದೆ ಬಂದು ಬಿಟ್ಟೆ. ಕೋಪದಿಂದ ಮುಖ ಕೆಂಪಾಗಿತ್ತು. ಅವಮಾನದಿಂದ, ಆತ್ಮಗೌರವಕ್ಕೆ ಧಕ್ಕೆ ಬಂದಿದ್ದರಿಂದ ಮೈ ಉರಿಯುತ್ತಿತ್ತು. ಆದರ್ಶಸತಿಯಾಗಿ ಬಾಳಬೇಕೆಂದು ರಾಜನ ಪಕ್ಕದಲ್ಲಿ ನನ್ನ ಸ್ಥಾನವನ್ನು ನಿರ್ಮಿಸಿಕೊಂಡ ನನ್ನನ್ನು ದೂರ ತಳ್ಳಿ ಯಾವುದೋ ಕಂಡರಿಯದ ಒಂದು ಕ್ಷುದ್ರಕ್ಕೆ ಜಾಗ ಕೊಟ್ಟು, ನನ್ನನ್ನು ಪತಿತೆಯನ್ನಾಗಿ ಮಾಡಿದ ಅವನ ಮೇಲೆ ಸೇಡು ತೀರಿಸಿಕೊಳ್ಳಬೇಕೆನ್ನುವಷ್ಟು ಕ್ರಾಂತಿಯೆದ್ದಿತ್ತು ನನ್ನ ಮನದಲ್ಲಿ.

ಹಿಂತಿರುಗಿ ಬಂದ ನನ್ನನ್ನು ಕಂಡ ಸತ್ಯವತಿ ಏನೂ ಪ್ರಶ್ನಿಸದೆ ಸುಮ್ಮನೆ "ಹೋಗೋಣವೇನು ?" ಎಂದಳು. "ಹುಂ" ಎಂದು ಹೊರಟೆ.

ವಿಶ್ವಸಾಹಸ ಮಾಡಿ ನನ್ನನ್ನು ಮಾತನಾಡಲು ನೋಡಿದಳು. ನಾನು ಈ ಲೋಕದಲ್ಲಿದ್ದರಲ್ಲವೇ ಮಾತನಾಡಲು. ಅವಳ ಅಣ್ಣನು ಅವಳನ್ನು ಕರೆದೊಯ್ಯಲು ಬಂದಿದ್ದರಿಂದ, ನನ್ನ ಮೌನ ಅವಳಿಗೆ ನೋವುಂಟು ಮಾಡಿತೇ ವಿನಾ ನಷ್ಟವಾಗಲಿಲ್ಲ. ನನ್ನನ್ನು ಮನೆಯ ಬಳಿ ಬಿಟ್ಟು ಹೊರಟುಹೋದರು ಅಣ್ಣ ತಂಗಿಯರು.

ನನಗಾಗಿ ಕಾಯುತ್ತಿದ್ದ ಅತ್ತೆ ಬಾಗಿಲಲ್ಲೇ ಕೇಳಿದರು "ನಡೆದುಕೊಂಡು ಬಂದೆಯಾ, ಸರಳಾ." ತಂದೆ ವಿಚಾರಿಸಿದರು–"ಎಲ್ಲಾ ಚೆನ್ನಾಗಿತ್ತಾಮ್ಮಾ. Enjoy ಮಾಡಿದ್ಯಾ." ಇಬ್ಬರ ಪ್ರಶ್ನೆಗೂ 'ಹೂಂ, ಅನ್ನುವಂತೆ ತಲೆದೂಗಿ ಬಟ್ಟೆ ಬದಲಾಯಿಸಲು ಹೊರಟುಹೋದೆ.

ಹಾಸಿಗೆ ಸರಿಪಡಿಸುತ್ತ ಇದ್ದಾಗ, ಅತ್ತೆಗೇಕೋ ಸಂಶಯ. "ಏನು

ಸರಳಾ, ಮಲಗೋ ತಯಾರಿ ನಡೆಸ್ತಾ ಇದ್ದ ಹಾಗಿದೆಯಲ್ಲಾ ಊಟ ಮಾಡೋಲ್ವ ?"

"ಬೇಡ ಅತ್ತೆ ಊಟ"

"ಯಾಕೆ? ಅಲ್ಲೇನಾದ್ರೂ ತಿಂಡಿ ಜೋರೇನು ?" ಮತ್ತೆ ಹೌದೂಂತ ತಲೆ ಆಡಿಸಿದೆ.

"ಹಾಗಾದ್ರೆ, ಎಲ್ಲಾ ಮುಚ್ಚಿಟ್ಟು ಮಲಗಿಕೊಳ್ಳಲೇನು" ಎಂದು ನನ್ನ ಉತ್ತರಕ್ಕೂ ಕಾಯದೆ ಹೊರಟುಹೋದರು ಅತ್ತೆ.

ತಡವಾಗಿ ಮನೆಗೆ ಬಂದ ದಿನವೆಲ್ಲಾ ಅಪ್ಪ ನನ್ನನ್ನು ಬೇಗ ಮಲಗ ಹೇಳುತ್ತಿದ್ದುದರಿಂದ, ನಾನು ಮಲಗುವ ಸಿದ್ಧತೆ ಮಾಡಿದಾಗ, ಅಪ್ಪನಿಗೆ ಸಂತೋಷವೇ ಆಯಿತು.

ಮಲಗಿದ ಕೂಡಲೇ ಕಣ್ಣ ಮುಂದೆ ಬೋರ್ಡು ಹಾಕಿದಂತೆ ಬಂದ ಪ್ರಶ್ನೆ "ತಿಂಡಿ ಜೋರೇನು ಅಲ್ಲಿ" ಎಂತಹ ಪ್ರಶ್ನೆ ಅತ್ತೆಯದು ? ಹೌದು ನಿಜವಾಗಿಯೂ ಜೋರಲ್ಲವೇನು ? ಇಡೀ ಬಾಳೆಲ್ಲಾ ಆದರೂ ಅನುಭವಿಸಿ ಜೀರ್ಣಿಸಿಕೊಳ್ಳಲಾಗದ ತಿಂಡಿ ತಿನಿಸಿಲ್ಲವೇ ಇಂದು ರಾಜ ಎಂದು ವಿವಶಳಾದೆ. ನನಗೆ ಅಳುವೂ ಬರುವಂತಿರಲಿಲ್ಲ. ನನಗೇನೋ ಅಸಹ್ಯ, ಜಿಗುಪ್ಸೆ, ಯಾರ ಮೇಲೆ ತಿಳಿಯದು. ನನ್ನ ಮೇಲೆಯೇ ಇರಬೇಕು.

ಏನೇ ಆಗಲಿ ರಾಜನಿಗೆ ಇನ್ನು ಹೇಳುವುದು ಗುಡ್‌ಬೈ. ಕಡೆಯ ವಂದನೆ ಸಲ್ಲಿಸಬೇಕು. ಇನ್ನು ಸಾಕು ಬಾಳ ಕಣ್ಣು ಮುಚ್ಚಾಲೆ. ಚಿರ ವಿರಹಿಯಾಗಿ ಉಳಿದರೂ ಚಿಂತೆಯಿಲ್ಲ. ಆದರೆ ಮೋಡಗಳ ಹಿಂದೆ ಆಡುವ ಚಂದ್ರನ ಆಟ ನನಗೆ ಸಾಕಾಗಿ ಹೋಗಿತ್ತು. ಆ ರಾತ್ರಿ ಒಂದು ಕರಾಳ ರಾತ್ರಿ ಎನಿಸಿತು.

ಹತ್ತಾರು ಬಾರಿ ರಾತ್ರಿಯೆಲ್ಲಾ ಪ್ರಯತ್ನಿಸಿದ ಮೇಲೆ ಒಂದು ಪತ್ರ ಬರೆಯಲು ಸಮರ್ಥಳಾದೆ.

ಪ್ರಿಯತಮ ರಾಜ,

ಈ ಕಾಗದ ನೋಡಿ ನಿಮಗೆ ಆಶ್ಚರ್ಯವಾಗಬಹುದು. ಒಂದು ವೇಳೆ ಆಗದೆಯೂ ಇರಬಹುದು. ಆದರೆ ನಿಮ್ಮ ವರ್ತನೆಯನ್ನು

ದಿನೇ ದಿನೇ ನೋಡುತ್ತಿರುವ ನನಗೆ ಬೇರೆ ವಿಧಿಯೇ ಇಲ್ಲ ಇದನ್ನೂ ಬರೆಯುದೆ.

ನಿಮ್ಮಿಂದಾಗಿಯೇ ನನ್ನ ಮನಸ್ಸು ನೊಂದಿದೆ. ನನ್ನ ನೋವನ್ನು ಅನೇಕ ಬಾರಿ ನಿಮ್ಮ ಮುಂದೆ ಹೇಳಿದ್ದೇನೆ. ನನ್ನನ್ನು ತಾತ್ಸಾರವಮಾಡ ಬೇಡಿ ಎಂದು ಕೇಳಿಕೊಂಡಿದ್ದೇನೆ. ಆದರೆ ನನ್ನ ಮನಸ್ಸನ್ನು ಒಮ್ಮೆ ಯಾದರೂ ಅರಿತುಕೊಳ್ಳಲು ನೀವು ಪ್ರಯತ್ನ ಮಾಡಿಲ್ಲ. ನಿಮ್ಮ ಆನಂದ ವಿನೋದಗಳ ಮಧ್ಯದಲ್ಲಿ ನನ್ನ ನೆನಪೂ ನೀವು ಉಳಿಸಿಕೊಳ್ಳು ತ್ತಿಲ್ಲ.

ನನಗೆ ನಿಮ್ಮ ಪ್ರೇಮಬೇಕು. ಪ್ರೇಮ ಹುಡುಗಾಟವಲ್ಲ. ಬೇಕಾದವರೊಂದಿಗೆ ಬೇಕಾದ ಹಾಗೆ ವಿಹರಿಸುವುದು ಪ್ರೇಮದ ಪ್ರಗ ತಿಗೆ ಹಾನಿ. ನೀವು ನನ್ನನ್ನು ಅತಿಯಾಗಿ ಪ್ರೀತಿಸುತ್ತಿದ್ದೀರಿ ಎಂದೇ ನಂಬಿದೆ ನಾನು ಇದುವರೆವಿಗೂ, ಆದರೆ ಈಗ ನನಗೆ ತಿಳಿಯುತ್ತಿದೆ, ನಿಮಗೆ ಪ್ರೇಮ ಅನ್ನೋದು ಒಂದು ಚೆಲ್ಲಾಟ. ಆದರೆ ನನ್ನ ದೌರ್ಭಾಗ್ಯ ನನಗೆ ಅದೇ ಸಂಕಟ.

ಚಿಂತೆಯಿಲ್ಲ. ನಿಮ್ಮ ಸಂತೋಷಕ್ಕೆ ನಾನು ಅಡ್ಡಿ ಬರುವುದಿಲ್ಲ. ಆದರೂ ನಿಮ್ಮ ಜೀವನದಲ್ಲಿ ನಾನೇ ಮುಖ್ಯ, ಮೊದಲ ಸ್ಥಾನ ಪಡೆದವಳು ಎಂಬ ಭ್ರಾಂತಿಯಿಂದ ಹೇಗೆ ಬೀಗುತ್ತಿದ್ದೆ! ನನ್ನ ಭಾವನೆ ತಪ್ಪು. ನೀವು ಯಾರಿಗಾದರೂ ಆ ಸ್ಥಳವನ್ನು ಕೊಡಬಲ್ಲಿರಿ ಎಂದು ತಿಳಿಯಲು ನನ್ನ ಹೃದಯ ಎಷ್ಟು ರೋದಿಸುತ್ತಿದೆ ಬಲ್ಲಿರಾ?

ನಿಮಗೆ ಈಗ ಭಾರತಿಯೇ ಮುಖ್ಯ, 'ಅವಳನ್ನು ನೋಯಿಸ ಬಾರದು,' 'ಅವಳಿಗೆ ತೊಂದರೆಯಾಗಬಾರದು' ಎಂದು ಬಯಸು ತ್ತಿದೆಯೇ ಹೊರತು, ನಿಮ್ಮ ಹೃದಯ ನಿಮ್ಮ ಬಾಳಿನ ಒಂದು ಸ್ತಂಭವನ್ನು, ನಿಮ್ಮ ಪ್ರಗತಿಗೆ ನೆರವಾದ ಒಂದು ತುಂಬು ಪ್ರೇಮಿ ಯನ್ನು, ನೆನೆಯಲು ಹಿಂಜರಿಯುತ್ತಿದೆ. ಇರಲಿ, ನಿಮ್ಮ ಹಾದಿಗ ಸಂತೋಷಕ್ಕೆ, ವಿಲಾಸ ವಿಹಾರಗಳಿಗೆ ಮುಳ್ಳಾಗಲು ನಾನ್ಯಾರು.

ಒಬ್ಬರನ್ನು ಕಂಡು ಇಷ್ಟಪಡುವುದಕ್ಕೂ, ಪ್ರೇಮಿಸುವುದಕ್ಕೂ ಅಗಾಧ ಅಂತರವಿದೆಯೆಂದು ಒಮ್ಮೆ ವಾದಿಸಿದಿರಿ ನೀವು, ನಿಜ,

ನಾನೂ ಒಪ್ಪುತ್ತೇನೆ. ಆದರೆ 'ಇಷ್ಟ' 'ಪ್ರೇಮ'ವಾಗುವುದು ಎಷ್ಟರಲ್ಲಿದೆ. ಪ್ರೇಮ ಕಾಮಕ್ಕೆ ತಿರುಗಲು ರೆಪ್ಪೆ ಮುಚ್ಚುವ ಸಮಯ ಸಾಕು. ನನ್ನನ್ನು ಕಂಡು ನಿಮಗೆ ಇಷ್ಟವಾಯಿತು. ಆ ಇಷ್ಟವೇ ಪ್ರೇಮಕ್ಕೆ ತಿರುಗಿತ್ತು. ಪ್ರೇಮದ ಮುಂದಿನ ಹೆಜ್ಜೆ ಪ್ರಣಯ ಕಾಮ ಗಳೂ ಆದವು. ಹಾಗೇ ತಾನೇ ಇಂದು ಭಾರತಿಯನ್ನು ಕಂಡರೆ ಇಷ್ಟ, ಎನ್ನುತ್ತಿದ್ದೀರಿ. ಮಿತಿಮೀರಿ ವರ್ತಿಸುತ್ತಿದ್ದೀರಿ. ಮುಂದೆ ಏನು ಎಂಬುದನ್ನು ನಾನು ನುಡಿಯುವುದು ಬೇಡ.

ನಿಜ, ಭಾರತಿ ನನಗಿಂತ ಕೆಲವು ವರ್ಷಗಳು ಚಿಕ್ಕವಳಿರಬಹುದು. ಅಷ್ಟಕ್ಕೇ ಅವಳೆದುರಿಗೆ ನಾನು ನಿಮ್ಮ ಕಣ್ಣಿಗೆ ಮುದುಕಿಯಾದೆನೆ! ಹೌದು, ಹೂವಿನಿಂದ ಹೂವಿಗೆ ಹಾರುವ ಭ್ರಮರಕ್ಕೆ ಮಧು ಹಿಂಡಿ ಹೀರಿದ ಮೇಲೆ ಆ ಹೂವಿನ ಚಿಂತೆಯೇಕೆ. ನೀವು ಭ್ರಮರವಾಗು ವುದು ನನಗಿಷ್ಟವಿಲ್ಲ. ನೀವು ನನ್ನನ್ನು ಪ್ರೇಮಿಸದಿದ್ದರೆ ಬೇಡ. ಆದರೂ ಒಬ್ಬರನ್ನು ಪ್ರೀತಿಸಿ ಬಾಳನ್ನು ಹಸನು ಮಾಡಿಕೊಳ್ಳಿ.

ಪ್ರೇಮವನ್ನು ಬಲವಂತದಿಂದ ಪಡೆಯಲು ಸಾಧ್ಯವಿಲ್ಲ ಎಂದು ನಾನು ಬಲ್ಲೆ. ಭಾರತಿ ಅದೃಷ್ಟವಂತಳು. ಅನಾಯಾಸವಾಗಿ ನನ್ನಿಂದ ನಿಮ್ಮನ್ನು ತನ್ನ ಕಡೆಗೆ ತಿರುಗಿಸಿಕೊಂಡಿದ್ದಾಳೆ. ನಿಮ್ಮ ಪ್ರೇಮಕ್ಕೆ ಪಾತ್ರಳಾಗಿದ್ದಾಳೆ. ಆದರೆ ಆ ಅದೃಷ್ಟ ಒಮ್ಮೆ ನನ್ನದಾಗಿತ್ತು ಎಂದು ಹೇಗೆ ಹೇಳಲಿ-

ನನಗೆ ನಿಮ್ಮ ಮೇಲೆ ಕೋಪವಿಲ್ಲ. ಆದರೆ ನನ್ನ ಹೃದಯಕ್ಕೆ ಒದ್ದು ಭಾರತಿಯೇ ಪ್ರಾಧಾನ್ಯವೆಂದು ಹೋಗುತ್ತಿರುವುದರಿಂದ ನನಗೆ ನೋವು. ಅಳಿಯಲಾಗದ ನೋವು. ನಾನು ನಿಮಗೆ ಏನು ಕೊಡ ಲಿಲ್ಲವೆಂದು ನೀವು ಬೇರೆ ಬೇರೆ ಹೆಣ್ಣುಗಳಿಗೆ ಆಕರ್ಷಿತರಾಗುತ್ತಿದ್ದೀರಿ ಎನ್ನುವುದೇ ನನಗೆ ತಿಳಿಯದು. ನನ್ನದೆಲ್ಲವನ್ನೂ ನಿಮಗೆ ಕೊಟ್ಟೆ. ಕಡೆಗೆ ನನ್ನ ದೇಹವನ್ನೂ ಸಹ ಸಂತೋಷದಿಂದಲೇ ಅರ್ಪಿಸಿಕೊಂಡೆ. ಅದಕ್ಕಿಂತಲೂ ಹೆಚ್ಚು, ಏನು ಬಯಸುತ್ತೀರಿ ರಾಜ ನೀವು? ಆ ಭಾರತಿಯಲ್ಲಿ ಏನು ಕಂಡಿರಿ?

ಪೂರ್ಣವಾಗಿ ನೀವು ನನ್ನವರಾಗಬೇಕೆಂಬ ಹಂಬಲ ನನಗೆ. ನಿಮ್ಮ

ಹೃದಯದಲ್ಲಿ ಪೂರಾ ನಾನೇ ಇರಬೇಕೆಂಬ ಉತ್ಕಟಾಕಾಂಕ್ಷೆ. ಆದರೆ ನಿಮಗೆ ನಾನು ಹತ್ತಿರಲ್ಲೊಬ್ಬಳು. ಈ ರೀತಿ ನಾನಿರಲಾರೆ, ನಿಮ್ಮ ಸ್ನೇಹ ನನ್ನೆಡೆಗಿರುವುದು ಬರಿಯ ಮೈತ್ರಿ ಮಾತ್ರವಾದರೆ, ನನಗದು ಬೇಡ. ನಾನು ಆ ಹಂತವನ್ನು ಮೀರಿ ನಿಮ್ಮವಳಾದೆ. ನಾನು ಕಾಟಾಚಾರದ ಗೆಳತಿಯಾಗಿ ಉಳಿಯಲಾರೆ.

ಹಾಗೆಂದು ನಾನು ನಿಮ್ಮ ಬಾಳಿನ ಮುಳ್ಳಾಗುವುದಿಲ್ಲ. ನಿಷ್ಪಾಪಿಯಂತಳಾದ ನನಗೆ ಇನ್ನು ಬಾಳಿನಲ್ಲಿ ಅಷ್ಟೇನೂ ಆಸೆಯಿಲ್ಲ. ಆದರೆ ನೀವು ಸುಖವಾಗಿರಬೇಕೆಂದು ಪ್ರಾರ್ಥಿಸಲೋಸುಗವಾದರೂ ಬದುಕಿರಲು ಬಯಸುತ್ತೇನೆ.

ಸಾಧ್ಯವಾದರೆ ನನ್ನನ್ನು ಮರೆತುಬಿಡಿ. ಇದನ್ನು ನಾನು ಹೇಳಬೇಕಾಗಿಲ್ಲ. ಭಾರತಿಯ ಸಾನ್ನಿಧ್ಯದಲ್ಲಿ ಸರಳಾ ಆಗಲೇ ನಿಮ್ಮ ಪಾಲಿಗೆ ಮರೆಯಾಗಿದ್ದಾಳೆ. ಒಂದು ವೇಳೆ ನೆನಪು ಬಂದರೆ, ಭಾರತಿಯನ್ನು ನೆನಸಿಕೊಂಡು ಈ ದೌರ್ಭಾಗ್ಯಳನ್ನು ಮರೆಯಿರಿ.

ಈ ಕಾಗದವನ್ನು ಎಷ್ಟು ದುಃಖದಿಂದ ಬರೆಯುತ್ತಿದ್ದೇನೆ ಎಂಬುದು ಸ್ವಲ್ಪ ಕರುಣೆಯುಳ್ಳ ಹೃದಯದವರಿಗೂ ಅರಿವಾಗುತ್ತದೆ. ನಿಮಗೆ ತಿಳಿದರೆ, ನನಗಾಗಿ ಒಮ್ಮೆ ನೀವು ನಿಟ್ಟುಸಿರು ಬಿಟ್ಟರೆ ನಾನೇ ಧನ್ಯೆ. ಆದರೆ ಭಾರತಿ ನಿಮಗೆ ಅದಕ್ಕೂ ಸಮಯಕೊಡಲಾರಳೇನೋ. ನನಗೆ ತಿಳಿದ ಮಟ್ಟಿಗೆ, ಈಗ ನಿಮ್ಮ ಹೃದಯ ಮನಸ್ಸು, ಬಾಹ್ಯ ಅಂತಶ್ಚಕ್ಷುಗಳಿಗೆಲ್ಲಾ "ಭಾರತೀಮಯಂಜಗತ್"

ನನಗಾಗಿ ನಾನು ಬರೆಯುತ್ತಿಲ್ಲ. ನಿಮ್ಮನ್ನು ನೀವು ತಿದ್ದಿಕೊಳ್ಳಬೇಕೆಂಬುದು ನನ್ನ ಅಭಿಲಾಷೆ.

ಬರುತ್ತೇನೆ. ಅಲ್ಲ ಹೋಗುತ್ತೇನೆ. ನಿಮ್ಮ ಹಾದಿಯಿಂದ ಪಕ್ಕಕ್ಕೆ ಸರಿಯುತ್ತಿದ್ದೇನೆ. ದೇವರು ನಿಮ್ಮನ್ನು ಚೆನ್ನಾಗಿ ಆಶೀರ್ವದಿಸಿ ಇಟ್ಟಿರಲಿ.

ಇತಿ ಸದಾ ನಿಮ್ಮ ಹೃದಯದಲ್ಲಿ ಸ್ಥಾನಕ್ಕಾಗಿ ಒದ್ದಾಡುವ...."

**ಸರೂ**

ನಿಜ ಹೇಳುತ್ತೇನೆ ಸುಮಿತ್ರಾ. ಆ ಕಾಗದ ಅವನಿಗೆ ಬರೆದಿದ್ದರೂ ರಾಜನ ಬಾಳಿನಿಂದ ದೂರ ಸರಿಯಲು ನನಗಿಷ್ಟವಿರಲಿಲ್ಲ. ನನ್ನ ಹೃದಯ

ಸಿಂಹಾಸನದಲ್ಲಿ ರಾಜ ಪ್ರತಿಷ್ಠಿತನಾಗಿದ್ದಂತೆಯೇ ಅವನ ಹೃದಯದಲ್ಲಿ ನನಗೆ ಸ್ಥಳ ಬೇಕೆಂದು ಬಯಸಿದೆ, ಪ್ರಾರ್ಥಿಸಿದೆ. ರಾಜನಿಗೆ ಹೃದಯವೇ ಇಲ್ಲವೆಂದು ತಿಳಿಯದೆ ಹೋದೆ.

ಪತ್ರ ನೋಡಿದ ಮೇಲಾದರೂ ನನ್ನ ನೋವು ತಿಳಿದು, ಭಾರತಿಯ ಸ್ನೇಹ ಮೊಟಕು ಮಾಡಿ ನನ್ನವನಾಗಿ ಬರುವನೆಂದು ಆಶಿಸಿದೆ. ಅದಕ್ಕಾಗಿ ಚಡಪಡಿಸಿ ಪ್ರತಿದಿನವೂ ರಾಜನಿಗಾಗಿ ಎದುರು ನೋಡಿದೆ. ರಾಜ ಬರಲಿಲ್ಲ.

ಒಂದುವೇಳೆ ನನ್ನಂತೆಯೇ ಅವನೂ ಒಂದು ವಾಕ್ಯ ಬರೆಯಬಹುದು ಎಂದು ಟಪಾಲಿಗೆ ಎದುರು ನೋಡಲಾರಂಭಿಸಿದೆ. ಹದಿನೈದು ದಿನ ಸುಮ್ಮನೆ ಕಾದು ನಿರಾಶಳಾದೆನೇ ವಿನಾ ರಾಜನ ಸಮಾಚಾರ ತಿಳಿಯಲಿಲ್ಲ. ಪತ್ರ ಬರೆಯಬಾರದಿತ್ತೇನೋ ಎಂದು ನನ್ನನ್ನು ನಾನು ಪರಿಶೀಲಿಸಿಕೊಳ್ಳುವಷ್ಟರಲ್ಲೇ ಮತ್ತೆ ಸುದ್ದಿ. ಅವರಿಬ್ಬರೂ ಊಟಿಗೆ ಹೊರಟಿದ್ದಾರೆಂದು,

ಇಲ್ಲ, ಸಾಧ್ಯವೇ ಇಲ್ಲ. ಇನ್ನು ಸಾಧ್ಯವೇ ಇಲ್ಲ. ರಾಜ ನನ್ನಿಂದ ದೂರ, ಬಹಳ ದೂರ ಹೊರಟು ಹೋಗಿದ್ದ. ನನಗೆ ಅವನು ಬೇಕಿತ್ತು. ಆದರೆ ಅವನಿಗೆ ನಾನು ಬೇಕಿರಲಿಲ್ಲ. ತಾಳವಿಲ್ಲದೆ ಇದ್ದಾಗಲೇ ಕುಣಿಯಲು ತವಕಿಸುತ್ತಿದ್ದ ರಾಜನಿಗೆ ಇನ್ನು ಭಾರತಿಯಂತಹವಳು ರಾಜನಿಗೆ ತಾಳ ಹಾಕಲು ಬಂದರೆ ಅವನಿಗೆ ಬಹಳ ಖುಷಿಯಾಗಿದ್ದಿರಬೇಕು, ಇಬ್ಬರೂ ಬೇಕಾದ ಹಾಗೆ ಕುಣಿದು ಕುಪ್ಪಳಿಸಿದರು. ಮಧ್ಯದಲ್ಲಿ ನಲುಗಿದವಳು ನಾನು,

ನನ್ನಂತಹವರು ಇದ್ದರೆಷ್ಟು ಬಿಟ್ಟರೆಷ್ಟು ಸುಮಿತ್ರಾ. ಇಂದಿನ ಪ್ರಪಂಚದಲ್ಲಿ ಹತ್ತು ಜನರೊಂದಿಗೆ ಮೈಮೇಲಿನ ಗಮನವಿಲ್ಲದೆ ಕುಣಿದು ಕುಪ್ಪಳಿಸಿದರೇನೇ ಅವರು ನಾಗರಿಕರು. ಅಂತೂ ರಾಜನ ದೃಷ್ಟಿಯಲ್ಲಿ ನಾನೊಂದು ಮುದುಕಿ, ಅಜ್ಜನ ಕಾಲದ ಭಾವನೆಗಳನ್ನು ಹೊತ್ತಗೊಡ್ಡು, ಹಾಗೆಂದು ಅಭಿಪ್ರಾಯ ಬದಲಿಸಿ ನಾನು ಕುಣಿಯಲಾರದಾದೆ. ಆದರೆ ನನ್ನನ್ನು ಅವನು ಮನಸಾರೆ ಪ್ರೀತಿಸಿ ಕುಣಿಯುವಂತೆ ಮಾಡಿದ್ದರೆ ನಾನು ಬದಲಾಗುತ್ತಿದ್ದೆನೇನೋ.

ಮೊದಲಿನಿಂದಲೂ ಗಂಭೀರ ಸನ್ನಿವೇಶಗಳಿಗೆ ಅಳವಡಿಸಿದ್ದ ನನ್ನ ಮನೋಭಿಪ್ರಾಯಗಳನ್ನ, ಬಣ್ಣದ ಚಿಟ್ಟೆಗಳ ಮನೋಗತಿಗೆ ಇಳಿಸಲು ನನ್ನಿಂದ ಸಾಧ್ಯವಾಗಲಿಲ್ಲ. ಆದರೆ ಅವನು ಮಾತ್ರ ಎಡಗೈಯ ವಾಚನ್ನು

ಬಲಗೈಗೆ ತಂದ, ಉಲ್ಲನ್ ಪ್ಯಾಂಟು ಧರಿಸಿ ಸ್ವಚ್ಛ ಬಿಳೀ ಟೆರಿಲಿನ್ ಷರಟು ಧರಿಸಿ ರಾಜಕುಮಾರನಂತಿದ್ದ ರಾಜ ಬಣ್ಣ ಬಣ್ಣದ ಹುಲಿ ಪಟ್ಟೆಗಳಿರುವ ಬುಷ್‌ಕೋಟುಗಳನ್ನು ಧರಿಸಲಾರಂಭಿಸಿದ. ಕಣ್ಣಿಗೆ ಕರೀ ಕನ್ನಡಕ ಬಂದಾಯಿತು.

ಇವೆಲ್ಲಾ ತಪ್ಪು ಎಂದು ನಾನು ಹೇಳಲಿಲ್ಲ. ಆದರೆ ಚೆಲ್ಲುತನದ ಸಂಕೇತಗಳಾದ ಅವು ಮೊದಲೇ ಚೆಲ್ಲುತನದ ಕಡೆಗೆ ವಾಲಿದ ಅವನ ಮನಸ್ಸನ್ನು ಅಧೋಗತಿಗೆ, ತಂದುವು. ಇದಕ್ಕೆಲ್ಲಾ ಕಾರಣ ಭಾರತಿಯೇ ಎಂದು ಮಾತ್ರ ಧೈರ್ಯವಾಗಿ ಹೇಳಬಲ್ಲೆ. ನನ್ನ ಗೆಳೆತನದಲ್ಲಿ, ಬಾಲಕನಾಗಿದ್ದ ರಾಜ ಪರಿಪಕ್ವವಾಗುತ್ತಿದ್ದಾಗ ಮತ್ತೆ ಬಾಲಚೇಷ್ಟೆಗಳು ತೋರ್ಪಡಿಸಿದರೆ ಕಾರಣ ಮತ್ತೇನು ಹೇಳು.

೧೭

ನನ್ನ ಮನೋವೇದನೆ ಕ್ರಮೇಣ ಪ್ರಬಲವಾಗತೊಡಗಿತು. ಹೇಳಿಕೊಳ್ಳಲು ಸಹ ಯಾರೂ ಇರಲಿಲ್ಲ "ಮಧುರ ಎಲ್ಲಿ ಹೋದಳು" ಅಂತೀಯಲ್ವಾ ? ಎರಡು ತಿಂಗಳ ರಜಾದ ಮೇಲೆ ಅಕ್ಕನ ಊರಾದ ನಾಗಪುರಕ್ಕೆ ಹೋಗಿದ್ದಳು.

ಮಧುರಾ ಹಿಂತಿರುಗಿ ಬರುವಷ್ಟರಲ್ಲಿ ನಾನು ಜೀವಚ್ಛವವಾಗಿದ್ದೆ. ನನ್ನ ತಾರುಣ್ಯವೇ ಕಳೆದು ಹೋಗಿ ಮುಪ್ಪಡರಿದಂತೆ ಕಂಡಿತು. ಅವಳು ನನ್ನನ್ನು ನೋಡಿದಾಗ ನಾನು ಅನಾಥಳಾಗಿಬಿಟ್ಟಿದ್ದೆ. ನಾನು ಅತ್ಯಧಿಕವಾಗಿ ಪ್ರೀತಿಸಿ, ಅವರಿಗಾಗಿ ಏನು ಬೇಕಾದರೂ ಮಾಡಲು ತಯಾರಿದ್ದ, ಅಪ್ಪನನ್ನೂ, ರಾಜನನ್ನೂ ಇಬ್ಬರನ್ನೂ ಕಳೆದುಕೊಂಡು ಬಿಟ್ಟಿದ್ದೆ" ಎಂದು ಸುಮ್ಮನೆ ಕುಳಿತುಬಿಟ್ಟಳು ಸರಳಾ.

ಸುಮಿತ್ರೆಯೂ ಮಾತನಾಡಲಿಲ್ಲ, ಹೇಗೆ ಸಾಧ್ಯ. ಮಾತನಾಡಲು

ಉಸಿರೇ ತಿರುಗದಂತೆ ಬಿಕ್ಕುತ್ತಿದ್ದ ಸುಮಿತ್ರೆಗೆ ಮಾತು ಬರಲಿಲ್ಲ. ಒಂದು ವ್ಯಕ್ತಿಗೆ, ಅದರಲ್ಲೂ, ಸರಳೆಯಂತಹ ಒಳ್ಳೆಯ ಜೀವಿಗೆ ಬಾಳಿನಲ್ಲಿ ಬರಿಯ ಅನ್ಯಾಯಗಳೇ ? ಅದು ದೇವರ ಪರೀಕ್ಷೆಯೆ ? ಪರೀಕ್ಷೆಗೂ ಇತಿ ಮಿತಿ ಬೇಡವೆ ? ಈ ಅನ್ಯಾಯ ತಿದ್ದಲು ಸಾಧ್ಯವೇ ಇಲ್ಲವೇ ? ದುಃಖ ಒತ್ತರಿಸಿ ಬರುತ್ತಿತ್ತು. ಆದರೂ ಮೌನವಾಗಿ ಕುಳಿತ ಸರಳೆಯನ್ನು ಕಂಡು ಸುಮಿತ್ರೆಗೆ ಹೇಗೆ ಹೇಗೋ ಆಯಿತು. "ಅಪ್ಪ ಎಲ್ಲಿ ಹೋದರು ಸರಳಕ್ಕ ನಿನ್ನನ್ನು ಬಿಟ್ಟು" ಕಹಿನಗೆ ನಕ್ಕು ನುಡಿದಳು ಸರಳಾ, "ಮತ್ತೆಲ್ಲಿಗೆ ಹೋಗುತ್ತಾರೆ. ಸತ್ತು ಸ್ವರ್ಗಕ್ಕೆ ಹೋದರು."

"ಎಷ್ಟು ಸಲೀಸಾಗಿ ಹೇಳಿಬಿಡ್ತಿ, ಸರಳಾ."

"ಇದರಲ್ಲಿ ಸಲೀಸೇನು, ಕ್ಲಿಷ್ಟವೇನು ಸುಮಿತ್ರಾ. ಒಂದು ದುಃಖವಾದರೆ ಅಳ್ತೀವಿ, ಎರಡಾದ್ರೆ ಅನುಭವಿಸ್ತೀವಿ, ಆದರೆ ಜೀವನದಲ್ಲಿ ಎಲ್ಲವೂ ಮನಸ್ಸಿನ ಆಘಾತಗಳೇ ಆದರೆ! ಅಳಲು ಚೈತನ್ಯ ಎಲ್ಲಿ ಉಳಿಯುತ್ತೆ ಹೇಳು? ಅಳುತ್ತಲೇ ಕೂಡಬಹುದು. ಅದರಿಂದ ಬರೋ ಲಾಭ? ಮನಸ್ಸು ಕೆಟ್ಟದ್ದೂ ಅಲ್ಲದೆ ದೇಹವೂ ನಶಿಸುತ್ತದೆ. ಈ ದೇಹಕ್ಕೆ ಕೊಡುವಷ್ಟೂ ಶಿಕ್ಷೆ ಕೊಟ್ಟಿದ್ದೇನೆ. ಆದರೂ ತಡೆದುಕೊಂಡಿದೆ ಈ ಘಟ. ಈಗ ಅಳಲಾರೆ, ಅಳುವ ನೊಂದ್ಕೊಳ್ಳುವ ಸ್ಥಳ ಹೃದಯದಲ್ಲಿ ಸತ್ತು ಹೋಗಿದೆ.

ಒಂದು ದಿನ ಮುಚ್ಚಿಡಬಹುದು. ಕೆಲವು ದಿನ ಮುಚ್ಚಿಡಬಹುದು ಮನಸ್ಸಿನ ಬೇಗುದಿ. ಆದರೆ ಎಲ್ಲಾ ಕಾಲವೂ ಹಾಗಿರಲು ಸಾಧ್ಯವಿಲ್ಲ. ರಾಜನಿಂದ ಪ್ರೇಮ ತಿರಸ್ಕೃತಳಾದಾಗಿನಿಂದ ನಾನು ಊಟ ನಿದ್ದೆಗಳನ್ನು ಬಿಟ್ಟುಬಿಟ್ಟೆ. ಇದು ಮೊದಲು ಕಂಡುಹಿಡಿದು, ಕಾರಣ ತಿಳಿಯದೆ ನನ್ನ ದೇಹಕ್ಕೆ ಏನೋ ಖಾಯಿಲೆಯೆಂದು ಮದ್ದು ಮಾಡಿದರು ಅತ್ತೆ. ಅವರ ಮದ್ದುಗಳನ್ನು ಬಚ್ಚಲಲ್ಲಿ ಚೆಲ್ಲುತ್ತಿದ್ದೆ ಅವರಿಗೆ ಕಾಣದಂತೆ.

ಮನಸ್ಸಿನ ರೋಗಕ್ಕೆ ಮದ್ದೆಲ್ಲಿದೆ ? ರೋಗದ ಉಗಮ ತಿಳಿದಿದ್ದರಾದರೂ ಮನಶ್ಶಾಸ್ತ್ರಜ್ಞರ ಬಳಿ ಹೋಗಬಹುದು. ಆದರೆ ಪ್ರೇಮದಲ್ಲಿ ನಿರಾಶೆ ಹೊಂದಿದವರಿಗೆ ಅವರು ತಾನೆ ಏನು ಮಾಡಿಯಾರು ? ಬೇರೆ ಮದುವೆಯಾಗು ಎನ್ನಬಹುದು. ಬೇರೆ ಮದುವೆಯಾಗುವಂತಹ ಮನೋಭಾವ ನಾನು ಪಡೆದಿದ್ದರೆ ರಾಜನ ದುರ್ಗುಣದಿಂದ ನಾನೇಕೆ ನೊಂದು

ಕೊಳ್ಳುತ್ತಿದ್ದೆ. ನಾನೂ ಅವನಂತೆ ಹಲಕೆಲ ಗೆಳೆಯರೊಂದಿಗೆ ಸುತ್ತು ತ್ತಿದ್ದೆನೇನೋ.

ನನ್ನಂತಹವರ ಪಾಲಿಗೆ ಉಳಿದುದು ಎರಡೇ ಮಾರ್ಗ. ಒಂದು ಆತ್ಮ ಹತ್ಯೆ. ಅದಕ್ಕೆ ನನಗೆ ಧೈರ್ಯವಿರಲಿಲ್ಲ. ಎರಡನೆಯದು ಚಿರವಿರಹಿಯಾಗಿ ಉಳಿಯುವುದು. ನಾನು ಎರಡನೇ ಗುಂಪಿಗೆ ಸೇರಿದವಳು. ಯಾವುದರಲ್ಲೂ ಆಸಕ್ತಿಯಿರಲಿಲ್ಲವಾದರೂ. ಹುಟ್ಟಿದ ತಪ್ಪಿಗೆ ಬದುಕಬೇಕು, ತಂದೆಯ ಜೊತೆಗೆ ನಿಲ್ಲಬೇಕು ಎಂಬ ನಿರ್ಧಾರ ನನ್ನನ್ನು ಬದುಕಿಸಿತ್ತು.

ರಾಜನಿಗೆ ನನ್ನಲ್ಲಿ ಪ್ರೇಮ ಉಳಿದಿದ್ದು. ಯಾರದೋ ಹಿರಿಯರ ಬಲ ವಂತಕ್ಕೆ ಅಥವಾ ಪರಿಸ್ಥಿತಿಯ ಕೂಸುಗಳಾಗಿ ನಾವಿಬ್ಬರೂ ಅಗಲಬೇಕಿದ್ದಲ್ಲಿ. ನಾನು ಯಾವ ತ್ಯಾಗಕ್ಕೂ ಸಿದ್ಧಳಿದ್ದೆ. ನನ್ನನ್ನು ಬಲಿಮಾಡಲು ತಯಾ ರಿದ್ದ ರಾಜನಿಗಾಗಿ. ಆದರೆ ತನ್ನೊಂದಿಗೆ ಚಕ್ಕಂದ ಆಡಲು. ಹೆಣ್ಣನ್ನೇ ಮುಖ್ಯ ಮಾಡಿಕೊಂಡು ನೀನೇನು ಮಹಾ. ನೀನಿಲ್ಲದಿದ್ದರೆ ನನಗೆ ಭಾರತಿ ಇಲ್ಲವೆ ಎಂಬ ಧೂರ್ತತೆ ತೋರಿಸಿದ ರಾಜನ ವರ್ತನೆ ನನ್ನನ್ನು ಹೊಡೆದಿತ್ತು. ನನ್ನ ಅಭಿಮಾನಕ್ಕೆ ದೊಡ್ಡ ಪೆಟ್ಟು ತಗುಲಿತ್ತು. ಸ್ವಾಭಾವಿಕವಾಗಿ ನನ್ನ ಆತ್ಮಗೌರವಕ್ಕೆ ಹೆಚ್ಚು ಬೆಲೆ ಕೊಡುತ್ತಿದ್ದ ನಾನು. ಅಭಿಮಾನಿ. ನನ್ನ ಅಭಿಮಾನವೆಲ್ಲಾ ಮುದುರಿ ಅವನ ಎದುರಿಗೆ ಪ್ರತಿಬಾರಿಯೂ 'ನನ್ನ ಕೈ ಬಿಡಬೇಡ' ಅಂತ ಗೀಜಿ ಗಿಂಜಿ ನನ್ನ ಸ್ವ-ಗೌರವವನ್ನೇ ಕಳೆದುಕೊಂಡಿದ್ದ ನನ್ನನ್ನೇ ಒಂದು ಆಟದ ವಸ್ತುವಾಗಿ ಪ್ರೇಮದ ಆಟಕ್ಕೆ ಉಪಯೋಗಿಸಿ ಕೊಂಡ ಅವನ ವಿಷಯವಾಗಿ ಸೆಟೆದು ನಿಂತಿತು. ಇದುವರೆಗೂ ಮುದುಡಿದ್ದ ನನ್ನ ಅಭಿಮಾನ.

ಎದುರಿಗೆ ಪ್ರೇಮದ ಸವಿನುಡಿಗಳನ್ನಾಡಿ, ಮರುಳು ಮಾಡಿ. ನನ್ನಿಂದ ಏನೇನು ಪಡೆಯಲು ಸಾಧ್ಯವೋ ಅವೆಲ್ಲಾ ಪಡೆದು ಬೆನ್ನಹಿಂದೆ ಚೂರಿ ಚುಚ್ಚುವ ಮನೋಧರ್ಮ ಪಡೆದನಲ್ಲಾ ಅವನು ಎಂದುರೋಸಿಹೋಯಿತು. ನನ್ನ ಜೀವ. ಅವನೆದುರಿಗೆ ಅವನಿಗಿಂತ ಚೆನ್ನಾಗಿ ಬಾಳಿ, ಲೋಕದ ಎದುರಿ ನಲ್ಲಿ ಸೈ ಎನಿಸಿಕೊಳ್ಳಬೇಕು ಎಂಬ ಛಲವೂ ಬಂತು. ಆ ಛಲವೂ ಒಂದು ವಿಧಕ್ಕೆ ಒಳ್ಳೆಯದೇ ಆಯಿತು. ಹಲವು ಸಲ ಆತ್ಮಹತ್ಯೆಯ ಕಡೆಗೆ ವಾಲು ತ್ತಿದ್ದ ನನ್ನ ಉದ್ದೇಶದಿಂದ ನನ್ನನ್ನು ವಿಮುಖ ಮಾಡಿತು ಆ ಛಲ.

ಆ ಹಟ ಆತ್ಮಹತ್ಯೆಯಿಂದ ನನ್ನ ಮನಸ್ಸನ್ನು ತಿರುಗಿಸಿದರೂ ರಾಜ ನನ್ನು ಮರೆತು ಬಾಳಲು ಮಾತ್ರ ಸಹಾಯ ಮಾಡಲಿಲ್ಲ. ಊಟ ನಿದ್ದೆ ಇಲ್ಲದೇ ದಿನೇ ದಿನೇ ಸವೆದು ಹೋಗುತ್ತಿದ್ದ ನನ್ನ ಮೇಲೆ, ಅತ್ತೆ, ಅಪ್ಪನಿಗೆ ದೂರು ಕೊಟ್ಟಿದ್ದಿರಬೇಕು.

ನನ್ನ ಬಾಳಿನ ಈ ಘಟನೆ ಕಳೆದು ಇನ್ನೂ ಒಂದು ತಿಂಗಳು ಕಳೆದಿರ ಲಿಲ್ಲ. ಅಪ್ಪ ನನ್ನನ್ನು ಕೇಳಿದರು. "ಏನು ಸರಳಾ ನೀನು ಸರಿಯಾಗಿ ಊಟಾನೇ ಮಾಡೋಲ್ವಂತೆ ಈಗೊಂದು ತಿಂಗಳಿಂದ. ಪಂಕಜ ಹೇಳಿದಳು. ಯಾಕಮ್ಮ ಆರೋಗ್ಯ ಸರಿಯಾಗಿದೆ ತಾನೆ ?"

"ಇದೇಪ್ಪ ಅತ್ತೆ ಬಹಳ ಪ್ರೀತಿಯಿಂದ ಹೆಚ್ಚು ಹೆಚ್ಚಾಗಿ ಬಡಿಸಿ ಬಿಡ್ತಾರೆ. ತಿನ್ನಲಾರದೆ ಬಿಟ್ಟುಬಿಟ್ಟರೆ ಹಾಗಂದುಕೋತಾರಪ್ಪ."

"ಅಷ್ಟೇನಾ ? ಹಾಗಾದ್ರೆ ಹುಷಾರಾಗಿದೀಯಾಮ್ಮ" ನಮ್ಮ ತಂದೆಗೆ ಸಂಶಯ.

"ಹೂಂಪ್ಪ"----ನಂಬಿಸಲು ಹೇಳಿದೆ.

"ಏನೋ ನೋಡಮ್ಮ, ನನ್ನ ಜೀವ ನೀನು. ನೀನು ಸರಿಯಾಗಿದ್ರೆ ನನಗೆ ಸಾಕು. ಹೊರಗಡೆ ಬೇರೆ ದುಡೀತೀಯಮ್ಮ. ಈಗ ನೀನೇ ಮನೆಗೆ ಆಧಾರ. ಸ್ವಲ್ಪ ಎಚ್ಚರವಾಗಿರಬೇಕಮ್ಮ. ನೀನು ಮಲಗಿಬಿಟ್ಟರೆ ಹೇಗೆ ?" ವ್ಯಾಕುಲದಿಂದ ಹೇಳಿದರು.

"ಆಗಲಪ್ಪ. ಅಂತ ಆತಂಕ ಏನೂ ಇಲ್ಲಪ್ಪ"

"ಅಂದ ಹಾಗೆ. ರಾಜ ಏನೋ ಇತ್ತೀಚೆಗೆ ಕಾಣ್ತಾನೇ ಇಲ್ಲ. ಫೋನ್ ಏನಾದ್ರೂ ಮಾಡ್ತಾ ಇರ್ತಾನಾಮ್ಮಾ."

"ಓ, ಮಾಡ್ತಾನೇ ಇರ್ತಾರಪ್ಪ"

"ಯಾಕಂತೆ ಮನೇಕಡೆ ಬರಲಿಲ್ಲ.

ಅವರಿಗೆ ಹೇಗೆ ಹೇಳಲಿ ? ಏನೆಂದು ಹೇಳಲಿ ? ನನ್ನ ಬಾಳು ಬರಿ ದಾಗಿದೆ. ರಾಜನಿಗೆ ನಾನು ಬೇಡವಾಗಿ ಪತಿತಳಾಗಿದ್ದೇನೆ ಎಂದು "ನನ್ನನ್ನೇ ಜೀವ" ಅಂತ ತಿಳಿದು ಇನ್ನೂ ಪ್ರಾಣ ಇಟ್ಟುಕೊಂಡಿರೋ ಅವರಿಗೆ ಯಾವ ಬಾಯಲ್ಲಿ ಹೇಳಲಿ. ಅವರ ದುರ್ಬಲ ನರಗಳನ್ನು ಘಾಸಿಗೊಳಿಸಲು ನನ ಗಿಷ್ಟವಾಗಲಿಲ್ಲ.

"ತುಂಬಾ ಕೆಲಸಾಂತಪ್ಪ. ಬರಲು ಪುರಸತ್ತೇ ಆಗೋಲ್ಲಾಂದ್ರು, ಪರವಾಗಿಲ್ಲ ಅಂದೆ."

ಈ ಸುಳ್ಳು ಹೇಳಿದ ಕೂಡಲೇ ನನಗೆ ದುಃಖ ಉಕ್ಕಿ ಬಂತು. ಇನ್ನೆಲ್ಲಿ ರಾಜ? ಅವನಿಗೆ ಪುರಸತ್ತಿಲ್ಲದೆ ಏನು? ನಿಜ. ಅವನಿಗೆ ಪುರಸತ್ತಿಲ್ಲ ನನ್ನನ್ನು ನೋಡಲು. ನಾನು ಫೋನ್ ಮಾಡಿದಾಗಲೆಲ್ಲಾ ಅವನು ಕೊಡುತ್ತಿದ್ದ ಉತ್ತರ, ಅದೇತಾನೇ. 'ಬಂದೇಪ್ಪ' ಎಂದು ನನ್ನ ಕೋಣೆಗೆ ಓಡಿ ತೃಪ್ತಿಯಾಗುವಷ್ಟೂ ಅತ್ತೆ. ಪಾಪ ! ಅಪ್ಪನಿಗೆ ತಿಳಿಯಲೇ ಇಲ್ಲ.

ನಾನು ಹಾಗಂದುಕೊಂಡದ್ದು ಸುಳ್ಳು. ಮತ್ತೆ ಎರಡೇ ದಿನದಲ್ಲಿ ರಾಜನ ಕುರಿತು ವಿಚಾರಿಸಿದರು. ಅಪ್ಪ ನಾನು ನಶಿಸಿ ಹೋಗುತ್ತಿದ್ದುದಕ್ಕೂ ರಾಜನು ಬರದೇ ಇದ್ದುದಕ್ಕೂ ಗಂಟು ಹಾಕಿದ್ದರು. ಅದಕ್ಕಾಗಿ ತನಿಖೆಗೆ ಹೋಗಿದ್ದರೇನೋ. ಅವರಿಗೂ ತಿಳಿಯಿತು ರಾಜನಿಗೇಕೆ ಪುರಸತ್ತಿಲ್ಲ ಎಂದು. ನೇರವಾಗಿ ಮನೆಗೆ ಬಂದವರೆ "ಇಷ್ಟೊಂದು ಅಭಿಮಾನವಾದರೆ ಹೇಗೆ ಸರಳಾ. ರಾಜನ ವಿಷಯವನ್ನು ನನ್ನಿಂದ ಮುಚ್ಚಿಡಬಹುದೇನಮ್ಮ" ಎಂದರು.

ಆದಷ್ಟು ಮುಖದಲ್ಲಿ ಯಾವ ಭಾವವನ್ನೂ ತೋರಗೊಡದೆ "ಏನಾಯಿತಪ್ಪ." ಎಂದೆ.

"ಆಗೋದೇನಮ್ಮಾ ಮಣ್ಣು. ಜನಗಳು ಹೀಗೆ ಕುಲಗೆಟ್ಟು ಹೋಗ್ತಾರೆ ಅಂತ ನಾನಂದುಕೊಳ್ಳಲಿಲ್ಲ" ಅಂತ ರಭಸದಿಂದಲೇ ಅಂದರೂ ತಕ್ಷಣವೇ "ರಾಜನಿಗೆ ಯಾವುದೋ ಭಾರತಿ ಅನ್ನೋ ಹುಡುಗಿ ಗಂಟು ಬಿದ್ದಿದ್ದಾಳಂತಮ್ಮ. ಅವಳೊಂದಿಗೆ ತಿರುಗೋಕೆ ಅವನಿಗೆ ಸಮಯ ಸಾಲದು. ಇನ್ನು ಇಲ್ಲಿ ಬರೋಕೆ ಪುರಸತ್ತೆಲ್ಲಿ? ಎಂದು ಬಹಳ ನಿರಾಶೆಯಿಂದ ನುಡಿದರು.

"ಸುಳ್ಳಿರಬಹುದು ಬಿಡಪ್ಪ ಇಂದಿಲ್ದೆ ಇದ್ರೆ ನಾಳೆ ಬರ್ತಾರೆ" ಇನ್ನೂ ಅವರನ್ನು ನಂಬಿಸಲು ಪ್ರಯತ್ನಿಸುತ್ತಲೇ ಇದ್ದೆ.

"ಸುಳ್ಳಲ್ಲಮ್ಮ, ನಾನೇ ಕಣ್ಣಾರೆ ನೋಡಿದೆ. ವಿಷಯ ಹೀಗಂತ ತಿಳಿದ ಕೂಡಲೇ ಅವನೊಂದಿಗೆ ನೇರ ಮಾತನಾಡೋಣ ಅಂತ ಕಷ್ಟಪಟ್ಟು ಅವನ ಹೋಟೆಲ್ ಕೋಣೆಗೆ ಹೋದೆ. ನಿನ್ನೆ ಬೆಳಿಗ್ಗೆ ಬೇಗ ಹೋದ್ನಲ್ಲಾ ಅಲ್ಲಿಗೇ ಹೋದದ್ದು. ಅಷ್ಟು ಹೊತ್ತಿಗೇ ಅವಳು ಅಲ್ಲಿ ಬಂದಿದ್ದಳು. ಒಂದು ಹರೆಯದ ಹುಡುಗಿ ಹೋಟಲಿನ ಕೋಣೆಗೆ ಬರೋದೂಂದ್ರೇನು !

ಪತ್ನಿಯಾಗಿದ್ದರೂ ಸಹ ಬರಲು ಹೆದರಬೇಕಾದ ಸ್ಥಳ. ನಾನು ಹಿಂತಿರುಗಿ ಬಂದು ಬಿಡೋಣಾಂತ ಅದ್ಕೊಂಡೆ ಆದರೂ ಹಿಂತಿರುಗೋದು ಒಂದು ಮಹಾ ದೊಡ್ಡ ಕೆಲಸ ಅಲ್ಲ. ಸಾಧ್ಯವಾದರೆ ಮಾತನಾಡೇ ಹೋಗೋಣ ಅಂತ ಕುಳಿತಿದ್ದೆ.

ರಾಜ ಏನೋ ಅತಿ ವಿನಯವಾಗಿ ಮಾತನಾಡಿದ. ಆದರೆ ಆ ಹುಡುಗಿ ಒಂದು ಘಳಿಗೇನಾದ್ರೂ ಅವನನ್ನು ಬಿಟ್ಟು ದೂರ ಹೋಗಲಿಲ್ಲ. ನನಗೆ ಮಾತಾಡೋ ಅವಕಾಶ ಸಿಕ್ಕಲೆ ಇಲ್ಲ, ಆದರೂ ಅದೆಂತ ಹೆಣ್ಣು ಸರೂ, ಅವಳು. ಇನ್ನೂ ಪರಿಚಯ ಆಗಿ ಆರು ತಿಂಗಳಾಗಿಲ್ಲ. ಅವಳ ನಡತೆ ಅವ ನೊಂದಿಗೆ ಛಿ ! ಛಿ! ಇವನ ಯೋಗ್ಯತೇಗೆ ಅಂತ ಬಂದುಬಿಟ್ಟೆ.

ಅದರೂ ಮನಸ್ಸು ನಿಲ್ಲಲಿಲ್ಲ. ಸಂಜೆ ತಿರುಗಿ ಹೋದೆ. ಇಬ್ಬರೂ ಚಿತ್ರಕ್ಕೆ ಹೋಗಿದ್ದಾರೇಂತ ಸುದ್ದಿ ಕೊಟ್ರು ಹೋಟಲಿನವ್ರು. ಬಂದದಾರಿಗೆ ಸುಂಕವಿಲ್ಲ ಅಂತ ಬಂದುಬಿಟ್ಟೆ. ಈಗ ದಾರೀಲಿ ನಮ್ಮ ರಾಮು ಸಿಕ್ಕಿದ. ಅದೂ ಇದೂ ಮಾತಾಡ್ತಾ ರಾಜನ ವಿಷಯ, ಬಹಳ ಹಗುರವಾಗಿ ಮಾತಾ ಡ್ಬಿಟ್ಟ. ನನಗೇಕೋ ಬಹಳ ಬೇಸರ ಆಯ್ತು. ಇನ್ನು ರಾಜನ್ನ ಹೋಗಿ ಮಾತಾಡ್ಸೋದೇನೂಂತ ವಾಪಸ್ಬಂದ್ಬಿಟ್ಟೆ.

ನೊಂದುಕೋ ಬೇಡ ಸರಳಾ. ತಾನು ಮಾಡ್ತಾ ಇರೋದು ತಪ್ಪು ಅಂತ ಈವತ್ತಲ್ಲದಿದ್ರೆ ನಾಳೆ ತಿಳ್ಕೊಂಡೇ ತಿಳ್ಕೋತಾನೆ. ಎಲ್ಲಾ ಸರಿ ಹೋಗುತ್ತವಮ್ಮ" ಎಂದು ಆಶ್ವಾಸನೆ ನೀಡುತ್ತಾ ನುಡಿದರು.

ಅದುಮಿಟ್ಟ ದುಃಖ ಎಲ್ಲಾ ಒಟ್ಟಿಗೇ ಹೊರ ಹೊಮ್ಮಿತು. ಅಪ್ಪನ ಬಳಿ ಮುಚ್ಚು ಮರೆಯೇಕೆ? ಅವರಲ್ಲದಿದ್ದರೆ ನನಗಿನ್ಯಾರು ಆತ್ಮೀಯರಿದ್ದಾರೆ. ಆತನಿಗೆ ತಿಳಿಯದೆ ಇದ್ದಿದ್ದರೆ ಅಜ್ಞಾತದಲ್ಲಿಡಬಹುದಿತ್ತು. ಈಗ ಅವರಿಗೆ ನನಗಿಂತ ಹೆಚ್ಚು ಗೊತ್ತಿದೆ.

"ನನಗೆ ಪ್ರತಿ ಒಂದೂ ಗೊತ್ತಪ್ಪ. ಎಲ್ಲಾ ಸರಿಹೋಗಬಹುದು ಅನ್ನೋ ನಿನ್ನ ಭರವಸೆ ನಿಜವಾಗಲಾರದಪ್ಪ. ನನ್ನ ಜೀವನದಲ್ಲಿ ಇನ್ನು ರಾಜ ಇಲ್ಲ. ಇಲ್ಲವೇ ಇಲ್ಲ" ಎಂದು ಗಳಗಳ ಅತ್ತು ಬಿಟ್ಟೆ.

ನಡದದ್ದೆಲ್ಲಾ ನುಡಿದುಬಿಟ್ಟೆ. ನನ್ನ ಹೃದಯವೇನೋ ಹಗುರ ವಾಯಿತು. ಆದರೆ ಅಪ್ಪ ಕುಸಿದು ಬಿಟ್ಟರು. ಈ ಬಾರಿ ಕುಸಿದವರು

ಏಳಲೇ ಇಲ್ಲ. ಮಾತೂ ಸತ್ತು ಹೋಯಿತು. ಡಾಕ್ಟರರತಂತಿಯ ಮೇರೆಗೆ ಅಣ್ಣಂದಿರೆಲ್ಲಾ ಬಂದರು.

ಭೂಷಣ ತನ್ನ ಹೆಂಡತಿ ಮಾಯಾಳೊಂದಿಗೆ ಬಂದ. ಮಾಯಾ ಧನಿಕರ ಹುಡುಗಿಯಾದರೂ ಬಂಗಾರದ ಹುಡುಗಿ. ಅಪ್ಪ ಕಾಲನೊಂದಿಗೆ ಹೋರಾಡಿದ ಹತ್ತು ದಿನಗಳೂ ಅವರ ಪೂರ್ಣ ಸೇವೆ ಮಾಡಿದವಳು ಮಾಯ. ತಂದೆಯನ್ನು ಬಹಳವಾಗಿ ಹಚ್ಚಿಕೊಂಡಿದ್ದ ನಾನು ಅಧೀರಳಾಗಿದ್ದೇನೆಂದು ನನಗೆ ಧೈರ್ಯಕೊಡುತ್ತಿದ್ದವಳೂ ಅವಳೇ. ಭೂಷಣ ಅದೃಷ್ಟಶಾಲಿ ಒಳ್ಳೆಯ ಸಂಗಾತಿ ಸಿಕ್ಕಿದ್ದಾಳೆ.

ಹತ್ತು ದಿನಗಳ ನರಳಾಟದ ನಂತರ ಒಮ್ಮೆಲೆ ತಣ್ಣಗಾಯಿತು ಅಪ್ಪನ ಜೀವ. ಅಮ್ಮನನ್ನರಸಿ ಹೊರಟೇ ಹೋದರು. ನಾನು ಅನಾಥಳಾಗಿಬಿಟ್ಟೆ ಸುಮಿತ್ರಾ. ರಾಜನಿಗೆ ನಾನು ಹೇಳಿ ಕಳುಹಿಸಲಿಲ್ಲ. ಅವನು ಬರಲೂ ಇಲ್ಲ. ಪಾಪ ! ಅವನಿಗೆ ಪುರಸತ್ತೆಲ್ಲಿ ?

ಅಪ್ಪನ ಅಂತ್ಯಕರ್ಮಗಳ ನಂತರ ನೆಂಟರಿಷ್ಟರೆಲ್ಲಾ ಹೊರಟು ಹೋದರೂ ಉಳಿದವರು ನಮ್ಮ ಮನೆಯವರು ಮಾತ್ರ. ಎಲ್ಲರಿಗೂ ಸಮಸ್ಯೆಯಾದವಳು ನಾನು. ನನಗೂ ಅವನಿಗೂ ಮಧ್ಯೆ ನಡೆದ ವಿರಸವನ್ನೆಲ್ಲಾ ಮರೆತಿದ್ದ ಭೂಷಣ. ಮಾಯಾಳ ಸಂಗದಲ್ಲಿ, ವಾತ್ಸಲ್ಯಮಯನಾಗಿ ಪರಿವರ್ತನೆ ಹೊಂದಿದ್ದ. ವಾತ್ಸಲ್ಯದಿಂದ ಹೇಳಿದ ನನಗೆ–

"ಸರೂ, ಇನ್ನು ಇಲ್ಲಿನ ಸಂಸಾರಾನ್ನ ಬಂದ್ ಮಾಡ್ಬಿಟ್ಟು ಬೊಂಬಾಯಿಗೆ ಹೋಗಿ ಬಿಡೋಣ."

"ಅಣ್ಣ. ಕೆಲಸ ಬಿಡೋಕೆ ನಂಗಿಷ್ಟ ಇಲ್ಲಾಪ್ಪ" ಎಂದು ನೆವ ಹೇಳಿದೆ.

"ಏನು ಮಾತು ಸರಳಾ ಇದು ? ನಾವೆಲ್ಲಾ ಇದ್ದು ನೀ ದುಡೀಬೇಕಾ ಹೇಳು. ಏನೋ ಇಲ್ಲಿ ಅಪ್ಪ ಇದ್ದಾಗ ನಿನಗೂ ಹೊತ್ತು ಹೋಗೋಲ್ಲ ಅಂತ ನೀನು ಕಲಸಕ್ಕೆ ಸೇರಿದ್ರೂ ಬೇಡ ಅನ್ನಲಿಲ್ಲ. ಈಗ ನೀನೊಬ್ಬಳೇ ಇಲ್ಲಿ ಆ ಉದ್ಯೋಗಕ್ಕೋಸ್ಕರ ಅಂತ, ಯಾಕಮ್ಮ ಇರಬೇಕು ?"

"ಅಪ್ಪ ಇದ್ದ ಮನೇಲಿ ಇನ್ನೂ ಒಂದಿಷ್ಟು ದಿನ ಇರಬೇಕೂಂತ ನನಗೆ ಆಸೆ ಅಣ್ಣ" ಕಣ್ಣೆಲ್ಲಾ ಆಸೆಮಾಡಿ ನುಡಿದೆ. ನನ್ನ ಸಹಾಯಕ್ಕೆ ಬಂದವನು ಸತೀಶ್–

"ಹೌದಣ್ಣ. ಅವಳು ಎಷ್ಟು ದಿನ ಬೇಕೋ ಅಷ್ಟು ದಿನ ಇಲ್ಲಿರಲಿ ಆಮೇಲೆ ನಮ್ಮ ಯಾರಾದರೊಬ್ಬರ ಹತ್ತಿರ ಬರಲಿ" ಎಂದು ಸಲಹೆ ನೀಡಿದ.

"ಹೇಗಾಗುತ್ತೆ ಸತೀಶಣ್ಣ. ಒಬ್ಬಳನ್ನು ಬಿಟ್ಟು ಹೋಗೋದು ಚಂದ ಕಾಣೋದಿಲ್ಲ" ಎಂದಳು ಮಾಯಾ. ಉತ್ತರ ಕರ್ನಾಟಕದಲ್ಲಿ ಬೆಳೆದವಳು, ಭಾಷೆಯಲ್ಲಿ ಮಾತ್ರ ಅಂತರವಿತ್ತು.

"ಹೌದು. ಅತ್ತೇನ್ನೂ ಸಹ ಎಷ್ಟು ದಿನ ತಾನೇ ನಮ್ಮ ಸೇವೆಗೆ ಇರು ಅನ್ನೋಕಾಗುತ್ತೆ. ಆಕೆಯೇನೋ ಒಪ್ಪಿದ್ರೂ ನಮಗೇ ಸರಿಯಿಲ್ಲ" ಉಮೇಶನ ನುಡಿ, ಪಂಕಜಮ್ಮನ ಕುರಿತು.

ಅಲ್ಲಿಯೇ ಉಳಿಯಲು ನಾನು ಹಠಮಾಡಿದುದರ ಕಾರಣ, ಒಂದು ದೂರದ ಆಶಾಕಿರಣ. ಅಪ್ಪನ ಕಡೆಯ ನುಡಿಯಂತೆ ಇಂದಲ್ಲದಿದ್ರೂ ನಾಳೆ ರಾಜ ನನ್ನನಿಷ್ಠೆ. ಪ್ರೇಮಗಳನ್ನು ಅರಿತು ನನ್ನನ್ನು ತನ್ನವಳನ್ನಾಗಿ ಮಾಡಿ ಕೊಳ್ಳಬಹುದು. ದೂರ ಹೊರಟು ಹೋದರೆ ಆ ಅವಕಾಶ ಹೋಗಿಬಿಡು ತ್ತದೆ, ಎಂದು ಆಶಿಸಿತು ಮನಸ್ಸು. ದುಷ್ಟ ಆಸೆ ನಮ್ಮ ನಾಶಕ್ಕೇನೇ.

ಉಮೇಶ, ಸತೀಶ ಹೊರಟುಹೋದರು. ಭೂಷಣ ಮಾತ್ರ ತಂದೆ ಯವರ ಎಲ್ಲಾ ಲೆಖ್ಖಪತ್ರಗಳನ್ನೂ. ಆಗು ಹೋಗುಗಳನ್ನೂ ಪೂರ್ಣವಾಗಿ ಮುಗಿಸಿ ಹೋಗಲು ಇನ್ನೂ ಹದಿನೈದು ದಿನ ನಿಂತ. ಮಾಯಾಳ ಜೊತೆ ನನಗೆ ಬಹಳ ಹಿತವಾಗಿತ್ತು. ಒಮ್ಮೊಮ್ಮೆ ಆಕೆಗೆ ನನ್ನ ರಾಜನ ವಿಷಯ ಹೇಳಿಬಿಡಲೆ ಎಂದುಕೊಳ್ಳುತ್ತಿದ್ದೆ. ಆದರೆ ಆಕೆ ಭೂಷಣನ ಹೆಂಡತಿ. ಭೂಷಣ ಮೊದಲೇ ರಾಜನ ಶೀಲದ ವಿಷಯವಾಗಿ ಎಚ್ಚರಿಸಿದ್ದ. ಆಗ ವಾದವೇ ನಡೆದುಹೋಗಿತ್ತು, ಈಗ ಅವನಿಗೆ ತಿಳಿದರೆ ! ಅವನಿಗೆ ನಾನು ಮುಖ ತೋರಿಸುವುದಾದರೂ ಹೇಗೆ ? ಎಂದು ಸುಮ್ಮನಾದೆ.

"ಯೋಚನೆ ಮಾಡಿ ಹೇಳು ಸರೂ. ನೀನು ಚಿಕ್ಕ ಹುಡುಗಿಯಲ್ಲ, ನಿನಗೂ ಸ್ವತಂತ್ರವಾದ ವಿವೇಚನಾ ಶಕ್ತಿಯಿದೆ. ಆಲೋಚಿಸಿ ನಿನ್ನ ನಿರ್ಧಾರ ತಿಳಿಸು" ಎಂದು ಬಹಳ ಮಮತೆಯಿಂದ ಮಾತನಾಡಿದ ಭೂಷಣ. ಅವನ ಮುಂದೆ ನನ್ನ ಮುಖ ಎಲ್ಲಿ ಬಚ್ಚಿಟ್ಟುಕೊಳ್ಳಬೇಕೋ ತಿಳಿಯದಾದೆ.

ಎಷ್ಟು ಯೋಚಿಸಿದರೂ ನನಗೆ ನಿರ್ಧಾರ ಬರಲಿಲ್ಲ. ನನಗೆ ಬೆಂಗಳೂರಿ

ನಲ್ಲಿ ಯಾವ ತಾತನ ಗಂಟೂ ಇರಲಿಲ್ಲ. ಆದರೆ ಅದೇ ಒಂದು ಆಶಾಕಿರಣ ಅದಕ್ಕಾಗಿ ಉಳಿಯಲೇಬೇಕು. ಆದರೆ ಅವರಿಗೆ ಕಾರಣ ಏನೆಂದು ಹೇಳು ವುದು.

ಅಷ್ಟರಲ್ಲಿ ಮಧುರಾ ಬಂದಳು ಊರಿಗೆ. ಅವಳಿಗೆ ಸೂಕ್ಷ್ಮವಾಗಿ ನನ್ನಿಷ್ಟ ತಿಳಿಸಿದೆ. ಅವಳೇ ನಮ್ಮಣ್ಣನ ಬಳಿ ನನ್ನ ಸಮಸ್ಯೆ ಬಗೆಹರಿಸಿದಳು. "ನೋಡಿ ಭೂಷಣಣ್ಣ. ಏನೋ ಇನ್ನೂ ಸ್ವಲ್ಪ ದಿವಸ ಈ ಮನೇಲ್ಲೇ ಇರ್ಬೇಕೂಂತ ಬಯಸುತ್ತಾಳೆ ಸರಳಾ. ಬಹಳ ಹಚ್ಚಿಕೊಂಡಿದ್ಲು ಅಪ್ಪನ್ನ. ಅವಳಿರೋಕ್ಕೆ ಬಯಸೋವರ್ಗೂ ನಾನಿರ್ತೀನಿ ಅವಳ ಜೊತೇಲಿ. ಯೋಚನೆ ಮಾಡಬೇಡಿ. ಆಮೇಲೆ ಸರಳಾ ನಿಮ್ಮ ಹತ್ರ ಬರಲೇಬೇಕಲ್ಲ."

ಅವಳ ಮಾತಿಗೆ ಅಣ್ಣನಿಂದ ಇಲ್ಲವೆನ್ನಲಾಗಲಿಲ್ಲ. ಮಧುರಳ ಪರಿಚಯ ಅಣ್ಣನಿಗೆ ಪರೋಕ್ಷವಾಗಿ ಮಾತ್ರ. ಎಂದೂ ನೋಡಿರಲಿಲ್ಲ.

ಅಂದು ಅವಳೇ ಧೈರ್ಯವಾಗಿ ಮಾತನಾಡಿದುದರಿಂದ, ಆ ಧೈರ್ಯ ಶಾಲಿ ಹೆಣ್ಣಿನ ಜೊತೆ, ಮಮತೆಯ ತಂಗಿಯನ್ನು ಬಿಟ್ಟು ಹೋಗಬಹುದು ಎಂದು ಹೆಂಡತಿಯೊಂದಿಗೆ ಚರ್ಚಿಸಿ, ನನ್ನನ್ನು ನನ್ನ ಪಾಡಿಗೆ ಬಿಟ್ಟು ಹಿಂತಿರು ಗಿದರು ಈ ಒಳ್ಳೆಯ ದಂಪತಿಗಳು.

ಮಧುರಾ ನನ್ನ ಜೊತೆ ಉಳಿದಳು ಎನ್ನುವುದಕ್ಕಿಂತ ನಾನು ಮಧುರಳ ಜೊತೆ ಉಳಿದೆ ಎಂದರೆ ಹೆಚ್ಚು ಸಮಂಜಸ. ಒಂದೇ ವಾರದಲ್ಲಿ ನನ್ನ ಮನೆಯ ಪದಾರ್ಥಗಳನ್ನೆಲ್ಲಾ ಅವರ ಮನೆಗೆ ಸಾಗಿಸಿ, ಮಧುರಳ ಮನೆಯ ಸ್ಥಿರ ಅತಿಥಿಯಾದೆ.

ನನ್ನ ವಿಷಯ ತಿಳಿದ ಮಧುರಳ ತಾಯಿ ನನ್ನನ್ನು ತಾಯಿಯಂತೆ ಆದರಿಸಿದರು. ಹೆಜ್ಜೆ ಹೆಜ್ಜೆಯಲ್ಲೂ ನನ್ನ ಮನಸ್ಸಿಗೆ ನೋವಾಗದಂತೆ ನೋಡಿಕೊಳ್ಳುತ್ತಿದ್ದರು. ನಮ್ಮ ತಂದೆಯ ಮರಣದ ನೋವನ್ನೇನೋ ಮರೆತುಬಿಟ್ಟೆ. ಆದರೆ ರಾಜನಿಂದ ದೂರ ತಳ್ಳಲ್ಪಟ್ಟ ಆಘಾತದಿಂದ ಚೇತ ರಿಸಿಕೊಳ್ಳಲು ಆಗಲೇ ಇಲ್ಲ. ನನಗೆ ರಾಜನ ಗೀಳು ಹಿಡಿದಿತ್ತು. ನನಗೆ ಎಲ್ಲೆಲ್ಲೂ ಕಾಣುತ್ತಿದ್ದುದು ಒಂದೇ ಮುಖ, ರಾಜನ ಮುಖ. ನನ್ನ ಮನಸ್ಸು ಸದಾ ಬಯಸಿ ಕಿರುಚುತ್ತಿತ್ತು. "ನನಗೆ ರಾಜ ಬೇಕು" ಎಂದು. ಇದರಿಂದ ಎಚ್ಚೆತ್ತುಕೊಳ್ಳಲು ಚೈತನ್ಯ ಸಾಲದೆ ವಿಲಿ ವಿಲಿ ಒದ್ದಾಡುತ್ತಿದ್ದೆ.

ಸುಮಾರು ಒಂದು ತಿಂಗಳೇ ಕಳೆದಿರಬಹುದು, ರಾಜ ಮಧುರಳ ಮನೆಗೆ ಬಂದ. ನಾನು ಆಶಿಸಿದಂತೆ ನನ್ನ ಪ್ರೇಮ ಹಿಂತಿರುಗಿಸಲು ಬರಲಿಲ್ಲ ಅವನು. ಸುಮ್ಮನೆ ಸಮುದಾಚಾರದ ನಟನೆಗೆ ಮಾತ್ರ. ನನಗೆ ಅತೀವ ನಿರಾಶೆಯಾಯಿತು. "ಹಾಗಾದರೆ ಇನ್ನು ರಾಜ ನನ್ನವನಾಗಿ ಬರುವುದೇ ಇಲ್ಲ ಹತ್ತೂ ಜನರಂತೆ ನಾನೂ ಒಬ್ಬ ಗೆಳತಿ ಮಾತ್ರವೆ ಅವನಿಗೆ ! ಬೇಡ ನನಗಾಸ್ಥಳ ಬೇಡವೇ ಬೇಡ" ಎಂದು ನೊಂದು ಕೂಗಿತು ಹೃದಯ.

ಅವನು ಬಂದಾಗ ನಾನು ಮನೆಯಲ್ಲಿ ಇರಲಿಲ್ಲ. ಅವನು ಬಂದು ಅರ್ಥವಿಲ್ಲದ ನಾಟಕವಾಡಿ ನನ್ನ ಒಳ್ಳೆಯತನಕ್ಕೆ ಘಾಸಿ ಮಾಡಿ ನೋಯಿಸುವುದು ಮಧುರಳಿಗೆ ತಿಳಿದಿತ್ತು. ನನ್ನನ್ನು ಅವನಿಂದ ಪಾರುಮಾಡಲು ಬಹಳ ಪ್ರಯತ್ನವೂ ಪಡುತ್ತಿದ್ದಳು.

ಅವನು ಬಂದು ಹೋದುದನ್ನು ತಿಳಿದು ಬಹಳ ಅತ್ತುಬಿಟ್ಟೆ. ಅವನ ಬರುವಿಗೆ ಎಷ್ಟು ಕಾದು ಕುಳಿತಿದ್ದೆ !

ಅವನು ಬಿಚ್ಚು ಹೃದಯದಿಂದ, ಚಾಚಿದ ಕೈಗಳಿಂದ ಬಂದು ನನ್ನನ್ನೆಳೆದುಕೊಳ್ಳುವನೆಂದು ಹೇಗೆ ಕಲ್ಪನೆ ಮಾಡುತ್ತಿದ್ದೆ. ಎಲ್ಲವೂ ಪುಡಿ ಪುಡಿ. ಅವನು ಬಂದುದು ನಿಜ. ಆದರೆ ನನ್ನ ಊಹೆಗೆ ನಿಲುಕುವಂತಲ್ಲ.

ಅವನನ್ನು ನೋಡದೇ ಉಳಿದದ್ದೆ ಒಳ್ಳೆಯದಾಯಿತು. ಅವನು ಹಗಲಿರುಳೂ ತಿಂಗಳಲ್ಲಿ ಇಪ್ಪತ್ತೊಂಬತ್ತು ದಿನ ಭಾರತಿಯೊಂದಿಗೆ ಸುತ್ತಾಡಿ, ಯಾವಾಗಲೋ ಒಮ್ಮೆ ನೆನೆಸಿಕೊಂಡು ಬಂದು ನನ್ನನ್ನು ನೋಡುವ ಅಗತ್ಯವಿರಲಿಲ್ಲ. ನಾನು ಅವನ ಒಬ್ಬ ಸಾಧಾರಣ ಗೆಳತಿಯಾಗಿ ಉಳಿದಿರಲು ಸಾಧ್ಯವೇ ಇರಲಿಲ್ಲ. ಅವನ ಒಬ್ಬ ಪ್ರೇಮದ ಮಡದಿಯಾಗಿ ಬಾಳಬೇಕು ಇಲ್ಲದಿದ್ದರೆ ಅವನ ಬಾಳಿನಿಂದ ದೂರ ನಿಲ್ಲಬೇಕು.

ನನ್ನ ಅಭಿಮಾನ ತಿರಸ್ಕಾರವಾಗಿ ನಕ್ಕಿತು. ಇವನೇನು ಮಹಾರಾಜನೇ ಅಂತಃಪುರ ಸ್ತ್ರೀಯರೊಂದಿಗೆ ವಿಹರಿಸಲು. ಮಧುರಳಿಗೂ ಹಾಗೆಯೇ ಹೇಳಿದೆ. ನನ್ನ ಅಭಿಪ್ರಾಯವನ್ನು ಒಪ್ಪಿದಳು ಅವಳೂ ಸಹ.

ಕಾಟಾಚಾರದ ನಾಟಕ ಪ್ರೇಮ ನನಗೆ ಅಸಹ್ಯವಾಯಿತು. "ಅಂತಹ ಭಯಂಕರ ವ್ಯಕ್ತಿಯಿಂದ ದೂರವಿರುವುದೇ ನಿನಗೆ ಒಳ್ಳೆಯದು. ಅವನ ಒಂದೆರಡು ಒಲವಿನ ನುಡಿಗಳಿಗೆ ಸೋತು ಮತ್ತೆ ಆಪತ್ತು ತಂದುಕೊಳ್ಳುವ

ಮುನ್ನವೇ ಹೋಗಿಯಿತಲ್ಲಾ ಎಂದು ಸಂತೋಷಪಡು" ಎಂದು ನುಡಿಯಿತು ನನ್ನ ಅಂತರಂಗ. ಇದ್ದ ಒಂದು ಆಶಾಬಳ್ಳಿಯನ್ನು ನಿರಾಶೆಯ ಗರಗಸದಿಂದ ಕೊಯ್ದು ಕಿತ್ತುಹಾಕಿದೆ. ಇನ್ನು ಈ ಜನ್ಮದಲ್ಲಿ ಅವನನ್ನು ನೋಡುವ ಸಾಹಸಕೂಡ ಮಾಡುವುದಿಲ್ಲವೆಂದು ಪ್ರಮಾಣ ಮಾಡಿದೆ. ಮತ್ತೆ ಮೂರು ನಾಲ್ಕು ಸಲ ರಾಜನು ಬಂದಾಗಲೂ ನಾನು ಮನೆಯಲ್ಲೇ ಇದ್ದರೂ ಇಲ್ಲ ವೆಂದು ಹೇಳಿ ಕಳುಹಿಸಿಬಿಟ್ಟೆ.

"ನಂತರ ರಾಜ ಬರಲಿಲ್ಲ. ನನ್ನ ಬಾಳಿನಲ್ಲೇ ನಾನವನನ್ನು ಕಾಣ ಲಿಲ್ಲ" ಎಂದು ನೆಟ್ಟ ದೃಷ್ಟಿಯಿಂದ ಸೂರನ್ನೇ ನೋಡುತ್ತಾ ಕುಳಿತುಬಿಟ್ಟಳು ಸರಳಾ. ಸುಮಿತ್ರೆಗೂ ಏನೂ ಮಾತನಾಡಲು ತೋಚಲಿಲ್ಲ. ಯಾವುದೋ ಕಾಣದ ದೈವ ಹೇಗೆ ಮಾನವರನ್ನು ಆಡಿಸುತ್ತಿದೆ ಎಂದು ಸರಳಾ ಯೋಚಿ ಸುತ್ತಿದ್ದರೆ. ಸುಮಿತ್ರಳ ಮನಸ್ಸು ರಾಜನಿಗೆ ಶಾಪ ಹಾಕುತ್ತಿತ್ತು. ಹಾಗೆಯೇ ರಾಜ ತಾನಾಗಿಯೇ ಬಂದಾಗ ಅವನಿಗೆ ಮತ್ತೊಂದು ಅವಕಾಶ ಕೊಡಬಹು ದಿತ್ತೇನೋ ಅಂದುಕೊಂಡಳು. ಅದನ್ನೇ ಗಟ್ಟಿಯಾಗಿಯೂ ನುಡಿದಳು----

"ರಾಜ ತಾನಾಗಿ ತಾನು ಹುಡುಕಿಕೊಂಡು ಬಂದಾಗ ನೀನು ಮತ್ತೆ ಮಾತ ನಾಡಿಸಿದ್ದರೆ ಚೆನ್ನಾಗಿತ್ತೇನೋ ಅಲ್ವಾ ?"

"ಇಲ್ಲ ಸುಮಿತ್ರಾ. ಹಿಂದೆ ಎಷ್ಟು ಬಾರಿ ನಾನು ಸೋತು ಅವನನ್ನು ಗೆಲ್ಲಲು ಇಚ್ಛಿಸಲಿಲ್ಲ ? ಪ್ರತಿ ಬಾರಿಯೂ ತಪ್ಪು ಅವನು ಮಾಡಿದ್ದರೂ. ಸೋಲುತ್ತಿದ್ದವಳು ನಾನು. ನಾನು ಯಾವ ದುರ್ಬಲತೆಯನ್ನು ಬೇಕಾದರೂ ಸಹಿಸಬಲ್ಲೆನಾಗಿದ್ದೆ. ಆದರೆ ಪ್ರೀತಿಸುವ ನಾನಿರುವಾಗಲೇ ನನ್ನ ಮನಸ್ಸಿಗೇ ಒದ್ದು ಪರಹೆಣ್ಣುಗಳೊಂದಿಗೆ ತಿರುಗುವುದನ್ನು "ದುರ್ಬಲತೆ" ಎಂದು ನನ್ನ ಮನಸ್ಸು ಒಪ್ಪಲಿಲ್ಲ. ಅಂತಹವರನ್ನು "ಶೀಲವಿಲ್ಲದವರು" ಅಂತ ಮಾತ್ರ ಹೇಳಬಹುದು ಅಷ್ಟೆ. ಮಾನ, ಶೀಲಗಳೇ ನನ್ನ ಬದುಕಿನ ಸಾರ್ಥಕತೆ ಅಂತ ಆದರ್ಶವಿದ್ದ ನಾನು ಅವನೊಂದಿಗೆ ಬಾಳಲು ಸಾಧ್ಯವಿತ್ತೆ ?

ನೀನು ಹೇಳಿದ ಹಾಗೇನೇ ಅವನು ಭಾರತೀನ್ನ ಬಿಟ್ಟು, ಅವಳು ಬರೀ ಗೆಳತಿ ಅಷ್ಟೆ ಅಂತ ನನ್ನ ಬಳಿಗೆ ಹಿಂತಿರುಗಿದ್ದರೆ ಖಂಡಿತವಾಗಿಯೂ ಮತ್ತೊಮ್ಮೆ ಅವನನ್ನು ಸ್ವೀಕರಿಸಿ ಬಿಡುತ್ತಿದ್ದೆ. ನನ್ನ ಬುದ್ಧಿ ಎಷ್ಟೇ ತಿಳು ವಳಿಕೆ ಹೇಳಿದರೂ ಹೃದಯ ಮಾತ್ರ ರಾಜನನ್ನು ಕ್ಷಮಿಸಲು ಸದಾ ಸಿದ್ಧ

ವಾಗಿತ್ತು. ಆದರೆ ರಾಜನಿಗೆ ನಾನು ಬೇಕಿದ್ದಂತೆ ಕಾಣಲಿಲ್ಲ. ನನ್ನನ್ನಾದ್ರೂ ಬಿಡಬಹುದು. ಭಾರತಿಯನ್ನು ಬಿಡಲಾರದಾದ. ಇನ್ನು ನನಗೆಲ್ಲಿಯ ಸ್ಥಳ ? ಮೊದಲೇ ಅಭಿಮಾನಿ ನಾನು. ಮೇಲೆ ಪ್ರೇಮಿಕಳು. ಮೂರನೆಯ ವಳಾಗಿ ಉಳಿದು. ಅವರಿಬ್ಬರ ಸರಸ ಸಲ್ಲಾಪಗಳನ್ನು ನೋಡುತ್ತಾ ಕಣ್ಣಿನಲ್ಲಿ ನೀರು ಹರಿಸುವುದರ ಬದಲಾಗಿ ನಾನು ಅವರಿಂದ ದೂರ ಉಳಿದದ್ದೇ ಸರಿ ಯಲ್ಲವೆ ಸುಮಿತ್ರಾ ?

"ನಿಜ ಸರಳಾ, ಅವರಿಗೆ ನಾವು ಅಕ್ಕರೆಯಿಲ್ಲದವರು ಎಂದು ತಿಳಿದೂ ಸಹ, ಅವರೆದುರಿಗೆ ನಿಂತು ಅಪಮಾನಿತರಾಗಿ ಹೃದಯವನ್ನು ಕೊಂದು ಕೊಳ್ಳುವುದಕ್ಕಿಂತ, ಆತ್ಮಗೌರವ ಉಳಿಸಿಕೊಂಡು ಅಭಿಮಾನವಿಟ್ಟು ಬದು ಕುವುದೇ ಲೇಸು"----ಸಮರ್ಥಿಸಿದಳು ಸುಮಿತ್ರಾ.

"ಬಾಳು ಬರಿದಾಗಿತ್ತು. ನನ್ನವರೇ ಎಂದುಕೊಳ್ಳಲು ಯಾರೂ ಉಳಿ ದಿರಲಿಲ್ಲ. ಗಂಟೆಗಟ್ಟಲೆ ಕಣ್ಣೀರು ಸುರಿಸುತ್ತಿದೆ. ಆಫೀಸಿನಲ್ಲೂ ಕೆಲಸ ಓಂದೆ ಬಿತ್ತು. ಸ್ವಭಾವತಃ ವಾಚಾಳಿಯಾಗಿದ್ದು ನಕ್ಕು ನಲಿದು ಎಲ್ಲರನ್ನೂ ಆಕರ್ಷಿಸುತ್ತಿದ್ದ ನಾನು ಮೂಕಜೀವಿಯಾದೆ. ಪಾಪ ಮಧುರಾ ಮತ್ತು ಅವರ ತಾಯಿ ನನಗಾಗಿ ಏನೆಲ್ಲಾ ಮಾಡಿದರೂಂತ ಸುಮಿತ್ರಾ, ತಂಪು ಹೊತ್ತಿನಲ್ಲಿ ನೆನೆಯಬೇಕು ಆ ತಾಯಿಮಕ್ಕಳನ್ನ.

ನನಗೇ ಒಂದು ಕೋಣೆ ಬಿಟ್ಟುಕೊಟ್ಟು. ಪೂರ್ಣವಾಗಿ ಸಜ್ಜುಗೊಳಿಸಿ ದರು. ನೊಂದಿರುವ ನನ್ನ ಸೂಕ್ಷ್ಮ ಮತಿಗೆ ಮತ್ತೆ ಯಾವ ನೋವು ತಾಕು ವುದೋ ಎಂದು ಎಚ್ಚರಿಕೆಯಿಂದ ನಡೆದುಕೊಳ್ಳುತ್ತಿದ್ದರು.

ಪ್ರೇಮಕಥನವಿರೋ ಕಾದಂಬರಿಗಳನ್ನು ನಾನು ನಿರಾಕರಿಸುತ್ತಿದೆ ನಾದ್ದರಿಂದ ಮನೇಗೆ ಅವರು ಕಾದಂಬರಿಗಳನ್ನು ತರೋದನ್ನ ನಿಲ್ಲಿಸಿಬಿಟ್ರು. ಇತ್ತೀಚಿಗಿನ ಚಿತ್ರಗಳಲ್ಲಿ ಪ್ರೇಮವೇ ಪ್ರಾಧಾನ್ಯವಾಗಿದ್ದುದರಿಂದ ಯಾವ ಪ್ರೇಮ ಪ್ರಕರಣವೇ ಆಗಲಿ ನನ್ನನ್ನು ಬಹಳ ಮಟ್ಟಿಗೆ ಕೆರಳಿಸುತ್ತಿದ್ದುದರಿಂದ ನಾನು ಚಿತ್ರಗಳಿಗೆ ಹೋಗುವುದು ಬಿಟ್ಟುಬಿಟ್ಟೆ. ಚಿತ್ರಗಳೆಂದರೆ ಪ್ರಾಣ ಬಿಡುತ್ತಿದ್ದ ಮಧುರಾ ನನ್ನನ್ನು ಬಿಟ್ಟು ಹೋಗಬಾರದೆಂದು, ನಾನು ಹೋಗೆಂದು ಎಷ್ಟೇ ಬಲವಂತ ಮಾಡಿದರೂ ಹೋಗುತ್ತಿರಲಿಲ್ಲ.

ಎಂದಾದರೂ ಸಿಹಿ ತಿಂಡಿ ಮಾಡಿದರೆ ಅದನ್ನು ಕೈಲಿ ಹಿಡಿದು ಅತ್ತೇ

ಬಿಡುತ್ತಿದ್ದೆ. ಆಗೆಲ್ಲಾ ಸೀ ತಿಂಡಿಯ ಪ್ರೀತಿಯ ರಾಜ ನನ್ನ ಕಣ್ಣೆದುರಿಗೆ ಬಂದು ನಿಲ್ಲುತ್ತಿದ್ದ. ಇದರಿಂದಾಗಿ ಸಿಹಿ ತಿಂಡಿ ಮಾಡುವುದನ್ನೇ ಬಿಟ್ಟು ಕೊಟ್ಟರು ಆ ತಾಯಿ.

ನನ್ನನ್ನು ಮತ್ತೆ ಮೊದಲಿನ ಸರಳೆಯನ್ನಾಗಿ ಮಾಡಬೇಕೆಂದು ಬಹಳ ಪ್ರಯತ್ನ ಪಡುತ್ತಿದ್ದರು. ಅವರು ಕರುಣೆ, ಅನುತಾಪಗಳನ್ನು ತೋರಿದರೂ ನೊಂದುಕೊಳ್ಳುತ್ತಿದ್ದೆ. ಅಂತೂ ಮೂರು ತಿಂಗಳು ಹೇಗೆ ಕಳೆದೆನೋ ತಿಳಿಯದು

ರಾಜನ ನೆನಪು ಸದಾ ನನ್ನ ಹೃದಯವನ್ನು ಸುಡುತ್ತಿದ್ದರೂ, ನನ್ನನ್ನು ನಾನು ಅರ್ಥಮಾಡಿಕೊಂಡು, ನನ್ನ ಕೆಲಸಗಳನ್ನು ನಾನೇ ಮಾಡಿಕೊಳ್ಳಲು ನನಗೆ ಚೈತನ್ಯ ಬರಲು ಮೂರು ತಿಂಗಳು ಬೇಕಾಯಿತು.

ಇದ್ದಕ್ಕಿದ್ದಂತೆ ನನಗನಿಸತೊಡಗಿತು ನಾನು ಮಧುರಳ ಮನೆಗೆ ಭಾರ ವೆಂದು. ನನಗೆ ಸುಮಾರು 4 ಸಾವಿರ ರೂ.ಗಳ ಸಂಬಳ ಬರುತ್ತಿತ್ತು. ಅವರ ಮನೆಗಾಗಿ ನಾನು ಒಂದು ಬಿಡಿಗಾಸನ್ನೂ ಖರ್ಚು ಮಾಡಿರಲಿಲ್ಲ. ನನಗೆ ತಿಳುವಳಿಕೆಯಾದಾಗ–"ಮಧುರಾ, ನನ್ನ ಸಂಪಾದನೇಲ್ಲೂ ಮನೇಗೆ ಕೊಂಚ ತಗೋಮ್ಮ" ಎಂದೆ.

"ಮೊದಲು ನಿನ್ನ ಹುಚ್ಚಿನಿಂದ ನಿನಗೆ ಗುಣವಾಗಲಿ ಆಮೇಲೆ ನೋಡೋಣ."

"ನನಗೆ ಹುಚ್ಚು ಹಿಡಿದಿದ್ಯಾ"–ಆಶ್ಚರ್ಯದಿಂದ ಕೇಳಿದೆ.

"ಹೌದು, ರಾಜನ ಹುಚ್ಚು. ಸರಿಯಾಗಿ ತಲೆ ಬಾಚಬೇಡ, ಪೆಟ್ಟಿಗೆ ತುಂಬಾ ಕುಳಿತಿರೋ ಸೀರೆ ಉಡಬೇಡ, ಹೊಟ್ಟೆತುಂಬಾ ತಿನ್ನಬೇಡ, ಬಂದ ದ್ದನ್ನೂ ನನಗೆ ಕೊಟ್ಟು, ಸದಾ ಮಂಚದ ಮೇಲೆ ಮಲಗಿ ಅಳ್ತಿರು. ಅದು ಹೇಗೆ ಆಫೀಸಿಗೆ ಹೋಗ್ತಾ ಇದ್ದೀಯೋ ತಾಯಿ" ಕಠೋರ ನಿಷ್ಠುರತೆಯಿತ್ತು ಅವಳ ಮಾತಿನಲ್ಲಿ.

"ನೀನು ಮನೆಗಾಗಿ ನನ್ನಿಂದ ಹಣ ತೆಗೆದುಕೊಂಡರೆ, ನೀನು ಹೇಳಿದ ಹಾಗೆ ಕೇಳ್ತೀನಿ."

"ಕೇಳ್ತೀಯಾ ? ಹಾಗಾದ್ರೆ ಕೊಡು, ಅದೆಷ್ಟು ಕೊಡಬೇಕೂಂತಿ ದ್ದೀಯೋ ಕೊಡು."

"ನನಗೆ ಐದುನೂರು ರೂ. ಸಾಕು ಖರ್ಚಿಗೆ ಮಿಕ್ಕಿದ್ದೆಲ್ಲಾ ನಿನಗೆ"

"ಇದು ಇನ್ನೊಂದು ಮಾದರಿಯ ಹುಚ್ಚು."

ಇದೇನು ಮಧುರಾ, ಎಲ್ಲದಕ್ಕೂ ಹುಚ್ಚೂಂತಿ."

"ಇನ್ನೇನು ಮತ್ತೆ ಹೇಳು. ಬಂದ ಸಂಬಳ ಎಲ್ಲಾ ನನಗೆ ಕೊಡ್ತೀನಿ ಅಂದ್ರೆ."

"ನನಗೇಕೆ ಬೇಕು ಇಲ್ದಿದ್ರೆ ಅಷ್ಟು ದುಡ್ಡು."

"ಮುಂದೆ ಯಾತಕ್ಕಾದ್ರೂ ಬೇಕಾಗುತ್ತೆ ಸರೂ. ನೀನು ಸದಾ ಹೀಗೇ ಇರೋಲ್ಲ."

"ಹುಂ. ಮತ್ತೆ ಹೇಗಾಗ್ತೀನಿ ?"

"ಮದುವೆ, ಮಕ್ಕಳು, ಸಂಸಾರ ಅಂದ ಮೇಲೆ ಹಣವಿಲ್ಲದೆ ಆಗೋಲ್ಲ ಸರೂ."

"ಯಾರಿಗೆ ಮದುವೆ ಮಧುರಾ ? ನನಗಾ ? ಈಗ ನಿನಗೆ ಹುಚ್ಚು ಹಿಡಿದಿದೆ."

"ನನಗೆ ಹಿಡಿದ್ರೂ ಪರವಾಗಿಲ್ಲ. ಸದ್ಯ ನಿಂಗೆ ಬಿಡಬೇಕೂಂತ ದೇವ್ರನ್ನ ಬೇಡ್ತಾ ಇದೀನಿ."

"ಹಾಗಾದ್ರೆ, ನನ್ನ ಏನುಮಾಡು ಅಂತಿ ?"

"ಕೃತಘ್ನ ರಾಜನ್ನ ಮರೆತು ಒಳ್ಳೇವರನ್ನ ಒಬ್ಬನ್ನ ಮದುವೆ ಮಾಡ್ಕೋ ಅಂತೀನಿ."

"ಅದಲ್ಲಮ್ಮ ಮಧುರಾ, ಹಣದ ವಿಷಯ ನಾ ಕೇಳಿದ್ದು."

"ಬ್ಯಾಂಕಿನಲ್ಲಿ ಒಂದು ಅಕೌಂಟು ತೆಗೆದು ಅದರಲ್ಲಿ ಹಾಕಿಡು. ನನಗೆ ಅವಶ್ಯಕತೆ ಬಿದ್ದಾಗ ನಿನ್ನನ್ನೇ ಕೇಳ್ತೀನಿ. ಈಗ ಸದ್ಯ, ನೀನು ತಿನ್ನೋ ಮೂರಗಳಿಗೋಸ್ಕರ ನಾನು ನಿನ್ನಿಂದ ದುಡ್ಡು ತೆಗೋಬೇಕಾ ಸರಳಾ. ನಮಗೂ ದೇವರು ನಾವು ತಿಂದು, ಇನ್ನೊಬ್ರಿಗೂ ಇಡೋಷ್ಟು ಕೊಟ್ಟಿದ್ದಾನಮ್ಮ" ಎಂದು ಬಾಯಿ ಮುಚ್ಚಿಸಿಬಿಟ್ಟಳು.

ಅವರಮ್ಮನ ಬಳಿ ಮಾತು ಬಂದಾಗ "ಮಧುರಾ ಹೇಳಿದ್ದು ಸಾಲದಾ ಸರಳಾ ? ನಾನೂ ಮತ್ತೆ ಅದೇ ಹೇಳಬೇಕೇನು? ಒಂದು ಸಲಕ್ಕೆ ಅರ್ಥಮಾಡಿಕೊಳ್ಳುವಷ್ಟು ಬುದ್ಧಿವಂತಳು ನೀನು ಅಂದ್ಕೊಂಡಿದ್ದೆ" ಎಂದು ಬಿಟ್ಟರು.

ಅವರಿಬ್ಬರ ಆರೈಕೆಯಲ್ಲಿ ದಿನ ಕಳೆಯುತೊಡಗಿದೆ. ರಾಜನ ನೆನಪು ಮಾತ್ರ ನನ್ನಿಂದ ಅಳಿಸಲಾಗಲಿಲ್ಲ ನನ್ನ ಬಾಳಿನ ವಸಂತದಲ್ಲಿ ಹಾಸು ಹೊಕ್ಕಾಗಿ ಬಂದ ಅವನು, ನನ್ನಲ್ಲಿ ಭದ್ರವಾಗಿ ಪ್ರತಿಷ್ಠಿತನಾಗಿದ್ದ. ಅವನನ್ನು ದೂರ ತಳ್ಳಲಾಗಲೇ ಇಲ್ಲ ಈಗಲೂ ಆಗಿಲ್ಲ ಸುಮಿತ್ರಾ. ಆದರೂ ನೋವಿನ ಅಳಮಾತ್ರ ಕ್ರಮೇಣ ಕಡಿಮೆಯಾಗತೊಡಗಿತು. ಅದಕ್ಕೆ ಕಾರಣವೂ ಆ ತಾಯಿ ಮಕ್ಕಳೇ.

ಕಾಲ ಬದಲಿಸಿದಂತೆ ಸರಳಾ ಸರಿಹೋಗುತ್ತಾಳೆ ಎಂದು ನಂಬಿದ್ದ ಮಧುರಾಗೆ ಆ ನಂಬಿಕೆ ಉಳಿಯಲಿಲ್ಲ. ನನ್ನ ಬಾಳಿನಲ್ಲಿ ನಿರಾಶೆಯ ಛಾಯೆ ಎದ್ದು ಕಾಣುತ್ತಲೇ ಇತ್ತು. ಯಾವುದರಲ್ಲಾದರೂ ನನಗೆ ಮಹತ್ತರ ಆಸಕ್ತಿ ಹುಟ್ಟಿಸಿದರೆ ಮಾತ್ರ ನಾನು ಮನಸ್ಸನ್ನು ರಾಜನಿಂದ ತೆಗೆಯಬಲ್ಲೆ ಎಂದು ಯೋಚಿಸುತ್ತಿದ್ದಳು ಮಧುರಾ.

ಅವಳ ಈ ಪ್ರಯತ್ನದಲ್ಲಿ ಅವಳಿಗೆ ಸೋಲಾಗಲಿಲ್ಲ. ನಾನು ಅಳುತ್ತಲೋ, ಇಲ್ಲವೇ ಶೂನ್ಯತೆಯಿಂದ ಕುಳಿತಾಗ, ದೇವರ ಬಳಿ ಕುಳಿತು ಮಧುರೆಯ ತಾಯಿ ಸ್ವಲ್ಪ ಗಟ್ಟಿಯಾಗಿ ದೇವರ ಸ್ತೋತ್ರಗಳನ್ನು ಹೇಳಲು ಆರಂಭಿಸುತ್ತಿದ್ದರು. ಅವರಿಗೆ ಪಕ್ಕ ವಾದ್ಯವಾಗಿ ಮಧುರಾ ಪಿಟೀಲು ನುಡಿಸುತ್ತಿದ್ದಳು. ಒಂದೆರಡು ಹಾಡುಗಳನ್ನು ನುಡಿಸಿ ನಿಲ್ಲಿಸುತ್ತಿರಲಿಲ್ಲ. ನಾನು ಆ ಗಾನದಿಂದ ಆಕರ್ಷಿತಳಾಗಿ ಎದ್ದು ಅವರ ಜೊತೆಯಲ್ಲಿ ಕುಳಿತು ನನ್ನ ದುಗುಡದಿಂದ ಚೇತರಿಸಿಕೊಂಡು ನಾದದಲ್ಲಿ ತಲ್ಲೀನಳಾಗಿ ನನ್ನನ್ನು ನಾನು ಮರೆಯುವವರೆಗೂ ನುಡಿಸುತ್ತಿದ್ದಳು. ಅವರೊಂದಿಗೆ ನಾನೂ ದೇವರಿಗೆ ನಮಸ್ಕರಿಸಿ ಏಳುತ್ತಿದ್ದೆ.

ಈ ಅಭ್ಯಾಸ ಒಂದೆರಡೇ ದಿನಗಳಲ್ಲಿ ನನಗೆ ಗಾನದಲ್ಲಿ ಆಸೆ ಹುಟ್ಟಿಸಿತು. ಹೊತ್ತು ಗೊತ್ತಿಲ್ಲದ ವೇಳೆಯಲ್ಲೂ ಸಹ, ದೇವರ ಮನೆಯಿಂದ ಪಿಟೀಲು ನಾದ ಕೇಳಿಬರುತ್ತಿತ್ತು. ಪುಂಗಿಯ ನಾದದಿಂದ ಮುಗ್ಧವಾಗುವ ನಾಗರದಂತೆ, ನಾನು ನನ್ನ ಅಳಲು ನಿಲ್ಲಿಸಿ ಮಧುರಳ ಪಕ್ಕದಲ್ಲಿ ಕುಳಿತುಕೊಳ್ಳುತ್ತಿದೆ.

ನನ್ನ ದುಃಖಕ್ಕೆ ಕಡಿವಾಣ ಹಾಕುವ ಶಕ್ತಿ ಆ ಪಿಟೀಲು ವಾದನಕ್ಕೆ ಮಾತ್ರ ಇತ್ತು. ಅದೂ ಸೋತಾಗ ವೇದಾಂತ ತುಂಬಿದ ಕೆಲವು ಕನ್ನಡ ಹಾಡುಗಳನ್ನು ಹಾಡಲು ಆರಂಭಿಸುತ್ತಿದ್ದಳು; "ನಂಬಿ ಕೆಟ್ಟವರಿಲ್ಲವೋ

ರಂಗಯ್ಯನ," "ಯಾರಿಗೆ ಯಾರುಂಟು ಎರವಿನ ಸಂಸಾರ", "ಅಂತರಂಗದ ದೀಪ ಆರದಿರಲಿ, ಸಂತತವು ಬೆಳಗುವೊಲು ಜ್ಯೋತಿಯಿರಲಿ", "ಓ ನನ್ನ ಚೇತನ, ಆಗು ನೀ ಅನಿಕೇತನ", ಮೊದಲಾದ ಕೃತಿಗಳು ನಿರಾಶೆಯಿಂದ ಪಾತಾಳಕ್ಕಿಳಿಯುತ್ತಿದ್ದ ನನ್ನ ಆತ್ಮವನ್ನು ದೈವಿಕವಾಗಿ ಮೇಲಕ್ಕೆ ಎತ್ತುತ್ತಿದ್ದುವು.

ಕ್ರಮೇಣ ನನ್ನ ಆಸಕ್ತಿ, ಅವಳನ್ನು ನುಡಿಸಲು ಬೇಡಿಕೊಳ್ಳುವಷ್ಟರ ಮಟ್ಟಿಗೆ ಹೋಯಿತು. ನನ್ನ ಯಾವ ವಿಚಿತ್ರ ನಡತೆಗೂ ಬೇಸರಪಟ್ಟು ಕೊಳ್ಳುತ್ತಿರಲಿಲ್ಲ ಅವರು. ಒಂದೊಂದು ದಿನ ಹುಚ್ಚಿಯಂತೆ ಬೆಳಗಿನಿಂದ ಸಂಜೆಯುವರೆಗೆ ಕೋಣೆ ಬಿಟ್ಟು ಹೊರಗಡೆ ಬರುತ್ತಿರಲಿಲ್ಲ ನಾನು. ಆಗ ಅವರು, ಯಾಕೆ? ಏನು? ಪ್ರಶ್ನೆಗಳನ್ನು ಹಾಕುತ್ತಿರಲಿಲ್ಲ. ಮಿಕ್ಕ ದಿನಗಳಲ್ಲಿ ಪ್ರಸನ್ನತೆಯಿಂದ ಇರುತ್ತಿದ್ದೆ.

## ೧೮

ನಾನು ಆಗ ತಕ್ಕಮಟ್ಟಿಗೆ ಸರಿಹೋಗಿದ್ದೆ. ಒಂದು ಭಾನುವಾರ ಬಹಳ ದಿನಗಳಿಂದ ನನ್ನಿಂದಾಗಿ, ಒಂದು ಚಿತ್ರವನ್ನೂ ನೋಡಿರಲಿಲ್ಲ. ನಾನೇ ಬಲವಂತ ಮಾಡಿ ಮಧುರಾ ಮತ್ತು ಅವಳ ತಾಯಿಯನ್ನು ಚಿತ್ರಕ್ಕೆ ಕಳುಹಿಸಿದೆ.

ನನ್ನ ಮನಸ್ಸು ಪ್ರಫುಲ್ಲವಾಗಿತ್ತು. ಅವರು ಹೊರಟು ಹೋದಕೂಡಲೇ ಎದ್ದು ಮನೆಯೆಲ್ಲಾ ಸ್ವಚ್ಛ ಮಾಡಿದೆ. ಎಷ್ಟೋ ದಿನಗಳಿಂದ ಅಣಿಯಾಗಿ ಜೋಡಿಸಬೇಕೆಂದಿದ್ದ ಬೀರುಗಳೊಳಗಿನ ಪಧಾರ್ಥಗಳನ್ನು ಜೋಡಿಸಿದೆ ಫ್ಲವರ್ ದಾನಿಗಳಲ್ಲಿ ಹೊಸ ಹೂಗಳನ್ನು ತಂದಿಟ್ಟೆ. ಅಸ್ತವ್ಯಸ್ತವಾಗಿದ್ದ ಪದಾರ್ಥಗಳನ್ನೆಲ್ಲಾ ನನಗೇ ಹೇಗೆ ಬೇಕೋ ಹಾಗಿಟ್ಟೆ. ಮನೆಗೆ ಒಂದು ಹೊಸ ಕಳೆ ಬಂತು.

ಮಧುರಾ ಅಂತಹ ವಿಷಯಗಳಲ್ಲಿ ಅಷ್ಟು ಚತುರಳಲ್ಲ. ಅವಳ ಮನ

ಮಧುರ. ಆದರೆ ಅವಳ ಮನೆ ಕಲೆಯುಗೂಡಾಗಿರಲಿಲ್ಲ. ಅದು ಅವಳ ತಾಯ ಗುಣವೂ ಹೌದು, ಒಳ್ಳೆಯತನ ತುಂಬಿದೆ, ಆದರೆ ಅಚ್ಚುಕಟ್ಟಿಲ್ಲ.

ಹೊಗಳಿಕೊಳ್ಳುವ ಮಾತಲ್ಲ ಸುಮಿತ್ರಾ. ಚಿಕ್ಕವಳಿದ್ದಾಗಿನಿಂದಲೂ ನನಗೆ ಓರಣದಲ್ಲಿ ಆಸಕ್ತಿ. ನಾನು ಬಹಳ ಅಚ್ಚುಕಟ್ಟು. ನನ್ನ ಅಲಂಕಾರ ಕ್ಕಿಂತ ನನ್ನ ಮನೆಯ ಅಲಂಕಾರ ಚೆನ್ನಾಗಿ ಆಗಬೇಕು. ನನ್ನ ಮನೆ ನೋಡಿ ದವರೆಲ್ಲಾ ಮೆಚ್ಚಿಕೊಳ್ಳುವಂತೆ ಇಟ್ಟಿರುತ್ತಿದ್ದೆ.

"ಇಡುತ್ತಿದ್ದೆ ಎಂದು ಹೇಳಬೇಕಾ, ಸರಳಾ. ಈ ಮನೆ ನೋಡಿದರೆ ತಿಳಿಯೋಲ್ವ ? ನೀನು ಮಧುರಳ ಮನೆಯನ್ನು ಓರಣ ಮಾಡಿದ್ದನ್ನೂ ಊಹಿಸಬಲ್ಲೆ" ಮಧ್ಯೆ ನುಡಿದಳು ಸುಮಿತ್ರೆ.

"ಎಷ್ಟೇ ಕೆಲಸ ಮಾಡಿದರೂ ಇನ್ನೂ ನಾಲ್ಕು ಘಂಟೆಯಾಗಿತ್ತು. ಅವರು ಬರುವಷ್ಟರಲ್ಲಿ ಏನಾದರೂ ತಿಂಡಿ ಸಿದ್ಧಮಾಡಿ ಇಡೋಣಾಂತ, ಪೂರಿ ಪಲ್ಯದ ಪದಾರ್ಥಗಳಿಗಾಗಿ ಹುಡುಕಿದೆ. ನಾನು ಎಂದೂ ಅವರ ಅಡುಗೆ ಮನೆ ಹೊಕ್ಕಿರಲಿಲ್ಲವಾದ್ದರಿಂದ. ನನಗೆ ಒಂದು ಪದಾರ್ಥವೂ ಸಿಕ್ಕಲಿಲ್ಲ ಬೇಗನೆ, ಯಥಾಪ್ರಕಾರ ಸಾಸುವೆ ಎಂದು ಬರೆದ ಡಬ್ಬದಲ್ಲಿ ಜೀರಿಗೆ, ಕಡಲೇ ಬೇಳೆ ಎಂಬ ಡಬ್ಬದಲ್ಲಿ ಬೆಲ್ಲದ ಪುಡಿಯಿತ್ತು.

ಆರು ಗಂಟೆಯ ಹೊತ್ತಿಗೆ ಪೂರಿ ಪಲ್ಯ ಮಾಡಿ ಬಿಸಿ ಕಾಫಿ ಮಾಡಿ ಅವರಿಗಾಗಿ ಕಾಯುತ್ತಾ ಕುಳಿತೆ. ಸುಮ್ಮನೆ ಎಷ್ಟು ಹೊತ್ತು ಕುಳಿತು ಕೊಳ್ಳಲಿ. ಹಾಗೇ ಕಾಂಪೌಂಡಿನಲ್ಲಿ ತಿರುಗಾಡಿದೆ, ಎಷ್ಟು ಒಳ್ಳೊಳ್ಳೆಯ ಗಿಡಗಳು ಆರೈಕೆ ಇಲ್ಲದೆ ಅಳುತ್ತಿದ್ದವು. ಬೆಳಗ್ಗೆ ಇವಕ್ಕೆಲ್ಲಾ ಸರಿಯಾಗಿ ಪಾತಿ ಮಾಡಬೇಕು. ಆದರೆ ಮಣ್ಣು ಬಹಳ ಗಟ್ಟಿಯಾಗಿದೆಯಲ್ಲಾ ಎಂದು ಅವುಗಳಿಗೆಲ್ಲಾ ನೀರು ಹಾಕಿದೆ. ಧೂಳು ಕುಳಿತ ಎಲೆಗಳು, ನೀರಿನ ಸಿಂಚನ ದಿಂದ ಹಸಿರಾದವು.

ತೋಟವೇ ಹೊಸದಾಗಿ ಕಾಣಿಸಿತು. ನನ್ನ ಮನಸ್ಸಿಗೂ ಆಹ್ಲಾದ ವಾಯಿತು. ಕಾದ ಮಣ್ಣಿನ ಮೇಲೆ ನೀರು ಬಿದ್ದಾಗ ಏಳುವ ಮಣ್ಣಿನ ವಾಸನೆ ನನಗೆ ಬಹುಪ್ರಿಯ. ವಾಸನೆ ಆಘ್ರಾಣಿಸುತ್ತಾ ಕೈಯಲ್ಲಿ ಕೊಡ ಹಿಡಿದು ನಿಂತೇಬಿಟ್ಟೆ.

ಸುಮಾರು ಏಳು ಗಂಟೆಯಾದರೂ ಅವರ ಪತ್ತೆ ಇಲ್ಲ. ಈ ವೇಳೆಗೆ

ದಿನವೂ ದೇವರಿಗೆ ದೀಪಹಚ್ಚುವ ಹೊತ್ತು. "ಅವರಿಲ್ಲದಿದ್ದರೇನಂತೆ" ಎಂದು ನಾನೇ ಕೈಕಾಲು ತೊಳೆದುಕೊಂಡು ಬಂದು ದೇವರಿಗೆ ದೀಪಹಚ್ಚಿದೆ.

ಮಧುರಳ ಆರಾಧ್ಯದೈವ ಗೋಪಾಲಕೃಷ್ಣ. ಕರುವಿನ ಮುಂದೆ ನಿಂತಿದ್ದ ಕೃಷ್ಣನ ವಿಗ್ರಹ. ಕೂಡಲೇ ನನ್ನ ಪೆಟ್ಟಿಗೆಯಲ್ಲಿಡಗಿದ್ದ ನನ್ನ ಕೋಂದಡರಾಮನ ಚಿತ್ರವನ್ನು ತಂದು ಗೋಪಾಕೃಷ್ಣನ ವಿಗ್ರಹಕ್ಕೆ ಒರಗಿಸಿದೆ. ಏನೋ ಒಂದು ಅನಿರ್ವಚನೀಯ ಆನಂದವಾಯ್ತು. ಭಕ್ತಿಯಿಂದ ನಮಸ್ಕಾರ ಮಾಡಿದೆ. ಸ್ತೋತ್ರ ಹೇಳಲು ಆಸೆಯಾಯಿತು. ರಾಧಮ್ಮ ಹೇಳುತ್ತಿದ್ದ ಮುಕುಂದಮಾಲಾ ಶ್ಲೋಕಗಳಷ್ಟು ಬಾಯಿಪಾಠವಾಗಿತ್ತು. ಅವರು ಹೇಳುತ್ತಿದ್ದ ರಾಗಗಳಲ್ಲೆ ಕಣ್ಣುಮುಚ್ಚಿ ಕುಳಿತು ಹೇಳಲು ಪ್ರಾರಂಭಿಸಿದೆ. ಹೊರ ಪ್ರಪಂಚದ ಅರಿವು ಮಾಯವಾಯಿತು. ನನ್ನಲ್ಲಿ ನವಚೇತನದ ಸಂಚಾರವಾಯಿತು.

ಮೊಟ್ಟಮೊದಲ ಬಾರಿಗೆ, ಸುಮಿತ್ರಾ. ರಾಜನ ಮುಖ ನನ್ನ ಮನಃಪಟಲದಿಂದ ಹಿಂದೆ ಸರಿದು ಕೋದಂಡರಾಮನ ಮುಖವೇ ಕಾಣಿಸಿತು. ಕಣ್ಣು ಮುಚ್ಚಿದರೂ ನಾನು ರಾಮನನ್ನು ನೋಡಲು ಶಕ್ತಳಾದೆ. ನನ್ನ ಆನಂದ ಮೇರೆ ಮೀರಿತು. ಪರವಶಳಾಗಿ ಹಾಡುತ್ತಿದ್ದೆ ಸಣ್ಣ ಕಂಠದಲ್ಲಿ, ನಾನು ಕಣ್ಣುಬಿಟ್ಟಾಗ ನನ್ನ ಅಕ್ಕಪಕ್ಕದಲ್ಲಿ ಮಧುರಾ ಮತ್ತು ರಾಧಮ್ಮ! ಹಾಗಾದರೆ ನಾನು ತಲೆಬಾಗಿಲೂ ಸಹ ಹಾಕದೆ ಕುಳಿತು ಬಿಟ್ಟೆನೇ ಎಂದು ನಾಚಿಕೆಯಾಯಿತು. ನನ್ನ ನಾಚಿಕೆ ಗಮನಿಸಿದ ರಾಧಮ್ಮ–

"ನಾಚಿಕೊಳ್ಳೋದು ಯಾಕೆ ಸರಳಾ, ದೇವರನ್ನು ಪ್ರಾರ್ಥಿಸೋದ್ರಲ್ಲಿ ನಾಚಲು ಏನಿದೇಮ್ಮ" ಅಂದರು.

"ಅದಕ್ಕಾಗಿ ಅಲ್ಲಮ್ಮ. ಬಾಗಿಲು ಹಾಕದೆ ಕೂತು ಬಿಟ್ನಲ್ಲಾಂತ.... ನೀವು ಯಾವಾಗ ಬಂದಿರಿ ?"

"ನೀನು ಮೂರನೇ ಶ್ಲೋಕ ಹಾಡ್ತಾ ಇದ್ದಾಗ್ಲೇ ಬಂದ್ವು. ನಿನಗೆ ಅಡಚಣೆ ಆಗದೆ ಇರಲಿ ಅಂತ, ಒಂದು ಘಳಿಗೆ ಹೊರಗಡೆ ಮೆಟ್ಟಿಲ ಮೇಲೆ ಕುಳಿತುಕೊಂಡ್ವಿ. ಅಲ್ಲ ಸರಳಾ, ಅದೆಷ್ಟು ಕೆಲಸ ಮಾಡಿದ್ದಿ. ಗಿಡಗಳಿಗೆಲ್ಲಾ ನೀರು ಹಾಕಿದ್ಯಾ ?"

"ಇಲ್ಲಪ್ಪ. ನನ್ನ ಭಕ್ತಿಗೆ ಮೆಚ್ಚಿ ದೇವರು ಮಳೆ ಸುರಿಸಿದ್ದಾನೇಂತ ಕಾಣುತ್ತೆ" ಎಂದು ಹಾಸ್ಯವಾಗಿ ನಕ್ಕೆ.

"ಅಬ್ಬ ! ನಿನ್ನ ನಗು ನೋಡಿ ಎಷ್ಟು ದಿನಗಳಾಗಿತ್ತೋ ಸರಳಾ. ಯಾರಿಗೆಗೊತ್ತು ! ನೀನು ಯಾವುದನ್ನಾದ್ರೂ ಶ್ರದ್ಧೆ ನಿಷ್ಠೆಗಳಿಂದ ಮಾಡ್ತಿ. ದೇವರು ಮೆಚ್ಚಿ ಮಳೆ ಸುರಿಸಿದರೂ ಸುರಿಸಿಯಾನು " ಎಂದರು ರಾಘಮ್ಮ.

"ಹೌದು. ಮಾನವ ದೇವರು ನನ್ನ ಶ್ರದ್ಧೆ ನಿಷ್ಠೆಗಳಿಗೆ ಮೆಚ್ಚಿದಾಯಿತು. ಇನ್ನು ಕಲ್ಲು ದೇವರು ಮೆಚ್ಚೋದು ಒಂದು ಬಾಕಿ ಇದೆ. ಏಳಿ ಏಳಿ, ತಿಂಡಿ ತಿನ್ನುವಿರಂತೆ" ಎಂದೆ. ಏನೋ ಒಂದು ಮಾದರಿಯ ಹುರುಪು. ಹೊಸ ಬೆಳಕು ಕಂಡಂತಾಗಿತ್ತು ನನಗೆ.

ಅವರಿಬ್ಬರೂ ಪೆಚ್ಚಾಗಿ ಕುಳಿತುಬಿಟ್ಟರು, ಅವರು ಅತಿಥಿಗಳು ನಾನೇ ಮನೆಯವಳು ಅನ್ನೋ ಹಾಗೆ ಅವರಿಬ್ಬರಿಗೂ ತಿಂಡಿ ಕಾಫಿ ಕೊಟ್ಟೆ. ನಾನೂ ತಿಂದೆ.

"ಇಷ್ಟು ಚೆನ್ನಾಗಿ ನಿನಗೆ ಅಡಿಗೆ ಮಾಡಲು ಬರುತ್ತೇಂತ ಗೊತ್ತೇ ಇರಲಿಲ್ವಲ್ಲೇ ನಮ್ಮಮ್ಮ"

"ಏನು ಮಾಡಿದ್ರೂ ಅಚ್ಚುಕಟ್ಟಾಗಿ ಮಾಡ್ತಾಳಮ್ಮ. ಆದರೆ ಹಾಳಾದ್ದು ಅವನಿಗೆ ಮನಸ್ಸು ಬರಬೇಕು. ಅದನ್ನೇ ಎಲ್ಲಿಂದನಾದರೂ ತರೋಕ್ಕೆ ಅಸಾಧ್ಯ ಆಗಿರೋದು" ಚೇಷ್ಟೆ ಮಾಡಿದಳು ಮಧುರಾ.

"ಇನ್ನು ಮೇಲೆ ನೋಡು ಸರಳಾನೇ ಎಲ್ಲಾ ಮಾಡ್ತಾಳೆ ನನಗೆ ರೆಸ್ಟು" ಎಂದರು ಹಿರಿಯಾಕೆ.

"ಧಾರಾಳವಾಗಿ, ನಾಳೆಯಿಂದ ಬೆಳಿಗ್ಗೆ ಬೇಗ ಎದ್ದು ಮನೆ ಮುಂದೆ ರಂಗೋಲಿ ಹಾಕೋ ಕೆಲ್ಸ ನಂದು. ಆಮೇಲೆ ಸ್ವಲ್ಪ ತೋಟದ ಕೆಲಸ. ಅಷ್ಟೊತ್ತಿಗೆ ಅಮ್ಮ ನೀವು ಕಾಫಿ ಮಾಡಿಕೊಟ್ರೆ ಕುಡಿದು ಸ್ನಾನ ಮಾಡ್ಬಿಟ್ಟು ಅಡಿಗೆ ನಾನೇ ಮಾಡ್ತೀನಿ" ಎಂದೆ.

"ಎಲ್ಲಾ ಹೊಸ ಹೊಸ ಮಾತು ಸರಳೆಯ ಬಾಯಲ್ಲಿ. ಇದು ಯಾವ ಭೂಕಂಪಕ್ಕೂ ನಾಂದಿಯಲ್ಲವಷ್ಟೆ ! 'ನಾನು ಯಾರು 'ನನಗೆ ಯಾಕೆ' 'ನಮ್ಮಂತಹವರು ಬದುಕಬಾರದು, ಇತ್ಯಾದಿ ಇತ್ಯಾದಿ ಆಡುತ್ತಿದ್ದ ಸರಳೆ

ಯಿಂದ, ಜೀವನ ಪ್ರೇಮಿಸುವವರ ಹುರುಪು, ಆಸಕ್ತಿ. ಒಂದು ವೇಳೆ ಹುಚ್ಚೇನೂ ಅಲ್ಲವಷ್ಟೆ" ಎಂದುಕೊಂಡಳಂತೆ ಮಧುರಾ.

"ಹಾಗಾದರೆ ನಮಗೆ ಮಿಕ್ಕದ್ದೇನು ಕೆಲಸ ?" ತಾಯಿ ಕೇಳಿದಳು.

"ನೀವೂ. ಮಧುರಾ, ನಾ ಮಾಡಿದುದು ತಿಂದು ವಿಮರ್ಶೆ ಮಾಡ ಬೇಕು. ಅ್ಲಾ ?"

"ಮೊದಲೇ ಸೋಮಾರಿ ನಾನು. ಅಮ್ಮನ ಒಬ್ಬಳ ಸೇವೆಯಿಂದಲೇ ಹೀಗೆ. ಇನ್ನು ನೀನು ಬೇರೆ. ನಾಳೆ ಮದ್ವೆ ಆಗಿ ಗಂಡನ ಮನೆಗೆ ಹೋದರೆ ಅವನನ್ನೇ ಮಾಡು ಅನ್ಬೇಕು ಅಷ್ಟೆ" ಎಂದು ಅಪಹಾಸ್ಯ ಮಾಡಿಕೊಂಡಳು ಮಧುರಾ. ಮೂವರೂ ನಕ್ಕೆವು.

ನಾನೂ. ಮಧುರಾ ವರಾಂಡದಲ್ಲಿ ಕುಳಿತಿದ್ದೆವು. ಗಿಡಗಳ ಮೇಲಿನ ಗಾಳಿ ಮೃದುವಾಗಿ ಬೀಸಿ ಬರುತ್ತಿತ್ತು. ಮಧುರಾ ಏನೋ ಕನಸು ಕಾಣು ತ್ತಿದ್ದಳು. ತಿಳಿಯದೆ ಎಚ್ಚರಿಸಿಬಿಟ್ಟೆ-"ಚಿತ್ರ ಹೇಗಿತ್ತು ಮಧುರಾ. ಯಾವ ಚಿತ್ರ ?"

"ಆ್ಲಾ ?" ಬೆಚ್ಚಿಬಿದ್ದಂತೆ ಎದ್ದು ಸಾವರಿಸಿಕೊಂಡು ಹೇಳಿದಳು–– ಚಿತ್ರದ ಹೆಸರು "ಪ್ರೇಮ ಪೂಜಾ" ಬಹಳ ಚೆನ್ನಾಗಿತ್ತು ಸರೂ. ನೀನು ಬರಬಹುದಿತ್ತು.

"ಹೆಸರು ಕೇಳಿದರೆ ಕುತೂಹಲಜನಕವಾಗಿದೆ, ಕಥೆ ಏನು ? ನಾನು ಚಿತ್ರ ನೋಡೋಲ್ಲ ಮಧುರಾ."

"ಹೇಳು ಮಧುರಾ. ಅಂತ ಭಯಾ ಏನು ಬೇಡ. ಈವತ್ತಿನಿಂದ ನಾನು ಬದಲಾದ ವ್ಯಕ್ತಿ."

"ಶಹಬಾಸ್ ಸರೂ. ಸೂಕ್ಷ್ಮವಾಗಿ ಕತೆ ಏನೂಂದ್ರೆ ಮೋಹನ್ ಅನ್ನೋ ಯುವಕ ಶ್ರೀಮಂತ. ಒಳ್ಳೇವ್ನು. ಕಾಲೇಜಿನಲ್ಲಿ ಓದೋವಾಗ ಜೊತೇಲಿ ಓದೋ ಶೋಭ ಅನ್ನೋ ಹುಡುಗಿನ್ನ ಪ್ರೀತಿಸ್ತಾನೆ. ಅವಳು ಬರೀ ಬಣ್ಣದ ಚಿಟ್ಟೆ. ಅವನ ರೂಪ. ದುಡ್ಡಿಗಾಗಿ ಬಂದವ್ಳು, ಬೇಸರವಾದ ಕೂಡಲೇ ದೂರ ಹೋಗ್ತಾಳೆ. ಇವನ ಎದುರ್ಗೇ ಮತ್ತೊಬ್ಬನ ಜೊತೆ ಓಡಾಡ್ತಾಳೆ. ಈ ಆಘಾತದಿಂದ ಎಚ್ಚೆತ್ತುಕೊಳ್ಳಲಾರದೆ ಮೋಹನ, ಇದ್ದ ಹಣ ಎಲ್ಲಾ ಖರ್ಚು ಮಾಡಿ ದೇಶ ಸುತ್ತಿಬರ್‍ತಾನೆ, ಆದರೂ ಶಾಂತಿ

ಸಿಗೋಲ್ಲ. ಒಬ್ಬ ಬಡ ಗುಮಾಸ್ತೆ, ಅವನ ತಂದೆಯಿಂದ ಸಹಾಯ ಪಡೆದಾತ. ಇವನನ್ನು ಗುರುತಿಸಿ, ಆಸರೆ ನೀಡಿ ಮುಂದೆ ಓದಲು ಅನುಕೂಲ ಮಾಡಿ ಕೊಡ್ತಾನೆ. ಆ ಗುಮಾಸ್ತನ ಮಗಳು ಜಾನಕಿ ಇವನಲ್ಲಿ ಅನುರಕ್ತಳಾಗು ತ್ತಾಳೆ. ಆದರೆ ಪ್ರೇಮದಲ್ಲಿ ನಿರಾಶನಾದ ಮೋಹನ, ಜಾನಕೀನೂ ಇನ್ನೊಂದು ಶೋಭಾನೇ ಅಂತ ತಿರಸ್ಕರಿಸುತ್ತಾನೆ. ಅವನಿಗೆ ಹೆಣ್ಣಿನಲ್ಲಿ ನಂಬಿಕೆಯೇ ಹೋಗಿಬಿಟ್ಟಿರುತ್ತೆ. ಆಗ ತನ್ನ ಆರಾಧನೆಯಿಂದ, ಪ್ರೇಮ ದಿಂದ, ಜಾನಕಿ ಮೋಹನನಲ್ಲಿ ಶಾಂತಿ ತುಂಬಿ ಅವನ ಕೈ ಹಿಡಿಯುತ್ತಾಳೆ. ಇಷ್ಟೇ ಕಥೆ. ಮೋಹನನ ಪಾತ್ರಧಾರಿ ಬಹಳ ಚೆನ್ನಾಗಿ ನಟಿಸಿದ್ದಾನೆ, ಈ ಕತೆ ಕೇಳಿದ್ಯಲ್ಲಾ ಅದರ ಮೇಲೆ ನಿನ್ನ ಅಭಿಪ್ರಾಯ ಏನು ಸರೂ."

"ಹೇಳಲೇ ಬೇಕೂಂದ್ರೆ, ಮೋಹನನ ಬಾಳ್ವೆ ಜಾನಕಿಯಿಂದ ರೂಪು ಗೊಂಡಿತು. ಎಲ್ಲರೂ ಶೋಭಾಗಳೇ ಎಂದು ಅವನ ಮನ ತರ್ಕಿಸಿದ್ದು ಸಹಜ. ಆದರೂ ಜಾನಕಿಯ ಪ್ರೇಮ ಪೂಜೆಗಳನ್ನು ಅರ್ಥಮಾಡಿಕೊಂಡ ಮೋಹನ. ಚೆನ್ನಾಗಿದೆ ಮಧುರಾ ಕಥೆ. ಮೋಹನನ ವ್ಯಕ್ತಿತ್ವ ಜಾನಕಿಯ ಪಾತ್ರ ಸೃಷ್ಟಿ ಚೆನ್ನಾಗಿದೆ."

"ಮೊದಲು ಕೈ ಇಲ್ಲಿ ಕೊಡು ಸರೂ. ನಿನ್ನ ದುರ್ಬಲ ಹೃದಯಾನ್ನ ನೀನು ಗೆದ್ದುಬಿಟ್ಟಿದ್ದಿ." ಅಚ್ಚರಿಯಿಂದ ಕೈಯನ್ನೇನೋ ಅವಳ ಕೈಲಿಟ್ಟೆ— "ಯಾಕೆ ಹಾಗಂತೀಯ ಮಧುರಾ ?"

"ನಾನೇನು ಭಾವಿಸಿದ್ದೆ ಬಲ್ಲೆಯಾ ? ಶೋಭಾಳಿಂದ ದೂರವಾದ ಮೋಹನ ಆತ್ಮಹತ್ಯೆ ಮಾಡಿಕೊಳ್ಳಬೇಕಿತ್ತು. ಅವನಿಗೆ ಬೇರೆ ಯಾರನ್ನೂ ಪ್ರೇಮಿಸೋ ಅಧಿಕಾರವೇ ಇರಲಿಲ್ಲ. ಅವನ ಪ್ರೇಮ ನಿಜವಿದ್ದರೆ ಅವನು ವಿರಹಿಯಾಗೇ ಜನ್ಮ ಸಫಲ ಮಾಡ್ಕೋಬೇಕಿತ್ತು. ಜಾನಕಿಯ ಪ್ರೇಮ ಪೂಜೆ ಯಿಂದಲೂ ಅವನು ಅಲುಗಬಾರದಿತ್ತು ಎಂದೆಲ್ಲಾ ಅಂತೀಯೇನೋ ಅಂತಿದ್ದೆ."

"ಏಕೆ ಹಾಗಂದುಕೊಂಡೆ ?"

"ಇದುವರೆಗಿನ ನಿನ್ನ ವೇದಾಂತ ಕಂಡು. ಆದರೆ ಈಗ ನನಗೆ ಎಷ್ಟು ಸಂತೋಷ ಆಗ್ತಾ ಇದೆ ಗೊತ್ತಾ ಸರೂ, ಮೋಹನನಂತೆಯೇ, ಸರಳಾನೂ

ಸಹ ಒಬ್ಬ ಪ್ರೇಮಾರಾಧಕನ ಪ್ರೇಮದ ಮೂರ್ತಿಯಾಗಿ ಬಾಳ್ವೆ ತುಂಬಿ ಕೊಳ್ಳುತ್ತಾಳೆಂದು ನನಗಾನಂದ."

"ಸರಳೆಯ ವಿಷಯ ಈಗ ಬೇಡ. ನನ್ನ ಮನಸ್ಸು ಈವತ್ತು ಬಹಳ ಶಾಂತಿಯಿಂದ ತುಂಬಿದೆ. ಆದ್ದರಿಂದ ನನ್ನ ಸ್ವಂತವಿಷಯದ ಚರ್ಚೆ ಬೇಡ ಮಧುರಾ ಈಗ" ಅಂಗಲಾಚಿದೆ.

"ಈಗೇಕೆ, ಯಾವಾಗಲೂ ಬೇಡ. ನೀನು ಈಗಿರೋ ಹಾಗೆ ಪ್ರತಿ ದಿನಾನೂ ಎಲ್ಲಾ ಕೆಲಸಗಳಲ್ಲಿ ಆಸಕ್ತಿ ತೋರಿಸ್ತಾ ಇದ್ದರೆ ಸ್ವಲ್ಪದಿನದಲ್ಲೇ ನೀನೊಂದು ಉದಾತ್ತ ವ್ಯಕ್ತಿ ಆಗ್ತೀ ಸರೂ. ನಿನ್ನಲ್ಲಿ ಏನು ಗುಣಗಳಿವೆ ಅನ್ನೋದು ನಿನಗೇ ಗೊತ್ತಿಲ್ಲ."

"ಇನ್ನು ಮೇಲೆ ಹೀಗೇ ಇರೋಕ್ಕೆ ಪ್ರಯತ್ನಿಸ್ತೀನಿ. ನಿಮ್ಮಿಬ್ಬರಿಂದ ನನ್ನ ಮನಸ್ಸಿಗೆ ಬಹಳ ನೆಮ್ಮದಿ ಬಂದಿದೆ. ಮಧುರಾ ಒಂದು ಮಾತು ಕೇಳ್ಲಾ....? ನಗ್ತೀಯೇನೋ."

"ನಗೋಂತಾದ್ದಾದ್ರೆ ಖಂಡಿತ ನಗ್ತೀನಿ, ನಗೋಂತಾದ್ದಲ್ಲದಿದ್ರೆ ನಗೋಲ್ಲ."

"ಸಂಗೀತ ಕಲಿಯೋದು ಕಷ್ಟಾನಾ ?"

"ಕಷ್ಟ, ಸುಲಭ. ಅವರವರ ಆಸಕ್ತಿಯ ಆಳದ ಮೇಲೆ ನಿಲ್ಲುತ್ತೆ. ಸರಳಾ."

"ನಾನು ಈಗ ಕಲೀಬೇಕೂಂದ್ರೆ. ನನಗೆ ಬರುತ್ತೇಂತೀಯಾ ?"

"ಓಹೋ ಧಾರಾಳವಾಗಿ. ಅದು ಸರಿ ಇದೇನು ಇದ್ದಕ್ಕಿದ್ದ ಹಾಗೆ ಸಂಗೀತದ ಮೇಲೆ ವ್ಯಾಮೋಹ"

"ಇದ್ದಕ್ಕಿದ್ದಂತೆ ಏನೂ ಅಲ್ಲ ಮಧುರಾ. ನನ್ನ ಮನಸ್ಸು ಅಂಧ ಕಾರದಲ್ಲಿ ತೊಳಲ್ತಾ ಇದ್ದಾಗ. ನೀನೂ ನಿಮ್ಮ ತಾಯೀನೂ ಪಿಟೀಲು ಸ್ತೋತ್ರಗಳಿಂದ ನನ್ನ ಗಮನ ಬದಲಾಯಿಸಿ ಉಪಕಾರ ಮಾಡಿದ್ರಿ. ಆವತ್ತಿ ನಿಂದ ಸಂಗೀತ ಕಲೀಲಿಲ್ಲವಲ್ಲಾ ಅನ್ನೋ ಸಂಕಟ ನನಗಿದ್ದೇ ಇದೆ.

ಈವತ್ತು ನಾನೊಬ್ಬಳೇ ನನ್ನ ಪಾಡಿಗೆ ಸ್ತೋತ್ರ ಹೇಳ್ತಾ ಕಣ್ಣು ಮುಚ್ಚಿಕೊಂಡಿದ್ರೆ ನನಗೇ ತಿಳೀದ ಯಾವುದೋ ಒಂದು ಅಪೂರ್ವ ಆನಂದ

ವಾಯ್ತು. ದೇವರ ಮೇಲೆ ಇಷ್ಟವಾದ ನಾಲಕ್ಕು ಹಾಡು ಹೇಳಿಕೊಳ್ಳೊ ಹಾಗೆ ನಾನೇಕೆ ಕಲೀಬಾರ್ದು ಅಂತ ಆಸೆ ಹುಟ್ಟಿದೆ ಮಧುರಾ"

"ತುಂಬ ಸಂತೋಷ ಸರೂ. ನಿನಗಾಗಿರೋ ಆನಂದ ಬರಿಯ ಸಂಗೀತದ ಪ್ರಭೆಯಿಂದಲ್ಲ. ನಿನ್ನಲ್ಲಿ ನಶಿಸಿ ಹೋಗಿದ್ದ ಪ್ರೇಮ ಇಂದು ದೇವರ ಕಡೆಗೆ ತಿರುಗಿ ಮತ್ತೆ ಉದಯವಾಗಿದೆ. ಆ ಪ್ರೇಮ ಈಗ ಸಾಧಾರಣ ಪ್ರೇಮವಲ್ಲ. ಅದು ದೈವಿಕವಾಗಿದೆ. ಅದೇ ಭಕ್ತಿ, ಇದು ನಿನ್ನ ಒಳ್ಳೆಯದಕ್ಕೇ ಸರಳಾ. ದೇವರಲ್ಲಿ ನಿನಗೆ ಭಕ್ತಿ ಹೋಗಿಬಿಟ್ಟಿತ್ತು. ಅದು ಈಗ ಮತ್ತೆ ಚಿಗುರಿದೆ. ದೇವರಲ್ಲಿ ನಂಬಿಕೆ ಬಿಡಬಾರದು ಸರೂ. ಕಡೆಯಪಕ್ಷ ನಮಗೆ ಕಾಣದ ವ್ಯಕ್ತಿ ಅವನು ಎನ್ನುವಷ್ಟು ನಂಬಿಕೆಯಾದ್ರೂ ಇರ್ಬೇಕು. ಅವನ ಆರಾಧನೆಯಿಂದ ಮನಸ್ಸಿಗೆ ಆನಂದವಾಗುತ್ತೆ, ಶಾಂತಿ ಸಿಗುತ್ತೆ. ಅಂತಹ ಆರಾಧನೆಗೆ ಒಂದು ಮಾರ್ಗಬೇಕು. ಗಾಯನವೂ ಅಂತಹ ಒಂದು ಮಾರ್ಗ, ನಿನ್ನ ಆಸೆ ಸಹಜವಾಗಿದೆ. ನೀನೂ ಮತ್ತೆ ಆಶಿಸುವಂತಾದೆಯಲ್ಲಾ ಅಂತ ನನಗೆಷ್ಟೊ ಸಂತೋಷವಾಗ್ತಾಯಿದೆ."

"ನನ್ನ ಪ್ರಶ್ನೆಗೆ ಉತ್ತರ ಕೊಡು ಮಧುರಾ. ನನಗೆ ಸಂಗೀತ ಕಲಿಯಲು ಸಾಧ್ಯವೆ."

"ಮನುಷ್ಯನ ಮನಸ್ಸಿಗೆ ಅಸಾಧ್ಯವಾದದು ಯಾವುದೂ ಇಲ್ಲ. ಖಂಡಿತ ಕಲಿಯಬಲ್ಲೆ."

"ಸುಳ್ಳು ಆಶ್ವಾಸನೆ ಕೊಡಬೇಡ ಮಧುರಾ. ಈ ವಯಸ್ಸಿನಲ್ಲಿ ಸ,ರಿ,ಗ,ಮ,ಪ,ದ,ನಿ ಅಂತ ಪ್ರಾರಂಭಿಸೋಕ್ಕೆ ನಾಚಿಕೆಯಾಗುತ್ತೆ. ಅಷ್ಟಕ್ಕೂ ರಾಗಗಳ ಸ್ಥಾಯಿ ಹಿಡಿಯಬಲ್ಲೆನೆ ಅಂತ ನನಗೇ ಸಂಶಯ."

"ಒಂದು ಕೆಲಸ ಮಾಡು. ನಿಂಗಷ್ಟು ನಾಚ್ಕೆ ಆದ್ರೆ ಯಾವುದಾದ್ರೂ ವಾದ್ಯ ಕಲಿತುಕೋ. ಹಾಡುಗಳನ್ನು ಬೇಕಾದ್ರೆ ಸುಮ್ಮನೆ ಕಲಿತುಕೊ ನಾನು ಹೇಳಿಕೊಡ್ತೇನೆ. ನಿನಗೆ ಯಾವ ವಾದ್ಯ ಇಷ್ಟ"

"ವೀಣೆ."

"ಒಳ್ಳೇದು ವೀಣೇನೆ ಕಲಿತುಕೊ. ಅದಕ್ಕೆ ನಾಚಬೇಕಾಗಿಲ್ಲ. ಎಷ್ಟೋ ಜನ ಮದುವೆ ಆಗಿ ಮಕ್ಕಳಾದ ಮೇಲೆ ಕಲಿತು ಪ್ರಾವಿಣ್ಯ ಪಡೀತಾರೆ"

"ನಾಳೆ ನೋಡೋಣ" ಅಂದೆ,

ಎಷ್ಟು ವರ್ಷಗಳಿಂದ ಮಾಡದ ನಿದ್ದೆ ಅಂದು ಮಾಡಿದೆ.

ಮಾರನೆಯ ದಿನದಿಂದ ನಾನು ಬೇರೆ ಸರಳಾ ಆದೆ. ಮನೆಯ ಕೆಲಸ. ತೋಟದ ಕೆಲಸಗಳಲ್ಲಿ ಆಸಕ್ತಿ ವಹಿಸಿದೆ. ಮನೆಯನ್ನು ಬಹಳ ಆಧುನಿಕ ಮಾಡಿದೆ. ಮನಸ್ಸಿಗೆ ಒಂದು ಘಳಿಗೆಯಾದರೂ ಬಿಡುವು ಕೊಡಲಿಲ್ಲ ದುಃಖಿಸಲು, ಮಧುರಳಿಂದ ಹಾಡು ಕಲಿಯುವುದು, ಭಜನೆ ಮಾಡುವುದು ಇವುಗಳಲ್ಲಿ ಸಮಯ ಸವೆಸಲು ಆರಂಭಿಸಿದೆ.

ಒಂದು ಶುಕ್ರವಾರ ಸಂಜೆ ನನ್ನ ಹೊಸ ಗೆಳತಿ ಮನೆಗೆ ಬಂದಳು ವೀಣಾ. ಮಧುರಾ ಕರೆ ತಂದಿದ್ದಳು. ಒಳ್ಳೆಯದಿನ ನೋಡಿ ವೀಣೆಗೆ ಪೂಜೆ ಮಾಡಿ ಪಾಠ ಆರಂಭಿಸಿದೆ.

ನನ್ನ ಹೃದಯ ವೀಣೆಯ ಭಾವನೆಗಳ ನಾದಕ್ಕೆ ಸರಿಯಾಗಿ. ಕೈ ಬೆರಳುಗಳು ತಂತಿಗಳನ್ನು ಮಿಡಿಯತೊಡಗಿದವು. ನನಗೆ ತಿಳಿಯದಂತೆ ಬಹಳ ಮುಂದೆ ಮುಂದೆ ಹೋದೆ. ಮೇಷ್ಟರಿಗೂ ಆಶ್ಚರ್ಯವಾಯಿತು ನನ್ನ ಪ್ರತಿಭೆಗೆ– "ಮುಂಚೆ ನುಡಿಸುತ್ತಿದ್ದೆಯೇನಮ್ಮಾ" ಎಂದು ವಿಚಾರಿಸಿದರು. ಮಧುರಳನ್ನು ಕೇಳಿದರಂತೆ––"ನೊಂದ ಹುಡುಗಿಯಿರಬೇಕು. ವೀಣೆಯ ಮೂಲಕ ಮಾತನಾಡುತ್ತಾಳೆ" ಅಂದರಂತೆ.

ಹಾಗೆ ವೀಣಾ ನನ್ನ ಭಾವನೆಗಳನ್ನು ನುಡಿಯುವ ನನ್ನ ಬಾಳ ಸಂಗಾತಿಯಾದಳು. ಈಗ ತಿಳಿಯಿತೇ ಸಮಿತ್ರಾ, ವೀಣೆಯ ತಂತಿ, ಕಳೆದವಾರ ಮುರಿದಾಗ. ನಾನಷ್ಟು ನೊಂದುದಕ್ಕೆ ಕಾರಣ. ಮಾರನೇ ದಿನವೇ ಸರಿ ಮಾಡಿಸಿದೆ ಅಂತಿಟ್ಟುಕೊ.

ಆ ತಾಯಿ ಮಕ್ಕಳಿಬ್ಬರೂ, ನನ್ನ ಜೀವನದಲ್ಲಿ ಹೊಸ ಚೇತನ ತುಂಬಿ ಮತ್ತೆ ನನ್ನನ್ನು ಮನುಷ್ಯಳನ್ನಾಗಿ ಮಾಡಿದರು. ಸಾಹಿತ್ಯದಲ್ಲಿ ನನಗೆ ಅಭಿರುಚಿ ಇದೆ ಎಂದು ತಿಳಿದಾಗ ಮಧುರಾ ನನಗೇ ಬೇಸರವಾಗುವಷ್ಟು 'ಬರಿ' 'ಬರಿ' ಎಂದು ಬಲವಂತ ಮಾಡಿದಳು. ಮಕ್ಕಳಿಗೆ 'ಇಷ್ಟು ಪಾಠ ಇವತ್ತು ಬರೆಯಲೇ ಬೇಕು, ಎಂದು ಮೇಷ್ಟ್ರು ನಿರ್ಬಂಧ ಮಾಡೋ ಹಾಗೆ 'ಎಷ್ಟು ಬರೆದೆ, ತೋರಿಸು' ಅಂತ ಕೂತುಬಿಡುತ್ತಿದ್ದಳು. ಹಾಗೆ ಅವಳ ಬಲವಂತದಿಂದ ಬರೆದ ಮೊದಲ ಕತೆಯೇ, ಸೀನಿವತ್ತು ಓದಿ ಕಣ್ಣೀರು ಸುರಿಸಿದ "ಗೌರಿ" ಕಥೆ.

ಮಧುರಳ ಸಂಗದಲ್ಲೇ ನಾನು ರಾಜನನ್ನು ಮರೆಯಲು ಸಾಧ್ಯವಾದದ್ದು. ಅವನನ್ನು ಮರೆತೆ ಅಂದ್ರೂ ಸುಳ್ಳಾಗುತ್ತೆ ಸುಮಿತ್ರಾ, ಇಂದಿಗೂ ನಾನವನ ಆರಾಧನೆ ನಿಲ್ಲಿಸಿಲ್ಲ. ಅವನನ್ನು ಮನುಷ್ಯ ಮಟ್ಟಕ್ಕಿಂತ ಹೆಚ್ಚಾಗಿ ಆರಾಧಿಸಿಬಿಟ್ಟೆ. ಅದಕ್ಕಾಗೇ ಅವನಲ್ಲಿ ಲೋಪ ಕಂಡಾಗ ತತ್ತರಿಸಿಹೋದೆ. ನನಗಾದ ಆಘಾತದಿಂದ ನಾನು ಇನ್ನೂ ಚೇತರಿಸಿಕೊಂಡಿಲ್ಲ; ಚೇತರಿಸಿಕೊಳ್ತೀನಿ ಅನ್ನೋ ಭರವಸೇನೂ ಇಲ್ಲ. ಅದಕ್ಕಾಗೇ ನಾನ್ಯಾವಾಗ್ಲೂ ವ್ಯಕ್ತಿ ಆರಾಧನೆ ಬೇಡಾಂತ ಹೇಳ್ತಾ ಇರೋದು."

"ಮಧುರಾ ಮತ್ತು ರಾಧಮ್ಮ ಎಷ್ಟು ಒಳ್ಳೇವ್ರಲ್ವಾ ಅಕ್ಕ ?"

"ಹೌದು ಒಳ್ಳೆಯವರು. ಆದರೆ ನನಗೆ ಒಳ್ಳೆಯವರು ನನ್ನನ್ನು ಆದರಿಸೋವ್ರು ಬಹಳ ಕಾಲ ನನ್ನೊಂದಿಗೆ ನಿಲ್ಲೋಲ್ಲ. ಅದು ಯಾರದೋ ಶಾಪ ನನಗೆ." ನಿಟ್ಟುಸಿರು ಬಿಟ್ಟಳು.

"ಅಂದರೆ ! ಅವರಿಬ್ರನ್ನೂ...." ಸಂಶಯದಿಂದ ಕೇಳಿದಳು ಸುಮಿತ್ರ.

ಮಧುರಾಗೆ ಮದುವೆ ಆಯಿತು. ಹೈದರಾಬಾದಿಗೆ ಹೊರಟು ಹೋದಳು. ರಾಧಮ್ಮನೂ ಅವಳ ಜೊತೆಗೇ ಹೋದರು. ನನ್ನನ್ನು ಬಿಟ್ಟು ಹೋಗುವಾಗ ಬಹಳ ದುಃಖಿಸಿಬಿಟ್ಟರು. ಮಧುರಾ ಇನ್ನಿಲ್ಲದೆ ನನ್ಗೆ ಹೇಳಿದಳು—'ಭೂಷಣನ ಬಳಿಗೆ ಹೋಗು' ಅಂತ. ನನಗಿಷ್ಟವಾಗಲಿಲ್ಲ ಹೋಗಲು. ಭೂಷಣ ತಪ್ಪಿದರೆ ಮಾಯ, ಮಾಯ ತಪ್ಪಿದರೆ ಭೂಷಣ ಮೇಲಿಂದ ಮೇಲೆ ಪತ್ರ ಬರೆಯುತ್ತಿದ್ದರು. ನನಗೆ ಹೋಗಲು ಭಯ, ಒಂದೇ ಒಂದು ಕಾರಣಕ್ಕಾಗಿ. ಅಲ್ಲಿ ಹೋದರೆ ಅವರು ನನ್ನನ್ನು ಮದುವೆಯ ಗೊಂದಲದಲ್ಲಿ ಸಿಕ್ಕಿಸುತ್ತಾರೆ ಎಂಬ ದಿಗಿಲು. ನನಗೆ ಮದುವೆ ಆಗಿದೆ; ನನ್ಗೆ ಬೇರೆ ಮದುವೆ ಬೇಡ ಎಂದು ನಾನವರಿಗೆ ಹೇಳಲಾರೆ ಎಂದು ನನಗೆ ಗೊತ್ತಿತ್ತು.

• • • •

ಮಧುರಾ ಊರಿಗೆ ಹೋಗುವ ಮುನ್ನ ಬಂದ ಭೂಷಣನ ಕಾಗದ, ಮಧುರಾಗೂ ನನ್ಮೇಲೆ ಕೋಪ ತರಿಸಿತ್ತು. ಅಷ್ಟು ಅಕ್ಕರೆಯಿಂದ ಬರೆದಿದ್ದ ಅಣ್ಣ

ಒಲವಿನ ಪ್ರಿಯ ತಂಗಿ ಸರೂ,

ನೀನಿನ್ನೂ ನಿನ್ನ ವಿಷಯವಾಗಿ ಯೋಚನೆ ಮಾಡಲಿಲ್ಲವೇ ? ನೀನಿಲ್ಲಿಗೇ ಬಂದುಬಿಡಮ್ಮ. ನಿನ್ನ ಜವಾಬ್ದಾರಿ ನನ್ನದೆಂದು ನಾನು ನಿನ್ನನ್ನು ಬಲಾತ್ಕರಿಸುತ್ತಿಲ್ಲ. ನೀನು ನಮ್ಮ ಮೂವರ ಕಣ್ಮಣಿ. ಆದರೂ ಬರೀ ನೋವುಗಳನ್ನೇ ನೋಡ್ತಿದ್ದಿ. ನೀನು ದುಡೀತಾ ಇರೋದು ನೆನಸಿಕೊಂಡ್ರೇನೆ ನಮಗೆ ದುಃಖವಾಗುತ್ತೆ.

ಇಲ್ಲಿಗೆ ಬರೋಕ್ಕೆ ಅಡ್ಡಿ ಏನಿದೆ ಸರಳಾ ? ನಿನ್ನ ಮನಸ್ಸಿಗೆ ಬೇಸರವಾಗದ ಹಾಗೆ ನೋಡ್ಕೋತೀನಿ. ಹಿಂದೆ ನಿನ್ನ ಮತ್ತು ರಾಜನ ವಿಷಯವಾಗಿ ನಾನು ಬಹಳ ಕಠಿಣವಾಗಿ ವರ್ತಿಸಿದೆ. ಅದಕ್ಕಾಗಿ ನನ್ಗೆ ಈವತ್ತಿಗೂ ಬೇಸರ. ಮಾಯ ಯಾವಾಗ್ಲೂ ನಿನ್ನ ವಿಷಯವಾಗಿ ಚಿಂತೆ ಮಾಡ್ತಾಳೆ. ಆಗಲೇ ಅಪ್ಪ ಹೋಗಿ ಮೂರುವರ್ಷಗಳಾಯ್ತು. ಆದರೂ ನೀನು ಇನ್ನೂ ಅಲ್ಲೇ ಇರಬೇಕೂಂತಿಯಾ. ಯೋಚನೆ ಮಾಡು. ನೀನು ಬರ್‍ತೀನಿ ಅಂತ ಮನಸ್ಸು ಮಾಡಿದ ಕೂಡಲೇ ಬಂದು ಕರಕೊಂಡು ಬರ್‍ತೀನಿ. ಆದ್ರೆ ನಿನ್ನ ಬಲವಂತಪಡ್ಸಿ ನಿನ್ನ ಮನಸ್ಸು ಮಾತ್ರ ನೋಯಿಸಲಾರೆ. ನಿನ್ನ ಮನಸ್ಸಿಗೆ ನೆಮ್ಮದಿ ಅಲ್ಲೇ ಸಿಗು ವಂತಿದ್ದರೆ ಅಲ್ಲೇ ಇರು. ಆದ್ರೆ ಒಂದು ಮಾತು ಮಾತ್ರ ನೆನಪಿಟ್ಕೋ. ಭೂಷಣ ಮತ್ತು ಮಾಯ ಇಬ್ಬರ ಮನಗಳೂ, 'ಮನೆಯೂ ಸದಾ ನಿನಗಾಗಿ ತೆರೆದಿರುತ್ತೆ. ಕರೆದು ಆದರಿಸುತ್ತದೆ. ಯಾವಾಗ ಬೇಕೆಂದರೆ ಆಗ ಬಾ. ಕಡೆಯ ಪಕ್ಷ ಒಂದೆರಡು ತಿಂಗಳು ರಜಾ ಪಡೆದಾದರೂ ಬಾಮ್ಮ.

ಇತೀ ಆಶೀರ್ವಾದ

—ಭೂಷಣ

"ನೀನು ಖಂಡಿತವಾಗಿ ಬೊಂಬಾಯಿಗೆ ಹೋಗ್ಲೇಬೇಕು ಸರಳಾ" ಅಧಿಕಾರವಾಣಿಯಿಂದ ಆದೇಶಿದಳು ಮಧುರಾ ಕಾಗ್ದ ನೋಡಿದಾಗ.

"ನನ್ನಿಂದ ಸಾಧ್ಯವಿಲ್ಲ ಮಧುರಾ. ನಾನೆಲ್ಲಿಗೂ ಹೋಗಲಾರೆ."

"ಏಕೆ ಅಂತ ಹೇಳು. ನನಗಂತೂ ಅರ್ಥವಾಗೋಲ್ಲ ನಿನ್ನ ಮನಸ್ಸು."

"ನನ್ಗೆ ಬೊಂಬಾಯಿಯ ನಾಗರಿಕ ಬಾಳು ಸರಿತೋರೋಲ್ಲ. ನಾನು ವಿರಾಗಿನಿ."

"ನೀನಲ್ಲಿ ಹೋಗದೇನೇ ಹಾಗೆ ಹೇಳೋದು ಸರಿಯಲ್ಲ, ಅಲ್ಲದೆ ವಿರಾಗಿನಿ ಆಗೋಂತಾದ್ದು ಏನಾಗಿದೆ ಸರೂ ನಿನ್ಗೆ?"

"ಅದನ್ನ ನಾನು ಹೇಳ್ಬೇಕಾ ಮಧುರಾ ನಿನ್ಗೆ?"

"ನಿನ್ನ ಅಭಿಪ್ರಾಯಗಳೇ ಸರಿಯಿಲ್ಲ ಸರಳಾ. ನಿಷ್ಠೆ–ಶ್ರದ್ಧೆ ಅಂತೀಯ ಅದರರ್ಥ ಏನು ಹೇಳು? ಒಬ್ಬ ಅಯೋಗ್ಯನ ವಿಷಯದಲ್ಲಿಯೇನು ನಿನ್ನ ನಿಷ್ಠೆ–ಶ್ರದ್ಧೆಗಳು! ಯಾವುದಕ್ಕೂ ಅರ್ಹತೆ ಪಡೆದಿರೋವ್ರಲ್ಲಿ ತೋರ್ಸು ನಿನ್ನ ಶ್ರದ್ಧೇನ. ನಿನ್ನ ತಂದೆಗೋಸ್ಕರ ಧ್ಯೇಯಗಳನ್ನಿಟ್ಕೊ. ಅವ್ರು ನಿಷ್ಠಾವಂತರಾಗಿ ಬಾಳಿದವ್ರು. ಅವರ ಹೆಜ್ಜೇಲಿ ನೀನು ಆದರ್ಶ ಬಯಸು. ಆದ್ರೆ" ನಿನ್ನ ಒದ್ದುಕೊಂಡು ಹೋದ ವ್ಯಕ್ತೀಲಿ, ಈ ಕುರುಡು ನಿಷ್ಠೆ ಏತಕ್ಕೆ?"ಎಂದು ಮುಖ ಕೆಂಪಗೆ ಮಾಡಿ ಸ್ವಲ್ಪ ಗಟ್ಟಿಯಾಗೇ ಹೇಳಿದಳು.

"ಮಧುರಾ !" ಕೋಪದಿಂದ ನಾನೂ ಕೂಗಿದೆ.

"ಹೌದು ಸರಳಾ. ನಿನ್ಗೆ ರಾಜನ್ನ ಬೈದ್ರೆ ಕೋಪ ಬರತ್ತೆ ಅಂತ ಸಂಗೊತ್ತು." ಮೃದುವಾದಳು ಮತ್ತು ಅಂದಳು "ಆದ್ರೂ ಎಷ್ಟು ದಿನಾಂತ ಅವನ ನೆನಪಿನಲ್ಲಿ ಕಾಲ ಕಳೀತಿ ? ನಿನ್ನ ಬಾಳಿಗೂ ಒಂದು ಗುರಿ ಬೇಡ್ವಾ ?"

"ಅವನ ನೆನಪನ್ನು ನಾನು ಅಳಿಸಲಾರೆ ಮಧುರಾ. ಅದರಿಂದಾಗಿಯೇ ಮೇಲೆ ಚೆನ್ನಾಗಿ ತೋರಿದರೂ ದಿನ ದಿನಕ್ಕೆ ನನ್ನ ಹೃದಯ ಸುಣ್ಣದ ಗೂಡಾಗಿ ಹೋಗುತ್ತಿದೆ."

"ನೆನಪು ಅಳಿಸೋಕ್ಕೆ ಸಾಧ್ಯವಿಲ್ಲ. ಅದರಲ್ಲೂ ನೀನು ಹೀಗೆ ನಿನ್ನವರಿಂದ ದೂರ ನಿಂತು, ಒಂಟಿ ಬಾಳಿಗಾಗಿ ಆಶಿಸಿದರೆ, ಅವನ ನೆನಪಿನ ಬಳ್ಳಿಗೆ ನೀರೆರೆದಂತೆ ಆಗುತ್ತದಷ್ಟೆ. ನೆನಪು ನಮ್ಮ ಬಾಳಿನುದ್ದಕ್ಕೂ ನಮ್ಮ ಜೊತೆಯಲ್ಲೆ ಬರುತ್ತೆ ಸರೂ, ಹಾಗೆಂದು ನಮ್ಮ ಬಾಳನ್ನೇ ಬಲಿಮಾಡಿಕೊಳ್ಳಬೇಕೆ? ಹೇಳು"

"ನಾನೇನು ಮಾಡಲಿ ಮಧುರಾ. ನಾನೆಷ್ಟು ಪ್ರಯತ್ನಿಸಿದರೂ, ಪ್ರತಿಯೊಂದು ವಿಷಯದಲ್ಲೂ ಅವನನ್ನ ನೆನಪಿಸಿಕೊಳ್ಳದೆ ಇರಲಾರೆ, ಕಳೆದ ಹತ್ತು ವರ್ಷಗಳಲ್ಲಿ ನನ್ನ ಬಾಳಿನ 'ಹಾಸು' ನಾನಾದರೆ 'ಹೊಕ್ಕು' ಅವನಾಗಿದ್ದ."

"ಅದು ಸುಳ್ಳು, ನೀನು ಪ್ರಯತ್ನಿಸುತ್ತಲೇ ಇಲ್ಲ ಅಂತ ನನ್ನ ಅಭಿಪ್ರಾಯ....ನಾನೊಂದು ಮಾತು ಹೇಳಲೇ ಸರೂ?"

"ಏನು ಮಧುರಾ ಅದು?"

"ನೀನು ಮದ್ವೆ ಮಾಡಿಕೋ ಸರೂ."

"ಹಾಸ್ಯ ಮಾಡ್ತೀಯಾ, ನನ್ನ ವಿಷಯ ತಿಳಿದೂ ಸಹ."

"ಇಲ್ಲೇ ನನಗೆ ನಿನ್ನ ವಿಷಯ ತಿಳೀದೇ ಇರೋದು....ಏನು, ಏನಾಗಿದೆ ನಿನಗೆ? ದೇವರು ನಿನ್ಗೆ ಯಾವುದಕ್ಕೆ ಕಡಿಮೆ ಮಾಡಿದ್ದಾನೆ ಹೇಳು. ವಿದ್ಯೆ ಇಲ್ಲವೆ? ರೂಪ ಇಲ್ಲವೆ....?"

"ಎಲ್ಲಾ ಇದೆ. ಆದರೆ...."

"ಮನಸ್ಸಿಲ್ಲಾನ್ನು" ಗಡುಸಾಗಿ ಒದರಿಬಿಟ್ಟಳು.

"ಹೌದು ಮಧುರಾ, ಒಬ್ಬರಿಗೆ ಮನಸ್ಸು, ದೇಹ ಎಲ್ಲಾ ಒಪ್ಪಿಸಿದ ಮೇಲೆ, ಮತ್ತೆ ಅವನ್ನು ಇನ್ನೊಬ್ಬರಿಗೆ ಅರ್ಪಿಸಲು ಆಗುತ್ತಾ? ನಿರ್ಮಾಲ್ಯ ವನ್ನು ದೇವರಿಗೆ ಇಟ್ಟಂತೆ ಮಧುರಾ. ಇರಬಹುದು, ನಾನು ಮದುವೆ ಯಾಗುವಾತನಿಗೆ ನನ್ನ ವಿಷಯ ತಿಳಿಯದೆ ಮದುವೆಯೂ ಆಗಬಹುದು. ಆದರಿಂದ ಆತನಿಗೆ ದ್ರೋಹ, ನನಗೆ ಆತ್ಮವಂಚನೆ ಅಲ್ಲವೇ?....ಏಕೆ ಸುಮ್ಮ ನಾದೆ ಮಧುರಾ....ಮಾತಾಡು."

"ಏನು ಮಾತಾಡಲಿ ನಿನ್ನ ಬಳಿ? ಅಲ್ಲಾ ಸರಳಾ, ಈಗ ಆತ್ಮವಂಚನೆ ಹೇಗಾಗುತ್ತೆ ಹೇಳು ! ಇಬ್ಬರೂ ಪರಸ್ಪರ ಪ್ರೀತಿಸುತ್ತಾ ಇದ್ದು, ಬಲವಂತ ಕಾರಣಗಳಿಗಾಗಿ, ನೀನು ಬೇರೇವ್ರಿಗೆ ಕೊರಳು ಬಗ್ಗಿಸಬೇಕಾಗಿ ಬಂದಿದ್ರೆ, ಆಗ ಆತ್ಮವಂಚನೆಯ ವಿಷಯ. ನಿನ್ನ ಪ್ರೀತೀನ ಅಲ್ಲಗಳೆದು ಹೋಗಿರುವವನ ಸಲುವಾಗಿ, ನೀನು ಮದುವೆ ಮಾಡಿಕೊಳ್ಳದೆ ಉಳಿದು, ಆತ್ಮವಂಚನೆ ಮಾಡಿ ಕೊಳ್ತಾ ಇದ್ದಿ. ನಿನಗೆ ನೀನೇ ದ್ರೋಹ ಬಗೆದು ಬಲಿ ಮಾಡಿಕೊಳ್ತಾ ಇದ್ದೀಯ. ನೋಡು ಸರಳಾ, ಬದುಕು ಇರೋದು ಬಾಳೋದಕ್ಕೇ ವಿನಾ ಬಲಿ ಮಾಡೋಕ್ಕಲ್ಲ. ನೀನು ಇಷ್ಟು ಅವನಿಗಾಗಿ ತಪಸ್ಸು ಸಲ್ಲಿಸ್ತಾ ಇದ್ದೀ ಅಲ್ವಾ, ಅವನು ಒಂದು ತೃಣವಷ್ಟಾದ್ರೂ ನಿನ್ನ ನೋವು ಗಮನಿಸ್ತಾನೇನು? ಏತಕ್ಕೆ ಈ ಆಜನ್ಮ ತಪಸ್ಸು? ನಿನ್ನ ಹೃದಯಕ್ಕೆ ಒದ್ದು, ಕಂಡವರ ಹಿಂದೆ ತಿರುಗುವ ಒಬ್ಬ ದೊಡ್ಡ ಮನುಷ್ಯ ಅವನು ಎಂದಲ್ಲವೆ? ಈ ಪ್ರಶ್ನೆಗೆ ನಿನ್ನ ಉತ್ತರ--ನನ್ನ ಮನಸ್ಸು ಪಾಪ, ಅವನಿಗೆ ಹೇಗೆ ಗೊತ್ತು ಅಂತೀ."

ಯಾರಿಗೂ ಬಾಗದ ಅಭಿಮಾನಿ ನೀನು, ಅವನಿಗಾಗಿ ಎಷ್ಟು ಗೋಗರೆ

ದಿದ್ದಿ—'ನನ್ನ ಕೈ ಬಿಡಬೇಡಿ ರಾಜ' ಅಂತ. 'ನಿಮ್ಮ ಸಂತೋಷಕ್ಕೆ ಅಡ್ಡಿ ಬರೋಲ್ಲ' ಅಂತ ನೊಂದು ನುಡಿದು `ನೀನು ದೂರ ನಿಂತಾಗಲಾದರೂ ಅವನಿಗೆ ನಿನ್ನಲ್ಲಿ ನಿಜವಾದ ಪ್ರೇಮವಿದ್ದಿದ್ದರೆ, ನೀನು ತಪ್ಪುತಿಳಿದಿದ್ದೀ ಯೆಂದು ತಿದ್ದಲು ಬರುತ್ತಿರಲಿಲ್ಲವೇನು? ನೀನಾಗಿ ನೀನು ಅವನ ದುರ್ಬಲತೆ, ನಿನ್ನನ್ನು ನೋಯಿಸ್ತಾ ಇದೆ ಅಂತ ಅವನ ಮಡಿಲಲ್ಲೀ ಮುಖವಿಟ್ಟು ಅತ್ತಾಗ ಲಾದರೂ, ಅವನು ಸ್ವಲ್ಪಮಟ್ಟಿಗಾದರೂ ತಿದ್ದಿಕೊಂಡು, ಭಾರತಿಯನ್ನು ಬಿಟ್ಟು ನಿನ್ನ ಬಳಿ ಬರಬಹುದಿತ್ತಲ್ಲಾ ಸರೂ. ಅವನಿಗೆ ಬೇಕಿದ್ದುದು ನೀನಲ್ಲ, ನಿನ್ನ ಪ್ರೇಮವಲ್ಲ, ನಿನ್ನ ಒಳ್ಳೆಯತನ ಮತ್ತು ನಿನ್ನ ದೇಹ. ಅವು ಸುಲಭ ವಾಗಿ ಸಿಗುತ್ತೇಂತ ನೀನು ತೋರಿಸಿಕೊಟ್ಟೆ. ಪೂರ್ತಿಯಾಗಿ ದುರುಪಯೋಗ ಪಡಿಸಿಕೊಂಡ. ಅಂತಹವನಲ್ಲಿ ನಿನ್ನ ಆರಾಧನೆ ! ಹುಂ !

ನಿನ್ನಂತಹ ಹುಚ್ಚರನ್ನು ನಾನು ನೋಡಿದ್ದೀನಿ. ಆದರೆ ಅವರು ಇಷ್ಟು ವಿಷಮಕ್ಕೆ ಹೋಗಲಿಲ್ಲ. ಕೆಲಕಾಲದ ಮೇಲೆ ಹಳೇದನ್ನ ಮರೆತು ಹೊಸ ಬಾಳ್ವೆ ರೂಪಿಸಿಕೊಂಡಿದ್ದಾರೆ. ಈಗ ಸಂತೋಷವಾಗಿದ್ದಾರೆ. 'ನೀನು ಸರಿ ಹೋಗ್ತೀಯಾ ?' ಅನ್ನೋ ಪ್ರಶ್ನೆ ನನ್ನ ಮನಸ್ಸಿನಲ್ಲಿ ಬೃಹದಾಕಾರವಾಗಿ ನಿಂತಿದೆ. ಎರಡು ವರ್ಷಕ್ಕೂ ಹೆಚ್ಚಾಯಿತು ನೀನು ನಮ್ಮ ಬಳಿಗೆ ಬಂದು. ಬರಬರುತ್ತಾ ಮನೆ ಕೆಲಸಗಳಲ್ಲಿ ನೀನು ಆಸಕ್ತಿ ತೋರಿಸಿದಾಗ, ಬದಲಾದೆ ಯಲ್ಲಾ ಅಂತ ಆನಂದಪಟ್ಟೆ. ಆದರೆ ನೀನು ಇಷ್ಟು ಸೂಕ್ಷ್ಮಮತಿಯುವಳು ಅಂತ ನಾನಂದುಕೊಳ್ಳಲಿಲ್ಲ ಸರೂ. ನೀನು ಹೀಗಿದ್ದರೆ ಹೇಗೆ ಸರೂ ?" ಎಂದು ಅತ್ತೇ ಬಿಟ್ಟಳು.

"ನನಗಾಗಿ ನೀನು ಅಳ್ತೀಯಾ ಮಧುರಾ ?"

"ಅಳಬೇಕೋ, ನಗಬೇಕೋ ನಂಗೆ ತಿಳೀತಿಲ್ಲ. ಅದ್ರೂ ಹೇಳ್ತೀನಿ. ನಿನ್ನ ತಪಸ್ಸು ಫಲಿಸೋಲ್ಲ ಸರೂ, ಅದಕ್ಕೇ ಹೇಳ್ತೀನಿ—ನಲ್ಮೆಯ ಅಣ್ಣನ ಪ್ರೀತಿಯ ಕರೆ ನೆನೆಸಿಕೊಂಡು ಬೊಂಬಾಯಿಗೆ ಹೋಗು. ಅಲ್ಲಿನ ಹೊಸವಾತಾ ವರಣದಲ್ಲಿ ನಿನ್ನ ಮನಸ್ಸಿಗೆ ನೆಮ್ಮದಿ ಸಿಕ್ಕಬಹುದು. ಮನಸ್ಸು ಬದಲಾಗ ಬಹುದು. ನಿನ್ನ ಅಣ್ಣಂದಿರ, ಅತ್ತಿಗೆಯ ಮಮತೆಯ ಆಹ್ವಾನಕ್ಕಿಂತ, ತಿರಸ್ಕೃತ ಪ್ರೇಮವೇ ನಿನಗೆ ಅಧಿಕವೆ ಸರೂ? ಎಷ್ಟೇ ಆಗಲಿ, ಅವರೂ ಮತ್ತು ನೀನೂ ಒಂದೇ ರಕ್ತ ಹಂಚಿಕೊಂಡು ಹುಟ್ಟಿದವರು. ಎಲ್ಲೇ ಇರಲಿ, ನೀನು

ದುಃಖಿಸ್ತೀ ಅಂತ ತಿಳಿದ್ರೇ ಅವರ ಕರಳು ಚುರ್ರೆನ್ನುತ್ತೆ. ಅದೇ ಸ್ನೇಹಿತರಿಗೇನು? ನೀನು ಚೆನ್ನಾಗಿರೋವರ್ಗ್ಗೆ ಆಶ್ರಯಿಸ್ತಾರೆ, ಆಮೇಲೆ ಅವರೆಲ್ಲೊ?"

"ಹಾಗೆನ್ನ ಬೇಡ ಮಧುರಾ, ನೆಂಟರಿಗಿಂತ ಸ್ನೇಹಿತರೇ ಹೆಚ್ಚು."

ಹೌದು, ಅಂತಹ ಸ್ನೇಹಿತರು ಇದ್ರೆ ಮಾತ್ರ. ಅಂತಹ ಸ್ನೇಹ ಈ ಕಾಲದಲ್ಲಿ ನಾವು ನೋಡಿಲ್ಲ. ಪ್ರಾಣಕ್ಕೆ ಪ್ರಾಣಕೊಡೋ ಸ್ನೇಹ ಈಗೆಲ್ಲಿದೆ ಸರೂ ? ಈಗ ನೋಡು, ನಾನೂ ನೀನೂ ಎಷ್ಟು ಸ್ನೇಹಿತರು ಅಂತ ಹೊಗಳುತ್ತೆ ಜನ. ಆದರೆ ನಿನ್ನ ಬಾಳಿಗಾಗಿ ನಾನು ಏನಾದ್ರೂ ತ್ಯಾಗ ಮಾಡ್ತಿದೀನಾ ? ನನ್ನ ಸ್ವಾರ್ಥ ನೋಡಿಕೊಂಡು, ಮದುವೆಯಾಗಿ ಹೊರಟು ನಿಂತಿದ್ದೀನಿ. ಅಚ್ಚಳಿಯದ ಆದರ್ಶ ಸ್ನೇಹವಾಗಿದ್ರೆ, ನಾನು ನನ್ನ ಸುಖ ತ್ಯಾಗಮಾಡಿ, ನಿನ್ನ ಜೊತೆ ನಿಲ್ಲಬೇಕಿತ್ತು. ಅದೇ ಭೂಷಣ ನೋಡು. ನಿನ್ನನ್ನು ಎಷ್ಟು ಬಯ್ದಿದ್ದಾನೆ, ನೋಯಿಸಿದ್ದಾನೆ ಆದ್ರೂ ನೀನಿಲ್ಲಿ ಒಂಟಿ ಅಂತ ಒದ್ದಾಡ್ತಾನೆ. ಅವನ ಬಳೀನೇ ನೀನಿರಬೇಕು ಅಂತ ಆಶಿಸ್ತಾನೆ. ಅದೇ ಕರುಳಿನ ಕರೆ ಸರೂ. ಆದರ್ಶ ಸ್ನೇಹ ಪುಸ್ತಕಗಳಲ್ಲಿ, ಸಿನಿಮಾಗಳಲ್ಲಿ ಮಾತ್ರ. ಆದರೆ ಕರುಳಿನ ಕರೆ ಸಹಜ, ವಾಸ್ತವ ಜೀವನದಲ್ಲಿ ಕೇವಲ" ನಿಲ್ಲಿಸಿದಳು ನಾನು ಮೂಕವಾಗಿ ಆಳುತ್ತಿದ್ದೆ.

"ಅಳಬೇಡ ಸರಳಾ. ನಿನ್ನ ಹೃದಯಕ್ಕೆ ಎಂತಹ ಘಾಸಿ ಆಗಿದೆ ಅಂತ ತಿಳೀದೇ ಇರೋಷ್ಟು ಮೂಢಳಲ್ಲ ನಾನು. ಆದರೆ ಏಟು ಬಿದ್ದು ಕೆಳಗುರುಳಿದವನು ಎದ್ದು ನಿಂತುಕೊಳ್ಳಲಾರೆ ಅಂತ ಮಲಗಿಯೇ ಇದ್ದು ಬಿಡೋಲ್ಲ. ಎಚ್ಚೆತ್ತು, ಚೇತರಿಸ್ಕೊಂಡು ಮತ್ತೆ ಎದುರಾಳೀನ ಉರುಳಿಸೋಕ್ಕೆ ಹೋರಾಡ್ತಾನೆ, ನೀನು ಹೋರಾಡಬೇಕು. ನಿನ್ನ ನಿರಾಶೇನೇ ನಿನ್ನನ್ನು ತುಳಿಯೋಕೆ ಬಿಡಬಾರದು ಸರಳಾ" ಎಂದಳು.

"ಪ್ರತಿ ದಿನಾನೂ ನಾನು ದೇವರನ್ನು ಬೇಡ್ತಾಲೇ ಇದ್ದೀನಿ–ನನ್ಗೆ ನೆಮ್ಮದಿ ಕೊಡು. ಬಂದಿದ್ದೆಲ್ಲಾ ಎದಿರಿಸೊ ಧೈರ್ಯ ಕೊಡು–ಅಂತ" ಮೆಲ್ಲಗೆ ಉಸುರಿದೆ.

"ನಿನ್ನ ಪ್ರಯತ್ನಾನೇ ಇಲ್ದೇ, ದೇವ್ರನ್ನ ಬೇಡಿದ್ರೆ ಅವನೇನು ಮಾಡ್ತಾನೆ. **'God helps those who help themselves'** ಅಂತ ಇಲ್ಲವೇನು? ಪ್ರತಿಯೊಬ್ಬನೂ ಬಂದ ಕಷ್ಟ ಎದುರಿಸೇ ಎದುರಿಸ್ತಾನೆ.

ಆದ್ರೆ ನೀನು ಮಾತ್ರ ಹೇಡಿ ಹಾಗೆ ಎದುರಿಸಬೇಡ. ಎದೆಯೊಡ್ಡಿ ಧೈರ್ಯ ದಿಂದ ಹೋರಾಡು ಅಂತ್ಲೇ ನಾನು ಹೇಳ್ತಾ ಇರೋದು."

"ಅಂದ್ರೆ. ನನಗರ್ಥವಾಗಲಿಲ್ಲ" ನನ್ಗೆ ನಿಜವಾಗ್ಲೂ ಅವಳೇನು ಹೇಳ್ತಿದ್ದಾಳೇಂತ ತಿಳೀಲಿಲ್ಲ.

"ಅಂದ್ರೆ, ನಾವು ಹೊರಟುಹೋದ ಮೇಲೆ ಇಲ್ಲಿ ಇರ್ಬೇಡ. ಹೆಣ್ಣಿನ ಜೀವನದಲ್ಲಿ ಉದ್ಯೋಗ ಅಷ್ಟು ಮುಖ್ಯವಾದದ್ದೇನಲ್ಲ. ಗಂಭೀರವಾಗಿ ರಾಜೀನಾಮೆ ಕೊಟ್ಟು ಬೊಂಬಾಯಿಗೆ ಹೋಗು. ಭೂಷಣ ನೀ ಅಲ್ಲಿ ಹೋದ ಕೂಡಲೇ. ಮದ್ವೆ ಆಗು ಅಂತ ಏನೂ ಬಲವಂತಪಡಿಸೋಲ್ಲ. ನಿನ್ನ ಮನಸ್ಸು ವಾತಾವರಣಕ್ಕೆ ಹೊಂದಿಕೊಂಡು. ಹಳೇದೆಲ್ಲಾ ಮರೆಯೋ ಹಾಗೇ ಆದ ಕೂಡಲೇ ಮದ್ವೇಗೆ ಒಪ್ಕಿಕೋ, ಒಬ್ಬ ಯುವಕನನ್ನು ಅದೃಷ್ಟವಂತನನ್ನಾಗಿ ಬದುಕೋಕ್ಕೆ ದಯಮಾಡು. ನಿರ್ಭಾಗ್ಯ ರಾಜನನ್ನೇ ನೆನಸಿ ಎಲ್ಲರೂ ಹಾಗೇ ಅಂತ ಅಂದ್ಕೋಬೇಡ....ನಿನ್ಗೆ ಗೊತ್ತಿಲ್ಲ ಸರೂ, ಮದ್ವೆಯಿಲ್ಲದೆ ಹೆಣ್ಣಿನ ಬಾಳು ಅಪೂರ್ಣ"

"ನನ್ಗೆ ಮದ್ವೆ ಆಗಿಲ್ಲಾಂತ ನಿನ್ನ ಅಭಿಪ್ರಾಯವೇನು ಹಾಗಾದ್ರೆ ?" ಕೇಳಿದೆ ನಾನು,

"ಇದೆಂತಹ ಹುಚ್ಚು ಪ್ರಶ್ನೆ ಸರಳಾ." ಅಚ್ಚರಿಯಿಂದ ಕೇಳಿದಳು ಗೆಳತಿ.

"ನನ್ಗೆ ಮದ್ವೆಯಾಗಿದೆ ಮಧುರಾ. ಸಮಾಜದ ಎದುರಿನಲ್ಲಿ ನನ್ನ ಕೊರಳಿಗೆ ಅವನು ತಾಳಿ ಕಟ್ಟದ ಮಾತ್ರಕ್ಕೆ ನಾವು ಸತಿಪತಿಗಳಲ್ಲವೇನು ? ದೇವರ ದೃಷ್ಟಿಯಲ್ಲಿ, ನಮ್ಮ ದೃಷ್ಟಿಯಲ್ಲಿ ನಾವೆಂದೋ ಮದುವೆಯಾಗಿದ್ದೇವೆ."

"ಇದು ಒಂದು, ವಿಚಿತ್ರವಾದ. ನಾನು ಯಾರ ಬಾಯಲ್ಲೂ ಕೇಳಿಲ್ಲ ಇಂತಹ ವಾದವನ್ನು, ಸಮಾಜದ ಒಪ್ಪಿಗೆಯ ಮುದ್ರೆ ಇಲ್ಲದ ಮೇಲೆ ಅದು ಮದುವೆಯೇ ಅಲ್ಲ. ಪ್ರಣಯ ಮದುವೆಯಾಗಲಾರದು ಸರೂ, ಮದುವೆದು ಮುಂಚಿನ ಕೆಲವು ಚೇಷ್ಟೆಗಳನ್ನು ಪ್ರಣಯ ಅನ್ನಬಹ್ದು. ಆದರೆ ಮದುವೆಯೆನ್ನುವುದು ಒಂದು ಪವಿತ್ರ ಬಾಂಧವ್ಯ. ಆ ಬಾಂಧವ್ಯ ಚಿರವಾಗಿ ನಿಲ್ಲಬೇಕಾದ್ರೆ, ಸಮಾಜದ ಒಪ್ಪಿಗೆ, ಹಿರಿಯರ ಆಶೀರ್ವಾದ

ಅಗತ್ಯ. ಯಾವುದೋ ನಿಮಗೆ ಅರಿಯದ ಒಂದು ಉನ್ಮತ್ತತೆಯಿಂದ ಸ್ವಲ್ಪ ಎಚ್ಚರ ತಪ್ಪಿದಾಗ. ನಡೆದ ಒಂದು ಘಟನೆಯೇ ನಿನ್ನನ್ನು ಅವನಿಗೆ ಗಂಟು ಹಾಕಿತು ಅಂತ ಯಾಕಂದುಕೋತಿ. ನೀನು ಪವಿತ್ರ ಹೃದಯಳು ಉದಾತ್ತ ಗುಣದವಳು, ನಿನ್ನನ್ನು ದೈವ ಎಂದೆಂದಿಗೂ ಅವನಿಗೆ ಕಟ್ಟಿ ಹಾಕುತ್ತಿರಲಿಲ್ಲ, ಕಟ್ಟಿಹಾಕಲಿಲ್ಲ. ದೈವಕ್ಕೆ ಗೊತ್ತು ಯಾರನ್ನು ಯಾವು ದನ್ನು ಎಲ್ಲಿಡಬೇಕೆಂದು.

ಅವನಂತಹ ಸಾಮಾನ್ಯರಿಗೆ ನಿಲುಕೋ ನಕ್ಷತ್ರವಲ್ಲ ಸರೂ ನೀನು.... ಹಾಗೇಕೆ ನೋಡ್ತೀ ? ಹೊಗಳ್ತಾ ಇದ್ದೀನೀಂತಾ ? ಸ್ನೇಹಿತರು ಯಾವಾಗ್ಲೂ ಹೊಗಳೋಲ್ಲ. ಇದ್ದದ್ದು ಹೇಳ್ತಾರೆ ಅಷ್ಟೆ. ನೀನು ಮದುವೆ ಆಗು, ಇಲ್ಲ ಹಾಗೇ ಉಳಿ, ನಿನ್ನಿಂದ ನಾಲ್ಕು ಜನಕ್ಕೆ ಸಹಾಯ ಸಿದ್ಧ ಅನ್ನೋ ದನ್ನ ನಿನ್ನ ಉದಾರ ಹೃದಯ ಹೇಳುತ್ತೆ. ಇದೊಂದು ವಿಷಯದಲ್ಲಿ ಯಾಕೆ ಸರೂ ನೀನು ಹೀಗೆ ? ಆ್ಞ ? ಎಚ್ಚೆತ್ತುಕೋ ಸರಳಾ. ನಿನ್ಹಾಗೆ ನರಳೋ ಹತ್ತೂ ಜನಕ್ಕೆ ಧೈರ್ಯ ಕೊಡೋ ನಿದರ್ಶನ ನೀನಾಗಬೇಕು. ನಿನ್ನಲ್ಲಿದ್ದ ಆ ಧೈರ್ಯ ಎಲ್ಲಿ ಹೋಯಿತಮ್ಮ ?" ಆವೇಶದಲ್ಲಿ ಹೇಳ್ತಾನೇ ಇದ್ದಳು. ನಾನು ಒಂದು ಮಾತನ್ನಾದರೂ ನಡುವೆ ಆಡಲಿಲ್ಲ.

"ಬೇಸರ ಆಯ್ತಾ ಸರಳಾ ? ನಾಳೆ ಹೊರಡೋವ್ಳು, ಈವತ್ತು ಯಾಕೆ ಹೀಗೆ ನನ್ಗೆ ಭಾಷಣ ಬಿಗೀತಿದಾಳೇಂತ."

"ಛೆ ! ಛೆ ! ಇಲ್ಲಮ್ಮ, ನಿನ್ಗೆ ಇಷ್ಟು ಮಾತಾಡೋಕೆ ಬರುತ್ತಾಂತ ಅಚ್ಚರಿಯಿಂದ ನೋಡ್ತಾ ಇದೀನಿ. ಸ್ವಾಭಾವಿಕವಾಗಿ ನೀನು ಹೆಚ್ಚು ಮಾತಾಡೋವಳಲ್ಲವಲ್ಲಾ ಅದಕ್ಕೆ."

"ಮತ್ತೇನು ಮಾಡೋದು ? ಮಾತಾಡದ ನನ್ನನ್ನೇ ಭಾಷಣ ಮಾಡಿ ಸೋಷ್ಟಾಗಿದೆ ನಿನ್ನ ಹುಚ್ಚು. ನಿನ್ನಂತಹ ಹುಚ್ಚರನ್ನು ಕಂಡಾಗ, ಜೀವವೇ ಇಲ್ಲದ ಕಲ್ಲುಗಳೂ ಎದ್ದುನಿಂತು ಉಪದೇಶ ಕೊಡಬಲ್ಲವೋ ಏನೋ ! ಆದ್ರೂ ಜೀವ ಇರೋ ನಿನ್ನ ಗೆಳೆಯರಿಗೆ ಮಾತ್ರ ಹೃದಯಬಾರದು, ನಾಲಗೆ ಹೊರ ಳದು. ನಿನಗೊಂದು ನಿಷ್ಠುರ ಸತ್ಯ ನಾನಿಂದು ಹೇಳಬೇಕಾಗಿದೆ ಸರಳಾ. ಆದ್ರೆ ನೀನು ಇದನ್ನು ಹೇಗೆ ನುಂಗುವೆಯೋ ತಿಳಿಯದು. ಅದಕ್ಕಾಗೇ ಯೋಚಿಸ್ತಾ ಇದ್ದೀನಿ."

"ಏನದು ಹೇಳಿಬಿಡು ಮಧುರಾ. ಪೂರಾ ಮುಳುಗಿದವಳಿಗೆ ಮಳೆ, ಗಾಳಿ, ಚಳಿಯೇನು ?"

"ನೀನು ಮಾಡ್ತಿರೋ ತಪಸ್ಸು ಆ ಕೃತಘ್ನ ರಾಜನಿಗಾಗಿ ತಾನೆ ?"

"ವಿರಾಗಿನಿಯಾಗಿ, ವಿರಹಿಯಾಗಿ ಉಳಿಯೋ ನಿರ್ಧಾರ ಮಾಡಿರೋದು ಅವನಲ್ಲಿನ ನಿನ್ನ ಪ್ರೇಮದ ಕುರುಹಾಗಿ ತಾನೆ."

"ಅವನು ನಿನ್ನ ಆ ತಪಸ್ಸಿಗೆ ಅರ್ಹನಲ್ಲ. ಆ ನಿನ್ನ ದೇವನು ಮತ್ತೊಬ್ಬ ಭಕ್ತಳ ತಪಸ್ಸಿಗೆ ಮೆಚ್ಚಿ ಪ್ರತ್ಯಕ್ಷನಾಗಿದ್ದಾನೆ."

"ಅದು ಗೊತ್ತಲ್ಲ ನನ್ಗೆ, ಅವನು ಇಂದಲ್ಲದಿದ್ದರೆ ನಾಳೆ ನನ್ನನ್ನು...."

"ನಿಲ್ಸು ಸರಳಾ, ಇಷ್ಟು ತತ್ವ ಬೋಧಿಸಿದರೂ ಮೊದಲಿಗೇ ಬರ್ತೀಡ. ನಿನ್ನ ಅಂಧಶ್ರದ್ಧೆಗೆ ಧಿಕ್ಕಾರ ! ಹೋಗು. ನಿನ್ನ ರಾಜನಿಗೆ ಬೇರೆ ಹುಡುಗೀನ್ನ ಕೊಟ್ಟು ಮದ್ವೆ ಆಯ್ತು. ಭಾರತಿಯಲ್ಲ ಸರೂ" ಎಂದು ತಲೆ ಹಿಡಿದ್ಮ ಕುಳಿತಳು.

"ಏನಂದೆ ? ನನ್ನ ರಾಜನಿಗೆ ಮದ್ವೆಯಾಯಿತೆ? ನನ್ನ ರಾ....ಜ....ನಿಗೆ ಮ....ದು....ವೆ ಆಗಿಹೋಯಿತೆ ?"

"ಮಧುರಾ ಮಾತನಾಡಲಿಲ್ಲ. ಅವಳಬಳಿ ಕುಳಿತು ಅಂಗಲಾಚಿ ಕೇಳಿದೆ- "ಮಧುರಾ, ಇದು ನಿಜಾನಾ ? ನನ್ನ ರಾಜನ ಮದುವೆ ? ನಿನಗೆ ಹೇಗೆ ಗೊತ್ತು ?" ನನಗಿಂತ ಹೆಚ್ಚು ಅಳುತ್ತಿದ್ದಳು ಅವಳು.

"ಅವನನ್ನು ನಿನ್ನ ರಾಜ ಅಂತ ಕರೀಬೇಡ ಸರೂ. ನನ್ಗೆ ಮೈ ಉರಿಯುತ್ತೆ. ಅಯೋಗ್ಯ ! ಅವ್ನಿಗೆ ಮದುವೆ ಆಯಿತು. ಮನೆಗೇ ಬಂದಿತ್ತು ಆಹ್ವಾನ ಪತ್ರಿಕೆ. ನೀನು ಆಗ್ಲಾನೇ ಚೇತರಿಸ್ಕೊಳ್ತಾ ಇದ್ದೆ. ನಿನ್ನನ್ನು ಮತ್ತೆ ಆಘಾತದಿಂದ ಕೆಳಗೆ ತಳ್ಳಲು ನನ್ನ ಮನಸ್ಸು ಒಪ್ಪಲಿಲ್ಲ. ನಿನ್ಗೆ ತೋರಿಸಲಿಲ್ಲ ಸರಳಾ, ನನ್ನನ್ನು ಕ್ಷಮಿಸು."

"ಪರವಾಗಿಲ್ಲ ಮಧುರಾ, ಕ್ಷಮಿಸಲು ಏನಿದೆ? ನನ್ನ ಹೃದಯ ಹರಿದು ಹತ್ತು ಚೂರು ಮಾಡಿದವನನ್ನೇ ನಾನು ಏನೂ ಮಾಡಲಾರದವಳಾಗಿರೋವಾಗ, ನನ್ನ ಒಳಿತಿಗಾಗಿ ನೀನು ಮಾಡಿದ ಕೆಲ್ಸವೇನೂ ಅಕ್ಷಮ್ಯವಲ್ಲ.

ಆದ್ರೆ ಮದ್ವೆ ಸಮಯದಲ್ಲಿ ನನ್ಗೆ ತಿಳಿದಿದ್ರೆ ಚೆನ್ನಾಗಿತ್ತು." ಎಲ್ಲಿಯೋ ನೋಡುತ್ತಾ ಹೇಳಿದೆ. ನನ್ನ ಕಣ್ಣು ತುಂಬಾ ನೀರು ತುಂಬಿತ್ತು. ನನ್ನ ಕಣ್ಣುಮುಂದೆ ಹಸೆಮಣೆಯ ಮೇಲೆ ನಾನೂ ರಾಜ ಇಬ್ಬರೇ ಕಾಣಿಸಿದೆವು ಅದೆಷ್ಟೋ ಬಾರಿ ಕನಸುಕಂಡಿದ್ದೆ ನಮ್ಮಿಬ್ಬರನ್ನೂ ಮದುಮಕ್ಕಳಂತೆ. ಆದ್ರೆ ಆ ಘಳಿಗೇಲಿ ರಾಜನೇನೋ ಕಾಣಿಸಿದ. ಆದ್ರೆ ಅವ್ನ ಪಕ್ಕದಲ್ಲಿ ಮಸುಕು ಮಸುಕಾದ ಚಿತ್ರ.

ನಾನು ಅತ್ತುಬಿಟ್ರೆ ಒಳ್ಳೆಯದು ಅನ್ನಿಸಿತೇನೋ ಮಧುರಳಿಗೆ. ನನ್ನನ್ನು ತೊಡೆಯ ಮೇಲೆ ಮಲಗಿಸಿಕೊಂಡು–"ಅತ್ತುಬಿಡು ಸರೂ. ಚೆನ್ನಾಗಿ ಅತ್ತುಬಿಡು. ನೀನು ಈವತ್ತು ತುಂಬಾ ಅಳಬೇಕು" ಎಂದು ಬಲವಂತ ಮಾಡಿದಳು. ನಾನು ಷಾಕಿನಿಂದ ಹುಚ್ಚಾಗಿಬಿಡಬಹ್ದು ಎಂದು ಹೆದರಿದ್ದಳು. ಆದ್ರೆ ನಾನು ಇನ್ನು ಅಳುವ ಕಾರಣವಿರಲಿಲ್ಲ. ಅವನು ಮದುವೆಯಾಗದೆ ಇರುವವರೆಗೆ ನನ್ನನ್ನು ಮುಂದೆ ಮತ್ತೆ ಪ್ರೀತಿಸಬಹುದು, ವರಿಸಬಹುದು ಎಂಬ ಆಸೆ ಅಥವಾ ಮರೆತೇಬಿಡಬಹುದು ಎಂಬ ನಿರಾಸೆ. ಈ ಆಸೆನಿರಾಸೆಗಳ ತುಮುಲದಲ್ಲಿ ಅಳುತ್ತಿದ್ದೆ. ನೊಂದುಕೊಳ್ಳುತ್ತಿದ್ದೆ. ಆದರೆ ಅಂದು ನನ್ನ ಸರ್ವನಾಶನದ ಮುಕ್ತಾಯವಾಗಿತ್ತು.

ನನ್ನ ಸಂಘರ್ಷಣೆಯಲ್ಲಿ ನಿರಾಶೆಗೆ ವಿಜಯ ಸಿಕ್ಕಿತ್ತು. ಹೃದಯಕ್ಕೆ ಇನ್ನು ಆಂದೋಳನವಿಲ್ಲ. ನಿಷ್ಕರ್ಷೆಯಾದ ಮಾರ್ಗ ದೊರಕಿತ್ತು. ಇನ್ನು ರಾಜನಿಗೂ, ನನಗೂ ಸಂಬಂಧವಿಲ್ಲ. ಅವನಿನ್ನು ನನಗೆ ಪರಪುರುಷ ಒಬ್ಬ ಭಾಗ್ಯಶಾಲಿನಿಯ ಪತಿ. ನಾನು ಅವನ ಬಾಳಹಾದಿಯ ಒಬ್ಬ ದಾರಿಹೋಕಳು ಮಾತ್ರ.

"ಮಧುರಾ, ನಾನು ಬಹಳ ದಿನದಿಂದ ಅವನಿಗೊಂದು ಒಳ್ಳೇ ಉಡುಗೊರೆ ಕೊಡಬೇಕು ಅಂತಿದ್ದೆ. ಅವನಿಗೆ ಲಭ್ಯವಿಲ್ಲ ಬಿಡು." ಎಂದು ಅವಳ ತೊಡೆಯ ಮೇಲಿಂದಲೇ ಅವಳ ಮುಖದ ಕಡೆಗೆ ನೋಡಿದೆ.

"ಸರಳಾ" ಎಂದು ನನ್ನೆದೆಯ ಮೇಲೆ ಮುಖವಿಟ್ಟು ಅತ್ತಳು. ನನಗೆ ಸೋಜಿಗ. ಒಂದೇ ಒಂದು ನಿಮಿಷದಲ್ಲಿ ಹೃದಯ ಕಲ್ಲಾಗಿಹೋಗಿತ್ತು. ಗಂಟೆಗಟ್ಟಲೆಯ ಭಾಷಣ ನೀಡಿದ ಪ್ರಭಾವವನ್ನು "ರಾಜನ ಮದುವೆ" ಬೀರಿತ್ತು.

"ಅಷ್ಟು ಅಳಲು ಏನಾಯಿತು ಮಧುರಾ ?" ಈಗ ನಾನು ಅವಳನ್ನು ಸಂತೈಸುವಂತೆ ಕೇಳಿದೆ.

"ನೀನು ಇಷ್ಟು ಒಳ್ಳೆಯವಳಾಗಬೇಡ ಸರೂ, ಪ್ರಪಂಚ ನಿನ್ನನ್ನು ಹರಿದು ತಿಂದುಬಿಡುತ್ತದೆ. ನಿನ್ನ ಬಾಳಿನ ಧೂಮಕೇತುವಾಗಿ ಬಂದು ಬದುಕನ್ನೇ ಸಂಪೂರ್ಣ ನುಂಗಿದ ಅವನಿಗೆ ಉಡುಗೊರೆ ಕೊಡಬೇಕಿತ್ತು ಅಂತೀಯಲ್ಲಾ ಸರೂ."

"ಅದು ನನ್ನ ದೌರ್ಭಾಗ್ಯ. ಅವನನ್ನು ಬಯ್ಯಬಾರದು. ನನ್ನನ್ನು ಪ್ರೇಮಿಸಿ ಮದುವೆಯಾಗದ ಮಾತ್ರಕ್ಕೆ ಅವನನ್ನೇಕೆ ತೆಗಳಬೇಕು ? ಪ್ರೇಮ ಬಲವಂತಕ್ಕೆ ಸಿಗೋ ವಸ್ತುವಲ್ಲ. ಅವನಿಗೆ ನನ್ನನ್ನು ಮದುವೆಯಾಗಬೇಕು ಅನ್ನಿಸಲಿಲ್ಲ. ನೀನೇ ಅಂದಹಾಗೆ ಬಹುಶಃ ದೇವರಿಗೆ ಅನ್ನಿಸಿರಬೇಕು ಇವಳಿಗೆ ಅವನು ಬೇಡ ಅಂತ. ನಾವು ಮಕ್ಕಳಿಗೆ ಮಾಡೋಲ್ವಾ. ಇಷ್ಟವಾದ ವಸ್ತೂನ್ನ ಮಗೂ ಕೈಯಲ್ಲಿ ಹಿಡಿದಿದೆ. ದೊಡ್ಡವರು ಬೇಡಪ್ಪ, ಇದು ನಿಂಗೆ ಮೈಗೆ ಒಳ್ಳೇದಲ್ಲ ಅಂತ ಕಿತ್ತುಕೊಂಡು, ಮಗುವಿಗೆ ಬೇಡದ ಒಂದು ವಸ್ತುವನ್ನು ಕೈಯಲ್ಲಿ ತುರುಕ್ತೀವಿ. ಮತ್ತೆ ಕೆಲವು ಮಕ್ಕಳಿಗೆ ಏನೂ ಕೊಡದೇನೇ ಸಮಾಧಾನ ಮಾಡ್ತೀವಿ. ಹಾಗೇತಾನೇ ನಮ್ಮ ಬಾಳೂ ಸಹ. ನನಗಿಷ್ಟ ವಾದವನನ್ನು ನನಗೊಳ್ಳೆಯದಲ್ಲ ಅಂತ ನನ್ನಿಂದ ದೂರ ಮಾಡಿದ್ದಾನೆ. ನನ್ನ ಬಾಳನ್ನು ಬರಿದಾಗಿಯೇ ಆದರೂ ಇಡಬಹುದು. ಇಲ್ಲಾ ನೀನು ಬಯಸೋ ಹಾಗೆ ಬೇಡದ ಇನ್ನೊಬ್ಬರನ್ನು ನನ್ಮೇಲೆ ತಳ್ಳಿದ್ರೂ ತಳ್ಳಬಹುದು ದೈವ.

ಇನ್ನು ನಾನು ದುಃಖಿಸೋಲ್ಲ ಮಧುರಾ. ನನ್ನ ಬಾಳಿಗೊಂದು ನೆಲೆ ಸಿಕ್ಕಿದಂತಾಯಿತು. ಇನ್ನು ಹೃದಯಕ್ಕೆ ಹೋರಾಟವಿಲ್ಲ. ನೆಮ್ಮದಿಯೇ, ಅನಂತ ನೆಮ್ಮದಿ. ನನ್ನ ಬಾಳು, ನನಗಾಗಿ ನಾನು ಬಾಳುವುದಿಲ್ಲ ಇನ್ನು ಮುಂದೆ ಈ ಘಟ ಉರುಳೋವರೆಗೆ ಸರ್ಕಾರ ಸೇವೇಲ್ಲಿ ಬಡವರ ಸಹಾಯಕ್ಕಾಗಿ ಇರ್ತೀನಿ ಹೃದಯ ಇಂದಿಗೆ ಪರಿಪಕ್ವವಾಯಿತು. ನೀನೂ, ಅಮ್ಮನೂ ಇನ್ನು ಸರಳೆಯ ಬಗೆಗೆ ಯೋಚಿಸಬೇಕಾಗಿಲ್ಲ. ನಿಶ್ಚಿಂತೆಯಿಂದ ಊರಿಗೆ ಹೋಗ್ಬಹುದು.

ನನಗೊಂದು ಕಡೇ ಉಪಕಾರ ಮಾಡ್ತೀಯಾ ? ನಾನು ಬೇಡಿ ಅಥವಾ ಬೇಡದೆ ಎಷ್ಟೋ ಉಪಕಾರ ಮಾಡಿದ್ದೀ. ನನ್ನನ್ನು ಬಹಳ ಕ್ರೂರ ಸಮಯ ದಲ್ಲಿ ಆದರಿಸಿ ಮನುಷ್ಯಳನ್ನಾಗಿ ಮಾಡಿದ್ದಿ, ಹೆಚ್ಚು ಉಪಚಾರದ ಮಾತು

ಆಡಲಾರೆ, ನನ್ನೀ ಋಣ ಯಾವತ್ತಿಗೆ ತೀರಿಸ್ತೀನೋ ತಿಳೀದು. ನಿಮ್ಮಿಬ್ಬರಿಗೂ ಎಷ್ಟೋ ದೈಹಿಕ, ಮಾನಸಿಕ ತೊಂದರೆಗಳನ್ನು ಕೊಟ್ಟಿದ್ದೀನಿ. ನೀನು ಅದಕ್ಕೆ ಏನೂ ತಿಳಿಯೋಲ್ಲಾಂತ್ಲೂ ನಂಗೊತ್ತು."

"ಮೂಗಿಗಿಂತ ಮೂಗುತಿ ಭಾರ ಅನ್ನೋಹಾಗೆ ನಿನ್ನ ಮಾತು. ಏನೋ ಕೆಲಸ ಕೇಳಿದ್ರೆ ಲೆಕ್ಚರ್ ಪ್ರಾರಂಭಿಸಿಬಿಟ್ಟೆ. ಏನದು ಹೇಳು ಸರೂ."

"ಬಯ್ಯಬಾರದು ನೀನು. ನಿನ್ಗೆ ನಾನೇನಾದ್ರೂ ನನ್ನ ನೆನಪಾಗಿ ಕೊಡಬೇಕೂಂತಿದ್ದೀನಿ. ಏನು ಕೊಡ್ಲಿ ?"

"ನಾ ಕೇಳಿದ್ದು ಕೊಡ್ತೀಯಾ ?"

"ಖಂಡಿತ. ಅಸಾಧ್ಯ ಅಲ್ಲದಿದ್ರೆ ಮಾತ್ರ."

"ಮನಸ್ಸಿಗೆ ಅಸಾಧ್ಯವಾದುದು ಯಾವುದೂ ಇಲ್ಲ. ಸರಳಾ."

"ಹಾಗಾದ್ರೆ ಹೇಳು,"

"ಭಾಷೆ ಕೊಡ್ತೀಯಾ. ಹೇಳ್ತೀನಿ."

"ಭಾಷೆ ಪ್ರಮಾಣಗಳಲ್ಲಿ ನನ್ನ ಸಿಗಿಸಬೇಡ, ಆದರೂ ಹೇಳು" ಎಂದೆ ಅವಳ ಕೈಯನ್ನು ನನ್ನ ಕೈಯಲ್ಲಿ ಹಿಡಿದು ಅನುಮಾನಿಸುತ್ತಾ ಹೇಳಿದಳು ಮಾಧುರಾ.–

"ನಿನ್ನ ಮಗನನ್ನು ಎತ್ತಿಕೊಂಡು ನನ್ನ ಮನೆಗೆ ಬರಬೇಕು ನೀನು.ಅದೇ ನನಗೆ ಉಡುಗೊರೆ."

"ಪ್ರಯತ್ನಿಸ್ತೀನಿ ಮಧುರಾ" ಎಂದು ಅವಳ ಕೈ ಬಿಟ್ಟುಬಿಟ್ಟೆ. ಇಷ್ಟು ಹೊತ್ತು ತಡೆದಿದ್ದ ಅಳು ಈಗ ಒತ್ತರಿಸಿ ಬಂತು. ಅವಳ ಮಡಿಲಲ್ಲಿ ಮುಖ ಮುಚ್ಚಿ ಅತ್ತೆ. ಅವಳು ಹೇಳಿದುದಕ್ಕಿಂತಲೂ ಹೆಚ್ಚು ಅತ್ತುಬಿಟ್ಟೆ. ಬೇಡವೆನ್ನಲಿಲ್ಲ ಅವಳು. ಸುಮ್ಮನೆ ನನ್ನ ತಲೆ ನೇವರಿಸುತ್ತಿದ್ದಳು.

ದೂರದಲ್ಲಿ ಹನ್ನೆರಡು ಘಂಟೆ ಹೊಡೆಯಿತು. ನಮ್ಮಿಬ್ಬರ ಸ್ನೇಹ ಸೌಹಾರ್ದಗಳನ್ನು ನೋಡಿದ ರಾಘಮ್ಮ ಮೂಕರಾಗಿಬಿಟ್ಟಿದ್ದರು. ಹನ್ನೆರಡು ಹೊಡೆದಾಗ ಎಚ್ಚತ್ತು ಇಬ್ಬರನ್ನೂ ಮಲಗ ಹೇಳಿದರು. ಮಲಗುವ ಮುನ್ನ ಪಿಸುಮಾತಿನಲ್ಲಿ ಅಂದಳು ಮಧುರಾ.

"ನಿನ್ನ ಹೆಸರಿನಲ್ಲಿ ರಾಜನಿಗೆ ಒಂದು ಉಡುಗೊರೆ ಕಳುಹಿಸಿಕೊಟ್ಟೆ ಸರೂ. ಅದು ಅವನಿಗೆ ತಲಪಿತೋ ಇಲ್ವೋ ಅದೂ ತಿಳೀಲಿಲ್ಲ."

"ಹೋಗ್ಲಿ ಬಿಡು, ಪರಪುರುಷನ ವಿಷಯ ಕುರಿತು ಮಾತನಾಡೋ ಬದಲು ಪರಂಧಾಮ ಶ್ರೀರಾಮನನ್ನು ನೆನೆದರೆ ಪುಣ್ಯವಾದರೂ ಬಂದೀತು" ಎಂದು ಮಲಗಿದೆ.

ಆಡಿದ್ದೇನೋ ಪುಣ್ಯದ ಮಾತು, ಮಾಡಿದ್ದು ರಾಜನ ಯೋಚನೆ. ನನ್ನ ಮಾತಿನಿಂದ ಮಧುರಾ ಮನದಲ್ಲೇ ಅಂದುಕೊಂಡಿರಬೇಕು "ಭಾಪುರೇ ಸರೂ" ಅಂತ. ಆದರೆ ಸರೂವಿನ ಟೊಳ್ಳಾದ ಹೃದಯ ಅವಳಿಗೆ ಗೋಚರಿಸಲು ಅಂದಿನಿಂದ ಎಂದೂ ಅವಕಾಶ ಕೊಡಲಿಲ್ಲ. ಮಲಗಿದ್ದರೂ ನನಗೆ ನಿದ್ದೆ ಬರಲಿಲ್ಲ. ಈ ವಿಷಯದಲ್ಲಿ ಮಧುರಾ ಪುಣ್ಯಾತ್ಮಳು. ತಲೆ ಕೆಳಗಿಡುವುದೇ ತಡ, ಮೈಮೇಲೆ ಎಚ್ಚರವಿಲ್ಲದಂತೆ ನಿದ್ದೆ ಮಾಡುತ್ತಿದ್ದಳು. ನನಗಾ ಭಾಗ್ಯ ಇರಲಿಲ್ಲ.

ತಲೆ ತುಂಬಾ ಯೋಚನೆಗಳು. ನನ್ನ ಬಾಳಿನ ಹಾದಿ ನೇರವಾಗಿ ರಾಜ ರಸ್ತೆಯಂತಿರದೆ ಯಾಕೆ ಹೀಗೆ ತಿರುವುಗಳಿಂದಲೇ ಅಂಕುಡೊಂಕಾಗಿದೆ ಎನ್ನಿಸಿತು ನಾನು ಪ್ರೀತಿಸುವ, ಬಯಸುವ ವ್ಯಕ್ತಿಗಳೆಲ್ಲಾ ಯಾಕೆ ನನ್ನಿಂದ ದೂರ ದೂರ ಓಡಿಹೋಗುತ್ತಾರೆ ? ನಾನೇನು ಕೆಟ್ಟವಳೆ ? ಪ್ರತಿ ಒಬ್ಬರೂ ಉದಾತ್ತ ಗುಣದವಳು ಅಂತ ಹೊಗಳ್ತಾರೆ. ಬರೀ ಮುಖಸ್ತುತಿಯೋ ಅದು ? ಇರ ಲಾರದು. ನನಗಾವ ಜನ್ಮದ್ದೋ ಶಾಪವಿರಬೇಕು, ತಾಯಿ ಮಕ್ಕಳನ್ನು ಬೇರೆ ಮಾಡಿದ್ದಿರಬೇಕು, ಪ್ರೇಮಿಗಳನ್ನು ಒಡೆದಿದ್ದಿರಬೇಕು, ಸತಿಪತಿಗಳನ್ನು ಅಗಲಿಸಿದ್ದಿರಬೇಕು. ಇಲ್ಲದಿದ್ರೆ ಅವರೆಲ್ಲರಿಂದ ನಾನೇಕೆ ಇಂದು ದೂರ ವಾಗುತ್ತಿದ್ದೆ ? ಒಬ್ಬೊಬ್ಬರಾಗಿ ಅಮ್ಮ, ಅಪ್ಪ, ರಾಜ, ಮಧುರಾ ಎಲ್ಲರೂ ಒಂದೊಂದು ರೀತಿಯಲ್ಲಿ ಹೊರಟುಹೋಗಿದ್ದಾರೆ. ಈ ಮಮತೆಯ ನಂಟು ಬರೀ ಸೋಪಿನ ಗುಳ್ಳೆ.

ಬೆಳಕಿನಲ್ಲಿ, ಬಣ್ಣ ಬಣ್ಣವಾಗಿ ಹಾರುವ ದೊಡ್ಡ ಗುಳ್ಳೆ, ಹಿಡಿಯ ಹೋದರೆ ಛಿದ್ರವಾಗಿ ಹೋಗುತ್ತದೆ. ಹಿಡಿಯದೆ ನೋಡಿದರೆ ಗಾಳಿಯಿಂದ ನಿಧಾನವಾಗಿ ದೂರ ದೂರ ಹೋಗಿ ಕಣ್ಮರೆಯಾಗುತ್ತದೆ. ಹಾಗೇ ಅಲ್ಲವೇ ಬಾಳು !—ಬೇಸರವಾಗಿ ಪಕ್ಕಕ್ಕೆ ತಿರುಗಿದೆ. ಹಾಸಿಗೆಯಲ್ಲೆ. ನಿಶ್ಚಿಂತತೆಯಿಂದ ನಿದ್ದೆ ಮಾಡುತ್ತಿದ್ದಳು ಮಧುರಾ. ನನ್ನಂತೆ ಸಣ್ಣಪುಟ್ಟದಕ್ಕೆಲ್ಲಾ ನೊಂದು ಕೊಳ್ಳೋ ಭಾವೋದ್ವೇಗದ ರಕ್ತದವಳಲ್ಲ, ಅವಳು. ಅವಳ ಬಾಯಲ್ಲಿ

ಬಂದ ಉಕ್ತಿಗಳು ಈಗ ಕೇಳಿದಂತಿವೆ—"ಬಾಳು ಇರೋದು ಬದುಕೋಕ್ಕೇ ವಿನಾ ಬಲಿ ಮಾಡೋಕ್ಕಲ್ಲ." ಅವಳು ಒಳ್ಳೆಯ ಗೃಹಿಣಿಯಾಗಿ ಬಾಳ ಬಲ್ಲಳು. "ರಘುನಾಥ ಅದೃಷ್ಟವಂತನಾದ ಅವಳನ್ನು ಪಡೆದು" ಎಂದು ತೃಪ್ತಿಯ ನಿಟ್ಟುಸಿರು ಬಿಟ್ಟು, ನಿದ್ದೆ ಮಾಡಲು ಪ್ರಯತ್ನಿಸಿದೆ.

ಕಣ್ಣು ಮುಚ್ಚಿಕೊಂಡರೂ ಮಧುರಳೇ ಕಣ್ಣುಮುಂದೆ. ಹುಂ ಎಂತಹ ಹುಡುಗಿ ಇವಳು! ತಾನೂ ನನಗೆ ಸ್ನೇಹಿತಳಲ್ಲವಂತೆ, ಸ್ವಾರ್ಥಿಯಂತೆ. ಅವಳಂತಹ ಸ್ನೇಹಿತರು ಎಷ್ಟು ಜನಕ್ಕೆ ಸಿಗ್ತಾರೆ ? ನನ್ನ ಮನದ ಅಳಲನ್ನು ಅಧಿಕಮಾಡಕೂಡದೂಂತ ರಾಜನ ಮದುವೆ ವಿಷಯವನ್ನೇ ಮುಚ್ಚಿಟ್ಟಳು. ಇಂದು ತಿಳಿದ ವಿಷಯ ಅಂದೇ ತಿಳಿದಿದ್ರೆ ನಾನು ಭೂಮಿ ಮೇಲೆ ಉಳೀತಾನೆ ಇರಲಿಲ್ವೇನೋ.

"ಮಧುರಾ ಎಷ್ಟು ಒಳ್ಳೇವ್ಳು ನೀನು. ನನ್ನ ಮನಸ್ಸು ಸಂತೋಷ ಪಡಿಸೋಕ್ಕೆ ಎಷ್ಟು ಕಷ್ಟಪಟ್ಟಿದ್ದೀ. ನಾನೆಂದೋ ಅಂದಿದ್ದ ಮಾತಿನ ಮೇಲೇನೇ ರಾಜನಿಗೆ ಉಡುಗೊರೆ ಬೇರೆ ಕಳಿಸಿದ್ಯಾ ? ನಿನ್ನ ಋಣ ಹೇಗೆ ತೀರಿಸ್ತೇನೋ" ಅಂತ ಮನಸ್ಸಲ್ಲೇ ಅವಳಿಗೆ ವಂದನೆ ಅರ್ಪಿಸಿ ಮತ್ತೆ ಹೊರ ಳಿದೆ ಗೋಡೆಯ ಕಡೆಗೆ.

ಮತ್ತೊಂದು ದೃಶ್ಯ—ರಾಜ ಹೀಗೆ ಯಾಕೆ ನನಗೆ ವಂಚನೆ ಮಾಡಿದ? ಅದು ನನ್ನ ದುರ್ದೈವ. ದಾಂಪತ್ಯಕ್ಕೆ ಲಭ್ಯತೆ ನನಗಿಲ್ಲವೇನೋ. ಇಲ್ಲ ದಿದ್ರೆ ಭಾರತೀನ್ನ ನಮ್ಮ ಜೀವನದಲ್ಲಿ ಬಿಟ್ಟು ನಮ್ಮಿಬ್ಬರನ್ನು ಬೇರೆ ಮಾಡು ತ್ತಿತ್ತೇ ದೈವ. ಸಂಸಾರದ ಜಂಜಾಟಕ್ಕೆ ನಾನನರ್ಹಳೆಂದು ವಿಧಿ ಈ ಆಟ ಹೂಡಿದೆ. ನಾನವನನ್ನು ಮದುವೆಯಾಗದೆ ಉಳಿದಿದ್ದೇ ಒಳ್ಳೆಯದಾಯಿತು. ಒಂದು ವೇಳೆ ಮದುವೆಯಾದ ಮೇಲೆ ಭಾರತಿ ನಮ್ಮ ಜೀವನ ಹೊಕ್ಕಿದ್ದರೆ ! ರಾಮ, ರಾಮ, ಅಂತಹ ಹಿಂಸೆ ಮಾತ್ರ ಬೇಡ. ಯಾರೇ ಆಗಲಿ ರಾಜನ ಹೆಂಡತಿ ಅವಳು, ಸುಖವಾಗಿರಲಿ. ಹೇಗಿದ್ದಾಳೋ ಅವಳು ? ಹೆಸರೇನಿರ ಬಹುದು ? ಚೆನ್ನಾಗಿಯೇ ಇರಬೇಕು ನನ್ನ ರಾಜನ ಮಡದಿ, ಸುರ ಸುಂದರಾಂಗ ಅವನು. ಅವನ ರಾಣಿಯಲ್ಲವೆ ಅವಳು !

" 'ನನ್ನ ರಾಜ', ಯಾರೇ ಅವನು ? ಹುಚ್ಚಿ. ಮಧುರಳೊಂದಿಗೆ ಅವನು ಪರಪುರುಷನೆಂದೇ, ಈಗ ನಿನ್ನ ರಾಜನೇ ?" ಎಂದು ನಕ್ಕಿತು ನನ್ನ

ಅಂತರಂಗ. ಹೀಗೆಯೇ ನನ್ನ ಯೋಚನೆಗಳು ಆದಿ ಅಂತ್ಯವಿಲ್ಲದೆ ಪದರಪದರವಾಗಿ ಏಳುತ್ತಲೇ ಇದ್ದವು. ಅದರೊಂದಿಗೆ ಬೆಳಕು ಹರಿಯಿತು.

## ೧೯

ಮಧುರಾ ಮತ್ತು ರಾಧಮ್ಮ ಹೈದರಾಬಾದಿಗೆ ಹೋಗುವ ಸಿದ್ಧತೆಗಾಗಿ ನಾನು ಆಫೀಸಿಗೆ ಮೂರು ದಿನಕ್ಕೆ ರಜೆಗೆ ಬರೆದೆ. ಅವರು ಹೊರಟು ಹೋಗುವವರೆಂದು ನಾನು ಸಪ್ಪೆ ಮುಖ ಹಾಕಲಿಲ್ಲ. ಮೂರು ದಿನಗಳೂ ಸಂತೋಷವಾಗಿ ಕಾಲ ಕಳೆದೆವು ಹೊರಡುವ ದಿನವೂ ಬಂತು. ರಘುನಾಥ ಕರೆದೊಯ್ಯಲು ಬಂದಿರಲಿಲ್ಲ. ಅಲ್ಲಿ ಎದಿರುಗೊಳ್ಳುವೆನೆಂದು ಬರೆದಿದ್ದ.

ರೈಲು ಹೊರಡೋಕ್ಕೆ ಇನ್ನೂ ಒಂದು ಗಂಟೆ ಸಮಯವಿತ್ತು. ರಾಧಮ್ಮ- "ಜೋಪಾನವಾಗಿರು ಸರಳಾ. ನೀನು ಒಬ್ಬಳೇ ಇರೋದು ನಂಗೇನೂ ಇಷ್ಟವಿಲ್ಲಮ್ಮ. ಆದಷ್ಟು ಬೇಗ ಬೊಂಬಾಯಿಗೆ ಹೋಗಮ್ಮ" ಎಂದರು. ಹಾಗೇ ಮುಂದುವರೆಸಿದರು. "ರಾಜಮ್ಮನಿಗೂ ಹೇಳಿದ್ದೀನಿ. ನಿನ್ನನ್ನು ಚೆನ್ನಾಗಿ ನೋಡ್ಕೋತಾರೆ. ಏನ್ರಿ ರಾಜಮ್ಮ, ಸರಳಾ ಬಹಳ ಬೇಗ ನೊಂದುಕೊಳ್ಳೋ ಸ್ವಭಾವದವಳು. ಅವಳನ್ನು ನಿಮ್ಮ ಯಜಮಾನಿ ಅಂದ್ಕೋಬೇಡಿ. ಅವಳಿನ್ನೂ ಪುಟ್ಟ ಹುಡುಗಿ ಅನ್ನೋ ಹಾಗೆ ನೋಡ್ಕೋಬೇಕ್ರಿ." ಎಂದು ಕಣ್ಣು ಒದ್ದೆ ಮಾಡಿಕೊಂಡರು. ರಾಜಮ್ಮ "ಆಗಲಿ" ಅನ್ನೋಹಾಗೆ ತಲೆ ಆಡಿಸಿದರು.

ಮಧುರಾ ನನ್ನನ್ನು ಪ್ಲಾಟ್‌ಫಾರಂನಿಂದ ದೂರ ಕರೆದುಕೊಂಡು ಹೋಗಿ "ಸರೂ ಅವತ್ತು ನಾ ಹೇಳಿದ್ದೆಲ್ಲಾ ನೆನಪಿದ್ಯಾ ? ನಾ ಹೇಳಿದ ಹಾಗೇ ನಡ್ಕೋತೀಯಾ ?" ಎಂದಳು.

"ಪ್ರಯತ್ನಿಸ್ತೀನೀಂತ ಆಗಲೇ ಹೇಳಿದೆನಲ್ಲಾ ಮಧುರಾ."

"ಹೇಳಿದ್ದಿ. ಆದ್ರೆ ನಿನ್ನನ್ನು ಹೀಗೆ ಬಿಟ್ಟು ಹೋಗೋಕ್ಕೆ ಭಯ

ಆಗುತ್ತೆ ಸರಳಾ. ನಿನ್ನ ಮನಸ್ಸು ಎಲ್ಲಿ ಮತ್ತೆ ಆ ರಾಜನ ಸುತ್ತ ಬಲೆ ಹೆಣೆಯೋಕ್ಕೆ ಹೊರಟುಬಿಡುತ್ತೋ ಅಂತ ಯೋಚನೆ ನನಗೆ."

"ಅಂತಹ ಹೆದರಿಕೆ ಬೇಡ ಮಧುರಾ. ಸರಳಾ ಇಂದು ಬಹಳ ಸುಧಾರಿಸಿದ್ದಾಳೆ."

"ಇಲ್ಲ ಸರೂ. ಅದು ನಿನ್ನ ತೋರಿಕೆಯ ಧೈರ್ಯ ಅಷ್ಟೇಂತ ನನ್ನ ಅಂತರಾತ್ಮ ಹೇಳ್ತಿದೆ. ನಿನ್ನ ಹೃದಯದಲ್ಲಿ ಅಗ್ನಿಪರ್ವತಗಳ ಸಾಲೇ ಏಳ್ತಿದೆ ಸರೂ. ನನ್ನ ಪ್ರೀತಿಗಾಗಿ ಮುಖವಾಡ ಹಾಕಿದ್ದಿ.

ಸರಳಾ, ನಿನಗಿಷ್ಟ ಇಲ್ದೆ ನೀನು ಬೇರೆ ಯಾರನ್ನೂ ಮದುವೆ ಮಾಡಿಕೊಳ್ಳಲಾರೆ. ನಿನ್ನ ಮನಸ್ಸನ್ನು ಇಷ್ಟ ಪಡೋ ಹಾಗೆ ಮಾಡಬೇಕಾದರೆ ನಿನ್ನ ಜೀವನದ ಹಳೆಯ ಅಧ್ಯಾಯವನ್ನು ನೀನು ನೆನೆಯಬಾರದು. ಮದುವೆಯಿಲ್ಲದೆ ಒಂಟಿ ಬಾಳು ಹೆಣ್ಣಿಗೆ ಸಾಧ್ಯವಿಲ್ಲ. ಈಗೇನೋ ನಿನ್ನ ಯೌವನದ ಹುರುಪಿನಲ್ಲಿ ಆದರ್ಶಗಳೇ ಕಣ್ಣು ಮುಂದೆ ಕಾಣಬಹುದು. ಮುಂದೆ ಯಾವಾಗಲೇ ಆಗಲಿ ಪಶ್ಚಾತ್ತಾಪ ಪಡೋ ಹಾಗೆ ಮಾಡಿಕೊಳ್ಳಬೇಡ."

ಪ್ರತಿವಾದ ಮಾಡದೆ ಕೇಳುತ್ತಿದ್ದೆ. ಸವಾಲಿಗೊಂದು ಸವಾಲು ಹಾಕಿ ಗಂಡನ ಮನೆಗೆ ಹೊರಡುತ್ತಿರುವ ಈ ಹೆಣ್ಣಿನ ಮನಸ್ಸನ್ನು ಯಾಕೆ ನೋಯಿಸಲಿ ಎಂದಿತು ನನ್ನ ಮನಸ್ಸು.

"ನೀನು ಸುಮ್ಮನಿದ್ದೀಯಲ್ಲಾ ಸರೂ, ಯಾಕೆ ಏನೂ ಮಾತಾಡಬೇಕು ಅನ್ನಿಸೋಲ್ವಾ ?"

"ನಿನ್ನ ಹಾಗೆ ಹಿತೋಪದೇಶ ಮಾಡೋ ಆತ್ಮೀಯರು ನನಗೆ ಬೇರೆ ಯಾರಿದ್ದಾರೆ ಮಧುರಾ. ನಿನ್ನನ್ನು ಸಂತೋಷದಿಂದ ಕಳಿಸಿಕೊಡಬೇಕೂಂತ ಇದ್ರೂ ನನಗೆ ದುಃಖಾನೇ ಆಗ್ತಿದೆ. ನಿನ್ನ ಉಪದೇಶ ಹಾರೈಕೆಗಳ ಮುಂದೆ ಮೂಕಳಾಗಿದ್ದೀನಿ ಮಧುರಾ."

"ಈ ಜೀವನದಲ್ಲಿ ಯಾರಿಗೆಯಾರೂ ಆಗಲಾರರು. ಅಣ್ಣತಮ್ಮಂದಿರು, ಅಕ್ಕತಂಗಿಯರು, ನೆಂಟರು, ಸ್ನೇಹಿತರು ಯಾರೂ ನಮಗೆ ಕಷ್ಟಕಾಲದಲ್ಲಿ ಬರೋಲ್ಲ ಸರಳಾ. ಆದರೆ ಕಟ್ಟಿಕೊಂಡ ಗಂಡ, ತನಗಿಷ್ಟವಿರಲಿ, ಇಲ್ಲದಿರಲಿ ಕರ್ತವ್ಯಕ್ಕಾಗಿಯಾದರೂ ಹೆಂಡತಿಯನ್ನು ನೋಡಿಕೊಳ್ತಾನೆ. ಪ್ರೀತಿಯ ಗಂಡ ಸಿಕ್ಕಿದ್ರೆ ಅಂತೂ ಅವಳಂಥ ಸೌಭಾಗ್ಯಶಾಲೀನೇ ಇರೋಲ್ಲ."

"ನೀನು ಆ ಸೌಭಾಗ್ಯ ಶಾಲಿಗಳಲ್ಲಿ ಒಬ್ಬಳು ಮಧುರಾ."

"ಹಾಗೆ ಹೇಳಬೇಡ. ಮುಂದೆ ಯಾವ ತರಹದ ಬಾಳು ಕಾದಿದೆಯೋ. ಆದರೂ ನಾನು ನಿರಾಶಾವಾದಿಯಲ್ಲ. ಎಲ್ಲಾ ಚೆನ್ನಾಗಿಯೇ ಇರಲಿ ಎಂದು ಪ್ರಾರ್ಥಿಸಿ ಹೊರಟಿದ್ದೇನೆ."

"ನೀನು ಮುಂದೆ ಪ್ರಾರ್ಥಿಸುವಾಗಲೆಲ್ಲಾ, ನನಗೂ ಒಳ್ಳೆಯದಾಗಲಿ ಅಂತ ಬೇಡು ಮಧುರಾ."

"ಅದನ್ನು ನೀನು ಹೇಳಲೇಬೇಕಿಲ್ಲ ಸರಳಾ. ನೀನು ಒಂದು ನೆಲೆ ಕಾಣುವವರೆಗೆ ನನ್ನ ಆತ್ಮ ಸುಮ್ಮನಿರಲಾರದು. ಅಲ್ಲಿ ಹೋದ ಮೇಲೆ ಅವರೊಂದಿಗೆ (ರಘುನಾಥ) ಪ್ರಸ್ತಾಪಿಸಿ ನಿನಗೆ ಗಂಡು ನೋಡುತ್ತೇನೆ. ನೀನು ಒಲ್ಲೆ ಎನ್ನಬಾರದು ಆ್ಞ?"

"ಇಲ್ಲ. ಪ್ರೀತಿಯ ಆಜ್ಞೆಗೆ ನಾನೆಂದೂ ದಾಸಿ" ಎಂದೆ.

ಇಬ್ಬರ ಕಣ್ಣಲ್ಲೂ ನೀರು ತುಂಬಿ ಬಂತು. ಗಾರ್ಡನ ಶಿಳ್ಳೆಯ ಸದ್ದು ಕೇಳಿ ಒಮ್ಮೆಲೇ ಮಧುರಾ ಬಿಗಿಯಾಗಿ ನನ್ನನ್ನಪ್ಪಿ "ಸರೂ" ಅಂದಳು.

"ನಿನ್ನನ್ನು ಬಿಟ್ಟು ನನ್ನ ಸಂತೋಷಕ್ಕಾಗಿ ಓಡಿ ಹೋಗುತ್ತಿದ್ದೇನಲ್ಲಾ, ನಾನೆಂಥಹ ಸ್ವಾರ್ಥಿ ಸರೂ."

ಇದೇನಿದು ಮಧುರಾ ? ಇಷ್ಟು ಹೊತ್ತು ಜೀವನದ ಪಾಠಗಳನ್ನು ನನಗೆ ಬೋಧಿಸಿ ಈಗ ಹೀಗೆ ಮಾತನಾಡ್ತಿ. ಪ್ರತಿ ಹೆಣ್ಣಿನ ಜೀವನದಲ್ಲೂ ಬರಬೇಕಾದ ಘಟ್ಟ ಇದು. ಈ ದಿನ ನಿನ್ನ ಸರದಿ. ನಾಳೆ ನನ್ನ ಸರದಿ ನಗುನಗುತ್ತಾ ಹೋಗಿ ಬಾ. ಭಾರದಹೃದಯಾನ ಬಯಸೋಲ್ಲ ರಘುನಾಥ, ಹೂವಿನ ಮನಸ್ಸನ್ನೂ ಆಶಿಸ್ತಾನೆ, ಅಲ್ಲಿ ಹೋದ ಮೇಲೂ ನಿನಗೆ ನನ್ನ ನೆನಪು ಬರಬಹುದು. ಆದರೆ ನನ್ನ ಚಿಂತೆ ನಿನ್ನದಾಗಬಾರದು ಮಧುರಾ" ಎಂದು ಕಣ್ಣೊರಸಿದೆ.

"ನಾಳೆ ನನ್ನ ಸರದಿ" ಎಂದು ನಾನಂದ ವಾಕ್ಯ ಅವಳಲ್ಲಿ ಧೈರ್ಯ ತಂದಿತು. ನಿಧಾನವಾಗಿ ರೈಲು ಬಂಡಿಹತ್ತಿ ಕುಳಿತಳು.

ಹಸಿರು ಬಾವುಟ ನೋಡಿದೊಡನೆ ಹೊರಟೇಬಿಟ್ಟ ಡ್ರೈವರ್ ಸಾಹೇಬ್. ಎರಡು ಬೆರೆತ ಜೀವಿಗಳನ್ನು ಬೇರೆ ಮಾಡುತ್ತಿದ್ದೀನೆಂದು ಅವನೇನು ಬಲ್ಲ. ಹಾಗೆಯೇ ಎಷ್ಟು ಪ್ರಿಯ ಸಂಬಂಧಗಳನ್ನು ಎಷ್ಟು ಬಾರಿ ಕಡಿಯುವ ದೌರ್ಭಾಗ್ಯವೋ ಅವನದು.

ಕಣ್ಣು ಕಾಣಿಸುವಷ್ಟು ದೂರವೂ ಮಧುರಳಿಗೂ, ಅವರಮ್ಮನಿಗೂ ಕೈ ಬೀಸುತ್ತಾ ಹೊರಟೆ. ಗಾಡಿ ನಿಧಾನವಾಗಿ ಹೊರಟದ್ದು ಒಂದೇ ನಿಮಿಷದಲ್ಲಿ ವೇಗ ಗಳಿಸಿ, ಮಧುರಾಳನ್ನು ರಘುನಾಥನ ಬಳಿ ಆದಷ್ಟು ಬೇಗ ಸೇರಿಸ ಬೇಕೆಂದೋ ಏನೋ ದೌಡಾಯಿಸಿತು. ಭಾರವಾದ ಹೃದಯ ಹೊತ್ತು ನಾನೂ ಮತ್ತು ರಾಜಮ್ಮ ಮನೆಗೆ ಬಂದೆವು. ರಾಜಮ್ಮ ಅಂದ್ರು...."ಸ್ವಲ್ಪ ತಾಳು ಸರೂ. ಯಾರೋ ಬಾಗಿಲು ತಟ್ಟಿದ ಹಾಗಾಯಿತು. ನೋಡಿ ಬರ್ತೀನಿ" ಎಂದು ಸುಮಿತ್ರ ಏಳುತ್ತಿರುವಂತೆಯೇ ಸರಳಾ "ಬೇಡ ಸುಮಿತ್ರಾ. ನೀನು ಹೋಗೋದು ಬೇಡ. ಈಗ ನಿನ್ನ ಮುಖ ಯಾರಾದ್ರೂ ನೋಡಿದ್ರೆ, ನಿನ್ನ ಕೂಡಿಹಾಕಿ ನಾನೇನೋ ಮಾಡಿಬಿಟ್ಟದ್ದೀನಿ ಅನ್ನೋ ಹಾಗಿದೆ. ಅದೆಷ್ಟು ಸುಮಿತ್ರಾ ಅಳೋದು. ಒಂದು ವೇಳೆ ನಿನ್ನ ಗಂಡ ಏನಾದ್ರೂ ಬಂದಿದ್ರೆ ಮುಗಿದೇ ಹೋಯಿತು. ನನ್ನನ್ನು ಜೈಲಿಗೆ ಕಳಿಸೋ ಏರ್ಪಾಡು ಮಾಡ್ತಾನೆ ಅಷ್ಟೆ. ನಾನೇ ಹೋಗಿ ನೋಡ್ತೀನಿ" ಎಂದು ಬಾಗಿಲಿಗೆ ಬರುವ ವೇಳೆಗೆ ಬಾಗಿಲಲ್ಲಿ ರಾಜೀವ.

"ಬಾ ರಾಜೀವ. ಏನು ಇಷ್ಟು ಹೊತ್ತಿನಲ್ಲಿ ಬಂದೆ?"

"ಸುಮ್ಮನೆ ಬಂದೆ ಚಿಕ್ಕಮ್ಮ. ಮೈಯ್ಯಲ್ಲಿ ಸರಿಯಿಲ್ಲವೇನು? ಮಲಗಿದ್ದಿರಾ?"

"ಮಾಡಲು ಏನೂ ಕೆಲಸವಿಲ್ಲ. ಹಾಗೇ ಮಲಗಿದ್ದೆ. ಕೂತ್ಕೊ ರಾಜೀವ"

"ಕೂತ್ಕೊಳ್ಳೋಷ್ಟು ಟೈಂ ಇಲ್ಲ. ಅಮ್ಮ ಇದನ್ನು ನಿಮಗೆ ಕೊಟ್ಟು ಬಿಟ್ಟು ಬಾ ಅಂದ್ರು."

"ಏನದು?" ಕುತೂಹಲದಿಂದ ಕೇಳಿದಳು.

"ನಂಗೊತ್ತಿಲ್ಲಪ್ಪ."

"ನಿಂಗೊತ್ತಿಲ್ದೆ ತಂದೆಯೇನೋ ರಾಜೀವ? ಏನದು ಹೇಳು."

"ನೀವೇ ಊಹಿಸಿ ಮತ್ತೆ."

"ನಾನು ಪೆದ್ದು ನನಗ್ಗೊತ್ತಿಲ್ಲಪ್ಪ. ನೀನೇ ಹೇಳು."

"ಸಧ್ಯ ನೀವು ಯಾಕೆ ಪೆದ್ದಾಗಬೇಕು, ಬೇಡ ಚಿಕ್ಕಮ್ಮ. ನಾನೇ

ಹೇಳ್ತೀನಿ. ಅಮ್ಮ ಈವತ್ತು ಬಹಳ ದಿನದ ಮೇಲೆ ಬಿಸೀ ಬೇಳೆಬಾತು ಮಾಡಿದ್ರು, ನಿಮಗೂ ಸ್ವಲ್ಪ ರುಚೀಗೇಂತ."

"ರುಚೀಗೆ ಎರಡು ಪಾತ್ರೆ ತುಂಬಾ ! ನನ್ನನ್ನು ಏನು ಬಕಾಸುರಿ ಅಂತ ಅಂದ್ಕೊಂಡೆಯೇನೋ ?"

"ಹೋಗಿ ಚಿಕ್ಕಮ್ಮ, ಬರೀ ಖಾರ ಆದ್ರೆ ಹೇಗೇಂತ, ಒಂದರಲ್ಲಿ ಸ್ವಲ್ಪ ಮೊಸರನ್ನ ಇದೆ ತಂಪಾಗಿ."

"ಸಿಹೀನೂ ಸ್ವಲ್ಪ ಅಂತ. ಕೇಸರೀಭಾತೂ ತಂದಿದ್ರೆ ! ಅಲ್ಲವೋ ರಾಜೀವ ಮನೇಲಿ ಮಕ್ಕಳು ತಿನ್ನದೆ ನನಗೇಕೋ ಇದೆಲ್ಲಾ...."

"ಚಿಕ್ಕಮ್ಮ ನೀವೇನೋ ಮುದುಕರ ಹಾಗೇ ಹೇಳ್ತಿದ್ದೀರ. ನಮ್ಮಕ್ಕನ ವಯಸ್ಸೆ ನಿಮ್ಮದಿರಬಹುದು. ನನಗೇನೋ ನಿಮ್ಮನ್ನ "ಅಕ್ಕ" ಅಂತ ಕರೆಯೋಕೆ ಇಷ್ಟ."

"ನಾನೇನಾದ್ರೂ ಬೇಡ ಅಂದಿದ್ದೀನೇನು" ಎಂದು ಪಾತ್ರೆಗಳನ್ನು ಕೈಗೆ ತೆಗೆದುಕೊಂಡು, "ಹೋಗಲಿ ಹೇಗೆ ಓದುತ್ತಿದ್ದೀ ?"

"ಚೆನ್ನಾಗಿ ಓತ್ತಾ ಇದ್ದೀನಿ. ಈ ಸಲ ಈ ರಾಜೀವಂಗೇ ಫಸ್ಟ್‌ಕ್ಲಾಸು, ಫಸ್ಟ್ ರ್‍ಯಾಂಕು."

"ಓಹೋ ಹೋ ಹೋ ನಿಲ್ಲಿಸಪ್ಪ ನಿಲ್ಲಿಸು. ಆತ್ಮ ವಿಶ್ವಾಸ ಇರಬೇಕು. ನಿಜ, ಆದರೆ ಮಿತಿ ಮೀರಿರಬಾರದು ರಾಜೀವ. ಚೆನ್ನಾಗಿ ಓದು. ಆದ್ರೆ ರ್‍ಯಾಂಕು ನನ್ನದೇ ಅಂತ ಕುಣೀಬೇಡ, ಬರಲಿ ಅಂತ ಪ್ರಯತ್ನ ಮಾಡಬೇಕು ಅಷ್ಟೆ."

"ನಿಮ್ಮಾಶೀರ್ವಾದ ಇದ್ದ ಮೇಲೆ ನನಗೆ ರ್‍ಯಾಂಕು ಗ್ಯಾರಂಟಿ ಅಕ್ಕ" ಎಂದ.

"ತಥಾಸ್ತು ತಮ್ಮ" ಎಂದು ಹಾಸ್ಯ ಮಾಡಿದಳು.

ರಾಜೀವ ಹೊರಟು ಹೋದ. "ಮಾತನಾಡಿದರೆ ಮುತ್ತು ಸುರಿದು ಹೋದೀತು ಅನ್ನೋ ಹಾಗೆ ಕಂಡಿದ್ದ ರಾಜೀವ ಇವನೇನೆ" ಎಂದು ಅಚ್ಚರಿ ಪಟ್ಟಳು ಸರಳಾ.

"ಯಾರ ಬಳಿಯೂ, ಯಾವಾಗಲೂ ಹೆಚ್ಚು ಮಾತನಾಡದ ನಾನು

ಈಕೆಯ ಬಳಿ ಯಾವ ಸಂಕೋಚವೂ ಇಲ್ಲದೆ ಇಷ್ಟು ಸಲಿಗೆಯಿಂದ ಹೇಗೆ ಮಾತಾಡ್ತೀನಿ" ಎಂದು ಸೋಜಿಗ ಪಟ್ಟುಕೊಂಡ ರಾಜೀವ.

ಯಾವ ಋಣಾನುಬಂಧವೋ !!

ಒಳಗೆ ಬಂದ ಸರಳಾ...."ಇದಕ್ಕೆ ನೋಡು ದೈವ, ದೇವರು ಅನ್ನೋದು. ಈಗತಾನೇ "ಟೈಂ ಇಷ್ಟಾಯಿತಲ್ಲಾ, ಇನ್ನು ಅಡಿಗೆ ಮಾಡೋದು ಯಾವಾಗ. ನನ್ನದಂತೂ ಇರಲಿ, ನೀನಿನ್ನು ಮನೆಗೆ ಹೋಗಿ ಅಡಿಗೆ ಮಾಡಿ ಅವರಿಗೆ ಬಡಿಸೋದು ಯಾವಾಗ ? ನಿನ್ನಾತ ಏನೆಂದು ಕೊಂಡಿರ್ತಾರೊ ? ಸಿನಿಮಾಕ್ಕೇಂತ ಸುಳ್ಳು ಬೇರೆ ಹೇಳಿ ಬಂದಿದ್ದೀಯ ಅಂತ" ತಲೆ ಕೊರೀತಿತ್ತು. ಅದಕ್ಕೆ ಪರಿಷ್ಕಾರವಾಗಿ ಕಳಿಸಿದ್ದಾನೆ ರಾಜೀವನ ಕೈಲಿ ಇದನ್ನು ನೋಡು ನನ್ನ ಶ್ರೀರಾಮಚಂದ್ರ-ಒಂದು ಬಿಸಿ ಬೇಳೆಬಾತು, ಇನ್ನೊಂದು ಮೊಸರನ್ನ-ಸ್ವಲ್ಪ ಕೊಡಲೇ ಸುಮಿತ್ರಾ ?"

"ನೀನು ?"

"ಇಂದು ನಾನು ಏನನ್ನೂ ತಿನ್ನಲಾರೆ. ಸುಸ್ತಾಗಿದೆ ಸುಮಿತ್ರಾ ನನಗೆ."

"ಕಥೆ ಕೇಳಿದ ನನಗೇ ಚೇತರಿಸಿಕೊಳ್ಳಲಾಗುತ್ತಿಲ್ಲ. ನೀನು ಅದು ಹೇಗೋ ನಿನ್ನ ಕಥೆ ಅಲ್ವೇನೋ ಅನ್ನೋಹಾಗೆ ಹೇಳಿದೆಯಲ್ಲ. ನೀನು ಧೀರಳಪ್ಪ. ಪರಿಪೂರ್ಣಳಾಗಿದ್ದಿ."

"ಬೇಡವೇ? ಇಷ್ಟು ಉಳಿಯ ಪೆಟ್ಟುಗಳು ಬಿದ್ದರೂ ಇನ್ನೂ ಹಸನಾದ ಶಿಲ್ಪ ನಾನಾಗಬೇಡವೆ ಹೇಳು. ಅನೇಕ ಸಲ ನನಗನ್ನಿಸುತ್ತೆ ಸುಮಿತ್ರಾ, ನಾನು ನಾನಲ್ಲವೇ ಅಲ್ಲಾಂತ. ಲೋಕವೇ ನನ್ನದೆಂದು ಎದೆಯುಬ್ಬಿಸಿ ನಡೆಯುತ್ತಿದ್ದ ಸರಳಾ ಇಂದು ವಿಶಾಲ ಪ್ರಪಂಚ ಸಾಗರದಲ್ಲಿ ಅಲ್ಪಳು. ಅತ್ಯಲ್ಪಳು. ನಿಕೃಷ್ಟಳು. ಹೊರಗಿನವರಿಗೇ ಒಂದು ಮುಖ ನನ್ನದು. ನನಗೇ ಒಂದು ಮುಖ. ನೀನಿವತ್ತು ಎರಡು ಮುಖಗಳನ್ನೂ ನೋಡಿದ್ದಿ. ಈ ಶಿಲ್ಪಕ್ಕೆ ಇನ್ನು ಮಳೆ, ಬಿಸಿಲು, ಗಾಳಿಗಳ ಭಯವಿಲ್ಲ. ಆದರೆ ಭವಿಷ್ಯದಲ್ಲಿ ಮತ್ತೆ ಯಾರಾದರೂ ಇನ್ನೂ ಹಸನು ಮಾಡುವೆನೆಂದು ಉಳಿ ಪೆಟ್ಟು ಹಾಕಿ ನೋಡಿ ಬಿಡುವರೇನೋ ಎಂಬ ಭಯ ಮಾತ್ರ ಕೆಲವು ಸಲ ನನ್ನ ಧೀರತ್ವವನ್ನು ಅಲುಗಾಡಿಸುತ್ತದೆ."

"ನೀನು ಮಧುರಳ ಮಾತನ್ನೇಕೆ ನಡೆಸಲಿಲ್ಲ ?"

"ನನಗದು ಈ ಜನ್ಮದಲ್ಲಿ ಸಾಧ್ಯವಿಲ್ಲ ಸುಮಿತ್ರಾ. ನಾನೇನು ಮಾಡಲಿ? ನನ್ನ ಸ್ವಭಾವ ಆ ರೀತಿಯದು. ನಾನು ನಡೆದುದನ್ನು ಯಾವುದನ್ನೂ ಮರೆಯಲಾರೆ."

"ಮತ್ತೆ ಮತ್ತೆ ಅವಳು ನಿನ್ನನ್ನು ಆಗ್ರಹಪಡಿಸಲಿಲ್ಲವೆ ?"

"ಇಲ್ಲ ನನ್ನನ್ನು ಅರ್ಥಮಾಡಿಕೊಂಡಳು ಅವಳು. ನನ್ನ ನಿಷ್ಟೆ, ಶ್ರದ್ಧೆ ಗಳಿಗೆ ಶ್ಲಾಘನೆ ಹೇಳಿದಳು,"

"ನೀನು ಬೆಂಗಳೂರು ಬಿಟ್ಟು ಇಲ್ಲಿಗೆ ಬಂದು ಬಿಟ್ಟೆಯಾ ?"

"ಹೌದು ಸುಮಿತ್ರಾ. ಮಧುರಾನ್ನ ಕಳುಹಿಸಿದ ಮೇಲೆ ನನಗೆ ಬೆಂಗಳೂರಲ್ಲಿ ನಿಲ್ಲೋದೇ ಅಸಹನೀಯವಾಗ್ತಾ ಬಂತು. ಮನಸ್ಸೆಷ್ಟು ಕಲ್ಲುಮಾಡಿಕೊಂಡ್ರೂ ಬರುಬರುತ್ತಾ ಬೆಂಗಳೂರಿನ ಒಂದೊಂದು ಸ್ಥಳದಲ್ಲೂ ಸಿಹಿ ಕಹಿ ನೆನಪುಗಳು ಬಾಧಿಸತೊಡಗಿದವು. ಆಫೀಸಿನಲ್ಲೂ ಸಹ ರಾಜನ ಫೋನಿನ ನೆನಪು. ಮಧುರಳ ದಿನ ನಿತ್ಯದ ಭೇಟಿ. ಇವುಗಳನ್ನು ಮನಶ್ಚಕ್ಷುಗಳಿಂದ ದೂರ ಕೊಡವಲಾರದೆ ಹೋದೆ.

ಬೇರೆ ಯಾವ ಊರಿಗಾದ್ರೂ ಹೊರಟು ಹೋಗೋಣಾಂತ ವರ್ಗ ಕೇಳಿದಾಗ ನನ್ನ ಆಫೀಸರು "ಯಾಕೆ ಮಿಸ್ ಸರಳಾ, ಇಷ್ಟರಲ್ಲೇ ನಿಮಗೆ ಪ್ರಮೋಷನ್ ಸಿಗೋಹಾಗಿದೆ. ಆಗ ಅವರಾಗೇ ಬೇರೆ ಊರು ತೋರಿಸ್ತಾರೆ. ಆತುರ ಪಡಬೇಡಿ" ಅಂದ್ಬಿಟ್ಟರು. ನನಗೆಷ್ಟೇ ಆತುರವಿದ್ದರೂ ಅವರಿಗೆ ಹೇಳಿಕೊಳ್ಳಲಾಗಲಿಲ್ಲ. ಮೂರು ತಿಂಗಳು ಮೂರು ಯುಗಗಳಾಯಿತು ನನ್ನ ಪಾಲಿಗೆ.

ನನ್ನ ಬಾಳಿನ ಸಂತಸದ ಒಂದು ವಿಷಯ ಅಂದ್ರೆ. ನನ್ನ ಸ್ವಂತ ಜೀವನ ಪೂರಾ ಏರುಪೇರೇ ಆದರೂ. ಆಫೀಸು ಜೀವನದಲ್ಲಿ ಮಾತ್ರ ನಾನು ಪರಮ ಸುಖಿ. ಒಂದೊಂದೇ ಮೆಟ್ಟಿಲಾಗಿ ಏಣಿಯನ್ನು ಏರುತ್ತಾ ಬಂದೆ. ಇಂದು ನಾನೂ ಒಬ್ಬ ಅಧಿಕಾರಿಣಿ.

ಪ್ರಮೋಷನ್ ಸಿಕ್ಕಿ ಆಫೀಸರಾಗಿ ಈ ಊರಿಗೆ ಬಂದೆ. ರಾಘಮ್ಮನವರ ದೂರದ ಬಂಧು ರಾಜಮ್ಮನನ್ನು ನನಗೆ ಜೊತೆ ಮಾಡಿಕೊಟ್ಟಿದ್ದರು. ಮಧುರಾ ಮತ್ತು ರಾಘಮ್ಮ. ಮಮತಾಮಯಿ ಆಕೆ. ಪಾಪ ! ಬಡವರು ಆಕೆ. ನನ್ನ ಕೈ ಬಿಡಲಿಲ್ಲ--"ಯಾವತ್ತಿದ್ರೂ ನನ್ನ ಜಾಗ ನಿನ್ನ ಹತ್ರಾನೇ, ನೀನೇ ಒದ್ದು

ನನ್ನ ಹೊರಗೆ ಹಾಕಿದ್ರೂ, ನಿನ್ನ ಮನೆ ಮುಸುರೇನಾದ್ರೂ ತೊಳಿತಾ ಇದ್ದು ಬಿಡ್ತೀನಿ. ನಿನ್ನ ಬಿಟ್ಟು ನಾ ಹೋಗೋದಿಲ್ಲ" ಅಂತ ಹಠ ಮಾಡಿ ನನ್ನೊಂದಿಗೆ ಬಂದರು.

ನಾನು ಇಲ್ಲಿಗೆ ಬಂದು ಮೂರು ವರ್ಷವಾಯಿತು. ಸುಮಾರು ಎರಡೂವರೆ ವರ್ಷ ಮಧುರಾಳ ಮನೇಲಿದ್ದಾಗ. ಮನೇಗೇಂತ ಒಂದು ಬಿಡೀ ಕಾಸೂ ಖರ್ಚಾಗಿರಲಿಲ್ಲ. ಸ್ವಲ್ಪ ದುಡ್ಡು ತಾನಾಗೇ ನನ್ನ ಹತ್ರ ಸೇರಿತ್ತು. ಯಾಕೋ ಏನೋ ಈ ಊರಿಗೆ ಬಂದಮೇಲೆ ನನಗೆ ಬಹಳ ನೆಮ್ಮದಿ ಸಿಕ್ಕಿದೆ. ಇಲ್ಲೇ ನೆಲೆಸಿಬಿಡೋಣಾಂತ ಈ ಮನೇನ್ನ ಕೊಂಡುಕೊಂಡೆ.

ಈಗ ಸಂತೋಷವಾಗಿದ್ದೀನಿ. ನನ್ನ ಪೆನ್ನಿಗೆ ಶಾಯಿ ತುಂಬೋದು ಮೊದಲ್ಗೊಂಡು ಸೀರೇಗೆ ಗಂಜಿ ಹಾಕೋ ಕೆಲ್ಸದವರೆಗೆ ರಾಜಮ್ಮ ಮಾಡಿ ಕೊಡ್ತಾರೆ. ಆಫೀಸಿನಲ್ಲಿ ದುಡಿಯೋದೆಷ್ಟೋ ಅಷ್ಟೇ ಕೆಲಸ ನನ್ನದು.

"ಸಂತೋಷವಾಗಿದ್ದೀನಿ ಅಂತೀಯಲ್ಲಾ. ಇದು ನಿನ್ನ ಹೃದಯಾಂತ ರಾಳದಿಂದ ಬಂದ ಮಾತೇನು ?" ಸಂಶಯ ತೋರಿದಳು ಸುಮಿತ್ರಾ.

"ನನ್ನಾಣೆಯಾಗಿ. ನನ್ನ ಈಗಿನ ಧ್ಯೇಯ ಸರ್ಕಾರಕ್ಕಾಗಿ ದುಡಿಯೋದು. ಒಂದು ವಿಧದಲ್ಲಿ ಅದೂ ದೇಶಸೇವೆ ತಾನೆ ? ಸರಕಾರ ಚೆನ್ನಾಗಿ ನಡೆದರೆ ದೇಶದ ಏಳಿಗೆ. ಅದು ಚೆನ್ನಾಗಿ ನಡೆಯಬೇಕಾದರೆ ನನ್ನಂತವರ ಅಳಿಲು ಸೇವೆಯೇ. ಈ ಧ್ಯೇಯದ ಜೊತೆಗೇ ಸಹಾಯ ಇಲ್ಲದೆ ಅಂಧಕಾರ ದಲ್ಲಿ ನರಳ್ತಾ ಇರೋವ್ರಿಗೆ, ವಿದ್ಯಾರ್ಜನೆ ಅನುಕೂಲ ಇಲ್ಲದೆ ಒದ್ದಾಡೋ ವಿದ್ಯಾರ್ಥಿಗಳಿಗೆ ನನ್ನ ಕೈಲಾದ ಸಹಾಯ ಮಾಡೋದು. ಇವುಗಳಿಂದ ನನಗೇನೋ ಒಂತರಾ ಆತ್ಮತೃಪ್ತಿ ಇದೆ.

ಸುಮಿತ್ರಾ, ಈ ಧ್ಯೇಯಗಳನ್ನು ಮುಂದಿಟ್ಟುಕೊಂಡು, ಇಲ್ಲಿಗೆ ಬಂದ ಒಂದು ವರ್ಷದೊಳಗಾಗಿ ಅಣ್ಣಂದಿರಿಗೆ ಕಾಗದ ಬರೆದೆ. ನನ್ನ ಜೀವನಾನ್ನ ನಿರೂಪಿಸಿಕೊಳ್ಳೋ ಹಕ್ಕು ನನಗಿಲ್ಲವೆ ? ಅಂತ ಕೇಳಿದೆ. ಸ್ವತಂತ್ರ ಜೀವನ ಆಶಿಸ್ತಾ ಇದೀನೇ ಹೊರತು ಸ್ವೇಚ್ಛೆಯ ಬಾಳಲ್ಲವಲ್ಲ ಅಂತ ವಾದಿಸಿದೆ. ನನ್ನಣ್ಣಂದಿರು ಬೇಡವೆನ್ನಲಿಲ್ಲ.

ಮೂವರಿಗೂ ಈಗ ಒಳ್ಳೇ ಜಾಗಗಳಲ್ಲಿ ಉದ್ಯೋಗ ಇದೆ. ಮದುವೆ ಆಗಿದೆ. ಯಾವಾಗ್ಲಾದ್ರೂ ಬಂದು ಹೋಗ್ತಾರೆ. ಪತ್ರ ವ್ಯವಹಾರ ಇದ್ದೇ ಇದೆ. ಮಧುರಾನ್ನ ಒಪ್ಪಿಸೋದು ಸ್ವಲ್ಪ ಕಷ್ಟವಾಯ್ತು. ಮತ್ತೆ ಮತ್ತೆ

ಅದೇ ಹಿತೋಪದೇಶ. ಒಂದ್ಸಲ ಮಾತ್ರ ಅವಳಿಗೆ ನೋವಾದ್ರೂ ಚಿಂತೆ ಇಲ್ಲಾಂತ, ಖಡಾ ಖಂಡಿತವಾಗಿ ಬರೆದು ಬಿಟ್ಟೆ "ನನ್ನನ್ನೀ ವಿಷಯದಲ್ಲಿ ಆಗ್ರಹ ಪಡಿಸಬೇಡ ಮಧುರಾ. ರಾಜ, ಭಾರತೀಯ ಸ್ನೇಹದಿಂದ, ನನಗೆ ವಂಚನೆ ಮಾಡಿದುದರಿಂದ, ಅಯೋಗ್ಯನೇ ಇರಬಹುದು. ಆದ್ರೆ ನಾನು ಪ್ರೇಮಿಸಿದ್ದು ನಿಷ್ಕಳಂಕ ಪ್ರೇಮಮೂರ್ತಿ ಆಗಿದ್ದ ರಾಜನನ್ನ. ಅವನಿಂದ ನನ್ನ ಮನಸ್ಸನ್ನು ತೆಗೆಯಲಾಗದ ದುರ್ಬಲತೇನ್ನ ನನ್ನಲ್ಲಿ ಕ್ಷಮಿಸಿ ನನ್ನ ಗೆಳೆತನ ಬಿಡಬೇಡ ಮಧುರಾ" ಅಂತ ಬೇಡಿದೆ. ನನ್ನ ಧ್ಯೇಯಗಳನ್ನೂ ತಿಳಿಸಿದೆ. ಅರ್ಥಮಾಡಿಕೊಂಡಳು.

"ರಾಜ ಏನಾದ ಆಮೇಲೆ ? ಭಾರತೀನ್ನ ಯಾಕ್ ಮದುವೆ ಮಾಡಿಕೊಳ್ಳಲಿಲ್ವೋ ?"

"ರಾಜನ ವಿಷಯ ಏನೂ ತಿಳಿಯಲಿಲ್ಲ, ಭಾರತಿ ಮಾತ್ರ ಈ ಊರಲ್ಲೇ ಇದ್ದಾಳೆ. ಮೊನ್ನೆ ಇಂದಿರೆಯ ಮನೆಯಲ್ಲಿ ನೋಡಿದ್ದೆ. ಇಂದಿರಾಳ ತಂದೇಗೆ ಭಾರತಿಯ ತಂದೆ ಮಿತ್ರರಾಗಿದ್ದರಂತೆ. ಆ ಬಾಂಧವ್ಯದ ಮೇಲೆ ಅಲ್ಲಿ ಬರುತ್ತಾಳಂತೆ. ಎಂ.ಎ. ಮಾಡೋಕ್ಕಂತ ನಾಗಪುರಕ್ಕೆ ಹೋದಳಂತೆ ಈಗ ಇಲ್ಲೇ ಯಾವುದೋ ಕಂಪನೀಲಿ ಕೆಲಸಮಾಡ್ತಾಳೆ"

"ಹೃದಯ ಕಲ್ಲಾಗಿದೆ, ನಾನು ಧೀನಳಾಗಿದ್ದೀನಿ ಅಂತ ಎಷ್ಟೇ ಅಂದುಕೊಂಡ್ರೂ ಭಾರತೀನ್ನ ಕಂಡಕೂಡಲೇ ನನಗೆ ಮೈ ಎಷ್ಟು ಉರಿಯಿತು ಗೊತ್ತಾ ಸುಮಿತ್ರಾ, ತಡೆದುಕೊಳ್ಳಲಾರದ ಅಸಹಾಯಕತೆಯಿಂದ ಮೂರ್ಛೆ ಹೋಗ್ಬಿಟ್ಟೆ. ಸದ್ಯಕ್ಕೆ ಇಂದಿರ ಮನೇಲಿ ಉಪಚಾರ ಮಾಡಿದ್ಲು. ಅವಳ ಮೇಲೆ ನನಗ್ಯಾವ ಕೋಪಾನೂ ಇಲ್ಲ, ದ್ವೇಷಾನೂ ಇಲ್ಲ. ಆದ್ರೂ ಅವಳು ನಮ್ಮ ಜೀವನದಲ್ಲಿ ಕಾಲಿಡದೆ ಇದ್ದಿದ್ರೆ, ರಾಜ ನನ್ನಿಂದ ದೂರ ಹೋಗ್ತಿರಲಿಲ್ಲ. ಅವಳ ಹೆಜ್ಜೇನೇ ನನ್ನ ಬಾಳಿನ ಕುಠಾರ ಅನ್ನೋ ಯಾವುದೋ ಒಂದು ಅವ್ಯಕ್ತ ನಂಬಿಕೆ ಅವಳ ಸಾನ್ನಿಧ್ಯಾನ್ನ ದ್ವೇಷಿಸುತ್ತೆ. ಆ ದ್ವೇಷ ಹಾನಿಯಲ್ಲದ್ದೂಂತಿಟ್ಕೊ. ಅವಳ ಮೇಲೆ ಸೇಡು ತೀರಿಸ್ಕೋಬೇಕೂಂತ ಏನೂ ಇಲ್ಲ. ಆದರೂ ಅವಳನ್ನು ನಾನು ನೋಡಲಾರೆ. ನನ್ನ ಸೈಕಾಲಜೀನೇ "ಭಾರತಿ" ಅನ್ನೋ ಹೆಸರಿನಿಂದ ಪರಿತಪ್ತವಾಗಿದೆ ಸುಮಿತ್ರಾ. ನಾನು ಸಹಿಸಲಾರೆ,

"ಒಂದುವೇಳೆ ಮುಂದೆ ನಿನಗೆ ಹೆಣ್ಣು ಮಗುವಾದರೆ "ಭಾರತಿ" ಅಂತ ಮಾತ್ರ ಹೆಸರಿಡಬೇಡ ನನ್ನ ಸ್ನೇಹ ನಿನಗೆ ಬೇಕಿದ್ರೆ....ಅಂದ್ಹಾಗೆ ಸುಮಿತ್ರಾ ನಿನ್ನ ಮಗಳಿಗೆ "ಸರಳಾ" ಅಂತ ಯಾಕೆ ಹೆಸರಿಟ್ಟೆ ?"

"ನಂಗೊಬ್ಬ ಬಹಳ ಆತ್ಮೀಯ ಗೆಳತಿ ಸಿಕ್ತಾಳೆ ಮುಂದೆ, ಅವಳ ಹೆಸರಾಗಿ ಇಡೋಣಾಂತ" ಎಂದು ಹಾಸ್ಯ ಮಾಡಿದಳು ಸುಮಿತ್ರಾ.

"ತಮಾಷೆಯಲ್ಲ ಸುಮಿತ್ರಾ. ಅದೋಂದು ದೌರ್ಭಾಗ್ಯ ಹೆಸರು ಮಗೂಗೇಕೆ ಅಂತ."

"ಹೆಸರಿಟ್ಟಿದ್ದು ನಾನಲ್ಲ ಸರಳಕ್ಕ ಅವರಿಗೇನೋ ಆ ಹೆಸರು ತುಂಬಾ ಇಷ್ಟ ಅಂತೆ. ಇಡೋಣ ಅಂದ್ರು. ನನಗೆ ಅಷ್ಟೇನೂ ಇಷ್ಟ ಇರಲಿಲ್ಲ. ಆದರೆ ಈಗ ತುಂಬಾ ಇಷ್ಟ."

ಏನು ! ಅವಳ ಗಂಡನಿಗೆ ಆ ಹೆಸರು ತುಂಬಾ ಇಷ್ಟ ! ಇರಬಹುದು ತನಗೆ ವಿನಾಕಾರಣ "ಮಧುಸೂದನ" ಎಂಬ ಹೆಸರು ಇಷ್ಟವಿಲ್ಲವೆ ? ಹಾಗೆಯೇ ಆತನಿಗೆ ಸರಳಾ ! ಯಾಕೋ ವಿಲಕ್ಷಣವೆನಿಸಿತು ಅವಳಿಗೆ.

ಸುಮ್ಮನಾದ ಸರಳಾಳನ್ನು ಕುರಿತು ಸುಮಿತ್ರಾ "ಯಾಕೆ ಸರಳಾ, ನಾ ಹೇಳಿದ್ದು ವಿಚಿತ್ರ ಎನಿಸುತ್ತೇನು ?"

"ಏನಿಲ್ಲ. ಕೆಲವು ಹೆಸರುಗಳ ಮೇಲೆ ನಮಗೆ ಸುಮ್ಮ ಸುಮ್ಮನೆ ಪ್ರೀತಿ ಬರುತ್ತಲ್ಲಾ ಅಂತ ಯೋಚಿಸ್ತಿದ್ದೆ. ನೋಡು ಸುಮಿತ್ರಾ, ನಾನೇನೋ ಈಗ ಪೂರ್ಣತೃಪ್ತಳಾಗಿದ್ದರೂ, ನನಗೆ ಒಂದೇ ಒಂದು ಆಸೆ ಉಳಿದಿದೆ. ಹೇಗಾದ್ರೂ ಮಾಡಿ ರಾಜನನ್ನು ಒಂದ್ಸಲ ನೋಡಬೇಕೂಂತ ಉತ್ಕಟಾಕಾಂಕ್ಷೆ ಆಗುತ್ತೆ. ಕೂಡಲೆ "ಬೇಡ, ನಿಶ್ಚಲವಾಗಿರೋ ಅವನ ಸಂಸಾರದಲ್ಲಿ ನನ್ನ ಪರಿಚಯ ನೀಡಿ ಅದನ್ನ ಕಲಕೋದು ಬೇಡ" ಅಂತ್ಲೂ ಅನ್ನಿಸತ್ತೆ. ಅವ ನನ್ನು ನೋಡ್ದೆ ಇದ್ರೂ ಸರಿ, ಅವನ ಮಡದಿ ಮಕ್ಕಳನ್ನು ಕಣ್ತುಂಬಾ ನೋಡ್ಬೇಕು ಸುಮಿತ್ರಾ, ನಾನು ನೋಡ್ಬೇಕು. ಆ ಭಾಗ್ಯಶಾಲಿ ಸೌಭಾಗ್ಯವತೀನ ಕರೆದು ಅರಸಿನ ಕುಂಕುಮ ಕೊಡಬೇಕು ಅಂತ ಹಂಬಲಿಸುತ್ತೆ ನನ್ನ ಮನಸ್ಸು. ಎಲ್ಲಿದ್ದಾರೋ ಏನೋ, ಒಂದುವೇಳೆ ಕಂಡುಹಿಡಿದೆ ಅಂತ್ಲೇ ಇಟ್ಕೊ. ನಾನು ಅವಳ ಗಂಡನ ಪ್ರೇಯಸಿಯಾಗಿದ್ದೆ ಅಂತ ತಿಳಿದ್ರೆ ಅವಳು ನನ್ನನ್ನು ದ್ವೇಷಿಸಬಹುದಲ್ಲಾ ಅಂತ ಶಂಕೆ ಬಂದಾಗ ಮನ ಮುದುರುತ್ತದೆ.

ಹೇಗಾದರೂ ಅವರ ಇರುವಿಕೆ ತಿಳಿದು ಅಜ್ಞಾತ ನಾಮ:ದಿಂದಾದ್ರೂ ಅವನ ಹೆಂಡತಿ ಮ:ಕ್ಕಳಿಗೆ ಆಗಾಗ ಏನಾದ್ರೂ ಉಡುಗೊರೆ ಕೊಡಬೇಕು ಅಂತ ಮಹತ್ವ ಆಸೆ. ಏಷ್ಟಾದರೂ ಮ:ನಸ್ಸಿನಿಂದ ನಾನು ಅವನ ಮೊದಲ ಮಡದಿ, ಮಕ್ಕಳಾಗಲಿಲ್ಲಾಂತ ಗ:ಡ:ಗೆ ಎರಡನೇ ಮದುವೆ ಮಾಡಿ, ಅವಳ ಮಕ್ಕಳೇ ತನ್ನ ಮಕ್ಕಳೂಂತ ಲಾಲಿಸೋ ನಿರ್ಭಾಗ್ಯ ಮೊದಲ ಹೆ:ಡತಿ ಸ್ಥಾನಾನಾದ್ರೂ ನನಗೇ ಬೇಡವಾ ಹೇಳು ಸುಮಿತ್ರಾ, ನಾನಷ್ಟು ಪಡೆದು ಬಂದಿಲ್ಲವಲ್ಲಾ ಅ:ತಲೇ ದುಃಖ ನನಗೆ. ನನ್ನ ಈ ಕಡೆಯ ಕೋರಿಕೆ, ಕೋರಿಕೆಯಾಗೇ ಉಳಿದು ಬಿಡುವುದೋ ಏನೋ" ಎಂದು ಬಿಕ್ಕಳಿಸಿದಳು ಸರಳಾ.

ಸುಮಿತ್ರೆ ಹತ್ತಿರ ಬಂದು-"ಸರಳಕ್ಕ, ನಿನ್ನ ಈ ಕೋರಿಕೇನ್ನ ಈಡೇರಿಸೋ ಜವಾಬ್ದಾರಿ ನನ್ನದು. ಈವತ್ತೇ ನಮ್ಮವ್ರು ಹತ್ರ ಹೇಳಿ ಎಲ್ಲಿಯೇ ಇರಲಿ ರಾಜನನ್ನ ಪತ್ತೆ ಮಾಡೋ ಪ್ರಯತ್ನ ಮಾಡ್ತೀನಿ. ನೀನಳ ಬಾರದು ಅಕ್ಕ. ನೀನು ದೀಪದ ಬತ್ತಿ ಇದ್ದಾಗೆ. ತಾನು ಉರಿದು ಹೋದ್ರೂ ಚಿಂತೆಯಿಲ್ಲ. ಸುತ್ತಲಿರೋ ಕತ್ತಲನ್ನ ಕಳೆಯಬೇಕು ಅ:ತ ಕಡೆಯತನಕ ಉರಿಯುತ್ತೆ ಬತ್ತಿ. ಹಾಗೆಯೇ ಹೃದಯದ ತುಂಬಾ ದುಃಖ ವಿಟ್ಟು ತಪ್ತವಾಗಿ ಹೋಗಿದ್ರೂ, ಮತ್ತೊಬ್ರ ಬಾಳನ್ನ ಬೆಳಗಲು ಹಾತೊರೆ ಯುವ ನಿನ್ನಂತಾವ್ರು ಬಹಳ ವಿರಳ. ನಾನು ಅದೃಷ್ಟಶಾಲಿ ನಿನ್ನಂತಹ ಅಕ್ಕನ್ನ ಪಡೆದೆ" ಎಂದು ತುಂಬು ಮನಸ್ಸಿನಿಂದ ಶ್ಲಾಘಿಸಿದಳು.

ಸ್ವಲ್ಪ ಹೊತ್ತು ಇಬ್ಬರೂ ಮೌನವಾಗಿದ್ದರು. ಏನೋ ಜ್ಞಾಪಿಸಿ ಕೊಂಡವಳಂತೆ ಸರಳಾ ಎದ್ದು— "ಸುಮಿತ್ರಾ ಹೊತ್ತಾಯ್ತು ಏಳಮ್ಮ. ಮನೇಗೆ ಹೋಗುವಿಯಂತೆ" ಎಂದು ಪರಧ್ಯಾನವಾಗಿ ಹೇಳಿದಳು.

"ತುಂಬಾ ಹೊತ್ತೇನೂ ಆಗಿಲ್ಲ. ಇನ್ನೂ ಎಂಟೂವರೆ. ಒಂಭತ್ತ ರೊಳಗೆ ಮನೆ ತಲಪ್ತೀನಿ."

"ಸಿನಿಮಾಗೆ ಎಂದು ಹೇಳಿ ಬಂದಿದ್ದಿ. ಆತ ಏನೆಂದುಕೊಂಡಿರಬೇಕು?"

"ಈಗ ಹೇಳ್ತೀನಲ್ಲಾ ನಾನು ನೋಡಿದ್ದು ಯಾವ ಸಿನಿಮಾ ಅಂತ. ಆದ್ರಿಂದ ಪರವಾಗಿಲ್ಲ, ಆದರೆ ಮಕ್ಕಳು ಏನು ಚಂಡಿ ಹಿಡಿದಿರ್ತಾರೋಂತ ಅಷ್ಟೆ.

"ರಾಜೀವ ತಂದ್ಕೊಟ್ಟಿರೋದನ್ನ ತೊಗೊಂಡು ಹೋಗು ಸುಮಿತ್ರಾ. ಪಾತ್ರೆ ನಾಳೆ ತಲುಪಿಸಿದರಾಯ್ತು."

"ಸರಳಾ ನಿನ್ನ ಕತೆ ಹೇಳು ಹೇಳೂಂತ ಬಲವಂತಮಾಡಿ ನಿನ್ನ ಮನಸ್ಸಿಗೆ ಬೇಡದ ನೆನಪು ತಂದು ನೋಯಿಸಿದ್ದೀನಿ. ಅದಕ್ಕೆ ನೀನು ನನ್ನನ್ನು ಕ್ಷಮಿಸ ಬೇಕು" ಎಂದಳು ಸುಮಿತ್ರಾ.

"ನೋವೂ ಇಲ್ಲ, ಏನೂ ಇಲ್ಲ. ಪಿತ್ತ ಕೆರಳಿ ವಾಂತಿ ಆಗೋ ಹಾಗಿದ್ದು ಆಗದೆ ಪರಿತಪಿಸ್ತಾ ಇದ್ದಾಗ ಒಮ್ಮೆ ವಾಂತಿ ಆದಕೂಡಲೇ ಆಗುವ ಅನುಭವ ಆಗ್ತಿದೆ ನನಗೆ. ಆದಕೂಡಲೇ ಸ್ವಲ್ಪ ಸುಸ್ತಾಗಿ ತತ್ತರಿಸುವಂತಾ ದರೂ ದೇಹ ಸೌಖ್ಯ ಸುಧಾರಿಸುತ್ತೆ. ಮಧುರಾ ಹೊರಟುಹೋದ ದಿನ ದಿಂದ, ನನ್ನ ಬಾಳಿನ ಗುಟ್ಟನ್ನು ನಾನು ಯಾರಿಗೂ ಹೇಳಿಲ್ಲ, ಕೆಲವರು ತಾಯಿ ತಂದೆ ಇಲ್ಲದ ಹುಡುಗೀಗೆ ಮದುವೆ ಮಾಡೋ ಜವಾಬ್ದಾರಿ ಯಾರೂ ತೊಗೊಂಡಿಲ್ಲಾಂತ ಅಪರೋಕ್ಷವಾಗಿ ಅಣ್ಣಂದಿರನ್ನು ಜರೆದಿದ್ದಾರೆ. ಆಗಲೂ ನಾನು ತುಟಿ ಎರಡು ಮಾಡಿಲ್ಲ. ಇಂದಿರಾಗೆ ಕೂಡ ತಿಳಿಯದು. ಅಂತ ದ್ದರಲ್ಲಿ ಒಳಗೇ ಒಮ್ಮೊಮ್ಮೆ ಕೆರಳ್ತಾಲೂ, ಒಮ್ಮೊಮ್ಮೆ ದುಃಖಿಕ್ಕೀಡು ಮಾಡ್ತಾಲೂ ಇದ್ದ ವೇದನೆ ಈವತ್ತು ಹೊರಹೊಮ್ಮಿತು. ಅದರಿಂದ ನನಗೇ ಒಳ್ಳೆಯದು. ನೀನೇನೂ ಬೇಸರ ಮಾಡ್ಕೋಬೇಡ.

ನಾನೇನೂ ಹೃದಯವಿಲ್ಲದ ಕಲ್ಲಿಗೆ ನನ್ನ ಕತೆ ಹೇಳಿಲ್ಲ. ಹೃದಯಗಳಲ್ಲೂ ಬೆಣ್ಣೆಹಾಗಿರೋ ಹೃದಯದ ಮುಂದೆ ತೋಡಿದ್ದೀನಿ ನನ್ನ ನೋವನ್ನ. ನನ ಗಿಂತ ನೀನೇ ಹೆಚ್ಚು ಅತ್ತಿದ್ದೀ. ನನ್ನ ದುಃಖದಲ್ಲಿ ಪಾಲುಗೊಂಡು ಕಣ್ಣೀರು ಸುರಿಸೋ ತಂಗಿಯಾಗಿ ಸಿಕ್ಕಿದ್ದಿ. ಅನವರತವೂ ನಾವಿಬ್ರೂ ಹೀಗೇ ಗೆಳತೀರ ಹಾಗೆ ಇರೋ ಹಾಗಾದ್ರೆ ನನಗೆ ಸಾಕು."

"ಸರಳಕ್ಕ" ಎಂದು ತಬ್ಬಿಕೊಂಡಳು ಸುಮಿತ್ರಾ. "ನಾನು ಬೇಕಾದರೆ ನನ್ನ ಮಕ್ಕಳ ಮೇಲೆ ಆಣೆಯಿಟ್ಟು ಹೇಳ್ತೀನಿ. ನಾನಿನ್ನು ನಿನ್ನಿಂದ ದೂರ ಹೋಗೋಲ್ಲ ಕಡೆಗೆ ನನ್ನ ಗಂಡನೇ ಅಡ್ಡಬಂದರೂ ನಿನ್ನನ್ನು ನಾ ದೂರ ಮಾಡೋಲ್ಲ ಸರಳಾ. ನೀನು ಪ್ರೀತಿಸೋವ್ರೆಲ್ಲಾ ದೂರ ಹೋಗ್ತಾರೆಅನ್ನೋ ನಿನಗಿರೋ ಶಾಪಾನ್ನ ನಾನು ಸುಳ್ಳುಮಾಡ್ತೀನಿ. ನೋಡ್ತಾ ಇರು" ಎಂದು ಆವೇಶದಿಂದ ನುಡಿದಳು.

ಸರಳಾ ಸುಮಿತ್ರೆಯನ್ನು ಇನ್ನೂ ತೆಕ್ಕೆಯಲ್ಲೇ ಹಿಡಿದು "ನಿನ್ನ ಒಳ್ಳೆಯ ಹೃದಯ ಇನ್ನೂ ಬೆಳಗಲಿ ಸುಮಿತ್ರಾ, ನಿನ್ನ ಗಂಡ ನನಗೆ ಅಡ್ಡ ಬರುವುದೂ ಬೇಡ. ನೀನೂ ನಿನ್ನ ಸಂಸಾರ ಹಚ್ಚ ಹಸುರಾಗಿ ಅನವರತವೂ ಚೆನ್ನಾಗಿರಬೇಕು. ನನಗಂತೂ ಆ ಭಾಗ್ಯವಿಲ್ಲ. ನನ್ನ ತಂಗಿಯ ಸಂಸಾರ ಚೊಕ್ಕವಾಗಿರಬೇಕು."

ಅತ್ತು ಕೆಂಪಾಗಿದ್ದ ಮುಖವನ್ನು ತೊಳೆದು ಬಂದಳು ಸುಮಿತ್ರಾ. ಹಣೆಗೆ ಕುಂಕುಮ ಇಟ್ಟು ಹೊರಡಲನುವಾದಳು. ಸರಳೆ ಅವಳನ್ನು ತಡೆದು "ಅಷ್ಟು ಚಿಕ್ಕ ಕುಂಕುಮ ನಿನ್ನ ದೊಡ್ಡ ಹಣೆಗೆ ಸಾಲದು. ಆವತ್ತು ನೀನು ನನಗೆ ಪರಿಚಯವಾದ ದಿನ ಆ ಕುಂಕುಮ ಎಷ್ಟು ಚೆನ್ನಾಗಿ ಶೋಭಿಸುತ್ತಿತ್ತು, ಸುಮಿತ್ರಾ ನಿನ್ನ ಹಣೆಯಲ್ಲಿ" ಎಂದು ಮತ್ತಷ್ಟು ಕುಂಕುಮ ಹಚ್ಚಿ ಮನದಲ್ಲೇ "ದೀರ್ಘ ಸುಮಂಗಲಿಯಾಗಿರು ನನ್ನ ಸುಮಿತ್ರಾ" ಎಂದು ಹರಸಿದಳು.

ಸುಮಿತ್ರೆಯನ್ನು ಬಸ್ಸು ಹತ್ತಿಸಿ ಮನೆಗೆ ಬಂದ ಸರಳೆಗೆ ಇದ್ದಕ್ಕಿದ್ದಂತೆ ಮನ ಚಡಪಡಿಸಲಾರಂಭವಾಯಿತು. ದೇವರ ಮುಂದೆ ತಲೆಬಾಗಿ ಕುಳಿತು ಧ್ಯಾನಿಸಿದಳು. ಆದರೂ ನೆಮ್ಮದಿಯಾಗಲಿಲ್ಲ. ಎದ್ದು ಹೋಗಿ ಪುಟ್ಟ ಬೀರುವಿನ ಬಾಗಿಲು ತೆಗೆದು 'ಎಂದೂ ನಾನು ನಿನಗೆ ದ್ರೋಹ ಬಗೆಯಲಾಶಿಸೋದಿಲ್ಲ ರಾಜ. ಆದರೆ ಈವತ್ತು ಅದೇಕೆ ನಾನೆಲ್ಲವನ್ನೂ ಸುಮಿತ್ರೆಗೆ ಹೇಳಿದೆನೋ ತಿಳಿಯದು. ಆದರಿಂದ ನನ್ನ ಮನಸ್ಸೇನೋ ಹಗುರವಾಗಿದೆ. ಆದರೆ ಯಾವ ಅನರ್ಥಕ್ಕೋ ಇದು ಎಂದು ಈಗ ನನಗೆ ಭಯವಾಗ್ತಾ ಇದೆ. ಒಂದು ವೇಳೆ ಏನೇ ನಡೆಯಲಿ ತಿಳಿದೂ ತಿಳಿದೂ ಮಾಡಿದೆನೆಂದು ಮಾತ್ರ ಅಂದುಕೊಳ್ಳಬೇಡ. ಎಲ್ಲಿರುವೆಯೋ ಏನೋ, ಹುಚ್ಚಿಯಂತೆ ದಿನವೂ ನಿನ್ನನ್ನು ಮಾತನಾಡಿಸ್ತೀನಿ. ಎಲ್ಲಿಯಾದರೂ ಸುಖವಾಗಿರು ರಾಜ" ಎಂದು ಕಣ್ಣೊರೆಸಿಕೊಳ್ಳುತ್ತಾ ಬಾಗಿಲು ಮುಚ್ಚಿದಳು.

ಬಹಳ ಹೊತ್ತು ಅಳುತ್ತಿದ್ದಳು, ಯಾವಾಗ ನಿದ್ದೆ ಮಾಡಿದಳೋ ತಿಳಿಯದು.

# ೨೦

ಸುಮಿತ್ರ ಹೊರಟಾಗ ಮಲಗಿದ ಮಕ್ಕಳು ನಾಲ್ಕರವೇಳೆಗೆ ಎದ್ದರು. ಅವರೆಲ್ಲಿ ಎದ್ದುಬಿಡುವರೋ ಎಂದು ಶ್ಯಾಮುವು ನಿದ್ದೆ ಮಾಡಲೇ ಇಲ್ಲ.

ಇತ್ತೀಚೆಗೆ ಭಾನುವಾರ ಬಂದರೆ ಅವನ ಮನಸ್ಸಿಗೇಕೋ ಅಶಾಂತಿ. ಮಧ್ಯಾಹ್ನವೆಲ್ಲಾ ಹೆಂಡತಿ ಮಕ್ಕಳು ಗೈರುಹಾಜರು. ಅವಳು ಹೋದ ಕೂಡಲೇ ತಾನೂ ಮಲಗಿ ಸುಮಾರು ನಾಲ್ಕು ಗಂಟೆಗೆ ಎದ್ದು. ಫ್ಲಾಸ್ಕಿನಲ್ಲಿ ಸುಮಿತ್ರಾ ಹಾಕಿಟ್ಟಿರುತ್ತಿದ್ದ ಕಾಫಿ ಕುಡಿದು, ಒಂದರ್ಧಗಂಟೆ ರೇಡಿಯೋದ ಮುಂದೆ ಕುಳಿತು, ಮತ್ತೆ ಸ್ವಲ್ಪ ಹೊತ್ತು ಯಾವುದಾದರೂ ಪತ್ರಿಕೆ ಓದಿ, ಡ್ರೆಸ್ ಮಾಡಿಕೊಂಡು ಹಾಗೆಯೇ ಹೊರಗಡೆ ಒಂದು ರೌಂಡು ಸುತ್ತಾಡಿ ಬರುತ್ತಿದ. ಆ ವೇಳೆಗೆ ಸುಮಿತ್ರೆ ಬಂದಿರುತ್ತಿದ್ದಳು.

ಒಂದಿಷ್ಟು ಸರಳೆಯ ಹೊಗಳಿಕೆ,ಸ್ವಲ್ಪ ವೇದಾಂತ, ಒಂದೆರಡು ಹಾಸ್ಯದ ಚಟಾಕಿಗಳು ಸ್ವಲ್ಪ ತಿಂಡಿ ಹೊತ್ತು ತರುತ್ತಿದ್ದಳು ಸುಮಿತ್ರಾ. ದಿನವೇನೋ ಚೆನ್ನಾಗಿಯೇ ಕಳೆಯುತ್ತಿತ್ತು. ಆದರೂ ಅವನಿಗೇನೋ ಒಂದು ತರಹ ಆಗು ತ್ತಿತ್ತು. ತನಗಾಗುವ ಅನುಭವವನ್ನು ಹೇಗೆ ವ್ಯಕ್ತಪಡಿಸಬೇಕೆಂದು ಅವನಿಗೆ ತಿಳಿಯುತ್ತಿರಲಿಲ್ಲ. ಸುಮಿತ್ರೆಗೂ ಸಹ ಅವನು ಏನೂ ಹೇಳುತ್ತಿರಲಿಲ್ಲ.

ಹೀಗೇ ಎಷ್ಟೋ ಭಾನುವಾರ ಕಳೆದಿತ್ತು. ಸರಳೆಯ ಪ್ರಭಾವ ಸುಮಿ ತ್ರೆಯ ಮೇಲೆ ಹೆಚ್ಚು ಹೆಚ್ಚು ಬೀಳುತ್ತಿತ್ತು. ಸರಳೆಯ ವ್ಯಕ್ತಿತ್ವದಿಂದ ಸುಮಿತ್ರಳೂ ಸಹ ಉದಾತ್ತಳಾಗುತ್ತಿದ್ದಳು. ಅವನಿಗೆ ಅದು ಸಂತೋಷವೇ ಆದರೂ ಭಾನುವಾರ ಬಂದರೆ ಶ್ಯಾಮುಗೆ ಸ್ವಲ್ಪ ಅಂಜಿಕೆಯಾಗುತ್ತಿತ್ತು. ಕಾರಣ ಮಾತ್ರ ಅವನ ಊಹೆಗೆ ಎಟಕುತ್ತಿರಲಿಲ್ಲ.

ಇಂದು ಮಕ್ಕಳೆದ್ದ ಕೂಡಲೆ, ಅವುಗಳಿಗೆ ಸುಮಿತ್ರೆ ಮಾಡಿಟ್ಟು ಹೋಗಿದ್ದ ತಿಂಡಿ ಕಾಫಿ ಕೊಟ್ಟು, ಮುಖ ತೊಳೆದು ಅಲಂಕಾರ ಮಾಡಿದ. ಸ್ವಭಾವತಃ ಶೃಂಗಾರಪ್ರಿಯನಾದ ಶ್ಯಾಮು ತನ್ನ ಮುದ್ದು ಮಗಳು ಸರಳನ್ನು ಬಹಳ ಜಾಗ್ರತೆಯಿಂದ ಅಲಂಕರಿಸಿದ. ಮಕ್ಕಳನ್ನು ತನ್ನಕ್ಕನ ಮನೆಯಲ್ಲಿ ಬಿಟ್ಟು ಹೊರಗಡೆ ಸುತ್ತಾಡಲು ಹೊರಟ.

ಮನೆಗೆ ಹಿಂತಿರುಗಿದಾಗ ಏಳು ಗಂಟೆ. ಆದ್ದರೂ ಸುಮಿತ್ರೆಯ ಸುಳಿವಿಲ್ಲ "ಇನ್ನು ಮಕ್ಕಳನ್ನು ಈಗೇಕೆ ಕರೆತರುವುದು, ಸುಮಿತ್ರೆ ಬಂದ ಮೇಲೆ ಹೋಗೋಣ" ಎಂದು ನಿಶ್ಚಯಿಸಿ, ಒಳಗಡೆ ಬಂದು ದೀಪ ಹಚ್ಚಿ ಬಟ್ಟೆ ಬದಲಾಯಿಸಿ ವಿಶ್ರಾಂತಿಗಾಗಿ ಆರಾಮ ಕುರ್ಚಿಯಲ್ಲಿ ಒರಗಿದ.

ಸುಮಿತ್ರೆ ಬರಲಿಲ್ಲ, "ತಾನೇ ಏಕೆ ಸರಳೆಯ ಮನೆಯವರೆಗೆ ಹೋಗಿ ಬರಬಾರದು" ಎಂದು ಪರಟು ಹಾಕಿಕೊಳ್ಳುತ್ತಿರುವಾಗ, ಪರಟಿನಿಂದೊಳಗಿಂದ ಯಾರೋ ನಕ್ಕಂತಾಯಿತು----"ನಿನ್ನ ಹೆಂಡತಿ ಸ್ವಲ್ಪ ತಡವಾಗಿ ಬಂದರೆ ಅದಕ್ಕೇಕಿಷ್ಟು ಕಾತರ ? ಅವಳೇನು ಓಡಿಹೋಗುವಳೇನು ? ಅಷ್ಟಕ್ಕೂ ಸರಳೆಯ ಜೊತೆಯಲ್ಲಿ ಹೋಗಿದ್ದಾಳೆ. ನಿನ್ನ ಹೆಂಡತಿಯನ್ನು ಮನೆ ಸೇರಿಸುವ ಜವಾಬ್ದಾರಿ ಸರಳೆ ಮರೆತುಬಿಡ್ತಾಳೇನು ?" ಪರಟು ಕಳಚಿಟ್ಟು ಅಡಿಗೆಮನೆ ಪ್ರವೇಶಿಸಿ. ಅವಳು ಬರುವ ವೇಳೆಗೆ ಒಂದಿಷ್ಟು ಒಲೆಹಚ್ಚಿ ನೀರಾದರೂ ಏರಿಸೋಣ ಅನ್ನಕ್ಕೆ" ಎಂದು ಒಲೆಹಚ್ಚಿ ನೀರಿಟ್ಟು ಬಂದ.

ರೇಡಿಯೋದ ಮುಂದೆ ಕುಳಿತ ಶ್ಯಾಮುವಿಗೆ ಮಧ್ಯಾಹ್ನ ನಿದ್ದೆಮಾಡದೆ ಇದ್ದುದರಿಂದ ಸ್ವಲ್ಪ ಸ್ವಲ್ಪ ಜೋಂಪು ಹತ್ತಿತು. ರೇಡಿಯೋ ತನ್ನ ಪಾಡಿಗೆ ಅರಚುತ್ತಲೇ ಇತ್ತು. ಎಚ್ಚೆತ್ತಾಗ ರೇಡಿಯೋ ಇಂಗ್ಲೀಷು ನ್ಯೂಸಿಗಾಗಿ ಕುಂಯ್ ಕುಂಯ್ ಶಬ್ದ ಕೊಡುತ್ತಿತ್ತು. ಸರೆಂದು ಅಡಿಗೆ ಮನೆಗೆ ಓಡಿದ ಶ್ಯಾಮು. ಸುಮಿತ್ರೆ ಇನ್ನೂ ಬಂದಿರಲಿಲ್ಲ. ಒಲೆ ಆರಿಹೋಗಿತ್ತು. ಎಂದೂ ಕೋಪ ಬರದ ಶ್ಯಾಮುವಿಗೆ ಕೋಪ ನೆತ್ತಿಗೇರಿತು.

ಇವಳಿಗಿಷ್ಟು ತಿಳುವಳಿಕೆ ಬೇಡ, ಮನೆಯಿಂದ ಹೊರಗೆ ಹೋದರೆ ಬೇಗ ಬಂದು ಮನೆಗೆ ಸೇರಿಕೋಬೇಕೂಂತ. ಬರ್ತಾ ಬರ್ತಾ ಬಹಳ ಅತಿಯಾಯ್ತು. ಎಲ್ಲಾ ಆ....ಅವಳಿಂದಾನೇ." ಅವನ ಹೃದಯ ಪರ ಹೆಣ್ಣನ್ನು ಜರಿಯಿತು. ಆದರೆ ಸುಮ್ಮನೆ ಕೂಡಲಿಲ್ಲ. ಅವನ ಬುದ್ಧಿ—"ಶ್ಯಾಮು ಏನಿದು ? ನಿನ್ನ ಹೆಂಡತಿ ಬರಲಿಲ್ಲವೆಂದು ಸರಳೆಯನ್ನೇಕೆ ಜರೆಯುತ್ತೀ ?"

"ಹೌದು, ಇವಳ ಗಂಡ, ಮಕ್ಕಳು ಕಾಯಬಹುದೂಂತ ಬೇಗ ಕಳಿಸಿ ಬಿಡಬಾರದೇನು ಆಕೆ, ಅವಳಿಗೇನೋ ಯಾರೂ ಇಲ್ಲಾಂದ್ರೆ ಸುಮಿತ್ರೆಗೆ ಯಾರೂ ಇಲ್ಲವೇನು ?"

"ಶ್ಯಾಮು ! ಬಾಯಿಮುಚ್ಚು. ಸರಳೆಯನ್ನು ಆಕ್ಷೇಪಿಸುವಷ್ಟು ಹೋದೆಯಾ ? ನಿನಗೆ ನಾಚಿಕೆ ಆಗುವುದಿಲ್ಲವೆ ? ಬರುತ್ತಾಳೆ ಸುಮಿತ್ರೆ ಇಷ್ಟರಲ್ಲೇ, ಒಂದುವೇಳೆ ಹಾದಿಯಲ್ಲಿ ಅನಾಹುತ ನಡೆದಿದ್ದರೆ, ಅದಕ್ಕೆ ಸರಳೆ ಜವಾಬ್ದಾರಿಯೇನು ? ನಾಲಿಗೆಗೆ ಲಗಾಮಿರಲಿ" ಬುದ್ಧಿ ಎಚ್ಚರಿಸಿ ಸುಮ್ಮನಾಯಿತು.

ಮನಸ್ಸಿನ ಮುಖ ಕೆನ್ನೆಗೆ ಹೊಡೆಯಿತು ಅನಾಹುತ ! ಸುಮಿತ್ರೆಗೆ ಹಾದೀಲಿ ಅನಾಹುತ ! ಅಂದರೆ ಸರಳೆಗೂ ! ಕೂಡದು, ಕೂಡದು. 'ಆಗಿರಬಹುದು' ಎಂದಿತು ಮನಸ್ಸು ಅಷ್ಟೆ. ಅವರಿಬ್ಬರ ಪರಿಚಯವಾದದ್ದು ಒಂದು ಅಪಘಾತದಿಂದಲೇ. ಏನಾದರಾಗಲಿ. ಹೋಗಿ ನೋಡಿಯೇ ಬರಬೇಕೆಂದು ಉಟ್ಟಿದ್ದ ಅಡ್ಡಪಂಚೆಯ ಮೇಲೆ ಷರಟೇರಿಸಿ ಗೇಟಿನವರೆಗೂ ಬಂದು ನಿಂತ.

ಸರಳೆಯ ಮನೆಯವರೆಗೆ ಹೋಗಲು ಮಾತ್ರ ಅವನಿಗೆ ಮನಸ್ಸಾಗದು. ತನಗೆ ಹೆಂಡತಿಯ ಮೇಲಿನ ವ್ಯಾಮೋಹಕ್ಕಾಗಿ ಅವಳುನಕ್ಕಾಳೆಂದೋಅಥವಾ ಮತ್ತಾವ ಕಾರಣವೋ, ಗೇಟಿನ ಬಳಿ ಬಂದವನು ಮುಂದೆ ಹೆಜ್ಜೆ ಹಾಕಲಿಲ್ಲ. ಅವನ ಕೋಪ ಆರದಿದ್ದರೂ ಕಡಿಮೆಯಾಗಿತ್ತು. ಗೇಟಿನ ಬಳಿ ಗಾಳಿ ಬೇರೆ ತಂಪಾಗಿ ಬೀಸುತ್ತಿದ್ದುದರಿಂದ ಕಾದ ತಲೆ ತಣ್ಣಗಾಗುತ್ತಾ ಬಂದಿತ್ತು, ಆದರೂ ಸುಮಿತ್ರೆಯ ಮೇಲೆ ಅಸಮಾಧಾನ ಮಾತ್ರ ತಗ್ಗಲಿಲ್ಲ.

ತಾನೆಂದರೆ ಇಷ್ಟು ನಿರ್ಲಕ್ಷ್ಯವೇ ಸುಮಿತ್ರೆಗೆ ? ಸರಳೆಯ ಗೆಳೆತನದ ಮುಂದೆ ನಾನು ಇಷ್ಟು ನಿಕೃಷ್ಟನೆ ? ಇರಬಹುದು. ಹೆಣ್ಣು ಹೆಣ್ಣಿಗೆ ಹೆಚ್ಚು ಗೆಳತಿ. ಆದರೆ ಗಂಡನೇ ಎರಡನೆಯ ಸ್ಥಾನ ಪಡೆಯುವ ಮಟ್ಟಿಗೆ ಸ್ನೇಹವೆ? ಮ್ಯಾಟನಿಗೆ ಹೋಗುತ್ತೇನೆಂದು ಹೇಳಿದಳು. ಒಂಭತ್ತೂಕಾಲು ಗಂಟೆಯಾದರೂ ಮನೆಗೆ ಬರದಿದ್ದರೆ ಏನರ್ಥ ? ಮೊದಲನೆಯ ಷೋನೂಮುಗಿಸಿ ಬರ್‍ತಿಯಾಂತ ಚೇಷ್ಟೆ ಮಾಡಿದಾಗ "ಹುಚ್ಚೆ" ಎಂದಳಲ್ಲವೆ ? ಹಾಗೇನಾದ್ರೂ ಹೋಗಿರಬಹುದೆ ? ಸುಮಿತ್ರೆಗೆ ಸ್ವಲ್ಪ ಚಿತ್ರದ ಹುಚ್ಚಿದ್ದರೂ ಸರಳೆಗೆ ಇಲ್ಲವಲ್ಲಾ. ಚಿತ್ರವೆಂದು ಸುಳ್ಳು ಹೇಳಿ ಮತ್ತೆಲ್ಲಿಯಾದರೂ ಹೋಗಿರಬಹುದೆ? ಎಂದಾಗ ಸಂಶಯಕೀಟ ಹೊಕ್ಕಿತು ಶ್ಯಾಮುವಿನ ಮನದಲ್ಲಿ. ಸುಳ್ಳು ! ಸುಮಿತ್ರೆಯ ಬಾಯಲ್ಲಿ ಸುಳ್ಳು ! ಎಂತಹ ಆಪತ್ತು ಬಂದರೂ ಸುಳ್ಳು ಹೇಳುವವಳಲ್ಲ ಸುಮಿತ್ರಾ, ಆದರಲ್ಲೂ ತನ್ನ ಬಳಿ. ಅಂತದ್ದು ಈವತ್ತು ಯಾಕೆ ಹೀಗೆ ? ಎಂದೆಲ್ಲಾ ತರ್ಕಿಸುತ್ತಾ ನಿಂತಿದ್ದ ಬಾಗಿಲಲ್ಲಿ.

ಎಷ್ಟೋ ಹೊತ್ತು ನಿಂತಿದ್ದನಾದರೂ ಹೊರಡುವ ಮನಮಾಡಲಿಲ್ಲ. ಆಕಡೆಗೊಮ್ಮೆ ಈಕಡೆಗೊಮ್ಮೆ ಬೀದಿಯಲ್ಲಿ ನೋಡುತ್ತಾ, ಹೋಗಿ ಬರುತ್ತಿದ್ದ ಪ್ರತಿಯೊಂದು ಕಾರು, ಟ್ಯಾಕ್ಸಿ, ಆಟೋ, ಬಸ್ಸು ಎಲ್ಲವನ್ನೂ ಎದುರು ನೋಡುತ್ತಿದ್ದ. ನಿಂತು ನಿಂತು ಬೇಸರವಾಗಿ ಅವನಿಗೆ ಮತ್ತೆ ಕೋಪ ಬಂದಿತು. ಪ್ರಯೋಜನ ಏನು ?

ದೂರದಲ್ಲಿ ನಿಧಾನವಾಗಿ ಕಾಲೆಳೆದು ಬರುತ್ತಿದ್ದ ಸುಮಿತ್ರಾ ಕಂಡಳು. ಹೊತ್ತಾಗಿದೆ ಎಂದಾದರೂ ಸರಸರ ಹೆಜ್ಜೆ ಹಾಕಿ ಬರಲೇನು ಇವಳಿಗೆ ಎಂದು ಕೋಪದಿಂದ ಬುಸುಗುಟ್ಟುತ್ತಾ ಒಳಗೆ ಹೋಗಿ ಕೋಣೆಯಲ್ಲಿ ಕುರ್ಚಿಯಲ್ಲಿ ಕುಳಿತು, ಓದುವವನಂತೆ ಕೈಯಲ್ಲಿ ಪೇಪರ್ ಹಿಡಿದು ಮುಖ ಮುಚ್ಚಿ ಕುಳಿತು ಬಿಟ್ಟ.

ಸುಮಿತ್ರೆ ನಿಧಾನವಾಗಿ ಬಾಗಿಲಿಗೆ ಬಂದಾಗ, ಅವಳ ಎದೆ ಡವಡವ ಹೊಡೆದುಕೊಳ್ಳುತ್ತಿದ್ದರೂ, ಏನೋ ಒಂದು ಧೈರ್ಯ ಬಂದಿತ್ತು ಇಂದು. ಬಾಗಿಲು ಪೂರಾ ತೆಗೆದಿಟ್ಟಿದ್ದು ಅಲ್ಲದೆ ಮನೆಯ ಎಲ್ಲಾ ಕಡೆಗಳಲ್ಲೂ ದೀಪ ಉರಿಯುತ್ತಿದ್ದುದು ನೋಡೇ ಸುಮಿತ್ರೆಗೆ ತಿಳಿಯಿತು ಶ್ಯಾಮು ಎದ್ದೇ ಇದ್ದಾನೆಂದು. "ದೀಪ ಏಕೆ ಎಲ್ಲಾ ಕಡೆ ? ಆರಿಸಿಬಿಡಿ" ಎಂದರೆ, ಮನೆಯಲ್ಲಿ ಸದಾ ಬೆಳಕು ನಿಗಿನಿಗಿ ಅನಿಸುತ್ತಿರಬೇಕು ಸುಮಿತ್ರಾ" ಎನ್ನುತ್ತಿದ್ದ. ಆದರೆ ದೀಪ ಉರಿಯಲಿ ಎಂದು ಅವನೆಂದೂ ಹಾಕುತ್ತಿರಲಿಲ್ಲ. ಹಾಕಿದೆಡೆ ಆರಿಸುವುದು ಮರೆತು ಮತ್ತೆ ಹೋಗಿ ಆರಿಸಲು ಸೋಮಾರಿಯಾಗಿ ಹಾಗೆ ಹೇಳುತ್ತಿದ್ದ ಸುಮಿತ್ರೆಗೆ. ಅವನ ಮರ್ಮ ತಿಳಿದ ಸುಮಿತ್ರೆ ತಾನೇ ಎದ್ದು ಹೋಗಿ ಅಗತ್ಯವಿಲ್ಲದೆಡೆ ದೀಪ ಆರಿಸಿ ಬರುತ್ತಿದ್ದಳು. ಆಗ ನಕ್ಕು ಶ್ಲಾಘಿಸುವಂತೆ ಸುಮಿತ್ರೆಯನ್ನು ನೋಡುತ್ತಿದ್ದ.

ಎಂದಿನಂತೆ ಇಂದು ಶ್ಯಾಮು ಅವಳನ್ನು ಸ್ವಾಗತಿಸಲಿಲ್ಲ. ಕೋಣೆಯಲ್ಲಿ ಇಣಿಕಿ ನೋಡಿದಳು. ಶ್ಯಾಮು ಮುಖಕ್ಕೆ ಪೇಪರ್ ಅಡ್ಡ ಹಿಡಿದು ಕುಳಿತಿದ್ದ. ಸುಮಿತ್ರೆಗೆ ಅರ್ಥವಾಯಿತು ಅವನಿಗೆ ಕೋಪ ಬಂದಿದೆಯೆಂದು. ತನ್ನ ಕೈ ಬಳೆಯ ಸದ್ದು, ಕಾಲುಂಗರದ ಗೆಜ್ಜೆಯ ಶಬ್ದ ಕೇಳಿಸಿದ್ದರೂ ತಲೆ ಎತ್ತದೆ ಇರಬೇಕಾದರೆ! ಸರಿ. ಎಂದು ನೇರವಾಗಿ ಒಳಗೆ ಹೋಗಿ ಕೈಕಾಲು ತೊಳೆದು

ಬಂದು ತಂದಿದ್ದ ಪಾತ್ರೆಗಳನ್ನು ಅಡಿಗೆ ಮನೆಯಲ್ಲಿಟ್ಟು ಶಬ್ದ ಮಾಡದೆ ಕೋಣೆ ಪ್ರವೇಶಿಸಿದಳು.

ಕುರ್ಚಿಯ ಹಿಂದುಗಡೆ ಹೋಗಿ, ಕುರ್ಚಿಯ ಮೇಲೆ ಬಗ್ಗಿ, ಅವನ ಕೂದಲಿನಲ್ಲಿ ಬೆರಳುಗಳನ್ನು ತೂರಿಸಿ, ಪ್ರೇಮ ತುಂಬಿದ ಮೆಲುದನಿಯಲ್ಲಿ--"ಶ್ಯಾಮೂ" ಎಂದಳು.

"ದಯವಿಟ್ಟು ನನ್ನ ಕ್ರಾಪ್ ಕೆಡಿಸಬೇಡ, ಕೈ ತೆಗಿ ಸುಮಿತ್ರಾ" ಎಂದು ಕೊಸರಿದ.

"ತಡವಾಗಿ ಬಂದೇಂತ ಕೋಪಾನಾ ?"

"ಕೋಪ ಯಾಕೆ ? ನಿನ್ನಿಷ್ಟ ಬಂದ್ಹಾಗೆ ನೀ ಮಾಡಬಹುದು. ಇದು ವ್ಯಕ್ತಿ ಸ್ವಾತಂತ್ರ್ಯದ ಯುಗ."

"ತಡ ಯಾಕಾಯ್ತು ಅಂತ ತಿಳಿಕೊಳ್ಳದೇನೆ...."

"ಯಾಕೆ ತಿಳ್ಕೋಬೇಕು ? ಗೃಹಿಣಿ ಅನ್ನೋ ನಿನಗೆ, ಮನೆ, ಗಂಡ, ಮಕ್ಳು ಪರಿವೆ ಇಲ್ಲದಿದ್ದ ಮೇಲೆ ನಾನು ಪ್ರಶ್ನಿಸಿ ಪ್ರಯೋಜನ ಏನು ?"

"ನೀವು ಪ್ರಶ್ನಿಸದೆ ಇದ್ರೂ ನಾ ಹೇಳೇ ಹೇಳ್ತೀನಿ. ಈವಾಗ ಏಳಿ ಸ್ವಲ್ಪ ಊಟ ಮಾಡೋವ್ರಂತೆ."

"ನಂಗೆ ಊಟ, ಗೀಟ ಬೇಡ. ಸ್ವಲ್ಪ ಹಾಸಿಗೆ ಸರಿಪಡಿಸು ಬಿದ್ಕೋತೀನಿ, ನಿದ್ದೆ ಬರ್‍ತಾ ಇದೆ."

"ನಿಮ್ಗೆ ನನ್ನ ಮೇಲೆ ಕೋಪ ಇದ್ರೆ. ಊಟ ಏನು ಮಾಡ್ತು ಸದ್ಯ. ಏಳಿ ಸುಮ್ಮನೆ."

"ನನ್ಗೆ ಬೇಡ, ಬೇಡ ತಿಳೀತಾ. ಮಾಡೋಕ್ಕೆ ಏನು ನೀನು ಇಲ್ಲಿ ಬೇಯ್ಸಿಟ್ಟದ್ದೀಯೇನು ? ಇನ್ನು ಅವಳ ಮನೆಯಿಂದ ತಂದಿರ್‍ತೀ. ತಗೊಂಡು ಹೋಗಿ ತಿಪ್ಪೇಲಿ ಸುರಿ ಅದನ್ನ."

"ಶ್ಯಾಮು ! ! !" ಕೂಗಿಬಿಟ್ಟಳು ಸುಮಿತ್ರಾ ಎಚ್ಚರವಿಲ್ಲದೆ.

"ನಿಮ್ಗೆ ತಿನ್ನಲು ಇಷ್ಟವಿಲ್ಲದಿದ್ರೆ ಬಿಡಿ. ಹೌದು, ಪ್ರತಿ ಒಬ್ಬನೂ ಒಂದಲ್ಲ ಒಂದ್ಸಲ್ಲ ತಪ್ಪು ಮಾಡ್ತಾನೆ. ಅದಕ್ಕೋಸ್ಕರ ಮೂರನೇವ್ರ ಮೇಲೆ ಸೇಡು ತೀರಿಸ್ಕೊಳ್ಳೋಂತಾದ್ದೇನು ? ಅಮೃತ ಕೊಡ್ತೀನೀಂದ್ರೆ ಕಾಲಿನಲ್ಲಿ ಒದ್ಕೋ ನಿಮ್ಮ ಬುದ್ಧಿಗೆ ಏನು ತಾನೇ ಹೇಳೋಕ್ಕಾಗುತ್ತೇ ?"

"ನೀನೇನೂ ಹೇಳಬೇಕಾಗಿಲ್ಲ, ಬೇಕಿದ್ರೆ ನೀನೇ ತಿಂದು ಮಲಕ್ಕೋ. ನನ್ಗೆ ಹಾಸಿಗೆ ಹಾಸ್ಕೊಡು ಸಾಕು."

"ಅದು ತಾನೆ ನಾನ್ಯಾಕೆ ಮಾಡ್ಬೇಕು ? ನನ್ನ ಮಾತೂ, ನಾ ಯಾಕೆ ಲೇಟಾಗಿ ಬಂದೆ ಅನ್ನೋ ಕಷ್ಟ ಸುಖ ಬೇಕಿಲ್ಲದವರಿಗೆ ಈ ಕೆಲ್ಸ ತಾನೇ ನಾನ್ಯಾಕೆ ಮಾಡಿಕೊಡಬೇಕು ?"

ಸುಮಿತ್ರೆಗೆ ಏನೋ ಧೈರ್ಯ ಈವತ್ತು. ಎಂದೂ ಗಂಡನಿಗೆ ಎದುರಾಡಿ ಅಭ್ಯಾಸವಿಲ್ಲ. ಅಂತಹ ಸಂದರ್ಭ ಬಂದಾಗಲೆಲ್ಲಾ ಮಾತಿಗೆ ಮುಂಚೆ ಅಳುವೇ ಬರುತ್ತಿದ್ದುದರಿಂದ ಶ್ಯಾಮು ಮೆತ್ತಗಾಗಿಬಿಡುತ್ತಿದ್ದ. ಆದರೆ ಸುಮಿತ್ರೆ ಇಂದು ಅಳಲಿಲ್ಲ. ಆವನ ಕುರ್ಚಿಗೆ ಒರಗಿ ನಿಂತಿದ್ದ ಅವಳು, ಮಂಚದ ಬಳಿಗೆ ಹೋಗಿ ಹಾಸಿಗೆ ಸರಿಪಡಿಸುತ್ತಾ– "ಹೋಗಲಿ, ಮಲಗಿಬಿಡಿ. ಎಷ್ಟು ವರ್ಷಗಳಿಂದ ನಿದ್ದೆ ಮಾಡಿಲ್ಲವೋ. ಏನೋ ನೀವು. ತಂದಿರೋದೆಲ್ಲಾ ಹಿಡಿಂಬಿ ಹಾಗೆ ಒಬ್ಬಳೇ ಮುಕ್ಕಿಬಿಟ್ಟು ಮೂಲೇಲಿ ಬಿದ್ಕೋತೀನಿ. ನನಗೂ ಒಂದು ವಿಧದಲ್ಲಿ ಹಾಯಿ ಒಂದು ರಾತ್ರಿಯಾದರೂ ನಿಮ್ಮಿಂದ ತಪ್ಪಿಸ್ಕೋಬಹುದು. ಅತ್ತರೆ ಸ್ವಲ್ಪ ಅಳ್ತೀನಿ. ಅದ್ರಿಂದ ನಿಮ್ಗೇನಾಗಬೇಕು ? ಮಧ್ಯಾಹ್ನ ಎರಡು ಗಂಟೆಯಿಂದ, ರಾತ್ರಿ ಎಂಟರವರೆಗೆ ಒಂದೇ ಸಮ ಅತ್ತಿದ್ದೀನಿ. ಇನ್ನೊಂದು ಸ್ವಲ್ಪ, ಅತ್ರೆ ಏನಾಗ್ಬಿಡುತ್ತೆ ನಂಗೆ. ಪ್ರಾಣ ಅಂತೂ ಹೋಗೊಲ್ಲ. ನಿಮ್ಮನ್ನು ಕಾಡಿ ಸೋಕ್ಕ ಉಳಿದೇ ಇರ್ತೀನಿ. ಏನೋ ಪಾಪ, ಸರಳಾ ಮನಸ್ಸಿಗೆ ಬೇಜಾರ್ಮಾಡ್ಕೊಂಡು ತನ್ನ ಕತೆ ಎಲ್ಲಾ ಹೇಳ್ತಾ ಕೂತ್ಬಿಟ್ಳು. ಸ್ವಲ್ಪ ಲೇಟಾಗೋಯ್ತು. ಅಷ್ಟಕ್ಕೇ ಯಾಕೆ ? ಏನು ? ಅಂತ ವಿಚಾರಿಸ್ದೆ ಇರೋವ್ರಿಗೆ ನಾನು ಸ್ವಲ್ಪ ಅತ್ರೆ ಏನಾಗುತ್ತೆ ಸದ್ಯ" ಎಂದು ಒಂದೇ ಸಮ ಗೊಣಗುತ್ತಾ ಕೋಣೆಯಿಂದ ಹೊರಗಡೆ ಹೋದಳು.

ಸರಳೆಯ ಕಥೆಯಿಂದ ಮೊದಲೇ ನೊಂದ ಅವಳ ಹೃದಯ ಗಂಡನ ವಿನಾ ಕೋಪದಿಂದ ಅಪಮಾನಿತವಾಯಿತು. ಸೆಟೆದೆದ್ದ ಮನ ಏನೇನೋ ಗೊಣಗುಟ್ಟುವಂತೆ ಮಾಡಿತು. ತಾನಾಡಿದ ಮಾತುಗಳು ಶ್ಯಾಮುವಿನ ಮೇಲೆ ಪರಿಣಾಮ ಮಾಡುವುದೆಂದು ಅವಳು ತಿಳಿಯಲಿಲ್ಲ. ಆದರೆ "ಸರಳಾ ತನ್ನ ಕತೆ ಹೇಳಿದಳು" ಎಂದ ಒಂದು ವಾಕ್ಯ ಆವನ ಮೇಲೆ ಸಿಡಿಲಿನಂತೆ ಬಂತು.

"ಏನೆಂದೆ ಸುಮಿತ್ರಾ ?" ಧ್ವನಿ ತಗ್ಗಿತ್ತು. ಕೋಪದ ಛಾಯೆಯೇ ಇರಲಿಲ್ಲ. ಅದುವರೆಗೆ ಮುಖದಿಂದ ಪೇಪರ್ ದೂರ ತೆಗೆಯದೆ ಇದ್ದ ಅವನ ಕೈಯಿಂದ ಪೇಪರ್ರು ಜಾರಿ ಬಿತ್ತು. ಅವನ ತಗ್ಗಿದ ಧ್ವನಿಯನ್ನು ಗಮನಿಸಿದ ಸುಮಿತ್ರಾ ನಿಂತು, ಹಿಂತಿರುಗಿ ನೋಡಿದಳು. ಅವಳು ಬಂದಾಗಲಿಂದ ಅವಳ ಮುಖ ನೋಡದೆ ಇದ್ದ ಅವನಿಗೆ, ಅವಳ ಬಿಳುಪಿನ ಮುಖ ಊದಿ ದಪ್ಪಗಾಗಿದ್ದುದು ನೋಡಿ ಯಾರೋ ತನಗೆ ಥಳಿಸಿದಂತೆ ನೊಂದುಕೊಂಡನು.

"ಯಾಕೆ ಅತ್ತೆ ಸುಮಿತ್ರಾ ಮಧ್ಯಾಹ್ನ ?" ಎಂದು ಎದ್ದು ಅವಳ ಬಳಿ ಬಂದ.

"ಯಾಕಾದರೆ ಏನು ? ಹೋಗಿ ಮಲಕ್ಕೊಳ್ಳಿ. ನಿಮ್ಗೆ ನಿದ್ದೆ ಬರ್ತಾ ಇದೆ. ನನ್ನದೇನು ಸದ್ಯ" ಎಂದು ತಳ್ಳಿ ಹೊರಟುಹೋದಳು.

ಶ್ಯಾಮು ಈಗ ಸೋಲಲು ತಯಾರಿದ್ದ. ಎಗರಿ ಮುಂದೆ ಹೆಜ್ಜೆಯಿಟ್ಟು ಅವಳ ಜಡೆ ಹಿಡಿದುಕೊಂಡ.

"ಜಡೆಬಿಡಿ, ಕೆಡಿಸಬೇಡಿ ಜಡೇನ, ಬಿಡಿಕ್ಕೆ" ಕೊಸರಿದಳು. ಮುಯ್ಯಿಗೆ ಮುಯ್ಯಿ. ಜಡೇನ್ನೇನೋ ಬಿಟ್ಟುಬಿಟ್ಟ. ಆದ್ರೆ ಅವಳನ್ನೇ ಬಳಸಿ ಹಿಡಿದು ಎಳೆತಂದು ಕನ್ನಡಿ ಮುಂದೆ ನಿಲ್ಲಿಸಿ—ನಿನ್ನ ಮುಖ ನೋಡಿಕೋ ಸುಮಿತ್ರಾ" ಎಂದ.

ಎರಡು ಕೈಗಳಿಂದಲೂ ಮುಖ ಮುಚ್ಚಿಕೊಂಡಳು. ಕನ್ನಡಿಯಲ್ಲಿ ನೋಡಲಿಲ್ಲ.

"ನೋಡಿಕೊಳ್ಳೋಲ್ವಾ ನಿನ್ನ ಮುಖ ಹೇಗಿದೇಂತ ?"

"ನನ್ಮುಖ ಹೇಗಿದ್ರೆ ಏನು ? ಅದರಿಂದ ಯಾರಿಗೆ ಏನಾಗಬೇಕಾಗಿದೆ ?" ಎಂದು ದುಗುಡದಿಂದ ಅಂದಳೇ ಆದರೂ ಮುಚ್ಚಿದ ಮುಖದಿಂದ ಕೈ ತೆಗೆಯಲಿಲ್ಲ.

"ಯಾರಿಗೂ ಏನೂ ಆಗಬೇಕಿಲ್ಲವಾ ?" ಎಂದು ಕೈಗಳನ್ನು ಬಲವಂತದಿಂದ ಅವಳ ಮುಖದಿಂದ ಬಿಡಿಸಿ ತನ್ನ ಎದೆಯ ಮೇಲೆ ಇಟ್ಟುಕೊಂಡು "ನನಗೂನೂ ?" ಎಂದ. ಸುಮಿತ್ರೆ ಮಾತನಾಡಲಿಚ್ಛಿಸಲಿಲ್ಲ. ತಲೆ ತಗ್ಗಿಸಿದಳು. ನಿಧಾನವಾಗಿ ಅವಳ ಮುಖ ಮೇಲಕ್ಕೆತ್ತಿ—"ನನಗೂ ಏನೂ ಆಗಬೇಕಿಲ್ವಾ ಸುಮಿ ?"

ಅಷ್ಟು ಮೃದುತ್ವ ಸಾಕು, ಶ್ಯಾಮುವಿನ ಬಾಯಲ್ಲಿ, ಸುಮಿತ್ರೆಯನ್ನು ಹಣ್ಣು ಮಾಡುವುದಕ್ಕೆ. ಅವನ ಎದೆಗೆ ಒರಗಿ ಬಿಕ್ಕಳಿಸಿದಳು.

"ಇಷ್ಟು ಹಠ ಯಾಕೆ ಮಾಡ್ತಿ ? ಚಿಕ್ಕ ಮಗೂ ಹಾಗೆ ? ಅಲ್ಲ ಕೋಪ ಮಾಡಿಕೊಂಡ ನಾನೇ ಸರಿಯಾದ ಮೇಲೆ, ನೀನೂ...."

"ಕೋಪ ಮಾಡ್ಕೊಳ್ಳೋದು ನಿಮ್ಮೊಬ್ಬರ ಹಕ್ಕೇನೋ ?" ಈ ಸರಣಿ ಅವನಿಗಿಷ್ಟ, ಇದು ಕೀಟಲೆಯ ಮೊದಲ ಹೆಜ್ಜೆ ಎಂದು ಅವನಿಗೆ ಗೊತ್ತು.

"ಹಕ್ಕು ನನ್ನದಲ್ಲವೋ ಹೌದೋ, ಅದಿರಲಿ, ನನಗೀಗ ಹಸಿವು ಸುಮಿತ್ರಾ. ನಾನು ಊಟಮಾಡಬೇಕು" ಈಗ ಸುಮಿತ್ರೆ ಅವನ ತೋಳುಗಳಲ್ಲಿ ನಿಂತು ಹಿಂದೆ ಬಾಗಿದ್ದಳು ಊಟ ಮಾಡಲು ನಾನು ಏನೂ ಬೇಯಿಸಿಟ್ಟಿಲ್ಲ."

"ಅಮೃತ ಕೊಡು"

"ಅದನ್ನು ತಿಪ್ಪೇಲಿ ಸುರಿದಿದ್ದೇನಿ" ಚೇಷ್ಟೆಯ ಮೇಲೆಚೇಷ್ಟೆ. ಅವನು ಕೋಪದಲ್ಲಾಡಿದ ಮಾತುಗಳನ್ನು ಅವನಿಗೇ ತಿರುಗಿಸಿದ್ದಳು.

"ಓಹೋ ತಿಪ್ಪೇಲಿ ಸುರಿದಿದ್ದೀಯಾ ? ನಾನೇ ತರ್ತೀನಿ ತಾಳು"ಎಂದು ಅವಳನ್ನೆತ್ತಿ ಮಂಚದ ಮೇಲೆ ಮಲಗಿಸಿ-"ಇಲ್ಲಿಂದ ಅಲುಗಾಡಿದ್ರೆ ನೋಡ್ಕೊ ಅಮೃತ ತಂದು ಬಾಯಲ್ಲಿ ಸುರಿಯೋವರೆಗೆಅಲುಗಾಡಬಾರ್ದು" ದಂಡಿಸುವವನಂತೆ ನಟಿಸಿದ.

ಅವನ ಪ್ರೀತಿಯಲ್ಲಿ ಅವಳ ಕೋಪ ಮರೆತಳು. ಅವನೇನು ಮಾಡಬಹುದು ಎಂದು ಎದುರುನೋಡುತ್ತಿದ್ದಳು. ಎರಡು ತಟ್ಟೆಗಳಲ್ಲಿಮೊಸರನ್ನ, ಬಿಸೀಬೇಳೆಬಾತು ತಂದು ಸೊಂಟಕ್ಕೆ ಒಂದು ಟವಲ್ಲು ಸುತ್ತಿ ಅಡಿಗೆಯವನಂತೆ—"ಅಮ್ಮಾವ್ರೆ. ಏಳ್ತೀರಾ ಟಿಫನ್ ತಂದಿದೀನಿ" ಎಂದ. ಸುಮಿತ್ರೆ ಚೆನ್ನಾಗಿ ನಕ್ಕಳು. ಅತ್ತು ಕೆಂಪಗಿದ್ದ ಮುಖ ಪ್ರಫುಲ್ಲವಾಯಿತು. "ಯಾಕೆ ನಕ್ಕಿದ್ದು ಸುಮಿ ? ?" ಎಂದು ಪಕ್ಕದಲ್ಲೇ ಕುಳಿತ; ತನ್ನ ಬಟ್ಲರನ ವೇಷಕ್ಕಾಗಿ ಇರಬಹುದು ಎಂದು ನೆನೆಸಿದ ಇವನು. ಆದರೆ ಅವಳೆಂದಳು ನಗು ತಡೆಯಲಾರದೆ "ಯಾಕೆ. ಶ್ಯಾಮಾಚಾರ್ರೆ, ಅಡಿಗೆ ಮಾಡಿದ ಕೂಡಲೆ ರುಚಿ ನೋಡಿಬಿಡ್ತೀರೇನು ? ಯಜಮಾನ್ರಿಗೆ ಬಡಿಸೋಕೆ ಮುಂಚೇನೆ ?"

ತಬ್ಬಿಬ್ಬಾದ ಶ್ಯಾಮು ತನ್ನ ಕಡೆಗೆ ನೋಡಿಕೊಂಡ. ಷರಟಿನ ಮೇಲೆ

ಒಂದು ಸಣ್ಣ ಮುದ್ರೆ ಹುಳಿಯನ್ನದ್ದು! ರುಚಿ ನೋಡುವ ಚಪಲದಲ್ಲಿಒಂದು ತುತ್ತು ಬಾಯಿಗೆ ಹಾಕಿಕೊಂಡಿದ್ದ. ಅವಳಿಗೆ ತಿಳಿಯದಿರಲಿ ಎಂದರೆ ತಿಳಿದೇ ಹೋಯಿತು. ತಾನೂ ನಕ್ಕುಬಿಟ್ಟ,

"ಹೇಗಿದೆ ಶ್ಯಾಮು ?"

"ಭೇಷಾಗಿದೆ. ಸರಳಾನೇ ಮಾಡಿದಳೇನು ?"

"ಅವಳೂ ಇಷ್ಟೇ ಚೆನ್ನಾಗಿ ಮಾಡ್ತಾಳೆ. ಆದರೆ ಈವತ್ತು ಅವಳು ಮಾಡಿದ್ದಲ್ಲ....ತೊಗೊಳ್ಳಿ."

"ನೀನೂ ತೊಗೊ"

"ನಂಗೆ ಬೇಡ. ಈವತ್ತು ನಾನು ತಿನ್ನಲೇಲಾರೆ."

"ಹಾಗಾದ್ರೆ ನಂಗೂ ಬೇಡ"

"ಪ್ಲೀಸ್ ತೊಗೊಳ್ಳಿ ಅಮೃತ". ನಕ್ಕುಬಿಟ್ಟ ಶ್ಯಾಮು. ಸರಳೆ ಏನು ಕೊಟ್ಟರೂ ಅದು ಅಮೃತ ಸುಮಿತ್ರೆಗೆ. ರುಚಿ ಚೆನ್ನಾಗಿರುತ್ತೆ ಅನ್ನೋ ದ್ರಲ್ಲೇನೂ ಸಂಶಯ ಇರಲಿಲ್ಲ.

"ಈಗ ನೀವು ನಕ್ಕಿದ್ದು ಯಾಕೆ ?" ಶ್ಯಾಮು ಯಾಕೆಂದು ಹೇಳಲಿಲ್ಲ. ಆದರೆ "ನನಗೆ ಅಮೃತ ಆಮೇಲೆ. ಮೊದಲು ಟೊಮ್ಯಾಟೋ ಹಣ್ಣು ಬೇಕು."

"ಯಾವುದಕ್ಕೂ ಹೊತ್ತು ಗೊತ್ತಿಲ್ಲ ನಿಮಗೆ ಅದಕ್ಕೆ ನನಗೆ...."

"ಹುಂ. ಅದಕ್ಕೇ ನಿನಗೆ ಸಿಟ್ಟು, ಬೇಸರ ? ಹೋಗಲಿ ಬಿಡು ಅಮ್ಮ ತಾನ್ನೇ ಮೊದಲು ಮುಗಿಸ್ತೀನಿ. ಇಲ್ದಿದ್ರೆ ಎರಡಕ್ಕೂ ಸೊನ್ನೆ ಬಿದ್ದೀತು" ಎಂದು ತಿನ್ನಲಾರಂಭಿಸಿದ.

ಮಧ್ಯದಲ್ಲಿ—"ಒಂದೇ ಒಂದು ಸಲ ತೊಗೋ ಸುಮಿ, ಎಷ್ಟು ಚೆನ್ನಾಗಿದೇಂತ ರುಚಿನಾದ್ರೂ ನೋಡು" ಎಂದು ಬಾಯ ಬಳಿಗೆ ಚಮಚ ತಂದ. ಅವನ ಪ್ರೀತಿಯ ಆಗ್ರಹಕ್ಕಾಗಿ ಬಾಯಿ ತೆರೆದಳು. ಕೂಡಲೆ ಚಮಚವನ್ನು ತನ್ನ ಬಾಯಲ್ಲಿಟ್ಟುಕೊಂಡು ಅಣಕಿಸಿದ. ಸುಮಿತ್ರೆಗೆ ಕೋಪ ಬಂದು ಮುಖ ಕೆಂಪಗಾಗುತ್ತಿರುವಾಗಲೇ. "ಅದೇ. ಅದೇ ನನಗೆ ಬೇಕಾದ್ದು ಒಳ್ಳೇ ಟೊಮ್ಯಾಟೋ" ಎಂದು ಬಳಿಗೆ ಬಂದ. ಹಣ್ಣನ್ನು ಹೀರಿದ. ಅವಳಿಗೆ ಮತ್ತೂ ಕೋಪ ಬಂದು ಅವನನ್ನು ಹಿಂದೆ ತಳ್ಳಿಬಿಟ್ಟಳು.

ಬಿದ್ದಂತೆ ನಟಿಸಿದ ಅವನು ಏಳಲು ಪ್ರಯತ್ನಿಸಲಿಲ್ಲ. ಸ್ವಲ್ಪ ಹೊತ್ತು ಸುಮ್ಮನೆ ನೋಡಿ, ಅವನು ಏಳದೇನೇ ಹೋದಾಗ, ಹತ್ತಿರ ಬಂದು--"ನಿಜವಾಗ್ಲೂ ತಗುಲಿತಾಂದ್ರೆ" ಎಂದು ಕನಿಕರ ತೋರಿಸಿದಳು. "ಬೇಡ ಅಂದ್ರೂ ನೀವು ಮತ್ತೆ....." ಎಂದು ಏನೋ ಹೇಳಲು ಹೋದಳು.

"ಬೇಡ ಸುಮಿತ್ರಾ, ಏನೂ ಹೇಳಬೇಡ. ನಿನ್ನನ್ನು ಯಾಕೆ ತಡವಾಗಿ ಬಂದೆ? ಸರಳಾ ಕತೆ ಏನೂಂತ ನಾನು ವಿಚಾರಿಸಲಿಲ್ಲಾಂತ, ಮುಯ್ಯಿ ತೀರಿ ಸ್ಕೋತಾ ಇದ್ದಿ, ಹೋಗಲಿ ಬಿಡು. ಪಾಪ ! ನನ್ನಂತಹ ಗಂಡಂದಿರ ಪಾಡು ಇಷ್ಟೇ ತಾನೆ?" ಅವನ ನಟನೆಯನ್ನು ನಿಜವೆಂದೇ ತಿಳಿದಳು ಮುಗ್ಧೆ ಸುಮಿತ್ರ.

"ಬನ್ನಿ ತಗೊಳ್ಳಿ ನಿಮಗಿಷ್ಟವಾದ ಹಣ್ಣು ಇಷ್ಟಕ್ಕೆಲ್ಲಾ ಬೇಜಾರು ಮಾಡಿಕೊಂಡ್ರೆ ಹೇಗೆ?" ತಾನೇ ಒಡ್ಡಿಕೊಂಡಳು.

"ಬಯಸಿದಾಗ ಇಲ್ಲ ಅಂದ ಮೇಲೆ ಈಗೇನೂ ಬೇಡ ಹಣ್ಣು."

"ಹಾಗಾದ್ರೆ ಮತ್ತೇನು ಬೇಕು?" ಮಗುವನ್ನು ಸಂತೈಸುವಂತೆ ಕೇಳಿದಳು.

"ನೀನು ಮಧ್ಯಾಹ್ನ ಅತ್ತಿದ್ದು ಯಾಕೆ ಅಂತ ಹೇಳ್ಬೇಕು."

ಇದುವರೆಗೆ ತಿಳಿಯಾಗಿದ್ದ ಮನಸ್ಸು ಮತ್ತೆ ರಾಹುಗ್ರಸ್ತವಾಯಿತು--"ಪಾಪ ಸರಳಾ ತನ್ನ ಒಂಟಿ ಬಾಳಿನ ಕಥೆ ಹೇಳ್ತಾ ಇದ್ಲು. ಎಷ್ಟು ಕಷ್ಟ ಪಟ್ಟಿದ್ದಾಳೇಂತ ಅವಳು. ಅದಕ್ಕೇ ಇವತ್ತು ಅವಳೊಂದು ಪುಣ್ಯ ಜೀವಿ, ಪರಿಪೂರ್ಣಳಾಗಿರೋದು. ಕೇಳ್ತಾ ಕೇಳ್ತಾ ಟೈಂ ಆದದ್ದೇ ತಿಳೀಲಿಲ್ಲ. ಅವಳೇನೋ ಬಹಳ ನಿರ್ವಿಕಾರವಾಗಿ ಹೇಳ್ತಾ ಇದ್ಲು. ಆದ್ರೆ ನಂಗೆ ತಡಕೊಳ್ಳೋಕೆ ಆಗದೆ ತುಂಬಾ ಅತ್ತು ಬಿಟ್ಟೆ. "ನೀನು ಮನೆಗೆ ಹೋಗು ಸುಮಿತ್ರಾ, ನಿಮ್ಮಾತ ಕಾಯುಬಹುದೂಂತ" ಅವಳೆಷ್ಟೋ ಹೇಳಿದ್ಲು. ಆದ್ರೆ ನಾನೇ ಪೂರ್ತಿ ಕೇಳದೆ ಹೋಗೊಲ್ಲಾಂತ ಕೂತ್ಬಿಟ್ಟೆ. ನೀವು ನೋಡಿದ್ರೆ ಅವಳನ್ನು ಜರೀತೀರಿ. ಅದಕ್ಕೇ ವಿಷಯ ತಿಳೀದೇ ಜನರನ್ನು ಜಡ್ಜ್ ಮಾಡಬಾರದು ಅನ್ನೋದು.

"ಹಾಗಾದ್ರೆ ಸಿನಿಮಾಗೆ ಹೋಗಲಿಲ್ಲಾನ್ನು."

ಆಗ ಸುಮಿತ್ರೆಗೆ ನೆನಪಿಗೆ ಬಂತು ಮಕ್ಕಳನ್ನು ಇನ್ನೂ ಮನೆಗೆ ಕರೆತರ

ಲಿಲ್ಲವೆಂದು ಸರಳೆಯ ಗುಂಗಿನಲ್ಲಿದ್ದ ಸುಮಿತ್ರೆಗೆ ಏನೂ ತೋಚಲೊಲ್ಲದು, ತಕ್ಷಣ ಕೇಳಿದಳು—"ಮಕ್ಕಳನ್ನು ಯಾಕೆ ಕರಕೊಂಡು ಬರಲಿಲ್ಲ?"

"ನೀನೆಲ್ಲೋ ಮ್ಯಾಟನಿ ಮುಗಿಸಿ ಫಸ್ಟ್ ಷೋಗೆ ಹೊರಟುಬಿಟ್ಟಿದ್ದೀ. ಇನ್ನು ಯಾಕೆ ಈಗಲೇ ಅವರನ್ನು ಕರಕೊಂಡು ಬರೋದೂಂತ ಸುಮ್ಮನಾಗಿ ಬಿಟ್ಟೆ ಸುಮಿತ್ರಾ."

"ಹುಂ, ಸಿನಿಮಾ ಏಕೆ ಅವಳ ಬಾಳ್ವೆಯ ಮುಂದೆ?"

"ಹಾಗಾದ್ರೆ ಅಷ್ಟು ಒಳ್ಳೆಯ ಕಥೇನಾ? ನಿನ್ನಕ್ಕಂದು?" ಶ್ಯಾಮು ಕುತೂಹಲ ತೋರಿಸಿದ.

ಕೇಳಿದ್ದೇ ಸಾಕೆಂದು ಹೇಳಲಾರಂಭಿಸಿದಳು. ಸರಳಾ ಹೇಳಿದ ಪ್ರತಿ ಯೊಂದು ಅಕ್ಷರವನ್ನೂ ಬಿಡದೆ ಹೇಳಿದಳು. ಶ್ಯಾಮು ಈಗ ಮಲಗಿದ್ದ. ಅವನು ಮಡಿಸಿದ್ದ ಕಾಲಿಗೆ ತಲೆಯೊರಗಿಸಿ ಕುಳಿತ ಸುಮಿತ್ರ ಚಿತ್ರನೋಡಿದಷ್ಟು ವಿಶದವಾಗಿ ವಿವರಿಸುತ್ತಿದ್ದಳು, ಸರಳೆಯ ಬಾಳ್ವೆಯನ್ನು. ಶ್ಯಾಮು ಮೂಕ ವಾಗಿ ಕೇಳುತ್ತಿದ್ದ. ತಲೆಯನ್ನು ಗೋಡೆಯ ಕಡೆಗೆ ತಿರುಗಿಸಿದ್ದ.

'ಉಂ' ಉಹುಂ,, ಎಂದು ಕೂಡ ಹೇಳದೆ ಆಲಿಸುತ್ತಿದ್ದ ಶ್ಯಾಮು ವನ್ನು ಗಮನಿಸಿದ ಸುಮಿತ್ರ "ಏನು? ನಿದ್ರೆಮಾಡ್ಬಿಟ್ರಾ, ಕೇಳ್ತಾ ಇದ್ದೀರೋ" ಎಂದಳು.

"ಆಂ? ಕೇಳ್ತಾ ಇದ್ದೀನಿ ಸುಮಿತ್ರಾ" ಎಂದು ತಲೆ ತಿರುಗಿಸಿದ. ಕಣ್ಣಿ ನಲ್ಲಿ ನೀರು ಸುರಿದು ಹೋಗುತ್ತಿತ್ತು. ಸುಮಿತ್ರ ಹತ್ತಿರ ಜರುಗಿ ಸೆರಗಿನಿಂದ ಕಣ್ಣೊರಸಿ ಅಂದಳು "ಎಷ್ಟು ಹೆಣ್ಣು ಹೃದಯ ನಿಮ್ಮದು. ಅಳ್ತಿದ್ದೀರಾ?"

"ಅವಳ ಕತೆ ಕೇಳ್ತಾ ಕೇಳ್ತಾ ಬೇಜಾರಾಯ್ತು ಸುಮಿತ್ರಾ"

"ಹಾಗಾದ್ರೆ ಹೆಳಲೋ, ಬೇಡವೊ?"

"ಹೇಳಿ ಬಿಡು ಸುಮಿ" ಹೇಳಿಯೇ ಬಿಟ್ಟಳು ಸುಮಿತ್ರಾ. ಸರಳಾ ಕರ್ಮದಲ್ಲಿ ನಂಬಿ ರಾಜನ ಮೇಲೆ ಕೋಪ ಬಿಟ್ಟುದು, ಅವನನ್ನು ನೋಡಲು ಆಶಿಸಿದ್ದು, ಅವಳ ಕಡೆಯ ಕೋರಿಕೆ, ಅವನ ಪತ್ನಿ, ಮಕ್ಕಳ ಬಗ್ಗೆ ಅವಳು ಕೋರಿದ ಬಯಕೆ, ಎಲ್ಲಾ ಹೇಳಿಬಿಟ್ಟಳು.

"ಶ್ಯಾಮು, ನಾವು ಹೇಗಾದ್ರೂಮಾಡಿ, ರಾಜನನ್ನು ಹುಡುಕಿ ಒಂದ್ಸಲ ಅವಳಿಗಿ ಭೇಟಿ ಮಾಡ್ಸೋಣ. ಈವತ್ತಿಗೂ ನಂಗೊಂದನುಮಾನ, ಏನು

ಗೊತ್ತಾ ? ಅವಳು ಕೋಣೆಯಲ್ಲಿ ಒಂದು ಚಿಕ್ಕ ಬೀರು ಇಟ್ಕೊಂಡಿದ್ಲಾಳೆ. ಅದ್ರೊಳಗಿಂದ ಊದುಗಡ್ಡಿ, ಹೂವಿನ ವಾಸನೆ ಬರ್‍ತಿತ್ತು. ಒಂದಿನ ಕೇಳಿದ್ರೆ 'ಏನೋ ತುರುಕಿದ್ದೀನಿ ಬಿಡು' ಅಂದ್ಲು. ನಂಗೇನೋ ರಾಜನ ಫೋಟೋ ಇಟ್ಟು ಪೂಜಿಸ್ತಾಳೆ ಅನ್ನಿಸುತ್ತೆ. ಅವಳು ನಮ್ಮಲ್ಲಿ ಇಟ್ಟಿರೋ ಪ್ರೀತಿಗೆ ಬದಲಾಗಿ ನಾವಷ್ಟಾದ್ರೂ ಮಾಡೋಣ ಶ್ಯಾಮು. ಅಲ್ಲದೆ ನಾನು ಭಾಷೆ ಕೊಟ್ಟಿದ್ದೀನಿ. ಹೃದಯ ಕಣ್ಣಲ್ಲಾ ಆಸೆ ಮಾಡಿ ಹೇಳಿದ್ಲು ತನ್ನ ಕೋರಿ ಕೇನಾ"

ಶ್ಯಾಮು ಸುಮ್ಮನಿದ್ದ. ಕಣ್ಣೀರು ಮಾತ್ರ ಧಾರಾಕಾರ. "ಏಕೆ ಮಾತಾಡೋಲ್ಲ ಶ್ಯಾಮು ?"

"ಪ್ರಯತ್ನಿಸೋಣ ಸುಮಿತ್ರಾ. ಅವನನ್ನು ಹುಡುಕೋದು ಅಷ್ಟು ಸುಲಭ ಆಗಲಾರ್ದು" ಎಂದು ನಿಟ್ಟುಸಿರು ಬಿಟ್ಟು ಹಾಗೆಯೇ ಕೇಳಿದ.... "ಅವನ ಪೂರ್ತಿ ಹೆಸರೇನಂತೆ ?"

ಸುಮಿತ್ರೆಗೆ ನೋವಾಯಿತು ತನ್ನ ಪೆದ್ದುತನಕ್ಕೆ ಒಮ್ಮೆಯಾದರೂ ಕೇಳಲಿಲ್ಲ ತಾನು ಅದನ್ನು ಅವಳು ರಾಜ ಎಂದೇ ಹೇಳುತ್ತಿದ್ದಳು. ರಾಜ ಶೇಖರ ? ಉಹುಂ. ರಂಗರಾಜ ? ನೋ, ನೋ–ನಾಗರಾಜ ? ಅಲ್ಲ, ಇರಲಾರದು. ಏನು ? ಏನೋ ಕೇಳಿಯೇ ತಿಳಿದುಕೊಳ್ಳಬೇಕು. "ನಾನೊಂದು ಪೆದ್ದು ಶ್ಯಾಮು. ತಿಳ್ಕೊಳ್ಳೇ ಇಲ್ಲ. ಇನ್ನೊಂದ್ಸಲ ಹೋದಾಗ ಕೇಳಿ ತಿಳ್ಕೊಂಡು ಬರ್‍ತೀನಿ."

"ಸರಿ ಸುಮಿತ್ರಾ, ನಾಳೆ ಯೋಚಿಸೋಣ ಗಂಟೆ ಎರಡಾಯಿತು. ಮಧ್ಯಾಹ್ನದಿಂದ ಸರಳೆಯ ಗುಂಗಿನಲ್ಲೇ ಇದ್ದೀಯ. ಮಲಕ್ಕೊ ಸುಮಿತ್ರಾ" ಎಂದು ಅಕ್ಕರೆಯಿಂದ ಅವಳನ್ನು ಕುಳಿತ ಸ್ಥಾನದಿಂದ ಎಳೆದು ಸರಿಯಾಗಿ ಮಲಗಿಸಿ, ಹೊದಿಕೆ ಹೊದಿಸಿ ಮೇಲೆದ್ದ.

"ನೀವೂ ಮಲಗಿ" ಅಷ್ಟೆ. ಸುಮಿತ್ರಾಗೆ ನಿದ್ದೆ ಕಣ್ಣಂಚಿನಲ್ಲೇ ಕುಳಿತಿದ್ದಿತೇನೋ, ಒಂದು ಮಾತಾಡುವಷ್ಟರಲ್ಲಿ ನಿದ್ದೆಯಲ್ಲಿ ಲೀನವಾದಳು. ಬೆಳಗಿನಿಂದ ಮನದ ಮೇಲೆ ಒಂದೇ ಒತ್ತಡ, ದುಗುಡ, ಸರಳೆಯ ಕತೆಯ ಮೂಲಕ ಅವಳನ್ನು ಕನ್ನಡಿಯಂತೆ ನೋಡಿದ್ದಳು. ತಾನು ಕೇಳಿದ್ದನ್ನು ಶ್ಯಾಮುವಿಗೆ ನಿವೇದಿಸಿದ್ದಳು. ಸುಪ್ತ ಚೇತನದಲ್ಲಿ ಅಡಗಿದ್ದ ದುಗುಡ ಹೊರ ಹೊಮ್ಮಿದ

ಕೂಡಲೆ ನರಗಳ ಬಿಗಿಕಡಿಮೆಯಾಗುತ್ತಿತ್ತು ಹಾಯಾಗಿನಿದ್ರಿಸಿದಳು ಸುಮಿತ್ರಾ. ಅದೇ ಸಮಯದಲ್ಲಿ ಶ್ಯಾಮುವಿನ ನಿದ್ದೆಯನ್ನು ಕದ್ದು ಓಡಿದ್ದಳು ಸುಮಿತ್ರಾ.

## ೨೧

ಶ್ಯಾಮಸುಂದರ ಇಂದು ಅಧೀರನಾದಷ್ಟು ಎಂದೂ ಆಗಿರಲಿಲ್ಲ. ಮನಸ್ಸು ಬಹಳ ಚಂಚಲವಾಗಿಬಿಟ್ಟಿತು. ಮೈಯೆಲ್ಲಾ ಬೆವರಿತ್ತು. ಹೋಗಿ ಮುಖ ತೊಳೆದು ಬಂದ. ಮಲಗಲು ಇಷ್ಟವೇ ಆಗಲಿಲ್ಲ.

ಸುಮಿತ್ರೆ ಮಗುವಿನ ಮುಖ ಹೊತ್ತು ಭಾರವಾದ ಉಸಿರು ಬಿಡುತ್ತಿದ್ದಳು. ಅವಳ ಮುಖ ನೋಡಿದ ಕೂಡಲೆ ಶ್ಯಾಮುವಿಗೆ ದುಃಖ ಉಕ್ಕಿ ಬಂತು---"ಸುಮಿತ್ರಾ, ನನ್ನ ಸುಮಿ, ಪ್ರಪಂಚ ಸುಂದರವೆಂದೂ, ನಿಷ್ಕಳಂಕವೆಂದೂ ತಿಳಿದ ನೀನು, ಏನೇನು ಅನುಭವಿಸುವೆಯೋ" ಎಂದ ಮೆಲ್ಲಗೆ.

ಅಲ್ಲಿ ನಿಂತಿರಲು ಅವನಿಂದಾಗಲಿಲ್ಲ. ಹಾಗೇ ಹೊರಗಡೆ ಸುತ್ತಾಡಿ ಬರೋಣವೆಂದು ಮೆಲ್ಲನೆ ಬಾಗಿಲು ತೆಗೆದು ಗೇಟಿನ ಬಳಿಗೆ ಬಂದ. ಆ ಸರಿ ರಾತ್ರಿಯಲ್ಲಿ ಹೊರಗಡೆ ಹೋಗುವುದೇ ? ಛೆ, ಬೇಡ ಎನ್ನಿಸಿತು. ಹಾಗೇ ಒಂದು ಘಳಿಗೆ ಬಾಗಿಲಲ್ಲಿ ನಿಂತು ತಂಗಾಳಿಗೆ ಮೈಯೊಡ್ಡಿ ಹೋಗಿ ಮಲಗೋಣವೆಂದು ನಿಂತುಕೊಂಡ. ನಿಂತುದು ಒಂದು ಘಳಿಗೆಯಲ್ಲ. ಗಂಟೆಗೂ ಮೇಲಾಗಿತ್ತು. ಒಳಗೆ ಬಂದರೂ ಏನೋ ಕಸಿವಿಸಿ ಮನಕ್ಕೆ. ನಿಂತಲ್ಲಿ, ಕುಳಿತಲ್ಲಿ ಸರಳೆಯ ಮುಖ, ನಗುಮುಖ, ನೊಂದ ಮುಖ, ಕಾಂತಿಹೀನ ಮುಖ, ಕಣ್ಣೀರಿನಿಂದ ತೋಯ್ದ ಮುಖ ಕಾಣಲಾರಂಭಿಸಿತು.

ವರಾಂಡದಲ್ಲಿದ್ದ ಕುರ್ಚಿಯಲ್ಲಿ ಕುಳಿತು ಬಲವಂತವಾಗಿ ಕಣ್ಣು ಮುಚ್ಚಿಕೊಂಡ. ಆದರೂ ಬಂದಳು ಸರಳಾ ಮನೋಚಕ್ಷುಗಳ ಎದುರಿನಲ್ಲಿ-ಬೀಸಿದ ಗಾಳಿಗೆ ಹಾಲಿನಲ್ಲಿದ್ದ ಕ್ಯಾಲೆಂಡರು ಪಟಪಟ ಎಂದು ಕೆಳಗೆ ಬಿತ್ತು. ಎದ್ದು ಅದನ್ನೆತ್ತಿ ಸರಿಯಾಗಿ ತೂಗುಹಾಕಿ ಬಂದು ಕುಳಿತ. ದೂರದಲ್ಲಿ ಗೂಬೆಯು

ತರಹದ ಹಾಲಕ್ಕಿಗಳು ಕಿಚಕಿಚ ಎಂದು ಕಿರಚಿದವು. ಮನೆಯ ಮೇಲೆ ಕುಳಿತು ಅರಚಿದರೆ ದುಷ್ಟ ಶಕುನ ಎನ್ನುತ್ತಾರೆ. ಯಾರ ಮನೆಯ ಮೇಲೋ! ಪಾಪ ! ಎಂದುಕೊಂಡ.

ಮನಸ್ಸನ್ನು ಸರಳೆಯ ಕಡೆಯಿಂದ ಕಿತ್ತು ವಾತಾವರಣದ ಕಡೆಗೆ ಹರಿಯಗೊಟ್ಟರೂ, ಸರಳೆಯು ಹಠಮಾಡಿ ಅವನ ಮುಂದೆ ನರ್ತಿಸತೊಡಗಿದಳು. ಮನೆಯ ಪಕ್ಕದ ಸಂದಿನಲ್ಲಿ ಹೆಣ್ಣು ಗಂಡು ಬೆಕ್ಕುಗಳ ಪ್ರಣಯದ ಕರ್ಕಶ ಕೂಗು ಶ್ಯಾಮುವನ್ನು ಯೋಚನೆಗಳಿಂದ ಎಚ್ಚರಿಸಿತು. "ಎದ್ದು ಓಡಿಸಿ ಬರಬೇಕು. ಇಲ್ಲದಿದ್ರೆ ಸುಖವಾಗಿ ನಿದ್ರಿಸುತ್ತಿರೋ ಸುಮಿತ್ರಾ ಎದ್ದು ಬಿಡುತ್ತಾಳೆ" ಎಂದು ಕುರ್ಚಿಯಿಂದ ಎದ್ದ.

ಸುಮಿತ್ರೆಗೆ ಬೆಕ್ಕೆಂದರೆ ಅತೀ ಭಯ. ಅವಳು ಚಿಕ್ಕವಳಿದ್ದಾಗ ಒಂದು ಬೆಕ್ಕು ಸಣ್ಣ ಪಾತ್ರೆಯಲ್ಲಿದ್ದ ಹಾಲಿನ ಆಸೆಗೋಸ್ಕರ ತಲೆ ತೂರಿಸಿಬಿಟ್ಟಿತ್ತು. ಹಾಲು ಕುಡಿದಾದ ಮೇಲೆ ತಲೆ ಹೊರಗೆ ಎಳೆಯಲಾರದೆ ಪಾತ್ರೆಯನ್ನು ತಲೆಗೆ ತಗುಲಿಸಿಕೊಂಡೇ "ಮಿಯಾವ್–ಮಿಯಾವ್" ಎಂದು ಮನೆಯಲ್ಲೇ ತಿರುಗಾಡತೊಡಗಿತು. ಕಣ್ಣು ಬೇರೆ ಕಾಣದ ಆ ಬೆಕ್ಕು ಮಗುವಾಗಿದ್ದ ಸುಮಿತ್ರಳ ಮೇಲೆ ಬಂದುಬಿಟ್ಟಿತ್ತು. ಅವಳು ಯಾವುದೋ ಭಯಂಕರ ಪ್ರಾಣಿಗೆ ಆಹುತಿಯಾದಂತೆ ಕರುಚಿ ಪ್ರಜ್ಞೆ ತಪ್ಪಿದ್ದಳು. ಆ ಘಟನೆ ಎಳೆಯ ವಯಸ್ಸಿನ ಮೇಲೆ ಬಹಳ ಪರಿಣಾಮ ಬೀರಿತ್ತು. ಅಂದಿನಿಂದಲೂ ಬೆಕ್ಕು ನಿರಪಾಯ ಪ್ರಾಣಿಯೆಂದು ತಿಳಿದಿದ್ರೂ ಸುಮಿತ್ರೆಗೆ ಒಂದು ವಿಧವಾದ ಗಾಬರಿ.

ಇದನ್ನೆಲ್ಲಾ ನೆನಸಿಕೊಳ್ಳುತ್ತಾ ಬೆಕ್ಕುಗಳನ್ನು ಓಡಿಸಲು ಹೋದ. ಇವನು ಹೋಗುವವರೆಗೆ ಕಾಯದೆ, ಆ ಬೆಕ್ಕುಗಳು ನೆರೆಮನೆಯವರನ್ನು ಎಬ್ಬಿಸಲು ಆಚೆಯ ಬೀದಿಗೆ ಓಡಿದ್ದುವು. ಮತ್ತೆ ಬಂದು ಕುಳಿತ–ಊಹೂಂ –ಆ ಕುರ್ಚಿಯೂ ಬೇಕಾಗಲಿಲ್ಲ. ಗಂಟೆ ನಾಲಕ್ಕಾಯಿತು. "ಗೆದ್ದೆ ಭಗವಂತಾ ! ಬೆಳಗಾಯಿತು" ಎಂದುಕೊಂಡ. ಆದರೆ ಮನಸ್ಸಿನ ಆಂದೋಳನಕ್ಕೆ, ಬೆಳಗಾದರೇನು ? ರಾತ್ರಿಯಾದರೇನು ?

ದಿನಕರ್ಮಗಳಲ್ಲಿ ತೊಡಗಿದರೆ-ಸರಿಹೋಗಬಹುದು ಎಂದು ಬಚ್ಚಲು ಮನೆಯ ಒಲೆ ಹೊತ್ತಿಸಿ ನೀರು ಕಾಯುವವರೆಗೆ ಒಲೆಯಮುಂದೆಯೇಕುಳಿತ. ಅಗ್ನಿದೇವನು ಭಗಭಗನೆ ತನ್ನ ಜ್ವಾಲೆಗೆ ಸಿಕ್ಕಿದ್ದನ್ನೆಲ್ಲಾ ಧ್ವಂಸಮಾಡುತ್ತಾ

ಉರಿಯುತ್ತಿದ್ದ. ಬಿಟ್ಟ ಕಣ್ಣು ಬಿಟ್ಟಂತೆ ನೋಡುತ್ತಿದ್ದ ಶ್ಯಾಮು. ಮತ್ತೆ ಬಂದಳು ಸರಳಾ ಅಗ್ನಿಯ ಮಧ್ಯೆಯಲ್ಲಿ "ಸೀಮೆ ಎಣ್ಣೆ ಹುಯ್ದುಕೊಂಡು ಸುಟ್ಟುಕೊಳ್ಳಬೇಕೆಂದಿದ್ದೆ" ಎಂದಳಂತೆ ಅವಳು. ಅಷ್ಟು ಬೇಸರವಾಗಿತ್ತೆ ಅವಳಿಗೆ ಬಾಳು, ಒಬ್ಬ ಅಯೋಗ್ಯ ಅವಳನ್ನು ನಿರಾಕರಿಸಿದ ಮಾತ್ರಕ್ಕೆ !

ಹೂಂ ! ಅಗ್ನಿದೇವ ನಿನಗೇನು? ಪವಿತ್ರವಾದರೇನು? ಅಪವಿತ್ರವಾದ ರೇನು ? ಒಂದೇ. ಇಷ್ಟದಿಂದ ದಹಿಸಿಬಿಡ್ತೀ ನೀನು. ನೀನು ನಿಷ್ಕರುಣಿ. ಎಷ್ಟು ನಿಷ್ಕಳಂಕ ಜೀವಿಗಳು ಕ್ಷಣಿಕ ಭಾವೋದ್ವೇಗದಲ್ಲಿ ನಿನಗೆ ಆಹುತಿ ಯಾಗಲು ಬಂದರೆ ಸ್ವಲ್ಪವಾದರೂ ಕರುಣೆಯಿಲ್ಲದೆ ಸುಟ್ಟುಬಿಡುವೆಯಲ್ಲವೆ ನೀನು ? ಎಂದು ಮನಸ್ಸಿನಲ್ಲೇ ಅಗ್ನಿದೇವನ ಸ್ಮರಣೆಮಾಡತೊಡಗಿದ. ಆದರೂ ಅವನಿಗೆ ಕಾಣುತ್ತಿದ್ದುದು ಮಾತ್ರ ಸರಳೆ, ಜ್ವಾಲೆಗಳ ಮಧ್ಯದಲ್ಲಿ. ಇವನ ಮಾತಿನಿಂದ ಸಿಟ್ಟುಗೊಂಡ ಅನಲನು, ಸರಳೆಯ ಮೇಲೆ ಕರುಣೆ ತೋರಿಸಲೋಸುಗ ತಣ್ಣಗಾದನೋ ಎನ್ನುವಂತೆ ಒಲೆ ಆರಿಹೋಯಿತು. ಶ್ಯಾಮುವಿಗೆ ತಿಳಿಯಲೇ ಇಲ್ಲ, ಕುಳಿತೇ ಇದ್ದ ಒಲೆಯ ಮುಂದೆ.

ಹಿಂದಿನ ಮನೆಯಾಕೆಯ "ಏಳು ನಾರಾಯಣ" ಹಾಡು ಎಬ್ಬಿಸಿತು ಶ್ಯಾಮುವನ್ನು. ಅಂದರೆ ಐದುವರೆಯಲ್ಲವೆ ? ಕೋಳಿ ಕೂಗಬೇಕಿಲ್ಲ. ಗಡಿ ಯಾರ ಅಲಾರಂ ಹೊಡೆಯಬೇಕಿಲ್ಲ. ಆಕೆ ಮಾತ್ರ ಸರಿಯಾಗಿ ಐದೂವರೆಗೆ ಎದ್ದು ಮನೆಯ ಮುಂದೆ. ತುಲಸೀ ಕಟ್ಟೆಗೆ ನೀರು ಚೆಲ್ಲಿ, ರಂಗವಲ್ಲಿ ಹಾಕುತ್ತಾ "ಏಳು ನಾರಾಯಣ" ಹಾಡುತ್ತಿದ್ದರು. ನಾರಾಯಣ ಏಳುತ್ತಿದ್ದನೋ, ಇಲ್ಲವೋ ತಿಳಿಯದು. ಅವರ ಮನೆಯಲ್ಲಿ ಯಾರೂ ನಾರಾಯಣ ಬೇರೆ ಇರಲಿಲ್ಲ. ಆದರೆ ಆ ಹಾಡಿನ ತಾಳಕ್ಕೆ ಎಂಬಂತೆ ಏಳುತ್ತಿದ್ದವನು ಶ್ಯಾಮ ಸುಂದರ. ಎದ್ದರೂ ಹಾಸಿಗೆಯಲ್ಲೇ ಉರುಳುತ್ತಾ ಸುಮಿತ್ರೆಯನ್ನು ಎಬ್ಬಿಸುತ್ತಿದ್ದ.

ಈ ದಿನ ಸುಮಿತ್ರೆಯನ್ನು ಎಬ್ಬಿಸಲಿಲ್ಲ ಅವನು. "ಮಲಗಲಿ ಪಾಪ" ಎಂದು ತಾನೇ ಕಾಫಿ ಮಾಡಲು ಹೋದನು. ಕಾಫಿ ಮಾಡಿಮುಗಿಸಿ ಬಂದರೂ ಸುಮಿತ್ರ ಏಳಲಿಲ್ಲ. ಅವಳ ಜೊತೆಯಲ್ಲೇ ಕುಡಿಯೋಣವೆಂದುಕೊಂಡ ಶ್ಯಾಮುವಿಗೆ ತಡೆಯಲಾಗಲಿಲ್ಲ, ತಲೆ ವಿಪರೀತವಾಗಿ ಸಿಡಿಯುತ್ತಿತ್ತು. ರಾತ್ರಿ ನಿದ್ದೆಯಿಲ್ಲದ್ದರಿಂದ ಕಣ್ಣೆಲ್ಲಾ ಕೆಂಪಾಗಿ ಉರಿಯುತ್ತಿತ್ತು. ಸದ್ದು ಮಾಡದೆ

ಕೋಣೆಯೊಳಕ್ಕೆ ಪ್ರವೇಶಿಸಿ, ಎರಡು ಅನಾಸಿನ್ ಮಾತ್ರೆಗಳನ್ನು ತಂದು, ನುಂಗಿ ಕಾಫಿ ಕುಡಿದು, ವರಾಂಡದ ಕುರ್ಚಿಯಲ್ಲಿ ಕುಳಿತು, ಪ್ರಾತಃಕಾಲದ ಪವನನಿಗೆ ಮೈಯೊಡ್ಡಿದ. ಆದರೆ ಬಹಳ ಹೊತ್ತು ಕುಳಿತುಕೊಳ್ಳಲಾಗಲಿಲ್ಲ.

ಹಾಲಿನಮ್ಮ ಬಂದು "ಹಾಲು ಊ ಊ" ಎಂದು ಎಬ್ಬಿಸಿಬಿಟ್ಟಳು ಅವನನ್ನು ಭಾವಸಮಾಧಿಯಿಂದ. ಅಯ್ಯಾವರು ಹಾಲು ತೆಗೆದುಕೊಳ್ಳಲು ಬಂದದ್ದು ನೋಡಿ ಕೇಳಿಯೂ ಬಿಟ್ಟಳು–"ಅಮ್ಮಾವ್ರು ಇಲ್ವಾ ಸೋಮಿ ?" ಸುಮಿತ್ರೆ ಅಷ್ಟು ಬೆಳಗಿನ ಕೋಳಿ.

"ಇದ್ದಾಳಮ್ಮ. ಸ್ವಲ್ಪ ತಲೆನೋವು. ಇನ್ನೂ ಎದ್ದಿಲ್ಲ" ಎಂದು ಹಾಲು ಹಾಕಿಸಿಕೊಂಡು ಒಳಗೆ ಹೋದ.

"ಎಷ್ಟೊಳ್ಳೇ ಗಂಡ ಈಯಪ್ಪ, ಸ್ವಲ್ಪ ತಲೆನೋವಾದ್ರೆ, ಯೆಂಡ್ತೀನ ಎಬ್ಬುಸ್ದೆ. ತಾನೇ ಕೆಲ್ಸಕ್ಕೆ ನಿಂತವ್ನಲ್ಲಾ. ನನ್ನವನವ್ನಲ್ಲಾ. ಪಿರಾಣ ಓಯ್ತಾ ಇದೆ ಅಂದ್ರೂ ನನ್ನೇ ಎಬ್ಸಿ ಸಾಯ್ತಾನೆ" ಎಂದು ಶ್ಯಾಮುವನ್ನು ಹೊಗಳ್ತಾ ಹೊರಟುಹೋದಳು ಹಾಲಮ್ಮ.

ಶ್ಯಾಮು ಹಾಲನ್ನು ಕಾಸಿಯಾಯಿತು. ಏನು ಮಾಡಲೂ ತೋಚದೆ ಶತಪಥ ತಿರುಗಲಾರಂಭಿಸಿದ. ಅದು ತಾನೇ ಎಷ್ಟು ಹೊತ್ತು ? ಮನಸ್ಸು ಸ್ಥಿಮಿತದಲ್ಲಿದ್ದರೆ, ಯಾವ ಕೆಲಸ ಮಾಡಿದರೂ ಸ್ಥಿಮಿತವಾಗಿರುತ್ತದೆ. ಅದಕ್ಕೇ ಧಕ್ಕೆ ಬಂದಿರೋವಾಗ? ಆರೂವರೆ ಗಂಟೆಯಾಯಿತು. ರೇಡಿಯೋದ ಕಿವಿ ಹಿಂಡಿದ. ಮಧುರವಾಗಿ ಬಂತು "ಬಾಗಿಲನ್ನು ತೆರೆದು. ಸೇವೆಯನು ಕೊಡೋ ಹರಿಯೇ" ತುಂಬು ಕಂಠದಿಂದ ಪಿ.ಬಿ.ಶ್ರೀನಿವಾಸ್‌ರವರು "ಕನಕದಾಸ" ಕನ್ನಡ ಚಿತ್ರಕ್ಕಾಗಿ ಹಾಡಿದ ಹಾಡು.

ರೇಡಿಯೋ ಮುಂದೆ ಅದೆಷ್ಟೊ ಹೊತ್ತು ಕುಳಿತಿದ್ದ. ಅವನ ಗಮನ ಎಲ್ಲಿತ್ತು ಎಂದು ಹೇಳುವುದೇ ಕಷ್ಟವಾಗಿತ್ತು. ಸುಮಿತ್ರೆ ಮಾತ್ರ ರಾತ್ರಿ ಹೇಗೆ ಮಲಗಿದ್ದಳೋ, ಹಾಗೆಯೇ ಅಲುಗಾಡದೆ ನಿದ್ರಿಸುತ್ತಿದ್ದಳು. ಶ್ಯಾಮು ಇಂಗ್ಲೀಷು ಸುದ್ದಿ ಕೇಳಿ ಆದರೂ. ಸುಮಿತ್ರೆ ಮಾತ್ರ ಎಚ್ಚರಗೊಳ್ಳಲಿಲ್ಲ. ಶ್ಯಾಮು ರೇಡಿಯೋ ಆರಿಸಿ, ಸುಮಿತ್ರೆಯ ಬಳಿ ಬಂದು ಕುರ್ಚಿ ಎಳೆದು ಕೊಂಡು ಕುಳಿತುಬಿಟ್ಟ.

ಸ್ವಲ್ಪ ಹೊತ್ತಿಗೆ ಸುಮಿತ್ರೆ ಮೆಲ್ಲಗೆ ಕಣ್ಣು ಬಿಟ್ಟಳು. ತನ್ನ ಬಲಗಡೆಗೆ

ಕುಳಿತಿದ್ದ ಶ್ಯಾಮುವನ್ನು ನೋಡುತ್ತಾ ಮೆಲುನಗೆ ನಕ್ಕು ಮೈ ಮುರಿದಳು. ಅವಳ ನಗುಮುಖ ನೋಡಿ ಶ್ಯಾಮುವಿನ ಹೃದಯವೂ ಉಬ್ಬಿತು.

"ಎದ್ದ ಕೂಡಲೇ ದೇವರ ಕಡೆ ನೋಡ್ಬೇಕು ಸುಮಿತ್ರಾ, ನನ್ನ ಮೂತೀನಲ್ಲಾ."

"ಸತಿಗೆ ಪತಿಯೇ ದೈವ ಆದುದರಿಂದ ನಾನೀ ಮೂತಿಯನ್ನೇ ನೋಡ ಬಯಸುತ್ತೇನೆ" ಎಂದು ವ್ಯಾಕರಣ ಬದ್ಧವಾಗಿ ನುಡಿದು ಎದ್ದು ಕುಳಿತಳು. ಕೆದರಿದ ಕೂದಲನ್ನು ಒಂದಕ್ಕೆ ಸರಿಪಡಿಸಿಕೊಳ್ಳಲು ಎರಡು ಕೈಗಳನ್ನೂ ಮೇಲೆತ್ತಿದ್ದ ಅವಳು ಶ್ಯಾಮುವಿನ ಕಣ್ಣಿಗೆ ವೈಯಾರವಾಗಿ ಕಂಡಳು. ಮಂಚದ ಮೇಲಕ್ಕೆ ಸರಿದು, ಮೃದುವಾಗಿ ಅವಳನ್ನು ತನ್ನ ಕೈಗಳೊಳಕ್ಕೆ ತೆಗೆದುಕೊಂಡು–

"ರಾಣಿಯವರಿಗೆ ಸರಿಯಾಗಿ ನಿದ್ದೆ ಬಂದಿತೆ ?" ಎಂದನು.

ಅವಳು ಹಾಗೆಯೇ ಅವನಿಗೆ ಒರಗಿ ಒಂದು ಬಾರಿ ಆಕಳಿಸಿ ಕಣ್ಣು ಮುಚ್ಚಿಕೊಂಡಳು.

"ಏನಿದು ಸುಮಿತ್ರಾ, ಮತ್ತೆ ನಿದ್ದೆ ಮಾಡ್ತಿಯೇನು ?" ಮಾತಿಲ್ಲ ಸುಮಿತ್ರೆಯಿಂದ.

"ಎತ್ತಿಕೊಂಡು ಹೋಗಿ, ಬಚ್ಚಲು ಮನೇಲಿ ಕೂರಿಸಿ ಒಂದು ಕೊಡ ನೀರು ತಲೆಯ ಮೇಲೆ ಸುರೀಲಾ ?"

ತಟ್ಟನೆ ಎದ್ದು ಕುಳಿತು "ಹಾಗೇ ಮಾಡಿ" ಎಂದಳು. ಅವನು ಹಾಗೆ ಮಾಡಿದರೂ ಮಾಡುವವನೆ, ಆದರೆ ಇಂದು ಅವನಿಗೆ ಚೆಲ್ಲಾಟಕ್ಕೆ, ಹಾಸ್ಯಕ್ಕೆ ಅಷ್ಟಾಗಿ ಮನಸ್ಸಿರಲಿಲ್ಲ.

"ಏಳು ಸುಮಿತ್ರಾ. ಒಂಭತ್ತೂವರೆ ಆಯಿತು. ನಾನು ಆಫೀಸಿಗೆ ಹೋಗಬೇಕು."

"ಏನು ? ಒಂಭತ್ತೂವರೇನಾ ?" ಎಂದು ಛಂಗನೆ ಮಂಚದಿಂದ ಧುಮುಕಿದಳು. ಗಡಿಯಾರ ನೋಡಿದಾಗ ಇನ್ನೂ ಎಂಟೂವರೆಯಷ್ಟೆ.

"ಸುಳ್ಳು ಹೇಳ್ತೀರಾ ?" ಎಂದು ತನ್ನ ಬೆಚ್ಚಗಿನ ಹಸ್ತದಿಂದ ಅವನ ಕೆನ್ನೆಗೆ ಹೊಡೆದು ಮುಖ ತೊಳೆಯಲು ಹೋದಳು.

ಅವಳು ಬರುವ ವೇಳೆಗೆ, ಕಾಫಿ ಸಿದ್ಧಪಡಿಸಿ ತಂದ ಶ್ಯಾಮು, ಅವಳಿಗೆ

ಕೊರಳು ಉಬ್ಬಿ ಬಂತು ನನ್ನಶ್ಯಾಮುತನಗಾಗಿ ಎಷ್ಟು ಮಾಡುತ್ತಾನೆಎಂದು.

"ಏನಿದು ಶ್ಯಾಮು ? ನೀವು ನನ್ನ ಸೇವೆ ಮಾಡ್ಕೊಂಡು...."ಸ್ವಲ್ಪ ನಾಚಿಕೆಯಿಂದ ನುಡಿದಳು.

"ಮಾಡಬಾರ್ದ್ದಾ ಸುಮಿತ್ರಾ ? ಪ್ರತಿದಿನಾ ನೀನೆಷ್ಟು ಮಾಡ್ತಿ. ಒಂದಿನ ನಾನು ಮಾಡಬಾರ್ದ್ದಾ ?"

ಮೂಕಳಾದಳು ಸುಮಿತ್ರಾ ಕೃತಜ್ಞತೆಯಿಂದ."ಹೋಗಿ ಮಕ್ಕಳನ್ನು ಕರ್ಕೊಂಡು ಬರ್ತೀರಾ ?"

"ಆಫೀಸಿನಿಂದ ಬರ್ತಾ ಸಾಯಂಕಾಲ ಕರಕೊಂಡ್ಬರ್ತೀನಿ. ಹಾಗೇಂತ ಭಾವಂಗೆ ಫೋನ್ ಮಾಡ್ಬಿಡ್ತೀನಿ" ಎಂದ.

ಸುಮಿತ್ರೆ ನನ್ನ ಸಾಮ್ರಾಜ್ಯ ಹೊಕ್ಕಳು, ಶ್ಯಾಮು ಆಲಸ್ಯವಾಗಿ ತನ್ನ ಪೆಟ್ಟಿಗೆ, ಬೀರು ಎಲ್ಲಾ ಹರಡಿಕೊಂಡು ಏನೋ ಕೆದಕುತ್ತಾ, ಹುಡುಕುತ್ತಾ, ಜೋಡಿಸುತ್ತಾ ಕುಳಿತುಬಿಟ್ಟ. ಸುಮಿತ್ರೆ ಅಡಿಗೆ ಕೆಲಸ ಮುಗಿಸಿ. ಮನೆ ಚೊಕ್ಕಟ ಮಾಡಲು ಬಂದಳು. ಬೆಳಗ್ಗೆ ಮೊದಲು ಮಾಡಬೇಕಾಗಿದ್ದ ಕೆಲಸ ಅದು. ತನ್ನ ಅತಿ ನಿದ್ದೆಯಿಂದ ಈ ದಿನ ತಡವಾಗಿ ಹೋಗಿತ್ತು.

"ನಿಮ್ಮ ಅಂಗಡಿ ಮುಚ್ತೀರೋ ಇಲ್ವೊ? ನಾನು ಕಸಾ ಬಳೀಬೇಕು."

"ಒಂದೇ ಒಂದು ಮಿನಿಟ್ ನಿಂತ್ಕೋ ಸುಮಿ. ಇನ್ನೇನುಆಗೋಯ್ತು" ಎನ್ನುತ್ತಾ ಎಲ್ಲವನ್ನೂ ಓರಣವಾಗಿ ತೆಗೆದಿಟ್ಟು ಅವಳಿಗೆ ಜಾಗ ಮಾಡಿಕೊಟ್ಟ.

ಸುಮಿತ್ರೆ ಮನೆ ಚೊಕ್ಕಟ ಮಾಡುವ ವೇಳೆಗೆ, ಶ್ಯಾಮು ತನ್ನ ದೇಹ ಚೊಕ್ಕಟ ಮಾಡಿ ಬಂದ. ಆದರೂ ಆಫೀಸಿಗೆ ಹೋಗುವಸೂಚನೆ ತೋರಲಿಲ್ಲ "ಆಫೀಸಿಗೆ ಹೋಗೋದಿಲ್ವಾ ?"

"ಇಲ್ಲ."

"ಯಾಕೆ ? ಈವತ್ತು ನಿಮ್ಮ ಹೆಂಡ್ತೀದು ಹುಟ್ಟಿದ ಹಬ್ಬಾನಾ ?"

ಅವನಿಗೆ ನಗು ಬಂತು. ಕಹಿನಗೆ ಅದಾಗಿತ್ತು. ಅವನು ಮಾತನಾಡಲಿಲ್ಲ. ಹತ್ತಿರ ಬಂದು ಕೇಳಿದಳು ಸುಮಿತ್ರಾ—"ಯಾಕೆ ಶ್ಯಾಮು, ಮೈಗೆಸರಿಯಾಗಿದೆ ತಾನೆ ?" ಮನಕ್ಕೆ ಸರಿಯಿಲ್ಲ ಎಂದು ಹೇಗೆ ಹೇಳಿಯಾನು ? "ಸ್ವಲ್ಪ ಕಾಫಿ ತರ್ತೀನಿ ತಾಳಿ. ಕುಡಿದ್ರೆ ಎಲ್ಲಾ ಸರಿ ಹೋಗುತ್ತೆ" ಎಂದು ಒಳಗೆ ಹೋದಳು.

ಶ್ಯಾಮು ಮಂಚದ ಮೇಲೆ ಅಂಗತ್ತಲಾಗಿ ಮಲಗಿ. ಕೈಗಳನ್ನು ತಲೆ

ಯಡಿಯಲ್ಲಿ ಸಿಗಿಸಿ. ಛಾವಣಿಯ ಕಡೆಗೆ ದೃಷ್ಟಿಯಿಟ್ಟು ಮಲಗಿದ್ದ, ಸುಮಿತ್ರ ಬರುವ ವೇಳೆಗೆ. ಸುಮಿತ್ರ ಬಂದುದನ್ನು ಅವನು ಗಮನಿಸಲಿಲ್ಲ. ಸ್ವಲ್ಪ ಹೊತ್ತು ತಡೆದು ಸುಮಿತ್ರಾ ಕಾಫಿಯನ್ನು ಮೇಜಿನ ಮೇಲಿಟ್ಟು ಅವನ ಪಕ್ಕದಲ್ಲಿ ಕುಳಿತು ಅವನು ನೋಡುತ್ತಿದ್ದ ಕಡೆಗೇ ನೋಡಿ "ಛಾವಣಿಯಲ್ಲಿ ಏನಿದೆ ? ಎಂದಳು. 'ಸರಳೆಯ ಚಿತ್ರ' ಎಂದು ಅವನು ಅನ್ನಬಹುದಿತ್ತು. ಆದರೆ ಅವನ ತುಟಿ ಬಿಗಿದುಕೊಂಡಿತ್ತು.

"ಇದ್ದಕ್ಕಿದ್ದಂತೆ ಯಾಕೋ ಒಂತರಾ ಆಗಿಬಿಟ್ರಲ್ಲಾ ನೀವು? ಏನಾಗ್ತಿದೆ ಶ್ಯಾಮು ?" ಪ್ರೀತಿ, ದೈನ್ಯತೆಗಳನ್ನು ಜೋಡಿಸಿ ಕೇಳಿದಳು.

"ರಾತ್ರಿ ನಿದ್ದೆ ಬರಲಿಲ್ಲ. ತಲೆನೋವು ಸುಮಿತ್ರಾ" ತಲೆಮುಟ್ಟಿ ನೋಡಲು ಕೈ ಚಾಚಿದಳು, ಕೈ ಅವನ ಎದೆಯ ಮೇಲೆ ಹಾಸಿ ತಲೆಯ ಕಡೆ ಹೋಯಿತು. ಅವಳ ಕೈಗೆ ತಿಳಿಯುವಂತೆಯೇ ಅವನ ಎದೆ ಜೋರಾಗಿ ಹೊಡೆದುಕೊಳ್ಳುತ್ತಿತ್ತು.

"ತಲೆ ಸುಡ್ತಾ ಇದೆ. ಜ್ವರಾನೂ ಬಂದಿದ್ಯೋ ಏನೋ. ಎದೆ ಎಷ್ಟು ಜೋರಾಗಿ ಹೊಡ್ಕೊತಾ ಇದೆ. ಡಾಕ್ಟ್ರ ಹತ್ರನಾದ್ರು ಹೋಗೋಣ ಏಳಿ."

"ಬೇಡಾ ಸುಮಿತ್ರಾ. ತಲೆನೋವಿಗೆ ಹಾಗಿದೆ. ಆಗಲೇ ಅನಾಸಿನ್ ತೊಗೊಂಡೆ, ಸರಿ ಹೋಗುತ್ತೆ."

"ಕಾಫಿ ಕುಡೀರಿ." ಅವಳ ಆಗ್ರಹಕ್ಕೆ ಕುಡಿದ. ಸ್ವಲ್ಪ ಸಮಯದ ನಂತರ—"ಸುಮಿತ್ರಾ, ನಿನಗೆ ಸರಳಾ ಅಂದ್ರೆ ತುಂಬಾ ಇಷ್ಟಾನಾ ?"

ಈ ಪ್ರಶ್ನೆಗೆ ಚಕಿತಳಾದಳು ಸುಮಿತ್ರಾ. ಕತೆರಾತ್ರಿಯೇಮುಗಿದಿದ್ದರೂ ಸರಳೆಯ ಪ್ರಭಾವ ಗಂಡನ ಮೇಲೆ ಎಷ್ಟು ಬಿದ್ದಿದೆ ಎಂದು ಆಶ್ಚರ್ಯವೂ ಆಯಿತು.

"ಹೌದು ಶ್ಯಾಮು. ತುಂಬಾ ಅಂದ್ರೆ ತುಂಬಾ. ಯಾಕೋ ಗೊತ್ತಿಲ್ಲ ನನಗೇನೇ.

"ವ್ಯಕ್ತಿ ಆರಾಧನೆ ತಪ್ಪು ಅಂತ ಅವಳೇ ಹೇಳ್ತಾಳೇಂತಿ. ಆದ್ರೂ ನೀನಿಷ್ಟು ಇಷ್ಟಪಟ್ರೆ ಸುಮ್ನೇನೇ ಇರ್ತಾಳಾ ?"

"ಬಯ್ತಾನೇ ಇರ್ತಾಳೆ. ಆದ್ರೂ ನಂಗೇನೋ ಅವಳು ಸಾಧಾರಣ ಸ್ತ್ರೀಗಿಂತ ಒಂದು ಹೆಜ್ಜೆ ಮೇಲಿದ್ದಾಳೆ. ಅನ್ಸುತ್ತೆ."

"ಅಷ್ಟೊಂದು ಹಚ್ಕೋಬಾರ್ದು. ನಾಳೆ ಅವಳಲ್ಲಿ ನೀನು ಕೆಟ್ಟಗುಣ ಕಂಡ್ರೆ ಬೇಜಾರು ಪಡ್ತೀ."

"ಅವಳಲ್ಲಿ ಕೆಟ್ಟಗುಣಾನೇ ! ಒಂದ್ವೇಳೆ ಕೆಟ್ಟದೇನಾದ್ರೂ ಇದ್ರೂ ನನ್ಕಣ್ಣಿಗೆ ಹಿತವಾಗೇ ಕಾಣಬಹುದು."

"ಅದೇ ಕುರುಡು ಶ್ರದ್ಧೆ ಅನ್ನೋದು. ಈವಾಗ ನನ್ನ ವಿಷಯದಲ್ಲೂ ಅಂತಾ ಕುರುಡುಶ್ರದ್ಧೆ ಇದೆ ಅಲ್ವಾ? ನಿನಗೆ"

"ನನ್ಗೆ ಯಾರ್‍ಯಾರನ್ನು ಕಂಡ್ರೆ ಇಷ್ಟವೋ, ಅವರಲ್ಲಿ ನನ್ಗೆ ತುಂಬಾ ಪ್ರೀತಿ. ಅದನ್ನು ನೀವು ವ್ಯಕ್ತಿ ಆರಾಧನೆ ಅಂತಾನಾದ್ರೂ ಅನ್ನಿ, ಕುರುಡು ಶ್ರದ್ಧೆ ಅಂತಾನಾದ್ರೂ ಅನ್ನಿ.

"ನೀನು ಪ್ರೀತಿಸಿದ್ರೆ ತಪ್ಪಲ್ಲ. ಆದ್ರೆ ಒಂದ್ವೇಳೆ, ಈಗ ನೋಡು ಸುಮಿತ್ರಾ, ನಾನು ಕೆಟ್ಟವನು ಅಂತ ನಿನ್ಗೆ ತಿಳಿಯುತ್ತೆ ಅಂತಿಟ್ಕೋ. ಆಗ಼್ೂ ಹೀಗೇ ನನ್ನ ಪ್ರೀತಿಸ್ತೀಯಾ?"

"ನೀವು ಕೆಟ್ಟವರಾಗಿರೋಕ್ಕೂ ಸಾಧ್ಯವಿಲ್ಲ. ಆಗೋಕ್ಕಂತೂ ಮೊದಲೇ ಸಾಧ್ಯವಿಲ್ಲ."

"ಹಾಗೆ ನಂಬಿ ಹೇಳ್ಬೇಡ, ಒಂದ್ವೇಳೆ ಹಾಗೇ ಅಂತಿಟ್ಕೋ."

"ಆವಾಗ ಅದು ಒಂದು ದುರ್ಬಲತೇ ಅಂತ ನಿಮ್ಮನ್ನು ಇನ್ನೂ ಹೆಚ್ಚು ಪ್ರೀತಿಸ್ತೀನಿ."

ಅವಳ ಕೈಯನ್ನು ತನ್ನ ದೊಡ್ಡ ಕೈಯಲ್ಲಿ ಹಿಡಿದು ಅದುಮುತ್ತಾ—
"ಪ್ರೀತಿಸ್ತೀಯ ನಿಜ. ಆದ್ರೆ ಕ್ಷಮಿಸಲಾರೆ ಅಲ್ವಾ?"

"ಛಿ ! ಏನಿದು ಈವತ್ತು? ಏನೇನೋ ಹುಚ್ಚುಚ್ಚಾಗಿ ಮಾತಾಡ್ತಿದ್ದೀರ?"

"ಏನಿಲ್ಲ ಸುಮಿತ್ರಾ, ನೀನು ನನ್ನನ್ನು ಹೆಚ್ಚು ಪ್ರೀತಿಸಿದಷ್ಟೂ ನನ್ಗೆ ಭಯ, ನೀನೆಲ್ಲಿ ನನ್ನಿಂದ ದೂರ ಆಗ್ಬಿಡ್ತೀಯೋ ಅಂತ. ಏನೇ ಆಗ್ಲಿ ಕಡೇವರ್‍ಗೂ ನನ್ನವಳಾಗಿಯೇ ಉಳೀತೀನೀಂತ ಭಾಷೆ ಕೊಡು ಸುಮಿ."

ನಕ್ಕು ಬಿಟ್ಟಳು ಸುಮಿತ್ರಾ ಮತ್ತೂ ಅಂದಳು—"ನಿಮ್ಮವಳಾಗಿ ಉಳಿಯದೆ, ನಾನೆಲ್ಲಿ ಹೋಗ್ತೀನಿ. ಜೀವನದಲ್ಲಿ ಏನು ಏರುಪೇರು ಬಂದರೂ ಸರಿಪಡಿಸಿಕೊಂಡು ನಿಮ್ಮ ನೆರಳಲ್ಲಿ ನಾನಿರ್ತೀನಿ ಶ್ಯಾಮು. ನನ್ನನ್ನು ನಂಬಿ

ರಾಜ" ಎಂದು ಉದ್ವೇಗದಿಂದ ಹೇಳಿ, ತನ್ನ ಕೈಯನ್ನು ಹಿಡಿದಿದ್ದ ಅವನ ಕೈಯನ್ನು ಕೆನ್ನೆಯ ಮೇಲಿಟ್ಟು ಕೊಂಡಳು.

"ಸುಮಿತ್ರಾ, ಇದನ್ನ ಸ್ವಲ್ಪ ನೋಡು" ಎಂದು ದಿಂಬಿನಡಿಯಿಂದ ಒಂದು ಬಣ್ಣ ಬಣ್ಣದ ಕವರನ್ನು ತೆಗೆದು ಅವಳ ಕೈಗೆ ಕೊಟ್ಟ. ಅದನ್ನು ಕೈಗೆ ತೆಗೆದುಕೊಳ್ಳುತ್ತಾ 'ಏನಿದು' ಎಂಬಂತೆ ನೋಡಿದಳು.

"ಮದುವೆಯಾಗಿ ನೀನು ನನ್ನ ಬಳಿ ಬಂದಾಗ ಇದು ಏನು ಎಂದು ಕೇಳಿದ್ದೆ ನೀನು ನೆನಪಿದ್ಯಾ?"

"ಓಹೋ. ನೆನಪಿಲ್ದೆ ಏನು? ಯಾವುದೋ ಆಫೀಸಿನ ಕಾಗ್ದ ಅಂತ ತೆಗೆದಿಟ್ರಿ. ಈಗ್ಯಾಕೆ ಕೊಟ್ರಿ ಅದನ್ನ?"

"ಈಗ ನೀನು ಆ ಆಫೀಸ್ ವಿಷಯ ತಿಳ್ಕೋಬಹುದೂಂತ."

ಸುಮಿತ್ರೆಗೆ ವಿಚಿತ್ರವೆನಿಸತೊಡಗಿತು. ತನಗೇಕೆ ಆಫೀಸು ವಿಷಯ ? ಅವನಿಗೇನಾದ್ರೂ ದಂಡನೆ? ಛೆ. ಇರಲಾರದು ನಡುಗುವ ಕೈಗಳಿಂದ ಒಳಗಿದ್ದುದನ್ನು ಹೊರ ತೆಗೆದಳು. ಅವಾಕ್ಕಾಗಿ ಕಣ್ಣರಳಿತು. ಉಸಿರು ಬಿಗಿಯಿತು. ಗಾಬರಿಯಿಂದ ನೋಡಿದಳು. "ಸರಳಕ್ಕನ ಫೋಟೋ ! ! ನಿಮ್ಮ ಬಳಿ ಹೇಗೆ ಬಂತು ಶ್ಯಾಮು?"

"ಗೊತ್ತಾಗಲಿಲ್ವಾ ಸುಮಿತ್ರಾ?"

"ಅಂದರೆ....ನೀ....ವು?" ಸಂಶಯ, ಭಯ, ದುಃಖ ಬೆರೆತ ದನಿಯಲ್ಲಿ ಕೇಳಿದಳು.

"ಹೌದು, ನಾನೇ ಆ ನಿರ್ಭಾಗ್ಯ ರಾಜ, ಸರಳೆಯ ರಾಜ" ಎಂದು ಮುಖ ಪಕ್ಕಕ್ಕೆ ತಿರುಗಿಸಿದ.

"ಬೇಡಿ ಶ್ಯಾಮು. ಅಂತಹ ಮಾತು ಹೇಳ್ಬೇಡಿ. ಇಲ್ಲಾನ್ನಿ ನೀವು ರಾಜ ಅಲ್ಲಾನ್ನಿ. ನೀವು ರಾಜ ಅಲ್ಲಾನ್ನಿ. ನೀವಾಡಿರೋದೆಲ್ಲಾ ಸುಳ್ಳು ಅನ್ನಿ ಶ್ಯಾಮು." ಎಂದು ಗೋಗರೆಯುತ್ತಾ ಅವನ ಎದೆಯ ಮೇಲೆ ತಲೆಯಿಟ್ಟು ಅಳತೊಡಗಿದಳು.

"ಅಳಬೇಡ ಸುಮಿತ್ರಾ. ವಾಸ್ತವ ಸತ್ಯಾನ್ನ ಅಲ್ಲಾ ಅನ್ನೋಕ್ಕಾಗುತ್ತಾ? ಈವತ್ತಲ್ದೆ ಇದ್ರೆ ನಾಳೆ ನಿನ್ಗೆ ತಿಳೀಲೇ ಬೇಕಿತ್ತು. ಪ್ರತಿಸಲ ನಿನ್ಗೆ ಹೇಳಬೇಕೂಂತ ಅಂದ್ಕೊಂಡಾಗ್ಲೂ ಸಂತೋಷದಿಂದ ತುಂಬಿ ತುಳುಕ್ತಿದ್ದ

ನಿನ್ನ ಮನಸ್ಸನ್ನು ನೋಯ್ಸಿ ನನ್ನ ಸಂತೋಷಕ್ಕೊ ಹುಳಿ ಹಿಂಡ್ಕೊಳ್ಳೋ ಧೈರ್ಯ ಬರಲಿಲ್ಲ ನನ್ಗೆ. ಸರಳಾ ನಿನ್ಗೆ ಗೆಳತಿಯಾದ ದಿನದಿಂದ ಹೀಗೆ ನಡೀಬಹುದ್ದೂಂತ ನಾನು ಎದುರು ನೋಡ್ತಾನೇ ಇದ್ದೆ."

"ಇಲ್ಲ ಶ್ಯಾಮು, ನೀವು ಆ ರಾಜನಲ್ಲ. ನನ್ನ ಮನಸ್ಸು ಒಪ್ಪೋದಿಲ್ಲ. ನೀವು ಶ್ಯಾಮಸುಂದರ, ಅವನು ರಾಜ, ಅದು ಬೇರೆ ಯಾರೋ" ಏನೋ ಸುಳ್ಳು ಸಮಾಧಾನ ಅವಳಿಗೆ.

"ಆದರೊಳಗಿರೋ ಅವಳ ಕಡೆಯ ಕಾಗ್ದನಾದ್ರೂ ಓದು ಸುಮಿತ್ರಾ. ಅವಳೇ ನನ್ನ ಸರಳಾ. ಅವಳಿಲ್ಲದೆ ಇನ್ಯಾರೂ ಇಷ್ಟು ಉತ್ತಮ ಗುಣದವರಿರಲಾರರು ಅಂತ ನನ್ನ ಅಂತರಾತ್ಮ ಆಗಲೇ ಹೇಳಿತು. ಅವಳಿಗೆ ನೀನು ನನ್ನ ಹೆಂಡ್ತಿ ಅಂತ ತಿಳೀದು. ತಿಳಿದಿದ್ರೆ ನಿನ್ಗೆ ತನ್ನ ಕತೆ ಹೇಳ್ತಿರಲಿಲ್ಲ. ನಿನ್ನನ್ನು ಪ್ರೀತಿಸ್ತಾನೂ ಇರಲಿಲ್ಲ."

"ಹಾಗೆ ಮಾತ್ರ ಹೇಳ್ಬೇಡಿ. ಅವಳು ರಾಜನ ಹೆಂಡ್ತಿ ಮಕ್ಕಳನ್ನು ನೋಡೋಕ್ಕೆ ಬಯಸ್ತಾಳೆ."

"ಹೌದು ಬಯಸ್ತಾಳೆ. ಆದರೆ ರಾಜನಿಗೆ ಮಾತ್ರ ಸಿಕ್ಕಲು ನಿರಾಕರಿಸ್ತಾಳೆ" ಎಂದು ನಿಟ್ಟುಸಿರುಬಿಟ್ಟ.

"ನನ್ನ ಹೆಸರು ಶ್ಯಾಮಸುಂದರ ಆಗಿದ್ರೂ, ಕಡೆಯ ಮಗ ಅನ್ನೋ ಮಮತೇಲಿ ನನ್ನನ್ನು ಮನೇಲಿ 'ರಾಜ' ಅಂತಿದ್ರು. ಅವರ ಮನೇಗೂ ನಾನು ಆ ಹೆಸರಿನಿಂದಾನೇ ಪರಿಚಯ. ಸರಳಾ ನನ್ನನ್ನು 'ರಾಜಾ' ಅನ್ನೋ ರೀತೀಲ್ಲೇ ಒಂದು ಮೋಹ ಅಡಗಿತ್ತು. ಅವಳು ನನ್ನಿಂದ ದೂರ ಸರಿದ ದಿನಾನೇ ನನ್ನ 'ರಾಜ' ಅನ್ನೋ ಹೆಸರನ್ನೂ ಕೊಂದ್ಬಿಟ್ಟೆ. ಆಮೇಲೆ ಮನೇಲ್ಲೂ ನನ್ನನ್ನು 'ರಾಜ' ಅಂತ ಕರ್ಯೋಕ್ಕೆ ಅವಕಾಶ ಕೊಡಲಿಲ್ಲ. 'ಕೂಡದ' ಅಂತ ಹಠಮಾಡ್ದೆ. ನನ್ನ ಹೆಸ್ರೂ ನನ್ಗೆ ಬೇಸರ ತರ್‍ತಿತ್ತು. ಹೆಸ್ರ ಮೊಟಕು ಮಾಡಿ ಎಸ್. ಎಸ್. ಸುಂದರ್ ಅಂತ ಮಾಡ್ಕೊಂಡೆ ಈಗಾದ್ರೂ ನಂಬ್ತೀಯಾ ಸುಮಿತ್ರಾ ?" ಎಂದು ದೀನನಾಗಿ ಕೇಳಿದ.

"ಅವಳು ನಿಮ್ಮಿಂದ ದೂರಸರಿದಳು ಅಂತಯಾಕೆ ಹೇಳ್ತೀರಿ. ಅವಳನ್ನು ಆಟದ ವಸ್ತು ತರಹ ಉಪಯೋಗ್ಸಿ, ಅವಳ ಪ್ರೀತಿಯೊಂದಿಗೆ ದೇಹದೊಂದಿಗೆ

ಆಟ ಆಡಿ, ಅವಳನ್ನು ದೂರ ಒದ್ದು, ನೀವು ಓಡಿ ಹೋದ್ರಿ. ಯಾಕೆ ಅಷ್ಟು ಕಟುಕರಾಗಿ ವರ್ತ್ಸಿದ್ರಿ ಶ್ಯಾಮು ?" ನಿಷ್ಠುರವಾಗಿ ಪ್ರಶ್ನಿಸಿದಳು.

"ಬಯ್ಯಬೇಡ ಸುಮಿತ್ರಾ. ನಿಜ, ನಾನು ಸ್ವಲ್ಪ ಅಂಧನಾಗಿದ್ದೆ. ಸರಳಾ ಅಷ್ಟು ಸ್ವಾಭಿಮಾನಿ ಅಂತ ನಾನು ತಿಳಕೊಳ್ಲಿ ಹೋದೆ ಆತ್ಮ ಗೌರವಕ್ಕೆ ಅತೀ ಬೆಲೆ ಕೊಡುವ ಹೆಣ್ಣು ಅವಳು ಅನ್ನೋ ವಿಷಯಾ ಮರೆತುಬಿಟ್ಟೆ."

"ಮರೆತ್ರೋ ? ಇಲ್ಲಾ, ಹೇಗಿದ್ರೂ ಅವಳು ನನ್ನವಳು. ಅವಳನ್ನು ಹೇಗೆ ನಡೆಸಿಕೊಂಡ್ರೂ ಸರಿ ಅಂತ ತಾತ್ಸಾರ ಮಾಡಿದ್ರೊ ? ಅಂತೂ ನಿಮ್ಮ ತೋರಿಕೆ ಪ್ರೇಮದಿಂದ ವಂಚಿಸಲ್ಪಟ್ಟಳು."

ಸುಮಿತ್ರಳ ಈ ಮಾತಿನಿಂದ ಶ್ಯಾಮುವಿಗೆ ನೋವಾಯಿತು. ಬಾವಿ ಯಲ್ಲಿ ಬಿದ್ದವನಿಗೆ ಕಡೆಯಪಕ್ಷ ಆಸರೆಗೆ ಒಂದು ಹುಲ್ಲುಕಡ್ಡಿಯಾದರೂ ಸಿಗ ಬಹುದು ಎಂದು ಆಸೆಯಿರುವಂತೆ ಶ್ಯಾಮುವಿಗೆ ಸುಮಿತ್ರಳ ಸಹಾನು ಭೂತಿಯ ಅಗತ್ಯವಿತ್ತು. ಆಸೆಯಿತ್ತು, ಸುಮಿತ್ರೆಯ ನಿಷ್ಠುರತೆ ಅವನ ಕಣ್ಣಲ್ಲಿ ನೀರು ತಂದಿತು.

"ನನ್ನದು ತೋರಿಕೆಯ ಪ್ರೇಮವಲ್ಲ ಸುಮಿತ್ರಾ. ಸರೂ ನನ್ನ ಪ್ರಾಣ ವಾಗಿದ್ದಳು. ಈವತ್ತಿಗೂ ನನ್ನ ಹೃದಯದಿಂದ ಅವಳನ್ನು ಅಲುಗಿಸಲು ಸಾಧ್ಯವಿಲ್ಲ ಸುಮಿತ್ರಾ. ಆದರೂ ನಿನ್ನ ಕೈ ಹಿಡಿದ ದಿನದಿಂದ ಕಷ್ಟಪಟ್ಟು ಅವಳನ್ನು ಕಳುಹಿಸಿಬಿಟ್ಟೆ ಮನಸ್ಸಿನಿಂದ. ಆದ್ರೆ ದೈವ ನನ್ನನ್ನು ಪರೀಕ್ಷೆ ಗಿಟ್ಟಂತೆ, ಈಗ ಮತ್ತೆ ಅವಳನ್ನು ನಮ್ಮ ಜೀವನದಲ್ಲಿ ತಂದಿದೆ."

"ಸರಳಾ ನಿಮ್ಮ ಪ್ರಾಣವಾಗಿದ್ದಿದ್ದರೆ, ಭಾರತಿ ಯಾಕೆ ಬಂದಳು ನಿಮ್ಮ ಜೀವನದಲ್ಲಿ ? ಅವಳ್ಯಾಕೆ ಪ್ರಾಮುಖ್ಯವಾಗಬೇಕಿತ್ತು ? ಸರಳಾಗೆ ನಿಮ್ಮ ಹೃದಯದಲ್ಲಿ ಅಷ್ಟು ಅಚಲ ಸ್ಥಾನ ಕೊಟ್ಟಿದ್ದರೆ ಭಾರತಿಯ ಎದುರಿಗೆ ಅಕ್ಕನ ಅವಮಾನವಾಗಬೇಕಿರಲಿಲ್ಲ. ಅವಳ ಹೃದಯಕ್ಕೆ ಘಾಸಿ ಮಾಡಬೇಕಿರಲಿಲ್ಲ" ಇನ್ನೂ ತಗ್ಗಲಿಲ್ಲ ಸುಮಿತ್ರಾ. ಮಾತನಾಡುತ್ತಿರುವುದು ಗಂಡನೊಡನೆ ಎಂಬುದನ್ನೂ ಮರೆತುಬಿಟ್ಟಂತ್ತಿತ್ತು. "ಹೋಗಲಿ, ಆ ಭಾರತೀನ್ನ ಎಲ್ಲಿಗೆ ಒದ್ದಿರಿ ? ನನ್ನನ್ನು ಯಾಕೆ ಮದುವೆಯಾದ್ರಿ ?"

"ಸುಮಿತ್ರಾ, ನನ್ನಲ್ಲಿರೋ ಈಗಿನ ಒಳ್ಳೇತನನ್ನಾದ್ರೂ ಗುರುತಿಸ ಲಾರೆಯಾ ? ಸರಳೆಯಂಥ ಸುಗುಣೆಯಿಂದ ನನ್ನ ದುರ್ಬಲತೆ ಕಡಿದುಬಿತ್ತು.

ಜೊತೆಯಲ್ಲೇ ನನ್ನ ಆಶಾಗೋಪುರ. ಆದ್ರೆ ನಾನು ಬುದ್ಧಿ ತಿಳಿಯೋವೇಳೆಗೆ ಸರಳಾ ನನ್ನಿಂದ ಬಹಳ ದೂರ ಹೊರಟುಹೋಗಿದ್ದಳು. ನಾನು ಅವಳ ದೃಷ್ಟಿಯಲ್ಲಿ ಒಬ್ಬ ಪ್ರಂಡುಪೋಕರಿಯಾಗಿ ಉಳಿದುಬಿಟ್ಟೆ. ಆದ್ರೆ ನನ್ಗೆ ಮಾತ್ರ ಅವಳು ನಿಲುಕದ ನಕ್ಷತ್ರವಾಗಿ ಉಳಿದಳು" ಸುರಿದು ಹೋಗುತ್ತಿದ್ದ ಕಣ್ಣೀರು ಒರೆಸಿಕೊಂಡ ಶ್ಯಾಮು.

ಸುಮಿತ್ರಾ ಏನೋ ಯೋಚಿಸುತ್ತಿದ್ದಳು. ಹೌದು, ತಾನು ಅವನ ಬಾಳಸಂಗಾತಿಯಾಗಿ ಬಂದಾಗಿನಿಂದ ಶ್ಯಾಮುವಿನಲ್ಲಿ ಒಳ್ಳೆಯ ಗುಣಗಳನ್ನೇ ಸ್ವಚ್ಛಶೀಲವನ್ನೇ ಕಂಡಿದ್ದಳು. ಅದಕ್ಕಾಗೇ ತಾನು ಹೊಗಳಿದಾಗಲೆಲ್ಲಾ "ದೇವತೆ" ಕಲಿಸಿದಳು ಎನ್ನುತ್ತಿದ್ದ. ಅವನ "ದೇವತೆ" ತನ್ನ ಸರಳಾ! ಏಕೋ ಸಂತೋಷವಾಯಿತು. ಒಮ್ಮೆಲೇ ದುಃಖವೂ ಆಯಿತು. "ಶ್ಯಾಮೂ. ಹೀಗೇಕಾಯಿತು ? ನಂಗೆಲ್ಲಾ ಅಯೋಮಯವಾಗಿ ಕಾಣ್ತಿದೆ. ಅಂತೂ ನಿಮ್ಮಿಂದ ಸರಳಾಗೆ ಬಹಳ ಅನ್ಯಾಯ ಆಗಿದೆ. ಅವಳ ಬಾಳರಸ್ತೆ ಕಡಿದು ಬಿದ್ದಿದೆ. ಅದನ್ನ ಸರಿ ಮಾಡೋಕ್ಕೆ ಸಾಧ್ಯವೇ ಇಲ್ಲವಾಗಿದೆ. ನೀವು ನನ್ನ ಶ್ಯಾಮು. ಅವಳು ನನ್ನ ಸರಳಾ. ಯಾಕೆ ಹೀಗಾಯಿತು ?" ಎಂದು ದುಃಖಿಸಿದಳು.

## ೨೨

"ನೋಡು ಸುಮಿತ್ರಾ, ನಾನು ಸರಳಾ ಒಬ್ಬರನ್ನೊಬ್ಬರು ಬಹಳ ಪ್ರೀತಿಸ್ತಾ ಇದ್ದೆವು, ನನ್ನಲ್ಲಿ ಹೇಗೆ ಬೇರೆ ಹುಡುಗೀರೊಂದಿಗೆ ಸದರವಾಗಿ ಮಾತನಾಡೋ ದುರ್ಬಲತೆಯಿತ್ತೋ ಹಾಗೆಯೇ ನನ್ನನ್ನು ಅಷ್ಟೇ ಬೇಗ ತಪ್ಪು ತಿಳಿದುಕೊಳ್ಳೋ ಸ್ವಭಾವ ಅವಳದು. ಅದು ಅವಳ ಅತೀ ಪ್ರೇಮದ ಅಸೂಯೆ. ನಾನದನ್ನು ಅರ್ಥಮಾಡಿಕೊಳ್ಳಲಿಲ್ಲ. ಅನೇಕ ಬಾರಿ ಈ ವಿಷಯ ಕ್ಕಾಗಿ ಜಗಳ ಆಡ್ತಾ ಇದ್ದೆವು. ಆದರೂ ಪ್ರತಿಸಲಾನೂ ಸೋಲುತ್ತಿದ್ದಳು

ಸರೂ. ಅವಳ ಕೋಪ, ಅಸೂಯೆಗಳು ನನಗಾಸೆ. ಅವಳನ್ನು ರೇಗಿಸಿ, ಛೇಡಿಸಿ ನನಗೆ ತೃಪ್ತಿ ಮಾಡಿಕೊಳ್ಳುತ್ತಿದ್ದೆ. ಅವಳ ಎದುರಾಗಿಯೇ ಬೇರೆ ಯುವರ ಜೊತೆ ಸದರ ತೋರಿಸಿ, ಅವಳನ್ನು ಕೀಟಲೆ ಮಾಡಿ ಸಿಟ್ಟಿಗೆಬ್ಬಿಸುತ್ತಿದ್ದೆ. ಆದ್ರೆ ಅದೇ ಅನಾಹುತವಾಯಿತು. ಸರಳಾ ಯಾವುದನ್ನೂ ಹುಡುಗಾಟವಾಗಿ ತೆಗೆದುಕೊಳ್ಳಲಿಲ್ಲ. ನನ್ನಲ್ಲಿ ಶೀಲದ ಲೋಪವಾಗುತ್ತಿದೆಯೆಂದು ವಾದಿಸುತ್ತಾ ಬಂದಳು. ಅವಳದೆಲ್ಲಾ ಹಳೆಯಕಾಲದ ಅಭಿಪ್ರಾಯಗಳೆಂದು ನಾನೂ ವಾದಿಸಿದೆ. ಅನೇಕ ಸಲ ಮನಸ್ಸುಗಳು ಹುಳಿಯಾಗುತ್ತಿದ್ದುವು. ಆದರೂ ಆ ಪ್ರೇಮ ಮೂರ್ತಿ ಮೂರು ದಿನ ಕೋಪಿಸಿಕೊಂಡರೂ, ನಾಲ್ಕನೇ ದಿನ ಮಮತೆಯ ತಾಯಾಗಿ, ವಾತ್ಸಲ್ಯದ ತಂಗಿಯಾಗಿ, ಪ್ರೇಮದ ಪ್ರೇಯಸಿಯಾಗಿ ಆದರಿಸುತ್ತಿದ್ದಳು. ಈ ಅವಳ ಆದರಣೇನ್ನ ನಾನು ಅತಿಯಾಗಿ ಉಪಯೋಗಿಸಿ ಬಿಟ್ಟೆ ಸುಮಿತ್ರಾ.

ಭಾರತಿ, ಅವಳೆಂತಹವಳು ಅನ್ನೋದು ನನಗೀವತ್ತೂ ತಿಳೀದು.ಅಂತೂ ಅವಳು ಸರಳಾಗೆ ಸಾಟಿಯಿಲ್ಲ ಅಂತ ಮಾತ್ರ ಹೇಳಬಲ್ಲೆ. ಎಲ್ಲಾ ಹುಡುಗೀರ ಜೊತೆ ಇದ್ದ ಹಾಗೇ ಭಾರತೀ ಜೊತೆಗೂ ಇದ್ದೆ. ಅವಳು ಬಡವಳು. ಮನೆಯಲ್ಲಿ ಗಂಡಸರ ನೆರವಿಲ್ಲಾಂತ ನನ್ನ ಸಹಾಯ ಕೇಳಿದಳು. ಇಲ್ಲವೆನ್ನಲಾರದೆ ಹೋದೆ. ನನ್ನ ನೆರವು, ಸಹಾಯ, ಸದರಗಳ್ನು ಸಾಕಷ್ಟು ದುರಪಯೋಗ ಪಡಿಸಿಕೊಳ್ಳತೊಡಗಿದಳು. ನನಗದು ತಿಳಿಯಲೇ ಇಲ್ಲ. ಭಾರತಿಯಲ್ಲಿದ್ದ ಯಾವುದೋ ಒಂದು ಆಕರ್ಷಣೆ ನನ್ನನ್ನು ಕುರುಡನನ್ನಾಗಿ ಮಾಡಿತು. ಒಳ್ಳೆಯ ಯೌವನದಲ್ಲಿದ್ದ ನನಗೆ ಊರು ಸುತ್ತಾಡಬೇಕೆಂಬ ಆಸೆ· ಎಲ್ಲರ ಹಾಗೇ ಹತ್ತು ಕಡೆ ಮೆರೆಯಬೇಕೆಂಬ ಹಂಬಲ. ಸರಳಾಗೂ ಆಸೆ ಇದ್ದರೂ ಮದುವೆಯ ಮುನ್ನ ಎಲ್ಲಿಯೂ ಜೊತೆಯಾಗಿ ಹೆಚ್ಚು ಸುತ್ತಾಡಲು ನಿರಾಕರಿಸಿ ಬಿಡುತ್ತಿದ್ದಳು. ಆದರೆ ಭಾರತಿ ನಾನು ಕರೆಯುವುದಿರಲಿ, ತಾನೇ ನನ್ನನ್ನು ಬಲವಂತ ಮಾಡಿ ಕರೆಯುತ್ತಿದ್ದಳು.ಅಂಧನಾಗಿ ಅವಳ ಹಿಂದೆ ಹೊರಡುತ್ತಿದ್ದೆ.

ಮನಸ್ಸೆಲ್ಲಾ ಸರಳೆಯ ಮೇಲಿದ್ದರೂ ಯಾವುದೋ ದುಷ್ಟ ಆಕರ್ಷಣೆ ಭಾರತಿಯ ಹಿಂದೆ ಸುತ್ತಾಡುವಂತೆ ಪ್ರೋತ್ಸಾಹಿಸುತ್ತಿತ್ತು. ಪ್ರತಿದಿನವೂ 'ಈವತ್ತು ಸರೂನ್ನ ನೋಡಿ ಬರ್ಬೇಕು' ಅಂತ ಅಂದ್ಕೊಳ್ತಿದ್ದೆ. ಅಂದುಕೊಂಡ ಮಾತು ಕಾರ್ಯಕ್ಕೆ ಇಳಿಯೋಷ್ಟರಲ್ಲಿ ಭಾರತಿಯ ಪ್ರವೇಶ ಅದನ್ನು

ಕಡಿಯುತ್ತಿತ್ತು. ಆಗಲೂ ನನ್ನೇನೋ ಧೈರ್ಯ "ಸರೂ ನನ್ನವಳು. ಏನೇ ಆದರೂ ನನ್ನಿಂದ ದೂರ ಆಗೋಲ್ಲ ಅವಳು. ನಾಳೆಯಾದರೂ ಅವಳನ್ನು ನೋಡಲೇಬೇಕು" ಮತ್ತೆ ಯಥಾಪ್ರಕಾರ. ಹೀಗೇ ಹತ್ತಾರು ದಿನ ಕಳೆದ ಮೇಲೆ ಒಮ್ಮೆ ಸರಳಾನನ್ನು ನೋಡಲು ಹೋಗುತ್ತಿದ್ದೆ. ಮೊದಮೊದಲು ಅವಳ ಕೋಪ, ಮೌನಗಳನ್ನು ಪ್ರಣಯಕಲಹವೆಂದು ಅಸಡ್ಡೆಮಾಡಿದೆ.ಆದರೆ ಸುಮಿತ್ರಾ, ಅವಳ ಅಭಿಮಾನ ನನ್ನ ದುರ್ಬಲತೆಯನ್ನು ತಾತ್ಸಾರಮಾಡಿತು. ಅವಳ ಆತ್ಮಗೌರವ "ಕಂಡ ಹುಡುಗಿಯರೊಂದಿಗೆ ಅಲೆಯುವ ನೀನೊಬ್ಬ ಅಯೋಗ್ಯ" ಎಂದು ನನ್ನನ್ನು ಅಣಕಿಸಿತು. ದೂರ ದೂರ ಸರಿಯುತ್ತಾ ಬಂದಳು ಸರೂ, ಮುಖಕ್ಕೆ ಮುಖ ಕೊಟ್ಟು ನನ್ನನ್ನು ನೋಡುವುದೂ ಬಿಟ್ಟುಬಿಟ್ಟಳು. ನಾನೆಷ್ಟು ನೊಂದೆ ಬಲ್ಲೆಯಾ ? ಹುಚ್ಚು ಕುದುರೆಯಂತಹ ನನ್ನ ಮನಸ್ಸಿಗೆ ಕಡಿವಾಣ ಹಾಕಿ, ಎಲ್ಲಿಗಂದರಲ್ಲಿಗೆ ಹೋಗದಂತೆ, ನೇರ ರಸ್ತೆ ಯಲ್ಲೇ ಹೋಗಲು ಆಶಿಸುತ್ತಿದ್ದ ಸರಳಾ ಕಡಿವಾಣ ಸಡಿಲಿಸಿದಳು. ಕಡಿವಾಣ ಕಳೆದುಕೊಂಡ ಕುದುರೆ ಭಾರತಿಯ ಚಾಟಿಯಿಂದ ಎಲ್ಲಿಗಂದರೆ ಅಲ್ಲಿಗೆ ಓಡಲು ತಯಾರಾಯಿತು. ಆದರೆ ಆ ಚಾಟಿ ಕಿತ್ತುಹೋದ ಕೂಡಲೇ ಕುದುರೆಯ ಕಾಲೂ ಕುಸಿದುಬಿತ್ತು.

ಸ್ವಲ್ಪ ಹಣಗಳಿಸಿದ ಕೂಡಲೇ ಎಂ.ಎ. ಓದಲು ಭಾರತಿ ನಾಗಪುರಕ್ಕೆ ಹೋದಳು. ಹೋದ ಮೇಲೆ ನನ್ನನ್ನು ಮರೆತೇ ಬಿಟ್ಟಳೇನೋ ಒಂದು ಕಾಗದ ಕೂಡ ಬರೆಯಲಿಲ್ಲ. ನನ್ನಿಂದ ಬೇಕಾದ ಸಹಾಯವನ್ನೆಲ್ಲಾ ಪಡೆ ದಿದ್ದಳು. ನನ್ನ ಮುಖಕ್ಕೆ ಸಾಕಷ್ಟು ಮಸಿಯನ್ನು ಬಳಿದಿದ್ದಳು. ಅವಳು ಬೇಕೆಂದೇ ಏನೂ ಮಾಡದಿದ್ದರೂ. ನನ್ನ ಅವಳ ಒಡನಾಟ ಅನೇಕರ ಬಾಯಲ್ಲಿ ಬಿದ್ದಿತ್ತು.

ಅವಳು ನನ್ನನ್ನು ಮರೆತಳೆಂದು ನನಗೇನೂ ದುಃಖವಾಗಲಿಲ್ಲ. ಸರೂ ಎಣಿಸಿದಂತೆ ಏನೂ ನಾನು ಅವಳನ್ನು ಪ್ರೀತಿಸಿರಲಿಲ್ಲ. ಆದರೆ ನನ್ನ ಹೃದಯ ನನ್ನ ಸರೂವನ್ನು ಬಯಸುತ್ತಿತ್ತು. ಭಾರತಿ ಹೊರಟು ಹೋಗಿ ನಾನು ಮತ್ತೆ ಸರೂವನ್ನು ನೋಡುವ ವೇಳೆಗೆ ನಡೆದು ಹೋಯಿತು ಸುಮಿತ್ರಾ ಆಭಾಸ.... ಸರಳಾ ನನ್ನನ್ನು ಬಿಟ್ಟು ದೂರ ಸರಿಯಲು ನಿಶ್ಚಯಿಸಿ ಬಿಟ್ಟಿದ್ದಳು. ಅವಳ ಈ ಕಡೆಯ ಪತ್ರ ಬಂದಾಗಲೂ, ನಾನು ಅದಕ್ಕೆ ಅರ್ಥವಿಲ್ಲದ ಅತಿ ಪ್ರೇಮದ

ಹುಚ್ಚಾಟ ಎಂದೇ ಅಂದುಕೊಂಡೆ. ನನ್ನ ತಿಳುವಳಿಕೆ ತಪ್ಪು. ಸರಳಾ ಒಂದೊಂದು ಪದಕ್ಕೂ ಅರ್ಥಕೊಟ್ಟು ಗಂಭೀರವಾಗಿ ಬರೆದಿದ್ದಳುಎನ್ನುವುದು ತಿಳಿಯುವ ವೇಳೆಗೆ ನನ್ನ ಸರೂ ನನ್ನಿಂದ ಹೊರಟು ಹೋದಳು. ಮತ್ತೆ ಮತ್ತೆ ಅವಳನ್ನು ಕಾಣಬೇಕೆಂದು ಹೋದೆ. ಅವಳು ನನ್ನನ್ನು ಭೇಟಿ ಮಾಡ ಲಿಲ್ಲ. ನನ್ನನ್ನು ನೋಡಲೂ ಸಹ ಬಯಸಲಿಲ್ಲ ಮನೆಯಲ್ಲೇ ಇದ್ದೂ ಇಲ್ಲವೆಂದು ಕಳುಹಿಸಿಬಿಟ್ಟಳು.

'ಸರೂ, ಸರೂ' ಎಂದು ಕೂಗುತ್ತಿದ್ದ ನನ್ನ ಹೃದಯ ಅವಮಾನಿತ ವಾಯಿತು. ಪ್ರತಿ ಸಲದಂತೆ ಈ ಸಲ ಕೂಡ ನಾಲಕ್ಕು ದಿನಗಳಾದರೆ ಸರೂ ಮತ್ತೆ ಮಾತನಾಡಿಸುತ್ತಾಳೇಂತ ಆಶಿಸಿದೆ. ಇಲ್ಲ ಸುಮಿತ್ರಾ, ಸರೂ ಪೂರ್ಣ ವಾಗಿ ನನ್ನನ್ನು ತಿರಸ್ಕರಿಸಿ. ಶೀಲವಿಲ್ಲದ ಒಂದು ಲೋಫರ್‌ನೆಂದು ಮುದ್ರಿಸಿ ದೂರ ನಿಂತಳು....ನನ್ನ ದುಃಖ ಹೇಳಿಕೊಳ್ಳಲೂ ಸಹ ನನಗಾರೂ ಇರಲಿಲ್ಲ. ನನ್ನ ಕಷ್ಟ, ಸುಖ ಹೇಳುತ್ತಿದ್ದುದು ನಾನು ಸರೂ ಬಳಿ ಮಾತ್ರ. ಇಂದಿನಿಂದ ಅವಳೂ ಇಲ್ಲ ನನ್ನ ಪಾಲಿಗೆ ಎಂದು ಅತ್ತೆ. ಪ್ರಯೋಜನವೇನು ? ನನ್ನ ದೈವ ನನ್ನನ್ನು ಸಾಧಾರಣ, ಅತಿ ಸಾಧಾರಣ ಮನುಷ್ಯನನ್ನಾಗಿ ಹುಟ್ಟಿಸಿತ್ತು. ಆದರೆ ಸರೂ ಮನುಷ್ಯ ಮಟ್ಟಕ್ಕಿಂತ ಎತ್ತರದಲ್ಲಿದ್ದಳು. ನನ್ನಂತಹ ಸಾಧಾ ರಣನಿಗೆ ಅವಳು ಸಿಲುಕಬಾರದೆಂಬುದೇ ದೈವೇಚ್ಛೆಯಾಗಿತ್ತೋ ಏನೋ.

ಒಳ್ಳೆಯ ನೀತಿ. ನಿಷ್ಠೆಯ ಗುಣವಂತ ಹುಡುಗಿ ಎಲ್ಲಿಯಾದರೂ ಸುಖ ವಾಗಿ ಇರಲಿ, ನನಗಿಂತಲೂ ಯೋಗ್ಯ, ಉತ್ತಮ ವರ ಅವಳಿಗೆ ಸಿಗಲಿ ಎಂದು ಹಾರೈಸಿ ದೂರವೇ ಉಳಿಯಲು ನಿಶ್ಚಯಿಸಿದೆ. ಆದರೆ ಆ ಸಾಧ್ವಿ ನನ್ನಂತಹ ಅಯೋಗ್ಯನಿನಾಗಿ ತಾನು ವಿರಾಗಿನಿಯಾಗಿ ಉಳಿದಿದ್ದಾಳೆ ಎಂದು ಕೇಳಲು ಸಂಕಟವಾಗುತ್ತಿದೆ ಸುಮಿತ್ರಾ" ಎಂದು ಅತ್ತುಬಿಟ್ಟ.

"ಅಳಬೇಡಿ ಶ್ಯಾಮು. ಅತ್ತು ಪ್ರಯೋಜನ ಏನು ? ಧೈರ್ಯ ತಂದು ಕೊಳ್ಳಿ. ನೀವು ನಿಮ್ಮ ಅಮ್ಮನಿಗೆ ಹೇಳಿಯಾದರೂ ಸರೂಳೊಂದಿಗೆ ಸ್ನೇಹ ಕ್ಕಾಗಿ ಪ್ರಯತ್ನಿಸಬಹುದಿತ್ತು, ಹೆಣ್ಣು ಹೆಣ್ಣನ್ನು ಚೆನ್ನಾಗಿಅರಿತುಕೊಳ್ತಾಳೆ."

"ನಾನು ಅಷ್ಟು ಭಾಗ್ಯವಂತನಲ್ಲ ಸುಮಿತ್ರಾ. ನಮ್ಮ ತಂದೆ ಹೋಗಿ ಬಿಟ್ಟಾಗಲಿಂದ. ಅಮ್ಮನ ರೀತಿಯೇ ಬದಲಾಗಿಬಿಟ್ಟಿತ್ತು. ಯಾವ ಮಾತಿಗೂ

ಬಗ್ಗುತ್ತಿರಲಿಲ್ಲ ನಮ್ಮಮ್ಮ. ಜೊತೆಗೆ ಸ್ವಭಾವತಃ ತನ್ನ ಮಾತೇ ನಡೆಯಬೇಕೆಂಬ ಹಠ ಬೇರೆ. ತಾವು ಬಯಸಿದ ಕೆಲಸಗಳನ್ನು ನಾವು ಮಾಡಬೇಕೇ ಹೊರತು, ನಮ್ಮ ಸಂತೋಷಕ್ಕಾಗಿ ಅಲ್ಲ."

"ನೀವು ಒಂದ್ಸಲಾನಾದ್ರೂ ಸರೂನ್ನ ಪ್ರೀತಿಸಿದ ವಿಷಯ ಅವ್ರಿಗೆ ತಿಳಿಸ್ಲೇ ಇಲ್ವಾ ಹಾಗಾದ್ರೆ?"

"ಹೇಳಿದೆನಲ್ಲಾ ಸುಮಿತ್ರಾ. ಅವರ ಬಳಿ ಏನೂ ಹೇಳುವುದೂ ಕಷ್ಟವಾಗಿತ್ತು. ಎಲ್ಲಿ ಬೇಡ ಅನ್ನುವರೋ ಅನ್ನೋ ಅಂಜಿಕೆಯಲ್ಲಿ ಮುಂದೆ ದೂಡುತ್ತಿದ್ದೆ. ನಾನು ನಿರ್ಧಾರವಾಗಿ ಅವ್ರಿಗೆ ಹೇಳ್ಬೇಕು ಎಂದುಕೊಳ್ಳುವ ವೇಳೆಗೆ ದೈವ ನಮ್ಮಿಬ್ಬರನ್ನೂ ದೂರ ಮಾಡಿತ್ತು. ಅಣ್ಣನ ಮದುವೆ ಆಗಲಿ ನಂತರ ಹೇಳೋಣ ಎಂದಿದ್ದೆ. ಸತೀಶ ನನ್ನ ಗೆಳೆಯ. ಅವರ ಮನೇಗೆ ನಾನು ಬಹಳ ಅಂಟಿದ್ದೀನಿ. ಸತೀಶನಿಗೆ ಒಬ್ಬ ತಂಗಿ ಇದ್ದಾಳೆ, ಸರಳಾ, ಇವೆಲ್ಲಾ ವಿಷಯಗಳೂ ಅವ್ರನಿಗೆ ಗೊತ್ತಿತ್ತು. ಆದ್ರೆ ಸರೂ ನನ್ನ ಹೃದಯ ಕದ್ದಿದ್ದಾಳೆ ಎನ್ನುವ ವಿಷಯ ಅವರಿಗೆ ನಾನು ಬಹಿರಂಗ ಮಾಡುವ ವೇಳೆಗೆ ಅಣ್ಣನ ಮದುವೆ ನಿಶ್ಚಯವಾಯಿತು. ಅದೇ ಸಮಯದಲ್ಲೇ ಸರೂ ನನ್ನಿಂದ ಜಾರಿಯೂ ಬಿಟ್ಟಳು"

ಮುಖ್ಯವಾಗಿ ನನ್ನ ದುರ್ದೈವ ಸುಮಿತ್ರಾ. ಭಾರತೀನ್ನ ನನ್ನ ಜೀವನದಲ್ಲಿ ಬಿಟ್ಟು ನನ್ನನ್ನು ಕುರುಡನನ್ನಾಗಿ ಮಾಡಿ, ಅರ್ಥವಿಲ್ಲದ ಆಟ ಆಡಿಸಿ, ನನ್ನ ಬದುಕಿನ ಸುಂದರ ರತ್ನಾನ್ನ ನನ್ನಿಂದ ಕಸಿದು ಕೊಂಡು ಬಿಡ್ತು. ಸರಳಾನ್ನ ನೆನೆಯದೇ ಇರಲಾರದೇ ಹೋದೆ. ಅವಳನ್ನು ನೋಡಬೇಕೂಂತ ಎಷ್ಟೋ ಪ್ರಯತ್ನಪಟ್ಟೆ. ಸಾಧ್ಯವಾಗಲೇ ಇಲ್ಲ, ಅವಳಂತಹ ಸ್ವಾಭಿಮಾನೀನ್ನ ನಾನಿನ್ನೂ ನೋಡಿಲ್ಲ. "ನಿಮ್ಮ ಹೃದಯದಲ್ಲಿ ಸ್ಥಳ ನನಗಿಲ್ಲದಾಗ, ನನ್ನನ್ನು ವೃಥಾ ನಿಮ್ಮ ಮೇಲೆ ತಳ್ಳಿಕೊಂಡು ಬರೋ ಇಷ್ಟ ನನಗಿಲ್ಲ. ನಾನು ನಿಮಗೆ ಬಹಳ ಅಗ್ಗದ ವಸ್ತು. ನಾನು ದೂರ ಸರೀತೀನಿ. ನಿಮಗೆ ಯಾವೋಳು ಬೇಕೋ ಅವಳ ಜೊತೇನೇ ಚಕ್ಕಂದ ಆಡ್ತಾ ಇರಿ. ನಿಮ್ಮ ತಾತ್ಸಾರದಲ್ಲಿ ನಾನಿರಬೇಕೂಂತ ಅನ್ನೋ ಹಣೇಬರಹ ನನಗೇಕೆ? ಹೋಗ್ತೀನಿ ನಾನು" ಎಂದು ಪದೇ ಪದೇ ಹೇಳುತ್ತಿದ್ದಳು. ಕಾರ್ಯತಃ ಮಾಡಿಯೂ ಬಿಟ್ಟಳು.

ನಾನೇನೂ ಅಂತಹ ಒಳ್ಳೆಯ ಕೆಲಸದಲ್ಲಿ ಇಲ್ಲದ್ರಿಂದ ಕೆಲಸಕ್ಕೆ ರಾಜೀನಾಮೆ ಕೊಟ್ಟು ಬಿಲಾಯ್‌ನಲ್ಲಿದ್ದ ಅಣ್ಣನ ಹತ್ರ ಹೋದೆ, ಸೂರವನ್ನು

ಮರೀಬೇಕೂಂತ ಉತ್ತರ ಇಂಡಿಯಾ ಎಲ್ಲಾ ಅಲೆದೆ. ಆದರೆ ಸರೂ ನನ್ನ ಜೊತೆಯಲ್ಲೇ ಇದ್ದಳೇ ವಿನಾ, ಅವಳನ್ನು ಬಿಟ್ಟು ಹೋಗಲಾರದಾದೆ. ಸುಮಾರು ಒಂದು ವರ್ಷ ದೇಶವೆಲ್ಲಾ ಸುತ್ತಿದರೂ ನನ್ನ ಮನಸ್ಸಿಗೆ ನೆಮ್ಮದಿ ಸಿಗಲಿಲ್ಲ. ಹಿಂದಿರುಗಿ ಬಂದೆ. ಈ ಕಾಲೇಜು ಕೆಲ್ಸ ಸಿಕ್ತು.

ಚಲ್ಲು ಚಲ್ಲಾಗಿ ಇರುತ್ತಿದ್ದ ನನ್ನನ್ನು ನಾನೇ ನಂಬಲಾರದೆ ಹೋದೆ. ಯಾರನ್ನೂ ತಲೆ ಎತ್ತಿ ನೋಡದೆ ಪಾಠ ಹೇಳುವಷ್ಟು ಗಂಬೀರನಾದೆ. ನಾನಾಯಿತು ಪಾಠವಾಯಿತು. ನನ್ನ ವಿದ್ಯಾರ್ಥಿಗಳ ನಡುವೆ ವಿದ್ಯಾರ್ಥಿ ನಿಯರೆಷ್ಟು ಅನ್ನೋದು ತಿಳಿಯೋ ಮನಸ್ಸೂ ಸಹ ಇರಲಿಲ್ಲ. ಸರೂವಿನ ತಿರಸ್ಕಾರ ನನಗೆ ತಿಳಿವು ಕೊಟ್ಟಿತ್ತು. ಅವಳ ಜೊತೆಯಲ್ಲಿ ಉತ್ತಮನಾಗ ಬೇಕಿದ್ದ ರಾಜ ಅವಳನ್ನು ಕಳೆದು ಕೊಂಡು ಉದಾತ್ತನಾದ.

ಕಾಲೇಜು ಕೆಲ್ಸ ಸಿಕ್ಕಿದ ಸ್ವಲ್ಪ ದಿನಕ್ಕೆ ಅಮ್ಮ 'ಮದ್ವೆ ಮಾಡಿಕೋ' ಎಂದು ಒತ್ತಾಯ ಮಾಡಲಾರಂಭಿಸಿದರು. ನನಗೆ ಯಾವುದೋ ಒಂದು ಅರಿಯದ ಆಸೆ ಸರಳಾ ಮನಸ್ಸು ಬದಲಾಯಿಸುವಳೋನೋ ಎಂದು. ಆದರೆ ನನ್ನ ಮುಖ ನೋಡಲೂ ಸಹ ಇಷ್ಟಪಡದ ಅವಳನ್ನು ನಾನು ಯಾವ ರೀತೀಲಿ ಮುಖವಿಟ್ಟು ಕೇಳಲಿ? ನನಗೂ ಆತ್ಮ ಗೌರವವಿಲ್ಲವೆ? ಅಭಿಮಾನವಿಲ್ಲವೆ? ಆದರೂ ನನ್ನ ಆಸೆ, ಅಮ್ಮನ ಬಳಿ ಧೈರ್ಯದಿಂದ ಹೇಳಿಸಿತು. ಅಮ್ಮನೂ ನನ್ನ ಸಂಕಟ ನೋಡಲಾರದೆ ಯಾರ ಮೂಲಕವೋ ಹೇಳಿ ಕಳಿಸಿದಂತೆ. ನೀನು ನಂಬ್ತಿಯೋ, ಇಲ್ವೋ ಸುಮಿತ್ರಾ. ಸರಳಾ ಮಾತನಾಡೋಕ್ಕೇ ತಿರ ಸ್ಕರಿಸಿದಳಂತೆ. ಮಧುರಾ ಮಾತನಾಡಿ ಕಳಿಸಿದಳಂತೆ.

ಅಂದು ಸರಳೆಯ ಆಸೆ ಬಿಟ್ಟೆ. ನೆನಪನ್ನೆಲ್ಲ, ಅವಳ ನೆನಪು ನನ್ನನ್ನು ಊಟ ನಿದ್ದೆಗಳಿಂದ ದೂರಮಾಡಿತು. ಪಾಠಗಳನ್ನು ಸಹ ಗಮನವಿಟ್ಟು ಮಾಡಲಾರದಾದೆ. ಈ ಮಧ್ಯ ಅಮ್ಮನ ಒತ್ತಾಯ ದಿನೇ ದಿನೇ ಹೆಚ್ಚಾಗ ತೊಡಗಿತು ನನ್ನ ಮದುವೆಗೇ. ಕಡೆಗೊಮ್ಮೆ ಸೋತೆ. ಒಂದು ಆಸೆಯೂ ಅಂಕರಿಸಿತು, 'ಮದುವೆಯಾದರೆ ಸರೂವಿನ ಆಸೆಯನ್ನು ಸಂಪೂರ್ಣ ಬಿಡುವೆ ನೇನೋ' ಎಂದು ಸಂಸಾರ ಸಾಗರದಲ್ಲಿ ಧುಮುಕಿದೆ. ನನ್ನ ಭಾಗ್ಯ ತೆರೆ ಯಿತು. ನೀನು ಪತ್ನಿಯಾಗಿ ಸಿಕ್ಕಿದೆ. ನಾನೂ ಅದೃಷ್ಟಶಾಲಿಯಾದೆ ಸುಮಿತ್ರಾ ....ಯಾಕೆ ನಾಚ್ಕೋಯ ಸುಮಿತ್ರಾ. ನಾನು ಹೊಗಳ್ತಿಲ್ಲ. ಅಂದಿನ

ನನ್ನ ಪರಿಸ್ಥಿತಿಯಲ್ಲಿ ನೀನು ತಂಪು ಪಾನೀಯವಾಗಿ ಕಂಡೆ. ತುಂಬು ಚಂದ್ರ ಮರೆಯಾಗಿ ಕತ್ತಲಿಲ್ಲ ತಡಕಾಡುತ್ತಿದ್ದ ನನ್ನ ಜೀವನದಲ್ಲಿ ಮತ್ತೆ ನಿನ್ನಿಂದ ಚಂದ್ರೋದಯವಾಯಿತು. ನಿನ್ನ ಸಂಗದಲ್ಲಿ, ಸಾನಿಧ್ಯದಲ್ಲಿ ನಾನು ಸರಳೆಯನ್ನು ಮರೆಯಲು ಸಾಧ್ಯವಾಯ್ತು.

ಸರಳೆಯ ನೆನಪನ್ನು ಅಳಿಸಲು ಅಸಾಧ್ಯವಾದರೂ, ಅವಳ ಮೇಲಿನ ಪ್ರೇಮ, ವ್ಯಾಮೋಹ ಕಡಿಮೆಯಾಯ್ತು. ಬದಲಾಗಿ ಅಂತಹ ಒಳ್ಳೆಯ ಹೆಣ್ಣಿನ ಕಡೆಗೆ ಗೌರವ. ಅಭಿಮಾನ ಮೂಡಿ ಬಂತು. ಅವಳು ನನಗಿಂತ ಚೆನ್ನಾಗಿ ಬದುಕಬೇಕು ಎಂದು ಹಾರೈಸಿತು ನನ್ನ ಹೃದಯ. ದಿನಕ್ಕೆರಡು ಬಾರಿಯಾದರೂ ನೋಡದ ಹೊರತು ತೃಪ್ತಿಯಾಗದೆ ಇರುತ್ತಿದ್ದ ಈ ಭಾವ ಚಿತ್ರನ್ನ ಪೆಟ್ಟಿಗೆಯ ಅಡಿಯಲ್ಲಿ ಭದ್ರವಾಗಿ ಹುದುಗಿಸಿಟ್ಟೆ. ನಿನಗೆ ಹೇಳಬೇಕೂಂತ ಎಷ್ಟೋ ಸಲ ಅಂದುಕೊಂಡೆ. ಮದುವೆ ಆದ ಹೊಸದರಲ್ಲಿ ನಿನ್ನ ಮನಸ್ಸು ತಿಳೀದ ನಾನು ಹೇಳಲಾರದಾದೆ, ಆಮೇಲೆ ಬರ್‍ತಾ ಬರ್‍ತಾ ನನ್ನ ಮನಸ್ಸೇ ಅದಕೊಪ್ಪಲಿಲ್ಲ, ನಡೆದ ಹಳೇ ಘಟನೆಗಳನ್ನು ಯಾಕೆ ಹೇಳೋದು ಬೇಡ ಅಂದ್ಕೊಂಡೆ. ಆದರೆ ಹೇಳಲೇಬೇಕಾದ ಸಂದರ್ಭ ಈವತ್ತು ಬಂತಾದ್ರಿಂದ ಹೇಳಿದ್ದೀನಿ.

ಈ ಊರಿಗೆ ನಾವು ಬಂದ ಕೂಡಲೇ ತಿಳೀತು ನನಗೆ 'ಸರಳಾ ಇಲ್ಲಿದ್ದಾಳೆ' ಅಂತ. ಬಹಳ ಸಂಕಟಪಟ್ಟೆ ಸುಮಿತ್ರಾ. ಯಾಕಂತಿ ? ನಾವು ಮತ್ತೆ ಒಬ್ಬರನ್ನೊಬ್ರು ನೋಡ್ತೀವಿ ಅಂತಲ್ಲ. ಹಳೆಯ ನೆನಪು ಬರುತ್ತೆ ಅಂತ್ಲೂ ಅಲ್ಲ. ಸರೂಳಂಥ ಜೀವಿ ಬಾಳನ್ನು ಬಲಿದಾನ ಮಾಡ್ತಿದಾಳಲ್ಲಾ ಅಂತ, ಒಬ್ಬ ನಿರ್ಭಾಗ್ಯನಿಗಾಗಿ, ತಪಸ್ಸಿನಿಯಂತಿದ್ದ ಅವಳನ್ನು ಕಣ್ಣಾರೆ ಕಂಡಾಗ ವಿಲಿ ವಿಲಿ ಒದ್ದಾಡಿಬಿಟ್ಟೆ. ಬಿಳೀ ಉಡುಪು ಧರಿಸಿ, ನಿಧಾನವಾಗಿ ಆಫೀಸುಮೆಟ್ಟಲು ಇಳಿಯುತ್ತಿದ್ದ ಅವಳನ್ನು ಒಂದು ಸಲ ಅಲ್ಲಿ ನೋಡಿದ ನನಗೆ ಅವಳು ಪವಿತ್ರ ಗಂಗೆಯಂತೆ ಕಂಡಳು. ಅವಳಿಗೆ ಮುಖ ತೋರಿಸಿ, ಅವಳ ಮನಸ್ಸನ್ನು ಅಲ್ಲೋಲಕಲ್ಲೋಲ ಮಾಡಲು ಇಷ್ಟಪಡದೆ ಪಕ್ಕಕ್ಕೆ ತಿರುಗಿನಿಂತೆ.

ಅವಳ ಸಂತೋಷ ಕಿತ್ತುಕೊಂಡು, ನಾನಿಂದು ಸಂತೋಷವಾಗಿ ಬಾಳ್ವೆ ನಡೆಸ್ತಾ ಇದ್ದೀನಲ್ಲಾಂತ ಪಶ್ಚಾತ್ತಾಪಾನೂ ಆಯ್ತು ನನಗೆ. ಒಂದೊಂದಾಗಿ ಅವಳ ವಿಷಯ ತಿಳೀತು. ಬಡ ವಿದ್ಯಾರ್ಥಿಗಳ ನೆರವಿಗೆ ನಿಂತು ದುಡಿಯುತ್ತಿ

ದ್ದಾಳೆ ಅಂತಲ್ಲೂ ತಿಳೀತು. ಹತ್ತು ಜನರಿಗೆ ಬೇಕಾದವಳಾಗಿದ್ದಾಳೆ ಅಂತ ತಿಳಿದಾಗ ಹರ್ಷವೂ ಆಯ್ತು. ಎಲ್ಲರಿಗೂ ಬೇಕಾದವಳು, ನನ್ನ ಸರೂ! ನನ್ನ ಹೃದಯ ಚಕ್ರವರ್ತಿನಿ! ಈ ನಿರ್ಭಾಗ್ಯನೊಬ್ಬನಿಗೆ ಬಿಟ್ಟು" ದುಃಖಿಸಿದ. ಆದರೆ ಅದಕ್ಕೂ ಹೆಚ್ಚು ಅಳುತ್ತಿದ್ದಳು ಸುಮಿತ್ರಾ. ಅವಳ ತಲೆಯ ಮೇಲೆ ಕೈ ಸವರಿ––"ನೀ ಯಾಕಳ್ತೀ ಸುಮಿತ್ರಾ ? ಇಂತಹ ದೌರ್ಭಾಗ್ಯನಿಗೆ ಮಡದಿ ಆಗಿದ್ದೇನಲ್ಲಾ ಅಂತ ದುಃಖಿಸ್ತೀಯಾ ? ನಿನಗೂ ಸಹ ನಾನು ಅರ್ಹ ನಲ್ವೇನೋ ಅಂತಲೇ ನನಗನ್ನಿಸುತ್ತೆ ಎಷ್ಟೋ ಸಲ. ನೀನು ತುಂಬಾ ಒಳ್ಳೇವ್ಳು ಸುಮಿತ್ರಾ."

"ಕೆಟ್ಟ ಮಾತನ್ನೇಕೆ ಆಡ್ತೀರಿ ಶ್ಯಾಮು. ದೈವದ ಆಟಕ್ಕೆ ನಾವೇನು ಮಾಡೋಕ್ಕಾಗುತ್ತೆ ?"

"ಅವಳ ಮೇಲಿನ ವ್ಯಾಮೋಹಾನೇ ನನ್ನನ್ನು ನಮ್ಮ ಮಗೂಗೆ "ಸರಳಾ" ಅಂತ ಹೆಸರಿಡೋ ಹಾಗೆ ಪ್ರಚೋದಿಸಿತು. ನಮ್ಮ ಸರಳಾನ್ನ "ಸರೂ" ಅಂತ ಕರೆದಾಗಲೆಲ್ಲಾ ನನ್ಗೆ ನೋವಾಗೋಲ್ಲ. ಸಂತೋಷ ವಾಗುತ್ತೆ. ಅವಳ ನೆನಪು ನನಗೆ ಯಾವಾಗ್ಲೂ ಆನಂದ ಕೊಡುತ್ತೆ. ಈಗ ಪ್ರತಿಯೊಂದು ಕೆಲಸದಲ್ಲೂ ನನಗೆ ಚೈತನ್ಯದಾಯಿ ಅವಳ ಹೆಸರು, ನೆನಪು, ವ್ಯಾಮೋಹವಿಲ್ಲದ ಪ್ರೇಮ ನನ್ನನ್ನು ಪರಿಶುದ್ಧನನ್ನಾಗಿ ಮಾಡಿದೆ. ನೀನು ಅವಳ ಗೆಳತಿಯಾದ ದಿನದಿಂದ ನನಗೆ ಹೆಚ್ಚು ಸಂತೋಷ ಸುಮಿತ್ರಾ. ಅವಳ ಕೋರಿಕೆ ನಾನು ಅರ್ಥಮಾಡಿಕೊಳ್ಳಬಲ್ಲೆ. ನನ್ನನ್ನು ದ್ವೇಷಿಸೋಲ್ಲ ಅಂತಲ್ಲೂ ನನಗೆ ಗೊತ್ತು. ಅವಳ ಅಭಿಮಾನ ನನ್ನನ್ನು ಸ್ವೀಕರಿಸಲಿಲ್ಲವಾದರೂ ನನಗಾಗಿ ಅವಳು ಏನು ಬೇಕಾದರೂ ಮಾಡ್ತಾಳೇಂತ ನಾನು ಬಲ್ಲೆ.

ಯಾವ ಋಣಾನುಬಂಧವೋ ನಿಮ್ಮಿಬ್ಬರನ್ನೂ ಒಂದು ಮಾಡಿತು. ಸರಳಾ ನಿನ್ನನ್ನು ಪ್ರೀತಿಸ್ತಾಳೆ, ನೀನು ನನ್ನ ಹೆಂಡತೀಂತ ತಿಳಿದ್ರೂ ಪ್ರೀತಿಸ ಬಹುದು. ಆದರೆ ನನ್ನಿಂದ ಮಾತ್ರ ದೂರ ಹೊರಟು ಹೋಗ್ತಾಳೆ. ಇನ್ನು ಅವಳು ದೂರ ಹೊರಟುಹೋಗ್ತಾಳೆ ಸುಮಿತ್ರಾ" ಎಂದವನೇ ತನ್ನ ಎದೆಯ ಮೇಲಿದ್ದ ಅವಳ ತಲೆಯನ್ನು ತನ್ನ ಕೈಯಿಂದ ಮೇಲಕ್ಕೆತ್ತಿ ಮೃದುವಾಗಿ––– "ಸುಮಿತ್ರಾ ನನ್ನ ವಿಷಯ ಎಲ್ಲಾ ತಿಳಿದ ಮೇಲೆ ನಿನಗೂ ನನ್ನ ಮೇಲೆ ತಿರಸ್ಕಾರ ಬರಬಹುದು, ನೀನೂ ನನ್ನನ್ನು ಬಿಟ್ಟು ಹೋಗ್ತೀಯಾ? ನನ್ನಿಂದ

ದೂರ ಹೋಗ್ಬೇಡ ಸುಮಿತ್ರಾ. ದೊಡ್ಡ ಹೃದಯದಿಂದ ನನ್ನನ್ನು ಕ್ಷಮಿಸಿ ನಿನ್ನವನನ್ನಾಗಿ ಇಟ್ಟುಕೊಳ್ಳಲಾರೆಯಾ ? ಮಾತನಾಡು ಸುಮಿತ್ರಾ ಒಂದು ಸಲ ಹೇಳು ಸುಮಿತ್ರಾ" ಎಂದು ಗೋಗರೆದ.

ಸುಮಿತ್ರಾ ಮಾತನಾಡಲಿಲ್ಲ. ಮೌನವಾಗಿ ರೋದಿಸುತ್ತಿದ್ದಳು. ಅವಳ ಹೃದಯ ತನ್ನ ಇಷ್ಟವಾದ ಎರಡು ಹೃದಯಗಳಿಗಾಗಿ ನೋಯುತ್ತಿತ್ತು. ತನ್ನನ್ನು ಕುರಿತು ಅವಳು ಯೋಚಿಸಲಿಲ್ಲ, ದೈವದ ಆಟದಿಂದ ಬೇರಾದ ಇಬ್ಬರು ಪ್ರೇಮಿಗಳನ್ನು ಕುರಿತು ಚಿಂತೆಮಾಡಿತು ಅವಳ ನಿಸ್ವಾರ್ಥ ಹೃದಯ.

"ನಿಮ್ಮನ್ನು ಕ್ಷಮಿಸಬೇಕಾದರೆ ನಾನು ಹೇಳಿದಹಾಗೆ ಕೇಳ್ತೀರಾ ? ಕ್ಷಮಿಸ್ತೀನಿ."

"ಏನು ಹೇಳು ಸುಮಿತ್ರಾ, ನಿನಗಾಗಿ ಏನು ಬೇಕಾದರೂ ಮಾಡ್ತೀನಿ. ನಿನ್ನನ್ನೂ ಕಳೆದುಕೊಳ್ಳಲು ನಾನು ತಯಾರಿಲ್ಲ."

"ಹಾಗಾದರೆ, ಹಾ....ಗಾ....ದರೆ" ತಡವರಿಸಿದಳು.

"ಹೇಳು ಸುಮಿ" ಧೈರ್ಯ ಕೊಟ್ಟ.

"ಈಗಲಾದರೂ ನೀವು ಸರಳೆಯನ್ನು ಸ್ವೀಕರಿಸಿ. ನಾನವಳನ್ನು ಒಪ್ಪಿಸ್ತೀನಿ."

"ಸುಮಿತ್ರಾ !!!"

"ಹೌದು. ಹೃತ್ಪೂರ್ವಕವಾಗಿ ಹೇಳುತ್ತಿದ್ದೇನೆ ಶ್ಯಾಮು. ಅನವರತವೂ ನಿಮ್ಮನ್ನೇ ಆರಾಧಿಸುತ್ತಿರೋ ಅಕ್ಕನಿಗೆ ಈಗಲಾದರೂ ಅವಳ ಜಾಗ ಅವಳಿಗೆ ಕೊಡಿ ನಿಮ್ಮ ಹೃದಯದಲ್ಲಿ."

"ಸುಮಿತ್ರಾ !!!" ಎಂದು ಕೂಗಿ ಕಣ್ಣು ಮುಚ್ಚಿಕೊಂಡ ಶ್ಯಾಮು.

"ನನ್ಗೆ ನಿಮ್ಮ ಬಾಳಿನಲ್ಲಿ ಸ್ಥಾನ ಸಿಕ್ಕಿದೆ, ಸುಖ, ಸೌಭಾಗ್ಯ ದೊರಕಿದೆ, ಸುಖದ ಕಲಶವಾಗಿ ಎರಡು ಮಕ್ಕಳಿವೆ ಸಾಕು. ಸರಳಾ ನಿಮ್ಮ ಮೊದಲ ಮಡದಿ. ಅವಳ ನಂತರ ಎರಡನೆಯ ಜಾಗ ನನ್ನದಾಗಿರಲಿ. ಅವಳಿಗೆ ನೀವೂ, ನಾನೂ, ಮಕ್ಕಳೂ ಎಲ್ಲರೂ ಪ್ರಾಣ. ನೀವಿಬ್ಬರೂ ಪ್ರೀತಿಯಿಂದಿದ್ದರೆ, ನಾನು ನಿಮ್ಮಿಬ್ಬರ ಸೇವೆ ಮಾಡ್ತೀನಿ ಶ್ಯಾಮು. ನಾನು ಆರಾಧಿಸೋ ಎರಡು ವ್ಯಕ್ತಿಗಳ ಸೇವೆ ಮಾಡೋ ಭಾಗ್ಯ ನನಗೆ ದೊರಕಿಸಿಕೊಡಿ ಶ್ಯಾಮು" ಎಂದು ಧೈರ್ಯವಾಗಿ ಹೇಳಿದಳು.

"ಓ ! ನನ್ನ ಸುಮಿ ! ಅಸಾಧ್ಯವಾದುದ್ದನ್ನು ಸಾಧ್ಯ ಮಾಡೋಕ್ಕೆ ಆಶಿಸ್ತೀಯಲ್ಲಾ ?"

"ಯಾಕೆ ಸಾಧ್ಯ ಇಲ್ಲ ? ನಾನು 'ಸಾಧ್ಯ' ಮಾಡ್ತೀನಿ. ನೀವು 'ಹುಂ' ಅನ್ನಿ."

"ನಾನು 'ಹುಂ' ಅನ್ನೋಕ್ಕೇ ಸಾಧ್ಯವಿಲ್ಲ ಸುಮಿತ್ರಾ, ನನಗೆ ನೀನು ಬೇಕು. ನಾನೂ ನೀನೂ ಮನುಷ್ಯರು, ಅವಳು ನಮಗಿಂತ ಎತ್ತರ. ಮನುಷ್ಯರಿಗೆ ನಿಲುಕದ ನಕ್ಷತ್ರ ಅವಳು. ಅವಳು ನಮಗೆ ಸಿಕ್ಕೊಲ್ಲಾ."

"ಸಿಕ್ತಾಳೆ. ಖಂಡಿತ ಸಿಕ್ತಾಳೆ. ನಾನು ಹೇಳಿದ್ರೆ 'ಇಲ್ಲ' ಅನ್ನೊಲ್ಲ ನನ್ನಕ್ಕ. ಸಂತೋಷದಿಂದ ನಾನು ನನ್ನ ಜಾಗ ಬಿಟ್ಟುಕೊಡ್ತೀನಿ."

"ಹುಚ್ಚಿ ಸುಮಿತ್ರಾ. ಒಬ್ಬನಿಗೆ ಇಬ್ಬರು ಜೀವಂತ ಹೆಂಡತಿಯರಿರೋ ಕಾಲ ಹೋಯಿತು. ಮದುವೆಯಾಗೋ ಹಕ್ಕಿಲ್ಲ ಹಾಗೆ. "ಸುಮ್ಮನೆ ನಮ್ಮ ಬಳಿ ಬಂದಿರು" ಅಂತ ಹೇಳೋಕ್ಕಾಗುತ್ತೇನು ? ಅಷ್ಟಕ್ಕೂ ಅವಳಿಷ್ಟು ಅಭಿಮಾನ ಅನ್ನೋದು ಮರೆತುಬಿಡ್ತಿದ್ದಿ. ಏನಾದರೂ, ಅವಳು ತನ್ನ ಬಾಳನ್ನು ಛಿದ್ರ ಮಾಡಿದ ರಾಜನನ್ನು ಕ್ಷಮಿಸೋಲ್ಲ ಸುಮಿತ್ರಾ. ತನ್ನ ಅಭಿಮಾನದಿಂದ ತಾನು ಸುಟ್ಟುಹೋದರೂ ಅವಳು ಚಿಂತಿಸೋಲ್ಲ. ಆದರೆ ರಾಜನನ್ನು ಮಾತ್ರ ಕ್ಷಮಿಸೋಲ್ಲ."

"ತಪ್ಪು ಅಭಿಪ್ರಾಯ ಪಡಬೇಡಿ ಶ್ಯಾಮು. ಎಷ್ಟೇ ದೈವೀಕ ಗುಣಗಳಿದ್ರೂ ಅವಳೂ ಮನುಷ್ಯಳು. ಮನಸ್ಸು ಬದಲಾಯಿಸಬಹುದು. ನನಗೆ ಪ್ರಯತ್ನಿಸೋಕ್ಕೆ ಅಪ್ಪಣೆ ಕೊಡಿ"

"ನಿನ್ನಿಷ್ಟ" ಎಂದ ಶ್ಯಾಮು.

ಯಾವುದೋ ಹೊರೆ ಇಳಿಸಿದಂತಾಯಿತು. ಎದೆಯಿಂದ ಶ್ಯಾಮುವಿಗೆ. ಎಷ್ಟು ವರ್ಷಗಳಿಂದ ಹೊರಗೆಡಹಲು ಯತ್ನಿಸಿದ ಭಾರ ಇಂದು ಇಳಿಸಲು ಸಾಧ್ಯವಾಗಿತ್ತು. ಯಾರಿಗಾಗಿ ಅವನು ಸೆದರುತ್ತಿದ್ದನೋ ಆ ಸುಮಿತ್ರೆಯೇ ಭಾರ ಇಳಿಸಲು ನೆರವಾಗಿದ್ದಳು. ದೈವದ ಆಟ ಅದೆಷ್ಟಾಶ್ಚರ್ಯ ? ಮತ್ತೆ ಸರೂ ತನ್ನ ಬಾಳಲ್ಲಿ ! ಅದು ಸಾಧ್ಯವೇ ? ಈಗ ಅವಳನ್ನು ಮೊದಲ ದೃಷ್ಟಿಯಲ್ಲಿ ನೋಡಬಲ್ಲೆನೆ ? ಸುಮಿತ್ರೆಗೆ ಎಲ್ಲೋ ಭ್ರಾಂತು, ಸರಳೆಗೇನು ತಿಳುವಳಿಕೆಯಿಲ್ಲವೆ ? ಮತ್ತೆ ಅವಳೇಕೆ ತನ್ನ ಬಳಿ ಸುಳಿಯುತ್ತಾಳೆ ? ಒಂದು

ನೆಲೆ ಕಂಡ ಅವಳ ಬಾಳಹಾದಿ ಮತ್ತೆ ನನ್ನಿಂದಲೇ ಡೊಂಕು ತಿರುಗುತ್ತದೋ ಏನೋ. ಭಗವಾನ್ ಅವಳಿಗೆ ನೆಮ್ಮದಿಕೊಡು ಎಂದುಕೊಂಡ.

ಅಲುಗಾಡದೆ ಮಲಗಿದ ಶ್ಯಾಮು, ಸುಮಿತ್ರಳನ್ನೇ ದಿಟ್ಟಿಸುತ್ತಿದ್ದ, ಅವಳೇನು ಮಾಡುತ್ತಾಳೆ ಎಂಬುದು ಅವನಿಗೆ ಮುಖ್ಯವಾಗಿತ್ತು.

ಸುಮಿತ್ರೆ ಸರಳೆಯು ಕಡೆಯ ಕಾಗದವನ್ನು ಕೈಯಲ್ಲಿ ಹಿಡಿದು ಚೂರು ಚೂರಾಗಿ ಹರಿಯುತ್ತಿದ್ದಳು. ಅವಳ ಮನ ಎಲ್ಲೋ ಕೆಲಸ ಮಾಡುತ್ತಿತ್ತು. ದೃಷ್ಟಿ, ಕೇಳಿದ ಕಥೆಯನ್ನು ಆದಿಯಿಂದ ಮತ್ತೆ ನೋಡತೊಡಗಿತು. ಆದರೆ ಕೈಗಳು ಮಾತ್ರ ಅವಳ ಯೋಚನೆಯ ತರಂಗಗಳು ಏಳುತ್ತಿರುವಂತೆ ಕಾಗದ ವನ್ನು ಚಕನಾಚೂರು ಮಾಡುತ್ತಿದ್ದವು,

ತಾನು ನಿಶ್ಚಯಿಸಿದ ದಾರಿ ಸರಿಯಾದುದೆ ? ಸರಳೆ ತಮ್ಮ ಮನೆಗೆ ಬರಲು ಒಪ್ಪುವಳೆ ? ಒಪ್ಪದಿದ್ದರೆ ಒಂದುವೇಳೆ ? ಸರಳೆಯನ್ನು ಬಿಟ್ಟು ಬಿಡಬೇಕು. ಇಲ್ಲ, ಅದು ಹೇಗೆ ಸಾಧ್ಯ ? ಸರಳಳನ್ನು ಬಿಡುವುದು ಸಾಧ್ಯವೇ ಇಲ್ಲ. ಹಾ....ಗಾ....ದರೆ. ಶ್ಯಾಮುವನ್ನು ? ಅದಂತೂ ಅಸಂಭವ. ಯಾವುದೋ ಹಳೆಯ ಘಟನೆಗಾಗಿ ದೇವರಂತಹ ಪತಿಯಿಂದ ದೂರವಾಗು ವುದೆ ? ಅಂದರೆ ಸರಳೆಯನ್ನು ಕಳೆದುಕೊಳ್ಳಬೇಕೆ ? ಸಾಧ್ಯವಿಲ್ಲ, ಈಗ ನಿರ್ಧರಿಸಿರುದ ದಾರಿಬಿಟ್ಟರೆ ಗತ್ಯಂತರವಿಲ್ಲ. ಶ್ಯಾಮು, ಸರಳಾ ಇಬ್ಬರೂ ತನಗೆ ಬೇಕಿದ್ದರೆ ಸ್ವಲ್ಪ ತ್ಯಾಗ ತನ್ನಿಂದಾಗಲೇಬೇಕು. ಇದೇನು ಮಹಾ ! ಪ್ರೇಮಕ್ಕಾಗಿ ಸರಳಾ, ತನ್ನ ಜೀವನವನ್ನೇ ಬಲಿದಾನ ಮಾಡಿ ನಿಂತಿರೋವಾಗ ತಾನು ಅವಳಿಗಾಗಿ ಅಷ್ಟು ಮಾಡಲಾರನೆ ? ಅದೂ ತನ್ನ ಪತಿಯಿಂದಾಗಿ ನಡೆದಿರುವ ಅನಾಹುತವನ್ನು ತಾನು ಸರಿಪಡಿಸಬೇಡವೆ? ಇಂದೇ ಹೋಗಿ ಸರಳಕ್ಕನನು ಕರೆತರಬೇಕು.

ಏನು ದೈವವೋ ! ತನ್ನ ಸಂಸಾರವೇ ಬೇಕಾಯಿತೆ ಅದರ ಚೆಲ್ಲಾಟಕ್ಕೆ! ಸರಳೆಯ ಪರಿಚಯುವೇ ತನಗೆ ಆಗದೆ ಇದ್ದಿದ್ದರೆ ! ಇಂದು ಮೂವರಮನಸ್ಸಿ ನಲ್ಲಿ ಭೂಕಂಪವೇಳುತ್ತಿರಲಿಲ್ಲ. ಹಾಗಾದರೆ ಸರಳೆಯ ಪರಿಚಯ ಪಶ್ಚಾತ್ತಾಪ ವೇನು ? ಛೆ! ಉಂಟೆ ! ಅವಳ ಪರಿಚಯದಿಂದ ತನಗೊಬ್ಬಳು ಆತ್ಮೀಯಳು ಸಿಕ್ಕಂತಾಗಲಿಲ್ಲವೆ ? ಕಾಗದದ ಚೂರುಗಳೆಲ್ಲಾ ಕೈಯಲ್ಲಿ ಹಿಡಿಮಾಡಿ ಎದ್ದಳು. ಸರಳೆಯ ಫೋಟೋವನ್ನು ಟೇಬಲ್ಲಿನಲ್ಲಿದ್ದ ತನ್ನ ಪರ್ಸಿನಲ್ಲಿ ಭದ್ರಪಡಿಸಿ

ಕೋಣೆಯಿಂದ ಹೊರಗೆ ಹೋದಳು. ಶ್ಯಾಮುವಿನ ದೃಷ್ಟಿ ಸುಮಿತ್ರೆಯನ್ನು ಅನುಸರಿಸಿತೇ ವಿನಃ. ಅವನು ಅಲ್ಲಿಂದ ಕದಲಲಿಲ್ಲ.

ಹದಿನೈದು ನಿಮಿಷಗಳಾದರೂ ಸುಮಿತ್ರೆ ಹಿಂತಿರುಗಿ ಬರಲಿಲ್ಲ. ಛಂಗನೆ ಎದ್ದು ಹೋದ ಶ್ಯಾಮು. ಸುಮಿತ್ರಾ ಎಲ್ಲೂ ಕಾಣಲಿಲ್ಲ. ಬಚ್ಚಲು ಮನೆಯ ಬಾಗಿಲು ಮುಚ್ಚಿತ್ತು. ಸುಮಿತ್ರ ಒಳಗಡೆ ! ಶ್ಯಾಮುವಿನ ಮನಸ್ಸು ಅಧೀರ ವಾಯಿತು. ಏನಾದರೂ ಮಾಡಿಕೊಂಡು ಬಿಡುವಳೆ ಅವಳು ? ಅವಳು ಅಷ್ಟು ದುರ್ಬಲಳಲ್ಲ. ಆದರೂ ಇಂತಹ ವಿಷಯಗಳಲ್ಲಿ ಹೇಗೊ ?

"ಸುಮಿತ್ರಾ" ಎಂದು ಬಾಗಿಲು ತಟ್ಟಿದ, ಬಾಗಿಲು ತೆಗೆದು ನಸು ನಕ್ಕಳು. "ಸ್ವಲ್ಪ ಮುಖ ತೊಳೆದುಬನ್ನಿ. ಊಟ ಮಾಡೋಣ" ಎಂದೂ ಅಂದಳು.

ಅಬ್ಬ ! ಅವಳಿಗೆಂತಹ ಧೈರ್ಯವಿದೇ. ಅಚ್ಚರಿಗೊಂಡ. ತನಗೆ ಊಟ ವೇನೂ ಬೇಕಿರಲಿಲ್ಲ. ಆದರೆ ಇಂದು ಸುಮಿತ್ರೆಯ ಮನಸ್ಸಿಗೆ ಅಹಿತವಾದು ದೇನನ್ನೂ ಮಾಡಲು ಇಷ್ಟವಿರಲಿಲ್ಲ. ಮೂಕ ಬಸವನಂತೆ ಅವಳನ್ನು ಹಿಂಬಾಲಿಸಿದ ಅವನಿಗೆ ಊಟ ಸೇರಲಿಲ್ಲ. ಕಾರಣ ಕೇಳುವ ಅವಶ್ಯಕತೆ ಇರಲಿಲ್ಲ. ಅದರಿಂದ ಸುಮಿತ್ರೆ ಬಲವಂತ ಮಾಡಲಿಲ್ಲ. ತಾನೂ ಊಟದ ಶಾಸ್ತ್ರ ಮುಗಿಸಿ ಅಡಿಗೆಮನೆ ಬಾಗಿಲು ಮುಚ್ಚಿ ಬಂದಳು.

ಶ್ಯಾಮು ಪರಧ್ಯಾನವಾಗಿ ಕುಳಿತಿದ್ದ. ಸುಮಿತ್ರೆ ಧಾನವಾಗಿ ಹತ್ತಿರ ಬಂದು ಅವನ ಪಕ್ಕದಲ್ಲಿ ಕುಳಿತು ಅವನ ಬೆನ್ನಮೇಲೆ ಕೈಯಿಟ್ಟು—"ಎಲ್ಲಾ ಸರಿಹೋಗುತ್ತೆ, ಬೇಸರ ಬೇಡ. ಈಗ ಮಲಕ್ಕೊಳ್ಳಿ ರಾಜ. ನೀವು ರಾತ್ರಿ ಯೆಲ್ಲಾ ಎಚ್ಚೆತ್ತಿದ್ದೀರಿ" ಎಂದಳು.

"ಸುಮಿತ್ರಾ, ನನ್ನನ್ನು "ರಾಜ" ಅನ್ಬೇಡ ಸುಮಿತ್ರಾ, ಆ ಹೆಸರನ್ನು ನಾನೆಂದೋ ತ್ಯಜಿಸಿಬಿಟ್ಟಿದ್ದೀನಿ. ಕೆಟ್ಟತನದ ರಾಜ ಸತ್ತು ಇಂದು ನಿರ್ಮಲ ಶ್ಯಾಮು ಮಾತ್ರ ಉಳಿದಿದ್ದಾನೆ."

"ಸರಿ ಎಂದಳು ಅಷ್ಟೆ.

ಶ್ಯಾಮು ಮಲಗಿದ. ಅವನ ಮೈಮೇಲೆ ಕೈಯಾಡಿಸುತ್ತಾ. ಮಗು ವನ್ನು ರಮಿಸುವಂತೆ ನಿದ್ದೆ ಮಾಡಿಸಿದಳು. ಶ್ಯಾಮು. ಸರಳಾ ಇಬ್ಬರೂ ಕೈ ಕೈ ಹಿಡಿದು ಓಡಿದರು. ಸ್ವಲ್ಪ ಹೊತ್ತಾದನಂತರ ಶಾಮು ಅವಳ

ಕೈಬಿಟ್ಟು "ಜೂಟ್" ಎಂದು ಓಡಿದ. ಸರಳೆ ಹಿಡಿಯಲು ಹೊರಟಳು. ಅವನು ಸಿಗಲಿಲ್ಲ. ದೂರ ದೂರ ಮೋಡಗಳಲ್ಲಿ ಅವಿತುಕೊಂಡ. ಒಮ್ಮೆ ಕಾಣಿಸಿದರೆ, ಒಮ್ಮೆ ಅವಿತುಕೊಂಡ. ಸರಳೆಗೆ ಬೇಸರ ಬಂತು. ನಿಂತು ದಣಿವಾರಿಸಿಕೊಂಡಳು. ಅವಿತುಕೊಂಡಿದ್ದ ಶ್ಯಾಮು ಬಂದು ನೋಡಿದ. ಸರಳಾ ಕಾಣಲಿಲ್ಲ. ಅವಳಿಗಾಗಿ ತಡವುತ್ತಾ ಮುಂದೆ ಮುಂದೆ ಹೋಗುತ್ತಾ ಉರುಳಿದ ಕೆಳಗೆ. ಅವನನ್ನು ಎಬ್ಬಿಸಿದರು ಯಾರೋ. "ಸರಳಾ ಎಲ್ಲಿ?" ಎಂದ. ಎಬ್ಬಿಸಿದ ಹೊಸ ಹುಡುಗಿ, ಮೆಟ್ಟಲು ಮೆಟ್ಟಲಾಗಿದ್ದ ಮೋಡಗಳ ಮೇಲೆ ತನ್ನನ್ನು ಕರೆದೊಯ್ಯುತ್ತಿದ್ದಳು. ಸರಳೆ ಎಲ್ಲೂ ಕಾಣಲಿಲ್ಲ. 'ನನ್ನ ಸರಳಾ ಎಲ್ಲಿ?' ಮತ್ತೆ ಕೇಳಿದ. ಸುಮಿತ್ರಾ ಕೈಹಿಡಿದಿದ್ದವಳು ಮಾತನಾಡದೆ ಅಂತರಿಕ್ಷ ತೋರಿಸಿದಳು. ದೂರದಲ್ಲಿ ಸರಳಾ ನಗುತ್ತಾ ಕೈಚಾಚಿ ನಿಂತಿದ್ದಳು. ಸುಮಿತ್ರಾ ಅವನನ್ನು ಎಳೆದುಕೊಂಡು ಹೋಗುತ್ತಲೇ ಇದ್ದಳು. ಸರಳಾ ಇನ್ನೂ ಮೇಲೆ ಹೋದಳು. ಅವನೂ ಸುಮಿತ್ರಾ ಇನ್ನೂ ಮೇಲೆ ಹೋದರು, ಎಷ್ಟಾದರೂ ಸರಳಾ ಅವರಿಗಿಂತ ಮೇಲೆ ಹೋಗುತ್ತಿದ್ದಳು. "ಇನ್ನು ಸಾಧ್ಯವಿಲ್ಲ ಸುಮಿತ್ರಾ. ಅಲ್ಲಿ ನೋಡು, ಅವಳೆಲ್ಲಿಗೆ ಹೋಗಿದ್ದಾಳೆ. ಆಕಾಶದಲ್ಲಿ ನಮಗೆ ನಿಲುಕದ ಚುಕ್ಕಿಯಾಗಿಬಿಟ್ಟಿದ್ದಾಳೆ. ನಾವು ಹಿಂತಿರುಗೋಣ' ಎಂದ. "ಹೌದು, ನಮ್ಮ ಪ್ರಯತ್ನ ವ್ಯರ್ಥ, ಅವಳು ನಿಲುಕದ ನಕ್ಷತ್ರ" ಎಂದಳು.

ಶಾಮುವಿಗೆ ಎಚ್ಚರವಾಯಿತು. ಎಷ್ಟೊಳ್ಳೆಯ ಕನಸು. ಅಂತ್ಯ ಮಾತ್ರ ದುಃಖಮಯ. ತಾನಿನ್ನೂ ಮೋಡಗಳ ನಡುವೆ ಮೇಲೆ ಮೇಲೆ ಹೋಗುತ್ತಿದ್ದಂತೆಯೇ ಭಾಸವಾಯಿತು ಅವನಿಗೆ. ಆದರೆ ಮರದ ಮಂಚದ ಮೇಲಿಟ್ಟ ಕೈ ತಿಳಿಸಿತು ಅವನ ಕನಸನ್ನು. ವಾಸ್ತವ ಜಗತ್ತಿಗೆ ಇಳಿದ.

ಗಂಟೆ ಐದಾಗಿತ್ತು. ಸುಮಿತ್ರ ತನ್ನ ಎಲ್ಲಾ ಕೆಲಸವನ್ನೂ ಹುರುಪಿನಿಂದ ಮಾಡಿ ಮುಗಿಸಿದ್ದಳು. ರಾತ್ರಿಯ ಅಡಿಗೆಯನ್ನು ಮಾಡಿಟ್ಟು, ತಲೆ ಬಾಚಿಕೊಳ್ಳಲು ಬಂದಾಗ ಶ್ಯಾಮು ಎಚ್ಚರವಾಗಿದ್ದುದನ್ನು ನೋಡಿದಳು. "ಎಳ್ಳೀರಾ? ಗಂಟೆ ಐದಾಯ್ತು" ವಿನಯವಿಂದ ಕೇಳಿದಳು ಹೆಂಡತಿ ಗಂಡ

ನನ್ನ ಎಬ್ಬಿಸಿದಂತೆ ಇರಲಿಲ್ಲ. ಆಗಂತುಕನನ್ನು ಪರಸ್ತ್ರೀ ಎಬ್ಬಿಸುವಂತಿತ್ತು, ಅಥವಾ ಅವನಿಗೆ ಹಾಗನ್ನಿಸಿತು.

"ಇಗೋ ಎದ್ದೆ. ಎದ್ದರೆ ಏನು ಕೊಡುತ್ತಿ?" ಮುಂಚಿನ ಶ್ಯಾಮು ವಾದ.

"ತಿಂಡಿ ಏನೂ ನಾನು ಮಾಡಲಿಲ್ಲ. ಕಾಫಿ ಮಾತ್ರ ತಗೊಳ್ಳಿ" ಎಂದು ಕಾಫಿ ತಂದುಕೊಟ್ಟಳು. ಎಂದಿನ ಸರಸ ಮಾಯವಾಗಿತ್ತು.

'ನೀವು ಹೋಗಿ ಮಕ್ಕಳನ್ನು ಕರೆದುಕೊಂಡು ಬನ್ನಿ. ನಾನು ಈ ಪಾತ್ರೆಗಳನ್ನು ಸರಳಾಗೆ ತಲಪ್ಸಿ ಬರ್ತೀನಿ" ಎಂದು ಹೊರಟಳು.

'ಈವತ್ತೇ ಯಾಕೆ ಹೋಗ್ತಿ? ಬೇಡ' ಎಂದು ಹೇಳಬೇಕೆಂದು ಬಾಯಿ ತೆಗೆದ. ಶ್ಯಾಮುವಿಗೆ ಅವಳ ಮುಖನೋಡಿದ ಮೇಲೆ ಧೈರ್ಯ ಬರಲಿಲ್ಲ. ಆ ಪ್ರೇಮದ ಹೃದಯದಲ್ಲಿ ತಾನು ಎಂತಹ ಆಂದೋಳನ ಎಬ್ಬಿಸಿದ್ದೇನೆ ಆದರೆ ಪರ್ಯಾವಸಾನವೇನೋ ? ಎಂಬ ದಿಗಿಲು ಆಯಿತು ಅವಳಿಗೆ.

"ಹೋಗಿ ಬಾ ಸುಮಿ. ಆದರೆ ಬೇಗಬಾ" ಎಂದಷ್ಟೆ ಹೇಳಿ ಕಳುಹಿಸಿದ.

## ೨೩

ಆಫೀಸಿನಿಂದ ಬಂದ ಸರಳಾಗೆ, ತನ್ನ ಬೆನ್ನ ಹಿಂದೆಯೇ ಬಂದ ಸುಮಿತ್ರ ಳನ್ನು ನೋಡಿ ಆಶ್ಚರ್ಯವಾಯಿತು. ಅವಳ ಕೈಯಲ್ಲಿನ ಪಾತ್ರೆ ನೋಡಿ—"ಪಾತ್ರೆ ತಲಪೋಕ್ಕೆ ಇಷ್ಟು ಆತುರ ಯಾಕೆ ಸುಮಿತ್ರಾ?" ಎಂದಳು.

"ನಿನ್ನ ಮನೆಯದೂ ಸಹ ಅಲ್ವಲ್ಲ, ರಾಜೀವನ ಮನೆಯವರಿಗೆ ಅವುಗಳ ಅಗತ್ಯ ಬೀಳಬಹುದೂಂತ ತಂದೆ" ಅಷ್ಟೇ ಮಾತನಾಡಿ ಸುಮ್ಮನಾದಳು.

"ಯಾಕೆ ಸುಮಿತ್ರಾ, ಏನೋ ಒಂತರಾ ಇದ್ದೀಯಾ? ಮಕ್ಕಳು ಚೆನ್ನಾಗಿದ್ದಾರೆ ತಾನೆ? ನಿನ್ನ ರಾಜಾನೂ ಹುಷಾರಾಗಿದ್ದಾರಾ? ಮತ್ತೆ ನಿನ್ನೆ ತಡಳಯ್ತು ಅಂತ ಏನಾದ್ರೂ...."

"ಇಲ್ಲ. ಕಾಯ್ತಾ ಇದ್ರು. ಏನೂ ಅನ್ನಲಿಲ್ಲ."

"ಹಾಗಾದ್ರೆ ನಿಂಗೇ ಮೈಯಲ್ಲಿ ಚೆನ್ನಾಗಿದ್ದ ಹಾಗಿಲ್ಲ. ಕೂತ್ಕೊ ಬಾ. ಏನ್ಸಮಾಚಾರ ?"

ಹೇಳಿ ಬಿಡಲೆ ? ಛೆ, ಏನೆಂದು ಹೇಳುವುದು ? ಹೇಗೆ ಹೇಳುವುದು? ಅವಳಿಗೆ ಶಾಕ್ ಆಗಿಬಿಟ್ಟರೆ ! ಬೇಡ. ಇನ್ನೂ ತಡೆಯೋಣ. ಕಾಲವೇ ತಿಳಿಸಲಿ.

"ಏನಿದು ಸುಮಿತ್ರಾ, ವಿಚಿತ್ರವಾಗಿದ್ದೀ ಈವತ್ತು. ನನ್ನ ಹತ್ರಾನೂ ಮುಚ್ಚುಮರೇನಾ? ಹೇಳಬಾರದು ಅಂತಿದ್ರೆ ಬೇಡ. ಆದ್ರೆ ನನ್ಹತ್ರ ಹೇಳಿದ್ರೆ ಯಾವ ಹಾನೀನೂ ಆಗಲಾರದು. ನಿನ್ನ ಸಂಕಟ ಸ್ವಲ್ಪ ಪರಿಹಾರ ಆದ್ರೂ ಆಗ್ಬಹುದು."

ಊಹುಂ. ಸುಮಿತ್ರ ಮೌನ. ನಡುಗುತ್ತಿದ್ದಳು. ಮೇಲಿಂದ ಮೇಲೆ ಪೆಟ್ಟುಗಳನ್ನೇ ತಿನ್ನುತ್ತಿದ್ದ ಸರಳಾಗೆ, ಅಭಿಮಾನಿ ಸರಳಾಗೆ, ನಾನೇ ನಿನ್ನ ಪ್ರಿಯತಮ ರಾಜನ ಮಡದಿ ಎಂದು ಯಾವ ಬಾಯಲ್ಲಿ ಹೇಳುವುದು ಎಂದು ಅವಳಿಗೆ ತೋಚದಾಯಿತು.

"ಕ್ಷಮಿಸು ಸುಮಿತ್ರಾ, ನಾನೇನೊ ಆತ್ಮೀಯಳೂಂತ ನನ್ನ ಕತೆ ಎಲ್ಲಾ ಹೇಳಿಬಿಟ್ಟೆ. ನೀನು ನನ್ನನ್ನು ಆತ್ಮೀಯರ ಗುಂಪಿನಲ್ಲಿ ಸೇರಿಸಿಲ್ವೋ ಏನೋ, ನನ್ಗೆ ಹೇಳದಿದ್ರೆ ಬೇಡಬಿಡು. ಯೋಚನೆ ಮಾಡ್ಬೇಡ. ಸ್ವಲ್ಪ ಧೈರ್ಯ ತಂದುಕೋ. ಸಂಭಾಳಿಸಿಕೋ ಎಲ್ಲವೂ ಸರಿ ಹೋಗುತ್ತೆ." ಎಂದು ಒಳಕ್ಕೆ ಎದ್ದು ಹೋದಳು.

ಅವಳನ್ನೇ ಹಿಂಬಾಲಿಸಿದ ಸುಮಿತ್ರಾ ದೀನವಾಗಿ–"ನಿನ್ನನ್ನು ಆತ್ಮೀಯರ ಗುಂಪಿನಲ್ಲಿ ಸೇರಿಸದೆ ಇದ್ರೆ ನನಗೆ ಬೇರೆ ಆತ್ಮೀಯರುಯಾರಿದ್ದಾರೆ ಸರಳಕ್ಕ? ನಿನ್ನೆಯ ದಿನ ನಾನು ತಡವಾಗಿ ಮನೇಗೆ ಹೋದದ್ರಿಂದ 'ಸ್ನೇಹಿತರು ಸ್ನೇಹಿತರು ಅಂತ, ಗಂಡ ಮಕ್ಕಳನ್ನೂ ದೂರಮಾಡಿ ನೀ ಹೋಗ್ತಿ. ಅವರು ಒಂದಿನಾನಾದ್ರೂ ನಿನ್ನ ಮನೇಕಡೆ ಬರ್ತಾರಾ ? ಸ್ನೇಹ ಹಿಂತಿರುಗಿಸೋ ಹಾಗಿರ್ಬೇಕು. ನಿನಗೆ ಆಕೆ ಪರಿಚಯ ಆದ ದಿನದಿಂದ, ನೀನು ಆಕೆ ಮನೇಗೆ ಅಲೆಯೋದೇ ಆಯ್ತು. ಒಂದ್ಸಲಾನಾದ್ರೂ ಆಕೆ ಬಂದಿದ್ದಾಳೇನು? ಅಂತ ಸ್ವಲ್ಪ ಖಾರವಾಗಿಯೇ ಅಂದ್ಬಿಟ್ರು ಸರಳಕ್ಕ, ಅದಕ್ಕೆ ನೀನು ಒಂದ್ಸಲ

ನಮ್ಮನೇಗೆ ಬಂದು ಹೋಗ್ತೀಯಶಾ ?" ಎಂದೂ ಸುಳ್ಳು ಹೇಳದ ಸುಮಿತ್ರಾ ಇಲ್ಲದ ಸುಳ್ಳೆಲ್ಲಾ ಕಲ್ಪಿಸಿ ಹೇಳಿದಳು. ಸರಳೆಗೆ ಆಘಾತವಾಗಬಾರದೆಂದು ಸುಳ್ಳು ಕಲ್ಪನೆ ಮಾಡಿದ್ದಳು.

"ಖಂಡಿತ ಬರ್ತೀನಿ ಸುಮಿತ್ರಾ. ಆತ ಹೇಳೋದು ಸರೀನೇ. ಪ್ರತಿ ಒಬ್ಬನಿಗೂ ಅಭಿಮಾನ ಇರುತ್ತೆ, ಗೌರವ ಮಾರ್ಯಾದೇನೂ ಇರುತ್ತೆ. ಅವನ್ನೆಲ್ಲಾ ಕೊಟ್ಟು ತೋಗೋಬೇಕು. ನನ್ಗೆ ಪುರಸತ್ತಿಲ್ಲದೆ ನಿನ್ನನ್ನು ಬಾ ಅಂದೇನೇವಿನಾ ನಾನು ಬರಬಾರ್ದು ಅಂತ ಅಲ್ಲ. ಮುಂದಿನಸಲ ನೀ ಬರ್ಬೇಡ. ನಾನೇ ಬರ್ತೀನಿ. ಅದೂ ನಿನ್ನ ರಾಜ ಮನೇಲಿರೋವಾಗ್ಲೇ ಬರ್ತೀನಿ. ನಾನೂ ನೋಡ್ಬೇಕು ಆತನನ್ನು, ನೋಡಿಯೇ ಇಲ್ವಲ್ಲ."

ಮನಸ್ಸಿನಲ್ಲೇ ಚಡಪಡಿಸಿದಳು ಸುಮಿತ್ರಾ "ನೀನು ನೋಡಿಯೇ ಇಲ್ಲವೆ ಸರೂ ? ನಿಜ. ಈಗಿನ ಶ್ಯಾಮುವನ್ನು ನೀನು ನೋಡಿಲ್ಲ. ಹಳೆಯ ರಾಜನಲ್ಲ ಈಗ."

"ಅಂದ್ಹಾಗೆ ನಿನ್ನ ಗಂಡ ತುಂಬಾ ಹ್ಯಾಂಡ್‌ಸಂ (ಸುಂದರ) ಆಗಿದ್ದಾರಾ ಸುಮಿತ್ರಾ?" ಕುತೂಹಲದ ಪ್ರಶ್ನೆ. ಅದರಲ್ಲಿ ಯಾವ ಆಸೆಯೂ ಇರಲಿಲ್ಲ.

"ಆ ಪ್ರಶ್ನೆ ನನ್ನನ್ನು ಕೇಳಿದ್ರೆ ಹೇಗೆ? ಹೇಳಿ ಕೇಳಿ ನಾನವರ ಹೆಂಡ್ತಿ. ಹೊಗಳಿಕೊಂಡೇ ಹೊಗಳಿಕೋಳ್ತೀನಿ. ನೀನೇ ನೋಡಿ ಹೇಳುವೆಯಂತೆ" ಅತಿ ಪ್ರಯಾಸದಿಂದ ಉತ್ತರಿಸಿದಳು.

"ನಿನ್ನ ಮಗಳು ಸರಳಾ ಬಹಳ ಚೆನ್ನಾಗಿದ್ದಾಳೆ. ನಿನ್ನ ಹೋಲಿಕೆ ಸ್ವಲ್ಪಾನೂ ಇಲ್ಲ. ಆದ್ದರಿಂದ ಆತ ಚೆನ್ನಾಗೇ ಇರಬೇಕೂಂತ ತೀರ್ಮಾನಿಸಿದ್ದೆ."

"ಜನ ಹಾಗಾಂತಾರಪ್ಪಾ."

"ತಪ್ಪು ತಿಳೀಬೇಡ ಸುಮಿತ್ರಾ, ಆತನ ವರ್ಣನೆ ಕೇಳಿದೇಂತ."

"ಅದರಲ್ಲೇನಿದೆ ಬಿಡು ಸರಳಕ್ಕ" ಎಂದು ಅಂದರೂ ಅವಳ ಮನಸ್ಸು ಕೂಗಿತು 'ಅವರ ವಿಷಯ ಕೇಳಲು ನಿನಗಧಿಕಾರವಿಲ್ಲವೆ ? ನೀನು ಅವರ ಸರ್ವಾಧಿಕಾರಿಣಿ ಸರಳಾ'

"ಇರಲಿ, ಯಾವತ್ತು ಬರ್ತಿ ನಮ್ಮನೇಗೆ" ಆದಷ್ಟು ಬೇಗ ಬರಲಿ ಎಂಬ ಆತುರದಿಂದ ಕೇಳಿದಳು ಸುಮಿತ್ರಾ,

"ವಾರದ ದಿನಗಳಲ್ಲಿ ನಾ ಬರಲಾರೆ. ಇಡೀ ದಿನದ ಕೆಲ್ಸದಿಂದ ಸುಸ್ತಾಗಿ ರೋದೊಂದು, ಜೊತೆಗೇ ಪೂಜೆ, ವೀಣೆ ಯಾವುದನ್ನೂ ನಾನು ಬಿಡಲಾರೆ."

"ಹಾಗಿದ್ರೆ ಈ ಭಾನುವಾರ ?"

"ಈ ಭಾನುವಾರ ಆಗಲಾರದು. ಆಫೀಸಿನಲ್ಲಿ ಬಹಳ ಕೆಲ್ಸ ಇದೆ. ನೀನು ಬರೋದು ಕೂಡಾ ಬೇಡ್ವೋ ಏನೋ. ಮುಂದಿನ ಭಾನುವಾರ ಖಂಡಿತ ತಪ್ಪದೆ ಬರ್ತೀನಿ. ಸರೀನಾ ?"

"ಸರಿಯ್ಹಾಗಿ ಸರಿ. ಈ ಪಾತ್ರೆ ಕಳಿಸ್ಬಿಡು ಸರಳಕ್ಕಾ. ನಾನಿನ್ನು ಬರ್ತೀನಿ. ಇಲ್ಲಿಗೆ ಬಂದಿರೋ ವಿಷಯ ಅವ್ರಿಗೆ ತಿಳೀದು. ನಾ ಬೇಗ ಹೋಗ್ಬೇಕು."

"ಕಾಫಿ ಕುಡಿಯೋಷ್ಟು ಟೈಂ ಇರತ್ತೆ. ಕುಡಿದು ಬಿಟ್ಟು ಹೋಗು. ನಿನ್ನ ಗಂಡನಿಗೆ ಹೇಳು ಸುಮಿತ್ರಾ–'ಸರಳಾ ಎಲ್ಲರ ಹಾಗಲ್ಲ ಬರ್ತೀನೀಂದಮೇಲೆ ಖಂಡಿತಾ ಬರ್ತಾಳೇಂತ'. ಅವರಿಗೆ ನನ್ನ ವಿಷಯ ನೀನು ಸರಿಯಾಗಿ ಹೇಳಿಲ್ಲ"

ಸರಳಾ ಬರುವುದಕ್ಕೆ ಒಪ್ಪಿದ್ದರೂ ಸುಮಿತ್ರೆಗೆ ಸಂತೋಷವಾಗಲಿಲ್ಲ. ಅವಳು ಬಂದುದು ಸರಳೆಯನ್ನು ಶ್ಯಾಮುವಿಗೆ ಒಪ್ಪಿಸಲು. ಆ ದೊಡ್ಡ ಹುಡುಗಿಯ ಎದುರಿಗೆ ಏನು ಹೇಳಬೇಕೆಂದು ತೋರದೆ ಮೂಕಳಾದಳು. ಭಾರವಾದ ಹೃದಯದಿಂದ ಬಂದಂತೆಯೇ ಹಿಂತಿರುಗಿದಳು, ಎಲ್ಲವನ್ನೂ ಸಮಯ ಪರಿಷ್ಕರಿಸಲಿ ಎಂದು.

"ಓಹೋ ಡಾಕ್ಟ್ರಮ್ಮಾವ್ರು ಇಷ್ಟು ದಿನ ಸರ್ಕೀಟು ಹೋಗಿದ್ರಿ ಅಂತ ಕಾಣುತ್ತೆ. ಬರ್ಬೇಕು, ಬರ್ಬೇಕು"–ಆಹ್ವಾನಿಸಿದಳು ಸರಳಾ. ಬಂದಾಗ ಇಂದಿರ ನಕ್ಕಳು ಮಾತ್ರ.

"ಏನು ಇಂದೂ, ಇಷ್ಟು ದಿನ ಕಾಣಲಿಲ್ಲ ?"

"ಗುಡ್ ನ್ಯೂಸ್ ಸರಳಾ"

"ಏನಮ್ಮ ಅಂತಹುದು ?"

"ನೀನೇ ಊಹಿಸು, ನೋಡೋಣ,"

"ಶ್ರೀಧರ ಊರಿಗೆ ಬಂದಿದ್ದಾರೆ."

"ಊಹುಂ"

"ಹಾಗಾದರೆ ಮುರಳಿ"

"ಅಲ್ಲಾ"

"ಅಪ್ಪಯ್ಯಂಗೆ ಮದ್ವೆ ?" ಹುಬ್ಬು ಹಾರಿಸಿ ಕೇಳಿದಳು ಸರಳಾ.

'ನಿನ್ನ ತಲೆ, ಮದುವೇಗೇ ಮೂರು ಮಕ್ಕಳಿರೋ ಅಪ್ಪಯ್ಯಂಗೆ ಈಗ ಮದ್ವೆ ಅಂತೀಯಲ್ಲಾ, ಪೆದ್ದಿ ನೀನು."

"ಹಾಸ್ಯಕ್ಕೆ ಹೇಳಿದೆ ಇಂದೂ, ನಿನ್ನ ಮದುವೆ ನಿಷ್ಕರ್ಷೆ ಆಯಿತು. ಹೌದಾ ?"

"ಕರೆಕ್ಟ್. ಮುಂದಿನ ತಿಂಗಳು, ಅಂದರೆ ಫೆಬ್ರವರಿ ಹನ್ನೊಂದಕ್ಕೆ."

"ಏನು ! ಫೆಬ್ರವರಿ ಹನ್ನೊಂದಕ್ಕಾ ? **Very Hearty Congrats.** ಸರಿ, ಎಲ್ಲಿ ಮತ್ತೆ ಇನ್ವಿಟೇಷನ್ ?"

"ತೊಗೋ ಸರೂ. ಖಂಡಿತಾ ಬರ್ಬೇಕು."

"ನೀನು ಹೇಳ್ಬೇಕಾ ಹೇಳು. ಮೂರು ದಿನ ಮುಂಚೆ ಹಾಜರಾಗದಿದ್ರೆ ಕೇಳು. ಈ ಸಮಯಕ್ಕೇ ಕಾಯ್ತಾ ಇದ್ದೀನಿ ಸದ್ಯ."

"ಅದೇನಪ್ಪಾ ನನ್ನ ಮದ್ವೆ ಸಮಯ ಕಾಯುವಂತಾದ್ದು ನಿನ್ಗೆ ?"

"ಊಂ. ಅವತ್ತು ಒಪ್ಪಿಕೊಂಡ್ಯಲ್ಲಾ, ನಿನ್ನ ಮಕ್ಕಳಲ್ಲಿ ಒಂದನ್ನ ನನ್ಗೆ ಕೊಡ್ತೀನಂತ"

"ಓ ಅದಕ್ಕಾ–ಆಗಲಿ" ಮುಖ ಓಕುಳಿಯಾಯಿತು ಇಂದಿರೆಗೆ. ಹಿಂದೆ ಇಂತಹ ಮಾತು ಬಂದಾಗ ಹಾಸ್ಯವಾಗಿ ತಳ್ಳಿಹಾಕುತ್ತಿದ್ದ ಇಂದಿರಾ, ಇಂದು ಮದ್ವೆ ಹೆಣ್ಣಾಗಿ ನಿಂತ ಅವಳು ನಾಚಿದುದರಲ್ಲಿ ಅಚ್ಚರಿಯೇನಿಲ್ಲ.

"ನಾನಿನ್ನು ಬರ್ಲಾ ಸರೂ ?"

"ಸ್ವಲ್ಪ ತಾಳು" ಎಂದು ಕುಂಕುಮ ತಂದು ಅವಳ ಹಣೆಗೆ ಹಚ್ಚಿ– "ಸೌಭಾಗ್ಯವತಿಯಾಗು ಇಂದೂ" ಎಂದು ಹರಸಿ ಲಗ್ನಪತ್ರಿಕೆ ಕೈಗೆ ತೆಗೆದುಕೊಂಡಳು. ಹೊರಬಿದ್ದ ಇಂದಿರಾ ಹಿಂತಿರುಗಿ 'ಹಾಗೇ ಸರಳಾ, ಸುಮಿತ್ರಾ ನಿನ್ನ ಮನೇಗೆ ಆಗಾಗ ಬರ್ತಾ ಇರ್ತಾಳಲ್ವಾ ? ಅವಳಿಗೆ ಇದನ್ನು ಕೊಟ್ಟು ಬಿಡ್ತೀಯಾ ?" ಎಂದು ಮತ್ತೊಂದು ಲಗ್ನಪತ್ರಿಕೆಯನ್ನು ಸರಳೆಯ ಕೈಗೆ

ಕೊಟ್ಟಳು. ಕುತೂಹಲಕ್ಕಾಗಿ ಸರಳೆಯ ದೃಷ್ಟಿ ಅದರ ಮೇಲೆ ಹೋಯಿತು. ಆದರ ಮೇಲೆ "ಶ್ರೀಮತಿ ಮತ್ತು ಶ್ರೀ ಶ್ಯಾಮಸುಂದರ್" ಎಂದು ಬರೆದಿತ್ತು.

ಸರಳೆಯ ಕೈ ನಡುಗಿತು—"ಯಾರದೋ ಕೊಟ್ಟು ಬಿಟ್ಟಿದ್ದೀ ಇಂದಿರಾ, ಇದು ಸುಮಿತ್ರೆಯದಲ್ಲ"--ಹಿಂತಿರುಗಿಸಿ ಕೊಡಲು ಹೋದಳು.

"ಇಲ್ಲ ಸರೂ, ಸುಮಿತ್ರೆಯ ಗಂಡನೇ ಶ್ಯಾಮಸುಂದರ್ ಅಂತ."

"ಏನು! ! ! !" ಅಚೇತನಳಾದಳು ಸರಳಾ. ಇಂದಿರಾ ಗಮನಿಸಲಿಲ್ಲ.

"ಹೌದು ಸರೂ, ನಾನು ನಿನ್ಗೆ ಹೇಳಲೇ ಇಲ್ಲಾಂತ ಕಾಣುತ್ತೆ. ಒಂದು ದಿನ ರಮೇಶ್ ಅವರಿಬ್ಬರನ್ನೂ ನೋಡಿದ್ರಂತೆ. ಶ್ಯಾಮಸುಂದರ್ ರಮೇಶ್‌ಗೆ ಗೊತ್ತಂತೆ. ಅಷ್ಟೇನೂ ಒಳ್ಳೇಮನುಷ್ಯ ಅಲ್ಲವಂತೆ.ಸುಮಿತ್ರೆ ಎಷ್ಟೊಳ್ಳೇವ್ಳು. ಪಾಪ ! ಅವಳಿಗೆ ಇಂತಾವ್ನೇ ಅನ್ನಿಸುತ್ತೆ" ಒಂದೊಂದು ಮಾತೂ ಸರಳೆಯ ಮೆದುಳು, ಮನಸ್ಸುಗಳ ಮೇಲೆ ಪೆಟ್ಟು ಹಾಕುತ್ತಿತ್ತು. ಇಂದಿರಾ ಹೇಳುತ್ತಲೇ ಇದ್ದಳು.

"ಕಾಲೇಜಲ್ಲಿ ಓತ್ತಾ ಇದ್ದಾಗ ಯಾರೋ ಫ್ರೆಂಡ್ ಇದ್ಲಂತೆ. ಪಾಪ, ಅವಳ ಜೊತೆ ಹತ್ತು ಹನ್ನೆರಡು ವರ್ಷ ಓಡಾಡಿ ಕೈಬಿಟ್ನಂತೆ. ಆಮೇಲೆ ಯಾರೋ ಕ್ರಿಶ್ಚಿಯನ್ ಹುಡುಗೀಂತೆ, ಆಮೇಲೆ ನಮ್ಮನೇಗೆ ಬರೋಲ್ವಾ ಭಾರತಿ ಅವಳಂತೆ. ಈಗೇನೋ ಮದುವೆ ಆಗಿದ್ದಾನೆ, ಸರಿಹೋಗಿರಬಹುದೋ ಏನೋ ಅಂದ್ರು, ರಮೇಶ್."

"ನಿಲ್ಸು ಇಂದೂ, ಮಾತಾಡ್ಬೇಡ ನಿಲ್ಸು" ಎಂದು ಕೂಗಿ ಕುಸಿದು ಬಿಟ್ಟಳು ಸರಳಾ. ಕೈಯಲ್ಲಿದ್ದ ಕುಂಕುಮದ ಭರಣಿ ಕೆಳಗೆ ಬಿದ್ದು ಕುಂಕುಮ ಚೆಲ್ಲಾಡಿಹೋಯಿತು. ಇಂದಿರೆಗೆ ಏನು ಮಾಡಲೂ ತೋಚಲಿಲ್ಲ, ಕುಸಿದು ಕೆಳಗೆ ಕುಳಿತಿದ್ದ ಸರಳೆಯ ಬಳಿ ಕುಳಿತುಕೊಳ್ಳುತ್ತಾ ಮೆಲ್ಲಗೆ "ಏನಾಯಿತು ಸರೂ?" ಎಂದು ಕೇಳಿದಳು.

"ಸರ್ವನಾಶವಾಯಿತು ಇಂದಿರಾ, ಒಂದು ಹಚ್ಚಗಿದ್ದ ಸಂಸಾರಕ್ಕೆ ನಾನೇ ಕೈಯಾರೆ ಕಿಚ್ಚಿಟ್ಟು ಬಿಟ್ಟೆ ಇಂದೂ, ಕಿಚ್ಚಿಟ್ಟುಬಿಟ್ಟೆ" ಎಂದು ಅಳಲು ಉಪಕ್ರಮಿಸಿದಳು.

"ಸಮಾಧಾನ ತಂದುಕೋ ಸರೂ. ಏನು ನಡೆಯಿತು?"

"ಶ್ಯಾಮಸುಂದರನ ಹತ್ತು ವರ್ಷದ ನಿರ್ಭಾಗ್ಯ ಗೆಳತಿಯಾಗಿದ್ದವಳು

ನಾನೇ ಇಂದೂ. ಸಮಿತ್ರ ಅವನ ಹೆಂಡತಿಯೆಂದು ತಿಳಿಯದೆ ಮೊನ್ನೆ ಭಾನುವಾರ ಎಲ್ಲವನ್ನೂ ಅವಳ ಬಳಿ ಹೇಳಿಬಿಟ್ಟೆ. ಅನಾಹುತ ನಡೆದು ಹೋಯಿತಲ್ಲಾ ಅಂತ ಸಂಕಟ ಆಗ್ತಾ ಇದೆ. ಅವಳು ಆರಾಧಿಸೋ ಅವಳ ಗಂಡಾನೇ ನನ್ನ ಈ ಒಂಟಿ ಬಾಳಿಗೆ ಕಾರಣ ಅಂತ ಅವಳು ತಿಳಿದ್ರೆ, ಅವರ ಮನ ಒಡೆದು ಹೋಗುತ್ತಲ್ಲಾ ಇಂದಿರಾ.

ಯಾವ ಸುಮಿತ್ರೆಯ ಸಂಸಾರ ಹಸುರಾಗಿ ಅನವರತವೂ ಇರಬೇಕೂಂತ ಬಯಸ್ತಾ ಇದ್ನೋ ಅವಳ ಸಂಸಾರ ಒಡೆಯೋಕೆ ನಾನೇ ಕಾರಣಳಾಗಬೇಕೆ ಇಂದಿರಾ. ದೈವ ನನ್ನ ಮೇಲೋನೋ ಸೇಡು ತೀರಿಸಿಕೊಳ್ಳುತ್ತಿದೆ. ನಾನು ಪ್ರೀತಿಸೋ ಪ್ರತಿಯೊಬ್ಬರನ್ನೂ ನನ್ನಿಂದ ದೂರ ಎಳಕೊಂಡು ಹೋಗುತ್ತೆ. ನಾನು ದುರ್ದೈವಿ ಇಂದಿರಾ" ಎಂದು ನಿಶ್ಚೇಷ್ಟಳಾಗಿ ಬಿಟ್ಟಳು.

ಶೈತ್ಯೋಪಚಾರದ ಕೆಲಸ ಇಂದಿರೆಗೇ ಬಿತ್ತು. ಸರಳೆಯನ್ನು ತನ್ನ ಮನೆಗೇ ಕರೆದೊಯ್ದು ಉಪಚರಿಸಿದಳು ಡಾಕ್ಟರ್ ಇಂದಿರಾ.

ತನ್ನ ತಲೆಯಲ್ಲಿ ಗೋಜಾಗುತ್ತಿದ್ದ ಭಾವನೆಗಳನ್ನು ಬಿಡಿಸಲು ಸರಳಾ ಎಷ್ಟು ಪ್ರಯತ್ನಿಸುತ್ತಿದ್ದಳೋ, ಅಷ್ಟೂ ಅವು ಗೋಜಾಗಿ ಅವಳನ್ನು ಅಣಕಿಸುತ್ತಿದ್ದುವು. ತನ್ನ ಬಾಳೇಕೆ ಹೀಗೆ? ಸ್ವಲ್ಪವಾದರೂ ನೇರವಾಗಿ ಹೋಗಲಾರದೆ ನನ್ನ ಬದುಕಿನ ಹಾದಿ? ತಾನು ಯಾವ ಪಾಪ ಮಾಡಿದ್ದೆನೆಂದು ತನಗೀತರದ ಶಿಕ್ಷೆ ? ಸೇಡು ಏಕೆ ದೈವಕ್ಕೆ ತನ್ನ ಮೇಲೆ? ಸುಮಿತ್ರೆ, ತನ್ನ ಸುಮಿತ್ರೆ, ತನ್ನ ರಾಜನಿಗೇ ಮಡದಿಯಾಗಬೇಕೆ ? ಅವನ ಮಡದಿ ಮಕ್ಕಳನ್ನು ನೋಡುವ ಆಸೆ ತನಗಿತ್ತು. ಆದ್ರೆ ಈ ರೀತಿಯಲ್ಲಲ್ಲ.

ಸುಮಿತ್ರಾ ಪ್ರತಿ ಸಣ್ಣ ವಿಷಯವನ್ನೂ ಅವನಿಗೆ ಹೇಳುತ್ತಾಳೆಂದ ಮೇಲೆ ಇದನ್ನು ಹೇಳದಿರುತ್ತಾಳೆಯೇ? ತನ್ನ ಪ್ರೀತಿಯ ಗಂಡನ ಹಳೆಯ ಪ್ರೇಯಸಿ ನಾನೆಂದರೆ ಅವಳ ಮನ ಅಂಗೀಕರಿಸುವುದೆ? ಯಾಕೀ ಸಂಕಟ? ತನಗಾವ ದಾರಿ ಉಳಿದಿದೆ ಇನ್ನು? ನಡೆದ ಅಪಘಾತ ತನ್ನ ಮನೆಯ ಮುಂದೆಯೇ ನಡೆಯಿತೇಕೆ? ಒಂದು ವೇಳೆ ನಡೆದಿದ್ದರೂ ಬೇರೆಯವರಿಗೆ

ಆಗಬಾರದಿತ್ತೆ ? ಎಂತಹ ವಿಧಿಯ ವೈಪರೀತ್ಯ ಇದು.

"ಸರಳಾ ಅನ್ನೋ ಹೆಸರು ನನ್ನವರಿಗಿಷ್ಟ." ಅಂದರೆ ರಾಜನಿಗೆ ತಾನಿಷ್ಟವೆ ? ಇಲ್ಲ. ನನ್ನ ಹೆಸರು ಮಾತ್ರ. ಪುಟ್ಟ ಸರಳಾ 'ದೊಡ್ಡಮ್ಮಾ' ಎಂದಳು. ಅವಳ ಎಳೆಯ ಮನಸ್ಸಿಗೆ ಸೂಕ್ಷ್ಮ ಕೊಟ್ಟಿತೇನೋ ದೈವ ಯಾಕೆ ಹೀಗೆ ? ಹೀಗೇಕಾಯಿತು ? ನಾನು ಸುಮಿತ್ರೆ ಮಕ್ಕಳನ್ನು ಮರೆಯಲೇ ಬೇಕು. ತನಗಿನ್ನು ಅವರ ಬಳಿ ಸ್ಥಳವಿಲ್ಲ. ಯಾಕಿಲ್ಲ—ಸರಳಾ. ಅವರನ್ನೂ ಪ್ರೀತಿಸಬಹುದಲ್ಲಾ–ಎಂದಿತೊಂದು ಮನ. ಬಹುದು. ಆದರೆ ಸುಮಿತ್ರೆಯ ದೃಷ್ಟಿ ತನ್ನ ಕಡೆಗೆ ಬದಲಾಗುವುದಿಲ್ಲವೆ ? ಒಂದಲ್ಲ ಒಂದು ದಿನ ತಾನು ರಾಜನನ್ನು ಎದುರಾಗಬೇಕಾಗಬಹುದು.

ಸಂಶಯದ ಮಾತೇಕೆ ? ಮುಂದಿನ ಭಾನುವಾರ ಬರುತ್ತೇನೆಂದು ತಾನು ಹೇಳಿಲ್ಲವೆ ? ರಾಜನನ್ನು ಎದುರಿಸುವ ಧೈರ್ಯ ನನಗೆಲ್ಲಿದೆ ? ಭಾವೋದ್ವೇಗಗಳನ್ನು ಮರೆತು ಶಾಂತವಾಗಿದ್ದೇನೆಂದು ತಿಳಿದುದು ತನ್ನದೊಡ್ಡ ತಪ್ಪು. ರಾಜನನ್ನು ಸನಿಯದಲ್ಲಿ ಊಹಿಸಿಕೊಂಡರೇನೇ ಹುಚ್ಚೆದ್ದು ಕುಣಿಯುವ ತನ್ನ ಮನಸ್ಸು, ಇನ್ನು ಅವನಿಗೆ ಎದುರಾಗಬೇಕಾದರೆ ತನ್ನನ್ನು ತಾನು ಹಿಡಿತದಲ್ಲಿಟ್ಟುಕೊಳ್ಳಬಲ್ಲಳೆ ? ಸಾಧ್ಯವಿಲ್ಲ. ತನಗೆ ಸಾಧ್ಯವೇ ಇಲ್ಲ. ಸುಮಿತ್ರೆಯ ಬಾಳು ಹಸನಾಗಿ ಉಳಿಯಬೇಕಾದರೆ, ತಾನು ದೂರವಾಗಲೇ ಬೇಕು. ಅವಳ ಬದುಕಿನಿಂದ ತನ್ನ ನಿರ್ಗಮನ ಅತ್ಯಗತ್ಯ. ಎಂದಿದ್ದರೂ ತನ್ನ ಬಾಳು ಅಶಾಂತಿಯ ಬಾಳೇ. ಸುಮಿತ್ರೆ. ಕ್ಷಣಿಕ ಸುಖ ಕೊಟ್ಟಿದ್ದರೂ, ಈ ಆಘಾತಕ್ಕೆ ನಾಂದಿಯಾಯಿತಲ್ಲಾ !" ಎಂದು ಹಿಂಸೆಪಟ್ಟಳು. ಒಂದು ವೇಳೆ ಸುಮಿತ್ರೆಯೇ ತನ್ನನ್ನು ಇರಬಯಸಿದರೆ ?

ಹುಚ್ಚು, ಹೇಗೆ ಬಯಸುತ್ತಾಳೆ ? ಏನೆಂದು ಬಯಸುತ್ತಾಳೆ ? ನೀನು ಅವಳ ಸವತಿಯ ಸ್ಥಳದಲ್ಲಿ ನಿಂತಾಗ ಸುಮಿತ್ರೆಯೂ ದೂರವಾಗ್ತಾಳೆ. ಬೇಡ ಅವಳು ದೂರವಾಗುವುದು ಬೇಡ. ನನ್ಗೆ ರಾಜನಿಲ್ಲದಿದ್ರೂ ಬೇಡ. ಸುಮಿತ್ರ ಮತ್ತು ಮಕ್ಕಳು ಬೇಕು. ಅವರು ಸುಖವಾಗಿರ್ಬೇಕು. ಹಾಗಾದರೆ ದೂರ ಸರಿ, ಹುಂ. ಹೊರಟು ಹೋಗು. ಒಂದೇ ಸಮ ಕೂಗಿತು ಅವಳ ಅಂತರಾತ್ಮ.

ನಾನೆಂತಹ ಮಂದ ಬುದ್ಧಿಯವಳು. ಒಂದು ಬಾರಿಯಾದರೂ ಅವಳ ಗಂಡನ ವಿಷಯ ತಿಳಿದುಕೊಳ್ಳಬಾರದಿತ್ತೆ ? ಸುಮಿತ್ರೆಯೂ ತಾನಾಗಿ ಹೇಳ

ಲ್ಲಿಲ್ಲ. ಪಾಪ ! ಅವಳದೇನು ತಪ್ಪು. ಅವನ ಹೆಸರು ಹೇಳುವ ಸಂದರ್ಭ ಬರಲೇ ಇಲ್ಲ. ಕುತೂಹಲಕ್ಕಾಗಿಯಾದರೂ ಅವನ ಹೆಸರು ತಾನೇಕೆ ಕೇಳ ಲಿಲ್ಲ ? ರಾಜೀವ "ಸುಂದರ್‌ರವರ ಹೆಂಡತಿ ಅಲ್ಲವೆ ಇವರು ?" ಎಂದಿದ್ದ. ಆಗಲಾದರೂ ವಿಚಾರಿಸಿಕೊಳ್ಳಲಿಲ್ಲ ತಾನು. ಎಲ್ಲಾ ನನ್ನ ವಿಧಿ. ದೈವದ ಕ್ರೂರ ಆಟ ಇಲ್ಲದಿದ್ದರೆ ಈಗಾರು ತಿಂಗಳಲ್ಲಿ ತನಗಿಷ್ಟು ಸನ್ನಿಹಿತವಾಗಿ ಅವಳು ಬಂದಿದ್ದರೂ. ಅವಳ ಗಂಡನಾರು ಎಂದು ತಿಳಿದುಕೊಳ್ಳದಷ್ಟು ಮೂರ್ಖಳು ತಾನೇಕೆ ಆಗಬೇಕಿತ್ತು ? ಅವಳಿಗೆಲ್ಲಾ ಹೇಳಿ ಬಿಟ್ಟಳು. ಇನ್ನು ತನಗೆ ನಿಷ್ಕೃತಿ ಇದೆಯೇ ? ಉಳಿದಿರುವುದು ಒಂದೇ ದಾರಿ ಕಡೆಯ ದಾರಿ.

"ಏನು ? ಆತ್ಮಹತ್ಯೆ ಮಾಡಿಕೊಳ್ಳುವೆಯಾ ? ಹಚ್ಚ ಹಸಿರು ಬಾಳು ನೆಲಸಮವಾದಾಗಲೇ ಬದುಕಿದವಳು, ಈಗ ಧೃತಿಗೆಡುವೆಯಾ ? ಏನೂ ಆಗಲೊಲ್ಲದು. ಅವರ ಪಾಡಿಗೆ ಅವರನ್ನು ಬಿಟ್ಟು ಬಿಡು. ನಾನಾಗಲೇ ಹೇಳಿದೆ. ನಿನ್ನ ಅತೀಮಮತೆ ನಿನ್ನ ಕೇಡಿಗೇ ಎಂದು' ಎಂದು ಅವಳ ಮನ ತರ್ಕಿಸುತ್ತಾ ಹೋಯಿತು 'ಹಾ....ಗಾ....ದ....ರೆ....ಹಾ....ಗಾ....ದ....ರೆ' ಎಂದು ಅವಳ ವಿಚಲಿತ ಮನಸ್ಸು ಕೂಗುತ್ತಿದ್ದಂತೆಯೇ ಒಳಗಿನಿಂದ ಅಪ್ಪ ಯ್ಯನ ಧ್ವನಿ ಕೇಳಿಸಿತು.

"ಇಂದಿರಾ, ಬೊಂಬಾಯಿಯಿಂದ ಹೊರಟಿದ್ದಾನಂತಮ್ಮ ಶ್ರೀಧರ, ನಾಳೇನೇ ಬರ್‍ತಾನೆ."

ಮಿಕ್ಕ ಯಾವ ಮಾತೂ ಸರಳೆಯ ಕಿವಿಯ ಮೇಲೆ ಬೀಳಲಿಲ್ಲ "ಬೊಂಬಾಯಿ" ಎಂಬ ಪದ ತಲೆ ಹೊಕ್ಕಿತು. "ನಿನಗಿಷ್ಟ ಇರೋಷ್ಟು ದಿನ ಇದ್ದು ಬಂದುಬಿಡಮ್ಮಾ ಸರಳಾ' ಎಂದ ಭೂಷಣ. 'ಒಬ್ಬಳೇ ಇರೋದು ಬ್ಯಾಡ. ಈಕಡೀ ಬಂದು ಬಿಡೂ' ಎಂದು ಬರೆದು ಪದೇ ಪದೇ ಕರೆಯು ತ್ತಿದ್ದ ಮಾಯಾ ಕಣ್ಣ ಮುಂದೆ ತೇಲಿ ಬಂದಳು.

ಯಾವುದೋ ನಿರ್ಧಾರಕ್ಕೆ ಬಂದಂತಾಯಿತು. ಧೈರ್ಯದ ಮುಖ ತೋರಿದಳು. ಇನ್ನು ಪರವಾಗಿಲ್ಲವೆಂದು ಇಂದಿರಾ ಸರಳೆಯನ್ನು ಮನೆಗೆ ಕಳುಹಿಸಿದಳು. 'ಅರ್ಥವಿಲ್ಲದ ನೋವು ಸರಳೆಯದು. ಮಹಾ ಒಬ್ಬ ಕೃತಘ್ನ ವ್ಯಕ್ತಿಗಾಗಿ ಯಾರಿಗಿಲ್ಲದ ತ್ಯಾಗ. ತ್ಯಾಗಕ್ಕೆ ಅರ್ಥವಿಲ್ಲ. ಯೋಗ್ಯನಾದ ಯಾರನ್ನಾದರೂ ಮದುವೆ ಆದರೆ ಸರಳ ನಿಜವಾಗಿಯೂ ಶೋಭಿಸುತ್ತಾಳೆ.

ಎಂಬುದು ಅವಳ ವಾದ. ಹಾಗೆಯೇ ಹೇಳಿದ್ದಳು ಕೂಡ. ಆದರೆ ಭಾವುಕಳಾದ, ಸರಳೆಯ ಭಾವನೆಗಳನ್ನು ಅರ್ಥಮಾಡಿಕೊಳ್ಳಲು ಇಂದಿರೆಯ ಸ್ವಭಾವದವರಿಗೆ ಸಾಧ್ಯವೇ ಇರಲಿಲ್ಲ.

"ನಾಳೆ, ಹಾಗಾದರೆ ಸರಳಾ ಬರುತ್ತಾಳೆ ಅಂತಿಯೇನು ?" ಅನುಮಾನಿಸಿ ಕೇಳಿದ ಶ್ಯಾಮು.

"ಹಾಗೇಕೆ ಅನುಮಾನಿಸ್ತೀರಿ ? ಬರ್ತೀನಿ ಅಂದ ಮೇಲೆ ಖಂಡಿತ ಬರ್ತಾಳೆ."

"ನೀನಂದುಕೊಳ್ಳೋ ಹಾಗೆ ನಡೆಯೋದು ಕಷ್ಟ ಸುಮಿತ್ರಾ....ಒಂದು ಮಾತು ಹೇಳ್ತೀನಿ ಕೇಳ್ತೀಯಾ ?"

"ಸ್ವಲ್ಪ ತಾಳಿ. ಮನೆ ಮುಂದೆ ಕಾರು ನಿಂತ ಹಾಗಾಯ್ತು" ಎಂದು ಹೊರಗಡೆ ಬಂದಳು ಸುಮಿತ್ರಾ.

ಇಂದಿರಾ ಕಾರಿನಿಂದ ಇಳಿದು ನಿಧಾನವಾಗಿ ಒಳಗೆ ಬಂದಳು. ಬಾಗಿಲು ತೆರೆದು ಅವಳನ್ನು ಆಹ್ವಾನಿಸುತ್ತಾ ಸುಮಿತ್ರಾ––"ನಮಸ್ಕಾರ ಡಾಕ್ಟ್ರೆ, ನೀವು ನಮ್ಮನೇತನಕ ಬಂದದ್ದು ಬಹಳ ಸಂತೋಷ" ಎಂದಳು.

"ಸ್ವಲ್ಪ ಅರ್ಜೆಂಟ್ ಕೆಲಸ ಇತ್ತು ಬಂದೆ ಸುಮಿತ್ರಾ. ಸರಳಾ ನಿಮ್ಮನೇಗೆ ಬರ್ತೀನಿ ಅಂದಿದ್ಲಂತಲ್ಲಾ, ನಾಳೆ. ಆದ್ರೆ ಅವರಣ್ಣಂಗೆ ಹುಷಾರಿಲ್ಲಾಂತ ಟೆಲಿಗ್ರಾಂ ಬಂತಂತೆ ಬೊಂಬಾಯಿಂದ. ನಿಂತ ಕಾಲಲ್ಲಿ ಹೊರಡಬೇಕಾಯಿತು. ನನ್ನ ಮದ್ವೇಗೂ ಬರಲು ಸಾಧ್ಯವಾಗುತ್ತೋ, ಇಲ್ವೋ ಅಂತ ಅನುಮಾನವಾಗಿ ಬರೆದಿದ್ದಾಳೆ. ನಿನ್ನೆ ನನಗೊಂದು ಇನ್‌ಷೂರ್ಡ್ ಪಾರ್ಸಲ್ ಕಳಿಸಿ, ಅದರಲ್ಲಿದ್ದ ಈ ಕವರನ್ನು ನಿಮಗೆ ಕೊಡು ಅಂತ ತಿಳಿಸಿದ್ದಾಳೆ. ನಾ ಬರ್ತೀನಿ. ನನಗೆ ತುಂಬಾ ಕೆಲ್ಸ ಇದೆ." ಎಂದು ಬಂದವಳು ಕುಳಿತುಕೊಳ್ಳದೆ ಹೊರಟು ಹೋದಳು.

ಕೋಣೆಯ ಕಿಟಕಿಯಿಂದ ನೋಡುತ್ತಿದ್ದ ಶ್ಯಾಮು ಇಂದಿರೆಯ ಠೀವಿಗೆ ಮೆಚ್ಚುತ್ತಿದ್ದರೆ 'ನಿನ್ಗೆ ತುಂಬಾ ಕೆಲ್ಸ ಇಲ್ದೆ ಏನು ? ಯಾವಾಗ್ಲೂ ಜಂಭವೇ

ನಿನ್ನದು' ಎನ್ನುತ್ತಿತ್ತು ಸುಮಿತ್ರೆಯ ಮನಸ್ಸು. ಶ್ಯಾಮು ಹೊರಗಡೆ ಬಂದು ಹಾಸ್ಯವಾಗಿ ಕೇಳಿದ--"ಏನಂತೆ ಡಾಕ್ಟ್ರಮ್ಮನ ಸಮಾಚಾರ ?"

"ಸರಳಾ ಬರ್‍ತಾಳಾ, ಇಲ್ವಾ ಅಂತ ಕೇಳಿದ್ರಲ್ಲಾ, ಬರೋಲ್ಲ ಅಂತ ಹೇಳೋಕ್ಕೆ ಬಂದಿದ್ರು ಅಮ್ಮಾವ್ರು."

ಮೊದಲೇ ಅಸಮಾಧಾನ ಇಂದಿರೆಯ ಮೇಲೆ ಸುಮಿತ್ರೆಗೆ. ತಂದ ಸುದ್ದಿ ಬೇರೆ ಸಂತಸದ ಸುದ್ದಿ ಅಲ್ಲದ್ದರಿಂದ ಕೋಪವೂ ಬಂತು ಸುಮಿತ್ರೆಗೆ.

ನಿಧಾನವಾಗಿ ಕವರನ್ನು ಒಡೆದಳು, ಒಳಗಿನಿಂದ ಒಂದು ತೆಳುವಾದ ಚಿನ್ನದ ಸರ ಜಾರಿ ಕೆಳಗೆ ಬಿತ್ತು. ಬಾಗಿ ಅದನ್ನು ಕೈಗೆ ತೆಗೆದುಕೊಂಡ ಶ್ಯಾಮು. ಅದರ ಸ್ಪರ್ಶವೇ ಅವನ ಕಣ್ಣಲ್ಲಿ ನೀರು ತಂದಿತು. ಅವನಿಗೆ ಆ ಸರ ಯಾವುದೆಂದು ಗೊತ್ತು. ಒಳಗಿದ್ದ ಪತ್ರವನ್ನು ಆತುರ ಆತುರವಾಗಿ ಬಿಚ್ಚಿದಳು ಸುಮಿತ್ರಾ. ಶ್ಯಾಮು ನಿಂತುಕೊಳ್ಳಲಾರದೆ. ಕುರ್ಚಿಯಲ್ಲಿ ಕುಳಿತು ಟೇಬಲ್ಲಿಗೆ ತಲೆ ಒರಗಿಸಿ ಕೈಯಲ್ಲಿದ್ದ ಸರವನ್ನು ಮೃದುವಾಗಿ ಅದುಮಿ ಹಿಡಿದ ಸುಮಿತ್ರ ಪತ್ರವನ್ನು ಗಟ್ಟಿಯಾಗಿ ಓದಿದಳು.

ಒಲವಿನ ತಂಗಿ ಸುಮಿತ್ರಾ.

ಈ ಪತ್ರಕ್ಕಾಗಿ ಕ್ಷಮೆಯಿರಲಿ. ಪತ್ರಕ್ಕೆ ಮಾತ್ರವೇನು, ನನ್ನನ್ನೇ ನೀನು ಕ್ಷಮಿಸಬೇಕು ಪ್ರತಿಯೊಬ್ಬನೂ ತಿಳಿದೋ ತಿಳಿಯದೆಯೋ ತಪ್ಪು ಮಾಡುತ್ತಾನೆ. ಅಂತಹವರನ್ನು ಶಿಕ್ಷಿಸಿ, ದ್ವೇಷಿಸಿ ದಾರಿಗೆ ತರುವುದಕ್ಕಿಂತ, ಕ್ಷಮಿಸಿ ಸರಿಮಾಡುವುದೇ ಹಿರಿಯ ಗುಣ. ಅಂತಹ ದೊಡ್ಡಗುಣ ನಿನ್ನಲ್ಲಿದೆ ಎಂದು ಧೈರ್ಯವಾಗಿ ಕ್ಷಮೆ ಕೇಳುತ್ತಿದ್ದೇನೆ ಸುಮಿತ್ರಾ ಕ್ಷಮಿಸು. ನನ್ನನ್ನು ಕ್ಷಮಿಸಲಾರೆಯಾ ?

ಇಷ್ಟರಲ್ಲಿ ನಿನಗೆ ತಿಳಿದೇ ಇರುತ್ತದೆ, ನನ್ನ ಬಾಳಿನ ರಾಜನೇ, ನಿನ್ನ ಪ್ರೀತಿಯ ಪತಿಯೆಂದು. ನನಗೆ ಲವಲೇಶ ಸಂಶಯ ಬಂದಿದ್ದರೂ ನಾನು ನಿನ್ನ ಬಳಿ ನನ್ನ ಕತೆಯನ್ನು ಹೇಳುತ್ತಿರಲಿಲ್ಲ. ಯಾವ ದುರ್ದೈವ ನನ್ನ ಬಾಯಲ್ಲಿ ಅದನ್ನು ಹೇಳಿಸಿ ನಿನ್ನಿಂದ ನನ್ನನ್ನು ದೂರಮಾಡಬಯಸಿತೋ ತಿಳಿಯದು. ತಿಳಿದೂ ತಿಳಿದೂ ಮಾಡಲಿಲ್ಲ ಸುಮಿತ್ರಾ.

ಈ ನನ್ನ ಒಂದು ಅನುಚಿತ ಕಾರ್ಯದಿಂದ ನಿನ್ನ ಮನದಲ್ಲಿ ನಿನ್ನ ಪತಿ ಯೆಡೆಗೆ ಎಲ್ಲಿ ಒಡಕು ಹುಟ್ಟುವುದೋ ಎಂದು ಪರಿತಪಿಸಿಸ್ತಾ ಇದ್ದೀನಿ-

ನನಗಾಗಿ, ನನ್ನಲ್ಲಿ ನಿನಗೆ ಪ್ರೀತಿ ವಿಶ್ವಾಸವಿದ್ದರೆ ನಿನ್ನ ಗಂಡನನ್ನು ಕ್ಷಮಿಸು, ಸುಮಿತ್ರಾ. ನಾನು ನಿನ್ನ ಬಾಳ ವೃಕ್ಷಕ್ಕೆ ಬೇಡದ ಒಂದು ರೆಂಬೆ ಮಾತ್ರ. ಕಡಿದುಬಿಡುವುದು ಸುಲಭ. ಈ ಕೊಳೆತ ರೆಂಬೆಯನ್ನು ಕಡಿದು, ಬಾಳ ವೃಕ್ಷವನ್ನು ಪೋಷಿಸಬೇಕು ಸುಮಿತ್ರಾ.

ನಾನು ಕೇವಲ ಆರು ತಿಂಗಳು ಮಾತ್ರ ನಿನ್ನ ಬದುಕಿನಲ್ಲಿ ಬಂದವಳು. ನನ್ನನ್ನು ಮರೆಯಲು ಅಸಾಧ್ಯವಾಗಲಾರದು. ಆದರೆ ನಿನ್ನ ಪತಿಯ ಹಳೆಯ ಜೀವನದ ಅಂಕಕ್ಕೆ ಬಿದ್ದಿರುವ ಪರದೆಯನ್ನು ಮಾತ್ರ ಪದೇ ಪದೇ ಸರಿಸಿ ನೋಡುವ ಪ್ರಯತ್ನ ಮಾಡಬೇಡ. ದೊಡ್ಡ ಮನಸ್ಸಿನಿಂದ ನನ್ನನ್ನು ಮರೆತು ರಾಜನನ್ನು ಕ್ಷಮಿಸು. ನಾನು ತಿಳಿದಂತೆ ರಾಜ ಇಂದು ಗಣ್ಯವ್ಯಕ್ತಿ ಯಾಗಿದ್ದಾನೆ. ನಿನ್ನನ್ನು ಪ್ರೀತಿಸುತ್ತಾನೆ. ಅವನ ಪ್ರೀತಿಗೆ ಮಾತ್ರ ಒಂದು ಹುಲ್ಲು ಕಾರಣಕ್ಕಾಗಿ ಧಕ್ಕೆ ಬರಬಾರದು, ನಾನು ಯಾರೆಂದು ನೀನು ಬದುಕಿನಲ್ಲಿ ಒಡಕು ಹುಟ್ಟಿಸಿಕೊಳ್ಳಬೇಕು.

ನನ್ನನ್ನು ಮರೆತುಬಿಡು ಎಂದು ಕೇಳುವ ಬಾಯಿಲ್ಲ ಸುಮಿತ್ರಾ. ಆದರೂ ನೀನು ನನ್ನನ್ನು ಮರೆಯಲೇಬೇಕು. ಇನ್ನು ಈ ಜನ್ಮದಲ್ಲಿ ನಾನು ನಿನ್ನನ್ನು ನೋಡುವೆನೋ ಇಲ್ಲವೋ. ಅದಕ್ಕೆ ಹರಸುತ್ತೇನೆ. ನೀನು ಸೌಭಾಗ್ಯವತಿಯಾಗಿ ಬೆಳಗು. ನಿನ್ನ ಸಂಸಾರ ನಂದನವಾಗಲಿ ಸುಮಿತ್ರಾ. ರಾಜನ ಹೆಂಡತಿ ಮಕ್ಕಳನ್ನು ನೋಡಿ ಆದರಿಸುವ ಆಸೆ ಪಟ್ಟೆ. ಆದರೆ ಆ ಧೈರ್ಯ ಇಂದು ನನಗುಳಿದಿಲ್ಲ ನಾನಂದುಕೊಂಡಿರುವಷ್ಟು ನಿಶ್ಚಲತೆ ನನ್ನಲ್ಲಿ ಇನ್ನೂ ಬಂದಿಲ್ಲ. ವಿನಾ ನನ್ನಿಂದ ನಿನ್ನ ಬಾಳು ಅಲ್ಲೋಲಕಲ್ಲೋಲವಾಗು ವುದು ನನಗಿಷ್ಟವಿಲ್ಲದ್ದರಿಂದ ದೂರ ಹೊರಟುಹೋಗುತ್ತಿದ್ದೇನೆ ಸುಮಿತ್ರಾ, ಬಹಳ ದೂರ ಹೋಗುತ್ತಿದ್ದೇನೆ.

ಮತ್ತೊಮ್ಮೆ ಬೇಡುತ್ತೇನೆ. ನೀನು ನನ್ನನ್ನು ಕ್ಷಮಿಸದಿದ್ದರೂ ಬೇಡ. ಆದರೆ ನನ್ನ ರಾಜನನ್ನು ಮಾತ್ರ ದೂರ ಮಾಡಬೇಡ. ನನ್ನನ್ನು ಮರೆತು ಅವನನ್ನು ಕ್ಷಮಿಸಿ ಅನ್ಯೋನ್ಯವಾಗಿ ಬಾಳು ಸುಮಿತ್ರಾ.

ಮಕ್ಕಳಿಗೆ ಮುದ್ದುಗಳು ಮತ್ತು ಆಶೀರ್ವಾದಗಳು.

ಇತಿ ದುರ್ದೈವಿ ಸರಳಾ

**ಇನ್ನು ಸ್ವಲ್ಪ ಓದು :** ಇದರಲ್ಲಿಟ್ಟಿರುವ ಸರವನ್ನು ರಾಜ ನನಗೆ ಮಾಡಿಸಿ

ಕೊಟ್ಟಿದ್ದ. ಅದನ್ನ ಅವನ ಪತ್ನಿಗೇ ಕೊಡಬೇಕೆಂದು ಎತ್ತಿಟ್ಟಿದ್ದೆ. ಆ ಪುಣ್ಯಶಾಲಿ ನೀನೇ ಆಗಿರೋದು ನನಗ ಬಹಳ ಸಂತೋಷ. ಮುಂದಿನ ಹನ್ನೊಂದನೇ ತಾರೀಖು ರಾಜನ ಹುಟ್ಟಿದ ಹಬ್ಬ. ಸುಮಿತ್ರಾ, ಅದನ್ನು ನಾನು ನಿನಗೆ ಹೇಳಬೇಕಾಗಿಲ್ಲ. ಈ ಸರವನ್ನು ಅವನ ಕೈಯಿಂದಲೇ ನಿನ್ನ ಕೊರಳಿಗೆ ಹಾಕಿಸಿಕೋ. ಅದನ್ನೇ ನನ್ನ ಉಡುಗೊರೆಯೆಂದು ತಿಳಿದುಕೋ ಬರುತ್ತೇನೆ. ಅಲ್ಲ, ಬರುತ್ತೇನೆ ಎಂದು ಹೇಗೆ ಹೇಳಲಿ ? ಹೋಗುತ್ತೇನೆ, ದೂರ ಹೊರಟು ಹೋಗುತ್ತೇನೆ.

—ಸರಳಾ

ಓದಿ ಮುಗಿಸಿದ ಸುಮಿತ್ರಾ, ಒಮ್ಮೆಲೆ ಗಂಭೀರಳಾದಳು. ಅಳಲು ಅವಳಿಗೆ ತೋಚಲಿಲ್ಲ. ಕಾಗದವನ್ನು ಮಡಿಸುತ್ತಾ ಶ್ಯಾಮುವಿನ ಕಡೆಗೆ ನೋಡಿದಳು. ಟೇಬಲ್ಲಿಗೆ ಒರಗಿಸಿದ್ದ ತಲೆಯನ್ನು ಮೇಲೆತ್ತದೆ ಒಳಗೇ ಬಿಕ್ಕುತ್ತಿದ್ದ ಶ್ಯಾಮು ಹತ್ತಿರ ಬಂದು ಅವನ ಕುರ್ಚಿಯ ಬೆನ್ನಿಗೆ ಒರಗಿ ನಿಂತು, ಶ್ಯಾಮುವಿನ ತಲೆಯನ್ನು ಎತ್ತಿ ಮೃದುವಾಗಿ "ಶ್ಯಾಮೂ" ಅಂದಳು. ದುಃಖ ಒತ್ತರಿಸಿ ಬಂದು "ಸುಮಿ" ಎಂದು ಅವಳ ಎದೆಯಲ್ಲಿ ಮುಖ ಮುಚ್ಚಿ ಅತ್ತುಬಿಟ್ಟ. ಅವನ ತಲೆ ಕೂದಲನ್ನು ನೇವರಿಸುತ್ತಾ—"ಸರಳಾ ಹೀಗೆ ಮಾಡುವಳೆಂದು ನಾನಂದುಕೊಳ್ಳಲಿಲ್ಲ. ನನ್ನ ಮನಸ್ಸನ್ನು ಅವಳಿಗೆ ತಿಳಿಸಲು ಅಂದು ನನ್ನಿಂದಾಗಲಿಲ್ಲ, ತಿಳಿಸಿದ್ದರೆ ಉಳಿಯುತ್ತಿದ್ದಳೋ ಏನೋ"

"ಇಲ್ಲ ಸುಮಿತ್ರಾ. ತಿಳಿದಿದ್ದರೂ ಅವಳಿರುತ್ತಿರಲಿಲ್ಲ. ನೀನು ಅವಳನ್ನು ಕೇವಲ ಆರು ತಿಂಗಳು ಮಾತ್ರ ಬಲ್ಲೆ. ನಾನು ಹತ್ತು ವರ್ಷಗಳು ನೋಡಿದ್ದೇನೆ. ಅವಳು ಸ್ವಾಭಿಮಾನಿ. ನನ್ನನ್ನು ಅವಳು ಈ ಜನ್ಮದಲ್ಲಿ ಕ್ಷಮಿಸುವುದಿಲ್ಲ. ಅವಳೊಂದ್ಸಲ ನನ್ನನ್ನು ಕ್ಷಮಿಸಿ ಹೋಗಿದ್ದರೆ ಈವತ್ತು ನನಗಿಷ್ಟು ವೇದನೆ ಆಗ್ತಿರಲಿಲ್ಲ. ಅವಳು ನನ್ನ ಕ್ಷಮಿಸೋಲ್ಲ ಸುಮಿತ್ರಾ- ಕ್ಷಮಿಸೋಲ್ಲ" ಬಿಕ್ಕುತ್ತಲೇ ಇದ್ದ.

"ಹಾಗನ್ಬೇಡಿ. ಅವಳು ನಿಮ್ಮನ್ನು ಕ್ಷಮಿಸೀನೇ ಹೋಗಿದ್ದಾಳೆ. ಆದರೆ ಮಾತ್ರ ನನಗೆ ನಿಲುಕದ ನಕ್ಷತ್ರ ಅವಳು. ದೇವರು ಅವಳನ್ನು ಎಲ್ಲಿಯಾದರೂ ಇಟ್ಟಿರಲಿ, ಸದಾ ಕಾಲವೂ ಅವಳಿಗ ನೆಮ್ಮದಿ ಸಿಕ್ಕರೆ ಸಾಕು. ಅಶಾಂತೀಲಿ ಬೇಯ್ತಿರೋ ಅವಳಿಗೆ ಶಾಂತಿ ಬೇಕು. ನಾನು ಕೊಡ್ತೀನೀಂತ ಭಾಷೆಕೊಟ್ಟೆ.

ಆದ್ರೆ ಅವಳ ಅಶಾಂತಿ ಹೆಚ್ಚಾಗೋಕ್ಕೆ ನಾನೇ ಕಾರಣ ಆಗ್ಬಿಟ್ಟೆ. ನಮ್ಮನ್ನು ದೇವರು ಮನ್ನಿಸ್ಬೇಕು ಅಷ್ಟೆ" ಎಂದು ಪರಧ್ಯಾನಳಾಗಿ ನುಡಿದಳು.

"ಸುಮಿತ್ರಾ, ಸರೂ ಹೇಳಿರೋ ಹಾಗೆ ನನ್ನನ್ನು ಮನ್ನಿಸ್ತೀಯಾ? ಅವಳಿಗೆ ನನ್ನಿಂದ ಎಷ್ಟು ಅನ್ಯಾಯ ಆಗಿದೆ. ಆದ್ರೂ ನನ್ನ ಕ್ಷಮಿಸಬೇಕೂಂತ ನಿನಗೆ ಆದೇಶಿಸಿದ್ದಾಳೆ ನೋಡು. ಯಾವತ್ತೂ ಹೀಗೆ ತನ್ನ ದೊಡ್ಡ ಗುಣದಿಂದ ನಮ್ಮನ್ನೆಲ್ಲಾ ಬಹಳ ಅಲ್ಪ ಅನ್ನಿಸ್ಬಿಡ್ತಾಳೆ. ನೀನು ನನ್ನನ್ನು ದೂರ ಮಾಡೋಲ್ಲ ಅಲ್ವ ಸುಮಿ? ––ಛಿ ! ಛಿ ! ಎಷ್ಟು ದೀನವಾಗಿ ಕೇಳಿದ ಈ ಪ್ರಶ್ನೆಯನ್ನು ಕೇಳಿದುದು ಶ್ಯಾಮುವೇ ಎಂದು ದುಃಖವಾಯಿತು ಸುಮಿತ್ರೆಗೆ.

"ಅಂತಹ ಮಾತನ್ನಾಡಬಹುದೇ ಶ್ಯಾಮು?" ಎಂದು ಅವನ ತಲೆಯನ್ನು ಪ್ರೀತಿಯಿಂದ ಎದೆಗೊತ್ತಿಕೊಂಡಳು.

ಓಡುತ್ತಾ ಬಂದಿತು ಫೆಬ್ರುವರಿ ಹನ್ನೊಂದು. ಇಂದಿರಳ ಸಂಭ್ರಮದ ಮದುವೆ. ಮದುವಣಗಿತ್ತಿಗೆ ಲವಲವಿಕೆ ಇಲ್ಲ. ತನ್ನ ಮೆಚ್ಚಿನ ಗೆಳತಿ ದುಃಖದ ಮಡುವಿನಲ್ಲಿ ಬಿದ್ದಾಗ ತನಗೇನು ಸಂಭ್ರಮ? ಆದರೂ ಏನುತಾನೆ ತಡೆದೀತು? ಮದುವೆ ನಡೆದೇ ಹೋಯಿತು ಡಾಕ್ಟರ್ ಇಂದಿರಾ Dr. (Mrs) ಇಂದಿರಾ ರಮೇಶ್ ಆದಳು.

ಅದೇ ಫೆಬ್ರುವರಿ ಹನ್ನೊಂದು ರಾಜನ ಹುಟ್ಟು ಹಬ್ಬದ ದಿನ. ಸುಮಿತ್ರೆ ಇಂದಿರಾಳ ಮದುವೆಗೆ ಹೋಗಲಿಲ್ಲ. ತಲೆಗೆ ಎಣ್ಣೆ ನೀರು ಹಾಕಿಕೊಂಡು, ಶ್ಯಾಮುವಿಗೂ ಹಾಕಿ ದೇವರ ಪೂಜೆ ಮಾಡಿದಳು. ಮೌನವಾಗಿ ರೋದಿಸುತ್ತಿದ್ದ ಸರಳೆಯ ಉಡುಗೊರೆಯನ್ನು ಕೈಲಿ ಹಿಡಿದು ಕೋಣೆಗೆ ಬಂದಳು.

ಶ್ಯಾಮು ಕಳಾಹೀನನಾಗಿ ಕಳಿತಿದ್ದ. ಅವನು ಸರಳೆಯನ್ನು ನೆನೆಯದ ದಿನ ಇರುತ್ತಿರಲಿಲ್ಲ. ಆದರೂ ಇಂದು ಸರಳೆಯ ನೋವು ಅರಿತ ಅವನಿಗೆ, ತಾನು ಮಾಡಿದ ಅನ್ಯಾಯವನ್ನು ಯಾವ ರೀತಿಯಲ್ಲೂ ತುಂಬಿಕೊಡಲು ಆಗದ ಅಸಹಾಯಕತೆಯಿಂದ ತನ್ನ ಮೇಲೆ ಅತೀವ ಜಿಗುಪ್ಸೆ ಬಂದಿತ್ತು.

ಸುಮಿತ್ರ ಬಂದ ಕೂಡಲೆ ಚೇತರಿಸಿಕೊಂಡ. ಅವಳನ್ನು ಬಳಿಗೆ ಕರೆದು ಕೊಂಡು ಆ ಸರವನ್ನು ಅವಳ ಕೊರಳಲ್ಲಿ ಹಾಕಿದ. ಗೋಡೆಯ ಮೇಲೆ ದೊಡ್ಡದು ಮಾಡಿ ಹಾಕಿದ್ದ ಸರಳೆಯ ಫೋಟೋ ಇಬ್ಬರನ್ನೂ ಹರಸುವಂತೆ ಕಂಡಿತು. ಸುಮಿತ್ರೆಯ ಭುಜದ ಮೇಲೆ ಮುಖವಿಟ್ಟು ನಿಂತ. ಸುಮಿತ್ರೆಯು ಮಾತನಾಡಲಿಲ್ಲ. ಇಬ್ಬರ ಮನದಲ್ಲೂ ನೆನಪಿನ ತೆರೆಯೇಳುತ್ತಿದ್ದದ್ದು ಒಂದೇ ಪ್ರೇಮ ಮೂರ್ತಿಯದು. ಇವರ ಮೌನಕ್ಕೆ ಭಂಗ ತಂದವಳು ಪುಟ್ಟ ಸರಳಾ—"ಅಣ್ಣ, ದೊಡ್ಡಮ್ಮನ ಪೋಟೋ ಯಾಕಣ್ಣ ಅಷ್ಟು ಮೇಲೆ ಹಾಕ್ಬಿಟ್ಟೆ? ನೋಡಬೇಕೂಂದ್ರೆ ನಂಗೆ ಎಟುಕೋದೇ ಇಲ್ಲ" ಎಂದಳು ತೊದಲುತ್ತಾ.

"ಹೌದು ಮರಿ, ದೊಡ್ಡಮ್ಮ ಯಾರಿಗೂ ಎಟುಕೋಲ್ಲ, ನಮಗೂ ಎಟುಕೋಲ್ಲಮ್ಮಾ" ಎಂದು ಮಗುವನ್ನು ಎತ್ತಿಕೊಂಡು—"ನೋಡು ಹೀಗೆ ಮೇಲೆ ಬಂದರೆ ಮಾತ್ರ ಕಾಣ್ತಾಳೆ ದೊಡ್ಡಮ್ಮ. ನೀನು ದೊಡ್ಡವಳಾಗಿ ಮೇಲೆ ಬಂದರೆ ನಿನಗೆ ಕಾಣ್ತಾಳೆ ನೋಡುವಂತೆ" ಎಂದು ಅರ್ಥಗರ್ಭಿತ ವಾಗಿ ನುಡಿದ.

ಸುಮಿತ್ರ ಅವನ ಕಡೆಗೆ ನೋಡಿದಳು, ಕಣ್ಣುಗಳು ಬೆರೆತವು. ಶ್ಯಾಮು ವಿನ ಕಣ್ಣಲ್ಲಿ ಹೆಪ್ಪುಗಟ್ಟಿದ್ದ ನೀರು ಕೆನ್ನೆಯ ಮೇಲೆ ಉರುಳಿಬಿತ್ತು ಮುತ್ತಾಗಿ. ಪ್ರೀತಿಯ ಮಡದಿ ತನ್ನ ಸೆರಗಿನಿಂದ ಆ ಮುತ್ತನ್ನು ಆಯ್ದುಕೊಂಡಳು.

ಆಕಸ್ಮಿಕವಾಗಿ ಪರಿಚಯವಾದ ಸುಮಿತ್ರಳ
ಎದುರಿಗೆ ತನ್ನ ಬಾಳಿನ ರಹಸ್ಯ
ಪುಟಗಳನ್ನು ತೆರೆದಿಡುತ್ತಾಳೆ ಸರಳ.
ಅವಳ ಬಾಳಿನ ಮುಳ್ಳುಗಳಾದ
ರಾಜ, ಭಾರತಿಯರ ಬಗ್ಗೆ
ಸಿಡಿದೇಳುತ್ತಾಳೆ ಸುಮಿತ್ರ. ಆದರೆ
ಕಹಿಸತ್ಯ ಕ್ರೂರಿಯಾಗಿ
ಸುಮಿತ್ರ, ಸರಳರ ಮೇಲೆ
ಸೇಡು ತೀರಿಸಿಕೊಳ್ಳಲೆತ್ನಿಸಿತು......

# 'ನಿಲುಕದ ನಕ್ಷತ್ರ'

☆

ಸುಘೋಷ ಸಾಹಿತ್ಯ
126, 28ನೇ ಮುಖ್ಯ ರಸ್ತೆ ,
7ನೇ ಬ್ಲಾಕ್, ಜಯನಗರ
ಬೆಂಗಳೂರು – 560 082